ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೩೧

ಶ್ರೀ ವ್ಯಾಸಮಹರ್ಷಿ ಪ್ರಣೀತಂ

ಶ್ರೀ
ವರಾಹಮಹಾಪುರಾಣಂ

(ಕನ್ನಡ ಅನುವಾದ ವಿವರಣೆಗಳೊಡನೆ)

ಎರಡನೆಯ ಭಾಗ

(೫೪—೧೧೯ ಅಧ್ಯಾಯಗಳು)

ಅನುವಾದಕ:

ಆಸ್ಥಾನ ವಿದ್ವಾನ್, ಮ. ರ. ವರದಾಚಾರ್ಯ

ಕರ್ಣಾಟಾಧ್ಯಾಪಕ, ಮಹಾರಾಜರವರ ಕಾಲೇಜ್, ಮೈಸೂರು.

ಮೈಸೂರು:

ಶ್ರೀ ಹನುಮಾನ್ ಪ್ರೆಸ್

೧೯೫೬

॥ ಶ್ರೀಃ ॥

-X-

ಮು ನ್ನು ಡಿ

ಶ್ರೀವರಾಹಪುರಾಣವು, ಶ್ರೀಮನ್ನಾರಾಯಣನು ಶ್ರೀವರಾಹ ರೂಪವನ್ನು ಧರಿಸಿ, ಭೂದೇವಿಯನ್ನು ಪ್ರಳಯಜಲಧಿಯಿಂದ ಉದ್ಧರಿಸಿದ ಬಳಿಕ ಅನೇಕ ವಿಧವಾಗಿ ತನ್ನನ್ನು ಪ್ರಶ್ನಿಸಿದ ಆ ದೇವಿಗೆ ಆ ವರಾಹದೇವನು ಹೇಳಿದ ಪ್ರಪಂಚದ ಸೃಷ್ಟಿಸ್ಥಿತ್ಯಾದಿಗಳ ವಿಚಾರವಾಗಿದೆ. ಪುರಾಣವೆಂದರೆ ಆದಿಸೃಷ್ಟಿ ಪ್ರಜಾಸೃಷ್ಟಿ, ವಂಶ, ಮನ್ವಂತರ, ವಂಶಾನುಚರಿತ ಎಂಬ ಪೂರ್ವದ ವಿಚಾರಗಳ ಮತ್ತು ವೃತ್ತಿರಕ್ಷಾಧರ್ಮಕರ್ಮಾದಿ ವಿಚಾರಗಳ ಉಕ್ತಿ ಅಥವಾ ಗ್ರಂಥ.

ಶ್ರೀವರಾಹನಿಂದ ತಾನು ಕೇಳಿದ ಈ ಪುರಾಣವನ್ನು ಭೂದೇವಿಯು, ಸನತ್ಕುಮಾರಕಪಿಲಾದಿಮುನಿಗಳಿಗೆ ಹೇಳಿದಳು. ಅವರಿಂದ ಶ್ರೀವ್ಯಾಸ ಮಹರ್ಷಿಗಳು ಅರಿತರು. ವ್ಯಾಸರು ತಮ್ಮ ಶಿಷ್ಯರಾದ ರೋಮಹರ್ಷಣಿ ಅಥವಾ ಸೂತಮುನಿಯೆಂಬುವರಿಗೆ ಉಪದೇಶಿಸಿದರು. ಅವರು ಶೌನಕಾದಿ ಮುನಿಗಳಿಗೆ ಹೇಳಿದರು. ಎಂದು (ವ. ಪುರಾಣದ ೧೧೩ನೆಯ ಅಧ್ಯಾಯದ ೭೧–೭೪ ಶ್ಲೋಕಗಳಿಂದ) ತಿಳಿಯುತ್ತದೆ. ಆದರೆ ಈ ಪುರಾಣವನ್ನು ಗ್ರಂಥವಾಗಿ ಯಾರು ಯಾವ ಕಾಲದಲ್ಲಿ ರಚಿಸಿದರೆಂಬುದು ಸ್ಪಷ್ಟವಾಗುವುದಿಲ್ಲ.

ಶ್ರೀವ್ಯಾಸಮಹರ್ಷಿಗಳೇ ಹದಿನೆಂಟು ಪುರಾಣಗಳನ್ನೂ ರಚಿಸಿದರೆಂದು ಪ್ರಸಿದ್ಧಿಯಿದೆ. ಆದರೂ ವರಾಹಪುರಾಣದಲ್ಲೆಲ್ಲೂ ಅವರು ಇದನ್ನು ರಚಿಸಿದರೆಂಬುದಕ್ಕೆ ಯಾವ ಆಧಾರವೂ ಇಲ್ಲ. ಭಾರತ ಭಾಗವತಾದಿಗಳಲ್ಲಿರುವಂತೆ "ವ್ಯಾಸ ಉವಾಚ = ವ್ಯಾಸರು ಹೇಳಿದರು." ಎಂಬ ವಾಕ್ಯವೂ ಎಲ್ಲೂ ಕಾಣುವುದಿಲ್ಲ. ವ್ಯಾಸರೇ ಬರೆದಿದ್ದರೆ ಆದಿಯಲ್ಲೇ "ಸೂತ ಉವಾಚ = ಸೂತ ಮುನಿಯು ಹೇಳಿದನು." ಎಂದಿರಲು ಕಾರಣವಿಲ್ಲ. ವ್ಯಾಸರು ಮೊದಲು ಗ್ರಂಥವಾಗಿ ರಚಿಸಿ, ಸೂತಮುನಿಗೆ ಹೇಳಿದ್ದರೂ ಈ ಪುರಾಣವು ಈಗಿರುವ ಸ್ವರೂಪದಲ್ಲಿ ಅವರಿಂದ ರಚಿತವಾಗಿರಲಿಲ್ಲವೆಂದು ತೋರುತ್ತದೆ. ವರಾಹ ಪುರಾಣ(೧೧೩ನೆಯ ಅಧ್ಯಾಯ ೭೪ ನೆಯ ಶ್ಲೋಕ)ದಲ್ಲೂ "ಅಷ್ಟಾದಶ ಪುರಾಣಾನಿ ವೇದ ದ್ವೈಪಾಯನೋಗುರುಃ = ಗುರುಗಳಾದ ವ್ಯಾಸರು ೧೮ ಪುರಾಣಗಳನ್ನು ಅರಿತಿರುವರು." ಎಂದಿದೆ. ಆದುದರಿಂದ ಈಗಿರುವ

ರೀತಿಯಲ್ಲಿ ವರಾಹ ಪುರಾಣವು ಸೂತಮುನಿಯಿಂದಲೋ ಶೌನಕರಿಂದಲೋ ಮತ್ತಾವ ಮಹಾತ್ಮರಿಂದಲೋ ರಚಿತವಾಗಿರಬೇಕೆಂದು ತೋರುವುದು.

ಶ್ರೀ ವರಾಹನು, ಭೂದೇವಿಯನ್ನುದ್ಧರಿಸಿದುದು ಎಪ್ಪತ್ತೊಂದನೆಯದಾದ ಕಳೆದ ಕೃತಯುಗದ ಆದಿಯಲ್ಲಿ(ಅ. ೧೧೪. ಶ್ಲೋಕ ೧೧.). ಆಗಲೇ ಈ ಪುರಾಣವನ್ನು ಶ್ರೀ ವರಾಹನು ಭೂದೇವಿಗೆ ಹೇಳಿದನಾದರೂ ಗ್ರಂಥವಾಗಿ ರಚಿತವಾಗಿರಲಿಲ್ಲ. ವ್ಯಾಸರೇ ರಚಿಸಿದರೆಂದರೂ ಅವರು ಅವತರಿಸಿದುದು ದ್ವಾಪರಾಂತ್ಯದಲ್ಲಿ. ವರಾಹ ಪುರಾಣದ ೧೮೭ ನೆಯ ಅಧ್ಯಾಯದ ೪೨–೪೫ ಶ್ಲೋಕಗಳು ಶ್ರೀ ಭಗವದ್ಗೀತೆಯ ಆರನೆಯ ಅಧ್ಯಾಯದ ೧೧–೧೪ ಶ್ಲೋಕಗಳಾಗಿಯೂ, ೬೨ ನೆಯ " ಅಶೋಚ್ಯಾನನ್ವಶೋಚಸ್ತ್ವಂ " ಎಂಬ ಶ್ಲೋಕವು ಭ. ಗೀ. ೨ ನೇ ಅ. ೧೧ ನೆಯ ಶ್ಲೋಕವಾಗಿಯೂ ಇವೆ. ಭಗವಂತನು ಈ ಮೇಲಿನ ಶ್ಲೋಕವಾಕ್ಯಗಳನ್ನು ಅರ್ಜುನನಿಗೆ ಹೇಳುವುದಕ್ಕಿಂತ ಮೊದಲೇ ಭೂದೇವಿಗೆ ಹೇಳಿರಬಹುದು. ಆದರೂ ಶ್ರಿ ವರಾಹ ಪುರಾಣದಲ್ಲಿ ಶ್ರೀ ಕೃಷ್ಣನ ಮತ್ತು ಉತ್ತರಮಥುರೆಯ ವಿಚಾರವು ಬಹು ವಿಸ್ತಾರವಾಗಿದೆ. ಶ್ರೀವರಾಹನ ಮೊದಲ ಮೊದಲ ಮಾತುಗಳು 'ವಸುದೇವಪುತ್ರನಾಗಿ ಮುಂದೆ ಉದಿಸುವೆನು. ಕಂಸನನ್ನು ಕೊಲ್ಲುವೆನು.' ಎಂಬುದಾಗಿ ಭವಿಷ್ಯದ್ರೂಪಕ್ರಿಯಾಪದದಿಂದ ಕೂಡಿವೆಯಾದರೂ ಬರಬರುತ್ತ "ನಾನು ಯಮಳಾರ್ಜುನ ಭಂಗವನ್ನೂ ಶಕಟಾಸುರ ವಧೆಯನ್ನೂ ಅಲ್ಲಿ ಮಾಡಿದೆನು. ಕಾಳಿಯನನ್ನು ಮರ್ದಿಸಿದೆನು. ಆದಿತ್ಯರಿಗೆ ವರವನ್ನು ಕೊಟ್ಟೆನು. ಆದಿತ್ಯರು ಹೇಳಿದರು.'' ಎಂಬುದೇ ಮೊದಲಾದ ಭೂತರೂಪ ಕ್ರಿಯಾಪದದಿಂದ ಯುಕ್ತವಾದ ಬೇಕಾದಷ್ಟು ವಾಕ್ಯಗಳು ಇರುವುವು. ಶ್ರೀ ಕೃಷ್ಣನ ಪತ್ನೀಪುತ್ರಾದಿಗಳ ವಿಚಾರವೂ ವಿಸ್ತಾರವಾಗಿ ಇದೆ. ಆದುದರಿಂದ ಶ್ರೀಕೃಷ್ಣಾವತಾರವು ಆದ ಬಳಿಕ ದ್ವಾಪರಾಂತ್ಯದಲ್ಲೋ ಕಲಿಯುಗದಲ್ಲೋ ಶ್ರೀವರಾಹ ಪುರಾಣವು ಗ್ರಂಥರೂಪವಾಗಿ ರಚಿತವಾಗಿರಬೇಕೆಂದು ನಿಸ್ಸಂದೇಹವಾಗಿ ಹೇಳಬಹುದು.

ಕಲ್ಕತ್ತಾದ ಸಂಸ್ಕೃತ ಮಹಾಪಾಠಶಾಲೆಯ ಸಂಸ್ಕೃತ ವಿಶಾರದರಾದ ಪಂಡಿತ್ ಹೃಷೀಕೇಶಶಾಸ್ತ್ರಿಗಳವರು ತಾವು ಶೋಧಿಸಿ ಮುದ್ರಿಸಿರುವ ಶ್ರೀವರಾಹ ಪುರಾಣದ ಪೀಠಿಕೆಯಲ್ಲಿ – ಈ ಪುರಾಣದ ೨೧೮ ನೆಯ ಅಧ್ಯಾಯದ ಆರಂಭದಲ್ಲಿ "ವಿಕ್ರಮಾರ್ಕಶಕ 1621 ರಲ್ಲಿ ವಿಷ್ಣುವು ಶೇಷಶಯ್ಯೆಯಿಂದೆದ್ದಾಗ ಎಂದರೆ ಕಾರ್ತಿಕ ಶುದ್ಧ ದ್ವಾದಶಿಯಾದ ಬಳಿಕ ವೀರೇಶ್ವರನೊಡಗೂಡಿದ ಮಾಧವಭಟ್ಟನಿಂದ ವರಾಹನು ಹೇಳಿದ ಪುರಾಣವು ಕಾಶಿಯಲ್ಲಿ ಬರೆಯಲ್ಪಟ್ಟಿತು. ಎಂಬರ್ಥದ

"ತ್ರಿಸ್ಸಪ್ತಷಟ್ ಕ್ಷಿತಿಮಿತೇ ನೃಪ ವಿಕ್ರಮಸ್ಯ |
ಕಾಲೇ ಗತೇ ಭಗವತೋ ಹರಿಬೋಧನ ಸ್ಯ |
ವೀರೇಶ್ವರೇಣ ಸಹ ಮಾಧವಭಟ್ಟ ನಾಮ್ನಾ |
ಕಾಶ್ಯಾಂ ವರಾಹಕಥಿತಂ ಲಿಖಿತಂ ಪುರಾಣಂ || "

ಎಂಬ ಶ್ಲೋಕವು ಬೇರೆ ಬೇರೆ ಪ್ರದೇಶಗಳಲ್ಲಿ ದೊರೆತ ಭಿನ್ನ ಲಿಪಿಗಳ ಹಸ್ತ ಲಿಖಿತ ಪ್ರತಿಗಳಲ್ಲೆಲ್ಲಾ ಇದೆ. ಆದುದರಿಂದ ಮಾಧವ ಭಟ್ಟರೆಂಬುವರೇ ವರಾಹ ಪುರಾಣವನ್ನು ರಚಿಸಿದವರೂ ವಿ. ಶ. 1621 ನೇ ವರ್ಷವು ಪುರಾಣರಚನೆಯ ಕಾಲವೂ ಆಗಿರಬಹುದೆಂದು ಊಹಿಸಲು ಅವಕಾಶವಿದೆ." ಎಂದು ಬರೆದಿರುವರು. ಆದರೆ ಮಾಧವಭಟ್ಟರು, ಪುರಾಣವು ತಮ್ಮಿಂದಲೇ ರಚಿತವಾಯಿತೆಂದು ಮುಂದಿನವರು ತಿಳಿದರೂ ತಿಳಿಯಲಿ ಎಂಬ ಉದ್ದೇಶದಿಂದ ದ್ವಂದ್ವಾರ್ಥಕ ವಾಗಿ ಈ ಶ್ಲೋಕವನ್ನು ಕಲ್ಪಿಸಿ ಬರೆದಿರುವರೆಂದು ಹೇಳಬೇಕಾಗಿದೆ.

ಶ್ರೀ ವರಾಹಪುರಾಣದಲ್ಲಿ (ಅಧ್ಯಾಯ ೯೮ ಶ್ಲೋಕ ೨೬) "ದ್ರಷ್ಟುಃ ಚಕ್ಷುಷಃ" ಎಂದು ಸತ್ಯತಪರು ಹೇಳಿರುವರೆಂದು ಸಾವಿರಾರು ವರ್ಷಗಳ ಹಿಂದೆಯೆ ಯಾಮುನಾಚಾರ್ಯರು ಬರೆದಿರುವರು. ಈಗ್ಗೆ ಏಳೆಂಟುನೂರು ವರ್ಷಗಳ ಹಿಂದೆ ಇದ್ದ ಸಿದ್ಧಾಂತಸ್ಥಾಪನಾಚಾರ್ಯರುಗಳು ಕೆಲವರು ವರಾಹಪುರಾಣದ ಉಕ್ತಿಯೆಂದು ಹೇಳಿ, ಕೆಲವನ್ನು ಆಧಾರವಾಗಿ ಪರಿಗ್ರಹಿಸಿರುವರು. ಶ್ರೀವಿದ್ಯಾರಣ್ಯರ ಸಮಕಾಲೀನರಾದ ಎಂದರೆ ಕ್ರಿ. ಶ. ೧೪ ನೇ ಶತಮಾನದ ಆದಿಯ ಶ್ರೀಮದ್ವೇದಾಂತ ದೇಶಿಕರವರು ಅವರ 'ದ್ವಾತ್ರಿಂಶದ್ರಹಸ್ಯ' ವೆಂಬ ಗ್ರಂಥದಲ್ಲಿ ರಹಸ್ಯ ಶಿಖಾಮಣಿಯೆಂಬ ಹೆಸರಿನಿಂದ ವಾರಾಹಚರಮಶ್ಲೋಕವೆಂದು

"ಸ್ಥಿತೇಮನಸಿ ಸುಸ್ವಸ್ಥೇ ಶರೀರೇಸತಿ ಯೋನರಃ |
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ |
ತತಸ್ತಂ ಮ್ರಿಯಮಾಣಂ ತು ಕಾಷ್ಠಪಾಷಾಣಸನ್ನಿಭಂ |
ಅಹಂ ಸ್ಮರಾಮಿಮದ್ಭಕ್ತಂ ನಯಾಮಿ ಪರಮಾಂ ಗತಿಂ ||"

ಈ ಎರಡು ಶ್ಲೋಕಗಳನ್ನು ಬರೆದು ವ್ಯಾಖ್ಯಾನಿಸಿರುವರು. ಆದುದರಿಂದ ವಿ. ಶ. 1621 ಅಥವಾ ಕ್ರಿ. ಶ. 15 5 ಎಂಬುದು ಹಿಂದಿನ ಪುರಾಣವನ್ನು ಮಾಧವಭಟ್ಟರು ಬೇರೆಯ ಪ್ರತಿ (copy) ಮಾಡಿದ ಕಾಲವೇ ಹೊರತು ರಚಿಸಿದ ಕಾಲವಲ್ಲ. ವೀರೇಶರೂ, ಮಾಧವಭಟ್ಟರೂ ಪ್ರತಿಗಳನ್ನು ಬರೆವವರೇ ಹೊರತು ಗ್ರಂಥಕರ್ತರಲ್ಲ. ಎಂದು ದೃಢವಾಗಿ ಹೇಳಬಹುದು. ಅವರು ಹೇಗೂ

ವರಾಹ ಪುರಾಣದಲ್ಲಿ ೨೧೮ನೆಯದಾದ ವಿಷಯಾನುಕ್ರಮಣಿಕಾಧ್ಯಾಯ ವೊಂದನ್ನು ಬರೆದು ಸೇರಿಸಿರುವರೆಂಬುದಕ್ಕೆ ಸಂದೇಹವಿಲ್ಲ ಬೇರೆಯ ಪ್ರತಿಗಳು ದೊರೆಯುವೆ ಇದ್ದುದರಿಂದ ಮಾಧವಭಟ್ಟಲಿಖಿತ ಪ್ರತಿಯನ್ನೇ ನೋಡಿ ಇತರರೂ ಪ್ರತಿಗಳನ್ನು ಮಾಡಿಕೊಂಡುದರಿಂದ ಎಲ್ಲಾ ಪ್ರತಿಗಳಲ್ಲೂ ಮೇಲಿನ "ತ್ರಿಸ್ಸಪ್ತಷಟ್" ಎಂಬ ಶ್ಲೋಕವೂ ಅನುಕ್ರಮಣಿಕಾಧ್ಯಾಯವೂ ಸೇರಲವ ಕಾಶವಾಯಿತೆಂದು ನಿರ್ಣಯವಾಗುವುದು.

ಈ ಪುರಾಣದ ಎರಡನೆಯ ಭಾಗವು ಉತ್ತಮಪತಿಪ್ರಾಪ್ತಿವ್ರತದಿಂದ ಆರಂಭವಾಗಿ ಅನೇಕ ವ್ರತಗಳವಿಚಾರ, ಜಂಬೂದ್ವೀಪಮೇರುದೇವನಿವಾಸಗಳ ವರ್ಣನೆ, ತ್ರಿಮೂರ್ತಿಗಳ ಮಹಿಮೆ, ಚಾತುರ್ವರ್ಣ್ಯಧರ್ಮ, ಇವೇ ಮೊದಲಾ ದವುಗಳನ್ನು ತಿಳಿಸಿ, ಉಕ್ತ ವಿಧಿಯಲ್ಲಿ ಭಗವಂತನನ್ನು ಪೂಜಿಸುವುದರಿಂದ ಪರಮಸಿದ್ಧಿಯಾಗುವುದೆಂದು ಹೇಳುವುದರಿಂದ ಪರಿಪೂರ್ಣವಾಗುವುದು.

ವ್ಯಯ ಸಂ॥ ಭ ದ್ರಪದ ಶುದ್ಧ ೨ ಬುಧವಾರ 28—8—1946	ಅನುವಾದಕ, ಮಡೇನೂರ ರಘುನಾಥಾಚಾರ್ಯರ ಮಗ ವರದಾಚಾರ್ಯ

ಶ್ರೀವರಹಾಪುರಾಣದಲ್ಲಿ ಎರಡನೆಯ ಭಾಗದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಐವತ್ತನಾಲ್ಕನೆಯ ಅಧ್ಯಾಯ

ಭದ್ರಾಶ್ವಾಗಸ್ತ್ಯ ಸಂವಾದ—

ನಾರಾಯಣ ಮಹಿಮೆ. 1

ನಾರದರು, ಅಪ್ಸರಸ್ತ್ರೀಯರಿಗೆ ವಿಷ್ಣುವನ್ನು ಪತಿಯಾಗಿ ಪಡೆಯಲು ಮಾಡಬೇಕಾದ ಉತ್ತಮಪತಿಪ್ರಾಪ್ತಿವ್ರತವನ್ನು ಪದೇಶಿಸಿದುದು. ಮತ್ತು ಶಾಪವಿತ್ತುದು. 2–5

ಐವತ್ತೈದನೆಯ ಅಧ್ಯಾಯ

ಶುಭವ್ರತದ ಕಾಲಕ್ರಮಫಲಗಳು. 6–10

ಶುಭವ್ರತವನ್ನು ಮಾಡಿ ಸುಪುತ್ರನನ್ನು ಪಡೆದ ಧೃಢವ್ರತ ರಾಜನ ಕಥೆ. ದೃಢವ್ರತನು ಮಾಡಿದ ವಿಷ್ಣುವಿನ ಸ್ತುತಿ. ಕುಬ್ಜಾಮ್ರಕಕ್ಷೇತ್ರ ಮಹಿಮೆ. 10–19

ಐವತ್ತಾರನೆಯ ಅಧ್ಯಾಯ

ಧನ್ಯವ್ರತದ ಕಾಲಕ್ರಮ ಫಲಾದಿಗಳು. 20–23

ಐವತ್ತೇಳನೆಯ ಅಧ್ಯಾಯ

ಕಾಂತಿವ್ರತ ವಿಚಾರ. 24–27

ಐವತ್ತೆಂಟನೆಯ ಅಧ್ಯಾಯ

ಸೌಭಾಗ್ಯವ್ರತ. 28–32

ಐವತ್ತೊಂಬತ್ತನೆಯ ಅಧ್ಯಾಯ.

ಅವಿಘ್ನವ್ರತ ಮತ್ತು ಅದನ್ನು ಆಚರಿಸಿದವರ ವಿಚಾರ. 33–35

ಪುಟಸಂಖ್ಯೆ

ಅರವತ್ತನೆಯ ಅಧ್ಯಾಯ

ಶಾಂತಿವ್ರತ. 36—38

ಅರವತ್ತೊಂದನೆಯ ಅಧ್ಯಾಯ

ಕಾಮವ್ರತ. 39–41

ಅರವತ್ತೆರಡನೆಯ ಅಧ್ಯಾಯ

ಆರೋಗ್ಯವ್ರತ. 42–43

ಅದನ್ನಾಚರಿಸಿ ವ್ಯಾಧಿಯನ್ನು ಕಳೆದುಕೊಂಡ ಅನರಣ್ಯಮಹಾರಾಜನ ಕಥೆ. 43–49

ಅರವತ್ತಮೂರನೆಯ ಅಧ್ಯಾಯ

ಪುತ್ರಪ್ರಾಪ್ತಿವ್ರತ. 50–52

ಅರವತ್ತನಾಲ್ಕನೆಯ ಅಧ್ಯಾಯ

ಶೌರ್ಯವ್ರತ. 53–54

ಅರವತ್ತೈದನೆಯ ಅಧ್ಯಾಯ

ಸಾರ್ವಭೌಮವ್ರತ. 55–56

ವೈಷ್ಣವವ್ರತ. 56

ಧರ್ಮವ್ರತ. 57

ರೌದ್ರವ್ರತ. ,,

ಪಿತೃವ್ರತ. ,,

ಸರ್ವವ್ರತಫಲ. 57–58

ಅರವತ್ತಾರನೆಯ ಅಧ್ಯಾಯ

ವಿಷ್ಣ್ವಾಶ್ಚರ್ಯ—

ಶ್ವೇತದ್ವೀಪಕ್ಕೆ ಹೋದ ನಾರದರಿಗಾದ ನಾರಾಯಣ ಸಂದರ್ಶನ. 59–60

ನಾರಾಯಣನು, ನಾರದರಿಗೆ ತನ್ನನ್ನು ಪಡೆಯಲು ಬೇಕಾದ ಪಂಚರಾತ್ರಾದಿ ಮಾರ್ಗಗಳನ್ನುಪದೇಶಿಸಿದುದು. 61–63

ಪುಟಸಂಖ್ಯೆ

ಅರವತ್ತೇಳನೆಯ ಅಧ್ಯಾಯ

ವಿಷ್ಣ್ವಾಶ್ಚರ್ಯ ಅಗಸ್ತ್ಯರು ಸಂವತ್ಸರ ಪುರುಷನೂ ವಿಷ್ಣುವೆಂದು ತಿಳಿಸಿದುದು. 64–66

ಅರವತ್ತೆಂಟನೆಯ ಅಧ್ಯಾಯ

ಪ್ರಾಚೀನೇತಿಹಾಸ.

ಚಾತುರ್ಯುಗಗಳ ಧರ್ಮವಿಚಾರ. 67—68

ಗಮ್ಯಾಗಮ್ಯಾ ವಿಚಾರ. 68—71

ಅರವತ್ತೊಂಬತ್ತನೆಯ ಅಧ್ಯಾಯ

ನಾರಾಯಣಾಶ್ಚರ್ಯವರ್ಣನೆ— ಅಗಸ್ತ್ಯರು ತಾವು ಇಳಾವೃತವರ್ಷದಲ್ಲಿ ಅನುಭವಿಸಿದ ಅದ್ಭುತವಿಚಾರವನ್ನು ಭದ್ರಾಶ್ವನಿಗೆ ತಿಳಿಸಿದುದು. 72–76

ಎಪ್ಪತ್ತನೆಯ ಅಧ್ಯಾಯ

ಕೃತ ತ್ರೇತಾದ್ವಾಪರಾದಿವಿಚಾರ—ಹರಿಯನ್ನು ಯಜ್ಞಗಳಿಂದಾರಾಧಿಸುತ್ತಿದ್ದ ಅಗಸ್ತ್ಯರೆಡೆಗೆ ಬ್ರಹ್ಮರುದ್ರಾದಿ ದೇವತೆಗಳ ಆಗಮನ. 77–79

ಅಗಸ್ತ್ಯರು ರುದ್ರಸನತ್ಕುಮಾರಾದಿಗಳನ್ನು ನೋಡಿ "ನಿಮ್ಮಲ್ಲಿ ಪರಮಪೂಜ್ಯರಾರು" ಎಂದು ಪ್ರಶ್ನಿಸಿದುದು. 79

ರುದ್ರನು, ನಾರಾಯಣನೇ ಪರದೇವನೆಂಬುದನ್ನು ಬ್ರಹ್ಮ ವಿಷ್ಣು ಮಹೇಶ್ವರರ ಸ್ವರೂಪಸಂಬಂಧಾದಿವಿಚಾರವನ್ನೂ ತಿಳಿಸಿದುದು. 79–82

ಕೃತಾದಿಯುಗಗಳಲ್ಲಿ ನಾರಾಯಣೋಪಾಸನಕ್ರಮ. ರುದ್ರನು ಪಾಶುಪತಶಾಸ್ತ್ರದ ಕಾರಣಾದಿಗಳನ್ನು ತಿಳಿಸಿದುದು. 82–87

ಎಪ್ಪತ್ತೊಂದನೆಯ ಅಧ್ಯಾಯ

ರುದ್ರಗೀತೆ, ಕಲಿಯುಗವಿಚಾರ—

ಅಗಸ್ತ್ಯರು ರುದ್ರಹೃದಯದಲ್ಲಿ ಬ್ರಹ್ಮವಿಷ್ಣುಗಳನ್ನು ಸಂದರ್ಶಿಸಿ ಆಶ್ಚರ್ಯಗೊಂಡುದು. 88–89

ಪುಟಸಂಖ್ಯೆ

ರುದ್ರನು ಮೋಹಶಾಸ್ತ್ರವನ್ನು ಗೌತಮಮುನಿಯ ಶಾಪಗ್ರಸ್ತರಾದ ಬ್ರಾಹ್ಮಣರಿಗಾಗಿ ಸೃಷ್ಟಿಸಿದುದಾಗಿ ಹೇಳಿ, ಆ ಕಥೆಯನ್ನು ತಿಳಿಸಿದುದು. ಗೋದಾವರೀ ನದಿಯ ಅವತಾರ. 89-101

ಎಪ್ಪತ್ತೆರಡನೆಯ ಅಧ್ಯಾಯ

ಪ್ರಕೃತಿಪುರುಷನಿರ್ಣಯ—

ಅಗಸ್ತ್ಯರಿಗೆ ರುದ್ರನು ವಿಷ್ಣುವೇ ಸರ್ವಾಂತರ್ಯಾಮಿಯೆಂಬುದನ್ನೂ ತ್ರಿಮೂರ್ತಿಗಳ ಪೂಜಾವಿಧಾನವನ್ನೂ ತಿಳಿಸಿದುದು. 102-105

ಎಪ್ಪತ್ತಮೂರನೆಯ ಅಧ್ಯಾಯ

ರುದ್ರಗೀತೆ, ವೈರಾಜವೃತ್ತಾಂತ—

ನೀರಲ್ಲಿ ತಪಸ್ಸನ್ನು ಮಾಡುತ್ತಿದ್ದ ರುದ್ರನು ನೀರಿನಿಂದ ದ್ವಾದಶಾದಿತ್ಯರೂ ಪರಮಾತ್ಮನೂ ಮೇಲೆದ್ದು ಬಂದುದನ್ನು ಕಂಡು ಅವರನ್ನು ಪ್ರಶ್ನಿಸಿದುದು. 106-108

ಪರಮಾತ್ಮನು ದಿವ್ಯದೃಷ್ಟಿಯನ್ನಿತ್ತು ವಿಶ್ವರೂಪವನ್ನು ತೋರಿಸಿದುದು. 109

ರುದ್ರನ ಪರಮಾತ್ಮಸ್ತುತಿ. 109--116

ಪರಮಾತ್ಮನು ರುದ್ರನಿಗೆ ವರವಿತ್ತುದು. 116--119

ಎಪ್ಪತ್ತನಾಲ್ಕನೆಯ ಅಧ್ಯಾಯ

ಭುವನಕೋಶವರ್ಣನೆ—

ರುದ್ರನು ಅಗಸ್ತ್ಯಾದಿಮುನಿಗಳಿಗೆ ಹೇಳಿದ ಭೂಮಿಯ ಪ್ರಮಾಣ ಸನ್ನಿವೇಶಾದಿಗಳ ವಿಚಾರ. 120-122

ಸ್ವಾಯಂಭುವಿನಸಂತತಿ, ಅವರು ಆಳಿದ ಸಪ್ತದ್ವೀಪಗಳ ಮತ್ತು ಅವುಗಳಲ್ಲಿರುವ ದೇಶಗಳ ವಿಚಾರ 122-125

ನಾಭಿರಾಜನ ಸಂತಾನದ ಮತ್ತು ಅವರು ಆಳಿದ ಭರಖಂಡದ ವಿಚಾರ. 126-128

ಎಪ್ಪತ್ತೈದನೆಯ ಅಧ್ಯಾಯ

ರುದ್ರೋಕ್ತಜಂಬೂದ್ವೀಪಮೇರುಗಳ ವಿಚಾರ—

ಜಂಬೂದ್ವೀಪದ ಪರಿಮಾಣ ಸನ್ನಿವೇಶಾದಿಗಳು. 129-130

ಪುಟಸಂಖ್ಯೆ

ಜಂಬೂದ್ವೀಪದ ಪರ್ವತಗಳ ಮತ್ತು ವರ್ಷಗಳ ವರ್ಣನೆ. ಮೇರುಪರ್ವತದ ಪರಿಮಾಣ ಮೇರುವಿನ ಸುತ್ತಲೂ ಇರುವ ದೇಶಗಳು. 131–143

ಮೇರುವಿನ ಮೇಲಿರುವ ಮನೋವತಿಯೆಂಬ ಬ್ರಹ್ಮಸಭೆಯ ವರ್ಣನೆ. ಚಕ್ರಪಾದ ಪರ್ವತಗಳು, ಗಂಗೋತ್ಪತ್ತಿ. 143–146

ಎಪ್ಪತ್ತಾರನೆಯ ಅಧ್ಯಾಯ

ಮೇರುವಿನ ಮೇಲಿರುವ ಅಷ್ಟದಿಕ್ಪಾಲಪುರವರ್ಣನೆ. 147–150

ಎಪ್ಪತ್ತೇಳನೆಯ ಅಧ್ಯಾಯ

ಮೇರುಪರ್ವತದ, ಅದರ ಉಪಪರ್ವತಗಳ ಮತ್ತು ಭದ್ರಾಶ್ವ ಕೇತುಮಾಲಾದಿವರ್ಷಗಳ ವರ್ಣನೆ. 151–158

ಎಪ್ಪತ್ತೆಂಟನೆಯ ಅಧ್ಯಾಯ

ಮಂದರಾದಿಪಾದಪರ್ವತಗಳ ಉಪಪರ್ವತನದಿಸರೋವರಾದಿಗಳ ವರ್ಣನೆ. 159–163

ಎಪ್ಪತ್ತೊಂಬತ್ತನೆಯ ಅಧ್ಯಾಯ

ಮೇರುಪರ್ವತದ ಕಣಿವೆಗಳ ವಿಚಾರ. 164–169

ಎಂಬತ್ತನೆಯ ಅಧ್ಯಾಯ

ಮೇರುವಿನ ಮತ್ತು ಅದರ ಪಕ್ಕದ ಹಲವು ಪರ್ವತಗಳ ನಡುವೆ ಇರುವ ವನಸರೋವರಾದಿಗಳ ವರ್ಣನೆ. 170–177

ಎಂಬತ್ತೊಂದನೆಯ ಅಧ್ಯಾಯ

ಪರ್ವತಗಳ ಮೇಲಿರುವ ದೇವನಿವಾಸಗಳ ವರ್ಣನೆ. 178–183

ಎಂಬತ್ತೆರಡನೆಯ ಅಧ್ಯಾಯ

ಗಂಗಾದಿನದಿಗಳ ಮತ್ತು ಅವುಗಳ ತೀರಪ್ರದೇಶದ ವರ್ಣನೆ. 184–186

ಎಂಬತ್ತಮೂರನೆಯ ಅಧ್ಯಾಯ

ನಿಷಧಪರ್ವತಕ್ಕೆ ಸಂಬಂಧಿಸಿದ ಕುಲಗಿರಿದೇಶನದಿಗಳ ವರ್ಣನೆ. 187–189

ಪುಟಸಂಖ್ಯೆ

ಎಂಬತ್ತನಾಲ್ಕನೆಯ ಅಧ್ಯಾಯ

ಮೇರುವಿನ ಉತ್ತರದ ರಮ್ಯಕ ಹಿರಣ್ಮಯಕುರುವರ್ಷ (ಭೂಭಾಗ)ಗಳ ವರ್ಣನೆ. 190–194

ಎಂಬತ್ತೈದನೆಯ ಅಧ್ಯಾಯ

ಭಾರತವರ್ಷದ ನವಖಂಡಗಳ ವರ್ಣನೆ. 195–198

ಎಂಬತ್ತಾರನೆಯ ಅಧ್ಯಾಯ

ಶಾಕದ್ವೀಪವರ್ಣನೆ. 195–201

ಎಂಬತ್ತೇಳನೆಯ ಅಧ್ಯಾಯ

ಕುಶದ್ವೀಪವರ್ಣನೆ. 202–204

ಎಂಬತ್ತೆಂಟನೆಯ ಅಧ್ಯಾಯ

ಕ್ರೌಂಚದ್ವೀಪವರ್ಣನೆ. 205–207

ಎಂಬತ್ತೊಂಬತ್ತನೆಯ ಅಧ್ಯಾಯ

ಶಾಲ್ಮಲಿದ್ವೀಪವರ್ಣನೆ. 208–209

ಗೋಮೇದದ್ವೀಪವರ್ಣನೆ. 209

ಪುಷ್ಕರದ್ವೀಪವರ್ಣನೆಯೇ ಮೊದಲಾದುದು. 209–210

ಆಗಸ್ತ್ಯಯಜ್ಞಶಾಲೆಯಿಂದ ರುದ್ರನು ಕೈಲಾಸಕ್ಕೂ ಋಷಿಗಳೇ ಮೊದಲಾದವರು ಅವರವರೆಡೆಗೂ ಗಮಿಸಿದುದು. 210

ತೊಂಬತ್ತನೆಯ ಅಧ್ಯಾಯ

ತ್ರಿಶಕ್ತಿಕೃತಸೃಷ್ಟಿಮಹಿಮೆ—

ಭೂದೇವಿಯು ತ್ರಿಮೂರ್ತಿಗಳಲ್ಲಾರು ಪರಮಾತ್ಮನೆಂದು ಪ್ರಶ್ನಿಸಿದುದು. 212

ವರಾಹನು ತ್ರಿಮೂರ್ತಿಗಳ ಸ್ವರೂಪವನ್ನೂ ರುದ್ರನ ಆಶ್ಚರ್ಯ ವಿಚಾರಗಳನ್ನೂ ತಿಳಿಸುವುದು. 213–214

ಪುಟಸಂಖ್ಯೆ

ಬ್ರಹ್ಮನು ಅಂಧಕಾಸುರಪೀಡಿತರಾದ ದೇವತೆಗಳೊಡನೆ ಶಿವ ಸನ್ನಿಧಿಗೆ ಬಂದು ರಕ್ಷಣೆಯನ್ನು ಬೇಡಿದುದು ಮತ್ತು ನಾರಾಯಣನನ್ನು ಬರಿಸಿದುದು. 214--215

ತ್ರಿಮೂರ್ತಿಗಳ ದೃಷ್ಟಿಸಂಬಂಧದಿಂದ ತ್ರಿವರ್ಣಳಾದ ತ್ರಿಕಲಾ ದೇವಿಯು ಜನಿಸಿದುದು, ತ್ರಿಮೂರ್ತಿಗಳು, ಆಕೆಗೆ ಮೂರು ರೂಪಗಳನ್ನು ಧರಿಸಬೇಕೆಂಬುದೇ ಮೊದಲಾದ ವರಗಳನ್ನು ಕೊಟ್ಟುದು. 216--217

ತ್ರಿಕಲಾದೇವಿಯು ಬ್ರಾಹ್ಮಿ, ವೈಷ್ಣವಿ, ರೌದ್ರಿಯೆಂಬ ಮೂರು ರೂಪಗಳನ್ನು ಧರಿಸಿದುದು ಮತ್ತು ಆಯಾರೂಪಗಳ ಕಾರ್ಯ. 217--218

ತ್ರಿದೇವಿಯರೂ ತಪಸ್ಸಿಗಾಗಿ ಶ್ವೇತ, ಮಂದರ, ನೀಲಪರ್ವತ ಗಳಿಗೆ ಹೊರಟು ಹೋದುದು 219

ಬ್ರಹ್ಮನು ಸೃಷ್ಟಿ(ಸರಸ್ವತೀ)ದೇವಿಯಿಂದ ಪ್ರಪಂಚವನ್ನು ಬಳೆಯಿಸಿದುದು. 219--222

ತೊಂಬತ್ತೊಂದನೆಯ ಅಧ್ಯಾಯ

ಸರಸ್ವತಿಯ ವರ್ಣನೆ ಸ್ತುತಿಮೊದಲಾದುದು. 223--226

ತೊಂಬತ್ತೆರಡನೆಯ ಅಧ್ಯಾಯ

ವೈಷ್ಣವೀ ದೇವಿಯುಮಹಿಮೆ, ದೇವಿಯೆಡೆಗೆ ನಾರದಾಗಮನ. 227-231

ನಾರದರು ಮಹಿಷಾಸುರನಿಗೆ ದೇವಿಯವಿಚಾರವನ್ನು ಹೇಳಿದುದು. 232-234

ತೊಂಬತ್ತಮೂರನೆಯ ಅಧ್ಯಾಯ

ದೇವಿಯನ್ನು ಪಡೆಯಲು ಬಯಸಿದ ಮಹಿಷಾಸುರನಿಗೂ ಅವನ ಮಂತ್ರಿಗಳಿಗೂ ನಡೆದ ಸಂವಾದ. 235-242

ತೊಂಬತ್ತನಾಲ್ಕನೆಯ ಅಧ್ಯಾಯ

ಮಹಿಷಾಸುರನಿಗೂ ಇಂದ್ರಾದಿ ದೇವತೆಗಳಿಗೂ ಯುದ್ಧ 243-246

ಪುಟಸಂಖ್ಯೆ

ತೊಂಬತ್ತೈದನೆಯ ಅಧ್ಯಾಯ

ವೈಷ್ಣವೀದೇವಿಗೆ ಮಹಿಷಾಸುರಜನನಾದಿಚರಿತ್ರಕಥನ. 247–252

ಮಹಿಷಯುದ್ಧವರ್ಣನೆ ವೈಷ್ಣವೀದೇವಿಯಿಂದ ಮಹಿಷಾಸುರವಧೆ. 253–258

ದೇವತೆಗಳು ಮಾಡಿದ ದೇವಿಯಸ್ತುತಿ, ದೇವಿಯವರ. 259–262

ತೊಂಬತ್ತಾರನೆಯ ಅಧ್ಯಾಯ

ರೌದ್ರೀವ್ರತ—ರೌದ್ರಿಯತಪಸ್ಸು. 262

ರುರುರಾಕ್ಷಸ ಲೋಕಪಾಲರ ಯುದ್ಧ 263–267

ಪರಾಜಿತರಾದ ದೇವತೆಗಳು ರೌದ್ರೀದೇವಿಯ ಮರೆಹೊಕ್ಕುದು ,,

ಅವರಿಗೆ ಅಭಯವಿತ್ತು ದೇವಿಯು ರುರುವನ್ನು ಸಂಹರಿಸಿದುದು. 268–270

ಚಾಮುಂಡಿಯೆಂಬ ಹೆಸರಿಗೆ ಕಾರಣ. 270–271

ರೌದ್ರಿಯುಪರಿವಾರ ದೇವಿಯರಿಗೆ ಆಹಾರಕಲ್ಪನೆ. 271–273

ರುದ್ರಕೃತಚಾಮುಂಡಾಸ್ತುತಿ, ದೇವಿಯವರ, ತ್ರಿದೇವಿಯವರ ಮಹಿಮೆ. 274–280

ತೊಂಬತ್ತೇಳನೆಯ ಅಧ್ಯಾಯ

ರುದ್ರಮಹಿಮೆ, ನಗ್ನ ಕಾಪಾಲವ್ರತ, ತೀರ್ಥಯಾತ್ರೆ. 281–288

ಕಾಶಿಯ ಕಪಾಲಮೋಚನತೀರ್ಥಮಹಿಮೆ, ಕಾಪಾಲಾದಿವ್ರತ ಮಹಿಮೆ. 288–291

ತೊಂಬತ್ತೇಳನೆಯ ಅಧ್ಯಾಯ

ಸತ್ಯತಪಮುನಿಯ ತಪಃಪ್ರಭಾವ, ಹರೀಂದ್ರರ ವರದಾನ ಮುಕ್ತಿ. 292–300

ತೊಂಬತ್ತೊಂಬತ್ತನೆಯ ಅಧ್ಯಾಯ

ಗಾಯತ್ರೀದೇವಿಯ ಅವತಾರವಿಚಾರ, ನಾರಾಯಣವ್ರತ, ವರಾಹಪುರಾಣ ಮಹಿಮೆ. 301–312

ಶ್ವೇತವಿನೀತಾಶ್ವರಕಥೆ. ಅನ್ನದಾನಮಹಿಮೆ ತಿಲಧೇನು ದಾನ ಮಹಿಮೆ. 313–322

ಪುಟಸಂಖ್ಯೆ

ನೂರನೆಯ ಅಧ್ಯಾಯ
ಜಲಧೇನು ದಾನವಿಚಾರ. 323-327

ನೂರೊಂದನೆಯ ಅಧ್ಯಾಯ
ರಸಧೇನು ದಾನ. 328--331

ನೂರೆರಡನೆಯ ಅಧ್ಯಾಯ
ಗುಡಧೇನು ದಾನ 332--337

ನೂರಮೂರನೆಯ ಅಧ್ಯಾಯ
ಶರ್ಕರಾಧೇನು ದಾನ 338--342

ನೂರನಾಲ್ಕನೆಯ ಅಧ್ಯಾಯ
ಮಧುಧೇನು ದಾನ 343–347

ನೂರೈದನೆಯ ಅಧ್ಯಾಯ
ಕ್ಷೀರಧೇನು ದಾನ 348–352

ನೂರಾರನೆಯ ಅಧ್ಯಾಯ
ದಧಿಧೇನು ದಾನ 353–355

ನೂರೇಳನೆಯ ಅಧ್ಯಾಯ
ನವನೀತಧೇನು ದಾನ. 355–59

ನೂರೆಂಟನೆಯ ಅಧ್ಯಾಯ
ಲವಣಧೇನು ದಾನ. 360–63

ನೂರೊಂಬತ್ತನೆಯ ಅಧ್ಯಾಯ
ಕಾರ್ಪಾಸಧೇನು ದಾನ. 364—66

ನೂರಹತ್ತನೆಯ ಅಧ್ಯಾಯ
ಧಾನ್ಯಧೇನು ದಾನ 367—71

ಪುಟಸಂಖ್ಯೆ

ನೂರಹನ್ನೊಂದನೆಯ ಅಧ್ಯಾಯ

ಕಪಿಲಾಧೇನು ದಾನ. 372—76

ನೂರಹನ್ನೆರಡನೆಯ ಅಧ್ಯಾಯ

ಉಭಯಮುಖೀ ಗೋದಾನ, ಸುವರ್ಣಕುಂಭದಾನ. 377–390

ಪುರಾಣಪ್ರಶಂಸೆ, ಅಷ್ಟಾದಶಪುರಾಣಗಳು. 391—94

ನೂರಹದಿಮೂರನೆಯ ಅಧ್ಯಾಯ

ಭೂದೇವಿಯ ಭಗವತ್‌ಸ್ತುತಿ, ಆದರಶ್ರವಣಾದಿಗಳ ಫಲ. 395–406

ನೂರಹದಿನಾಲ್ಕನೆಯ ಅಧ್ಯಾಯ

ಶ್ರೀವರಾಹಾವತಾರವಿಚಾರ 407–409

ಭೂದೇವಿಯು ಶ್ರೀವರಾಹನನ್ನು ದೇವಪ್ರತಿಷ್ಠಾ ಪೂಜಾದಿಕರ್ಮ ವಿಚಾರವಾಗಿ ಪ್ರಶ್ನಿಸಿದುದು. 410–419

ನೂರಹದಿನೈದನೆಯ ಅಧ್ಯಾಯ

ವಿವಿಧಧರ್ಮಗಳು— ಶ್ರೀವರಾಹನು, ಭೂದೇವಿಗೆ ಹೇಳಿದ ಪರಮಾತ್ಮನನ್ನು ಪಡೆಯುವ ಮಾರ್ಗ, ಬ್ರಾಹ್ಮಣಾದಿಯಾದ ನಾಲ್ಕುವರ್ಣದವರಿಗೂ ಅವಶ್ಯವಾದ ಸಾಮಾನ್ಯವಿಶೇಷ ಧರ್ಮಗಳು, ಯೋಗವಿಧಿ. 420–430

ನೂರಹದಿನಾರನೆಯ ಅಧ್ಯಾಯ

ಸುಖದುಃಖನಿರೂಪಣೆ— ಪುಣ್ಯಪಾಪಕರ್ಮಗಳು. 431–440

ನೂರಹದಿನೇಳನೆಯ ಅಧ್ಯಾಯ

ದ್ವಾತ್ರಿಂಶತ್(ಮೂವತ್ತೆರಡು)ಅಪರಾಧಗಳು 441–451

ನೂರಹದಿನೆಂಟನೆಯ ಅಧ್ಯಾಯ

ದೇವೋಪಚಾರವಿಧಿ· 452–464

ನೂರಹತ್ತೊಂಬತ್ತನೆಯ ಅಧ್ಯಾಯ

ದೇವರಿಗೆ ನೈವೇದ್ಯಕ್ಕೆ ಅರ್ಹವಾದ ವಸ್ತುಗಳು ಮತ್ತು ಅರ್ಪಿಸುವ ಕ್ರಮ. 465–470

ಶ್ರೀ ವರಾಹಪುರಾಣದಲ್ಲಿ ಎರಡನೆಯ ಭಾಗದ ಮುಖ್ಯ ವಿಷಯಗಳ

ವರ್ಣಾನುಕ್ರಮವಾದ ಸೂಚಿಕೆ

ವಿಷಯ	ಅಧ್ಯಾಯ	ಆರಂಭದ ಪುಟ
ಅಗಸ್ತ್ಯಗೀತೆ	54-69	1
ಅನರಣ್ಯಮಹಾರಾಜನ ಕಥೆ	62	43
ಅವಿಘ್ನವ್ರತ	59	33
ಅಷ್ಟದಿಕ್ಪಾಲಪುರವರ್ಣನೆ	76	147
ಆರೋಗ್ಯವ್ರತ	62	42
ಉತ್ತಮಪತಿಪ್ರಾಪ್ತಿವ್ರತ	54	1
ಉಭಯಮುಖೀಗೋದಾನ	112	377
ಕಪಾಲಮೋಚನತೀರ್ಥ	97	288
ಕಪಿಲಾಧೇನುದಾನ	111	372
ಕಾಂತಿವ್ರತ	57	24
ಕಾರ್ಪಾಸಧೇನುದಾನ	109	364
ಕಾಮವ್ರತ	61	39
ಕ್ಷೀರಧೇನುದಾನ	105	348
ಕುಶದ್ವೀಪವರ್ಣನೆ	87	202
ಕ್ರೌಂಚದ್ವೀಪವರ್ಣನೆ	88	205
ಗಂಗೋತ್ಪತ್ತಿ	82	184
ಗಮ್ಯಾಗಮ್ಯಸ್ತ್ರೀವಿಚಾರ	68	69

ವಿಷಯ	ಅಧ್ಯಾಯ	ಆರಂಭದ ಪುಟ
ಗಾಯತ್ರೀದೇವಿ	99	301
ಗುಡಧೇನುದಾನ	102	332
ಗೋದಾವರಿಯ ಅವತಾರ	71	95
ಗೋಮೇದ ದ್ವೀಪ	89	209
ಗೌತಮ ಮುನಿಯ ಅನ್ನದಾನಾದಿ ವಿಚಾರ	71	90
ಚಾಮುಂಡಾ ದೇವಿ	96	270
ಜಂಬೂದ್ವೀಪವರ್ಣನೆ	75	129
ಜಲಧೇನುದಾನ	100	323
ತ್ರಿಮೂರ್ತಿಗಳ ಮಹಿಮೆ	90	213
ತ್ರಿಶಕ್ತಿಸೃಷ್ಟಿ ಮಹಿಮೆ	90	216
ದಧಿಧೇನು	106	353
ದೃಢವ್ರತರಾಜನ ಕಥೆ	55	10
ಧನ್ಯವ್ರತ	56	20
ಧಾನ್ಯಧೇನು ದಾನ	110	367
ನವನೀತಧೇನು ದಾನ	107	356
ನಾರದಪುರಾಣಾರ್ಥ ಪಾಂಚರಾತ್ರ	66	59
ನಾರಾಯಣಾಶ್ಚರ್ಯ ವರ್ಣನೆ	69	72
ಪಂಚರಾತ್ರಶಾಸ್ತ್ರ	66	61
ಪುತ್ರಪ್ರಾಪ್ತಿವ್ರತ	63	50
ಪುಷ್ಕರದ್ವೀಪ ವರ್ಣನೆ	89	209
ಭದ್ರಾಶ್ವವರ್ಷ ವರ್ಣನೆ	77	154

ವಿಷಯ	ಅಧ್ಯಾಯ	ಆರಂಭದ ಪುಟ
ಭದ್ರಾಶ್ವಾಗಸ್ತ್ಯ ಸಂವಾದ	54	1
ಭಾರತವರ್ಷ ವರ್ಣನೆ	85	195
ಭೂದೇವಿಯ ಭಗವತ್‌ಸ್ತುತಿ	113	400
ಭೂದೇವಿಯು ವರಾಹನಲ್ಲಿ ಕೇಳಿದ ಧರ್ಮ ಪ್ರಶ್ನೆ	114	410
ಮಂದರಾದಿಪರ್ವತಗಳ ವರ್ಣನೆ	78	159
ಮಧುಧೇನು ದಾನ	104	343
ಮನೋವತಿಸಭಾ ವರ್ಣನೆ	75	143
ಮೇರುವರ್ಣನೆ	75	131
ಮಹಿಷಾಸುರ ವಧೆ	95	247
ರಸಧೇನು ದಾನ	107	328
ರುದ್ರಮಹಿಮೆ	97	281
ರುದ್ರಗೀತೆ	70-89	79
ರುರು ರಾಕ್ಷಸ ವಧೆ	96	268
ರೌದ್ರೀ ದೇವಿ	96	263
ಲವಣಧೇನು ದಾನ	108	360
ವರಾಹಪುರಾಣ ಮಹಿಮೆ	99	312
ವರಾಹನು ಭೂಮಿಯನ್ನುದ್ಧರಿಸಿದು	114	408
ವಿಷ್ಣ್ವೈಶ್ವರ್ಯ	67	64
ವೈಷ್ಣವೀದೇವಿ	92	227
ಶಾಕದ್ವೀಪ ವರ್ಣನೆ	86	199
ಶಾಂತಿವ್ರತ	60	36

ವಿಷಯ	ಅಧ್ಯಾಯ	ಆರಂಭದ ಪುಟ
ಶಾಲ್ಮಲಿದ್ವೀಪ ವರ್ಣನೆ	89	208
ಶುಭವ್ರತ	55	6
ಶ್ವೇತವಿನೀತಾಶ್ವರ ಕಥೆ	99	313
ಶೌರ್ಯವ್ರತ	64	53
ಸತ್ಯತಪ ಮುನಿಯ ಪ್ರಭಾವ	98	292
ಸರಸ್ವತೀ ದೇವಿ	90	218
ಸಾರ್ವಭೌಮ ವ್ರತ	65	55
ಸುವರ್ಣಕುಂಭದಾನ	112	389
ಸೌಭಾಗ್ಯವ್ರತ	58	28

|| ಶ್ರೀರಸ್ತು ||

ಶ್ರೀ ವರಾಹ ಪುರಾಣಂ

ಚತುಃಪಂಚಾಶೋಧ್ಯಾಯಃ

ಅಥೋತ್ತಮಭರ್ತೃಪ್ರಾಪ್ತಿವ್ರತಮ್

|| ಭದ್ರಾಶ್ವ ಉವಾಚ ||

ವಿಜ್ಞಾನೋತ್ಪತ್ತಿಕಾಮಸ್ಯ ಕ ಆರಾಧ್ಯೋ ಭವೇದ್ದ್ವಿಜ ।
ಕಥಂ ಚಾರಾಧ್ಯತೇಽಸೌಹಿ ಏತದಾಖ್ಯಾಹಿ ಭೋ ದ್ವಿಜ || ೧ ||

|| ಅಗಸ್ತ್ಯ ಉವಾಚ ||

ವಿಷ್ಣುರೇವ ಸದಾರಾಧ್ಯಃ ಸರ್ವದೇವೈರಪಿ ಪ್ರಭುಃ ।
ತಸ್ಯೋಪಾಯಂ ಪ್ರವಕ್ಷ್ಯಾಮಿ ಯೇನಾಸೌ ವರದೋಭವೇತ್ || ೨ ||

ರಹಸ್ಯಂ ಸರ್ವದೇವಾನಾಂ ಮುನೀನಾಂ ಮನುಜನ್ಮನಾಂ ।
ನಾರಾಯಣಃ ಪರೋ ದೇವಃ ತಂಪ್ರಣಮ್ಯ ನ ಸೀದತಿ || ೩ ||

ಐವತ್ತನಾಲ್ಕನೆಯ ಅಧ್ಯಾಯ

ಉತ್ತಮಪತಿಪ್ರಾಪ್ತಿವ್ರತ

೧. ಭದ್ರಾಶ್ವ—ಬ್ರಾಹ್ಮಣನೇ, ವಿಜ್ಞಾನೋದಯವನ್ನು ಬಯಸುವವನು ಯಾರನ್ನಾರಾಧಿಸಬೇಕು? ಹೇಗೆ ಆರಾಧಿಸಬೇಕು? ಹೇಳು.

೨-೩. ಅಗಸ್ತ್ಯಮುನಿ—ಸರ್ವದೇವತೆಗಳಿಗೂ ಪ್ರಭುವಾದ ವಿಷ್ಣುವೇ ಯಾವಾಗಲೂ ಆರಾಧ್ಯನು. ಹೇಗೆ ಆರಾಧಿಸಿದರೆ ಅವನು ವರವನ್ನು ಕೊಡುವವನಾಗುವನೋ, ರಹಸ್ಯವಾದ ಆ ಉಪಾಯ (ಮಾರ್ಗ) ವನ್ನು ಹೇಳುವೆನು. ಎಲ್ಲಾ ದೇವತೆಗಳಿಗೂ, ಎಲ್ಲಾ ಮುನಿಗಳಿಗೂ, ಮನುಜರಿಗೂ ನಾರಾಯಣನೇ ಶ್ರೇಷ್ಠನೂ, ಅದ್ವಿತೀಯನೂ ಆದ ದೇವನು. ಅವನಿಗೆ ಪ್ರಣಾಮ ಮಾಡುವವರು ದುಃಖಿಸುವುದಿಲ್ಲ.

ಶ್ರೂಯತೇ ಚ ಪುರಾ ರಾಜನ್ನಾರದೇನ ಮಹಾತ್ಮನಾ ।
ಕಥಿತಂ ತುಷ್ಟಿದಂ ವಿಷ್ಣೋರ್ವ್ರತಮಪ್ಸರಸಾಂ ತಥಾ ॥ ೪ ॥

॥ ಅಪ್ಸರಸ ಊಚುಃ ॥

ಭಗವನ್ ಬ್ರಹ್ಮತನಯ ಭರ್ತೃಕಾಮಾ ವಯಂ ದ್ವಿಜ ।
ನಾರಾಯಣಶ್ಚ ಭರ್ತಾ ನೋ ಯಥಾ ಸ್ಯಾತ್ತತ್ ಪ್ರಚಕ್ಷ್ವ ನಃ ॥ ೫ ॥

॥ ನಾರದ ಉವಾಚ ॥

ಪ್ರಣಾಮಪೂರ್ವಕಃ ಪ್ರಶ್ನಃ ಸರ್ವತ್ರ ವಿಹಿತಃ ಶುಭಃ ।
ಸ ಚ ಮೇ ನ ಕೃತೋ ಗರ್ವಾದ್ಯುಷ್ಮಾಭಿರ್ಯೌವನಸ್ಮಯಾತ್ ॥ ೬ ॥

ತಥಾಪಿ ದೇವದೇವಸ್ಯ ವಿಷ್ಣೋರ್ಯನ್ನಾಮ ಕೀರ್ತಿತಂ ।
ಭವತೀಭಿಸ್ತಥಾ ಭರ್ತಾ ಭವತ್ವಿತಿ ವರಃ ಕೃತಃ ॥ ೭ ॥

ತನ್ನಾಮೋಚ್ಚಾರಣಾದೇವ ಕೃತಂ ಸರ್ವಂ ನ ಸಂಶಯಃ ॥ ೮ ॥

---

೪. ದೊರೆಯೇ, ಹಿಂದೆ ನಾರದಮಹರ್ಷಿಯು ಅಪ್ಸರಸ್ತ್ರೀಯರಿಗೆ ಹೇಳಿದ ತೃಪ್ತಿಕರವಾದ ವಿಷ್ಣುವ್ರತವನ್ನು ಕೇಳಿದ್ದೇವಲ್ಲವೆ !

೫. ಅಪ್ಸರಸ್ತ್ರೀಯರು—ಪೂಜ್ಯನೇ, ಬ್ರಹ್ಮಪುತ್ರನೇ, ಬ್ರಾಹ್ಮಣನೇ, ನಾವು ಪತಿಯನ್ನು ಬಯಸುತ್ತೇವೆ. ನಾರಾಯಣನು ನಮಗೆ ಹೇಗೆ ಪತಿಯಾಗುವನೋ ಅದನ್ನು ಹೇಳು.

೬. ನಾರದ—ಪ್ರಣಾಮಪೂರ್ವಕವಾಗಿ ಪ್ರಶ್ನೆಯನ್ನು ಕೇಳುವುದು ಯಾವಾಗಲೂ ಶುಭವಾದುದೆಂದು ಹೇಳಿದೆ. ನೀವು ಯೌವನದ ನಗುವಿನಿಂದಲೂ ಗರ್ವದಿಂದಲೂ ನನಗೆ ಪ್ರಣಾಮಮಾಡಲಿಲ್ಲ.

೭. ಆದರೂ, ನೀವು ದೇವದೇವನಾದ ವಿಷ್ಣುವಿನ ಹೆಸರನ್ನು ಹೇಳಿದುದರಿಂದ ನಿಮಗೆ ನಿಮ್ಮ ಇಷ್ಟದಂತೆ ಪತಿಯಾಗಲಿ ಎಂದು ವರವನ್ನು ಕೊಟ್ಟಿದ್ದೇನೆ.

೮. ಅವನ ನಾಮವನ್ನು ಉಚ್ಚರಿಸಿದುದರಿಂದಲೇ ಎಲ್ಲವನ್ನೂ ಮಾಡಿದಂತಾಯಿತು. ಸಂದೇಹವಿಲ್ಲ.

ಇದಾನೀಂ ಕಥಯಾಮ್ಯಾಶು ವ್ರತಂ ಯೇನ ಹರಿಃ ಸ್ವಯಂ |
ವರದತ್ವಮವಾಪ್ನೋತಿ ಭರ್ತೃತ್ವಂ ಚ ನಿಯಚ್ಛತಿ || ೯ ||

ವಸಂತೇ ಶುಕ್ಲಪಕ್ಷಸ್ಯ ದ್ವಾದಶೀ ಯಾ ಭವೇಚ್ಛುಭಾ |
ತಸ್ಯಾಮುಪೋಷ್ಯ ವಿಧಿವತ್ ನಿಶಾಯಾಂ ಹರಿಮರ್ಚಯೇತ್ || ೧೦ ||

ತಸ್ಯೋಪರಿ ರಕ್ತಪುಷ್ಪೈರ್ಮಂಡಲಂ ಕಾರಯೇದ್ಬುಧಃ |
ನೃತ್ಯವಾದಿತ್ರಗೀತೈಶ್ಚ ಜಾಗರಂ ತತ್ರ ಕಾರಯೇತ್ || ೧೧ ||

ನಮೋ ಭವಾಯೇತಿ ಶಿರಃ ಅನಂಗಾಯೇತಿ ವೈ ಕಟಿಂ |
ಕಾಮಾಯ ಬಾಹುಮೂಲೇತು ಸುಶಾಸ್ತ್ರಾಯೇತಿ ಚೋದರಂ ||
ಮನ್ಮಥಾಯೇತಿ ಪಾದೌ ತು ಹರಯೇ ಇತಿ ಸರ್ವತಃ || ೧೨ ||

---

೯. ಈಗ, ಆ ಹರಿಯು ಬೇಗನೆ ಯಾವುದರಿಂದ ತಾನೇ ವರವನ್ನು ಕೊಡುವನಾಗುವನೋ ಮತ್ತು ಪತಿಯಾಗುವನೋ ಅಂತಹ ವ್ರತವನ್ನು ಹೇಳುತ್ತೇನೆ.

೧೦. ಚೈತ್ರಮಾಸದ ಶುಕ್ಲಪಕ್ಷದ ಶುಭಕರವಾದ ದ್ವಾದಶಿಯ ಹಿಂದಿನ ಏಕಾದಶಿಯದಿನ ಉಪವಾಸಮಾಡಿ, ಆ ರಾತ್ರಿಯಲ್ಲಿ ವಿಧ್ಯುಕ್ತವಾಗಿ ಹರಿಯನ್ನು ಅರ್ಚಿಸಬೇಕು.

೧೧. ಅವನ ಮುಂಭಾಗದಲ್ಲಿ ಕೆಂಪುಹೂಗಳಿಂದ ಮಂಡಲವನ್ನು ರಚಿಸಬೇಕು. ಆ ಮಂಡಲದಲ್ಲಿ ನೃತ್ತಗೀತವಾದ್ಯಗಳಿಂದ ಆ ರಾತ್ರಿ ಜಾಗರಣೆಯನ್ನು ಮಾಡಬೇಕು.

೧೨. ಭವಾಯ ನಮಃ ಎಂದು ದೇವನ ಶಿರಸ್ಸನ್ನೂ, ಅನಂಗಾಯ ನಮಃ ಎಂದು ನಡುವನ್ನೂ, ಕಾಮಾಯ ನಮಃ ಎಂದು ತೋಳಬುಡವನ್ನೂ, ಸುಶಾಸ್ತ್ರಾಯ ನಮಃ ಎಂದು ಉದರವನ್ನೂ, ಮನ್ಮಥಾಯ ನಮಃ ಎಂದು ಪಾದಗಳನ್ನೂ, ಹರಯೇ ನಮಃ ಎಂದು ದೇಹವೆಲ್ಲವನ್ನೂ ಅರ್ಚಿಸಬೇಕು.

ಚಕ್ಷುರ್ದಿಕ್ಷು ಭೃಶಂ ತಸ್ಯ ಪ್ರಣತಸ್ಯ ತತೋ * ಭುವಿ ।
ಏವಂ ಕೃತ್ವಾ ಪ್ರಭಾತೇ ತು ದಾಪಯೇದ್ಬ್ರಾಹ್ಮಣಾಯ ಚ ॥
ವೇದವೇದಾಂಗಯುಕ್ತಾಯ ಸಂಪೂರ್ಣಾಂಗಾಯ ಧೀಮತೇ ॥ ೧೩ ॥

ಬ್ರಾಹ್ಮಣಾಂಶ್ಚ ತಥಾ ಪೂಜ್ಯ ವ್ರತಮೇತತ್ಸಮಾಪಯೇತ್ ॥ ೧೪ ॥

ಏವಂ ಕೃತೇ ತಥಾವಿಷ್ಣುಃ ಭರ್ತಾ ವೋ ಭವಿತಾ ಧ್ರುವಂ ।
ಪಶ್ಚಾತ್ತು ರಸಮಾದಾಯ ಇಕ್ಷುಕಾಂಡಾತ್ಸುಶೋಭನಾತ್ ॥
ಪುಷ್ಪೈಃ ಸಂಪೂಜ್ಯ ದೇವೇಶಂ ಮಲ್ಲಿಕಾಜಾತಿಭಿಸ್ತಥಾ ॥ ೧೫ ॥

ಅಕೃತ್ವಾ ಮತ್ಪ್ರಣಾಮಂತು ಪೃಷ್ಟೋ ಗರ್ವೇಣ ಶೋಭನಾಃ ।
ಅವಮಾನಸ್ಯ ತಸ್ಯಾಯಂ ವಿಪಾಕೋ ವೋ ಭವಿಷ್ಯತಿ ॥ ೧೬ ॥

ಏತಸ್ಮಿನ್ನೇವ ಸರಸಿ ಅಷ್ಟಾವಕ್ರೋ ಮಹಾಮುನಿಃ ॥ ೧೭ ॥

---

೧೩. ಬಳಿಕ ದೇವನ ಮುಂಭಾಗದಲ್ಲೆಲ್ಲಾ ಕಡೆಯೂ, ಅವನಿಗೆ ಹಲವು ಪ್ರಣಾಮಗಳನ್ನು ಮಾಡಿ, ಬೆಳಗಾದಮೇಲೆ, (ದ್ವಾದಶಿಯದಿನ) ವೇದವೇದಾಂಗಗಳನ್ನರಿತ ವಿದ್ಯಾವಂತನಾದ, ಪೂರ್ಣಾಂಗನಾದ ಬ್ರಾಹ್ಮಣನಿಗೆ ದಾನಮಾಡಬೇಕು.

೧೪. ಅಲ್ಲದೆ ಬೇರೆಯ ಬ್ರಾಹ್ಮಣರನ್ನೂ ಪೂಜಿಸಿ, ಈ ವ್ರತವನ್ನು ಪೂರ್ತಿಗೊಳಿಸಬೇಕು.

೧೫. ಬಳಿಕ ಬಹಳ ಚೆನ್ನಾಗಿರುವ ಕಬ್ಬಿನ ಜಲ್ಲೆಯಿಂದ ರಸವನ್ನು ತೆಗೆದುಕೊಂಡು ದೇವೇಶನನ್ನು ಮಲ್ಲಿಗೆ ಜಾಜಿಹೂಗಳಿಂದ ಪೂಜಿಸಬೇಕು, ಹೀಗೆ ಮಾಡಿದರೆ ವಿಷ್ಣುವು, ತಪ್ಪದೇ ನಿಮಗೆ ಪತಿಯಾಗುವನು.

೧೬. ಶೋಭನಾಂಗಿಯರೇ, ನೀವು ಗರ್ವದಿಂದ ನನಗೆ ನಮಸ್ಕರಿಸದೆ ಪ್ರಶ್ನೆಯನ್ನು ಕೇಳಿದಿರಿ. ಆ ಅವಮಾನದಿಂದ ನಿಮಗೆ ಮುಂದೆ ಹೇಳುವ ಈ ದುಷ್ಫಲವುಂಟಾಗುವುದು.

೧೭-೧೮. ಶೋಭನಾಂಗಿಯರೇ, ಈ ವ್ರತದಿಂದ ದೇವೇಶನನ್ನು ಪತಿಯ

---

* ನೃಪ.

ತಸ್ಯೋಽಪಹಾಸಂ ಕೃತ್ವಾ ತು ಶಾಪಂ ಲಪ್ಸ್ಯಥ ಶೋಭನಾಃ ।
ವ್ರತೇನಾನೇನ ದೇವೇಶಂ ಪತಿಂ ಲಬ್ಧ್ವಾಭಿಮಾನತಃ ॥ ೧೮ ॥

ಅವಮಾನೇನ ಹರಣಂ ಗೋಪಾಲೈರ್ವೋಽ ಭವಿಷ್ಯತಿ ।
ಪುರಾ ಹರ್ತಾ ಚ ಕನ್ಯಾನಾಂ ದೇವೋಽ ಭರ್ತಾ ಭವಿಷ್ಯತಿ ॥ ೧೯ ॥

॥ ಅಗಸ್ತ್ಯ ಉವಾಚ ॥

ಏವಮುಕ್ತ್ವಾ ಸ ದೇವರ್ಷಿಃ ಪ್ರಯಯೌ ನಾರದಃ ಕ್ಷಣಾತ್ ।
ತಾ ಅಪ್ಯೇತದ್ವ್ರತಂ ಚಕ್ರುಸ್ತುಷ್ಟಶ್ಚಾಸಾಂ ಸ್ವಯಂ ಹರಿಃ ॥ ೨೦ ॥

ಇತಿ ಶ್ರೀ ವರಾಹಪುರಾಣೇಽಗಸ್ತ್ಯಗೀತಾಸು ಉತ್ತಮಭರ್ತೃಪ್ರಾಪ್ತಿವ್ರತಂ ನಾಮ ಚತುಃಪಂಚಾಶೋಽಧ್ಯಾಯಃ

ನ್ನಾಗಿ ಪಡೆದ ನೀವು ಅಹಂಕಾರವುಳ್ಳವರಾಗಿ ಈ ಸರೋವರದಲ್ಲಿ ಅಷ್ಟಾವಕ್ರ ಋಷಿಯನ್ನು ಹಾಸ್ಯಮಾಡಿ, ಅವನಿಂದ ಶಾಪವನ್ನು ಪಡೆಯುವಿರಿ.

೧೯. ಅದರಿಂದ ನಿಮ್ಮನ್ನು ಗೋಪಾಲರು ಅಪಹರಿಸುವರು. ಮುಂಚೆ ಅಪಹರಿಸುವ ದೇವನೇ ಕನ್ನೆಯರಾದ ನಿಮಗೆ ಪತಿಯಾಗುವನು.

೨೦. ಅಗಸ್ತ್ಯಮುನಿ—ದೇವರ್ಷಿಯಾದ ನಾರದನು ಹೀಗೆ ಅಪ್ಸರಸ್ತ್ರೀಯರಿಗೆ ಹೇಳಿ, ಕೂಡಲೇ ಹೊರಟುಹೋದನು. ಆ ಅಚ್ಚರಸಿಯರು ಈ ವ್ರತವನ್ನು ಮಾಡಿದರು. ಹರಿಯು ತಾನೇ ಅವರಿಗೊಲಿದನು.

ಅಧ್ಯಾಯದ ಸಾರಾಂಶ:—ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ—ಅಪ್ಸರಸ್ತ್ರೀಯರು, ವಿಷ್ಣುವು ತಮಗೆ ಪತಿಯಾಗುವಂತೆ ನಾರದೋಪದೇಶದಿಂದ ಉತ್ತಮಪತಿಪ್ರಾಪ್ತಿವ್ರತವನ್ನು ಮಾಡಿ, ವಿಷ್ಣುವನ್ನು ಒಲಿಸಿಕೊಂಡರೆಂದು ಹೇಳಿದ್ದಾನೆ. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಐವತ್ತನಾಲ್ಕನೆಯ ಅಧ್ಯಾಯ

|| ಶ್ರೀಃ ||

–x–

ಪಂಚಪಂಚಾಶೋಽಧ್ಯಾಯಃ

ಅಥ ಶುಭವ್ರತಂ

|| ಅಗಸ್ತ್ಯ ಉವಾಚ ||

ಶೃಣು ರಾಜನ್ಮಹಾಭಾಗ ವ್ರತಾನಾಮುತ್ತಮಂ ವ್ರತಂ |
ಯೇನ ಸಂಪ್ರಾಪ್ಯತೇ ವಿಷ್ಣುಃ ಶುಭೇನೈವ ನ ಸಂಶಯಃ || ೧ ||

ಮಾರ್ಗಶೀರ್ಷಸ್ಯ ಮಾಸೇ ತು ಪ್ರಥಮೇಽಹ್ನಿ ಸಮಾರಭೇತ್ |
ಸಿತೇ ಪಕ್ಷೇ ದಶಮ್ಯಾಂ ತು ಏಕಭುಕ್ತಂ ಸಮಾಚರೇತ್ || ೨ ||

ತತೋ ದಶಮ್ಯಾಂ ಸ್ನಾತ್ವಾ ತು ಮಧ್ಯಾಹ್ನೇ ವಿಷ್ಣುಮರ್ಚಯೇತ್ |
ಭುಕ್ತ್ವಾ ಸಂಕಲ್ಪಯೇತ್ಪ್ರಾಗ್ವದ್ದ್ವಾದಶೀಮಕ್ಷತಾಂ ನೃಪ || ೩ ||

ಐವತ್ತೈದನೆಯ ಅಧ್ಯಾಯ

ಶುಭವ್ರತ

೧. ಮಹಾಭಾಗ್ಯನೇ, ರಾಜನೇ, ಶುಭವಾದ ಯಾವುದರಿಂದ ಸಂದೇಹ ವಿಲ್ಲದೆ ವಿಷ್ಣುವು ದೊರೆಯುವನೋ, ಅಂತಹ ವ್ರತಗಳಲ್ಲೆಲ್ಲಾ ಉತ್ತಮವಾದ ವ್ರತವನ್ನು ಕೇಳು.

೨-೩. ಮಾರ್ಗಶಿರಮಾಸದ ಶುಕ್ಲಪಕ್ಷದ ದಶಮಿಯದಿನ ಈ ವ್ರತವನ್ನು ಆರಂಭಿಸಬೇಕು. ದಶಮಿಯದಿನ ಸ್ನಾನಮಾಡಿ, ಮಧ್ಯಾಹ್ನ ವಿಷ್ಣುವನ್ನು ಪೂಜಿಸ ಬೇಕು. ಆ ದಿನ ಒಂದೇಹೊತ್ತು ಊಟಮಾಡಬೇಕು. ಊಟವಾದಬಳಿಕ ಹಿಂದಿನಂತೆ ದ್ವಾದಶೀವ್ರತವನ್ನು ಮಾಡುತ್ತೇನೆಂದು ಸಂಕಲ್ಪಮಾಡಬೇಕು.

ವಿಪ್ರೇಭ್ಯಶ್ಚ ಯವಾನ್ನದ್ಯಾತ್ತಾಮುಪೋಷ್ಯ ವಿಧಾನತಃ ।
ಸರ್ವದಾ ಚ ಹರಿರ್ನಾಮೋಚ್ಯೋ ದಾನೇ ಹೋಮೇ ತಥಾರ್ಚನೇ ॥ ೪ ॥

ಚಾತುರ್ಮಾಸ್ಯಮಥೈವಂ ತು ಕ್ಷಪಿತ್ವಾ ರಾಜಸತ್ತಮ ।
ಚೈತ್ರಾದಿಷು ಪುನಸ್ತದ್ವದುಪೋಷ್ಯ ಪ್ರಯತಸ್ಸುಧೀಃ ॥
ಸಕ್ತುಪಾತ್ರಾಣಿ ದದ್ಯಾತ್ತು ವಿಪ್ರೇಭ್ಯಃ ಪ್ರೀತಿಪೂರ್ವಕಂ ॥ ೫ ॥

ಶ್ರಾವಣಾದಿಷು ಮಾಸೇಷು ಶಾಲೀರ್ದದ್ಯಾತ್ಪ್ರಯತ್ನತಃ ॥ ೬ ॥

ತ್ರಿಷು ಮಾಸೇಷು ಯಾವಚ್ಚ ಕಾರ್ತಿಕಸ್ಯಾದಿರಾಗತಃ ।
ತೇಮುಷ್ಯೇವಂ ಕ್ಷಪಿತ್ವಾ ತು ದಶಮ್ಯಾಂ ಪ್ರಯತಶ್ಶುಚಿಃ ॥ ೭ ॥

ಅರ್ಚಯಿತ್ವಾ ಹರಿಂ ಭಕ್ತ್ಯಾ ಮಾಸನಾಮ್ನಾ ವಿಚಕ್ಷಣಃ ।
ಸಂಕಲ್ಪ್ಯ ಪೂರ್ವವದ್ಭಕ್ತ್ಯಾ ದ್ವಾದಶ್ಯಾಂ ಸಂಯತೇಂದ್ರಿಯಃ ॥ ೮ ॥

---

೪. ಏಕಾದಶಿಯದಿನ ಬ್ರಾಹ್ಮಣರಿಗೆ ಯವೆಯನ್ನು ಕೊಡಬೇಕು. ಆ ದಿನ ವಿಧ್ಯುಕ್ತವಾಗಿ ಉಪವಾಸಮಾಡಿ, ಯಾವಾಗಲೂ ದಾನ ಹೋಮಾರ್ಚನೆ ಗಳಲ್ಲೆಲ್ಲಾ ಹರಿನಾಮವನ್ನು ಹೇಳುತ್ತಿರಬೇಕು. ದ್ವಾದಶಿಯದಿನ ವ್ರತವನ್ನು ಪೂರ್ತಿಮಾಡಬೇಕು.

೫. ರಾಜೋತ್ತಮನೇ, ಮಾರ್ಗಶಿರಮಾಸದಿಂದ ಆರಂಭಿಸಿ ನಾಲ್ಕು ತಿಂಗಳು ಪ್ರತಿದ್ವಾದಶಿಯಲ್ಲಿಯೂ ಹೀಗೆ ವ್ರತಮಾಡುತ್ತಿರಬೇಕು. ಚೈತ್ರಮಾಸ ಮೊದಲುಗೊಂಡು ನಾಲ್ಕು ತಿಂಗಳು ಹಾಗೆಯೇ, ಪರಿಶುದ್ಧನಾಗಿ, ಉಪವಾಸಾದಿ ಗಳನ್ನು ಮಾಡಿ, ಬ್ರಾಹ್ಮಣರಿಗೆ ಪಾಯಸಪಾತ್ರೆಯನ್ನು ಪ್ರೀತಿಪೂರ್ವಕವಾಗಿ ದಾನಮಾಡಬೇಕು.

೬. ಹಾಗೆಯೇ ಶ್ರಾವಣಾದಿಯಾದ ಮೂರು ತಿಂಗಳು ಪ್ರಯತ್ನಪೂರ್ವಕ ವಾಗಿ ಬತ್ತವನ್ನು ದಾನಮಾಡಬೇಕು.

೭-೧೧. ಕಾರ್ತಿಕಮಾಸವು ಆರಂಭವಾಗುವವರೆಗೆ ಮೂರು ತಿಂಗಳು ಹಿಂದಿನಂತೆ ಕಳೆದು, ಕಾರ್ತಿಕ ಶುದ್ಧ ದಶಮಿಯದಿನ ಪವಿತ್ರನೂ, ನಿರ್ಮಲನೂ ಆಗಿ, ಅರಿತವನು ಭಕ್ತಿಯಿಂದ ಹರಿಯನ್ನು ಆ ತಿಂಗಳ ಹೆಸರಿನಿಂದ ಪೂಜಿಸಿ,

ಏಕಾದಶ್ಯಾಂ ಯಥಾಶಕ್ತ್ಯಾ ಕಾರಯೇತ್ ಪೃಥಿವೀಂ ನೃಪ ।
ಕಾಂಚನಾಂಗಾಂ ಚ ಪಾತಾಲಕುಲಪರ್ವತಸಂಯುತಾಂ ॥ ೯ ॥

ಭೂಮಿಂನ್ಯಾಸವಿಧಾನೇನ ಸ್ಥಾಪಯೇತ್ತಾಂ ಹರೇಃ ಪುರಃ ।
ಸಿತವಸ್ತ್ರಯುಗಚ್ಛನ್ನಾಂ ಸರ್ವಬೀಜಸಮನ್ವಿತಾಂ ॥ ೧೦ ॥

ಸಂಪೂಜ್ಯ ಪ್ರಿಯದತ್ತೇತಿ ಪಂಚರತ್ನೈರ್ವಿಚಕ್ಷಣಃ ।
ಜಾಗರಂ ತತ್ರ ಕುರ್ವೀತ ಪ್ರಭಾತೇಷು ಪುನರ್ದ್ವಿಜಾನ್ ॥ ೧೧ ॥

ಆಮಂತ್ರ್ಯ ಸಂಖ್ಯಯಾ ರಾಜಂಶ್ಚತುರ್ವಿಂಶತಿ ಯತ್ನತಃ ।
ಏಕೈಕಸ್ಯೈ ಚ ಗಾಂ ದದ್ಯಾದನಡ್ವಾಹಂ ಸದಕ್ಷಿಣಂ ॥ ೧೨ ॥

ಏಕೈಕಂ ವಸ್ತ್ರಯುಗ್ಮಂ ಚ ಅಂಗುಲೀಯಕಮೇವ ಚ ।
ಕಟಕಾನಿ ಚ ಸೌವರ್ಣಕರ್ಣಾಭರಣಕಾನಿ ಚ ॥ ೧೩ ॥

ಹಿಂದಿನಂತೆ ಸಂಕಲ್ಪಮಾಡಿ, ಭಕ್ತಿಯಿಂದ ಏಕಾದಶಿಯದಿನ ತನ್ನ ಶಕ್ತಿಗನುಸಾರವಾಗಿ ಚಿನ್ನದಿಂದ ಪಾತಾಳಕುಲಪರ್ವತಗಳೊಡಗೂಡಿರುವಂತೆ ಮಾಡಿಸಿದ ಭೂದೇವಿಯ ಮೂರ್ತಿಯನ್ನು ಬಿಳಿಯ ವಸ್ತ್ರಗಳೆರಡರಿಂದಲಂಕರಿಸಿ, ಸರ್ವಬೀಜಗಳೊಡನೆ ಹರಿಯ ಮುಂದುಗಡೆ ನ್ಯಾಸವಿಧಿಯಿಂದ ಸ್ಥಾಪಿಸಿ, ಪ್ರಿಯದತ್ತೆಯೆಂದು ಪಂಚರತ್ನಗಳಿಂದ ಅರ್ಚಿಸಿ, ರಾತ್ರಿ ಅಲ್ಲಿಯೇ ಜಾಗರಣೆಯನ್ನು ಮಾಡಬೇಕು.

೧೨. ದ್ವಾದಶಿಯದಿನ ಪ್ರಾತಃಕಾಲ ಪ್ರಯತ್ನಪಟ್ಟು ಇಪ್ಪತ್ತನಾಲ್ಕುಜನ ಬ್ರಾಹ್ಮಣರನ್ನು ಕರೆದು, ಪ್ರತಿಯೊಬ್ಬರಿಗೂ, ದಕ್ಷಿಣೆಯೊಡನೆ ಹಸುವನ್ನಾಗಲಿ ಎತ್ತನ್ನಾಗಲಿ ದಾನ ಕೊಡಬೇಕು.

೧೩. ಒಬ್ಬೊಬ್ಬರಿಗೂ ಒಂದು ಜತೆ ಪಂಚೆಯನ್ನೂ, ಚಿನ್ನದ ಉಂಗುರವನ್ನೂ, ಕಂಕಣಗಳನ್ನೂ, ಕಡುಕುಗಳನ್ನೂ (ಕಿವಿಯ ಆಭರಣಗಳನ್ನೂ) ಕೊಡಬೇಕು.

ಏಕೈಕಂ ಗ್ರಾಮಮೇತೇಷಾಂ ರಾಜಾ ರಾಜನ್ ಪ್ರದಾಪಯೇತ್ ।
ಸ್ವಶಕ್ತ್ಯಾ ಭರಣಂ ಚೈವ ದರಿದ್ರಸ್ಯ ಸ್ವಶಕ್ತಿತಃ ॥ ೧೪ ॥

ಯಥಾಶಕ್ತ್ಯಾ ಮಹೀಂ ಕೃತ್ವಾ ಕಾಂಚನೀಂ ಗೋಯುಗಂ ತಥಾ ।
ವಸ್ತ್ರಯುಗ್ಮಂ ಚ ದಾತವ್ಯಂ ಯಥಾವಿಭವಶಕ್ತಿತಃ ॥ ೧೫ ॥

ಸರ್ವಾಭರಣಸಂಯುಕ್ತಾಂ ಗಾಂ ಚ ದದ್ಯಾದ್ವಿಶೇಷತಃ ।
ಏವಂಕೃತೇ ಸಕೃದ್ರಾಜನ್ ತುಷ್ಟಿಮಾಯಾತಿ ವೈ ವಿಭುಃ ॥ ೧೬ ॥

ರೌಪ್ಯಂ ವಾ ಪೃಥಿವೀಂ ಕೃತ್ವಾ ಯಥಾವಿಭವಶಕ್ತಿತಃ ।
ದದ್ಯಾತ್ತಾಂ ಬ್ರಾಹ್ಮಣೇಭ್ಯಶ್ಚ ಯಥಾಶಕ್ತಿ ಹರಿಂ ಸ್ಮರನ್ ॥ ೧೭ ॥

ತಥಾ ಭೋಜನಮೇತೇಷಾಮುಪಾನಚ್ಛತ್ರಿಕಾಂ ತಥಾ ।
ಪಾದುಕೇ ಚ ತಥಾ ದದ್ಯಾತ್ಪ್ರೈಷ್ಯೋ ದಾಮೋದರೋ ಮಮ ॥
ಪ್ರೀಯತಾಂ ಸರ್ವದೋ ದೇವೋ ವಿಶ್ವರೂಪೋ ಹರಿರ್ಮಮ ॥ ೧೮ ॥

---

೧೪. ವ್ರತಮಾಡುವವನು ರಾಜನಾಗಿದ್ದರೆ ಆ ಬ್ರಾಹ್ಮಣರಿಗೆ ಒಂದೊಂದು ಗ್ರಾಮವನ್ನೇ ದಾನಮಾಡಬೇಕು. ದರಿದ್ರನಾದ ಬ್ರಾಹ್ಮಣನಿಗೆ ತನ್ನ ಶಕ್ತಿಗನು ಸಾರವಾಗಿ ಜೀವನಕ್ಕೆ ಬೇಕಾದುದನ್ನು ಕೊಡಬೇಕು.

೧೫-೧೬. ತನ್ನ ಶಕ್ತಿಗನುಸಾರವಾಗಿ ಸುವರ್ಣದ ಭೂದೇವಿಯನ್ನು ಮಾಡಿಸಿ, ಎರಡು ಗೋವುಗಳನ್ನೂ, ಜತೆಯ ಉಡುಗೆಗಳನ್ನೂ, ಸರ್ವಾಭರಣ ಗಳಿಂದಲಂಕೃತವಾದ ಹಸುವನ್ನೂ ಮುಖ್ಯವಾಗಿ ಕೊಡಬೇಕು. ದೊರೆಯೇ, ಹೀಗೆ ಒಂದು ಸಾರಿ ಮಾಡಿದರೆ ವಿಭುವಾದ ವಿಷ್ಣುವು ತೃಪ್ತನಾಗುವನು.

೧೭. ಶಕ್ತಿಯಿಲ್ಲದವನು ಭೂದೇವಿಯ ಮೂರ್ತಿಯನ್ನು ಬೆಳ್ಳಿಯಿಂದ ಲಾದರೂ ಮಾಡಿಸಬೇಕು. ಭೂದೇವಿಯ ಮೂರ್ತಿಯನ್ನೂ, ದ್ವಾದಶಿಯದಿನ ಹರಿಯನ್ನು ಸ್ಮರಿಸುತ್ತ ಬ್ರಾಹ್ಮಣನಿಗೆ ಅರ್ಪಿಸಬೇಕು.

೧೮. "ದಾಮೋದರನೂ, ವಿಶ್ವರೂಪನೂ, ಹರಿಯೂ, ಸಕಲವನ್ನೂ ಕೊಡುವವನೂ ಆದ ಕೃಷ್ಣನು ಪ್ರೀತನಾಗಿ ನನಗೊಲಿಯಲಿ" ಎಂದು, ಆ ಬ್ರಾಹ್ಮ ಣರೆಲ್ಲರಿಗೂ ದ್ವಾದಶಿಯದಿನ, ಭೋಜನವನ್ನು ಮಾಡಿಸಿ, ಪಾದರಕ್ಷೆಯನ್ನೂ, ಕೊಡೆಯನ್ನೂ ಕೊಡಬೇಕು.

ದಾನಂ ಸುಭೋಜನಂ ದತ್ವಾ ಸಕೃದ್ಯತ್ಫಲಮಾಪ್ಯತೇ ।
ವರ್ಷಾಣಾಂ ತು ಸಹಸ್ರೇಣ ಕೀರ್ತಿತುಂ ನೈವ ಶಕ್ಯತೇ ॥ ೧೯ ॥

ತಥಾಪ್ಯುದ್ದೇಶತಃ ಕಿಂಚಿತ್ಫಲಂ ವಕ್ಷ್ಯಾಮಿ ತೇನಘ ॥ ೨೦ ॥

ವ್ರತೇನಾನೇನ ಯದ್ವೃತ್ತಂ ಶುಭಂ ಯಸ್ಯ ಶೃಣುಷ್ವ ತತ್ ॥ ೨೧ ॥

ಆಸೀದಾದಿಯುಗೇ ರಾಜಾ ಬ್ರಹ್ಮವಾದೀ ದೃಢವ್ರತಃ ।
ಸ ಪುತ್ರಕಾಮಃ ಪಪ್ರಚ್ಛ ಬ್ರಹ್ಮಾಣಂ ಪರಮೇಶ್ವರಂ ॥
ತಸ್ಯೇದಂ ವ್ರತಮಾಚಖ್ಯೌ ಬ್ರಹ್ಮಾ ಸ ಕೃತವಾನ್ಪುರಾ ॥ ೨೨ ॥

ತಸ್ಯ ವ್ರತಾಂತೇ ವಿಶ್ವಾತ್ಮಾ ಸ್ವಯಂ ಪ್ರತ್ಯಕ್ಷತಾಂ ಗತಃ ।
ದೃಷ್ಟ್ವಾ ಪ್ರೋವಾಚ ರಾಜಾನಂ ಭೋ ರಾಜನ್ ವರೋ ಮೇ
ವ್ರಿಯತಾಂ ನೃಪ ॥ ೨೩ ॥

---

೧೯. ಹೀಗೆ ದಾನವನ್ನೂ, ಒಳ್ಳೆಯ ಭೋಜನವನ್ನೂ ಒಂದಾವೃತ್ತಿ ಮಾಡುವುದರಿಂದ ಆಗುವ ಫಲವನ್ನು ಸಹಸ್ರವರ್ಷಗಳಲ್ಲೂ ಹೇಳಿ ಮುಗಿಸಲು ಸಾಧ್ಯವೇ ಇಲ್ಲ.

೨೦. ಆದರೂ ಉದ್ದೇಶಪೂರ್ವಕವಾಗಿ, ಪುಣ್ಯಶಾಲಿಯಾದ ನಿನಗೆ ಸ್ವಲ್ಪವಾಗಿ ಹೇಳುತ್ತೇನೆ.

೨೧. ದೊರೆಯೇ, ಈ ವ್ರತದಿಂದ ಯಾರಿಗೆ ಯಾವ ಶುಭವಾಯಿತೆಂಬುದನ್ನು ಕೇಳು.

೨೨. ಕೃತಯುಗದಲ್ಲಿ ಬ್ರಹ್ಮವಾದಿಯಾದ ದೃಢವ್ರತನೆಂಬ ರಾಜನಿದ್ದನು ಪುತ್ರನನ್ನು ಪಡೆಯಲು ಬಯಸಿದ ಆತನು ಪರಮೇಶ್ವರನಾದ ಬ್ರಹ್ಮನನ್ನು ಕೇಳಿದನು. ಬ್ರಹ್ಮನು ಆತನಿಗೆ ಈ ವ್ರತವನ್ನುಪದೇಶಿಸಿದನು. ಆ ರಾಜನು ಮಾಡಿದನು.

೨೩. ವ್ರತದ ಕಡೆಯಲ್ಲಿ ವಿಶ್ವಾತ್ಮನು ತಾನೇ ಎದುರಿಗೆ ಬಂದು, ಕಾಣಿಸಿಕೊಂಡು, "ಎಲೈ ರಾಜನೇ, ನನ್ನಿಂದ ವರವನ್ನು ಬೇಡು" ಎಂದು ಹೇಳಿದನು.

॥ ರಾಜೋವಾಚ ॥

ಪುತ್ರಂ ಮೇ ದೇಹಿ ದೇವೇಶ ವೇದಮಂತ್ರವಿಶಾರದಂ ।
ಯಾಜಕಂ ಯಜನಾಸಕ್ತಂ ಕೀರ್ತ್ಯಾ ಯುಕ್ತಂ ಚಿರಾಯುಷಂ ॥
ಅಸಂಖ್ಯಾತಗುಣಂ ಚೈವ ಬ್ರಹ್ಮಭೂತಮಕಲ್ಮಷಂ ॥ ೨೪ ॥

ಏವಮುಕ್ತ್ವಾ ತತೋ ರಾಜಾ ಪುನರ್ವಚನಮಬ್ರವೀತ್ ॥ ೨೫ ॥

ಮಮಾಪ್ಯೇತಚ್ಛುಭಂ ಸ್ಥಾನಂ ಪ್ರಯಚ್ಛ ಪರಮೇಶ್ವರ ।
ಯತ್ತನ್ಮುನಿಪದಂ ನಾಮ ಯತ್ರ ಗತ್ವಾ ನ ಶೋಚತಿ ॥ ೨೬ ॥

ಏವಮಸ್ತ್ವಿತಿ ತಂ ದೇವಃ ಪ್ರೋಕ್ತ್ವಾ ಚಾದರ್ಶನಂ ಗತಃ ।
ತಸ್ಯಾಪಿ ರಾಜ್ಞಃ ಪುತ್ರೋಽಭೂದ್ವತ್ಸಶ್ರೀರ್ನಾಮ ನಾಮತಃ ॥ ೨೭ ॥

ವೇದವೇದಾಂಗಸಂಪನ್ನೋ ಯಜ್ಞಯಾಜೀ ಬಹುಶ್ರುತಃ ।
ತಸ್ಯ ಕೀರ್ತಿರ್ಮಹಾರಾಜ ವಿಸ್ತೃತಾ ಧರಣೀತಲೇ ॥ ೨೮ ॥

---

೨೪. ರಾಜ—"ದೇವೇಶನೇ, ನನಗೆ ವೇದಮಂತ್ರ ವಿಶಾರದನೂ, ಯಜ್ಞ ಮಾಡಿಸುವವನೂ(ಋತ್ವಿಜನೂ)ಯಜ್ಞ ಮಾಡುವುದರಲ್ಲಿ ಆಸಕ್ತನೂ, ಕೀರ್ತಿವಂತನೂ, ಚಿರಾಯುಷ್ಮಂತನೂ, ಅಮಿತಗುಣನೂ, ದೋಷರಹಿತನೂ, ಬ್ರಹ್ಮಸ್ವರೂಪನೂ ಆದ ಪುತ್ರನನ್ನು ದಯೆಪಾಲಿಸು.

೨೫-೨೬. ಹೀಗೆ ಹೇಳಿ, ದೊರೆಯು ಮತ್ತೆ "ಪರಮೇಶ್ವರನೇ, ಯಾವುದು ಮುನಿಗಳ ಸ್ಥಾನವೋ, ಎಲ್ಲಿಗೆ ಹೋದರೆ ದುಃಖವಿಲ್ಲವೋ ಅಂತಹ ಶುಭಸ್ಥಾನವನ್ನು ನನಗೂ ಕರುಣಿಸು" ಎಂದು ಬೇಡಿದನು.

೨೭. ದೇವನು, ಹಾಗೆಯೇ ಆಗಲಿ ಎಂದು ಅವನಿಗೆ ಹೇಳಿ ಕಣ್ಮರೆಯಾದನು. ಆ ದೊರೆಗೆ ವತ್ಸಶ್ರೀ ಎಂಬ ಹೆಸರುಳ್ಳ ಮಗನುದಿಸಿದನು.

೨೮. ಆ ಮಗನು ವೇದವೇದಾಂಗ ಸಂಪನ್ನನೂ, ಯಜ್ಞಮಾಡುವವನೂ, ಬಹುಶಾಸ್ತ್ರಗಳನ್ನು ಅರಿತವನೂ, ಕೇಳಿದವನೂ ಆದನು. ಮಹಾರಾಜನೇ, ಅವನ ಕೀರ್ತಿಯು ಭೂಮಂಡಲದಲ್ಲೆಲ್ಲಾ ಹರಡಿತು.

ರಾಜಾಪಿ ತಂ ಸುತಂ ಲಬ್ಧ್ವಾ ವಿಷ್ಣುದತ್ತಂ ಪ್ರತಾಪಿನಂ ।
ಜಗಾಮ ತಪಸೇ ಯುಕ್ತಃ ಸರ್ವದ್ವಂದ್ವಸಹಃ ಪ್ರಭುಃ || ೨೯ ||

ಆರಾಧಯಾಮಾಸ ಹರಿಂ ನಿರಾಹಾರೋ ಜಿತೇಂದ್ರಿಯಃ ।
ಹಿಮವತ್ಪರ್ವತೇ ರಮ್ಯೇ ಸ್ತುತಿಂ ಚಾಪಿ ಸದಾಪಠತ್ || ೩೦ ||

॥ ಭದ್ರಾಶ್ವ ಉವಾಚ ॥

ಕೀದೃಶೀ ಸಾ ಸ್ತುತಿರ್ಬ್ರಹ್ಮನ್ ಯಾಂ ಚಕಾರ ಸ ಪಾರ್ಥಿವಃ ।
ಕಿಂ ಚ ತಸ್ಯಾಭವದ್ದೇವಂ ಸ್ತುವತಃ ಪುರುಷೋತ್ತಮಂ || ೩೧ ||

॥ ಅಗಸ್ತ್ಯ ಉವಾಚ ॥

ಹಿಮವಂತಂ ಸಮಾಶ್ರಿತ್ಯ ರಾಜಾ ತದ್ಗತಮಾನಸಃ ।
ಸ್ತುತಿಂ ಚಕಾರ ದೇವಸ್ಯ ವಿಷ್ಣೋರದ್ಭುತಕರ್ಮಣಃ || ೩೨ ||

೨೯-೩೦. ದೃಢವ್ರತರಾಜನೂ, ವಿಷ್ಣುವಿನ ಅನುಗ್ರಹದಿಂದ ಪ್ರತಾಪಶಾಲಿಯಾದ ಆ ಮಗನನ್ನು ಪಡೆದು, ಎಲ್ಲಾ ಸುಖದುಃಖಗಳನ್ನೂ ಸಹಿಸಬಲ್ಲವನಾಗಿ, ವಿರಕ್ತನಾಗಿ, ತಪಸ್ಸಿಗೆ ಮನಸ್ಸುಮಾಡಿ ಹೊರಟುಹೋಗಿ, ರಮ್ಯವಾದ ಹಿಮವತ್ಪರ್ವತದಲ್ಲಿ ಜಿತೇಂದ್ರಿಯನೂ, ನಿರಾಹಾರನೂ ಆಗಿ ಹರಿಯನ್ನು ಆರಾಧಿಸಿದನು. ಯಾವಾಗಲೂ ಹರಿಯ ಸ್ತೋತ್ರವನ್ನು ಹೇಳುತ್ತಿದ್ದನು.

೩೧. ಭದ್ರಾಶ್ವರಾಜ—ಬ್ರಹ್ಮನೇ, ಆ ದೃಢವ್ರತರಾಜನು ಮಾಡಿದ ಸ್ತೋತ್ರವಾವುದು ? ಪುರುಷೋತ್ತಮನಾದ ನಾರಾಯಣ ದೇವನನ್ನು ಸ್ತೋತ್ರ ಮಾಡಿದ ಆ ರಾಜನಿಗೇನಾಯಿತು ?

೩೨. ಅಗಸ್ತ್ಯಮುನಿ—ರಾಜನು ಹಿಮವತ್ಪರ್ವತಕ್ಕೆ ಹೋಗಿ ಸೇರಿ, ಅದ್ಭುತಕಾರ್ಯಗಳನ್ನು ಮಾಡುವ ದೇವನಾದ ವಿಷ್ಣುವಿನ ಸ್ತುತಿಯನ್ನು ಅವನಲ್ಲಿಯೇ ನೆಲಸಿದ ಮನವುಳ್ಳವನಾಗಿ ಹೇಳಿದನು.

॥ ರಾಜೋವಾಚ ॥

ಕ್ಷರಾಕ್ಷರಂ ಕ್ಷೀರಸಮುದ್ರಶಾಯಿನಂ
ಕ್ಷಿತೀಧರಂ ಮೂರ್ತಿಮತಾಂ ಪರಂ ಪದಂ ।
ಅತೀಂದ್ರಿಯಂ ವಿಶ್ವಭುಜಾಂ ಪುರಃ ಕೃತಂ
ನಿರಾಕೃತಿಂ ಸ್ತೌಮಿ ಜನಾರ್ದನಂ ಪ್ರಭುಂ ॥ ೩೩ ॥

ತ್ವಮಾದಿತಸ್ತ್ವಂ ಪರಮಾರ್ಥರೂಪೀ
ವಿಭುಃ ಪುರಾಣಃ ಪುರುಷೋತ್ತಮಶ್ಚ ।
ಅತೀಂದ್ರಿಯೋ ವೇದವಿದಾಂ ಪ್ರಧಾನಃ
ಪ್ರಪಾಹಿ ಮಾಂ ಶಂಖಗದಾಸ್ತ್ರಪಾಣೇ ॥ ೩೪ ॥

ಕೃತಂ ತ್ವಯಾ ದೇವ ಸುರಾಸುರಾಣಾಂ
ಸಂಕೀರ್ತ್ಯಮಾನೇನ ಅನಂತಮೂರ್ತೇ ।
ಸೃಷ್ಟ್ಯರ್ಥಮೇತತ್ತವ ದೇವ ವಿಷ್ಣೋ
ಸಂಚೇಷ್ಟಿತಂ ಕೂಟಗತಸ್ಯ ತತ್ಸ್ಯಾತ್ ॥ ೩೫ ॥

---

೩೩. ರಾಜನು ಹೇಳಿದ ಸ್ತೋತ್ರ—ನಶ್ವರವಾದ ವಿಶ್ವದಲ್ಲಿ ಶಾಶ್ವತನೂ, ಕ್ಷೀರಸಾಗರಶಯನನೂ, ಭೂದೇವಿಯನ್ನು ಧರಿಸಿದವನೂ, ದೇಹಿಗಳಿಗೆಲ್ಲಾ ಪರಮ* ಪದನೂ, ಇಂದ್ರಿಯಗಳಿಗಗೋಚರನೂ, ಪ್ರಪಂಚಪಾಲಕಾಗ್ರಗಣ್ಯನೂ, ನಿರಾಕಾರನೂ, ಜನಾರ್ದನನೂ, ಆದ ಪ್ರಭುವನ್ನು ಸ್ತುತಿಸುತ್ತೇನೆ.

೩೪. ಶಂಖಚಕ್ರಗದಾಪಾಣಿಯೇ, ನೀನು ಪ್ರಪಂಚಕ್ಕೆ ಮೂಲನಾದವನೂ, ಸತ್ಯಸ್ವರೂಪನೂ, +ವಿಭುವೂ, ಪ್ರಾಚೀನನೂ, ಪುರುಷೋತ್ತಮನೂ ಇಂದ್ರಿಯಾಗೋಚರನೂ, ವೇದವಿದರಲ್ಲಿ ಮುಖ್ಯನೂ ಆಗಿದ್ದೀಯೆ. ನನ್ನನ್ನು ಪರಿಪಾಲಿಸು.

೩೫. ಅನಂತಮೂರ್ತಿಯೇ, ವಿಷ್ಣುವೇ, ದೇವ, ಸುರಾಸುರರಿಂದ ಸ್ತುತ್ಯನಾದ ನೀನು ‡ಕೂಟಸ್ಥನಾಗಿದ್ದರೂ, ಸೃಷ್ಟಿಗಾಗಿ ಕಾರ್ಯಮಾಡುತ್ತೀಯೆ.

---

* ಪದ= ಸ್ಥಾನ, ಸಂರಕ್ಷಣೆ, ವಸ್ತು

\+ ವಿಭು= ಪ್ರಭು, ಸರ್ವಗತ, ಸಮಸ್ತಸ್ವರೂಪ, ಶಂಕರ, ಬ್ರಹ್ಮ.

‡ ಕೂಟಸ್ಥ= ಯಾವಾಗಲೂ ಒಂದೇ ರೀತಿಯಾಗಿರುವವನು.

ತಥಾಪಿ ಕೂರ್ಮತ್ವಮೃಗತ್ವಮುಚ್ಚೈಃ
ತ್ವಯಾ ಕೃತಂ ರೂಪಮನೇಕರೂಪ ।
ಸರ್ವಜ್ಞಭಾವಾದಸಕೃಚ್ಚ ಜನ್ಮ
ಸಂಕೀರ್ತ್ಯತೇ ತೇಽಚ್ಯುತ ನೈತದಸ್ತಿ ॥ ೩೬ ॥

ನೃಸಿಂಹ ವಾಮನ ನಮೋ ಜಮದಗ್ನಿನಾಮ
ದಶಾಸ್ಯಗೋತ್ರಾಂತಕ ವಾಸುದೇವ ।
ನಮೋಽಸ್ತು ತೇ ಬುದ್ಧ ಕಲ್ಕಿನ್ ವರೇಶ
ಶಂಭೋ ನಮಸ್ತೇ ವಿಬುಧಾರಿನಾಶನ ॥ ೩೭ ॥

ನಮೋಽಸ್ತು ನಾರಾಯಣ ಪದ್ಮನಾಭ
ನಮೋ ನಮಸ್ತೇ ಪುರುಷೋತ್ತಮಾಯ ।
ನಮಃ ನಮಸ್ತ್ವಾಮರಸಂಘಪೂಜ್ಯ
ನಮೋಽಸ್ತು ತೇ ಸರ್ವವಿದಾಂ ಪ್ರಧಾನ ॥ ೩೮ ॥

---

೩೬. ಅನೇಕರೂಪನೇ, ಅಚ್ಯುತನೇ, ಸರ್ವಜ್ಞನಾದ ನೀನು ಲೋಕ ರಕ್ಷಣೆಗಾಗಿ ಹಲವುಬಾರಿ ನಿಜವಾಗಿ ನಿನಗಿಲ್ಲದ ಕೂರ್ಮವರಾಹನೃಸಿಂಹಾದಿಯಾದ ಅದ್ಭುತರೂಪಗಳನ್ನು ಧರಿಸಿದೆ. ಆ ರೂಪಗಳೆಲ್ಲವೂ ಸ್ತುತಿಸಲ್ಪಡುತ್ತವೆ.

೩೭. ನರಸಿಂಹನೇ, ವಾಮನನೇ, ಪರಶುರಾಮನೇ, ನಿನಗೆ ನಮಸ್ಕಾರ. (ರಾವಣವಂಶಾಂತಕನಾದ) ಶ್ರೀರಾಮನೇ, ಶ್ರೀಕೃಷ್ಣ, ನಿನಗೆ ನಮಸ್ಕಾರ ಬುದ್ಧನೇ, ಕಲ್ಕಿಯೇ, ವರೇಶನೇ, ಶಂಭುವೇ, ದೇವವೈರಿನಾಶಕನೇ, ನಿನಗೆ ನಮಸ್ಕಾರ.

೩೮. ನಾರಾಯಣಾ, ಪದ್ಮನಾಭಾ, ನಿನಗೆ ನಮಸ್ಕಾರ. ಪುರುಷೋತ್ತಮನಿಗೆ ನಮಸ್ಕಾರ, ನಮಸ್ಕಾರ. ಸಮಸ್ತಾಮರಸಂಘ ಪೂಜ್ಯನೇ, ನಮಸ್ಕಾರ. ಸರ್ವಜ್ಞಾಗ್ರೇಸರನೇ, ನಿನಗೆ ನಮಸ್ಕಾರ.

ನಮಃ ಕರಾಲಾಸ್ಯ ನೃಸಿಂಹಮೂರ್ತೇ
ನಮೋ ವಿಶಾಲಾದ್ರಿಸಮಾನ ಕೂರ್ಮ |
ನಮಃ ಸಮುದ್ರಪ್ರತಿಮಾನ ಮತ್ಸ್ಯ
ನಮಾಮಿ ತ್ವಾಂ ಕ್ರೋಡರೂಪಿನ್ನನಂತ ॥ ೩೯ ॥

ಸೃಷ್ಟ್ಯರ್ಥಮೇತತ್ತವ ದೇವ ಚೇಷ್ಟಿತಂ
ನ ಮುಖ್ಯಪಕ್ಷೇ ತವ ಮೂರ್ತಿತಾ ವಿಭೋ |
ಅಜಾನತಾ ಧ್ಯಾನಮಿದಂ ಪ್ರಕಾಶಿತಂ
ನ ಲಕ್ಷ್ಯಸೇ ತ್ವಂ ಪುರುಷಃ ಪುರಾಣಃ ॥ ೪೦ ॥

ಆದ್ಯೋ ಮಖಸ್ತ್ವಂ ಸ್ವಯಮೇವ ವಿಷ್ಣೋ
ಮಖಾಂಗಭೂತೋಽಸಿ ಹವಿಸ್ತ್ವಮೇವ |
ಪಶುರ್ಭವಾನ್ ಋತ್ವಿಗಾಜ್ಯಂ ತ್ವಮೇವ
ತ್ವಾಂ ದೇವಸಂಘಾ ಮುನಯೋ ಯಜಂತಿ ॥ ೪೧ ॥

---

೩೯. ಭಯಂಕರಾನನೇ, ನರಸಿಂಹಮೂರ್ತೀ, ವಿಶಾಲಾದ್ರಿಸಮಾನನಾದ ಕೂರ್ಮಮೂರ್ತಿಯೇ ನಿನಗೆ ನಮಸ್ಕಾರ. ಸಮುದ್ರಸಮಾನನಾದ ಮತ್ಸ್ಯಾವತಾರನೇ, ನಮಸ್ಕಾರ, ಶ್ರೀವರಾಹರೂಪಿಯಾದ ಅನಂತನೇ, ನಿನ್ನನ್ನು ನಮಸ್ಕರಿಸುತ್ತೇನೆ.

೪೦. ದೇವನೇ, ನಿನ್ನ ಈ ಮತ್ಸ್ಯಕೂರ್ಮಾದ್ಯವತಾರಗಳೆಲ್ಲವೂ (ಲೋಕ) ಸೃಷ್ಟಿಗಾಗಿಯೇ ಹೊರತು ನಿಜವಾಗಿ ನೋಡಿದರೆ ನಿನಗೆ ಮೂರ್ತಿಯಿಲ್ಲ. ಅರಿಯದೆ ಹೀಗೆ ಧ್ಯಾನಮಾಡಿದೆನು. ಪುರಾಣ ಪುರುಷನಾದ ನೀನು ಕಾಣಿಸುವುದಿಲ್ಲ.

೪೧. ವಿಷ್ಣುವೇ, ಆದಿಯಜ್ಞವೂ ನೀನೇ, ಯಜ್ಞಾಂಗಭೂತವಾದ ಹವಿಸ್ಸೂ ನೀನೇ. ಪಶುವೂ ನೀನೇ. ಋತ್ವಿಕ್ಕೂ ಘೃತವೂ ನೀನೇ. ನಿನ್ನನ್ನೇ ದೇವತೆಗಳೂ, ಮುನಿಗಳೂ ಪೂಜಿಸುತ್ತಾರೆ.

ಚಲಾಚಲಂ ಜಗದೇತಚ್ಚ ಯಸ್ಮಿನ್
ಸುರಾದಿಕಾಲಾನಲಸಂಸ್ಥಮುತ್ತಮಂ ।
ನ ತ್ವಂ ವಿಭಕ್ತೋಽಸಿ ಜನಾರ್ದನೇಶ
ಪ್ರಯಚ್ಛ ಸಿದ್ಧಿಂ ಹೃದಯೇಪ್ಸಿತಾಂ ಮೇ ॥ ೪೨ ॥

ನಮಃ ಕಮಲಪತ್ರಾಕ್ಷ ಮೂರ್ತಾಮೂರ್ತ ನಮೋ ಹರೇ ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ಸಂಸಾರಾನ್ಮಾಂ ಸಮುದ್ಧರ ॥ ೪೩ ॥

ಏವಂ ಸ್ತುತಸ್ತತೋ ದೇವಃ ತೇನ ರಾಜ್ಞಾ ಮಹಾತ್ಮನಾ ।
ವಿಶಾಲಾಮ್ರತಲಸ್ಥೇನ ತುತೋಷ ಪರಮೇಶ್ವರಃ ॥ ೪೪ ॥

ಕುಬ್ಜರೂಪಸ್ತತೋ ಭೂತ್ವಾ ಆಜಗಾಮ ಹರಿಃ ಸ್ವಯಂ ।
ತಸ್ಮಿನ್ನಾಗತಮಾತ್ರೇ ತು ಸೋಽಪ್ಯಾಮ್ರಃ ಕುಬ್ಜಕೋಽಭವತ್ ॥ ೪೫ ॥

---

೪೨. ಜನಾರ್ದನನೇ, ಈಶನೇ, ದೇವತೆಗಳೇ ಮೊದಲಾದವರೂ, (ಕಾಲವೂ, ಅಗ್ನಿಯೂ) ಕಾಲಾಗ್ನಿಯೇ ಮೊದಲಾದುವೂ ಇರುವ ಚರಾಚರಾತ್ಮಕವಾದ ಈ ಜಗತ್ತು, ಯಾರಲ್ಲಿದೆಯೋ ಆ ನೀನು ಅವಿಭಕ್ತನಾಗಿ ಒಬ್ಬನೇ ಆಗಿದ್ದೀಯೆ. ನನ್ನ ಮನೋಭೀಷ್ಟಸಿದ್ಧಿಯನ್ನು ಉಂಟುಮಾಡು.

೪೩. ಕಮಲದಳಾಕ್ಷನೇ, ನಿನಗೆ ನಮಸ್ಕಾರ. ಮೂರ್ತಾಮೂರ್ತನೇ, ಹರಿಯೇ ನಿನಗೆ ಶರಣಾಗತನಾಗಿದ್ದೇನೆ. ಸಂಸಾರದಿಂದ ನನ್ನನ್ನುದ್ಧರಿಸು.

೪೪. ದೊಡ್ಡದಾದ ಮಾವಿನ ಮರದಡಿಯಲ್ಲಿದ್ದ ಮಹಾತ್ಮನಾದ ಆ ದೃಢವ್ರತನಿಂದ ಹೀಗೆ ಸ್ತುತನಾದ ಪರಮೇಶ್ವರದೇವನು ಸಂತುಷ್ಟನಾದನು.

೪೫, ಸಂತುಷ್ಟನಾದ ಹರಿಯು ಬಳಿಕ, ತಾನೇ ಕುಳ್ಳನಂತಾಗಿ ದೃಢವ್ರತನ ಹತ್ತಿರಕ್ಕೆ ಬಂದನು. ಅವನು ಬಂದಕೂಡಲೆ ಆ ಮಾವಿನ ಮರವೂ ಕುಳ್ಳಾಯಿತು.

ತದ್ದೃಷ್ಟ್ವಾ ಮಹದಾಶ್ಚರ್ಯಂ ಸ ರಾಜಾ ಶಂಸಿತವ್ರತಃ ।
ವಿಶಾಲಸ್ಯ ಕಥಂ ಕೌಬ್ಜ್ಯಮಿತಿ ಚಿಂತಾಪರೋಽಭವತ್ ॥ ೪೬ ॥

ತಸ್ಯ ಚಿಂತಯತೋ ಬುದ್ಧಿರ್ಜಾತೇಯಂ ಬ್ರಹ್ಮಸನ್ನಿಧೌ ।
ಅನೇನಾಗತಮಾತ್ರೇಣ ಕೃತಮೇತನ್ನ ಸಂಶಯಃ ॥ ೪೭ ॥

ಏತಸ್ಮಾದೇವ ಭವಿತಾ ಭಗವಾನ್ಪುರುಷೋತ್ತಮಃ ।
ಏವಮುಕ್ತ್ವಾ ನಮಶ್ಚಕ್ರೇ ತಂ ವಿಪ್ರಂ ಸ ನೃಪೋತ್ತಮಃ ॥ ೪೮ ॥

ಅನುಗ್ರಹಾಯ ಭಗವನ್ನೂನಂ ತ್ವಂ ಪುರುಷೋತ್ತಮಃ ।
ಆಗತೋಽಸಿ ಸ್ವರೂಪಂ ಮೇ ದರ್ಶಯಸ್ವಾಧುನಾ ಹರೇ ॥ ೪೯ ॥

ಏವಮುಕ್ತಸ್ತದಾದೇವಃ ಶಂಖಚಕ್ರಗದಾಧರಃ ।
ಬಭೌ ತತ್ಪುರತಸ್ಸೌಮ್ಯೋ ವಾಕ್ಯಂ ಚೇದಮುವಾಚ ಹ ॥ ೫೦ ॥

---

೪೬. ಶ್ಲಾಘ್ಯವಾದ ವ್ರತವನ್ನು ಮಾಡುವ ಆ ದೊರೆಯು, ಈ ಅತ್ಯಾಶ್ಚರ್ಯವನ್ನು ನೋಡಿ, 'ಉನ್ನತವಾಗಿದ್ದ ಈ ಮರವು ಹೇಗೆ ಕುಳ್ಳಾಯಿತು'? ಎಂದು ಚಿಂತಿಸುವನಾದನು.

೪೭–೪೮. ಬ್ರಹ್ಮಸನ್ನಿಧಿಯಲ್ಲಿ ಹಾಗೆ ಆಲೋಚಿಸುತ್ತಿದ್ದ ಆ ರಾಜನ ಬುದ್ಧಿಗೆ ಹೀಗೆ ಹೊಳೆಯಿತು—"ಇವನು ಬಂದೊಡನೆಯೇ ಇದು ಹೀಗಾಗಿದೆ. ಇದರಲ್ಲಿ ಸಂಶಯವಿಲ್ಲ. ಆದುದರಿಂದ ಈತನು ಪುರುಷೋತ್ತಮನಾದ ಭಗವಂತನಾಗಿರುವನು." ಎಂದು ಹೇಳಿಕೊಂಡು, ಆ ರಾಜೋತ್ತಮನು ಆ (ಕುಳ್ಳನಾದ) ಬ್ರಾಹ್ಮಣನಿಗೆ ನಮಸ್ಕಾರಮಾಡಿದನು.

೪೯. "ಭಗವಂತನೇ, ಪುರುಷೋತ್ತಮನಾದ ನೀನು ನಿಜವಾಗಿಯೂ ನನ್ನನ್ನು ಅನುಗ್ರಹಿಸುವುದಕ್ಕಾಗಿಯೇ ಬಂದಿದ್ದೀಯೆ. ಹರಿಯೇ, ಈಗ (ನಿನ್ನ) ನಿಜರೂಪವನ್ನು ತೋರಿಸು" ಎಂದು ಬೇಡಿದನು.

೫೦–೫೧. ಹೀಗೆ ರಾಜನಿಂದ ಪ್ರಾರ್ಥಿತನಾದ ದೇವನು ಶಂಖಚಕ್ರಗದಾಧರನಾಗಿ ಅವನೆದುರಿಗೆ ಪ್ರಕಾಶಿಸಿದನು. ಸೌಮ್ಯನಾಗಿ "ರಾಜೇಂದ್ರನೇ, ನಿನ್ನ

ವರಂ ವೃಣೀಷ್ವ ರಾಜೇಂದ್ರ ಯತ್ತೇ ಮನಸಿ ವರ್ತತೇ ।
ಮಯಿ ಪ್ರಸನ್ನೇ ತ್ರೈಲೋಕ್ಯಂ ತಿಲಮಾತ್ರಮಿತಿ ಪ್ರಭೋ ॥ ೫೧ ॥

ಏವಮುಕ್ತಸ್ತತೋ ರಾಜಾ ಹರ್ಷೋತ್ಫುಲ್ಲಿತಲೋಚನಃ ।
ಮೋಕ್ಷಂ ಪ್ರಯಚ್ಛ ದೇವೇಶೇತ್ಯುಕ್ತ್ವಾ ನೋವಾಚ ಕಿಂಚನ ॥ ೫೨ ॥

ಏವಮುಕ್ತಸ್ಸ ಭಗವಾನ್ ಪುನರ್ವಾಕ್ಯಮುವಾಚ ಹ ॥ ೫೩ ॥

ಮಯ್ಯಾಗತೇ ವಿಶಾಲೋಯಮಾಮ್ರಃ ಕುಬ್ಜತ್ವಮಾಗತಃ ।
ಯಸ್ಮಾತ್ತಸ್ಮಾತ್ತೀರ್ಥಮಿದಂ ಕುಬ್ಜಕಾಮ್ರಂ ಭವಿಷ್ಯತಿ ॥ ೫೪ ॥

ತಿರ್ಯಗ್ಯೋನ್ಯಾದಯೋಽಪ್ಯಸ್ಮಿನ್ ಬ್ರಾಹ್ಮಣಾ ವಾ ಯದಿ ಸ್ವಕಂ ।
ಕಲೇವರಂ ತ್ಯಜಿಷ್ಯಂತಿ ತೇಷಾಂ ಪಂಚಶತಾನಿ ಚ ॥
ವಿಮಾನಾನಿ ಭವಿಷ್ಯಂತಿ ಯೋಗಿನೋ ಮುಕ್ತಿರೇವ ಚ ॥ ೫೫ ॥

ಏವಮುಕ್ತ್ವಾ ನೃಪಂ ದೇವಃ ಶಂಖಾಗ್ರೇಣ ಜನಾರ್ದನಃ ।
ಸ್ಪೃಶ್ಯ ಸಂಸ್ಪೃಷ್ಟಮಾತ್ರೋಽಸೌ ಪರಂ ನಿರ್ವಾಣಮಾಪ್ತವಾನ್ ॥ ೫೬ ॥

ಮನಸ್ಸಿನಲ್ಲಿರುವ ವರವನ್ನು ಬೇಡು. ಪ್ರಭುವೇ, ನಾನು ಒಲಿದರೆ ವರಕೊಡಲು ನನಗೆ ಮೂರು ಲೋಕವೂ ಎಳ್ಳಿನಷ್ಟು" ಎಂದು ಮಾತನಾಡಿದನು.

೫೨. ದೇವನು ಹೀಗೆ ಹೇಳಲು, ದೊರೆಯು, ಸಂತಸದಿಂದರಳಿದ ಕಣ್ಣುಗಳುಳ್ಳವನಾಗಿ "ದೇವೇಶನೇ, ಮೋಕ್ಷವನ್ನು ಕೊಡು" ಎಂದು ಹೇಳಿ, ಬೇರೇನನ್ನೂ ಹೇಳದೆ ಇದ್ದನು.

೫೩. ಹೀಗೆ ಬೇಡಿಸಿಕೊಂಡ ಆ ಭಗವಂತನು ತಿರುಗಿ, ಹೀಗೆ ಹೇಳಿದನು.

೫೪. "ನಾನು ಬರಲು ಎತ್ತರವಾಗಿದ್ದ ಈ ಮಾವಿನ ಮರವು ಕುಳ್ಳಾಯಿತು. ಆದುದರಿಂದ ಈ ತೀರ್ಥವು ಕುಬ್ಜಕಾಮ್ರತೀರ್ಥವೆಂಬ ಹೆಸರುಳ್ಳದಾಗುವುದು.

೫೫. ಬ್ರಾಹ್ಮಣರಾಗಲಿ, ತಿರ್ಯಗ್ಜಂತುಗಳೇ ಆಗಲಿ, ಇಲ್ಲಿ ಯಾರು ದೇಹವನ್ನು ತ್ಯಜಿಸುವರೋ ಅವರಿಗೆ ಐನೂರು ವಿಮಾನಗಳು ಲಭಿಸುವುವು, ಯೋಗಿಯಾದವನಿಗೆ ಮುಕ್ತಿಯೇ ಲಭಿಸುವುದು."

೫೬. ಜನಾರ್ದನದೇವನು, ಹೀಗೆ ಹೇಳಿ, ಬಳಿಕ ದೊರೆಯನ್ನು ಶಂಖದ ತುದಿಯಿಂದ ಮುಟ್ಟಲಾಗಿ, ಒಡನೆಯೇ ಆತನು ಪರಮನಿರ್ವಾಣವನ್ನು ಪಡೆದನು.

ತಸ್ಮಾತ್ತ್ವಮಪಿ ರಾಜೇಂದ್ರ ತಂ ದೇವಂ ಶರಣಂ ವ್ರಜ ।
ಯೇನ ಭೂಯಃ ಪುನಃ ಶೋಚ್ಯಪದವೀಂ ನ ಪ್ರಯಾಸ್ಯಸಿ ॥ ೫೭ ॥

ಯ ಇದಂ ಶೃಣುಯಾನ್ನಿತ್ಯಂ ಪ್ರಾತರುತ್ಥಾಯ ಮಾನವಃ ।
ಪಠೇದ್ವ್ಯಶ್ಚರಿತಂ ತಾಭ್ಯಾಂ ಮೋಕ್ಷಧರ್ಮಾರ್ಥದೋ ಭವೇತ್ ॥ ೫೮ ॥

ಶುಭವ್ರತಮಿದಂ ಪುಣ್ಯಂ ಯಶ್ಚ ಕುರ್ಯಾಜ್ಜನೇಶ್ವರ ।
ಸ ಸರ್ವಸಂಪದಂ ಚೇಹ ಭುಕ್ತ್ವಾಂತೇ ತಲ್ಲಯಂ ವ್ರಜೇತ್ ॥ ೫೯ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಶುಭವ್ರತಂ ನಾಮ
ಪಂಚಪಂಚಾಶೋಽಧ್ಯಾಯಃ

---

೫೭. ಭದ್ರಾಶ್ವರಾಜೇಂದ್ರನೇ, ಅದುದರಿಂದ ನೀನೂ, ಆ ದೇವನನ್ನೇ ಮರೆಹೊಗು, ಅದರಿಂದ ನೀನು ತಿರುಗಿ ಎಂದೆಂದಿಗೂ ಶೋಚ್ಯಸ್ಥಿತಿಯನ್ನು ಪಡೆಯದೆ ಇರುವೆ.

೫೮. ಯಾರು ದಿನವೂ, ಬೆಳಗ್ಗೆ ಎದ್ದು ಈ ಚರಿತ್ರೆಯನ್ನು ಹೇಳುವರೋ ಅಥವಾ ಕೇಳುವರೋ, ಅವರಿಗೆ ಪರಮಾತ್ಮನು ಧರ್ಮಾರ್ಥಮೋಕ್ಷಗಳನ್ನು ಅನುಗ್ರಹಿಸುವನು.

೫೯. ದೊರೆಯೇ, ಪುಣ್ಯಪ್ರದವಾದ ಈ ಶುಭವ್ರತವನ್ನು ಮಾಡುವವನು ಈ ಲೋಕದಲ್ಲಿ ಸರ್ವಸಂಪತ್ತನ್ನೂ ಅನುಭವಿಸಿ, ಕಡೆಯಲ್ಲಿ ಪರಮಾತ್ಮನಲ್ಲಿ ಐಕ್ಯನಾಗುವನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಋಷಿಯು ಭದ್ರಾಶ್ವರಾಜನಿಗೆ ಶುಭವ್ರತದ ಕ್ರಮವನ್ನು ತಿಳಿಸಿ, ಆ ವ್ರತವನ್ನು ಮಾಡಿ ಸುಪುತ್ರನನ್ನೂ, ಮುಕ್ತಿಯನ್ನೂ ಪಡೆದ ದೃಢವ್ರತನೆಂಬ ರಾಜನ ಕಥೆಯನ್ನೂ, ಆತನು ಮಾಡಿದ ಸ್ತುತಿಯಿಂದ, ಕುಬ್ಜ (ಕುಳ್ಳ) ರೂಪದಿಂದ ಪ್ರತ್ಯಕ್ಷನಾದ ವಿಷ್ಣುವು ಆತನು ತಪಸ್ಸನ್ನು ಮಾಡುತ್ತಿದ್ದ ಸ್ಥಳಕ್ಕೆ ಕುಬ್ಜಾಮ್ರಕಕ್ಷೇತ್ರವೆಂಬ ಹೆಸರನ್ನೂ, ಅಲ್ಲಿನ ತೀರ್ಥಕ್ಕೆ ಕುಬ್ಜಾಮ್ರಕತೀರ್ಥವೆಂಬ ಹೆಸರನ್ನೂ ಅನುಗ್ರಹಿಸಿದ ವಿಚಾರವನ್ನೂ ಹೇಳುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತೈದನೆಯ ಅಧ್ಯಾಯ.

॥ ಶ್ರೀಃ ॥

–x–

ಷಟ್ಪಂಚಾಶೋಽಧ್ಯಾಯಃ

ಅಥ ಧನ್ಯವ್ರತಂ

॥ ಅಗಸ್ತ್ಯ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ಧನ್ಯವ್ರತಮನುತ್ತಮಂ ।
ಯೇನ ಸದ್ಯೋ ಭವೇದ್ಧನ್ಯಸ್ತ್ವಧನೋಽಪಿ ಹಿ ಯೋ ಭವೇತ್ ॥ ೧ ॥

ಮಾರ್ಗಶೀರ್ಷೇ ಸಿತೇ ಪಕ್ಷೇ ಪ್ರತಿಪದ್ಯಾ ತಿಥಿರ್ಭವೇತ್ ।
ತಸ್ಯಾಂ ನಕ್ತಂ ಪ್ರಕುರ್ವೀತ ವಿಷ್ಣುಮಗ್ನಿಂ ಪ್ರಪೂಜಯೇತ್ ॥ ೨ ॥

ವೈಶ್ವಾನರಾಯ ಪಾದೌ ತು ಅಗ್ನಯೇತ್ಯುದರಂ ತಥಾ ।
ಹವಿರ್ಭುಜಾಯ ಚ ಉರೋ ದ್ರವಿಣೋದೇತಿ ವೈ ಭುಜೌ ॥
ಸಂವರ್ತಾಯೇತಿ ಚ ಶಿರೋ ಜ್ವಲನಾಯೇತಿ ಸರ್ವತಃ ॥ ೩ ॥

ಐವತ್ತಾರನೆಯ ಅಧ್ಯಾಯ

ಧನ್ಯವ್ರತ.

೧. ಅಗಸ್ತ್ಯಮುನಿ—ದರಿದ್ರನಾಗಿರುವವನು ಕೂಡ ಯಾವುದನ್ನು ಮಾಡುವುದರಿಂದ ಸದ್ಯದಲ್ಲೇ ಪುಣ್ಯವಂತ(ಧನ್ಯ)ನಾಗುವನೋ ಅಂತಹ ಅತ್ಯುತ್ತಮವಾದ ಧನ್ಯವ್ರತವನ್ನು ಇನ್ನು ಹೇಳುತ್ತೇನೆ.

೨. ಮಾರ್ಗಶಿರಮಾಸದ ಪ್ರತಿಪತ್ತಿಥಿಯಲ್ಲಿ ರಾತ್ರಿ ವಿಷ್ಣುವನ್ನು ಅಗ್ನಿಯೆಂದು ಭಾವಿಸಿ ಪೂಜಿಸಬೇಕು.

೩. ವೈಶ್ವಾನರಾಯನಮಃ ಎಂದು ವಿಷ್ಣುವಿನ ಪಾದಗಳನ್ನೂ, ಅಗ್ನಯೇ ನಮಃ ಎಂದು ಉದರವನ್ನೂ, ಹವಿರ್ಭುಜಾಯನಮಃ, ಎಂದು ಹೃದಯವನ್ನೂ ದ್ರವಿಣೋದಾಯನಮಃ ಎಂದು ತೋಳುಗಳನ್ನೂ, ಸಂವರ್ತಾಯನಮಃ ಎಂದು ಶಿರಸ್ಸನ್ನೂ, ಜ್ವಲನಾಯನಮಃ ಎಂದು ಸರ್ವಾವಯವವನ್ನೂ ಅರ್ಚಿಸಬೇಕು.

ಅಭ್ಯರ್ಚ್ಯೈವಂ ವಿಧಾನೇನ ದೇವದೇವಂ ಜನಾರ್ದನಂ ।
ತಸ್ಯೈವ ಪುರತಃ ಕುಂಡಂ ಕಾರಯಿತ್ವಾ ವಿಧಾನತಃ ।
ಹೋಮಂ ತತ್ರ ಪ್ರಕುರ್ವೀತ ಏಭಿರ್ಮಂತ್ರೈರ್ವಿಚಕ್ಷಣಃ ॥ ೪ ॥

ತತಃ ಸಯಾವಕಂ ಚಾನ್ನಂ ಭುಂಜೀಯಾದ್ಘೃತಸಂಯುತಂ ॥ ೫ ॥

ಕೃಷ್ಣಪಕ್ಷೇಷ್ವೇವಮೇವ ಚಾತುರ್ಮಾಸ್ಯಂ ತು ಯಾವತಾ ॥ ೬ ॥

ಚೈತ್ರಾದಿಷು ಚ ಭುಂಜೀತ ಪಾಯಸಂ ಸಘೃತಂ ಬುಧಃ ।
ಶ್ರಾವಣಾದಿಷು ಸಕ್ತೂಂಶ್ಚ ತತಶ್ಚೈತತ್ಸಮಾಪ್ಯತೇ ॥ ೭ ॥

ಸಮಾಪ್ತೇ ತು ವ್ರತೇ ವಹ್ನಿಂ ಕಾಂಚನಂ ಕಾರಯೇದ್ಬುಧಃ ॥ ೮ ॥

---

೪. ಹೀಗೆ ದೇವದೇವನಾದ ವಿಷ್ಣುವನ್ನು ವಿಧ್ಯುಕ್ತವಾಗಿ ಅರ್ಚಿಸಿ, ಅವನ ಮುಂದುಗಡೆಯಲ್ಲಿ ವಿಧಿಪೂರ್ವಕವಾಗಿ ಅಗ್ನಿಕುಂಡವನ್ನು ಮಾಡಿಸಿ ಮೇಲಿನ ಮಂತ್ರಗಳಿಂದ ಹೋಮವನ್ನು ಮಾಡಬೇಕು.

೫. ಬಳಿಕ ಅಲಸಂದೆಯೊಡಗೂಡಿದ ಅನ್ನವನ್ನು, ತುಪ್ಪವನ್ನು ಸೇರಿಸಿ ಊಟಮಾಡಬೇಕು.

೬. ಅದು ಮೊದಲುಗೊಂಡು ನಾಲ್ಕುತಿಂಗಳಕಾಲ ಶುಕ್ಲಪಾಡ್ಯಮಿಯಲ್ಲಲ್ಲದೆ ಕೃಷ್ಣಪಕ್ಷದ ಪಾಡ್ಯಮಿಯದಿನವೂ ಹೀಗೆಯೇ ಮಾಬೇಕು.

೭. ಚೈತ್ರಾದಿಯಾದ ನಾಲ್ಕುತಿಂಗಳೂ ಹೀಗೆಯೇ ವ್ರತಮಾಡಿ, (ಅರಿತವನು) ತುಪ್ಪವನ್ನು ಹಾಕಿದ ಪಾಯಸವನ್ನು ಸೇವಿಸಬೇಕು. ಶ್ರಾವಣಾದಿಯಾದ ನಾಲ್ಕುತಿಂಗಳು ವ್ರತದಿನದಲ್ಲಿ ಗಂಜಿಯನ್ನು ಸೇವಿಸಬೇಕು, ಬಳಿಕ ವ್ರತವು ಮುಗಿಯುವುದು.

೮. ವ್ರತವು ಮುಗಿದ ಬಳಿಕ, ಚಿನ್ನದಿಂದ ಅಗ್ನಿದೇವನ ಮೂರ್ತಿಯನ್ನು ಮಾಡಿಸಬೇಕು.

ರಕ್ತವಸ್ತ್ರಯುಗಚ್ಛನ್ನಂ ರಕ್ತಪುಷ್ಪಾನುಲೇಪನಂ ।
ಕುಂಕುಮೇನ ತಥಾಲಿಪ್ಯ ಬ್ರಾಹ್ಮಣಂ ಸತ್ಯಮೇವ ಚ ।
ಸರ್ವಾವಯವಸಂಪೂರ್ಣಂ ಬ್ರಾಹ್ಮಣಂ ಪ್ರಿಯದರ್ಶನಂ ॥ ೯ ॥

ಪೂಜಯಿತ್ವಾ ವಿಧಾನೇನ ರಕ್ತವಸ್ತ್ರಯುಗೇನ ಚ ।
ದದ್ಯಾತ್ಪಶ್ಚಾಚ್ಚ ತಂ ತಸ್ಯ ಮಂತ್ರೇಣಾನೇನ ಬುದ್ಧಿಮಾನ್ ॥ ೧೦ ॥

ಧನ್ಯೋಽಸ್ಮಿ ಧನ್ಯಕರ್ಮಾಸ್ಮಿ ಧನ್ಯಚೇಷ್ಟೋಽಸ್ಮಿ ಧನ್ಯವಾನ್ ।
ಧನ್ಯೇನಾನೇನ ಚೀರ್ಣೇನ ವ್ರತೇನ ಸ್ಯಾಂ ಸದಾ ಸುಖೀ ॥ ೧೧ ॥

ಏವಮುಚ್ಚಾರ್ಯ ತಂ ವಿಪ್ರೇ ನ್ಯಸ್ಯ ಕೋಶಂ ಮಹಾತ್ಮನೇ ।
ಸದ್ಯೋ ಧನ್ಯತ್ವಮಾಪ್ನೋತಿ ಯೋಽಪಿಸ್ಯಾದ್ಭೋಗವರ್ಜಿತಃ ॥ ೧೨ ॥

ಇಹ ಜನ್ಮನಿ ಸೌಭಾಗ್ಯಂ ಧನಂ ಧಾನ್ಯಂ ಚ ಪುಷ್ಕಲಂ ।
ಅನೇನ ಕೃತಮಾತ್ರೇಣ ಜಾಯತೇ ನಾತ್ರ ಸಂಶಯಃ ॥ ೧೩ ॥

೯-೧೨. ಆ ಮೂರ್ತಿಯನ್ನು ಕೆಂಪಾದ ವಸ್ತ್ರಗಳೆರಡರಿಂದಲೂ, ಕೆಂಪು ಹೂಗಂಧಕುಂಕುಮದಿಂದಲೂ ಅಲಂಕರಿಸಬೇಕು. ಅಂಗಹೀನನಲ್ಲದ, ನೋಡುವುದಕ್ಕೆ ಚೆನ್ನಾಗಿರುವ ಬ್ರಾಹ್ಮಣನನ್ನು ವಿಧ್ಯುಕ್ತವಾಗಿ ಪೂಜಿಸಿ, ಕೆಂಪಾದ ವಸ್ತ್ರಗಳೆರಡನ್ನು ಕೊಟ್ಟು, ಬಳಿಕ ಅಗ್ನಿದೇವಮೂರ್ತಿಯನ್ನು "ಧನ್ಯನಾಗಿದ್ದೇನೆ. ಧನ್ಯಕರ್ಮನಾಗಿದ್ದೇನೆ. ಧನ್ಯಚೇಷ್ಟನಾಗಿದ್ದೇನೆ ನಾನು ಮಾಡಿದ ಈ ಧನ್ಯವ್ರತದಿಂದ ಯಾವಾಗಲೂ ಸುಖಿಯಾಗುವೆನು" ಎಂಬ ಅರ್ಥದ ಮೇಲಿನ (೧೧ನೆಯ ಶ್ಲೋಕ) ಮಂತ್ರವನ್ನು ಹೇಳಿ, ಮಹಾತ್ಮನಾದ ಆ ಬ್ರಾಹ್ಮಣನ ಕೈಗೊಪ್ಪಿಸಿ ಕೋಶವನ್ನೂ ಕೊಡಬೇಕು. ಹೀಗೆ ಮಾಡುವುದರಿಂದ ಅದುವರೆಗೆ ಸುಖವೇ ಇಲ್ಲದವನು ಕೂಡ ಒಡನೆಯೇ ಧನ್ಯನಾಗುವನು.

೧೩. ಈ ಜನ್ಮದಲ್ಲಿ ಪುಷ್ಕಳವಾಗಿ ಸೌಭಾಗ್ಯವೂ, ಧನವೂ, ಧಾನ್ಯವೂ ಲಭಿಸುವುದು. ಸಂದೇಹವಿಲ್ಲ.

ಪ್ರಾಗ್ಜನ್ಮಜನಿತಂ ಯಾವದಗ್ನಿರ್ದಹತಿ ಪಾತಕಂ ।
ದಗ್ಧೇ ಪಾಪೇ ವಿಮುಕ್ತಾತ್ಮಾ ಇಹ ಜನ್ಮನ್ಯಸೌ ಭವೇತ್ ॥ ೧೪ ॥

ಯೋಪೀದಂ ಶೃಣುಯಾನ್ನಿತ್ಯಂ ಯಶ್ಚ ಭಕ್ತ್ಯಾ ಪಠೇದ್ದ್ವಿಜಃ ।
ಉಭೌ ತಾವಿಹ ಲೋಕೇ ತು ಧನ್ಯೌ ಸದ್ಯೋ ಭವಿಷ್ಯತಃ ॥ ೧೫ ॥

ಶ್ರೂಯತೇ ಚ ವ್ರತಂ ಚೈತಚ್ಚೀರ್ಣಮಾಸೀನ್ಮಹಾತ್ಮನಾ ।
ಧನದೇನ ಪುರಾ ಕಲ್ಪೇ ಶೂದ್ರಯೋನೌ ಸ್ಥಿತೇನ ಹಿ ॥ ೧೬ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಧನ್ಯವ್ರತಂ ನಾಮ ಷಟ್ಪಂಚಾಶೋಽಧ್ಯಾಯಃ

---

೧೪. ಹಿಂದಿನ ಜನ್ಮದಲ್ಲಿ ಆಗಿರುವ ಪಾಪವೆಲ್ಲವನ್ನೂ ಅಗ್ನಿಯು ಸುಟ್ಟು ಬಿಡುವನು. ಈ ಜನ್ಮದಲ್ಲಿ ಪಾಪವು ದಗ್ಧವಾಗಲು ವಿಮುಕ್ತಾತ್ಮನೂ ಆಗುವನು.

೧೫. ಯಾರು ನಿತ್ಯವೂ ಭಕ್ತಿಯಿಂದ ಇದನ್ನು ಕೇಳುವರೋ ಅಥವಾ ಹೇಳುವರೋ ಅವರು ಈ ಲೋಕದಲ್ಲಿ ಸದ್ಯದಲ್ಲೇ ಧನ್ಯರಾಗುವರು.

೧೬. ಹಿಂದಿನ ಕಲ್ಪದಲ್ಲಿ ಶೂದ್ರಜನ್ಮದಲ್ಲಿ ಉದಿಸಿದ್ದ ಮಹಾತ್ಮನಾದ ಕುಬೇರನು ಈ ಧನ್ಯವ್ರತವನ್ನು ಮಾಡಿದನೆಂದು ಕೇಳಿದ್ದೇವೆ.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ಧನ್ಯವ್ರತದ ಕ್ರಮವನ್ನೂ ಅದರ ಫಲವನ್ನೂ ತಿಳಿಸಿ, ಕುಬೇರನೂ ಹಿಂದಿನ ಕಲ್ಪದಲ್ಲಿ ಆ ವ್ರತವನ್ನು ಮಾಡಿದುದರಿಂದಲೇ ಧನದಪದವಿಯನ್ನು ಪಡೆದನೆಂದು ಹೇಳಿರುವನು. ಇಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಐವತ್ತಾರನೆಯ ಅಧ್ಯಾಯ.

|| ಶ್ರೀಃ ||

-x-

ಸಪ್ತಪಂಚಾಶೋಽಧ್ಯಾಯಃ

ಅಥ ಕಾಂತಿವ್ರತಮ್

|| ಅಗಸ್ತ್ಯ ಉವಾಚ ||

ಅತಃ ಪರಂ ಪ್ರವಕ್ಷ್ಯಾಮಿ ಕಾಂತಿವ್ರತಮನುತ್ತಮಂ ।
ಯತ್ಕೃತ್ವಾ ತು ಪುರಾ ಸೋಮಃ ಕಾಂತಿಮಾನಭವತ್ಪುನಃ || ೧ ||

ಯಕ್ಷ್ಮಣಾ ದಕ್ಷಶಾಪೇನ ಪುರಾ ಕ್ರಾಂತೋ ನಿಶಾಚರಃ ।
ಏತತ್ಕೃತ್ವಾ ವ್ರತಂ ಸದ್ಯಃ ಕಾಂತಿಮಾನಭವತ್ಕಿಲ || ೨ ||

ದ್ವಿತೀಯಾಯಾಂ ತು ರಾಜೇಂದ್ರ ಕಾರ್ತಿಕಸ್ಯ ಸಿತಂ ದಿನಂ ।
ನಕ್ತಂ ಕುರ್ವೀತ ಯತ್ನೇನ ತ್ವರ್ಚಯನ್ಬಲಕೇಶವೌ || ೩ ||

ಐವತ್ತೇಳನೆಯ ಅಧ್ಯಾಯ

ಕಾಂತಿವ್ರತ.

೧. ಇನ್ನು ಮುಂದೆ ಅತ್ಯುತ್ತಮವಾದ ಕಾಂತಿವ್ರತವನ್ನು ಹೇಳುವೆನು. ಅದನ್ನು ಮಾಡಿ ಪೂರ್ವದಲ್ಲಿ ಚಂದ್ರನು ಮತ್ತೆ ಕಾಂತಿವಂತನಾದನು.

೨. ಹಿಂದೆ ದಕ್ಷಶಾಪದಿಂದ ಕ್ಷಯಕ್ಕೆ ಗುರಿಯಾದ ಚಂದ್ರನು ಈ ವ್ರತವನ್ನು ಮಾಡಿ ಒಡನೆಯೇ ತಿರುಗಿ ಕಾಂತಿವಂತನಾದನಲ್ಲವೆ!

೩. ರಾಜೇಂದ್ರನೇ, ಕಾರ್ತಿಕಮಾಸದ ಶುಕ್ಲಪಕ್ಷದ ಬಿದಿಗೆಯದಿನ ರಾತ್ರಿ ಬಲರಾಮಕೃಷ್ಣರನ್ನು ಭಕ್ತಿಪೂರ್ವಕವಾಗಿ ಅರ್ಚಿಸುತ್ತ ಈ ವ್ರತವನ್ನು ಮಾಡಬೇಕು.

ಬಲದೇವಾಯ ಪಾದೌ ತು ಕೇಶವಾಯ ಶಿರೋಽರ್ಚಯೇತ್ ।
ಏವಮಭ್ಯರ್ಚ್ಯ ಮೇಧಾವೀ ವೈಷ್ಣವಂ ರೂಪಮುತ್ತಮಂ ॥ ೪ ॥

ಪರಂ ತು ರೂಪಂ ಸೋಮಾಖ್ಯಂ ದ್ವಿಕಲಂ ತದ್ದಿನೇ ಹಿ ಯತ್ ।
ತಸ್ಯ ದೇವಸ್ಯ ಚಾರ್ಘ್ಯಂ ತು ದದ್ಯಾನ್ಮಂತ್ರೇಣ ಸುವ್ರತ ॥ ೫ ॥

ನಮೋಽಸ್ತ್ವಮೃತರೂಪಾಯ ಸ ವೈ ವಿಧಿವರಾಯ ಚ ।
ಯಜ್ಞಲೋಕಾಧಿಪತಯೇ ಸೋಮಾಯ ಪರಮಾತ್ಮನೇ ॥ ೬ ॥

ರಾತ್ರೌ ಸವಿಪ್ರೋ ಭುಂಜೀತ ಯವಾನ್ನಂ ಸಘೃತಂ ನರಃ ।
ಫಾಲ್ಗುನಾದಿಚತುಷ್ಕಂ ತು ಪಾಯಸಂ ಭಕ್ಷಯೇಚ್ಛುಚಿಃ ॥ ೭ ॥

ಶಾಲಿಹೋಮಂ ಪ್ರಕುರ್ವೀತ ಕಾರ್ತಿಕೇ ತು ಯವೈಸ್ತಥಾ ।
ಆಷಾಢಾದಿಚತುಷ್ಕೇಷು ತಿಲಹೋಮಂ ತು ಕಾರಯೇತ್ ॥ ೮ ॥

ತದ್ವತ್ತಿಲಾನ್ನಂ ಭುಂಜೀತ ಏಷ ಏವ ವಿಧಿಃ ಸ್ಮೃತಃ ॥ ೯ ॥

---

೪. ಬುದ್ಧಿವಂತನಾದವನು, ಉತ್ತಮವಾದ ವಿಷ್ಣುವಿನ ಮೂರ್ತಿಯನ್ನು ಬಲದೇವಾಯ ನಮಃ ಎಂದು ಪಾದಗಳಲ್ಲೂ, ಕೇಶವಾಯ ನಮಃ ಎಂದು ಶಿರಸ್ಸಿನಲ್ಲೂ ಅರ್ಚಿಸಬೇಕು.

೫-೬. ಆದರೆ ಆ ದಿನವಿರುವ ಎರಡು ಕಲೆಗಳಿಂದ ಕೂಡಿದ ಸೋಮ (ಚಂದ್ರ) ದೇವನಿಗೆ, 'ಅಮೃತರೂಪನೂ, ವಿಧಿವರನೂ, ಯಜ್ಞಲೋಕಾಧಿಪತಿಯೂ, ಸೋಮನೂ ಆದ ಪರಮಾತ್ಮನಿಗೆ ನಮಸ್ಕಾರ' ಎಂಬ ಅರ್ಥವುಳ್ಳ ಮೇಲಿನ (೬ ನೆಯಶ್ಲೋಕ) ಮಂತ್ರದಿಂದ ಅರ್ಘ್ಯವನ್ನು ಕೊಡಬೇಕು.

೭. ಬಳಿಕ ಆ ರಾತ್ರಿಯಲ್ಲಿ ವ್ರತಿಯು ಬ್ರಾಹ್ಮಣರೊಡನೆ ಯವೆಯ ಅನ್ನವನ್ನು ತುಪ್ಪವನ್ನು ಹಾಕಿಕೊಂಡು ಊಟಮಾಡಬೇಕು. ಫಾಲ್ಗುನಾದಿಯಾದ ನಾಲ್ಕುತಿಂಗಳು ಶುಚಿಯಾಗಿ ಪಾಯಸವನ್ನು ಸೇವಿಸಬೇಕು.

೮. ಶಾಲಿಹೋಮವನ್ನು ಮಾಡಬೇಕು. ಕಾರ್ತಿಕಮಾಸದಲ್ಲಿ ಯವೆಯಿಂದ ಹೋಮಮಾಡಬೇಕು. ಆಷಾಢಾದಿಯಾದ ನಾಲ್ಕುತಿಂಗಳು ತಿಲಹೋಮವನ್ನು ಮಾಡಬೇಕು.

೯. ಅಲ್ಲದೆ ವ್ರತದಿನಗಳಲ್ಲಿ ಎಳ್ಳನ್ನವನ್ನು ಊಟಮಾಡಬೇಕು. ಇದೇ ನಿಯಮ.

ತತಃ ಸಂವತ್ಸರೇ ಪೂರ್ಣೇ ಕಾಂಚನಂ ಶಶಿನಂ ವ್ರತೀ |
ಸಿತವಸ್ತ್ರಯುಗಚ್ಛನ್ನಂ ಸಿತಪುಷ್ಪಾನುಲೇಪನಂ ||
ದದ್ಯಾದ್ದ್ವಿಜಾಯ ಸಂಪೂಜ್ಯ ಕಾಂಚನಂ ಶಶಿನಂ ತಥಾ || ೧೦ ||

ಅಥ ಸಂವತ್ಸರೇ ಪೂರ್ಣೇ ಕೃತ್ವಾ ಸೋಮಂ ತು ರಾಜತಂ |
ಸಿತವಸ್ತ್ರಯುಗಚ್ಛನ್ನಂ ಸಿತಪುಷ್ಪಾನುಲೇಪನಂ ||
ಏವಮೇವ ದ್ವಿಜಂ ಪೂಜ್ಯ ತತಸ್ತಂ ಪ್ರತಿಪಾದಯೇತ್ || ೧೧ ||

ಕಾಂತಿಮಾನಪಿ ಲೋಕೇಽಸ್ಮಿನ್ ಸರ್ವಜ್ಞಃ ಪ್ರಿಯದರ್ಶನಃ |
ತ್ವತ್ಪ್ರಸಾದಾತ್ಸೋಮರೂಪಿನ್ನಾರಾಯಣ ನಮೋಽಸ್ತು ತೇ || ೧೨ ||

ಅನೇನ ಕಿಲ ಮಂತ್ರೇಣ ದದ್ಯಾತ್ ವಿಪ್ರಾಯ ವಾಗ್ಯತಃ || ೧೩ ||

ದತ್ತಮಾತ್ರೇ ತತಸ್ತಸ್ಮಿನ್ ಕಾಂತಿಮಾನ್ ಜಾಯತೇ ನರಃ || ೧೪ ||

---

೧೦. ಆ ವರ್ಷ ಕಳೆದ ಬಳಿಕ ವ್ರತಿಯು, ಚಿನ್ನದಿಂದ ಚಂದ್ರನನ್ನು ಮಾಡಿಸಿ ಬಿಳಿಬಟ್ಟೆಗಳೆರಡರಿಂದಲೂ, ಬಿಳಿಯ ಹೂಗಂಧಗಳಿಂದಲೂ ಅಲಂಕರಿಸಿ ಪೂಜಿಸಿ, ಬ್ರಾಹ್ಮಣನನ್ನು ಕರೆದು ಪೂಜಿಸಿ, ಆ ಚಂದ್ರನನ್ನು ಅರ್ಪಿಸಬೇಕು.

೧೧. ಬಳಿಕ ಆ ಸವಂತ್ಸರವೂ ಪೂರ್ಣವಾದ ಮೇಲೆ ಬೆಳ್ಳಿಯಿಂದ ಚಂದ್ರನನ್ನು ಮಾಡಿಸಿ, ಬಿಳಿಯ ಬಟ್ಟೆಗಳೆರಡರಿಂದಲೂ, ಬಿಳಿಯ ಹೂಗಂಧಗಳಿಂದಲೂ, ಅಲಂಕರಿಸಿ, ಬ್ರಾಹ್ಮಣನಿಗೆ ಪೂಜೆಮಾಡಿ, ಒಪ್ಪಿಸಬೇಕು.

೧೨-೧೩. 'ಸೋಮರೂಪಿಯಾದ ನಾರಾಯಣನೇ, ನಿನ್ನ ಅನುಗ್ರಹದಿಂದ ಈ ಲೋಕದಲ್ಲಿ ನಾನು ಕಾಂತಿವಂತನೂ, ಸರ್ವಜ್ಞನೂ, ಪ್ರಿಯದರ್ಶನನೂ, ಆಗಬೇಕು. ನಿನಗೆ ನಮಸ್ಕಾರ' ಎಂಬ ಅರ್ಥದ ಮೇಲಿನ (೧೨ ನೆಯ ಶ್ಲೋಕ) ಮಂತ್ರದಿಂದ ಚಂದ್ರಮೂರ್ತಿಯನ್ನು ಬ್ರಾಹ್ಮಣನಿಗೆ ಅರ್ಪಿಸಬೇಕು.

೧೪. ಚಂದ್ರಮೂರ್ತಿಯನ್ನು ದಾನಮಾಡಿದ ಬಳಿಕ ವ್ರತಿಯು ಕಾಂತಿವಂತನಾಗುವನು.

ಆತ್ರೇಯೇಣಾಪಿ ಸೋಮೇನ ಕೃತಮೇತತ್ಪುರಾ ನೃಪ ।
ತಸ್ಯ ವ್ರತಾಂತೇ ಸಂತುಷ್ಟಃ ಸ್ವಯಮೇವ ಜನಾರ್ದನಃ ॥
ಯಕ್ಷ್ಮಾಣಮಪನೀಯಾಶು ಅಮೃತಾಖ್ಯಾಂ ಕಲಾಂ ದದೌ ॥ ೧೫ ॥

ತಾಂ ಕಲಾಂ ಸೋಮರಾಜಾಸೌ ತಪಸಾ ಲಬ್ಧವಾನ್ನಿಶಿ ।
ಸೋಮತ್ವಂ ಚಾಗಮತ್ತೋಸೋ ದ್ವಿಜರಾಜತ್ವಮೇವ ಚ ॥ ೧೬ ॥

ದ್ವಿತೀಯಾಮಶ್ವಿನೌ ಸೋಮಭುಜೌ ಕೀರ್ತ್ಯೌ ತು ತದ್ದಿನೇ ।
ತೌ ಶೇಷವಿಷ್ಣೂ ವಿಖ್ಯಾತೌ ಶುಕ್ಲಪಕ್ಷೌ ನ ಸಂಶಯಃ ॥ ೧೭ ॥

ನ ವಿಷ್ಣೋರ್ವ್ಯತಿರಿಕ್ತಃ ಸ್ಯಾದ್ದೈವತಂ ನೃಪಸತ್ತಮ ।
ನಾಮಭೇದೇನ ಸರ್ವತ್ರ ಸಂಸ್ಥಿತಃ ಪುರುಷೋತ್ತಮಃ ॥ ೧೮ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಕಾಂತಿವ್ರತಂ ನಾಮ
ಸಪ್ತಪಂಚಾಶೋಽಧ್ಯಾಯಃ

---

೧೫. ಅತ್ರಿಋಷಿಯ ಪುತ್ರನಾದ ಸೋಮನೂ (ಚಂದ್ರನೂ) ಹಿಂದೆ ಈ ವ್ರತವನ್ನು ಮಾಡಿದನು. ವ್ರತದ ಕಡೆಯಲ್ಲಿ ಸಂತುಷ್ಟನಾಗಿ ಅವನಿಗೊಲಿದು, ಸಾಕ್ಷಾದ್ವಿಷ್ಣುವೇ ಅವನ ಕ್ಷಯವನ್ನು ಹೋಗಲಾಡಿಸಿ, ಬೇಗನೆ ಅಮೃತವೆಂಬ ಹೆಸರಿನ ಕಲೆಗಳನ್ನು ಕೊಟ್ಟನು.

೧೬. ಈ ಚಂದ್ರರಾಜನು, ರಾತ್ರಿಯಲ್ಲಿರುವ ಅದೇ ಕಲೆಯನ್ನೂ, ಸೋಮತ್ವವನ್ನೂ, ದ್ವಿಜರಾಜತ್ವ (ಬ್ರಾಹ್ಮಣಾಧಿಪತ್ಯ) ವನ್ನೂ ತಪಸ್ಸಿನಿಂದ ಪಡೆದನು.

೧೭. ಶುಕ್ಲದ್ವಿತೀಯೆಯದಿನ ಸೋಮಪಾಯಿಗಳಾದ ಅಶ್ವಿನೀದೇವತೆಗಳನ್ನೂ ಸ್ತುತಿಸಬೇಕು. ಅವರು ಶೇಷವಿಷ್ಣುಗಳೆಂದು ಪ್ರಸಿದ್ಧರಾಗಿರುವರೆಂಬುದರಲ್ಲಿ ಸಂಶಯವಿಲ್ಲ.

೧೮. ನೃಪೋತ್ತಮೋತ್ತಮನೇ, ವಿಷ್ಣುವಿಗಿಂತ ಬೇರೆಯಾದ ದೇವರಿಲ್ಲ. ಬೇರೆಬೇರೆ ಹೆಸರಿನಿಂದ ಪುರುಷೋತ್ತಮನಾದ ವಿಷ್ಣುವೇ ಎಲ್ಲೆಲ್ಲೂ ಇರುವನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ಕಾಂತಿವ್ರತವೆಂಬ ಚಂದ್ರರೂಪನಾದ ವಿಷ್ಣುವಿನ ಪೂಜೆಯ ಕ್ರಮವನ್ನೂ ಅದರಿಂದಾಗುವ ಫಲವನ್ನೂ ತಿಳಿಸಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತೇಳನೆಯ ಅಧ್ಯಾಯ.

|| ಶ್ರೀಃ ||

—X—

ಅಷ್ಟಪಂಚಾಶೋಽಧ್ಯಾಯಃ

ಅಥ ಸೌಭಾಗ್ಯವ್ರತಂ

|| ಅಗಸ್ತ್ಯ ಉವಾಚ ||

ಅತಃ ಪರಂ ಮಹಾರಾಜ ಸೌಭಾಗ್ಯಕರಣಂ ವ್ರತಂ ।
ಶೃಣು ಯೇನಾಶು ಸೌಭಾಗ್ಯಂ ಸ್ತ್ರೀಪುಂಸೋರುಪಜಾಯತೇ || ೧ ||

ಫಾಲ್ಗುನಸ್ಯ ತು ಮಾಸಸ್ಯ ತೃತೀಯಾ ಶುಕ್ಲಪಕ್ಷಗಾ ।
ಉಪಾಸಿತವ್ಯಾ ನಕ್ತೇನ ಶುಚಿನಾ ಸತ್ಯವಾದಿನಾ || ೨ ||

ಸಶ್ರೀಕಂ ಚ ಹರಿಂ ಪೂಜ್ಯ ರುದ್ರಂ ವಾ ಚೋಮಯಾ ಸಹ || ೩ ||

ಐವತ್ತೆಂಟನೆಯ ಅಧ್ಯಾಯ

ಸೌಭಾಗ್ಯವ್ರತ

೧. ಅಗಸ್ತ್ಯಮುನಿ—ಮಹಾರಾಜನೇ, ಇನ್ನು ಸ್ತ್ರೀಯರಿಗೂ, ಪುರುಷರಿಗೂ ಸೊಬಗನ್ನುಂಟುಮಾಡುವ ಸೌಭಾಗ್ಯವ್ರತವನ್ನು ಹೇಳುತ್ತೇನೆ ಕೇಳು.

೨. ಶುಚಿಯೂ, ಸತ್ಯವಾದಿಯೂ ಆದ ವ್ರತಿಯು ಫಾಲ್ಗುನಮಾಸದ ಶುಕ್ಲಪಕ್ಷದ ತದಿಗೆಯದಿನ ರಾತ್ರಿಯವರೆಗೂ ಉಪವಾಸ ಮಾಡಬೇಕು.

೩. ಲಕ್ಷ್ಮೀಸಮೇತನಾದ ಹರಿಯನ್ನಾಗಲಿ, ಪಾರ್ವತೀಸಹಿತನಾದ ರುದ್ರನನ್ನಾಗಲಿ ಪೂಜಿಸಬೇಕು.

ಯಾ ಶ್ರೀಃ ಸಾ ಗಿರಿಜಾ ಪ್ರೋಕ್ತಾ ಯೋ ಹರಿಃ ಸ ತ್ರಿಲೋಚನಃ ।
ಏವಂ ಸರ್ವೇಷು ಶಾಸ್ತ್ರೇಷು ಪುರಾಣೇಷು ಚ ಗದ್ಯತೇ ॥ ೪ ॥

ಏತಸ್ಮಾದನ್ಯಥಾ ಯಸ್ತು ಬ್ರೂತೇ ಶಾಸ್ತ್ರಂ ಪೃಥಕ್ತಯಾ ।
ರುದ್ರೋ ಜನಾನಾಂ ಮರ್ತ್ಯಾನಾಂ ಕಾವ್ಯಂ ಶಾಸ್ತ್ರಂ ನ ತದ್ಭವೇತ್ ॥
ವಿಷ್ಣುಂ ರುದ್ರಕೃತಂ ಬ್ರೂಯಾಚ್ಛ್ರೀಗೌರೀತಿ ನಿಗದ್ಯತೇ ॥ ೫ ॥

ಏತಯೋರಂತರಂ ಯಚ್ಚ ಸೋಽಧಮೋತ್ಯುಚ್ಯತೇ ಜನೈಃ ।
ತಂ ನಾಸ್ತಿಕಂ ವಿಜಾನೀಯಾತ್ಸರ್ವಧರ್ಮಬಹಿಷ್ಕೃತಂ ॥ ೬ ॥

ಏವಂ ಜ್ಞಾತ್ವಾ ಸುಲಕ್ಷ್ಮೀಕಂ ಹರಿಂ ಸಂಪೂಜ್ಯ ಯತ್ನತಃ ।
ಮಂತ್ರೇಣಾನೇನ ರಾಜೇಂದ್ರ ತತಸ್ತಂ ಪರಮೇಶ್ವರಂ ॥ ೭ ॥

ಗಂಭೀರಾಯೇತಿ ಪಾದೌ ತು ಸುಭಗಾಯೇತಿ ವೈ ಕಟಿಂ ।
ಉದರಂ ದೇವದೇವಾಯ ತ್ರಿನೇತ್ರಾಯೇತಿ ವೈ ಮುಖಂ ॥ ೮ ॥

---

೪. ಯಾರು ಶ್ರೀ (ಲಕ್ಷ್ಮಿ) ಯೆನಿಸಿಕೊಳ್ಳುವಳೋ ಅವಳೇ ಪಾರ್ವತಿ. ಯಾರು ಹರಿಯೋ ಅವನೇ ರುದ್ರನು (ತ್ರಿನೇತ್ರನು) ಎಂದು ಸರ್ವಶಾಸ್ತ್ರಗಳಲ್ಲೂ, ಪುರಾಣಗಳಲ್ಲಿಯೂ ಹೇಳಿದೆ.

೫. ಇದಕ್ಕೆ ವಿರೋಧವಾಗಿ ಹೇಳುವ ಜನರಿಗೆ ರುದ್ರನ ರೂಪವಾದ ಕಾವ್ಯಶಾಸ್ತ್ರಗಳಿಲ್ಲವಾಗುವುವು. ವಿಷ್ಣುವೇ ರುದ್ರನಾಗಿರುವನೆಂದೂ, ಶ್ರೀಯೇ ಗೌರಿಯೆಂದೂ ಹೇಳಬೇಕು.

೬. ಹರಿಹರರಿಗೂ, ಶ್ರೀಗೌರಿಯರಿಗೂ ಭೇದವನ್ನು ಹೇಳುವವನು ಅಧಮನೆನಿಸಿಕೊಳ್ಳುವನು. ಅವನನ್ನು ಸರ್ವಧರ್ಮಬಾಹಿರನಾದ ನಾಸ್ತಿಕ ನನ್ನಾಗಿ ತಿಳಿಯಬೇಕು.

೭-೯. ರಾಜೇಂದ್ರನೇ, ಹರಿಹರರು ಒಂದೇ ಎಂಬುದನ್ನು ಅರಿತು, ಲಕ್ಷ್ಮೀ ಸಹಿತನಾದ ಹರಿಯನ್ನು ಭಕ್ತಿಯತ್ನಗಳಿಂದ ಪೂಜಿಸಬೇಕು. ಆ ಪರಮೇಶ್ವರ ನನ್ನು ಮುಂದಿನ ಮಂತ್ರಗಳಿಂದ ಎಂದರೆ ಗಂಭೀರಾಯನಮಃ ಎಂದು ಪಾದ ಗಳಿಗೂ, ಸುಭಗಾಯನಮಃ ಎಂದು ನಡುವಿಗೂ, ದೇವದೇವಾಯನಮಃ ಎಂದು

ಶಿರಶ್ಚ ವಾಚಸ್ಪತಯೇ ರುದ್ರಾಯೇತಿ ಚ ಸರ್ವತಃ ॥ ೯ ॥

ಏವಮಭ್ಯರ್ಚ್ಯ ಮೇಧಾವೀ ವಿಷ್ಣುಂ ಲಕ್ಷ್ಮ್ಯಾ ಸಮನ್ವಿತಂ ।
ಹರಂ ಚ ಗೌರೀಸಂಯುಕ್ತಂ ಗಂಧಪುಷ್ಪಾದಿಭಿಃ ಕ್ರಮಾತ್ ॥ ೧೦ ॥

ತತಸ್ತಸ್ಯಾಗ್ರತೋ ಹೋಮಂ ಕಾರಯೇನ್ಮಧುಸರ್ಪಿಷಾ ।
ತಿಲೈಃ ಸಹ ಮಹಾರಾಜ ಸೌಭಾಗ್ಯಪತಯೇ ಪರಂ ॥ ೧೧ ॥

ತತಸ್ತ್ವಕ್ಷಾರವಿರಸಂ ನಿಸ್ನೇಹಂ ಧರಣೀತಲೇ ।
ಗೋಧೂಮಾನ್ನಂ ತು ಭುಂಜೀತ ಕೃಷ್ಣೇಪ್ಯೇವಂ ವಿಧಿಃ ಸ್ಮೃತಃ ॥ ೧೨ ॥

ಆಷಾಢಾದಿದ್ವಿತೀಯಾ ತು ಪಾರಣಂ ತತ್ರ ಕಲ್ಪಯೇತ್ ।
ಯವಾನ್ನೇನ ತತಃ ಪಶ್ಚಾತ್ಕಾರ್ತಿಕಾದಿಷು ಪಾರ್ಥಿವ ॥
ಶ್ಯಾಮಾಕಂ ತತ್ರ ಭುಂಜೀತ ತ್ರೀನ್ಮಾಸಾನ್ನಿಯತಶ್ಶುಚಿಃ ॥ ೧೩ ॥

ಉದರಕ್ಕೂ, ತ್ರಿನೇತ್ರಾಯನಮಃ ಎಂದು ಮುಖಕ್ಕೂ, ವಾಚಸ್ಪತಯೇನಮಃ ಎಂದು ಶಿರಸ್ಸಿಗೂ, ರುದ್ರಾಯನಮಃ ಎಂದು ದೇಹದ ಎಲ್ಲಾ ಭಾಗಕ್ಕೂ ಅರ್ಚನೆಯನ್ನು ಮಾಡಿ, ಆರಾಧಿಸಬೇಕು.

೧೦-೧೧. ಬುದ್ಧಿವಂತನಾದವನು, ಲಕ್ಷ್ಮೀಸಮೇತನಾದ ವಿಷ್ಣುವನ್ನೂ, ಗೌರೀಸಮೇತನಾದ ಹರನನ್ನೂ, ಗಂಧಪುಷ್ಪಾದಿಗಳಿಂದ ಕ್ರಮವಾಗಿ ಪೂಜಿಸಿ, ಎದಿರುಗಡೆಯಲ್ಲಿ ಸೌಭಾಗ್ಯಪತಿಗೆ ಜೇನುತುಪ್ಪದಿಂದಲೂ, ತುಪ್ಪದಿಂದಲೂ ಎಳ್ಳಿನೊಡನೆ ಹೆಚ್ಚಾಗಿ ಹೋಮವನ್ನು ಮಾಡಬೇಕು.

೧೨. ಬಳಿಕ ಕಾರವೂ, ತುಪ್ಪ, ಎಣ್ಣೆ ಮೊದಲಾದ ಜಿಡ್ಡಿನ ಪದಾರ್ಥವೂ ಇಲ್ಲದ ಗೋದುವೆಯ ಅನ್ನವನ್ನು ನೆಲದಮೇಲೆ ಭುಂಜಿಸಬೇಕು. ಕೃಷ್ಣಪಕ್ಷದ ತದಿಗೆಯಲ್ಲಿಯೂ, ಇದೇ ನಿಯಮವನ್ನು ಅನುಸರಿಸಬೇಕು.

೧೩. ಆಷಾಢಾದಿಯಾದ ಎರಡನೆಯ ಭಾಗದ ವ್ರತದಿನಗಳಲ್ಲಿ ಪಾರಣೆಯನ್ನು ಯವೆಯ ಅನ್ನದಿಂದ ಮಾಡಬೇಕು. ಆ ಮೇಲೆ ಕಾರ್ತಿಕಾದಿಯಾದ ಮೂರು ತಿಂಗಳು ನಿಯಮದಿಂದ ಶುಚಿಯಾಗಿ ಸಾವೆಯ ಅನ್ನದಿಂದ ಪಾರಣೆಯನ್ನು ಮಾಡಬೇಕು.

ತತೋ ಮಾಘಸಿತೇ ಪಕ್ಷೇ ತೃತೀಯಾಯಾಂವಾ ನರಾಧಿಪ ।
ಸೌವರ್ಣಂ ಕಾರಯೇದ್ಗೌರೀಂ ರುದ್ರಂ ಚೈಕತ್ರ ಬುದ್ಧಿಮಾನ್ ॥ ೧೪ ॥

ಸಲಕ್ಷ್ಮೀಕಂ ಹರಿಂ ವಾಪಿ ಯಥಾಶಕ್ತಿ ಪ್ರಸನ್ನಧೀಃ ।
ತತಸ್ತಾನ್ಬ್ರಾಹ್ಮಣೇ ದದ್ಯಾತ್ಪಾತ್ರಭೂತೇ ವಿಚಕ್ಷಣೇ ॥ ೧೫ ॥

ಅನ್ನೇನ ಹೀನೇ ವೇದಾನಾಂ ಪಾರಗೇ ಸಾಧುವರ್ತಿನಿ ।
ಸದಾಚಾರೇಥವಾ ದದ್ಯಾದ್ವಿಷ್ಣುಭಕ್ತೇ ವಿಶೇಷತಃ ॥ ೧೬ ॥

ಷಡ್ಭಿಃ ಪಾತ್ರೈರುಪೇತಂ ತು ಬ್ರಾಹ್ಮಣಾಯ ನಿವೇದಯೇತ್ ।
ಏಕಂ ಮಧುಮಯಂ ಪಾತ್ರಂ ದ್ವಿತೀಯಂ ಘೃತಪೂರಿತಂ ॥ ೧೭ ॥

ತೃತೀಯಂ ತಿಲತೈಲಸ್ಯ ಚತುರ್ಥಂ ಗುಡಸಂಯುತಂ ।
ಪಂಚಮಂ ಲವಣೈಃ ಪೂರ್ಣಂ ಷಷ್ಠಂ ಗೋಕ್ಷೀರಸಂಯುತಂ ॥ ೧೮ ॥

೧೪–೧೫. ರಾಜನೇ, ಬಳಿಕ ಮಾಘಮಾಸದ ಶುಕ್ಲಪಕ್ಷದ ತದಿಗೆಯ ದಿನ (ಬುದ್ಧಿವಂತನಾದ ವ್ರತಿಯು) ಸುವರ್ಣದಿಂದ ಪಾರ್ವತೀಪರಮೇಶ್ವರವಿಗ್ರಹವನ್ನಾಗಲಿ, ಲಕ್ಷ್ಮೀಸಹಿತನಾದ ಹರಿಯ ವಿಗ್ರಹವನ್ನಾಗಲಿ ತನ್ನ ಅನುಕೂಲಕ್ಕೆ ತಕ್ಕಂತೆ ಒಳ್ಳೆಯ ಮನಸ್ಸಿನಿಂದ ಮಾಡಿಸಿರುವುದನ್ನು ವಿದ್ವಾಂಸನಾದ ಸತ್ಪಾತ್ರದಲ್ಲಿ ಅರ್ಪಿಸಬೇಕು.

೧೬-೧೮. ಅನ್ನಕ್ಕೆ ಗತಿಯಿಲ್ಲದವನೂ, ವೇದಪಾರಗನೂ, ಸಾಧುವರ್ತನೆಯುಳ್ಳವನೂ, ಸದಾಚಾರನೂ ಆದ ಬ್ರಾಹ್ಮಣನಿಗಾಗಲಿ, ವಿಷ್ಣುಭಕ್ತಿನಿರತನಾದ ಬ್ರಾಹ್ಮಣನಿಗೇ ಆಗಲಿ, ಜೇನುತುಪ್ಪದಿಂದಲೂ, ತುಪ್ಪದಿಂದಲೂ, ಎಳ್ಳೆಣ್ಣೆಯಿಂದಲೂ, ಬೆಲ್ಲದಿಂದಲೂ, ಉಪ್ಪಿನಿಂದಲೂ, ಹಸುವಿನ ಹಾಲಿನಿಂದಲೂ ತುಂಬಿದ ಒಂದೊಂದು ಪಾತ್ರೆಯನ್ನು ಎಂದರೆ ಆರು ಪಾತ್ರೆಗಳನ್ನು ಒಪ್ಪಿಸಬೇಕು

ಏತಾನಿ ದತ್ವಾ ಪಾತ್ರಾಣಿ ಸಪ್ತ ಜನ್ಮಾಂತರೇ ಭವೇತ್ ।
ಸುಭಗೋ ದರ್ಶನೀಯಶ್ಚ ನಾರೀ ವಾ ಪುರುಷೋಽಪಿ ವಾ ॥ ೧೯ ॥

ಇತಿ ಶ್ರೀ ವರಾಹಪುರಾಣೇಽಗಸ್ತ್ಯಗೀತಾಸು ಸೌಭಾಗ್ಯವ್ರತಂ ನಾಮಾಷ್ಟಪಂಚಾಶೋಽಧ್ಯಾಯಃ

---

೧೯. ಹೀಗೆ ಇವುಗಳನ್ನು ದಾನಮಾಡುವ ಸ್ತ್ರೀಯರಾಗಲಿ, ಪುರುಷರಾಗಲಿ ಬೇರೆ ಏಳು ಜನ್ಮಗಳಲ್ಲಿಯೂ, ಸೊಬಗುಳ್ಳವರೂ, ದರ್ಶನೀಯರೂ ಆಗುವರು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿ ಭದ್ರಾಶ್ವರಾಜನಿಗೆ ವ್ರತಗಳ ವಿಚಾರವನ್ನು ಹೇಳುತ್ತಾ, ಸೊಬಗನ್ನು ಬಯಸುವವರು ಸೌಭಾಗ್ಯವ್ರತವನ್ನು ಮಾಡಬೇಕೆಂದು ಅದರ ಕ್ರಮವನ್ನು ವಿವರಿಸಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತೆಂಟನೆಯ ಅಧ್ಯಾಯ.

|| ಶ್ರೀಃ ||

–x–

ಊನಷಷ್ಟಿತಮೋಧ್ಯಾಯಃ

ಅಥ ಅವಿಘ್ನವ್ರತಂ

|| ಅಗಸ್ತ್ಯ ಉವಾಚ ||

ಅಥ ವಿಘ್ನಹರಂ ರಾಜನ್ಕಥಯಾಮಿ ಶೃಣುಷ್ವ ಮೇ ।
ಸಮ್ಯಕ್ಕೃತೇನ ಯೇನಾಶು ನ ವಿಘ್ನೈಃ ಪರಿಭೂಯತೇ || ೧ ||

ಚತುರ್ಥ್ಯಾಂ ಫಾಲ್ಗುನೇ ಮಾಸಿ ಗೃಹೀತವ್ಯಂ ವ್ರತಂತ್ವಿದಂ ।
ನಕ್ತಾಹಾರೇಣ ರಾಜೇಂದ್ರ ತಿಲಾನ್ನಂ ಪಾರಣಂ ಸ್ಮೃತಂ || ೨ ||

ತದೇವಾಗ್ನೌ ತು ಹೋತವ್ಯಂ ಬ್ರಾಹ್ಮಣಾಯ ಚ ತದ್ಭವೇತ್ || ೩ ||

ಐವತ್ತೊಂಭತ್ತನೆಯ ಅಧ್ಯಾಯ

ಅವಿಘ್ನವ್ರತ

೧. ಅಗಸ್ತ್ಯಮುನಿ—ದೊರೆಯೇ, ಯಾವುದನ್ನು ಚೆನ್ನಾಗಿ ಮಾಡಿದರೆ ವಿಘ್ನಗಳು ಬೇಗನೆ ಪರಿಹಾರವಾಗುವುವೋ ಅಥವಾ ವಿಘ್ನಗಳು ಬರುವುದೇ ಇಲ್ಲವೋ ಅಂತಹ ವಿಘ್ನಹರವ್ರತವನ್ನು ನಾನು ಹೇಳುತ್ತೇನೆ, ಕೇಳು.

೨. ಫಾಲ್ಗುನಮಾಸದ ಚೌತಿಯಲ್ಲಿ ಈ ವ್ರತವನ್ನು ಹಿಡಿಯಬೇಕು. ರಾಜೇಂದ್ರನೇ, ರಾತ್ರಿಯಲ್ಲಿ ಎಳ್ಳನ್ನದ ಪಾರಣೆಯು ಈ ವ್ರತಕ್ಕೆ ಹೇಳಿದುದು.

೩. ಅದೇ ಎಳ್ಳನ್ನವನ್ನೇ ಹೋಮಮಾಡಬೇಕು. ಬ್ರಾಹ್ಮಣನಿಗೂ ಅದೇ ಆಗಬೇಕು.

ಚಾತುರ್ಮಾಸ್ಯಂ ವ್ರತಂ ಚೈತತ್ಕೃತ್ವಾ ವೈ ಪಂಚಮೇ ತಥಾ ।
ವಿಪ್ರಾಯ ದದ್ಯಾತ್ಸೌವರ್ಣಂ ಗಜವಕ್ತ್ರಂ ಸುಪೂಜಿತಂ ॥
ಪಾಯಸೈಃ ಪಂಚಭಿಃ ಪಾತ್ರೈರುಪೇತಂ ತು ತಿಲೈಸ್ತಥಾ ॥ ೪ ॥

ಏವಂ ಕೃತ್ವಾ ವ್ರತಂ ಚೈತತ್ಸರ್ವವಿಘ್ನೈರ್ವಿಮುಚ್ಯತೇ ॥ ೫ ॥

ಹಯಮೇಧಸ್ಯ ವಿಘ್ನೇ ತು ಸಂಜಾತೇ ಸಗರಸ್ತಥಾ ।
ಏತದೇವ ಚರಿತ್ವಾ ತು ಹಯಮೇಧಂ ಸ ಆಪ್ತವಾನ್ ॥ ೬ ॥

ತಥಾ ರುದ್ರೇಣ ದೇವೇನ ತ್ರಿಪುರಂ ನಿಘ್ನತಾ ಪುರಾ ।
ಏತದೇವ ಕೃತಂ ತಸ್ಮಾತ್ತ್ರಿಪುರಸ್ತೇನ ಪಾತಿತಃ ॥ ೭ ॥

ಮಯಾ ಸಮುದ್ರಂ ಪಿಬತಾ ಏತದೇವ ಕೃತಂ ವ್ರತಂ ।
ಅನ್ಯೈರಪಿ ಮಹೀಪಾಲೈರೇತದೇವ ಕೃತಂ ಪುರಾ ॥
ತಪೋರ್ಥಿಭಿರ್ಜ್ಞಾನಕೃದ್ಭಿರವಿಘ್ನಾರ್ಥೇ ಪರಂತಪ ॥ ೮ ॥

---

೪. ನಾಲ್ಕು ತಿಂಗಳು ಈ ವ್ರತವನ್ನು ಮಾಡಿ ಐದನೆಯ ತಿಂಗಳಲ್ಲಿ ಚೆನ್ನಾಗಿ ಪೂಜಿಸಿದ ಸುವರ್ಣದ ಗಣಪತಿಯನ್ನು ಎಳ್ಳು, ಪಾಯಸಗಳಿಂದ ತುಂಬಿದ ಐದು ಪಾತ್ರೆಗಳೊಡನೆ ಬ್ರಾಹ್ಮಣನಿಗೆ ದಾನಮಾಡಬೇಕು.

೫. ಈ ವ್ರತವನ್ನು ಹೀಗೆ ಮಾಡಿದರೆ ಸರ್ವವಿಘ್ನಗಳೂ ತಪ್ಪುವುವು.

೬. ಅಶ್ವಮೇಧಯಜ್ಞಕ್ಕೆ ತಡೆಯುಂಟಾಗಲು ಸಗರಚಕ್ರವರ್ತಿಯು ಇದೇ ವ್ರತವನ್ನು ಮಾಡಿ ಯಜ್ಞವನ್ನು ಪೂರ್ತಿಗೊಳಿಸಿದನು.

೭. ಅಲ್ಲದೆ ಹಿಂದೆ ತ್ರಿಪುರವನ್ನು ನಾಶಮಾಡುವ ರುದ್ರನೂ ಇದೇ ವ್ರತವನ್ನು ಮಾಡಿದನು. ಅದರಿಂದ ತ್ರಿಪುರವನ್ನು ಅವನು ಸುಲಭವಾಗಿ ಧ್ವಂಸಮಾಡಿದನು.

೮. ಶತ್ರುಸಂತಾಪಕನೇ, ಸಮುದ್ರವನ್ನು ಕುಡಿಯುವ ಮೊದಲು ನಾನೂ ಇದನ್ನೇ ಮಾಡಿದೆನು. ಪೂರ್ವದಲ್ಲಿ ಬೇರೆಯ ರಾಜರೂ, ತಪೋರ್ಥಿಗಳೂ, ಜ್ಞಾನಾರ್ಥಿಗಳೂ ಆಗಿ; ವಿಘ್ನವಿಲ್ಲದಿರುವುದಕ್ಕಾಗಿ ಇದೇ ವ್ರತವನ್ನು ಮಾಡಿದರು.

ಶೂರಾಯ ಧೀರಾಯ ಗಜಾನನಾಯ
ಲಂಬೋದರಾಯೈಕದಂಷ್ಟ್ರಾಯ ಚೈವ ।
ಏವಂ ಸಂಪೂಜ್ಯ ತದ್ದಿನೇ ಪುಣ್ಯಕೃದ್ಭಿಃ
ಹೋಮಂ ಕುರ್ಯಾರ್ದ್ವಿಘ್ನನಾಶಸ್ಯ ಹೇತೋಃ ॥ ೯ ॥

ಅನೇನ ಕೃತಮಾತ್ರೇಣ ಸರ್ವವಿಘ್ನೈಃ ಪ್ರಮುಚ್ಯತೇ ।
ವಿನಾಯಕಸ್ಯ ದಾನೇನ ಕೃತಕೃತ್ಯೋ ನರೋ ಭವೇತ್ ॥ ೧೦ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಅವಿಘ್ನವ್ರತಂ ನಾಮ
ಊನಷಷ್ಟಿತಮೋಽಧ್ಯಾಯಃ

---

೯. ಪುಣ್ಯವಂತರು ವಿಘ್ನನಾಶಕ್ಕಾಗಿ ಆ ಚೌತಿಯ ದಿನ, 'ಶೂರನಿಗೆ, ಧೀರನಿಗೆ, ಗಜಾನನನಿಗೆ, ಲಂಬೋದರನಿಗೆ, ಏಕದಂತನಿಗೆ ನಮಸ್ಕಾರ' ಎಂದು ಅವನನ್ನು ಪೂಜಿಸಿ, ಹೋಮವನ್ನು ಮಾಡಬೇಕು.

೧೦. ಈ ವ್ರತವನ್ನು ಮಾಡಿದ ಮಾತ್ರದಲ್ಲಿ ಸರ್ವವಿಘ್ನಗಳೂ ತಪ್ಪುವುವು. ವಿನಾಯಕನನ್ನು ದಾನಮಾಡುವುದರಿಂದ ದಾನಿಯು ಕೃತಕೃತ್ಯ (ಧನ್ಯ) ನಾಗುವನು.

ಅಧ್ಯಾಯದ ಸಾರಾಂಶ—

ಅಗಸ್ತ್ಯಋಷಿಯು ಭದ್ರಾಶ್ವರಾಜನಿಗೆ ನಾವು ಮಾಡುವ ಕಾರ್ಯಗಳಲ್ಲಿ ವಿಘ್ನವಿಲ್ಲದಿರುವುದಕ್ಕೆ ಅವಿಘ್ನವ್ರತವೆಂಬ ವಿನಾಯಕಪ್ರೀತಿಕರವಾದ ವ್ರತವನ್ನು ಮಾಡಬೇಕೆಂದು ಹೇಳಿ, ಅದರ ಕ್ರಮವನ್ನೂ ಉದಾಹರಣೆಗಳನ್ನೂ ತಿಳಿಸಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ.

|| ಶ್ರೀಃ ||

-X-

ಷಷ್ಟಿತಮೋಽಧ್ಯಾಯಃ

ಅಥ ಶಾಂತಿವ್ರತಂ

|| ಅಗಸ್ತ್ಯ ಉವಾಚ ||

ಶಾಂತಿವ್ರತಂ ಪ್ರವಕ್ಷ್ಯಾಮಿ ತವ ರಾಜನ್ ಶೃಣುಷ್ವ ತತ್ ।
ಯೇನ ಚೀರ್ಣೇನ ಶಾಂತಿಸ್ಸ್ಯಾತ್ ಸರ್ವದಾ ಗೃಹಮೇಧಿನಾಂ || ೧ ||

ಪಂಚಮ್ಯಾಂ ಶುಕ್ಲಪಕ್ಷಸ್ಯ ಕಾರ್ತಿಕೇ ಮಾಸಿ ಸುವ್ರತ |
ಆರಂಭೇ ವರ್ಷಮೇಕಂ ತು ಭುಂಜೀಯಾದುಷ್ಣವರ್ಜಿತಂ || ೨ ||

ನಕ್ತೇ ದೇವಂ ತು ಸಂಪೂಜ್ಯ ಹರಿಂ ಶೇಷೋಪರಿ ಸ್ಥಿತಂ ।
ಅನಂತಾಯೇತಿ ಪಾದೌ ತು ಕಟಿಂ ವಾಸುಕಿನೇ ನಮಃ || ೩ ||

ಅರವತ್ತನೆಯ ಅಧ್ಯಾಯ

ಶಾಂತಿವ್ರತ.

೧. ಅಗಸ್ತ್ಯಮುನಿ—ರಾಜನೇ, ಗೃಹಸ್ಥನಿಗೆ ಸರ್ವದಾ ಶಾಂತಿಯನ್ನುಂಟು ಮಾಡುವ ಶಾಂತಿವ್ರತವನ್ನು ನಿನಗೆ ಹೇಳುವೆನು. ಕೇಳು.

೨. ಸುವ್ರತನೇ, ಈ ವ್ರತವನ್ನು ಕಾರ್ತಿಕ ಮಾಸದ ಶುಕ್ಲಪಕ್ಷದ ಪಂಚಮಿಯದಿನ ಆರಂಭಿಸಬೇಕು. ಆರಂಭಿಸಿದ ಒಂದುವರ್ಷ ಬಿಸಿಯಿಲ್ಲದ ಆಹಾರವನ್ನು ಭುಜಿಸಬೇಕು.

೩-೫. ರಾತ್ರಿಯಲ್ಲಿ ಶೇಷವಾಹನನಾದ ದೇವನನ್ನು ಪೂಜಿಸಬೇಕು. ಅನಂತಾಯ ನಮಃ ಎಂದು ದೇವನ ಪಾದಗಳನ್ನೂ ವಾಸುಕಿನೇ ನಮಃ ಎಂದು

ತಕ್ಷಕಾಯೇತಿ ಜಠರಮುರಃ ಕರ್ಕೋಟಿಕಾಯ ಚ ।
ಪದ್ಮಾಯ ಕಂಠಂ ಸಂಪೂಜ್ಯ ಮಹಾಪದ್ಮಾಯ ದೋರ್ಯುಗಂ ॥ ೪ ॥

ಶಂಖಪಾಲಾಯ ವಕ್ತ್ರಂ ತು ಕುಟಿಲಾಯೇತಿ ವೈ ಶಿರಃ ।
ಏವಂ ವಿಷ್ಣುಗತಂ ಪೂಜ್ಯ ಪೃಥಗೇವ ಚ ಪೂಜಯೇತ್ ॥ ೫ ॥

ಕ್ಷೀರೇಣ ಸ್ನಪನಂ ಕುರ್ಯಾತ್ತಾನುದ್ದಿಶ್ಯ ಹರೇಃ ಪುನಃ ।
ತದಗ್ರೇ ಹೋಮಯೇತ್ ಕ್ಷೀರಂ ತಿಲೈಃ ಸಹ ವಿಚಕ್ಷಣಃ ॥ ೬ ॥

ಏವಂ ಸಂವತ್ಸರಸ್ಯಾಂತೇ ಬ್ರಾಹ್ಮಣಾನ್ಭೋಜಯೇತ್ತತಃ ।
ನಾಗಂ ತು ಕಾಂಚನಂ ಕುರ್ಯಾದ್ಬ್ರಾಹ್ಮಣಾಯ ನಿವೇದಯೇತ್ ॥ ೭ ॥

ನಡುವನ್ನೂ, ತಕ್ಷಕಾಯ ನಮಃ ಎಂದು ಉದರವನ್ನೂ, ಕರ್ಕೋಟಿಕಾಯ ನಮಃ ಎಂದು ಎದೆಯನ್ನೂ, ಪದ್ಮಾಯ ನಮಃ ಎಂದು ಕಂಠವನ್ನೂ, ಮಹಾಪದ್ಮಾಯ ನಮಃ ಎಂದು ಎರಡುತೋಳುಗಳನ್ನೂ, ಶಂಖಪಾಲಾಯ ನಮಃ ಎಂದು ಮುಖವನ್ನೂ, ಕುಟಿಲಾಯ ನಮಃ ಎಂದು ಶಿರಸ್ಸನ್ನೂ ಅರ್ಚಿಸಬೇಕು. ಹೀಗೆ ವಿಷ್ಣುವನ್ನು ಪೂಜಿಸಿ, ಅನಂತಾದಿಗಳನ್ನೂ ಪ್ರತ್ಯೇಕವಾಗಿ ಅರ್ಚಿಸಬೇಕು.

೬. ಅವರನ್ನುದ್ದೇಶಿಸಿ, ಹರಿಗೇ ಕ್ಷೀರಾಭಿಷೇಕವನ್ನೂ ಮಾಡಬೇಕು. (ಬುದ್ಧಿವಂತನು) ದೇವರೆದುರಿಗೆ ಎಳ್ಳಿನಿಂದೊಡಗೂಡಿದ ಹಾಲಿನಿಂದ ಹೋಮ ಮಾಡಬೇಕು.

೭. ಹೀಗೆಮಾಡಿ, ವರ್ಷದ ಕಡೆಯಲ್ಲಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ಚಿನ್ನದಿಂದ ನಾಗನನ್ನು ಮಾಡಿಸಿ, ಪೂಜಿಸಿ, ಬ್ರಾಹ್ಮಣನಿಗೆ ಅರ್ಪಿಸಬೇಕು.

ಏವಂ ಯಃ ಕುರುತೇ ಭಕ್ತ್ಯಾ ವ್ರತಮೇತನ್ನರಾಧಿಪ ।
ತಸ್ಯ ಶಾಂತಿರ್ಭವೇನ್ನೂನಂ ನಾಗೇಭ್ಯೋ ನ ಭಯಂ ತಥಾ ॥ ೮ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಶಾಂತಿವ್ರತಂ ನಾಮ
ಷಷ್ಟಿತಮೋಽಧ್ಯಾಯಃ

---

೮. ರಾಜನೇ, ಭಕ್ತಿಯಿಂದ ಹೀಗೆ ಈ ವ್ರತವನ್ನು ಮಾಡುವವನಿಗೆ ನಿಜವಾಗಿಯೂ ಶಾಂತಿಯುಂಟಾಗುವುದು, ಅಲ್ಲದೆ ಹಾವುಗಳ ಭಯವೂ ತಪ್ಪುವುದು.

ಅಧ್ಯಾಯದ ಸಾರಾಂಶ :—

ಅಗಸ್ತ್ಯಋಷಿಯು ಭದ್ರಾಶ್ವರಾಜನಿಗೆ ನಾಗತೃಪ್ತಿಕರವಾದ ಶಾಂತಿ ವ್ರತವನ್ನು ಹೇಳಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತನೆಯ ಅಧ್ಯಾಯ

|| ಶ್ರೀಃ ||

–X–

ಏಕಷಷ್ಟಿತಮೋಧ್ಯಾಯಃ

ಅಥ ಕಾಮವ್ರತಂ

|| ಅಗಸ್ತ್ಯ ಉವಾಚ ||

ಕಾಮವ್ರತಂ ಮಹಾರಾಜ ಶೃಣು ಮೇ ಗದತೋಧುನಾ ।
ಯೇನ ಕಾಮಾಃ ಸಮೃಧ್ಯಂತೇ ಮನಸಾ ಚಿಂತಿತಾ ಅಪಿ || ೧ ||

ಷಷ್ಠ್ಯಾಂ ಫಲಾಶನೋ ಯಸ್ತು ವರ್ಷಮೇಕಂ ವ್ರತಂ ಚರೇತ್ ।
ಪೌಷಮಾಸೇ ಸಿತೇ ಪಕ್ಷೇ ಪಂಚಮ್ಯಾಂ ಕೃತಭೋಜನಃ || ೨ ||

ಷಷ್ಠ್ಯಾಂ ತು ಪ್ರಾಶಯೇದ್ಧೀಮಾನ್ ಪ್ರಥಮಂ ತು ಫಲಂ ನೃಪ ।
ತತೋ ಭುಂಜೀತ ಯತ್ನೇನ ವಾಗ್ಯತಃ ಶುದ್ಧಮೋದನಂ || ೩ ||

ಅರವತ್ತೊಂದನೆಯ ಅಧ್ಯಾಯ

ಕಾಮವ್ರತ

೧. ಅಗಸ್ತ್ಯಋಷಿ—ಮಹಾರಾಜನೇ, ಮನಸ್ಸಿನಲ್ಲಿ ಬಯಸಿದ ಸರ್ವ ಕಾಮುಗಳೂ ಸಿದ್ಧಿಸುವ ಕಾಮವ್ರತವನ್ನು ಹೇಳುತ್ತೇನೆ. ಕೇಳು.

೨. ಪುಷ್ಯಮಾಸದ ಶುಕ್ಲಪಕ್ಷದಲ್ಲಿ ಮೊದಲು ಮಾಡಿಕೊಂಡು ಪಂಚಮಿಯ ದಿನ ಊಟಮಾಡಿ, ಷಷ್ಠಿಯದಿನ ಫಲಾಹಾರಮಾಡುತ್ತಾ, ಒಂದುವರ್ಷಕಾಲ ಈ ವ್ರತವನ್ನು ಆಚರಿಸಬೇಕು.

೩-೪. ದೊರೆಯೇ, ಬುದ್ಧಿವಂತನಾದ ವ್ರತಿಯು ಷಷ್ಠಿಯದಿನ ಮೊದಲು ಹಣ್ಣುಕಾಯಿಗಳನ್ನು ತಿಂದು, ಬಳಿಕ ಶುದ್ಧವಾದ ಅನ್ನವನ್ನು ಮೌನದಿಂದ

ಬ್ರಾಹ್ಮಣೈಃ ಸಹ ರಾಜೇಂದ್ರ ಅಥವಾ ಕೇವಲೈಃ ಫಲೈಃ ।
ತಮೇಕಂ ದಿವಸಂ ಸ್ಥಿತ್ವಾ ಸಪ್ತಮ್ಯಾಂ ಪಾರಯೇನ್ನೃಪ ॥ ೪ ॥

ಅಗ್ನಿಕಾರ್ಯಂ ತು ಕುರ್ವೀತ ಗುಹರೂಪೇಣ ಕೇಶವಂ ।
ಪೂಜಯಿತ್ವಾ ವಿಧಾನೇನ ವರ್ಷಮೇಕಂ ವ್ರತಂ ಚರೇತ್ ॥ ೫ ॥

ಷಡ್ವಕ್ತ್ರಃ ಕಾರ್ತಿಕೇಯಶ್ಚ ಸೇನಾನೀಃ ಕೃತ್ತಿಕಾಸುತಃ ।
ಕುಮಾರಃ ಸ್ಕಂದ ಇತ್ಯೇವಂ ಪೂಜ್ಯೋ ವಿಷ್ಣುಃ ಸ್ವನಾಮಭಿಃ ॥ ೬ ॥

ಸಮಾಪ್ತೌ ತು ವ್ರತಸ್ಯಾಸ್ಯ ಕುರ್ಯಾದ್ಬ್ರಾಹ್ಮಣಭೋಜನಂ ।
ಷಣ್ಮುಖಂ ಮೂರ್ತಸೌವರ್ಣಂ ಬ್ರಾಹ್ಮಣಾಯ ನಿವೇದಯೇತ್ ॥ ೭ ॥

ಸರ್ವೇ ಕಾಮಾಃ ಸಮೃದ್ಧ್ಯಂತಾಂ ಮಮ ದೇವ ಕುಮಾರಕ ।
ತ್ವತ್ಪ್ರಸಾದಾದಿಮಂ ಭಕ್ತ್ಯಾ ಗೃಹ್ಯತಾಂ ವಿಪ್ರ ಮಾ ಚಿರಂ ॥ ೮ ॥

ಬ್ರಾಹ್ಮಣರೊಡನೆ ಊಟಮಾಡಬಹುದು. ಅಥವಾ ಅದೊಂದುದಿನ ಬರಿಯ ಫಲಾಹಾರದಿಂದಲೇ ಇದ್ದು, ಸಪ್ತಮಿಯದಿನ ಪಾರಣೆಯನ್ನು ಮಾಡಬೇಕು.

೫. ಅಗ್ನಿಕಾರ್ಯವನ್ನು ಮಾಡಬೇಕು. ಷಣ್ಮುಖರೂಪದಿಂದ ವಿಷ್ಣುವನ್ನು ವಿಧ್ಯುಕ್ತವಾಗಿ ಪೂಜಿಸಿ, ಒಂದುವರ್ಷ ವ್ರತವನ್ನು ಮಾಡಬೇಕು.

೬. ಷಡ್ವಕ್ತ್ರ, ಕಾರ್ತಿಕೇಯ, ಸೇನಾನೀ, ಕೃತ್ತಿಕಾಸುತ, ಕುಮಾರ ಸ್ಕಂದ ಎಂಬ ಷಣ್ಮುಖನ ನಾಮಗಳಿಂದ ವಿಷ್ಣುವನ್ನು ಅರ್ಚಿಸಬೇಕು.

೭. ಈ ವ್ರತದ (ವರ್ಷದ) ಕಡೆಯಲ್ಲಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ಸುವರ್ಣದ ಷಣ್ಮುಖಮೂರ್ತಿಯನ್ನು ಬ್ರಾಹ್ಮಣನಿಗ ಒಪ್ಪಿಸಬೇಕು.

೮. ಮೂರ್ತಿಯನ್ನೊಪ್ಪಿಸುವಾಗ, "ದೇವ, ಕುಮಾರಸ್ವಾಮೀ, ನಿನ್ನ ಅನುಗ್ರಹದಿಂದ ನನ್ನ ಎಲ್ಲಾ ಇಷ್ಟಾರ್ಥಗಳೂ ನೆರವೇರಲಿ. ಬ್ರಾಹ್ಮಣನೇ, ಭಕ್ತಿಯಿಂದ ಈ ದೇವನನ್ನು ಪರಿಗ್ರಹಿಸು ತಡಮಾಡಬೇಡ" ಎಂಬ ಅರ್ಥವುಳ್ಳ ಮೇಲಿನ (೮ನೆಯ) ಶ್ಲೋಕವನ್ನು ಹೇಳಬೇಕು.

ಅನೇನ ದತ್ತಮಾತ್ರೇಣ ಬ್ರಾಹ್ಮಣಾಯ ಸವಸ್ತ್ರಕಂ ।
ತತಃ ಕಾಮಾಃ ಸಮೃಧ್ಯಂತೇ ಸರ್ವೇ ವೈ ಇಹ ಜನ್ಮನಿ ॥ ೯ ॥

ಅಪುತ್ರೋ ಲಭತೇ ಪುತ್ರಂ ಧನಾರ್ಥೀ ಲಭತೇ ಧನಂ ।
ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ನಾತ್ರಕಾರ್ಯಾ ವಿಚಾರಣಾ ॥ ೧೦ ॥

ಏತದ್ವ್ರತಂ ಪುರಾ ಚೀರ್ಣಂ ನಲೇನ ನೃಪಸತ್ತಮ ।
ಋತುಪರ್ಣಸ್ಯ ವಿಷಯೇ ವಸತಾ ವ್ರತಚರ್ಯಯಾ ॥ ೧೧ ॥

ತಥಾ ರಾಜ್ಯಚ್ಯುತೈರನ್ಯೈರ್ಬಹುಭಿರ್ನೃಪಸತ್ತಮೈಃ
ಪೌರಾಣಿಕೈರ್ವ್ರತಂ ಚೈವ ಸಿದ್ಧ್ಯರ್ಥಂ ನೃಪಸತ್ತಮ ॥ ೧೨ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಕಾಮವ್ರತಂ
ನಾಮೈಕಷಷ್ಟಿತಮೋಽಧ್ಯಾಯಃ

---

೯. ಬ್ರಾಹ್ಮಣನಿಗೆ ವಸ್ತ್ರಾಲಂಕೃತನಾದ ಷಣ್ಮುಖನನ್ನು ಕೊಟ್ಟ ಮಾತ್ರದಲ್ಲಿ ವ್ರತಿಗೆ ಈ ಜನ್ಮದಲ್ಲಿ ಸರ್ವಕಾಮಗಳೂ ಪೂರ್ಣವಾಗುವುವು.

೧೦. ಪುತ್ರನಿಲ್ಲದಿದ್ದರೆ ಪುತ್ರನನ್ನು ಪಡೆಯುವನು. ಧನಾರ್ಥಿಯಾಗಿದ್ದರೆ ಧನವನ್ನು ಪಡೆಯುವನು. ದೊರೆಯು ರಾಜ್ಯವನ್ನು ಕಳೆದುಕೊಂಡಿದ್ದರೆ ಮತ್ತೆ ರಾಜ್ಯವನ್ನು ಪಡೆಯುವನು. ಇದರಲ್ಲಿ ವಿಚಾರಮಾಡಬೇಕಾಗಿಲ್ಲ.

೧೧ ನೃಪೋತ್ತಮನೇ, ಪೂರ್ವದಲ್ಲಿ ನಳಮಹಾರಾಜನು, ಋತುಪರ್ಣನ ರಾಜ್ಯದಲ್ಲಿ ನಿಯಮಸ್ಥನಾಗಿ ವಾಸಮಾಡುತ್ತಿದ್ದಾಗ ಈ ವ್ರತವನ್ನು ಮಾಡಿದನು.

೧೨. ಅಲ್ಲದೆ, ರಾಜ್ಯವನ್ನು ಕಳೆದುಕೊಂಡ ಪುರಾಣಪ್ರಸಿದ್ಧರಾದ ಹಲವರು ರಾಜೋತ್ತಮರು ಮತ್ತೆ ರಾಜ್ಯಪ್ರಾಪ್ತಿ ರೂಪವಾದ ಸಿದ್ಧಿಗಾಗಿ ಈ ವ್ರತವನ್ನು ಮಾಡಿದರು.

ಅಧ್ಯಾಯದ ಸಾರಾಂಶ :—

ಭದ್ರಾಶ್ವರಾಜನಿಗೆ, ಅಗಸ್ತ್ಯಋಷಿಯು ಷಣ್ಮುಖಪ್ರೀತಿಕರವಾದ ಕಾಮ ವ್ರತದ ವಿಧಾನವನ್ನೂ ಫಲವನ್ನೂ ಹೇಳಿರುವರು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತೊಂದನೆಯ ಅಧ್ಯಾಯ.

|| ಶ್ರೀಃ ||

–x–

ದ್ವಿಷಷ್ಟಿತಮೋಽಧ್ಯಾಯಃ

ಅಥ ಆರೋಗ್ಯವ್ರತಂ

|| ಅಗಸ್ತ್ಯ ಉವಾಚ ||

ಅಥಾಪರಂ ಮಹಾರಾಜ ವ್ರತಮಾರೋಗ್ಯಸಂಜ್ಞಿತಂ ।
ಕಥಯಾಮಿ ಪರಂ ಪುಣ್ಯಂ ಸರ್ವಪಾಪಪ್ರಣಾಶನಂ || ೧ ||

ಆದಿತ್ಯ ಭಾಸ್ಕರ ರವೇ ಭಾನೋ ಸೂರ್ಯ ದಿವಾಕರ ।
ಪ್ರಭಾಕರೇತಿ ಸಂಪೂಜ್ಯ ಏವಂ ವ್ರತಮುಪಾಚರೇತ್ ॥
ಷಷ್ಠ್ಯಾಂ ಚೈವ ಕೃತಾಹಾರಃ ಸಪ್ತಮ್ಯಾಂ ಭಾನುಮರ್ಚಯೇತ್ || ೨ ||

ಅಷ್ಟಮ್ಯಾಂ ಚೈವ ಭುಂಜೀತ ಏಷ ಏವ ವಿಧಿಕ್ರಮಃ || ೩ ||

ಅರವತ್ತೆರಡನೆಯ ಅಧ್ಯಾಯ

ಆರೋಗ್ಯ ವ್ರತ

೧. ಅಗಸ್ತ್ಯಮುನಿ—ಮಹಾರಾಜನೇ, ಅತಿಪುಣ್ಯವೂ, ಸರ್ವಪಾಪನಾಶಕವೂ ಆದ ಆರೋಗ್ಯವೆಂಬ ಹೆಸರಿನ ಮತ್ತೊಂದು ವ್ರತವನ್ನು ಹೇಳುತ್ತೇನೆ.

೨. ವ್ರತಿಯು ಷಷ್ಠಿಯದಿನ ಊಟಮಾಡಿ, ಸಪ್ತಮಿಯದಿನ ಭಾನುವನ್ನು ಆದಿತ್ಯ, ಭಾಸ್ಕರ, ರವಿ, ಭಾನು, ಸೂರ್ಯ, ದಿವಾಕರ, ಪ್ರಭಾಕರ ಎಂಬ ನಾಮಗಳಿಂದ ಅರ್ಚಿಸಿ, ವ್ರತವನ್ನು ಮಾಡಬೇಕು.

೩. ಅಷ್ಟಮಿಯದಿನ ಪಾರಣೆಯನ್ನು ಮಾಡಬೇಕು. ಇದೇ ವ್ರತದ ಶಾಸ್ತ್ರಕ್ರಮ.

ಅನೇನ ವತ್ಸರಂ ಪೂರ್ಣಂ ವಿಧಿನಾ ಯೋಽರ್ಚಯೇದ್ರವಿಂ |
ತಸ್ಯಾರೋಗ್ಯಂ ಧನಂ ಧಾನ್ಯಮಿಹ ಜನ್ಮನಿ ಜಾಯತೇ |
ಪರತ್ರ ಚ ಶುಭಂ ಸ್ಥಾನಂ ಯದ್ಗತ್ವಾ ನ ನಿವರ್ತತೇ || ೪ ||

ಸಾರ್ವಭೌಮಃ ಪುರಾ ರಾಜಾ ಅನರಣ್ಯೋ ಮಹಾಬಲಃ || ೫ ||

ತೇನಾಯಮರ್ಚಿತೋ ದೇವೋ ವ್ರತೇನಾನೇನ ಪಾರ್ಥಿವ |
ಯಸ್ಯ ತುಷ್ಟೋಽಭವದ್ದೇವಃ ಪ್ರಾದಾದಾರೋಗ್ಯಮುತ್ತಮಂ || ೬ ||

|| ಭದ್ರಾಶ್ವ ಉವಾಚ ||

ಕಿಮಸೌ ರೋಗವಾನ್ರಾಜಾ ಯೇನಾರೋಗ್ಯಮವಾಪ್ತವಾನ್ |
ಸಾರ್ವಭೌಮಸ್ಯ ಚ ಕಥಂ ಬ್ರಹ್ಮನ್ರೋಗಸ್ಯ ಸಂಭವಃ || ೭ ||

|| ಅಗಸ್ತ್ಯ ಉವಾಚ ||

ಸ ರಾಜಾ ಸಾರ್ವಭೌಮೋಽಭೂದ್ಯಶಸ್ವೀ ಚ ಸುರೂಪವಾನ್ || ೮ ||

---

೪. ಈ ಕ್ರಮದಿಂದ ವರ್ಷಪೂರ್ತಿಯಾಗಿ ಸೂರ್ಯನನ್ನು ಅರ್ಚಿಸುವವನಿಗೆ ಈ ಜನ್ಮದಲ್ಲಿ ಆರೋಗ್ಯವೂ, ಧನಧಾನ್ಯಗಳೂ ಲಭಿಸುವುವು. ಪರದಲ್ಲಿ ಪುನರಾವೃತ್ತಿಯಿಲ್ಲದ ಶುಭಸ್ಥಾನವು ದೊರೆಯುವುದು.

೫. ಪೂರ್ವದಲ್ಲಿ ಮಹಾಬಲವುಳ್ಳವನೂ, ಚಕ್ರವರ್ತಿಯೂ ಆದ ಅನರಣ್ಯನೆಂಬ ಮಹಾರಾಜನಿದ್ದನಷ್ಟೆ.

೬. ದೊರೆಯೇ, ಆತನಿಂದ ಪೂಜಿತನಾಗಿ ಸಂತುಷ್ಟನಾದ ಸೂರ್ಯದೇವನು ಆತನಿಗೆ ಉತ್ತಮವಾದ ಆರೋಗ್ಯವನ್ನು ದಯೆಪಾಲಿಸಿದನು.

೭. ಭದ್ರಾಶ್ವ–ಬ್ರಹ್ಮನೇ, ಅನರಣ್ಯ ರಾಜನಿಗೆ ಏನು ವ್ಯಾಧಿಯಾಗಿದ್ದಿತು? ಯಾವುದರಿಂದ ಆರೋಗ್ಯವನ್ನು ಪಡೆದನು ? ಚಕ್ರವರ್ತಿಗೆ ರೋಗವು ಬಂದುದು ಹೇಗೆ ?

೮. ಅಗಸ್ತ್ಯಮುನಿ–ರಾಜೋತ್ತಮನೆ, ಆ ಅನರಣ್ಯನು ಸಾರ್ವಭೌಮನೂ ಕೀರ್ತಿವಂತನೂ, ರೂಪವಂತನೂ ಆಗಿದ್ದನು.

ಸ ಕದಾಚಿನ್ಮಹಾರಾಜ ನೃಪಶ್ರೇಷ್ಠೋ ಮಹಾಬಲಃ ।
ಗತವಾನ್ಮಾನಸಂ ದಿವ್ಯಂ ಸರೋ ದೇವಗಣಾನ್ವಿತಂ ॥ ೯ ॥

ತತ್ರಾಪಶ್ಯದ್ಬೃಹತ್ಪದ್ಮಂ ಸರೋಮಧ್ಯಗತಂ ಸಿತಂ ।
ತತ್ರ ಚಾಂಗುಷ್ಠಮಾತ್ರಂ ತು ಸ್ಥಿತಂ ಪುರುಷಸತ್ತಮಂ ॥
ರಕ್ತವಾಸೋಭಿರಾಚ್ಛನ್ನಂ ದ್ವಿಭುಜಂ ತಿಗ್ಮತೇಜಸಂ ॥ ೧೦ ॥

ತಂ ದೃಷ್ಟ್ವಾ ಸಾರಥಿಂ ಪ್ರಾಹ ಪದ್ಮಮೇತನ್ಮಮಾನಯ ।
ಇದಂ ತು ಶಿರಸಾ ಬಿಭ್ರತ್ಸರ್ವಲೋಕಸ್ಯ ಸನ್ನಿಧೌ ।
ಶ್ಲಾಘನೀಯೋ ಭವಿಷ್ಯಾಮಿ ತಸ್ಮಾದಾನಯ ಮಾ ಚಿರಂ ॥ ೧೧ ॥

ಏವಮುಕ್ತಸ್ತದಾ ತೇನ ಸಾರಥಿಃ ಪ್ರವಿವೇಶ ಹ ।
ಗೃಹೀತುಮುಪಚಕ್ರಾಮ ತತ್ಪದ್ಮಂ ನೃಪಸತ್ತಮ ॥ ೧೨ ॥

---

೯. ಆ ಮಹಾರಾಜನು ಒಂದುದಿನ ದೇವತೆಗಳ ಗುಂಪಿನಿಂದ ಕೂಡಿದ ದಿವ್ಯವಾದ ಮಾನಸ ಸರೋವರಕ್ಕೆ ಹೋದನು.

೧೦. ಅಲ್ಲಿ ಸರೋವರದ ಮಧ್ಯದಲ್ಲಿದ್ದ ಒಂದು ದೊಡ್ಡದಾದ ಬೆಳ್ದಾವರೆಯ ಹೂವನ್ನೂ, ಆ ಹೂವಿನಲ್ಲಿ, ಕೆಂಪುಬಟ್ಟೆಯನ್ನು ಧರಿಸಿ ತೀಕ್ಷ್ಣವಾದ ಕಾಂತಿಯುಳ್ಳವನೂ, ದ್ವಿಭುಜನೂ ಆಗಿ, ಹೆಬ್ಬೆರಳಿನಷ್ಟಿರುವ ಪುರುಷೋತ್ತಮನೊಬ್ಬನನ್ನೂ ಕಂಡನು.

೧೧. ಅದನ್ನು ಕಂಡ ಅನರಣ್ಯನು, ಸಾರಥಿಗೆ " ಈ ಕಮಲವನ್ನು ನನಗೆ ತಂದುಕೊಡು. ಇವನ್ನು ತಲೆಯಲ್ಲಿ ಧರಿಸಿ ಲೋಕದಲ್ಲೆಲ್ಲರೆದುರಿಗೂ ಶ್ಲಾಘನೀಯನಾಗುವೆನು. ಆದುದರಿಂದ ತಡಮಾಡದೆ ತೆಗೆದುಕೊಂಡು ಬಾ " ಎಂದು ಹೇಳಿದನು.

೧೨. ನೃಪೋತ್ತಮನೇ, ಹೀಗೆ ಹೇಳಿಸಿಕೊಂಡ ಸಾರಥಿಯು ಕಮಲದ ಹತ್ತಿರ ಹೋಗಿ ಅದನ್ನು ಕೀಳಲು ಕೈಹಾಕಿದನು.

ಸ್ಪೃಷ್ಟಮಾತ್ರೇ ತತಃ ಪದ್ಮೇ ಹುಂಕಾರಃ ಸಮಜಾಯತ ।
ತೇನ ಶಬ್ದೇನ ವಿತ್ರಸ್ತಃ ಸ ಪಪಾತ ಮಮಾರ ಚ ॥ ೧೩ ॥

ರಾಜಾ ಚ ತತ್ಕ್ಷಣಾದೇವ ಶಬ್ದೇನ ಸಮಪದ್ಯತ ।
ಕುಷ್ಠೀ ವಿಗತವರ್ಣಶ್ಚ ಬಲವೀರ್ಯವಿವರ್ಜಿತಃ ॥ ೧೪ ॥

ತಥಾಗತಮಥಾತ್ಮಾನಂ ದೃಷ್ಟ್ವಾ ಸ ಪುರುಷರ್ಷಭಃ ।
ತಸ್ಥೌ ತತ್ರೈವ ಶೋಕಾರ್ತಃ ಕಿಮೇತದಿತಿ ಚಿಂತಯನ್ ॥ ೧೫ ॥

ತಸ್ಯ ಚಿಂತಯತೋ ಧೀಮಾನಾಜಗಾಮ ಮಹಾತಪಾಃ ।
ವಸಿಷ್ಠೋ ಬ್ರಹ್ಮಪುತ್ರೋಽಥ ಸ ತಂ ಪಪ್ರಚ್ಛ ಪಾರ್ಥಿವಂ ॥ ೧೬ ॥

ಕಥಂ ತೇ ರಾಜಶಾರ್ದೂಲ ಚೇಹ ದೇಹಸ್ಯ ಶಾಸನಂ ।
ಇದಾನೀಂ ಮೇ ಚ ಕಿಂ ಕಾರ್ಯಂ ತನ್ಮಮಾಚಕ್ಷ್ವ ಪೃಚ್ಛತಃ ॥ ೧೭ ॥

---

೧೩. ಆಗ ತಾವರೆಯ ಹೂವನ್ನು ಅವನು ಮುಟ್ಟಿದೊಡನೆಯೇ ಹುಂ ಎಂಬ ಶಬ್ದವಾಯಿತು. ಆ ಶಬ್ದದಿಂದ ಬೆಚ್ಚಿಬಿದ್ದು, ಆ ಸಾರಥಿಯು ಸತ್ತೇ ಹೋದನು.

೧೪. ದೊರೆಯೂ, ಆ ಸದ್ದಿನಿಂದ ಒಡನೆಯೇ ಕುಷ್ಟರೋಗಿಯೂ, ಬಣ್ಣಗೆಟ್ಟವನೂ, ಬಲವೀರ್ಯಗಳಿಲ್ಲದವನೂ ಆದನು.

೧೫. ತಾನು ಹಾಗಾದುದನ್ನು ನೋಡಿ, ಆ ರಾಜನು ದುಃಖಪೀಡಿತನಾಗಿ ಇದೇನು! ಎಂದು ಚಿಂತಿಸುತ್ತ ಅಲ್ಲಿಯೇ ನಿಂತನು.

೧೬–೧೭. ಚಿಂತಿಸುತ್ತಿದ್ದ ಅವನ ಬಳಿಗೆ ಬ್ರಹ್ಮಪುತ್ರನೂ, ವಿದ್ವಾಂಸನೂ, ಮಹಾತಪಸ್ವಿಯೂ ಆದ ವಸಿಷ್ಠನು ಬಂದು ಆ ದೊರೆಯನ್ನು“ ರಾಜೋತ್ತಮನೇ ಇಲ್ಲಿ ನಿನ್ನ ದೇಹ ಶಾಸನವು(ದಂಡನೆಯು)ಹೇಗಾಯಿತು ? ಈಗ ಮಾಡ ಬೇಕಾದುದೇನು ? ಕೇಳುತ್ತಿರುವ ನನಗೆ ಅದನ್ನೂ ಹೇಳು” ಎಂದು ಕೇಳಿದನು.

ಏವಮುಕ್ತಸ್ತತೋ ರಾಜಾ ವಸಿಷ್ಠೇನ ಮಹಾತ್ಮನಾ ।
ಸರ್ವಂ ಪದ್ಮಸ್ಯ ವೃತ್ತಾಂತಂ ಕಥಯಾಮಾಸ ಚ ಪ್ರಭುಃ ॥ ೧೮ ॥

ತಂ ಶ್ರುತ್ವಾ ಸ ಮುನಿಸ್ತತ್ರ ಸಾಧು ರಾಜನ್ತಥಾಬ್ರವೀತ್ ।
ಅಸಾಧುರಥ ಚಾತಿಷ್ಠಸ್ತಸ್ಮಾತ್ಕುಷ್ಠಿತ್ವಮಾಗತಃ ॥ ೧೯ ॥

ಏವಮುಕ್ತಸ್ತದಾ ರಾಜಾ ವೇಪಮಾನಃ ಕೃತಾಂಜಲಿಃ ।
ಪಪ್ರಚ್ಛ ಸಾಧ್ವಹಂ ವಿಪ್ರ ಕಥಂ ವಾऽಸಾಧ್ವಹಂ ಮುನೇ ॥ ೨೦ ॥

ಕುಷ್ಠಂ ಕಥಂ ಮೇ ಸಂಜಾತಮೇತನ್ಮೇ ವಕ್ತುಮರ್ಹಸಿ ॥ ೨೧ ॥

॥ ವಸಿಷ್ಠ ಉವಾಚ ॥

ಏತದ್ಬ್ರಹ್ಮೋದ್ಭವಂ ನಾಮ ಪದ್ಮಂ ತ್ರೈಲೋಕ್ಯವಿಶ್ರುತಂ ।
ದೃಷ್ಟಮಾತ್ರೇಣ ಚಾನೇನ ದೃಷ್ಟಾಸ್ಯುಸ್ಸರ್ವದೇವತಾಃ ॥ ೨೨ ॥

---

೧೮. ಮಹಾತ್ಮನಾದ ವಸಿಷ್ಠನು ಹೀಗೆ ಕೇಳಲು ದೊರೆಯು ತಾವರೆ ಹೂವಿನ ವೃತ್ತಾಂತವೆಲ್ಲವನ್ನೂ ಹೇಳಿದನು.

೧೯. ಅದನ್ನು ಕೇಳಿ ಆ ಮುನಿಯು "ಸಾಧುವಾದ ರಾಜನೇ, ನೀನು ಆ ವಿಷಯದಲ್ಲಿ ಅಸಾಧುವಾಗಿದ್ದೆ, ಆದುದರಿಂದ ಕುಷ್ಠಿತ್ವವು ಬಂದಿತು" ಎಂದು ಹೇಳಿದನು.

೨೦–೨೧. ಋಷಿಯಿಂದ ಹೀಗೆನಿಸಿಕೊಂಡ ರಾಜನು ನಡುಗುತ್ತ ಕೈಮುಗಿದುಕೊಂಡು "ಬ್ರಹ್ಮರ್ಷಿಯೇ, ಸಾಧುವಾದ ನಾನು ಹೇಗೆ ಅಸಾಧು ವಾದೆನು ? ನನಗೆ ಕುಷ್ಠವು ಹೇಗೆ ಉಂಟಾಯಿತು ? ಇದನ್ನು ನೀನೇ ಹೇಳಬೇಕಾಗಿದೆ" ಎಂದನು.

೨೨. ವಸಿಷ್ಠಋಷಿ—ದೊರೆಯೇ, ಇದು ಮೂರುಲೋಕದಲ್ಲಿಯೂ ಪ್ರಸಿದ್ಧವಾದ ಬ್ರಹ್ಮೋದ್ಭವವೆಂಬ ಹೆಸರಿನ ಕಮಲ. ಇದರ ದರ್ಶನವಾದರೆ ಸರ್ವದೇವತೆಗಳ ದರ್ಶನವೂ ಆದಂತೆಯೇ.

ಏತಸ್ಮಿನ್ ದೃಶ್ಯತೇ ಚೈತತ್ ಷಣ್ಮಾಸಂ ಕ್ವಾಪಿ ಪಾರ್ಥಿವ ‖ ೨೩ ‖

ಏತಸ್ಮಿನ್ ದೃಷ್ಟಮಾತ್ರೇ ತು ಯೋ ಜಲಂ ವಿಶತೇ ನರಃ |
ಸರ್ವಪಾಪವಿನಿರ್ಮುಕ್ತಃ ಪರಂ ನಿರ್ವಾಣಮರ್ಹತಿ ।
ಬ್ರಹ್ಮಣಃ ಪ್ರಾಗವಸ್ಥಾಯಾಂ ಮೂರ್ತಿರಪ್ಸು ವ್ಯವಸ್ಥಿತಾ ‖ ೨೪ ‖

ಏತಾಂ ದೃಷ್ಟ್ವಾ ಜಲೇ ಮಗ್ನಃ ಸಂಸಾರಾದ್ಧಿ ಪ್ರಮುಚ್ಯತೇ ।
ಇಮಂ ಚ ದೃಷ್ಟ್ವಾ ತೇ ಸೂತೋ ಜಲೇ ಮಗ್ನೋ ನರೋತ್ತಮ ‖ ೨೫ ‖

ಪ್ರವಿಷ್ಟೋಽಯಂ ಪುನರಿಮಂ ಹಂತುಮಿಚ್ಛನ್ನರಾಧಿಪ ।
ಪ್ರಾಪ್ತವಾನಸಿ ದುರ್ಬುದ್ಧೇ ಕುಷ್ಠಿತ್ವಂ ಪಾಪಪೂರುಷ ‖ ೨೬ ‖

ದೃಷ್ಟವಾನೇತತ್ತ್ವಯಾ ಯಸ್ಮಾತ್ ತ್ವಂ ಸಾಧ್ವಿತಿ ತತಃ ಪ್ರಭೋ ।
ಮಯೋಕ್ತೋ ಮೋಹಮಾಪನ್ನಸ್ತೇನಾಸಾಧುರಿತೀರಿತಃ ‖ ೨೭ ‖

---

೨೩. ಈ ಸರೋವರದಲ್ಲಿ ಇದು ಎಲ್ಲೋ ಆರುತಿಂಗಳು ಕಾಣುತ್ತದೆ.

೨೪. ಇದನ್ನು ನೋಡಿದ ಕೂಡಲೆ ನೀರಿನಲ್ಲಿ ಪ್ರವೇಶಿಸುವ ಮನುಷ್ಯನು ಸರ್ವಪಾಪಗಳನ್ನು ಕಳೆದುಕೊಂಡು, ಉತ್ತಮವಾದ ನಿರ್ವಾಣಕ್ಕೆ ಅರ್ಹನಾಗುತ್ತಾನೆ. ಬ್ರಹ್ಮನ ಮೂರ್ತಿಯು ಹಿಂದಿನ ಅವಸ್ಥೆಯಲ್ಲಿ ನೀರಿನಲ್ಲಿದ್ದಿತು.

೨೫. ಇದವನ್ನು ನೋಡಿ ನೀರಿನಲ್ಲಿ ಮುಳುಗಿದವನು ಜನನ ಮರಣಗಳಿಂದ ಮುಕ್ತನಾಗುವನು. ರಾಜನೇ ನಿನ್ನ ಸಾರಥಿಯು ಇದನ್ನು ನೋಡಿ ನೀರಿನಲ್ಲಿ ಮುಳುಗಿದನು.

೨೬. ಪಾಪಪುರುಷನೇ, ದುರ್ಬುದ್ಧಿಯುಳ್ಳವನೇ, ಇಲ್ಲಿಗೆ ಬಂದ ನೀನು ಇದನ್ನು ಕೊಲ್ಲಲು ಇಚ್ಛಿಸಿದೆ. ಆದುದರಿಂದ ಕುಷ್ಠಿತ್ವವನ್ನು ಪಡೆದಿದ್ದೀಯೆ.

೨೭. ಪ್ರಭುವೇ, ನೀನು ಇದನ್ನು ನೋಡಿದುದರಿಂದ ಸಾಧುವೆಂದೆನು. ಬಳಿಕ ನೀನು ಮೋಹವನ್ನು ಪಡೆದುದರಿಂದ ಅಸಾಧುವೆಂದು ಹೇಳಿಸಿಕೊಂಡೆ.

*ಇದಂ ಚ ಕಾರಣಂ ಚಾನ್ಯತ್ಕುಷ್ಠಸ್ಯ ಶೃಣು ಪಾರ್ಥಿವ || ೨೮ ||

ಆದಿತ್ಯಃ ಪದ್ಮಗರ್ಭೇಽಸ್ಮಿನ್ ಸ್ವಯಮೇವ ವ್ಯವಸ್ಥಿತಃ |
ತಂ ದೃಷ್ಟ್ವಾ ತತ್ತ್ವತೋ ಭಾವಃ ಪರಮಾತ್ಮೈಷ ಶಾಶ್ವತಃ |
ಧಾರಯಾಮಿ ಶಿರಸ್ಯೇನಂ ತತಃ ಖ್ಯಾತಿರ್ಭವಿಷ್ಯತಿ || ೨೯ ||

ಇತೀಮಂ ಭಾವಮಾಸ್ಥಾಯ ಸೂತೋಽಯಂ ಪ್ರೇಷಿತಸ್ತ್ವಯಾ |
ತತ್ಕ್ಷಣಾದೇವ ಸ ಮೃತಃ ತ್ವಂ ಚ ಕುಷ್ಠಿತ್ವಮಾಗತಃ || ೩೦ ||

ತಸ್ಮಾತ್ತ್ವಮಪಿ ರಾಜೇಂದ್ರ ವ್ರತಮೇತತ್ಸಮಾಚರ |
ವ್ರತಸ್ಯಾಸ್ಯ ಪ್ರಭಾವೇನ ಕುಷ್ಠರೋಗಾತ್ಪ್ರಮುಚ್ಯಸೇ || ೩೧ ||

ಬ್ರಹ್ಮಪುತ್ರೋ ವದನ್ನೇವಂ ನೃಪಾದಂತರ್ಹಿತೋಽಭವತ್ || ೩೨ ||

---

೨೮. ದೊರೆಯೇ, ನಿನ್ನ ಕುಷ್ಠಕ್ಕೆ ಇನ್ನೊಂದು ಬೇರೆಯ ಕಾರಣವೂ ಇದೆ. ಕೇಳು.

೨೯–೩೦. ಈ ಪದ್ಮದೊಳಗೆ ಸೂರ್ಯನು ಸಾಕ್ಷಾತ್ತಾಗಿರುವನು. ಅವನು ನಿಜವಾಗಿ ಶಾಶ್ವತನಾದ ಪರಮಾತ್ಮನೇ, ಅವನನ್ನು ನೋಡಿ(ಬಳಿಕ)ನೀನು "ಇದನ್ನು ತಲೆಯಲ್ಲಿ ಧರಿಸುತ್ತೇನೆ. ಬಳಿಕ ಅದರಿಂದ ಯಶಸ್ಸುಂಟಾಗುವುದು" ಎಂಬ ಅಭಿಪ್ರಾಯದಿಂದ, ಇದನ್ನು ತರಲು ನಿನ್ನ ಸಾರಥಿಯನ್ನೂ ಕಳುಹಿಸಿದೆ ಕೂಡಲೆ ಅವನು ಮೃತನಾದನು. ನೀನು ಕುಷ್ಠರೋಗವುಳ್ಳವನಾದೆ.

೩೧. ಆದುದರಿಂದ ರಾಜೇಂದ್ರನೇ, ನೀನೂ ಅರೋಗ್ಯವ್ರತವನ್ನು ಮಾಡು. ಆದರ ಪ್ರಭಾವದಿಂದ ನಿನಗೆ ಕುಷ್ಠರೋಗವು ನಿವಾರಣೆಯಾಗುವುದು.

೩೨. ವಸಿಷ್ಠಋಷಿಯು ಹೀಗೆ ಹೇಳುತ್ತಾ ರಾಜನ ಕಣ್ಣಿಗೆ ಮರೆಯಾದನು (ಅಂತರ್ಹಿತನಾದನು)

---

* ೩೨, ೩೩, ೩೪ ನೆಯ ಶ್ಲೋಕಗಳು, ಬೊಂಬಾಯಿ ಕಲ್ಕತ್ತಾಗಳಲ್ಲಿ ಅಚ್ಚಾಗಿರುವ ಪ್ರತಿಗಳಲ್ಲಿ ಕ್ರಮವಾಗಿ ೨೮, ೨೯, ೩೦ ನೆಯ ಶ್ಲೋಕಗಳಾಗಿವೆ. ೨೮, ೨೯, ೩೦, ೩೧ ನೆಯ ಶ್ಲೋಕಗಳು ೩೧, ೩೨, ೩೩, ೩೪ ನೆಯ ಶ್ಲೋಕಗಳಾಗಿವೆ. ಈ ಕ್ರಮದಂತೆ ಅನರಣ್ಯ ಮಹಾರಾಜನೊಡನೆ ಮಾತನಾಡುತ್ತಿದ್ದ ವಸಿಷ್ಠರು ಅಂತರ್ಧಾನರಾದರೆಂದ ಬಳಿಕ ಪುನಃ ಅನರಣ್ಯ ನೊಡನೆ ಅವರಾಡುವ ಮಾತುಗಳೇ ಇರುವುದು ಉಚಿತವಾಗಿಲ್ಲವಾದುದರಿಂದ ವಸಿಷ್ಠರ ಮಾತು ಮುಗಿಯುವವರೆಗೆ ಸರಿಯಾಗಿರುವಂತೆ ಶ್ಲೋಕಗಳ ಅನುಪೂರ್ವಿಯನ್ನು ವ್ಯತ್ಯಾಸಪಡಿಸಿದೆ.

ಸ ತದ್ವಚನಮಾಕರ್ಣ್ಯ ರಾಜಾಪಿ ಪರಮೇಶ್ವರಂ ।
ಅಹನ್ಯಹನಿ ಚಾಗಚ್ಛತ್ತಂ ಪುನರ್ದೃಷ್ಟವಾನಪಿ ॥ ೩೩ ॥

ದೇವಾ ಅಪಿ ವದಂತ್ಯೇತೇ ಪದ್ಮಂ ಕಾಂಚನಮುತ್ತಮಂ ।
ಮಾನಸೇ ಬ್ರಹ್ಮಪದ್ಮಂ ತು ದೃಷ್ಟ್ವಾ ಚಾತ್ರಗತಂ ಹರಿಂ ॥
ಪ್ರಾಪ್ಸ್ಯಾಮಸ್ತತ್ಪರಂ ಬ್ರಹ್ಮ ಯದ್ಗತ್ವಾ ನ ಪುನರ್ಭವೇತ್ ॥ ೩೪ ॥

ಇತಿ ಶ್ರೀ ವರಾಹಪುರಾಣೇಽಗಸ್ತ್ಯಗೀತಾಸು ಆರೋಗ್ಯವ್ರತಂ ನಾಮ
ದ್ವಿಷಷ್ಟಿತಮೋಽಧ್ಯಾಯಃ

---

೩೩. ಆ ಅನರಣ್ಯರಾಜನೂ ವಸಿಷ್ಠನ ಮಾತನ್ನು ಕೇಳಿ, ದಿನ ದಿನವೂ ಆ ಸರೋವರಕ್ಕೆ ಬಂದು ಕಮಲದಲ್ಲಿರುವ ಪರಮೇಶ್ವರನನ್ನು ತಿರುಗಿ ಸಂದರ್ಶಿಸಿದನು.

೩೪. ದೇವತೆಗಳು ಕೂಡ "ಮಾನಸ ಸರೋವರದಲ್ಲಿರುವ ಬ್ರಹ್ಮನ ನೆಲೆಯಾದ ಉತ್ತಮವಾದ ಹೊಂದಾವರೆಯನ್ನೂ ಆದರಲ್ಲಿರುವ ಹರಿಯನ್ನೂ ಸಂದರ್ಶಿಸಿ, ತಿರುಗಿ ಜನ್ಮವಿಲ್ಲದಂತೆ ಪರಬ್ರಹ್ಮನನ್ನು ಪಡೆಯುವೆವು" ಎಂದು ಹೇಳುತ್ತಾರೆ.

ಅಧ್ಯಾಯದ ಸಾರಾಂಶ :—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ಆದಿತ್ಯ ತೃಪ್ತಿಕರವಾದ ಆರೋಗ್ಯ ವ್ರತ ವಿಚಾರವನ್ನೂ, ಅದರ ಫಲವನ್ನೂ ಹೇಳುತ್ತ, ಅನರಣ್ಯನೆಂಬ ಮಹಾರಾಜನು ಕುಷ್ಠರೋಗವನ್ನು ಪಡೆದು, ವಸಿಷ್ಠರ ಉಪದೇಶದಿಂದ ಆರೋಗ್ಯ ವ್ರತವನ್ನು ಮಾಡಿ, ಅದನ್ನು ಹೋಗಲಾಡಿಸಿಕೊಂಡ ಕಥೆಯನ್ನೂ ಹೇಳಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತೆರಡನೆಯ ಅಧ್ಯಾಯ.

|| ಶ್ರೀಃ ||

-x-

ತ್ರಿಷಷ್ಟಿತಮೋಽಧ್ಯಾಯಃ

ಅಥ ಪುತ್ರಪ್ರಾಪ್ತಿವ್ರತಂ

|| ಅಗಸ್ತ್ಯ ಉವಾಚ ||

ಅಥಾಪರಂ ಮಹಾರಾಜ ಪುತ್ರಪ್ರಾಪ್ತಿವ್ರತಂ ಶುಭಂ ।
ಕಥಯಾಮಿ ಸಮಾಸೇನ ತನ್ಮೇ ನಿಗದತಃ ಶೃಣು || ೧ ||

ಮಾಸೇ ಭಾದ್ರಪದೇ ಯಾ ತು ಕೃಷ್ಣಪಕ್ಷೇ ನರೇಶ್ವರ ।
ಅಷ್ಟಮ್ಯಾಮುಪವಾಸೇನ ಪುತ್ರಪ್ರಾಪ್ತಿವ್ರತಂ ಹಿ ತತ್ || ೨ ||

ಸಪ್ತಮ್ಯಾಂ ಚೈವ ಸಂಕಲ್ಪ್ಯ ಅಷ್ಟಮ್ಯಾಮರ್ಚಯೇದ್ಧರಿಂ ।
ದೇವಕ್ಯುತ್ಸಂಗಗಂ ವಿಷ್ಣುಂ ಮಾತೃಭಿಃ ಪರಿವೇಷ್ಟಿತಂ ||
ಪ್ರಭಾತೇ ವಿಮಲೇಽಷ್ಟಮ್ಯಾಮರ್ಚಯೇತ್ಪ್ರಯತೋ ಹರಿಂ || ೩ ||

ಅರವತ್ತಮೂರನೆಯ ಅಧ್ಯಾಯ

ಪುತ್ರಪ್ರಾಪ್ತಿ ವ್ರತ

೧. ಅಗಸ್ತ್ಯಮುನಿ—ಮಹಾರಾಜನೇ, ಇನ್ನು ಪುತ್ರಪ್ರಾಪ್ತಿವ್ರತವೆಂಬ ಶುಭವಾದ ಮತ್ತೊಂದು ವ್ರತವನ್ನು ಸಂಗ್ರಹವಾಗಿ ಹೇಳುತ್ತೇನೆ ಕೇಳು.

೨. ದೊರೆಯೇ, ಪುತ್ರಪ್ರಾಪ್ತಿವ್ರತವು ಭಾದ್ರಪದಮಾಸದ ಕೃಷ್ಣಪಕ್ಷದ ಅಷ್ಟಮಿಯಲ್ಲಿ ಉಪವಾಸದಿಂದ ನಡೆಯಬೇಕಾದುದು.

೩-೪. ಸಪ್ತಮಿಯ ದಿನ ಸಂಕಲ್ಪವನ್ನು ಮಾಡಿ, ಅಷ್ಟಮಿಯ ದಿನ ಬೆಳಗಾಗುತ್ತಲೂ, ಬೇರೆಯ ತಾಯಿಯರಿಂದೊಡಗೂಡಿ, ದೇವಕಿಯ ತೊಡೆಯ

ಪ್ರಾಗ್ವಿಧಾನೇನ ಗೋವಿಂದಮರ್ಚಯಿತ್ವಾ ವಿಧಾನತಃ |
ತತೋ ಯವೈಃ ಕೃಷ್ಣತಿಲೈಃ ಸಘೃತೈರ್ಹೋಮಯೇದ್ದಧಿ ॥ ೪ ॥

ಬ್ರಾಹ್ಮಣಾನ್ಭೋಜಯೇದ್ಭಕ್ತ್ಯಾ ಯಥಾಶಕ್ತ್ಯಾ ಸದಕ್ಷಿಣಂ ॥ ೫ ॥

ತತಃ ಸ್ವಯಂ ತು ಭುಂಜೀತ ಪ್ರಥಮಂ ಬಿಲ್ವಮುತ್ತಮಂ |
ಪಶ್ಚಾದ್ಯಥೇಷ್ಟಂ ಭುಂಜೀತ ಸ್ನೇಹೈಃ ಸರ್ವರಸೈರ್ಯುತಂ ॥ ೬ ॥

ಪ್ರತಿಮಾಸಮನೇನೈವ ವಿಧಿನೋಪೋಷ್ಯ ಮಾನವಃ |
ಕೃಷ್ಣಾಷ್ಟಮ್ಯಾಂ ವ್ರತಂ ಕೃತ್ವಾ ಅಪುತ್ರಃ ಪುತ್ರವಾನ್ಭವೇತ್ ॥ ೭ ॥

ಶ್ರೂಯತೇ ಚ ಪುರಾ ರಾಜಾ ಶೂರಸೇನಃ ಪ್ರತಾಪವಾನ್ ।
ಅಪುತ್ರಃ ಸ ತಪಸ್ತೇಪೇ ಪರ್ವತೇ ಚ ಹಿಮಾಲಯೇ ॥ ೮ ॥

ಮೇಲಿರುವ ಗೋವಿಂದನಾದ ವಿಷ್ಣುವನ್ನು ಹಿಂದಿನ ವಿಧಾನದಿಂದ ಕ್ರಮವಾಗಿ ಪೂಜಿಸಿ, ಬಳಿಕ ತುಪ್ಪದೊಡನೆ ಯವೆಯನ್ನೂ, ಕರಿಯ ಎಳ್ಳನ್ನೂ, ಮೊಸರನ್ನೂ ಹೋಮಮಾಡಬೇಕು.

೫. ಬ್ರಾಹ್ಮಣರಿಗೆ ಭಕ್ತಿಯಿಂದ ಭೋಜನವನ್ನು ಮಾಡಿಸಿ ಯಥಾ ಶಕ್ತಿಯಾಗಿ ದಕ್ಷಿಣೆಯನ್ನೂ ಕೊಡಬೇಕು.

೬. ಬಳಿಕ ವ್ರತಿಯು ತಾನೂ ಮೊದಲು ಉತ್ತಮವಾದ ಬಿಲ್ವವನ್ನು ತಿಂದು, ಆಮೇಲೆ ಬೇಕಾದ ಹಾಗೆ ತುಪ್ಪ ಎಣ್ಣೆಗಳಿಂದಲೂ, ಸರ್ವರಸಗಳಿಂದಲೂ ಕೂಡಿದ ಆಹಾರವನ್ನು ಊಟಮಾಡಬಹುದು.

೭ ಪ್ರತಿತಿಂಗಳ ಕೃಷ್ಣಪಕ್ಷದ ಅಷ್ಟಮಿಯಲ್ಲಿಯೂ ಇದೇ ಕ್ರಮದಿಂದ ಉಪವಾಸಮಾಡಿ, ವ್ರತವನ್ನು ಮಾಡುವ ಅಪುತ್ರವಂತನು(ಗಂಡು ಮಕ್ಕಳಿಲ್ಲದವನು)ಪುತ್ರವಂತನಾಗುವನು.

೮. ಪೂರ್ವದಲ್ಲಿ, ಪ್ರತಾಪಶಾಲಿಯಾದ ಶೂರಸೇನರಾಜನು ಗಂಡು ಮಕ್ಕಳಿಲ್ಲದವನಾಗಿ, ಹಿಮಾಲಯ ಪರ್ವತದಲ್ಲಿ ತಪಸ್ಸನ್ನು ಮಾಡಿದನು.

ತಸ್ಯೈವಂ ಕುರ್ವತೋ ದೇವೋ ವ್ರತಮೇತಜ್ಜಗಾದ ಹ |
ಸೋಽಪ್ಯೇತತ್ಕೃತವಾನ್ರಾಜಾ ಪುತ್ರಂ ಚೈವೋಪಲಬ್ಧವಾನ್ ||
ವಸುದೇವಂ ಮಹಾಭಾಗಮನೇಕವ್ರತಯಾಜಿನಂ || ೯ ||

ತಂ ಲಬ್ಧ್ವಾ ಸೋಽಪಿ ರಾಜರ್ಷಿಃ ಪರಂ ನಿರ್ವಾಣಮಾಪ್ತವಾನ್ || ೧೦ ||

ಏವಂ ಕೃಷ್ಣಾಷ್ಟಮೀ ರಾಜನ್ ಮಯಾ ತೇ ಪರಿಕೀರ್ತಿತಾ |
ಸಂವತ್ಸರಾಂತೇ ದಾತವ್ಯಂ ಗೋಯುಗ್ಮಂ ತು ದ್ವಿಜಾತಯೇ ||
ಏತತ್ಪುತ್ರವ್ರತಂ ನಾಮ ಮಯಾ ತೇ ಪರಿಕೀರ್ತಿತಂ || ೧೧ ||

ಏತತ್ಕೃತ್ವಾ ನರಃ ಪಾಪೈಃ ಸರ್ವೈರೇವ ಪ್ರಮುಚ್ಯತೇ || ೧೨ ||

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಪುತ್ರಪ್ರಾಪ್ತಿವ್ರತಂ ನಾಮ ತ್ರಿಷಷ್ಟಿತಮೋಽಧ್ಯಾಯಃ

---

೯. ಹಾಗೆ ತಪಸ್ಸನ್ನು ಮಾಡುತ್ತಿದ್ದ ಅವನಿಗೆ(ಪ್ರತ್ಯಕ್ಷನಾದ)ದೇವನು ಈ ವ್ರತವನ್ನು ಮಾಡುವಂತೆ ಹೇಳಿದನು. ಆ ರಾಜನೂ ಇದನ್ನು ಮಾಡಿ, ಮಹಾಭಾಗ್ಯಶಾಲಿಯೂ, ಅನೇಕ ವ್ರತಗಳನ್ನು ಮಾಡುವವನೂ ಆದ ವಸುದೇವ ನೆಂಬ ಪುತ್ರನನ್ನೂ ಪಡೆದನು.

೧೦. ಆ ಮಗನನ್ನು ಪಡೆದು, ಆ ರಾಜರ್ಷಿಯು ಉತ್ತಮವಾದ ನಿರ್ವಾಣವನ್ನು ಪಡೆದನು.

೧೧. ದೊರೆಯೇ, ಹೀಗೆ ಕೃಷ್ಣಾಷ್ಟಮಿಯಲ್ಲಿ ಮಾಡಬೇಕಾದ ಪುತ್ರಪ್ರಾಪ್ತಿ ವ್ರತವನ್ನು ನಾನು ನಿನಗೆ ಹೇಳಿದ್ದೇನೆ. ಈ ವ್ರತವನ್ನು ಮಾಡುವವನು ವರ್ಷದ ಕಡೆಯಲ್ಲಿ ಬ್ರಾಹ್ಮಣರಿಗೆ ಎರಡು ಹಸುಗಳನ್ನು ದಾನಕೊಡಬೇಕು.

೧೨. ಈ ವ್ರತವನ್ನು ಮಾಡಿದ ಮನುಷ್ಯನು ಸರ್ವಪಾಪಗಳನ್ನೂ ಕಳೆದು ಕೊಳ್ಳುವನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ಭಾದ್ರಪದಮಾಸದ ಕೃಷ್ಣಾಷ್ಟಮಿಯ ದಿನ ಆರಂಭಿಸಿ ಮಾಡಬೇಕಾದ ಪುತ್ರಪ್ರಾಪ್ತಿವ್ರತದ ವಿಚಾರವನ್ನು ಹೇಳಿರು ವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತಮೂರನೆಯ ಅಧ್ಯಾಯ

|| ಶ್ರೀಃ ||

–X–

ಚತುಷ್ಷಷ್ಟಿತಮೋಧ್ಯಾಯಃ

ಅಥ ಶೌರ್ಯವ್ರತಂ

|| ಅಗಸ್ತ್ಯ ಉವಾಚ ||

ಅಥಾಪರಂ ಪ್ರವಕ್ಷ್ಯಾಮಿ ಶೌರ್ಯವ್ರತಮನುತ್ತಮಂ |
ಯೇನ ಭೀರೋರಪಿ ಮಹಚ್ಛೌರ್ಯಂ ಭವತಿ ತತ್ಕ್ಷಣಾತ್ || ೧ ||

ಮಾಸಿ ಚಾಶ್ವಯುಜೇ ಶುದ್ಧಾಂ ನವಮೀಂ ಸಮುಪೋಷಯೇತ್ |
ಸಪ್ತಮ್ಯಾಂ ಕೃತಸಂಕಲ್ಪಃ ಸ್ಥಿತ್ವಾಷ್ಟಮ್ಯಾಂ ನಿರೋದನಃ || ೨ ||

ನವಮ್ಯಾಂ ಪ್ರಾಶಯೇತ್ಪಿಷ್ಟಂ ಪ್ರಥಮಂ ಭಕ್ತಿತೋ ನೃಪ |
ಬ್ರಾಹ್ಮಣಾನ್ಭೋಜಯೇದ್ಭಕ್ತ್ಯಾ ದೇವೀಂ ಚೈವ ತು ಪೂಜಯೇತ್ ||
ದುರ್ಗಾಂ ದೇವೀಂ ಮಹಾಭಾಗಾಂ ಮಹಾಮಾಯಾಂ ಮಹಾಪ್ರಭಾಂ ||೩||

ಅರವತ್ತನಾಲ್ಕನೆಯ ಅಧ್ಯಾಯ

ಶೌರ್ಯವ್ರತ

೧. ಅಗಸ್ತ್ಯಮುನಿ—ಇನ್ನು ಯಾವುದರಿಂದ ಹೇಡಿಗೂ ಒಡನೆಯೇ ಮಹಾಶೌರ್ಯವುಂಟಾವುದೋ ಅಂತಹ ಅತ್ಯುತ್ತಮವಾದ ಶೌರ್ಯವ್ರತವನು ಹೇಳುತ್ತೇನೆ. ಕೇಳು.

೨-೩. ಆಶ್ವಯುಜಮಾಸದ ಶುದ್ಧಸಪ್ತಮಿಯದಿನ ಸಂಕಲ್ಪವನ್ನು ಮಾಡಿ, ಅಷ್ಟಮಿಯದಿನ ನಿರಾಹಾರನಾಗಿದ್ದು, ನವಮಿಯದಿನ ಭಕ್ತಿಯಿಂದ ಮಹಾಭಾಗೆಯೂ, ಮಹಾಮಾಯೆಯೂ, ಮಹಾಪ್ರಭೆಯೂ ಆದ ದುರ್ಗಾದೇವಿಯನ್ನು ಪೂಜಿಸಬೇಕು. ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ವ್ರತಿಯು ಮೊದಲು ಪಿಷ್ಟವನ್ನು ಭಕ್ತಿಯಿಂದ ತಿನ್ನಬೇಕು.

ಏವಂ ಸಂವತ್ಸರಂ ಯಾವದುಪೋಷ್ಯೇತಿ ವಿಧಾನತಃ |
ವ್ರತಾಂತೇ ಭೋಜಯೇದ್ಧೀಮಾನ್ ಯಥಾಶಕ್ತ್ಯಾ ಕುಮಾರಿಕಾಃ || ೪ ||

ಹೇಮವಸ್ತ್ರಾದಿಭಿಸ್ತಾಸ್ತು ಭೂಷಯಿತ್ವಾ ತು ಶಕ್ತಿತಃ |
ಪಶ್ಚಾತ್ ಕ್ಷಮಾಪಯೇತ್ತಾಂತು ದೇವೀ ಮೇ ಪ್ರೀಯತಾಮಿತಿ || ೫ ||

ಏವಂ ಕೃತೇ ಭ್ರಷ್ಟರಾಜ್ಯೋ ಲಭೇದ್ರಾಜ್ಯಂ ನ ಸಂಶಯಃ |
ಅವಿದ್ಯೋ ಲಭತೇ ವಿದ್ಯಾಂ ಭೀತಃ ಶೌರ್ಯಂ ಚ ವಿಂದತಿ || ೬ ||

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಶೌರ್ಯವ್ರತಂ ನಾಮ
ಚತುಷ್ಷಷ್ಟಿತಮೋಽಧ್ಯಾಯಃ

೪-೫. ರಾಜನೇ, ಹೀಗೆ ವರ್ಷದವರೆಗೂ, ನಿಯಮದಂತೆ ಉಪವಾಸ ಮಾಡಿ ವ್ರತದ ಕಡೆಯಲ್ಲಿ ತನ್ನ ಶಕ್ತಿಯಿರುವಷ್ಟು ಜನ ಕನ್ಯೆಯರಿಗೆ ಭೋಜನ ವನ್ನು ಮಾಡಿಸಿ, ಸ್ವರ್ಣಾಭರಣವಸ್ತ್ರಾದಿಗಳಿಂದಲಂಕರಿಸಿ ಬಳಿಕ ಅವರಿಂದ 'ದೇವಿಯು ಪ್ರೀತಳಾಗಲಿ.' ಎಂದು ಹೇಳಿಸಬೇಕು

೬. ಹೀಗೆ ಮಾಡಿದರೆ ರಾಜ್ಯವನ್ನು ಕಳೆದುಕೊಂಡ ರಾಜನು ಸಂಶಯ ವಿಲ್ಲದೆ ಮತ್ತೆ ರಾಜ್ಯವನ್ನು ಪಡೆಯುವನು. ವಿದ್ಯೆಯಿಲ್ಲದವನು ವಿದ್ಯಾವಂತ ನಾಗುವನು. ಹೇಡಿಯು ಶೌರ್ಯವನ್ನು ಪಡೆಯುವನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ದುರ್ಗಾದೇವಿಯನ್ನೊಲಿಸುವ ಶೌರ್ಯ ವ್ರತವಿಚಾರವನ್ನು ಹೇಳಿದನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತನಾಲ್ಕ ನೆಯ ಅಧ್ಯಾಯ.

॥ ಶ್ರೀಃ ॥

–x–

ಪಂಚಷಷ್ಟಿತಮೋಧ್ಯಾಯಃ

ಅಥ ಸಾರ್ವಭೌಮವ್ರತಂ

॥ ಅಗಸ್ತ್ಯ ಉವಾಚ ॥

ಸಾರ್ವಭೌಮವ್ರತಂ ಚಾನ್ಯತ್ಕಥಯಾಮಿ ಸಮಾಸತಃ ।
ಯೇನ ಸಮ್ಯಕ್ಕೃತೇನಾಶು ಸಾರ್ವಭೌಮೋ ನೃಪೋ ಭವೇತ್ ॥ ೧ ॥

ಕಾರ್ತಿಕಸ್ಯ ತು ಮಾಸಸ್ಯ ದಶಮೀ ಶುಕ್ಲಪಕ್ಷಗಾ ।
ತಸ್ಯಾಂ ನಕ್ತಾಶನೋ ಭೂತ್ವಾ ದಿಕ್ಷು ಶುದ್ಧಬಲಿಂ ಹರೇತ್ ॥ ೨ ॥

ವಿಚಿತ್ರೈಃ ಕುಸುಮೈರ್ಭಕ್ತ್ಯಾ ಪೂಜಯಿತ್ವಾ ದ್ವಿಜೋತ್ತಮಾನ್ ।
ದಿಶಾಂ ತು ಪ್ರಾರ್ಥನಾಂ ಕುರ್ಯಾನ್ಮಂತ್ರೇಣಾನೇನ ಸುವ್ರತಃ ॥ ೩ ॥

ಅರವತ್ತೈದನೆಯ ಅಧ್ಯಾಯ

ಸಾರ್ವಭೌಮವ್ರತ

೧. ಅಗಸ್ತ್ಯಮುನಿ—ದೊರೆಯೇ, ರಾಜನು ಯಾವುದನ್ನು ಮಾಡಿದರೆ ಬೇಗನೆ ಚಕ್ರವರ್ತಿಯಾಗುವನೋ ಆ ಸಾರ್ವಭೌಮವ್ರತವೆಂಬ ಬೇರೊಂದನ್ನು ಸಂಗ್ರಹವಾಗಿ ಹೇಳುತ್ತೇನೆ.

೨–೪. ಸುವ್ರತಿಯು ಕಾರ್ತಿಕಮಾಸದ ಶುಕ್ಲಪಕ್ಷದ ದಶಮಿಯದಿನ ಹಗಲು ಭೋಜನಮಾಡದೆ ಭಕ್ತಿಯಿಂದ ಬ್ರಾಹ್ಮಣೋತ್ತಮರನ್ನು ಪೂಜಿಸಿ, ವಿಚಿತ್ರವಾದ ಹೂಗಳಿಂದ ಶುದ್ಧವಾಗಿ ದಿಕ್ಕುಗಳನ್ನು ಪೂಜಿಸಿ, 'ಪೂಜ್ಯೆಯರಾದ ನೀವೆಲ್ಲರೂ ನನಗೆ ಪ್ರತಿಜನ್ಮದಲ್ಲಿಯೂ ಸಿದ್ಧಿಸಿರಿ' ಎಂಬ ಅರ್ಥದ ಮೇಲಿನ

ಸರ್ವಾ ಭವತ್ಯಸ್ಸಿಧ್ಯಂತು ಮಮ ಜನ್ಮನಿ ಜನ್ಮನಿ |
ಏವಮುಕ್ತ್ವಾ ಬಲಿಂ ತಾಭ್ಯೋ ದತ್ವಾ ಶುದ್ಧೇನ ಚೇತಸಾ || ೪ ||

ತತೋ ರಾತ್ರೌ ಸ ಭುಂಜೀತ ದಧ್ಯನ್ನಂ ತು ಸುಸಂಸ್ಕೃತಂ ।
ಪೂರ್ವಂ ಪಶ್ಚಾದ್ಯಥೇಷ್ಟಂ ತು ಏವಂ ಸವತ್ಸರಂ ನೃಪ ॥
ಯಃ ಕರೋತಿ ನರೋ ನಿತ್ಯಂ ತಸ್ಯ ದಿಗ್ವಿಜಯೋ ಭವೇತ್ || ೫ ||

ಏಕಾದಶ್ಯಾಂ ನಿರಾಹಾರೋ ನರಃ ಕುರ್ಯಾದ್ಯಥಾವಿಧಿ |
ಮಾರ್ಗಶೀರ್ಷೇ ಶುಕ್ಲಪಕ್ಷಾದಾರಭ್ಯಾಬ್ದಂ ವಿಚಕ್ಷಣಃ ॥
ತದ್ವ್ರತಂ ಧನದಸ್ಯೇಷ್ಟಂ ಕೃತಂ ವಿತ್ತಂ ಪ್ರಯಚ್ಛತಿ || ೬ ||

ಏಕಾದಶ್ಯಾಂ ನಿರಾಹಾರೋ ಯೋ ಭುಂಕ್ತೇ ದ್ವಾದಶೀದಿನೇ |
ಶುಕ್ಲೇ ವಾಪ್ಯಥವಾ ಕೃಷ್ಣೇ ತದ್ವ್ರತಂ ವೈಷ್ಣವಂ ಮಹತ್ || ೭ ||

ಏವಂ ಚೀರ್ಣಂ ಸುಘೋರಾಣಿ ಹಂತಿ ಪಾಪಾನಿ ಪಾರ್ಥಿವ || ೮ ||

ಮಂತ್ರದಿಂದ ಪ್ರಾರ್ಥನೆಯನ್ನು ಮಾಡಿ ಶುದ್ಧಮನಸ್ಸಿನಿಂದ ಆ ದಿಗಂಗೆಯರಿಗೆ ಪುನಃ ಪೂಜೆಯನ್ನು ಮಾಡಬೇಕು.

೫. ಬಳಿಕ ರಾತ್ರಿಯಲ್ಲಿ ಶುದ್ಧವಾಗಿಯೂ, ಚೆನ್ನಾಗಿಯೂ ಇರುವ ಮೊಸರನ್ನವನ್ನು ಮೊದಲು ತಿಂದು, ಆಮೇಲೆ ಬೇಕಾದುದನ್ನು ಊಟಮಾಡಬಹುದು. ಹೀಗೆ ಒಂದು ವರ್ಷ ನಿತ್ಯವೂ ಮಾಡುವವನಿಗೆ ದಿಗ್ವಿಜಯವುಂಟಾಗುವುದು.

೬. ಮಾರ್ಗಶಿರಮಾಸದ ಶುಕ್ಲಪಕ್ಷದ ಮತ್ತು ಕೃಷ್ಣಪಕ್ಷದ ಏಕಾದಶಿಯ ದಿನ ನಿರಾಹಾರನಾಗಿದ್ದು ಮಾಡುವ ವ್ರತವು ಕುಬೇರನಿಗೆ ಇಷ್ಟವಾದುದು ಕುಬೇರನು ವ್ರತಿಗೆ ರಸವನ್ನು ಅನುಗ್ರಹಿಸುವನು.

೭. ಶುಕ್ಲಪಕ್ಷದ ಅಥವಾ ಕೃಷ್ಣಪಕ್ಷದ ಏಕಾದಶಿಯದಿನ ನಿರಾಹಾರನಾಗಿದ್ದು, ದ್ವಾದಶಿಯದಿನ ಪಾರಣೆಯನ್ನು ಮಾಡುವುದು ಉತ್ತಮವಾದ ವೈಷ್ಣವ ವ್ರತವೆನಿಸುವುದು.

೮. ರಾಜನೇ ಹೀಗೆ ಮಾಡುವ ವ್ರತವು ಅತಿಘೋರವಾದ ಪಾಪಗಳನ್ನೂ ನಾಶಮಾಡುವುದು.

ತ್ರಯೋದಶ್ಯಾಂ ತು ನಕ್ತೇನ ಧರ್ಮವ್ರತಮುಥೋಚ್ಯತೇ ।
ಶುಕ್ಲಪಕ್ಷೇ ಫಾಲ್ಗುನಸ್ಯ ತಥಾರಭ್ಯ ವಿಚಕ್ಷಣಃ ॥ ೯ ॥

ರೌದ್ರವ್ರತಂ ಚತುರ್ದಶ್ಯಾಂ ಕೃಷ್ಣಪಕ್ಷೇ ವಿಶೇಷತಃ ।
ಮಾಘಮಾಸಾತ್ತಥಾರಭ್ಯ ಪೂರ್ಣಂ ಸಂವತ್ಸರಂ ನೃಪ ॥ ೧೦ ॥

ಇದಂ ವ್ರತಂ ತು ಪಂಚಮ್ಯಾಂ ಶುಕ್ಲಾಯಾಂ ನಕ್ತಭೋಜನಂ ॥ ೧೧ ॥

ಪಿತೃವ್ರತಮಮಾಯಾಂ ಸ್ಯಾದಿತಿ ರಾಜನ್ನಥೇರಿತಂ ॥ ೧೨ ॥

ದಶಪಂಚ ಚ ವರ್ಷಾಣಿ ಯ ಏವಂ ಕುರುತೇ ನೃಪ ।
ತಿಥಿವ್ರತಾದಿಕಂ ತಸ್ಯ ಫಲಂ ಸ್ಯಾತತ್ಪ್ರಮಾಣತಃ ॥
ಅಶ್ವಮೇಧಸಹಸ್ರಾಣಿ ರಾಜಸೂಯಶತಾನಿ ಚ ॥ ೧೩ ॥

ಇಷ್ಟಾನಿ ಯೇನ ರಾಜೇಂದ್ರ ಕಲ್ಪೋಕ್ತವ್ರತಕಾರಿಣಾ ।
ಏಕಮೇವ ಕೃತಂ ಹಂತಿ ವ್ರತಂ ಪಾಪಾನಿ ನಿತ್ಯಶಃ ॥ ೧೪ ॥

---

೯. ಫಾಲ್ಗುನ ಶುಕ್ಲಪಕ್ಷ ತ್ರಯೋದಶಿಯದಿನ ರಾತ್ರಿಯಿಂದಾರಂಭಿಸಿ ಮಾಡುವ ವ್ರತವು ಧರ್ಮವ್ರತವೆನಿಸಿಕೊಳ್ಳುವುದು.

೧೦. ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯದಿನ ಆರಂಭಿಸಿ, ವರ್ಷ ಪೂರ್ತಿಯಾಗಿ ಮಾಡುವ ವ್ರತವು ರೌದ್ರವ್ರತವೆನಿಸುವುದು.

೧೧. ಶುಕ್ಲಪಕ್ಷದ ಪಂಚಮಿಯದಿನ ರಾತ್ರಿ ಭೋಜನಮಾಡುವುದು ಇದೇ ವ್ರತ.

೧೨. ದೊರೆಯೇ ಪಿತೃವ್ರತವು ಅಮಾವಾಸ್ಯೆಯದಿನವೆಂದು ಹೇಳಿದೆ.

೧೩–೧೪. ರಾಜೇಂದ್ರನೇ, ಹದಿನೈದುವರ್ಷಕಾಲ ಹೀಗೆ ತಿಥಿವ್ರತಾದಿಗಳನ್ನು ಮಾಡುವವನಿಗೆ, ಸಾವಿರ ಅಶ್ವಮೇಧ ಯಜ್ಞಗಳನ್ನೂ, ನೂರು ರಾಜಸೂಯಯಜ್ಞಗಳನ್ನೂ, ಮಾಡಿದವನಷ್ಟು ಫಲವುಂಟಾಗುವುದು. ಕಲ್ಪೋಕ್ತವಾಗಿ ವ್ರತಮಾಡುವವನು ಆಚರಿಸುವ ಒಂದು ವ್ರತವೇ ಪಾಪಗಳನ್ನು ನಾಶಮಾಡುತ್ತದೆ.

ಯಃ ಪುನಃ ಸರ್ವಮೇತದ್ಧಿ ಕುರ್ಯಾನ್ನರವರಾತ್ಮಜ ।
ಸ ಶುದ್ಧೋ ವಿರಜಾಲ್ಲೋಕಾನಾಪ್ನೋತಿ ಸಕಲಾನ್ನೃಪ ॥ ೧೫ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ಸಾರ್ವಭೌಮವ್ರತಂ ನಾಮ ಪಂಚಷಷ್ಟಿತಮೋಽಧ್ಯಾಯಃ

---

೧೫. (ಇನ್ನು) ಯಾವಾಗಲೂ ಎಲ್ಲಾ ವ್ರತಗಳನ್ನೂ ಮಾಡುವವನನ್ನು ಹೇಳಬೇಕಾದುದೇನು ! ಅವನು ಶುದ್ಧನಾಗಿ ವಿರಜಗಳಾದ ಸಕಲಲೋಕಗಳನ್ನೂ ಪಡೆಯುವನು.

ಅಧ್ಯಾಯದ ಸಾರಾಂಶ:—

ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ ಕಾರ್ತಿಕಶುಕ್ಲ ದಶಮಿಯದಿನ ಮಾಡಬೇಕಾದ ಸಾರ್ವಭೌಮವ್ರತದ ವಿಧಾನವನ್ನೂ, ಫಲವನ್ನೂ ಹೇಳಿ, ವೈಷ್ಣವವ್ರತ, ರೌದ್ರವ್ರತ, ಧರ್ಮವ್ರತ, ಪಿತೃವ್ರತಗಳ ವಿಚಾರವನ್ನೂ ತಿಳಿಸುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತೈದನೆಯ ಅಧ್ಯಾಯ.

॥ ಶ್ರೀಃ ॥

-X-

ಷಟ್‌ಷಷ್ಟಿತಮೋಽಧ್ಯಾಯಃ

ಅಥ ನಾರದಪುರಾಣಾರ್ಥಪಾಂಚರಾತ್ರಂ

॥ ಭದ್ರಾಶ್ವ ಉವಾಚ ॥

ಆಶ್ಚರ್ಯಂ ಯದಿ ತೇ ಕಿಂಚಿದ್ವಿದಿತಂ ದೃಷ್ಟಮೇವ ಚ ।
ತನ್ಮೇ ಕಥಯ ಧರ್ಮಜ್ಞ ಪರಂ ಕೌತೂಹಲಂ ಮಹತ್ ॥ ೧ ॥

॥ ಅಗಸ್ತ್ಯ ಉವಾಚ ॥

ಆಶ್ಚರ್ಯಂ ಯದಿ ತೇ ಕಿಂಚಿದ್ವಿದಿತಂ ದೃಷ್ಟಮೇವ ಚ ।
ಆಶ್ಚರ್ಯರೂಪೋ ಭಗವಾನೇಷ ಏವ ಜನಾರ್ದನಃ ॥
ತಸ್ಯಾಶ್ಚರ್ಯಾಣಿ ದೃಷ್ಟಾನಿ ಬಹೂನಿ ವಿವಿಧಾನಿ ವೈ ॥ ೨ ॥

ಶ್ವೇತದ್ವೀಪಗತಃ ಪೂರ್ವಂ ನಾರದಃ ಕಿಲ ಪಾರ್ಥಿವ ।
ಸೋಽಪಶ್ಯಚ್ಛಂಖಚಕ್ರಾಬ್ಜಾನ್ಪುರುಷಾಂಸ್ತಿಗ್ಮತೇಜಸಃ ॥ ೩ ॥

ಅರವತ್ತಾರನೆಯ ಅಧ್ಯಾಯ

ನಾರದಪುರಾಣಾರ್ಥಪಾಂಚರಾತ್ರ

೧. ಭದ್ರಾಶ್ವರಾಜ—ಧರ್ಮಜ್ಞನೇ, ನೀನು ಯಾವುದಾದರೂ ಆಶ್ಚರ್ಯವನ್ನು ತಿಳಿದಿದ್ದರೆ ಅಥವಾ ಕೇಳಿದ್ದರೆ ಅದನ್ನು ನನಗೆ ಹೇಳು. ಕೇಳಬೇಕೆಂದು ಬಹು ಕುತೂಹಲವಾಗಿದೆ.

೨. ಅಗಸ್ತ್ಯ—ದೊರೆಯೇ, ಭಗವಂತನಾದ ವಿಷ್ಣುವೇ ಆಶ್ಚರ್ಯರೂಪನು. ಅವನ ಬಗೆಬಗೆಯ ಹಲವು ಆಶ್ಚರ್ಯಗಳನ್ನು ನೋಡಿದ್ದೇನೆ.

೩. ದೊರೆಯೇ, ಪೂರ್ವದಲ್ಲಿ ಒಮ್ಮೆ ನಾರದಮುನಿಯು ಶ್ವೇತದ್ವೀಪಕ್ಕೆ ಹೋಗಿದ್ದನು. ಆತನು ಅಲ್ಲಿ ಶಂಖಚಕ್ರಪದ್ಮಧಾರಿಗಳೂ, ಅತಿಕಾಂತಿವಂತರೂ ಆದ ಹಲವರು ಪುರುಷರನ್ನು ನೋಡಿದನು.

ಅಯಂ ವಿಷ್ಣುರಯಂ ವಿಷ್ಣುರೇಷ ವಿಷ್ಣುಸ್ಸನಾತನಃ ।
ಚಿಂತಾಭೂತ್ತಸ್ಯ ತಾನ್ದೃಷ್ಟ್ವಾ ಕೋಽಸ್ಮಿನ್ವಿಷ್ಣುರಿತಿ ಪ್ರಭುಃ ॥ ೪ ॥

ಏವಂ ಚಿಂತಯತಸ್ತಸ್ಯ ಚಿಂತಾ ಕೃಷ್ಣಂ ಪ್ರತಿ ಪ್ರಭೋ ।
ಆರಾಧಯಾಮಿ ಚ ಕಥಂ ಶಂಖಚಕ್ರಗದಾಧರಂ ॥ ೫ ॥

ಯೇನ ವೇದ್ಮಿ ಪರಂ ದೇವಂ ಕೃಷ್ಣಂ ನಾರಾಯಣಂ ಪ್ರಭುಂ ।
ಏವಂ ಸಂಚಿಂತ್ಯ ದಧ್ಯೌ ಸ ತಂ ದೇವಂ ಪರಮೇಶ್ವರಂ ॥ ೬ ॥

ದಿವ್ಯಂ ವರ್ಷಸಹಸ್ರಂ ತು ಸಾಗ್ರಂ ಬ್ರಹ್ಮಸುತಸ್ತದಾ ।
ಧ್ಯಾತಸ್ತಸ್ಯ ಸ ದೇವೋಽಸೌ ಪರಿತೋಷಂ ಜಗಾಮ ಹ ॥ ೭ ॥

ಉವಾಚ ಸ ಪ್ರಸನ್ನಾತ್ಮಾ ಪ್ರತ್ಯಕ್ಷತ್ವಂ ಗತಃ ಪ್ರಭುಃ ।
ವರಂ ಬ್ರಹ್ಮಸುತ ಬ್ರೂಹಿ ಕಿಂ ತೇ ದದ್ಮಿ ಮಹಾಮುನೇ ॥ ೮ ॥

---

೪. ವಿಷ್ಣುವಿನಂತೆಯೇ ಇದ್ದ ಅವರನ್ನು ನೋಡಿ, ನಾರದನಿಗೆ ಇವನು ವಿಷ್ಣು; ಇವನೂ ವಿಷ್ಣು; ಇವನೇ ಸನಾತನನಾದ ವಿಷ್ಣು; ಎಲ್ಲರೂ ಹೀಗೆಯೇ ಇದ್ದಾರೆ. ಇವರಲ್ಲಿ ನಿಜವಾ(ದ)ಗಿ ವಿಷ್ಣುವಾರು? ಎಂದು ಚಿಂತೆಯುಂಟಾಯಿತು.

೫–೬. ಹೀಗೆ ಚಿಂತಿಸುತ್ತಿದ್ದ ಅವನಿಗೆ (ಆತನಿಗೆ) ಕೃಷ್ಣನ ಮೇಲೆ ಆಲೋಚನೆಯುಂಟಾಯಿತು. ಆ ಶಂಖಚಕ್ರಗದಾಧರನನ್ನು, ಪ್ರಭುವನ್ನು ದೇವನನ್ನು ನಾರಾಯಣನನ್ನು ಆ ಕೃಷ್ಣನನ್ನು ಹೇಗೆ ತಿಳಿಯಲಿ! ಹೇಗೆ ಆರಾಧಿಸಲಿ! ಎಂದು ಬಲು ಚಿಂತಿಸಿ, ದೇವನಾದ ಆ ಪರಮೇಶ್ವರನನ್ನು ಧ್ಯಾನಿಸಿದನು.

೭. ನಾರದನು ಹಾಗೆ ದೇವತೆಗಳ ಸಹಸ್ರವರ್ಷಕಾಲ ಪೂರ್ತಿಯಾಗಿ ಸ್ಮರಿಸಲು ಆ ದೇವನು ಸಂತುಷ್ಟನಾದನು.

೮. ಒಲಿದು, ಪ್ರತ್ಯಕ್ಷನಾದ ಆ ಪ್ರಭುವು "ಬ್ರಹ್ಮಸುತನೇ, ಮಹಾಮುನಿಯೇ, ನಿನಗೇನು ವರವನ್ನು ಕೊಡಲಿ? ಹೇಳು" ಎಂದನು.

॥ ನಾರದ ಉವಾಚ ॥

ಸಹಸ್ರಮೇಕಂ ವರ್ಷಾಣಾಂ ಧ್ಯಾತಸ್ತ್ವಂ ಭುವನೇಶ್ವರ ।
ತ್ವತ್ಪ್ರಾಪ್ತಿರ್ಯೇನ ತದ್ಬ್ರೂಹಿ ಯದಿತುಷ್ಟೋಽಸಿ ಮೇಽಚ್ಯುತ ॥ ೯ ॥

॥ ದೇವದೇವ ಉವಾಚ ॥

ಪೌರುಷಂಸೂಕ್ತಮಾಸ್ಥಾಯ ಯೇ ಯಜಂತಿ ದ್ವಿಜಾಃ ಶು ಮಾಂ ।
ತೇ ಮಾಂ ಪ್ರಾಪ್ಸ್ಯಂತಿ ಸತತಂ ಸಂಹಿತಾಧ್ಯಯನೇನ ಚ ॥ ೧೦ ॥

ಅಲಾಭೇ ವೇದಶಾಸ್ತ್ರಾಣಾಂ ಪಂಚರಾತ್ರೋದಿತೇನ ಹಿ ।
ಮಾರ್ಗೇಣ ಮಾಂ ಯಜಂತೇ ಯೇ ತೇ ಮಾಂ ಪ್ರಾಪ್ಸ್ಯಂತಿ
ಮಾನವಾಃ ॥ ೧೧ ॥

ಬ್ರಾಹ್ಮಣಕ್ಷತ್ರಿಯವಿಶಾಂ ಪಂಚರಾತ್ರಂ ವಿಧೀಯತೇ ।
ಶೂದ್ರಾದೀನಾಂ ತು ಮೇ ಕ್ಷೇತ್ರಪದವೀಗಮನಂ ದ್ವಿಜ ॥ ೧೨ ॥

ಮನ್ನಾಮ ವಿಹಿತಂ ತೇಷಾಂ ನಾನ್ಯತ್ಪೂಜಾದಿಕಂ ಚರೇತ್ ।
ಏವಂ ಮಯೋಕ್ತಂ ವಿಪ್ರೇಂದ್ರ ಪುರಾಕಲ್ಪೇ ಪುರಾತನಂ ॥ ೧೩ ॥

---

೯. ನಾರದ—"ಭುವನೇಶ್ವರ, ಒಂದುಸಾವಿರ ವರ್ಷ ನಿನ್ನನ್ನು ಧ್ಯಾನಿಸಿದೆನು. ಸಂತುಷ್ಟನಾಗಿ ನಿನಗೆ ಒಲಿದಿರುವೆಯಾದರೆ, ನಿನ್ನನ್ನು ಪಡೆಯುವುದು ಹೇಗೆ ಎಂಬುದನ್ನು ಹೇಳಚ್ಯುತ" ಎಂದನು.

೧೦. ದೇವದೇವ—ಬ್ರಾಹ್ಮಣನೇ, ಪುರುಷಸೂಕ್ತದಿಂದ ನನ್ನನ್ನು ಪೂಜಿಸುವವರೂ, ಸಂಹಿತೆಯನ್ನು ಅಧ್ಯಯನಮಾಡುವವರೂ ಯಾವಾಗಲೂ ನನ್ನನ್ನು ಬೇಗನೆ ಪಡೆಯುವರು.

೧೧. ವೇದಮಂತ್ರಗಳು ತಿಳಿಯದೆ (ದೊರೆಯದೆ) ಇದ್ದರೆ ಪಂಚರಾತ್ರೋಕ್ತಮಾರ್ಗದಿಂದ ನನ್ನನ್ನು ಪೂಜಿಸುವವರೂ ನನ್ನನ್ನು ಪಡೆಯುವರು.

೧೨. ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ವೈಶ್ಯರಿಗೂ ಪಂಚರಾತ್ರವು ವಿಹಿತವಾಗಿದೆ. ಶೂದ್ರಾದಿಗಳಿಗೆ ದೇವಕ್ಷೇತ್ರಗಳಿಗೆ ಹೋಗುವುದೇ ಸಾಕು.

೧೩–೧೪. ಮತ್ತು ಶೂದ್ರಾದಿಗಳಿಗೆ ನನ್ನ ಹೆಸರೇ ಸಾಕು. ಬೇರೆ ಪೂಜೆ ಮೊದಲಾದುವನ್ನು ಮಾಡಬಾರದು. ಬ್ರಾಹ್ಮಣೋತ್ತಮನೇ, ಹಿಂದಿನ ಕಲ್ಪದಲ್ಲಿ

ಪಂಚರಾತ್ರಂ ಸಹಸ್ರಾಣಾಂ ಯದಿ ಕಶ್ಚಿದ್ಗ್ರಹಿಷ್ಯತಿ ।
ಕರ್ಮಕ್ಷಯೇ ಚ ಮಾಂ ಕಶ್ಚಿದ್ಯದಿ ಭಕ್ತೋ ಭವಿಷ್ಯತಿ ॥ ೧೪ ॥

ತಸ್ಯ ಚೇದಂ ಪಂಚರಾತ್ರಂ ನಿತ್ಯಂ ಹೃದಿ ವಸಿಷ್ಯತಿ ॥ ೧೫ ॥

ಇತರೇ ರಾಜಸೈರ್ಭಾವೈಸ್ತಾಮಸೈಶ್ಚ ಸಮಾವೃತಾಃ ।
ಭವಿಷ್ಯಂತಿ ದ್ವಿಜಶ್ರೇಷ್ಠ ಮಯ್ಯಾಸನಪರಾಙ್ಮುಖಾಃ ॥ ೧೬ ॥

ಕೃತಂ ತ್ರೇತಾ ದ್ವಾಪರಂ ಚ ಯುಗಾನಿ ತ್ರೀಣಿ ನಾರದ ।
ಸತ್ವಸ್ಥಾ ಮಾಂ ಸಮೇಷ್ಯಂತಿ ಕಲೌ ರಜಸ್ತಮೋಧಿಕಾಃ ॥ ೧೭ ॥

ಅನ್ಯಚ್ಚ ತೇ ವರಂ ದದ್ಮಿ ಶೃಣು ನಾರದ ಸಾಂಪ್ರತಂ ।
ಯದಿದಂ ಪಂಚರಾತ್ರಂ ಮೇ ಶಾಸ್ತ್ರಂ ಪರಮದುರ್ಲಭಂ ॥
ತದ್ಭವಾನ್ವೇತ್ಸ್ಯತೇ ಸರ್ವಂ ಮತ್ಪ್ರಸಾದಾನ್ನ ಸಂಶಯಃ ॥ ೧೮ ॥

ನಾನು ಹೀಗೆ ಹೇಳಿದೆನು. ಪುರಾತನವಾದ ಪಂಚರಾತ್ರವನ್ನು ಸಾವಿರ ಜನರಲ್ಲಿ ಒಬ್ಬನು ತಿಳಿದುಕೊಂಡು, ಕರ್ಮಕ್ಷಯವಾಗಿ ನನ್ನ ಭಕ್ತನಾದರೆ ಅವನಿಗೆ ಈ ಪಂಚರಾತ್ರವು ಯಾವಾಗಲೂ ಹೃದಯದಲ್ಲಿಯೇ ಇರುವುದು.

೧೬. ದ್ವಿಜೋತ್ತಮನೇ, ಉಳಿದವರು ರಾಜಸತಾಮಸಭಾವಗಳಿಂದಾವೃತರಾಗಿ ನನ್ನಲ್ಲಿ ಪರಾಙ್ಮುಖರಾಗುವರು.

೧೭. ನಾರದನೇ, ಕೃತ ತ್ರೇತಾ ದ್ವಾಪರ ಎಂಬ ಮೂರು ಯುಗಗಳಲ್ಲಿ ಸಾತ್ವಿಕರು ನನ್ನನ್ನು ಪಡೆಯುವರು. ಕಲಿಯುಗದಲ್ಲಿ ರಜೋಗುಣವೂ ತಮೋಗುಣವೂ ಅಧಿಕವಾಗಿ ಉಳ್ಳವರಾಗುವರು.

೧೮. ನಾರದನೇ, ನಿನಗೆ ಬೇರೆಯೊಂದು ವರವನ್ನೂ ಕೊಡುತ್ತೇನೆ, ಕೇಳು. ಪರಮ ದುರ್ಲಭವಾದ ನನ್ನ ಈ ಪಂಚರಾತ್ರಶಾಸ್ತ್ರವನ್ನೆಲ್ಲವನ್ನೂ ನನ್ನ ಅನುಗ್ರಹದಿಂದ ನೀನು ತಿಳಿಯುತ್ತೀಯೆ. ಸಂದೇಹವಿಲ್ಲ.

ವೇದೇನ ಪಂಚರಾತ್ರೇಣ ಭಕ್ತ್ಯಾ ಯಜ್ಞೇನ ಚ ದ್ವಿಜ ।
ಪ್ರಾಪ್ಯೋಽಹಂ ನಾನ್ಯಥಾ ವತ್ಸ ವರ್ಷಕೋಟ್ಯಯುತೈರಪಿ ॥ ೧೯ ॥

ಏವಮುಕ್ತ್ವಾ ಸ ಭಗವಾನ್ ನಾರದಂ ಪರಮೇಶ್ವರಃ ।
ಜಗಾಮಾದರ್ಶನಂ ಸದ್ಯೋ ನಾರದೋಽಪಿ ದಿವಂ ಯಯೌ ॥ ೨೦ ॥

ಇತಿ ಶ್ರೀ ವರಾಹಪುರಾಣೇಽಗಸ್ತ್ಯಗೀತಾಸು ನಾರದಪುರಾಣಾರ್ಥಸೂಚನಂ ನಾಮ ಷಟ್‌ಷಷ್ಟಿತಮೋಽಧ್ಯಾಯಃ

---

೧೯. ಬ್ರಾಹ್ಮಣನೇ, ವೇದದಿಂದಲೂ, ಪಂಚರಾತ್ರದಿಂದಲೂ, ಭಕ್ತಿಯಿಂದಲೂ, ಯಜ್ಞದಿಂದಲೂ ನನ್ನನ್ನು ಪಡೆಯಬಹುದು. ವತ್ಸನೇ, ಬೇರೆಯ ರೀತಿಯಿಂದ ಹತ್ತುಸಾವಿರ ಕೋಟಿವರ್ಷಗಳಲ್ಲೂ ನನ್ನನ್ನು ಪಡೆಯಲಾಗುವುದಿಲ್ಲ.

೨೦. ಭಗವಂತನು ನಾರದನಿಗೆ ಹೀಗೆ ಹೇಳಿ, ಕಣ್ಮರೆಯಾದನು. ನಾರದನೂ ಒಡನೆಯೇ ಸ್ವರ್ಗಕ್ಕೆ ಹೊರಟುಹೋದನು.

ಅಧ್ಯಾಯದ ಸಾರಾಂಶ—ಅಗಸ್ತ್ಯರು, ಭದ್ರಾಶ್ವರಾಜನು ಆಶ್ಚರ್ಯಕರವಾದ ವಿಚಾರವನ್ನು ಹೇಳಬೇಕೆಂದು ಕೇಳಲು, ನಾರದರು ಶ್ವೇತದ್ವೀಪಕ್ಕೆ ಹೋಗಿ ಅಲ್ಲಿ ವಿಷ್ಣುವಾರೆಂಬುದನ್ನರಿಯದೆ ಸಾವಿರವರ್ಷ ಧ್ಯಾನಿಸಿ ವಿಷ್ಣುವನ್ನು ಕಂಡು ಅವನಿಂದಲೇ ಅವನನ್ನು ಪಡೆಯುವ ಮಾರ್ಗವನ್ನು ಅರಿತ ವಿಚಾರವನ್ನು ಹೇಳಿದರು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತಾರನೆಯ ಅಧ್ಯಾಯ.

॥ ಶ್ರೀಃ ॥

–x–

ಸಪ್ತಷಷ್ಟಿತಮೋಽಧ್ಯಾಯಃ

ಅಥ ವಿಷ್ಣ್ವಾಶ್ಚರ್ಯಂ

॥ ಭದ್ರಾಶ್ವ ಉವಾಚ ॥

ಭಗವನ್ನಿತಕೃಷ್ಣೇ ದ್ವೇ ಯೇ ತೇ ಜಗತಿ ಸತ್ತಮ ।
ಸ್ತ್ರಿಯೌ ಪ್ರಭೂವತುಃ ಕೇ ದ್ವೇ ಸಿತಾ ಕೃಷ್ಣಾ ಚ ಕಾ ಶುಭಾ ॥ ೧ ॥

ಕಶ್ಚಾಸೌ ಪುರುಷೋ ಬ್ರಹ್ಮನ್ನಾವಕಸ್ಸಪ್ತಧಾಭವತ್ ।
ಕೋಽಸೌ ದ್ವಾದಶಧಾ ವಿಪ್ರ ದ್ವಿದೇಹಃ ಷಟ್ಶಿರಾಃ ಪ್ರಭುಃ ॥ ೨ ॥

ದಾಂಪತ್ಯಂ ಚ ದ್ವಿಜಶ್ರೇಷ್ಠ ಕೃತಸೂರ್ಯೋದಯಾದಲಂ ।
ಕಸ್ಮಾದೇತಜ್ಜಗದಿದಂ ವಿತತಂ ದ್ವಿಜಸತ್ತಮ ॥ ೩ ॥

ಅರವತ್ತೇಳನೆಯ ಅಧ್ಯಾಯ

ವಿಷ್ಣ್ವಾಶ್ಚರ್ಯ

೧. ಭದ್ರಾಶ್ವ—ಪೂಜ್ಯನೇ, ಸಜ್ಜನೋತ್ತಮಾ, ಜಗತ್ತಿನಲ್ಲಿ ಬಿಳಿಯ ಮತ್ತು ಕರಿಯ ಯಾವ ಇಬ್ಬರು ಹೆಂಗಸರು (ಇದ್ದರೋ) ಆದರೋ ಅವರು ಯಾರು? ಅವರಲ್ಲಿ ಶುಭಳಾದ ಬಿಳಿಯಳಾವಳು? ಕರಿಯಳಾವಳು?

೨. ಬ್ರಹ್ಮನೇ, ಸದಾಚಾರವುಳ್ಳ ಯಾವ ಪುರುಷನು ಏಳು ಬಗೆಯಾದನು? ಎರಡು ಮೆಯ್ಯೂ ಆರು ತಲೆಗಳೂ ಉಳ್ಳ ಯಾರು ಹನ್ನೆರಡು ತೆರನಾದನು?

೩. ಬ್ರಾಹ್ಮಣೋತ್ತಮನೇ, ದಾಂಪತ್ಯವೆಂಬುದಾವುದು? ಸೂರ್ಯೋದಯಾಲಂಕೃತವಾದ ಯಾವುದರಿಂದ ಈ ಪ್ರಪಂಚವು ಬೆಳೆಯಿತು.

ಅರವತ್ತೇಳನೆಯ ಅಧ್ಯಾಯ

॥ ಅಗಸ್ತ್ಯ ಉವಾಚ ॥

ಸಿತಕೃಷ್ಣೇ ಸ್ತ್ರಿಯೌ ಯೇ ಹಿ ತೇ ಭಗಿನ್ಯೌ ಪ್ರಕೀರ್ತಿತೇ ।
ಸಿತಾಸಿತಾ ದ್ವಿವರ್ಣಾ ಚ ನಾರೀ ರಾತ್ರಿರುದಾಹೃತಾ ॥ ೪ ॥

ಯಃ ಪುಮಾನ್ಸಪ್ತಧಾ ಜಾತ ಏಕೀಭೂತ್ವಾ ನರೇಶ್ವರಃ ।
ಸ ಸಮುದ್ರಸ್ತು ವಿಜ್ಞೇಯಃ ಸಪ್ತ ಚೈಕೋ ವ್ಯವಸ್ಥಿತಃ ॥ ೫ ॥

ಯೋಽಸೌ ದ್ವಾದಶಧಾ ರಾಜನ್ ದ್ವಿದೇಹಷ್ಷಟ್‌ಶಿರಾಃ ಪ್ರಭುಃ ।
ಸಂವತ್ಸರಸ್ಸ ವಿಜ್ಞೇಯಃ ಶರೀರೇ ದ್ವೇ ಗತೀ ಸ್ಮೃತೇ ॥
ಋತವಷ್ಷಟ್ ಚ ವಕ್ತ್ರಾಣಿ ಏಷ ಸಂವತ್ಸರಃ ಸ್ಮೃತಃ ॥ ೬ ॥

ದಾಂಪತ್ಯಂ ತದಹೋರಾತ್ರಂ ಸೂರ್ಯಾಚಂದ್ರಮಸೌ ಯತಃ ।
ತತೋ ಜಗತ್ಸಮುತ್ತಸ್ಥೌ ದೇವಾದಸ್ಮಾಚ್ಚ ಸತ್ತಮ ॥ ೭ ॥

---

೪. ಅಗಸ್ತ್ಯಮುನಿ—ಬಿಳಿಯ ಮತ್ತು ಕರಿಯ ಆ ಹೆಂಗಸರು ಸಹೋದರಿಯರೆನಿಸಿಕೊಳ್ಳುವರು. ಬಿಳಿಯ ಮತ್ತು ಕರಿಯ: ಎರಡು ಬಣ್ಣದ ಹೆಂಗಸು ರಾತ್ರಿಯೇ (ಆಗಿದ್ದಾಳೆ.)

೫. ಯಾರು ಏಳು ಬಗೆಯಾಗಿ ಹುಟ್ಟಿ, ಒಬ್ಬನಾಗಿ ರಾಜನಾದನೋ ಅವನೇ ಸಮುದ್ರರಾಜನು. ಏಳು ರೂಪಗಳುಳ್ಳವನಾದರೂ ಒಬ್ಬನೆನಿಸಿಕೊಂಡನು.

೬. ದೊರೆಯೇ, ಎರಡು ಮಯ್ಯೂ, ಆರು ತಲೆಗಳೂ, ಹನ್ನೆರಡುಬಗೆಯೂ ಉಳ್ಳ ಪ್ರಭುವನ್ನು ಸಂವತ್ಸರ (ವರ್ಷ)ವೆಂದರಿಯಬೇಕು. ದಕ್ಷಿಣೋತ್ತರಾಯಣಗಳೇ ಸಂವತ್ಸರದ ಎರಡು ಶರೀರಗಳೆನಿಸಿಕೊಳ್ಳುವುವು. ವಸಂತಾದಿಯಾದ ಆರು ಋತುಗಳೇ ಅವನ ಆರು ಮುಖ (ತಲೆ)ಗಳು. ಮಾಸಗಳೇ ಅವನ ಹನ್ನೆರಡು ಬಗೆಗಳು. ಇದು ಸಂವತ್ಸರವೆನಿಸಿಕೊಳ್ಳುವುದು.

೭. ಆ ಅಹೋರಾತ್ರಿಗಳ ಸಂಬಂಧವೇ ದಾಂಪತ್ಯವು. ಸೂರ್ಯಚಂದ್ರರು ಯಾವುದರಿಂದುದಿಸಿದರೋ ಅದೇ ಅಹೋರಾತ್ರಿದಾಂಪತ್ಯದಿಂದಲೇ ದೇವನಿಂದ ಈ ಜಗತ್ತೂ ಉದಿಸಿತು.

ಸ ವಿಷ್ಣುಃ ಪರಮೋ ದೇವೋ ವಿಜ್ಞೇಯೋ ನೃಪಸತ್ತಮ ॥ ೮ ॥

ನ ಚ ವೇದಕ್ರಿಯಾಹೀನಃ ಪಶ್ಯತೇ ಪರಮೇಶ್ವರಂ ॥ ೯ ॥

ಇತಿ ಶ್ರೀವರಾಹಪುರಾಣೇಽಗಸ್ತ್ಯಗೀತಾಸು ವಿಷ್ಣ್ವಾಶ್ಚರ್ಯಂ ನಾಮ ಸಪ್ತಷಷ್ಟಿತಮೋಽಧ್ಯಾಯಃ

---

೮. ರಾಜೋತ್ತಮನೇ, ಆ ವಿಷ್ಣುವೇ ಪರಮದೇವನೆಂದು ಅರಿಯಬೇಕು.

೯. ವೇದಕರ್ಮಹೀನನಾದವನು ಆ ಪರಮೇಶ್ವರನನ್ನು ನೋಡುವುದಿಲ್ಲ.

ಅಧ್ಯಾಯದ ಸಾರಾಂಶ—ಅಗಸ್ತ್ಯರು ಭದ್ರಾಶ್ವನಿಗೆ ವಿಷ್ಣುವಿನ ಆಶ್ಚರ್ಯವೆಂದು ಸಂವತ್ಸರರೂಪನಾದ ಪುರುಷನಿಗೆ ದಕ್ಷಿಣೋತ್ತರಾಯಣಗಳೆಂಬ ಎರಡು ದೇಹಗಳೂ, ಋತುಗಳೆಂಬ ಆರು ಶಿರಸ್ಸುಗಳೂ, ಮಾಸಗಳೆಂಬ ಹನ್ನೆರಡು ಬಗೆ (ಭುಜ)ಗಳೇ ಮೊದಲಾದುವುಗಳೂ ಇರುವುವೆಂದೂ, ಆ ಸಂವತ್ಸರಪುರುಷನು ವಿಷ್ಣುವೆಂದೂ, "ಕಾಲಶ್ಚ ನಾರಾಯಣಃ" ಎಂಬ ಶ್ರುತ್ಯರ್ಥವನ್ನು ತಿಳಿಸುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಅರವತ್ತೇಳನೆಯ ಅಧ್ಯಾಯ.

॥ ಶ್ರೀಃ ॥

–x–

ಅಷ್ಟಷಷ್ಟಿತಮೋಧ್ಯಾಯಃ

ಅಥ ಪ್ರಾಗಿತಿಹಾಸವರ್ಣನಂ

॥ ಭದ್ರಾಶ್ವ ಉವಾಚ ॥

ಯೋಽಸೌ ಸರ್ವಗತೋ ದೇವಃ ಪರಮಾತ್ಮಾ ವ್ಯವಸ್ಥಿತಃ ।
ಚತುರ್ಯುಗೇ ತ್ವಸೌ ಕೀದೃಗ್ವಿಜ್ಞೇಯಃ ಪರಮೇಶ್ವರಃ ॥ ೧ ॥

ಯುಗೇ ಯುಗೇ ಚ ಆಚಾರೋ ವರ್ಣಾನಾಂ ಭವಿತಾ ಮುನೇ ।
ಕಥಂ ಚ ಶುದ್ಧಿರ್ವಿಪ್ರಾಣಾಮನ್ಯಸ್ತ್ರೀಸಂಕರೇ ಮುನೇ ॥ ೨ ॥

॥ ಅಗಸ್ತ್ಯ ಉವಾಚ ॥

ಕೃತೇ ಯುಗೇ ಮಹೀದೇವೈರ್ಯುಜ್ಯತೇ ವೇದಕರ್ಮಣಾ ।
ಯಜದ್ಭಿಶ್ಚ ಸುರಾಂಸ್ತ್ರೇತಾ ತದ್ವದ್ದೇವೈಶ್ಚ ಸತ್ತಮ ॥ ೩ ॥

ಅರವತ್ತೆಂಟನೆಯ ಅಧ್ಯಾಯ

ಪ್ರಾಚೀನೇತಿಹಾಸವರ್ಣನೆ

೧. ಭದ್ರಾಶ್ವರಾಜ—ಮುನಿಯೇ, ಸರ್ವಗತನಾಗಿರುವ, ದೇವನಾದ ಆ ಪರಮಾತ್ಮನನ್ನು, ಪರಮೇಶ್ವರನನ್ನು ನಾಲ್ಕುಯುಗಗಳಲ್ಲಿ ಹೇಗೆ ಹೇಗೆ ಅರಿಯಬೇಕು ?

೨. ಒಂದೊಂದು ಯುಗದಲ್ಲಿಯೂ ಚತುರ್ವರ್ಣದವರಿಗೆ ವಿಹಿತವಾದ ಆಚಾರವಾವುದು ? ಬ್ರಾಹ್ಮಣರಿಗೆ ಅನ್ಯಸ್ತ್ರೀಸಂಸರ್ಗವಾದರೆ ಶುದ್ಧಿಯು ಏತರಿಂದಾಗುವುದು ?

೩–೪. ಅಗಸ್ತ್ಯಮುನಿ—ಸದುತ್ತಮನೇ, ಕೃತಯುಗದಲ್ಲಿ ಬ್ರಾಹ್ಮಣರು ವೇದಕರ್ಮಯುಕ್ತರಾಗಿರುವರು. ತ್ರೇತಾಯುಗದಲ್ಲಿ ದೇವತೆಗಳನ್ನು ಯಜ್ಞ

ದ್ವಾಪರೇ ಸತ್ವರಜಸಾ ಬಹುಲೇ ನೃಪಸತ್ತಮ |
ಯಾವದ್ಧರ್ಮಸುತೋ ರಾಜಾ ಭವಿಷ್ಯತಿ ಮಹಾಮತೇ || ೪ ||

ತತಸ್ತಮಃ ಪ್ರಭವಿತಾ ಕಲಿರೂಪೋ ನರೇಶ್ವರ || ೫ ||

ತಸ್ಮಿನ್ಕಲೌ ವರ್ತಮಾನೇ ಸ್ವಮಾರ್ಗಾಚ್ಚ್ಯಾವಿತಾ ದ್ವಿಜಾಃ |
ರಾಜಾನೋ ವೈಶ್ಯಶೂದ್ರಾಶ್ಚ ಪ್ರಾಯಶೋ ಹೀನಜಾತಯಃ || ೬ ||

ಭವಿಷ್ಯಂತಿ ನರಶ್ರೇಷ್ಠ ಸತ್ಯಶೌಚವಿವರ್ಜಿತಾಃ |
ತತೋ ವಿನಶ್ಯತೇ ಲೋಕೋ ವರ್ಣಧರ್ಮಶ್ಚ ನಶ್ಯತಿ || ೭ ||

|| ಭದ್ರಾಶ್ವ ಉವಾಚ ||

ಅಗಮ್ಯಾಗಮನಂ ಕೃತ್ವಾ ಬ್ರಾಹ್ಮಣಃ ಕ್ಷತ್ರಿಯೋಽಪಿ ವಾ |
ಶೂದ್ರೋಽಪಿ ಶುಧ್ಯತೇ ಕೇನ ಕಿಂ ವಾ ಗಮ್ಯಂ ತು ಶಸ್ಯತೇ || ೮ ||

ಗಳಿಂದ ತೃಪ್ತಿಪಡಿಸಿಸುವರು. ದ್ವಾಪರಯುಗದಲ್ಲಿ ಧರ್ಮರಾಜನು ರಾಜನಾಗಿರುವವರೆಗೂ ಸತ್ವರಜೋಗುಣಗಳು ಅಧಿಕವಾಗಿರುವುವು.

೫. ದೊರೆಯೆ, ಬಳಿಕ ಕಲಿಯು ತಮೋಗುಣಾಧಿಕ್ಯವುಳ್ಳದಾಗುವುದು.

೬–೭. ಆ ಕಲಿಯುಗವು ನಡೆಯುತ್ತಿರುವಾಗ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ತಮ್ಮ ದಾರಿಯನ್ನು ಬಿಟ್ಟು ಪ್ರಾಯಶಃ ಹೀನಜಾತಿಯವರಾಗುವರು. ಅವರೆಲ್ಲರೂ ಸತ್ಯಶೌಚಹೀನರಾಗುವರು. ಬಳಿಕ ವರ್ಣಧರ್ಮವೂ ಲೋಕವೂ ನಾಶವಾಗುವುವು.

೮. ಭದ್ರಾಶ್ವ—ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನೇ ಆಗಲಿ ಅಗಮ್ಯಾಗಮನವನ್ನು ಮಾಡಿದರೆ ಬಳಿಕ ಏತರಿಂದ ಶುದ್ಧನಾಗುವನು? ಯಾರು ಯಾರು ಯಾವ ಯಾವ ಸ್ತ್ರೀಸಂಬಂಧವನ್ನು ಮಾಡುವುದು ಪ್ರಶಸ್ತವಾದುದು?

॥ ಅಗಸ್ತ್ಯ ಉವಾಚ ॥

ಚತುರ್ಗಾಮೀ ಭವೇದ್ವಿಪ್ರಃ ತ್ರಿಗಾಮೀ ಕ್ಷತ್ರಿಯಃ ಸ್ಮೃತಃ ।
ದ್ವಿಗಾಮೀ ತು ಭವೇದ್ವೈಶ್ಯಃ ಶೂದ್ರ ಏಕಗಮಃ ಸ್ಮೃತಃ ॥ ೯ ॥

ಅಗಮ್ಯಾಂ ಬ್ರಾಹ್ಮಣೀಂ ಪ್ರಾಹುಃ ಕ್ಷತ್ರಿಯಸ್ಯ ನರೇಶ್ವರ ।
ಕ್ಷತ್ರಿಯಾ ಚಾಪಿ ವೈಶ್ಯಸ್ಯ ಶೂದ್ರಸ್ಯ ಸಾ ಚ ಪಾರ್ಥಿವ ॥ ೧೦ ॥

ಅಧಮಸ್ಯೋತ್ತಮಾಂ ನಾರೀಂ ತ್ವಗಮ್ಯಾಂ ಮನುರಬ್ರವೀತ್ ।
ಅಧಮಸ್ಯೋತ್ತಮಾ ನಾರೀ ಯತ್ನೇನ ಪರಿವರ್ಜ್ಯತೇ ॥ ೧೧ ॥

ಮಾತಾ ಮಾತೃಷ್ವಸಾ ಶ್ವಶ್ರೂರ್ಭ್ರಾತೃಪತ್ನೀ ಚ ಪಾರ್ಥಿವ ।
ಸ್ನುಷಾಂ ದುಹಿತರಂ ಚೈವ ಮಿತ್ರಪತ್ನೀಂ ಚ ಸರ್ವದಾ ॥
ಜಾಯಾಸ್ವಮಾತೃಜಾ ಚೈವ ಅಗಮ್ಯಾಸ್ತಾಃ ಸುತಸ್ತ್ರಿಯಃ ॥ ೧೨ ॥

---

೯. ಅಗಸ್ತ್ಯಮುನಿ—ದೊರೆಯೇ, ಬ್ರಾಹ್ಮಣನು, ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕುವರ್ಣದ ಸ್ತ್ರೀಸಂಬಂಧವನ್ನೂ ಮಾಡಬಹುದು ಕ್ಷತ್ರಿಯನು ಕ್ಷತ್ರಿಯಾದಿಯಾದ ಮೂರು ವರ್ಣದ ಸ್ತ್ರೀಯನ್ನು ವರಿಸಬಹುದು. ವೈಶ್ಯನು ವೈಶ್ಯಾದಿಯಾದ ಎರಡುವರ್ಣದವರನ್ನು ಪರಿಗ್ರಹಿಸಬಹುದು. ಶೂದ್ರನು ಸ್ವವರ್ಣದವಳನ್ನು ಮಾತ್ರ ಮದುವೆಯಾಗಬಹುದು.

೧೦ ದೊರೆಯೇ, ಕ್ಷತ್ರಿಯನಿಗೆ ಬ್ರಾಹ್ಮಣವರ್ಣದವಳು ಅಗಮ್ಯಳು. ವೈಶ್ಯನಿಗೆ ಕ್ಷತ್ರಿಯಳೂ ಅಗಮ್ಯಳು. ಶೂದ್ರನಿಗೆ ವೈಶ್ಯಳೂ ಅಗಮ್ಯಳು.

೧೧. ಉತ್ತಮವರ್ಣದವಳು ಅಧಮವರ್ಣದವನಿಗೆ ಅಗಮ್ಯಳೆಂದು ಮನುವು ಹೇಳಿದ್ದಾನೆ. ಅಧಮನು ಉತ್ತಮಳನ್ನು ಪ್ರಯತ್ನಪೂರ್ವಕವಾಗಿ ಬಿಟ್ಟುಬಿಡಬೇಕು.

೧೨. ತಾಯಿ, ತಾಯ ಸೋದರಿ, ಅತ್ತೆ, ಸಹೋದರಪತ್ನಿ, ಸೊಸೆ, ಮಗಳು, ಮಿತ್ರಪತ್ನಿ, ಪತ್ನಿಯ ಸಹೋದರಿ, ಮೊಮ್ಮಗಳು ಇವರೆಲ್ಲರೂ ಅಗಮ್ಯೆಯರು.

ರಜಕ್ಯಾದಿಷು ಚಾನ್ಯಾಶ್ಚ ಸ್ತ್ರಿಯೋಽಗಮ್ಯಾಃ ಪ್ರಕೀರ್ತಿತಾಃ ।
ಅಗಮ್ಯಾಗಮನಂ ಚೈತತ್ ಕೃತಂ ಪಾಪಾಯ ಜಾಯತೇ ॥ ೧೩ ॥

ವಿಯೋನಿಗಮನಾದಾಶು ಬ್ರಾಹ್ಮಣಾಯ ಭವತ್ಯಲಂ ।
ಶೇಷಸ್ಯಾಶುದ್ಧಿರೇಷ್ವೈವಂ ಪ್ರಾಣಾಯಾಮಶತಂ ಭವೇತ್ ॥ ೧೪ ॥

ಬಹುನಾಪಿ ಹಿ ಕಾಲೇನ ಯತ್ಪಾಪಂ ಸಮುಪಾರ್ಜಿತಂ ।
ವರ್ಣಸಂಕರಸಂಗತ್ಯಾ ಬ್ರಾಹ್ಮಣೇನ ನರರ್ಷಭ ॥ ೧೫ ॥

ದಶಪ್ರಣವಗಾಯತ್ರೀಪ್ರಾಣಾಯಾಮಶತೈಸ್ತ್ರಿಭಿಃ ।
ಮುಚ್ಯತೇ ಬ್ರಹ್ಮಹತ್ಯಾಯಾಃ ಕಿಂ ಪುನಃ ಶೇಷಪಾತಕಾತ್ ॥ ೧೬ ॥

ಅಥವಾ ಪರರೂಪಂ ಯೋ ದೇವಂ ಬ್ರಾಹ್ಮಣಪುಂಗವಃ ।
ವೇತ್ತಿ ಧ್ಯಾನಾದಿಭಿಃ ಪೂಜಾಂ ನ ಸ ಪಾಪೈರ್ಹಿ ಲಿಪ್ಯತೇ ॥ ೧೭ ॥

---

೧೩. ಅಗಸಗಿತ್ತಿಯರೇ ಮೊದಲಾದವರೂ ಮೇಲಿನವರಿಗೆ ಅಗಮ್ಯೆಯರು. ಅಗಮ್ಯಾಗಮನಮಾಡುವುದು ಪಾಪಕ್ಕೆ ಕಾರಣವಾಗುವುದು.

೧೪. ವಿಯೋನಿಗಮನದಿಂದ ಬ್ರಾಹ್ಮಣನಿಗೆ ಬೇಗನೆ ಪೂರ್ಣವಾಗಿ ಪಾಪವುಂಟಾಗುವುದು. ಮಿಕ್ಕವರ ಸಂಸರ್ಗದಿಂದ ಅಶುದ್ಧಿಮಾತ್ರವೇ ಉಂಟಾಗುವುದು. ಅದರ ಪರಿಹಾರಕ್ಕೆ ನೂರು ಪ್ರಾಣಾಯಾಮಗಳನ್ನು ಮಾಡಬೇಕು.

೧೫-೧೬. ನರೋತ್ತಮನೆ, ವರ್ಣಸಂಕರಸಂಬಂಧದಿಂದ ಬ್ರಾಹ್ಮಣನಿಗೆ ಬಹುಕಾಲದಿಂದ ಒದಗಿರುವ ಪಾಪವು ದಶಪ್ರಣವದಿಂದಲೂ, ಮೂರುನೂರು ಗಾಯತ್ರೀಪ್ರಾಣಾಯಾಮಗಳಿಂದಲೂ ಪರಿಹಾರವಾಗುವುದು. ಬ್ರಹ್ಮಹತ್ಯಾಪಾಪವೇ ಪರಿಹಾರವಾಗುವಾಗ ಉಳಿದ ಪಾಪಗಳನ್ನು ಹೇಳುವುದೇನು!

೧೭. ಅಥವಾ ಬ್ರಾಹ್ಮಣೋತ್ತಮನು ದೇವನಾದ ಪರಮಾತ್ಮನನ್ನು ಧ್ಯಾನಪೂಜಾದಿಗಳಿಂದ ಆರಾಧಿಸುವುದರಿಂದ ಪಾಪವನ್ನು ಕಳೆದುಕೊಳ್ಳುವನು.

ವೇದಾಧ್ಯಾಯೀ ಪಾಪಶತೈಃ ಕೃತೈರಪಿ ನ ಲಿಪ್ಯತೇ ॥ ೧೮ ॥

ಸ್ಮರನ್ವಿಷ್ಣುಂ ಪಠನ್ವೇದಂ ದದನ್ದಾನಂ ಯಜನ್ ಹರಿಂ ।
ಬ್ರಾಹ್ಮಣಃ ಶುದ್ಧ ಏವಾಸ್ತೇ ವಿರುದ್ಧಮಪಿ ತಾರಯೇತ್ ॥ ೧೯ ॥

ಏತತ್ತೇ ಸರ್ವಮಾಖ್ಯಾತಂ ಯತ್ಪೃಷ್ಟೋಽಹಂ ತ್ವಯಾ ನೃಪ ।
ಮನ್ವಾದಿಭಿರ್ವಿಸ್ತರಶಃ ಕಥಿತಂ ಯಚ್ಚ ಪಾರ್ಥಿವ ॥
ಸಮಾಸತಸ್ತಚ್ಚ ಮಯಾ ಕಥಿತಂ ನೃಪಸತ್ತಮ ॥ ೨೦ ॥

ಇತಿ ಶ್ರೀ ವರಾಹಪುರಾಣೇ ಪ್ರಾಗಿತಿಹಾಸೇ ಅಷ್ಟಷಷ್ಟಿತಮೋಽಧ್ಯಾಯಃ

---

೧೮. ವೇದಾಧ್ಯಯನ ಮಾಡುವವನು ನೂರಾರು ಪಾಪಗಳನ್ನು ಮಾಡಿದರೂ ಅವು ಅವನಿಗಂಟುವುದಿಲ್ಲ.

೧೯. ವಿಷ್ಣುವನ್ನು ಸ್ಮರಿಸುತ್ತ, ವೇದವನ್ನು ಹೇಳುತ್ತ, ದಾನಮಾಡುತ್ತ, ಹರಿಯನ್ನು ಪೂಜಿಸುತ್ತ ಇರುವ ಬ್ರಾಹ್ಮಣನು, ಶುದ್ಧನಾಗಿಯೇ ಇರುವನು. ಆವನು, ವಿರುದ್ಧನನ್ನೂ ದಾಟಿಸುವನು.

೨೦. ದೊರೆಯೇ, ನೀನು ನನ್ನನ್ನು ಕೇಳಿದೆಯಾದುದರಿಂದ ನಿನಗೆ ಇದೆಲ್ಲ ವನ್ನೂ ಹೇಳಿದೆನು. ದೊರೆಯೇ, ಮನುವೇ ಮೊದಲಾದವರು ವಿಸ್ತಾರವಾಗಿ ಹೇಳಿರುವುದನ್ನೇ ನಾನು ಸಂಕ್ಷೇಪವಾಗಿ ಹೇಳಿದ್ದೇನೆ.

ಅಧ್ಯಾಯದ ಸಾರಾಂಶ:—ಈ ಅಧ್ಯಾಯದಲ್ಲಿ ಯುಗಧರ್ಮಗಳನ್ನೂ ಗಮ್ಯಾಗಮ್ಯವಿಚಾರವನ್ನೂ ಕೇಳಿದ ಭದ್ರಾಶ್ವನಿಗೆ ಅಗಸ್ತ್ಯರು ಅದೆಲ್ಲವನ್ನೂ ಸಂಕ್ಷೇಪವಾಗಿ ಹೇಳಿರುವರು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಅರವತ್ತೆಂಟ ನೆಯ ಅಧ್ಯಾಯ.

|| ಶ್ರೀಃ ||

-x-

ಏಕೋನಸಪ್ತತಿತಮೋಧ್ಯಾಯಃ

ಅಥ ನಾರಾಯಣಾಶ್ಚರ್ಯವರ್ಣನಂ

|| ಭದ್ರಾಶ್ವ ಉವಾಚ ||

ಭಗವಂಸ್ತ್ವಚ್ಛರೀರೇ ತು ಯದ್ವೃತ್ತಂ ದ್ವಿಜಸತ್ತಮ ।
ಚಿರಜೀವೀ ಭವಾಂಸ್ತಸ್ಮೇ ವಕ್ತುಮರ್ಹಸಿ ಸತ್ತಮ || ೧ ||

|| ಅಗಸ್ತ್ಯ ಉವಾಚ ||

ಮಚ್ಛರೀರಮಿದಂ ರಾಜನ್ ಬಹುಕೌತೂಹಲಾನ್ವಿತಂ ।
ಅನೇಕ ಕಲ್ಪಸಂಸ್ಥಾಯಿ ವೇದವಿದ್ಯಾವಿಶೋಧಿತಂ || ೨ ||

ಅಟನ್ನಹಂ ಮಹೀಂ ಸರ್ವಾಂ ಗತವಾನಸ್ಮಿ ಪಾರ್ಥಿವ ।
ಇಲಾವೃತಂ ಮಹಾವರ್ಷಂ ಮೇರೋಃ ಪಾರ್ಶ್ವೇ ವ್ಯವಸ್ಥಿತಂ || ೩ ||

ಅರವತ್ತೊಂಭತ್ತನೆಯ ಅಧ್ಯಾಯ

ನಾರಾಯಣಾಶ್ಚರ್ಯವರ್ಣನೆ

೧. ಭದ್ರಾಶ್ವ—ಪೂಜ್ಯನಾದ ಬ್ರಾಹ್ಮಣೋತ್ತಮನೇ, ನೀನು ಚಿರಜೀವಿಯಾಗಿದ್ದೀಯೆ. ಆದುದರಿಂದ ನಿನ್ನ ದೇಹದ ವೃತ್ತಾಂತವನ್ನು ನನಗೆ ಹೇಳಬೇಕೆಂದು ಬೇಡುತ್ತೇನೆ.

೨. ಅಗಸ್ತ್ಯ—ದೊರೆಯೇ, ಅನೇಕ ಕಲ್ಪದಿಂದಿರುವ ವೇದವಿದ್ಯಾ ಪರಿಶೋಧಿತವಾದ ಈ ನನ್ನ ದೇಹವು ಬಹು ಆಶ್ಚರ್ಯಕರವಾದುದು.

೩. ದೊರೆಯೇ, ನಾನು ಭೂಮಿಯಲ್ಲೆಲ್ಲಾ ಸಂಚರಿಸುತ್ತಾ, ಮೇರು ಪರ್ವತದ ಪಕ್ಕದಲ್ಲಿರುವ ಇಳಾವೃತವೆಂಬ ಮಹಾವರ್ಷ (ಭೂಭಾಗ)ಕ್ಕೆ ಹೋದೆನು.

ತತ್ರ ರಮ್ಯಂ ಸರೋ ದೃಷ್ಟಂ ತಸ್ಯ ತೀರೇ ಮಹಾಕುಟೀ ‖ ೪ ‖

ತತ್ರೋಪವಾಸಶಿಥಿಲಂ ದೃಷ್ಟವಾನಸ್ಮಿ ತಾಪಸಂ |
ಅಸ್ಥಿಚರ್ಮಾವಶೇಷಂ ತು ಚೀರವಲ್ಕಲಧಾರಿಣಂ ‖ ೫ ‖

ತಂ ದೃಷ್ಟ್ವಾಹಂ ನೃಪಶ್ರೇಷ್ಠ ಏಷ ಕಸ್ತಾಪಸೋತ್ತಮಃ |
ವಿಶ್ವಸ್ಯ ಪ್ರತಿಪತ್ಯರ್ಥಂ ಮಯೋಕ್ತಃ ಸ ದ್ವಿಜೋತ್ತಮಃ ‖
ಬ್ರಹ್ಮನ್ಮೇ ದೀಯತಾಂ ಕಿಂಚಿದಾಗತೋಽಹಂ ತವಾಂತಿಕೇ ‖ ೬ ‖

ಇತಿ ಮಾಂ ಸ ಮುನಿಃ ಪ್ರಾಹ ಸ್ವಾಗತಂ ತೇ ದ್ವಿಜೋತ್ತಮ |
ಸ್ಥೀಯತಾಂ ಸ್ಥೀಯತಾಂ ಬ್ರಹ್ಮನ್ ಆತಿಥ್ಯಂ ಕರವಾಣಿ ತೇ ‖ ೭ ‖

ಏತಚ್ಛ್ರುತ್ವಾ ವಚಸ್ತಸ್ಯ ಪ್ರವಿಷ್ಟೋಽಹಂ ಕುಟೀಂ ತು ತಾಂ |
ತಾವತ್ಪಶ್ಯಾಮ್ಯಹಂ ವಿಪ್ರಂ ಜ್ವಲಂತಮಿವ ತೇಜಸಾ ‖ ೮ ‖

---

೪. ಅಲ್ಲಿ ರಮ್ಯವಾದ ಸರೋವರವೊಂದನ್ನು ಕಂಡೆನು. ಅದರ ದಡದಲ್ಲಿ ದೊಡ್ಡದಾದುದೊಂದು ಪರ್ಣಶಾಲೆ.

೫. ಅದರಲ್ಲಿ ನಾರುಬಟ್ಟೆಗಳನ್ನು ಧರಿಸಿ ಉಪವಾಸದಿಂದ ಕುಂದಿ, ಎಲುಬು ತೊಗಲುಗಳಿಂದುಳಿದಿರುವ ಒಬ್ಬ ಋಷಿಯನ್ನು ನೋಡಿದೆನು.

೬. ರಾಜೋತ್ತಮನೇ, ಅವನನ್ನು ಕಂಡು ನಾನು ಈ ಮುನಿವರ್ಯನು ಯಾರೆಂದು ಯೋಚಿಸುತ್ತ, ನಂಬಿ, ಗೌರವಕ್ಕಾಗಿ ಆ ಬ್ರಾಹ್ಮಣೋತ್ತಮನನ್ನು 'ಬ್ರಹ್ಮನೇ, ನಾನು ನಿನ್ನ ಸನ್ನಿಧಿಗೆ ಬಂದಿದ್ದೇನೆ. ನನಗೇನನ್ನಾದರೂ (ಸ್ವಲ್ಪ) ಕೊಡು' ಎಂದೆನು.

೭. ಆ ಮುನಿಯು ನನಗೆ 'ಬ್ರಾಹ್ಮಣೋತ್ತಮನೇ, ನಿನಗೆ ಸುಖಾಗಮನವಾಗಲಿ. ಬ್ರಹ್ಮನೇ, ಇರು; ಇರು. ನಿನಗೆ ನಾನು ಆತಿಥ್ಯವನ್ನು ಮಾಡಬೇಕು" ಎಂದು ಹೇಳಿದನು.

೮. ಈ ಮಾತನ್ನು ಕೇಳಿ ನಾನು ಆತನ ಪರ್ಣಶಾಲೆಯೊಳಕ್ಕೆ ಹೋಗಿ, ತನ್ನ ತೇಜಸ್ಸಿನಿಂದ ಜ್ವಲಿಸುವಂತೆ ಇರುವ ಆ ಮುನಿಯನ್ನು ನೋಡಿದೆನು.

ಭೂಮೌ ಸ್ಥಿತಂ ತು ಮಾಂ ದೃಷ್ಟ್ವಾ ಹುಂಕಾರಮಕರೋದ್ದ್ವಿಜಃ || ೯ ||

ತದ್ಧುಂಕಾರಾಚ್ಚ ಪಾತಾಲಂ ಭಿತ್ವಾ ಪಂಚ ಹಿ ಕನ್ಯಕಾಃ ।
ನಿರ್ಯಯುಃ ಕಾಂಚನಂ ಪೀಠಮೇಕಾ ತಾಸಾಂ ತು ಗೃಹ್ಯ ವೈ ||
ಸಾ ಮಾಂ ಪ್ರಾದಾತ್ತದಾ ಕನ್ಯಾ ಸಲಿಲಂ ಕರಸಂಸ್ಥಿತಂ || ೧೦ ||

ಗೃಹೀತ್ವಾನ್ಯಾ ತು ಮೇ ಪಾದೌ ಕ್ಷಾಲಿತುಂ ಚೋಪಚಕ್ರಮೇ ।
ಅನ್ಯೇ ದ್ವೇ ವ್ಯಜನಂ ಗೃಹ್ಯ ಮತ್ಪಕ್ಷಾಭ್ಯಾಂ ವ್ಯವಸ್ಥಿತೇ || ೧೧ ||

ತತೋ ಹುಂಕಾರಮಕರೋತ್ಪುನರೇವ ಮಹಾತಪಾಃ || ೧೨ ||

ತಚ್ಛಬ್ದಾನಂತರಂ ಹೇಮದ್ರೋಣೀಂ ಯೋಜನವಿಸ್ತೃತಾಂ ।
ಗೃಹ್ಯಾಜಗಾಮ ಅಕರೋತ್ಪ್ಲಾವಂ ಸರಸಿ ಪಾರ್ಥಿವ || ೧೩ ||

---

೯. ನಾನು ನೆಲದಮೇಲೆ ನಿಂತಿರುವುದನ್ನು ನೋಡಿ, ಆ ಬ್ರಾಹ್ಮಣನು ಹುಂಕಾರವನ್ನು ಮಾಡಿದನು.

೧೦–೧೧. ಆ ಹುಂಕಾರದಿಂದ ಐದು ಜನ ಕನ್ಯೆಯರು ಪಾತಾಳವನ್ನು ಭೇದಿಸಿಕೊಂಡು ಮೇಲೆ ಬಂದರು. ಅವರಲ್ಲೊಬ್ಬಳು ಸುವರ್ಣದ ಪೀಠವನ್ನು ಹಿಡಿದುಕೊಂಡು ನನಗೆ ಕೊಟ್ಟಳು. ಆಗ ಮತ್ತೊಬ್ಬಳು ಕಯ್ಯಲ್ಲಿದ್ದ ನೀರನ್ನು ನನ್ನ ಕಾಲುಗಳಿಗೆ ಹಾಕಿದಳು. ಇನ್ನೊಬ್ಬಳು ಕಾಲುಗಳನ್ನು ಹಿಡಿದುಕೊಂಡು ತೊಳೆಯಲು ಮೊದಲುಮಾಡಿದಳು. ಬೇರಿಬ್ಬರು ಬೀಸಣಿಗೆಯನ್ನು ಹಿಡಿದು ಕೊಂಡು ನನ್ನ ಪಕ್ಕಗಳಲ್ಲಿ ನಿಂತರು.

೧೨. ಬಳಿಕ ಆ ಮಹಾತಪಸ್ವಿಯು ಮತ್ತೆ ಹುಂಕರಿಸಿದನು.

೧೩. ಆ ಶಬ್ದವಾದೊಡನೆ ಒಬ್ಬಳು ಯೋಜನ ವಿಸ್ತಾರವುಳ್ಳ ಚಿನ್ನದ ದೋಣಿಯೊಂದನ್ನು ತೆಗೆದುಕೊಂಡು ಬಂದು ಆ ಸರೋವರದಲ್ಲಿ ತೇಲುಬಿಟ್ಟಳು.

ತಸ್ಯಾಂ ತು ಕನ್ಯಾಃ ಶತಶೋ ಹೇಮಕುಂಭಕರಾಃ ಶುಭಾಃ ।
ಆಯಯುಸ್ತಾ ಅಥೋ ದೃಷ್ಟ್ವಾ ಸ ಮುನಿಃ ಪ್ರಾಹ ಮಾಂ ನೃಪ ॥ ೧೪ ॥

ಸ್ನಾನಾರ್ಥಂ ಕಲ್ಪಿತಂ ಬ್ರಹ್ಮನ್ ಇದಂ ತೇ ಸರ್ವಮೇವ ತು ।
ದ್ರೋಣೀಂ ಪ್ರವಿಶ್ಯ ಚೈನಾಂ ತ್ವಂ ಸ್ನಾತುಮರ್ಹಸಿ ಸತ್ತಮ ॥ ೧೫ ॥

ತತೋಽಹಂ ತಸ್ಯ ವಚನಾತ್ತಸ್ಯಾಂ ದ್ರೋಣ್ಯಾಂ ನರಾಧಿಪ ।
ವಿಶಾಮಿ ತಾವತ್ಸರಸಿ ಸಾ ದ್ರೋಣೀ ಪ್ರತ್ಯಮಜ್ಜತ ॥ ೧೬ ॥

ದ್ರೋಣ್ಯಾಂ ಜಲೇ ನಿಮಗ್ನೋಽಹಂ ತಮೃಷಿಂ ತಚ್ಚ ವ್ಯೈ ಪುರಂ ।
ತಾವನ್ಮೇರುಗಿರೇರ್ಮೂರ್ಧ್ನಿ ಪಶ್ಯಾಮ್ಯಾತ್ಮಾನಮಾತ್ಮನಾ ॥ ೧೭ ॥

ಸಮುದ್ರಾನ್ಸಪ್ತ ಪಶ್ಯಾಮಿ ತಥೈವ ಕುಲಪರ್ವತಾನ್ ।
ಸಪ್ತದ್ವೀಪವತೀಂ ಪೃಥ್ವೀಂ ದೃಷ್ಟವಾನಸ್ಮಿ ಪಾರ್ಥಿವ ॥ ೧೮ ॥

೧೪–೧೫. ಆ ದೋಣಿಯಲ್ಲಿ ಚಿನ್ನದ ಕಲಶಗಳನ್ನು ಹಿಡಿದುಕೊಂಡಿರುವ ನೂರಾರುಜನ ಶುಭೆಯರಾದ ಕನ್ಯೆಯರು ಬಂದಿದ್ದರು. ದೊರೆಯೇ, ಬಳಿಕ ಆ ಮುನಿಯು ಅವರನ್ನು ನೋಡಿ, ನನಗೆ "ಬ್ರಹ್ಮನೇ, ಸತ್ಪುರುಷೋತ್ತಮನೇ, ಇದೆಲ್ಲವೂ ನಿನಗೆ ಸ್ನಾನಕ್ಕಾಗಿ ಸಿದ್ಧವಾಗಿದೆ. ಈ ದೋಣಿಗೆ ಹೋಗಿ, ನೀನು ಸ್ನಾನಮಾಡಬೇಕು" ಎಂದು ಹೇಳಿದನು.

೧೬. ದೊರೆಯೇ, ಆ ಮೇಲೆ ನಾನು ಅವನ ಮಾತಿನಂತೆ ಆ ದೋಣಿಗೆ ಹೋಗುತ್ತಲೂ ಅದು ಸರೋವರದಲ್ಲಿ ಮುಳುಗಿಬಿಟ್ಟಿತು.

೧೭. ದೋಣಿಯೊಳಗೆ ನೀರಿನಲ್ಲಿ ಮುಳುಗಿದ ನಾನು ಒಡನೆಯೇ ಆ ಮುನಿಯನ್ನೂ, ದಿವ್ಯವಾದ ಪುರವನ್ನೂ, ನನ್ನನ್ನೂ ಮೇರುಗಿರಿಯ ಮೇಲಿರುವರನ್ನಾಗಿ ಕಂಡೆನು.

೧೮. ಅಲ್ಲದೆ ಅಲ್ಲಿ ಸಪ್ತಸಮುದ್ರಗಳನ್ನೂ, ಸಪ್ತಕುಲಪರ್ವತಗಳನ್ನೂ, ಸಪ್ತದ್ವೀಪಗಳುಳ್ಳ ಪೃಥ್ವಿಯನ್ನೂ ನೋಡಿದೆನು.

ಅದ್ಯಾಪಿ ತಂ ಲೋಕವರಂ ಧ್ಯಾಯಂಸ್ತಿಷ್ಠಾಮಿ ಸುವ್ರತ ।
ಕದಾ ಪ್ರಾಪ್ಸ್ಯೇಥ ತಂ ಲೋಕಮಿತಿ ಚಿಂತಾಪರೋಭವಂ ॥ ೧೯ ॥

ಏವಂ ತೇ ಕೌತುಕಂ ರಾಜನ್ ಕಥಿತಂ ಪರಮೇಷ್ಠಿನಃ ।
ಯದ್ವೃತ್ತಂ ಮಮ ದೇಹೇ ತು ಕಿಮನ್ಯಚ್ಛ್ರೋತುಮಿಚ್ಛಸಿ ॥ ೨೦ ॥

ಇತಿ ಶ್ರೀ ವರಾಹಪುರಾಣೇ ನಾರಾಯಣಾಶ್ಚರ್ಯಕಥನಂ ನಾಮ
ಏಕೋನಸಪ್ತತಿತಮೋಧ್ಯಾಯಃ

---

೧೯. ಸುವ್ರತನಾದ ದೊರೆಯೇ, ಈಗಲೂ, ಆ ಉತ್ತಮಲೋಕವನ್ನು ಎಂದು ಪಡೆಯುವೆನೋ! ಎಂದು ಚಿಂತೆಯುಳ್ಳವನಾಗಿ ಅದನ್ನೇ ಧ್ಯಾನಿಸುತ್ತಿದ್ದೇನೆ.

೨೦. ರಾಜನೇ, ನನ್ನ ದೇಹದ ವೃತ್ತಾಂತವಾದ ಪರಮಾತ್ಮನ ಈ ಆಶ್ಚರ್ಯವನ್ನು ನಿನಗೆ ಹೇಳಿದೆನು. ಬೇರೇನನ್ನು ಕೇಳಬಯಸುತ್ತೀಯೆ?

ಅಧ್ಯಾಯದ ಸಾರಾಂಶ:—

ಈ ಅಧ್ಯಾಯದಲ್ಲಿ ಅಗಸ್ತ್ಯಮುನಿಯು ಭದ್ರಾಶ್ವರಾಜನಿಗೆ, ತಾನು ಹಿಂದೆ ಇಳಾವೃತವೆಂಬ ಭೂಭಾಗಕ್ಕೆ ಹೋಗಿ, ಅಲ್ಲಿ ಮಹಾಮುನಿಯೊಬ್ಬನನ್ನು ಕಂಡು, ಸತ್ಕೃತನಾಗಿ ಸ್ನಾನಕ್ಕೆಂದು ಅವನ ಮಾತಿನಂತೆ ದೋಣಿಯಲ್ಲಿ ಸರೋವರವನ್ನು ಪ್ರವೇಶಿಸಿ, ದೋಣಿಸಹಿತವಾಗಿ ಮುಳುಗಿ ಇದ್ದಕ್ಕಿದ್ದಹಾಗೆ ಮೇರುಪರ್ವತಾಗ್ರದಲ್ಲಿದ್ದ, ಪರಮಾತ್ಮಕೃತವಾದ ಆಶ್ಚರ್ಯಕರವಾದ ಆತ್ಮಕಥೆಯನ್ನು ಹೇಳಿರುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

–X–

ಸಪ್ತತಿತಮೋಽಧ್ಯಾಯಃ

ಅಥ ಕೃತತ್ರೇತಾದ್ವಾಪರಾದಿವಿಷಯಾಃ

॥ ಭದ್ರಾಶ್ವ ಉವಾಚ ॥

ಭಗವನ್ಕಿಂ ಕೃತಂ ಲೋಕಂ ತ್ವಯಾ ತಮನುಪಶ್ಯತಾ ।
ವ್ರತಂ ತಪೋ ವಾ ಧರ್ಮೋ ವಾ ಪ್ರಾಪ್ತ್ಯರ್ಥಂ ತಸ್ಯ ವೈ ಮುನೇ ॥ ೧ ॥

॥ ಅಗಸ್ತ್ಯ ಉವಾಚ ॥

ಅನಾರಾಧ್ಯಂ ಹರಿಂ ಭಕ್ತ್ಯಾ ನ ಲೋಕಾನ್ಕಾಮಯೇದ್ಬುಧಃ ।
ಆರಾಧಿತೇ ಹರೌ ಲೋಕಾಃ ಸರ್ವೇ ಕರತಲೇಽಭವನ್ ॥ ೨ ॥

ಏವಂ ಸಂಚಿಂತ್ಯ ರಾಜೇಂದ್ರ ಮಯಾ ವಿಷ್ಣುಃ ಸನಾತನಃ ।
ಆರಾಧಿತೋ ವರ್ಷಶತಂ ಕ್ರತುಭಿರ್ಭೂರಿದಕ್ಷಿಣೈಃ ॥ ೩ ॥

ಎಪ್ಪತ್ತನೆಯ ಅಧ್ಯಾಯ

ಕೃತತ್ರೇತಾದ್ವಾಪರಾದಿ ವಿಷಯಗಳು

೧. ಭದ್ರಾಶ್ವ—ಪೂಜ್ಯಮುನಿಯೇ, ಆ ಲೋಕವನ್ನು ನೋಡಿದ ನೀನು ಅದನ್ನು ಪಡೆಯಲು ಯಾವ ವ್ರತವನ್ನು, ತಪಸ್ಸನ್ನು ಅಥವಾ ಧರ್ಮವನ್ನು ಮಾಡಿದೆ?

೨–೩. ಅಗಸ್ತ್ಯಮುನಿ—ರಾಜೇಂದ್ರನೇ, ಹರಿಯನ್ನು ಭಕ್ತಿಯಿಂದಾರಾಧಿಸದೆ ವಿದ್ವಾಂಸನು, ಲೋಕಗಳನ್ನು ಪಡೆಯಲು ಬಯಸಬಾರದು. ಹರಿಯನ್ನಾರಾಧಿಸಿದರೆ ಲೋಕಗಳೆಲ್ಲವೂ ಕೈಗೆ ದೊರೆತಂತೆಯೇ ಎಂದು ಆಲೋಚಿಸಿ, ನಾನು ಸನಾತನನಾದ ವಿಷ್ಣುವನ್ನು ನೂರು ವರ್ಷಕಾಲ ಹೆಚ್ಚಾದ ದಕ್ಷಿಣೆಗಳುಳ್ಳ ಯಜ್ಞಗಳಿಂದ ಆರಾಧಿಸಿದೆನು.

ತತಃ ಕದಾಚಿದ್ಬಹುನಾ ಕಾಲೇನ ನೃಪನಂದನ ।
ಯಜತೋ ಮಮ ದೇವೇಶಂ ಯಜ್ಞಮೂರ್ತಿಂ ಜನಾರ್ದನಂ ॥ ೪ ॥

ಆಹೂತಾ ಆಗತಾ ದೇವಾಃ ಸಮಮೇವ ಸವಾಸವಾಃ ।
ಸ್ವೇ ಸ್ವೇ ಸ್ಥಾನೇ ಸ್ಥಿತಾ ಆಸನ್ ಯಾವದ್ದೇವಾಃ ಸವಾಸವಾಃ ॥ ೫ ॥

ತಾವತ್ತತ್ರೈವ ಭಗವಾನಾಗತೋ ವೃಷಭಧ್ವಜಃ ।
ಮಹಾದೇವೋ ವಿರೂಪಾಕ್ಷಃ ತ್ರ್ಯಂಬಕೋ ನೀಲಲೋಹಿತಃ ॥ ೬ ॥

ಸೋಽಪಿ ರೌದ್ರೇ ಸ್ಥಿತಃ ಸ್ಥಾನೇ ಬಭೂವ ಪರಮೇಶ್ವರಃ ॥ ೭ ॥

ತಾನ್ಸರ್ವಾನಾಗತಾನ್ದೃಷ್ಟ್ವಾ ದೇವಾನ್ಋಷಿಮಹೋರಗಾನ್ ।
ಸನತ್ಕುಮಾರೋ ಭಗವಾನಾಜಗಾಮಾಬ್ಜಸಂಭವಃ ॥ ೮ ॥

೪-೫. ರಾಜಕುಮಾರನೇ, ಬಹುಕಾಲ, ದೇವೇಶನೂ, ಯಜ್ಞಮೂರ್ತಿಯೂ ಆದ ಜನಾರ್ದನನನ್ನು (ಆರಾಧಿಸುತ್ತಿದ್ದ) ಪೂಜಿಸುತ್ತಿದ್ದ ನನ್ನ ಬಳಿಗೆ ಒಂದಾನೊಂದು ದಿನ ನಾನು ಕರೆಯಲು ಇಂದ್ರಸಹಿತರಾದ ದೇವತೆಗಳು ಒಟ್ಟಿಗೇ ಬಂದು, ಅವರವರ ಸ್ಥಾನದಲ್ಲಿದ್ದರು.

೬. ಅಷ್ಟರಲ್ಲಿ ಭಗವಂತನೂ, ವೃಷಭಧ್ವಜನೂ, ಮಹಾದೇವನೂ, ವಿರೂಪಾಕ್ಷನೂ, ನೀಲಲೋಹಿತನೂ ಆದ ಶಿವನೂ ಅಲ್ಲಿಗೇ ಬಂದನು.

೭. ಆ ಪರಮೇಶ್ವರನೂ ಅವನಿಗೋಸ್ಕರವೆಂದಿದ್ದ ಸ್ಥಾನದಲ್ಲಿ ಇದ್ದುಕೊಂಡಿದ್ದನು.

೮-೯. ಆ ದೇವಋಷಿಮಹೋರಗರೆಲ್ಲರೂ ಬಂದುದನ್ನು ಕಂಡು, ಬ್ರಹ್ಮಪುತ್ರನೂ, ಪೂಜ್ಯನೂ, ಭೂತವರ್ತಮಾನ ಭವಿಷ್ಯಜ್ಞನೂ, ಮಹಾಯೋಗಿಯೂ ಆದ ಸನತ್ಕುಮಾರ ಮಹಾಮುನಿಯು ಸೂರ್ಯನಂತೆ ಹೊಳೆಯುತ್ತ ಚರಿಸುವ

ತ್ರಸರೇಣುಪ್ರಮಾಣೇನ ವಿಮಾನೇ ಸೂರ್ಯಸನ್ನಿಭೇ ।
ಅವಸ್ಥಿತೋ ಮಹಾಯೋಗೀ ಭೂತಭವ್ಯಭವಿಷ್ಯವಿತ್ ॥
ಆಗಮ್ಯ ಶಿರಸಾ ರುದ್ರಂ ಸ ವವಂದೇ ಮಹಾಮುನಿಃ ॥ ೯ ॥

ತಾನಹಂ ಸಂಸ್ಥಿತಾನ್ದೇವಾನ್ನಾರದಾದೀನೃಷೀಂಸ್ತಥಾ ।
ಸನತ್ಕುಮಾರರುದ್ರೌ ಚ ದೃಷ್ಟ್ವಾಹಮಿದಮಬ್ರವಂ ॥
ಕ ಏಷ ಭವತಾಂ ಯಾಜ್ಯೋ ವರಿಷ್ಠಶ್ಚ ನೃಪೋತ್ತಮ ॥ ೧೦ ॥

ಏವಮುಕ್ತೇ ತದೋವಾಚ ರುದ್ರೋ ಮಾಂ ಸುರಸನ್ನಿಧೌ ॥ ೧೧ ॥

॥ ರುದ್ರ ಉವಾಚ ॥

ಶೃಣ್ವಂತು ವಿಬುಧಾಃ ಸರ್ವೇ ತಥಾ ದೇವರ್ಷಯೋಽಮಲಾಃ ॥ ೧೨ ॥

ಬ್ರಹ್ಮರ್ಷಯಶ್ಚ ವಿಖ್ಯಾತಾಃ ಸರ್ವೇ ಶೃಣ್ವಂತು ಮೇ ವಚಃ ।
ತ್ವಂ ಚಾಗಸ್ತ್ಯ ಮಹಾಬುದ್ಧೇ ಶೃಣು ಮೇ ಗದತೋ ವಚಃ ॥ ೧೩ ॥

ರೇಣುವಿನಷ್ಟಿರುವ ವಿಮಾನದಲ್ಲೇರಿಕೊಂಡು ಅಲ್ಲಿಗೆ ಬಂದು, ರುದ್ರನನ್ನು ತಲೆವಾಗಿ ವಂದಿಸಿದನು.

೧೦. ರಾಜೋತ್ತಮನೇ, ನಾನು ಅಲ್ಲಿ ಮಂಡಿಸಿರುವ ದೇವತೆಗಳನ್ನೂ ನಾರದಾದಿ ಋಷಿಗಳನ್ನೂ, ಸನತ್ಕುಮಾರ ರುದ್ರರನ್ನೂ, ನೋಡಿ, "ನಿಮ್ಮಲ್ಲಿ ಅತಿಶ್ರೇಷ್ಠರೂ, ಪೂಜ್ಯರೂ ಯಾರು?" ಎಂದು ಕೇಳಿದೆನು.

೧೧. ನಾನು ಹೀಗೆ ಕೇಳಲು ರುದ್ರನು ದೇವತೆಗಳ ಸನ್ನಿಧಿಯಲ್ಲಿಯೇ ನನಗೆ ಮುಂದಿನಂತೆ ಹೇಳಿದನು.

೧೨–೧೩. ರುದ್ರ—ದೇವತೆಗಳೆಲ್ಲರೂ ಕೇಳಿರಿ. ಅಮಲರಾದ ದೇವರ್ಷಿಗಳೂ, ಪ್ರಸಿದ್ಧರಾದ ಬ್ರಹ್ಮರ್ಷಿಗಳೂ ನನ್ನ ಮಾತನ್ನು ಕೇಳಿರಿ. ಮಹಾಬುದ್ಧಿಯುಳ್ಳ ಅಗಸ್ತ್ಯನೇ, ನಾನು ಹೇಳುವ ಮಾತನ್ನು ನೀನೂ ಕೇಳು.

ಯೋ ಯಜ್ಞೈರಿಜ್ಯತೇ ದೇವೋ ಯಸ್ಮಾತ್ಸರ್ವಮಿದಂ ಜಗತ್ |
ಉತ್ಪನ್ನಂ ಸರ್ವದಾ ಯಸ್ಮಿಂಲ್ಲೀನಂ ಭವತಿ ಸಾಮರಂ ||
ನಾರಾಯಣಃ ಪರೋ ದೇವಃ ಸರ್ವರೂಪೋ ಜನಾರ್ದನಃ ॥ ೧೪ ॥

ತ್ರಿಧಾತ್ಮಾನಂ ಸ ಭಗವಾನ್ಸಸರ್ಜ ಪರಮೇಶ್ವರಃ ॥ ೧೫ ॥

ರಜಸ್ತಮೋಭ್ಯಾಂ ಯುಕ್ತೋ ಭೂದ್ರಜಃ ಸತ್ವಾಧಿಕಂ ವಿಭುಃ |
ಸಸರ್ಜ ನಾಭಿಕಮಲಾದ್ಬ್ರಹ್ಮಾಣಂ ಕಮಲಾಸನಂ ||
ರಜಸಾ ತಮಸಾ ಯುಕ್ತಃ ಸೋಽಪಿ ಮಾಮಸೃಜದ್ವಿಭುಃ ॥ ೧೬ ॥

ಯತ್ಸತ್ವಂ ಸ ಹರಿರ್ದೇವೋ ಯೋ ಹರಿಸ್ತತ್ಪರಂ ಪದಂ ।
ಯೋ ಸತ್ವರಜಸೀ ಸೋಽಪಿ ಬ್ರಹ್ಮಾ ಕಮಲಸಂಭವಃ ॥ ೧೭ ॥

ಯೋ ಬ್ರಹ್ಮಾ ಸ್ಯೈವ ದೇವಸ್ತು ಯೋ ದೇವಃ ಸ ಚತುರ್ಮುಖಃ ||
ಯದ್ರಜಸ್ತಮಸೋಪೇತಂ ಸೋಽಹಂ ನಾಸ್ತ್ಯತ್ರ ಸಂಶಯಃ ॥ ೧೮ ॥

---

೧೪. ಯಾರು ಯಜ್ಞಗಳಿಂದ ಯಾವಾಗಲೂ ಪೂಜಿತನಾಗುವನೋ, ಯಾರಿಂದ, ದೇವತೆಗಳಿಂದೊಡಗೂಡಿದ ಈ ಸರ್ವಜಗತ್ತೂ ಉದಿಸಿತೋ, ಯಾರಲ್ಲಿ ಲೀನವಾಗುವುದೋ ಆ ಸರ್ವರೂಪನೂ, ಜನಾರ್ದನನೂ ಆದ ನಾರಾಯಣನೇ ಪರದೇವನು.

೧೫. ಭಗವಂತನಾದ ಆ ಪರಮೇಶ್ವರನೇ ತನ್ನನ್ನು ಮೂರು ಬಗೆಯಾಗಿ ಸೃಷ್ಟಿಸಿದನು.

೧೬. ಆ ವಿಭುವು ರಜಸ್ತಮೋಗುಣಗಳಿಂದ ಯುಕ್ತನಾದನು. ನಾಭಿಕಮಲದಿಂದ ರಜಸ್ಸತ್ವಾಧಿಕನೂ, ಕಮಲಾಸನನೂ ಆದ ಬ್ರಹ್ಮನನ್ನು ಸೃಷ್ಟಿಸಿದನು. ಆ ವಿಭುವೇ ರಜೋಗುಣದಿಂದಲೂ, ತಮೋಗುಣದಿಂದಲೂ ಯುಕ್ತನಾಗಿ ನನ್ನನ್ನು ಸೃಷ್ಟಿಸಿದನು.

೧೭–೧೮. ಸತ್ವವೇ ದೇವನಾದ ಹರಿ. ಹರಿಯೇ ಪರಮಪದ, ಸತ್ವ ರಜಸ್ಸೇ ಕಮಲಸಂಭವನಾದ ಬ್ರಹ್ಮ. ಬ್ರಹ್ಮನೇ ದೇವ. ದೇವನೇ ಚತುರ್ಮುಖನಾದ ಬ್ರಹ್ಮ. ರಜಸ್ತಮಸ್ಸುಗಳಿಂದ ಕೂಡಿದವನೇ ನಾನು. ಇದರಲ್ಲಿ ಸಂದೇಹವಿಲ್ಲ.

ಸತ್ತ್ವಂ ರಜಸ್ತಮಶ್ಚೈವ ತ್ರಿತಯಂ ಚೈತದುಚ್ಯತೇ ।
ಸತ್ತ್ವೇನ ಮುಚ್ಯತೇ ಜಂತುಃ ಸತ್ತ್ವಂ ನಾರಾಯಣಾತ್ಮಕಂ ॥ ೧೯ ॥

ರಜಸಾ ಸತ್ತ್ವಯುಕ್ತೇನ ಭವೇತ್ಸೃಷ್ಟೀ ರಜೋಧಿಕಾ ।
ತಚ್ಚ ಪೈತಾಮಹಂ ವೃತ್ತಂ ಸರ್ವಶಾಸ್ತ್ರೇಷು ಪಠ್ಯತೇ ॥ ೨೦ ॥

ಯದ್ವೇದಬಾಹ್ಯಂ ಕರ್ಮ ಸ್ಯಾಚ್ಛಾಸ್ತ್ರಮುದ್ದಿಶ್ಯ ಸೇವ್ಯತೇ ।
ತದ್ರೌದ್ರಮಿತಿ ವಿಖ್ಯಾತಂ ತನ್ನೇಷ್ಟಂ ಗದಿತಂ ನೃಣಾಂ ॥ ೨೧ ॥

ಯದ್ವಾ ನ ರಜಸಾ ಕರ್ಮ ಕೇವಲಂ ತಾಮಸಂ ತು ಯತ್ ।
ತದ್ದುರ್ಗತಿಪರಂ ನೃಣಾಂ ಇಹಲೋಕೇ ಪರತ್ರ ಚ ॥ ೨೨ ॥

ಸತ್ತ್ವೇನ ಮುಚ್ಯತೇ ಜಂತುಃ ಸತ್ತ್ವಂ ನಾರಾಯಣಾತ್ಮಕಂ ।
ನಾರಾಯಣಶ್ಚ ಭಗವಾನ್ ಯಜ್ಞರೂಪೀ ವಿಭಾವ್ಯತೇ ॥ ೨೩ ॥

---

೧೯. ಸತ್ವ, ರಜಸ್ಸು, ತಮಸ್ಸು ಎಂದು ಗುಣಗಳು ಮೂರನ್ನು ಹೇಳಿದೆ. ಪ್ರಾಣಿಯು ಸತ್ವದಿಂದ ಮುಕ್ತವಾಗುವುದು. ಸತ್ವವು ನಾರಾಯಣಾತ್ಮಕ.

೨೦. ಸತ್ವಯುಕ್ತವಾದ ರಜಸ್ಸಿನಿಂದ ರಜೋಧಿಕವಾದ ಸೃಷ್ಟಿಯಾಗುವುದು. ಆ ಸೃಷ್ಟಿಯು ಬ್ರಹ್ಮನ ಕಾರ್ಯವೆಂದು ಸರ್ವಶಾಸ್ತ್ರಗಳಲ್ಲಿಯೂ ಹೇಳಿದೆ.

೨೧. ಶಾಸ್ತ್ರದಲ್ಲಿ ಹೇಳಿದೆಯೆಂದು ವೇದಬಾಹ್ಯವಾದ ಕರ್ಮವನ್ನು ಆಚರಿಸುವುದು ರೌದ್ರವೆನಿಸುವುದು. ಅದು ಜನರಿಗೆ ಹಿತವಾದುದಲ್ಲವೆಂದು ಹೇಳಿದೆ.

೨೨. ಯಾವುದು ರಜೋಯುಕ್ತವೂ ಅಲ್ಲದೆ ಕೇವಲ ತಾಮಸಕರ್ಮವೋ ಅದು ಮನುಷ್ಯರಿಗೆ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ದುರ್ಗತಿಗೆ ಕಾರಣವಾದುದು.

೨೩. ಪ್ರಾಣಿಯು ಸತ್ವ(ಗುಣ)ದಿಂದ ಮುಕ್ತವಾಗುವುದು. ಸತ್ವ(ಗುಣ)ವು ನಾರಾಯಣಾತ್ಮಕವಾದುದು. ನಾರಾಯಣನು ಭಗವಂತನಾದ ಯಜ್ಞರೂಪಿಯೆಂದು ಹೇಳಿಸಿಕೊಳ್ಳುವನು.

ಕೃತೇ ನಾರಾಯಣಃ ಶುದ್ಧಃ ಸೂಕ್ಷ್ಮರೂಪ ಉಪಾಸ್ಯತೇ ।
ತ್ರೇತಾಯಾಂ ಯಜ್ಞರೂಪೇಣ ಪಂಚರಾತ್ರೈಸ್ತು ದ್ವಾಪರೇ ॥ ೨೪ ॥

ಕಲೌ ಮತ್ಕೃತಮಾರ್ಗೇಣ ಬಹುರೂಪೇಣ ತಾಮಸೈಃ ।
ಇಜ್ಯತೇ ದ್ವೇಷಬುದ್ಧ್ಯಾ ಸಃ ಪರಮಾತ್ಮಾ ಜನಾರ್ದನಃ ॥ ೨೫ ॥

ನ ತಸ್ಮಾತ್ಪರತೋ ದೇವೋ ಭವಿತಾ ನ ಭವಿಷ್ಯತಿ ॥ ೨೬ ॥

ಯೋ ವಿಷ್ಣುಃ ಸ ಸ್ವಯಂ ಬ್ರಹ್ಮಾ ಯೋ ಬ್ರಹ್ಮಾಸೌ ಮಹೇಶ್ವರಃ ।
ವೇದತ್ರಯೇ ಚ ಯಜ್ಞೇಽಸ್ಮಿನ್ ಪಂಡಿತೇಷ್ವೇಷ ನಿಶ್ಚಯಃ ॥ ೨೭ ॥

ಯೋ ಭೇದಂ ಕುರುತೇಽಸ್ಮಾಕಂ ತ್ರಯಾಣಾಂ ದ್ವಿಜಸತ್ತಮ ।
ಸ ಪಾಪಕಾರೀ ದುಷ್ಟಾತ್ಮಾ ದುರ್ಗತಿಂ ಸಮವಾಪ್ನುಯಾತ್ ॥ ೨೮ ॥

---

೨೪. ಕೃತಯುಗದಲ್ಲಿ ನಾರಾಯಣನು ಶುದ್ಧ ಸೂಕ್ಷ್ಮರೂಪದಿಂದ ಸೇವಿಸಲ್ಪಡುವನು. ತ್ರೇತಾಯುಗದಲ್ಲಿ ಯಜ್ಞರೂಪದಿಂದಲೂ ದ್ವಾಪರದಲ್ಲಿ ಪಂಚರಾತ್ರಗಳಿಂದಲೂ ಪೂಜಿಸಲ್ಪಡುವನು.

೨೫. ಕಲಿಯುಗದಲ್ಲಿ ತಾಮಸರು ಜನಾರ್ದನನಾದ ಆ ಪರಮಾತ್ಮನನ್ನು ನಾನು ಮಾಡಿರುವ ಬಹುರೂಪವಾದ ಮಾರ್ಗದಿಂದ ದ್ವೇಷಬುದ್ಧಿಯಿಂದ ಪೂಜಿಸುವರು.

೨೬. ಅವನಿಗಿಂತಲೂ (ನಾರಾಯಣನಿಗಿಂತಲೂ) ಅಧಿಕನಾದ ಅಥವಾ ಬೇರೆಯಾದ ದೇವನಾಗುವವನು ಇರುವುದಿಲ್ಲ.

೨೭. ಯಾರು ವಿಷ್ಣುವೋ ಅವನೇ ಸಾಕ್ಷಾದ್ಬ್ರಹ್ಮನು. ಯಾರು ಬ್ರಹ್ಮನೋ ಅವನೇ ಈ ಮಹೇಶ್ವರನು. ಮೂರು ವೇದಗಳಲ್ಲಿಯೂ, ಈ ಯಜ್ಞದಲ್ಲಿಯೂ, ಜ್ಞಾನಿಗಳಲ್ಲಿಯೂ ಇದೇ ನಿಶ್ಚಯವು.

೨೮. ಬ್ರಾಹ್ಮಣೋತ್ತಮನೇ, ತ್ರಿಮೂರ್ತಿಗಳಾದ ನಮ್ಮಲ್ಲಿ ಯಾರು ಭೇದವನ್ನು ಮಾಡುತ್ತಾನೋ ಆ ಪಾಪಕಾರಿಯಾದ ದುಷ್ಟಾತ್ಮನು ದುರ್ಗತಿಯನ್ನು ಪಡೆಯುವನು.

ಇದಂ ಚ ಶೃಣು ಮೋಗಸ್ತ್ಯ ಪ್ರಾಕ್ತನಂ ಗದತಸ್ತಥಾ |
ಯಥಾಕಲ್ಪಂ ಹರೇರ್ಭಕ್ತಿಂ ನ ಕುರ್ವಂತೀಹ ಮಾನವಾಃ || ೨೯ ||

ಭೂಲೋಕವಾಸಿನಸ್ಸರ್ವೇ ಪುರಾ ಯಷ್ಟ್ವಾ ಜನಾರ್ದನಂ |
ಭುವರ್ಲೋಕಂ ಪ್ರಪದ್ಯಂತೇ ತತಸ್ತಾ ಅಪಿ ಕೇಶವಂ ||
ಆರಾಧ್ಯ ಸ್ವರ್ಗತಿಂ ಯಾಂತಿ ಕ್ರಮಾನ್ಮುಕ್ತ್ವಾ ವ್ರಜಂತಿ ಹ || ೩೦ ||

ಏವಂ ಮುಕ್ತಿಪದೇ ವ್ಯಾಪ್ತೇ ಸರ್ವಲೋಕೈಸ್ತಥೈವ ಚ |
ಮುಕ್ತಿಭಾಜಸ್ತತೋ ದೇವಾಸ್ತಂ ದಧ್ಯುಃ ಪ್ರಯತಾ ಹರಿಂ || ೩೧ ||

ಸೋಪಿ ಸರ್ವಗತತ್ವಾಚ್ಚ ಪ್ರಾದುರ್ಭೂತಃ ಸನಾತನಃ |
ಉವಾಚ ಬ್ರೂತ ಕಿಂ ಕಾರ್ಯಂ ಸರ್ವೇ ಯೋಗಿವರಾಃ ಸುರಾಃ || ೩೨ ||

---

೨೯. ಅಗಸ್ತ್ಯನೇ, ನಾನು ಹೇಳುವ ಈ ಪೂರ್ವವಿಚಾರವನ್ನು ಹಾಗೆಯೇ ಕೇಳು. ಕಲ್ಪಾನುಸಾರವಾಗಿ ಈ ಲೋಕದಲ್ಲಿ ಮನುಷ್ಯರು ಹರಿಭಕ್ತಿಯನ್ನು ಮಾಡುವುದಿಲ್ಲ

೩೦. ಪೂರ್ವದಲ್ಲಿ ಭೂಲೋಕವಾಸಿಗಳೆಲ್ಲರೂ ಜನಾರ್ದನನನ್ನು ಪೂಜಿಸಿ ಭುವರ್ಲೋಕವನ್ನು ಸೇರುತ್ತಿದ್ದರು. ಅಲ್ಲಿದ್ದುಕೊಂಡು ಆ ಕೇಶವನನ್ನು ಆರಾಧಿಸಿ ಸ್ವರ್ಗಲೋಕವನ್ನು (ಪಡೆಯುತ್ತಿದ್ದರು) ಸೇರುತ್ತಿದ್ದರು. ಹೀಗೆ ಕ್ರಮಕ್ರಮವಾಗಿ ಮುಕ್ತಿಯನ್ನು ಪಡೆಯುತ್ತಿದ್ದರು.

೩೧. ಹೀಗೆ ಸರ್ವಲೋಕಗಳವರಿಂದಲೂ, ಮುಕ್ತಿಸ್ಥಾನವು ತುಂಬಲು ಬಳಿಕ ಮುಕ್ತಿಯನ್ನು ಪಡೆದ ದೇವತೆಗಳು ಪರಿಶುದ್ಧರಾಗಿ ಆ ಹರಿಯನ್ನು ಧ್ಯಾನಿಸಿದರು.

೩೨. ಸನಾತನನಾದ ಆ ದೇವನೂ ಸರ್ವಗತನಾದುದರಿಂದ ಅವರಿಗೆ ಕಾಣಿಸಿಕೊಂಡು “ ಸರ್ವಯೋಗಿವರರೇ, ದೇವತೆಗಳೇ, ಮಾಡಬೇಕಾದುದೇನು? ಹೇಳಿರಿ ” ಎಂದನು.

ತೇ ತಂ ಪ್ರಣಮ್ಯ ದೇವೇಶಮೂಚುಶ್ಚ ಪರಮೇಶ್ವರಂ ।
ದೇವದೇವ ಜನಸ್ಸರ್ವೋ ಮುಕ್ತಿಮಾರ್ಗೇ ವ್ಯವಸ್ಥಿತಃ ॥
ಕಥಂ ಸೃಷ್ಟಿಶ್ಚ ಭವಿತಾ ನರಕೇಷು ಚ ಕೋ ವಸೇತ್ ॥ ೩೩ ॥

ಏವಮುಕ್ತಸ್ತತೋ ದೇವೈಸ್ತಾನುವಾಚ ಜನಾರ್ದನಃ ॥ ೩೪ ॥

ಯುಗಾನಿ ತ್ರೀಣಿ ಬಹವೋ ಮಾಮುಪೈಷ್ಯಂತಿ ಮಾನವಾಃ ।
ಅಂತ್ಯೇ ಯುಗೇ ಪ್ರವಿರಲಾ ಭವಿಷ್ಯಂತಿ ಮದಾಶ್ರಯಾಃ ॥ ೩೫ ॥

ಏಷ ಮೋಹಂ ಸೃಜಾಮ್ಯಾಶು ಯೋ ಜನಂ ಮೋಹಯಿಷ್ಯತಿ ॥ ೩೬ ॥

ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ।
ಅಲ್ಪಾಯಾಸಂ ದರ್ಶಯಿತ್ವಾ ಮೋಹಯಾಶು ಮಹೇಶ್ವರ ॥ ೩೭ ॥

---

೩೩. ಅವರು ದೇವೇಶನಾದ ಆ ಪರಮೇಶ್ವರನನ್ನು ವಂದಿಸಿ "ದೇವದೇವ, ಜನವೆಲ್ಲವೂ ಮುಕ್ತಿಮಾರ್ಗದಲ್ಲಿ ನಿಂತಿವೆ. ಸೃಷ್ಟಿಯಾಗುವುದು ಹೇಗೆ? ನರಕದಲ್ಲಿ ವಾಸಿಸುವವನಾರು? ಎಂದರು.

೩೪. ಅವರಿಂದ ಹೀಗೆ ಹೇಳಿಸಿಕೊಂಡ ಜನಾರ್ದನನು ಅವರನ್ನು ಕುರಿತು ಹೇಳಿದನು.

೩೫. "ಮೊದಲ ಮೂರು ಯುಗಗಳಲ್ಲಿ ಬಹು ಜನರು ನನ್ನನ್ನು ಸೇರುವರು. ಕಡೆಯ ಕಲಿಯುಗದಲ್ಲಿ ನನ್ನನ್ನಾಶ್ರಯಿಸುವವರು ಬಹು ವಿರಳರಾಗುವರು.

೩೬. ಯಾವುದು ಜನವನ್ನು ಬೇಗನೆ ಮೋಹಗೊಳಿಸುವುದೋ ಅಂತಹ ಮೋಹ (ಅಜ್ಞಾನ)ವನ್ನು ಸೃಜಿಸುತ್ತೇನೆ.

೩೭. "ಮಹಾಬಾಹುವಾದ ರುದ್ರನೇ, ನೀನೂ ಮೋಹಶಾಸ್ತ್ರಗಳನ್ನು ಮಾಡಿಸು. ಮಹೇಶ್ವರನೇ, ಅಲ್ಪಾಯಾಸವನ್ನು ತೋರಿಸಿ, ಬೇಗನೆ ಮೋಹಗೊಳಿಸು" ಎಂದನು.

ಏವಮುಕ್ತ್ವಾ ತದಾ ತೇನ ದೇವೇನ ಪರಮೇಷ್ಠಿನಾ ।
ಆತ್ಮಾ ತು ಗೋಪಿತಸ್ಸದ್ಯಃ ಪ್ರಕಾಶೋಽಹಂ ಕೃತಸ್ತದಾ ॥ ೩೮ ॥

ತಸ್ಮಾದಾರಭ್ಯ ಕಾಲಾತ್ತು ಮತ್ಪ್ರಣೀತೇಷು ಸತ್ತಮ ।
ಶಾಸ್ತ್ರೇಷ್ವಭಿರತೋ ಲೋಕೋ ಬಾಹುಲ್ಯೇನ ಭವೇದತಃ ॥ ೩೯ ॥

ವೇದಾನುವರ್ತಿನಂ ಮಾರ್ಗಂ ದೇವಂ ನಾರಾಯಣಂ ತಥಾ ।
ಏಕೀಭಾವಂ ಚ ಪಶ್ಯಂತೋ ಮುಕ್ತಾಶ್ಚೈವ ಭವಂತಿ ತೇ ॥ ೪೦ ॥

ಮಾಂ ವಿಷ್ಣೋರ್ವ್ಯತಿರಿಕ್ತಂ ಯೇ ಬ್ರಹ್ಮಣಶ್ಚ ದ್ವಿಜೋತ್ತಮ ।
ಭಜಂತೇ ಪಾಪಕರ್ಮಾಣಸ್ತೇ ಯಾಂತಿ ನರಕಂ ನರಾಃ ॥ ೪೧ ॥

ಯೇ ವೇದಮಾರ್ಗನಿರ್ಮುಕ್ತಾಸ್ತೇಷಾಂ ಮೋಹಾರ್ಥಮೇವ ಚ ।
ನಯಸಿದ್ಧಾಂತಸಂಜ್ಞಾಭಿರ್ಮಯಾ ಶಾಸ್ತ್ರಂ ತು ದರ್ಶಿತಂ ॥ ೪೨ ॥

---

೩೮. ಹೀಗೆ ಹೇಳಿ ಪರಮೇಷ್ಠಿಯಾದ ಆ ದೇವನು ಒಡನೆಯೇ ತಾನು ಮರೆಸಿಕೊಂಡನು. ಆಗ ಕೂಡಲೆ ನಾನು ಪ್ರಕಾಶಕ್ಕೆ ಬಂದೆನು.

೩೯–೪೦. ಸಜ್ಜನೋತ್ತಮನೇ, ಆಕಾಲಮೊದಲುಗೊಂಡು ನಾನು ರಚಿಸಿದ ಶಾಸ್ತ್ರಗಳಲ್ಲಿ ಲೋಕವು ಹೆಚ್ಚಾಗಿಯೇ ಆಸಕ್ತಿಯುಳ್ಳದಾಗುವುದು. ಆದುದರಿಂದ ವೇದಾನುಸಾರವಾದ ಮಾರ್ಗವನ್ನೂ, ದೇವನಾದ ನಾರಾಯಣ ನನ್ನೂ ಏಕೀಭಾವವನ್ನೂ ನೋಡುವವರು ಮುಕ್ತರೇ ಆಗುವರು.

೪೧. ಬ್ರಾಹ್ಮಣೋತ್ತಮನೇ, ಯಾರು ನನ್ನನ್ನು ವಿಷ್ಣುವಿಗೂ, ಬ್ರಹ್ಮನಿಗೂ ವ್ಯತಿರಿಕ್ತ (ಬೇರೆಯವ)ನೆಂದು ಪೂಜಿಸುವರೋ ಅವರು ಪಾಪಕರ್ಮಿಗಳು. ಅವರು ನರಕಕ್ಕೆ ಹೋಗುವರು.

೪೨. ವೇದಮಾರ್ಗವನ್ನು ಬಿಟ್ಟವರ ಮೋಹಾರ್ಥವಾಗಿಯೇ (ನಯ) ತರ್ಕಸಿದ್ಧಾಂತಗಳೆಂಬ ಹೆಸರುಗಳಿಂದ ನಾನು ಶಾಸ್ತ್ರವನ್ನು ಪ್ರಕಟಿಸಿದ್ದೇನೆ.

ಪಾಶೋಽಯಂ ಪಶುಭಾವಸ್ತು ಸ ಯದಾ ಪತಿತೋ ಭವೇತ್ ।
ತದಾ ಪಾಶುಪತಂ ಶಾಸ್ತ್ರಂ ಜಾಯತೇ ವೇದಸಂಜ್ಞಿತಂ ॥ ೪೩ ॥

ವೇದಮೂರ್ತಿರಹಂ ವಿಪ್ರ ನಾನ್ಯಶಾಸ್ತ್ರಾರ್ಥವಾದಿಭಿಃ ।
ಜ್ಞಾಯತೇ ಮತ್ಸ್ವರೂಪಂ ತು ಮುಕ್ತ್ವಾ ವೇದ*ಮನಾದಿಮತ್ ।
ವೇದವೇದ್ಯೋಽಸ್ಮಿ ವಿಪ್ರರ್ಷೇ ಬ್ರಾಹ್ಮಣೈಶ್ಚ ವಿಶೇಷತಃ ॥ ೪೪ ॥

ಯುಗಾನಿ ತ್ರೀಣ್ಯಹಂ ವಿಪ್ರ ಬ್ರಹ್ಮಾ ವಿಷ್ಣುಸ್ತಥೈವ ಚ ।
ತ್ರಯೋಽಪಿ ಸತ್ವಾದಿಗುಣಾಸ್ತ್ರಯೋ ವೇದಾಸ್ತ್ರಯೋಽಗ್ನಯಃ ॥ ೪೫ ॥

ತ್ರಯೋ ಲೋಕಾಸ್ತ್ರಯಃ ಸಂಧ್ಯಾಸ್ತ್ರಯೋ ವರ್ಣಾಸ್ತಥೈವ ಚ ।
ಸವನಾನಿ ತು ತಾವಂತಿ ತ್ರಿಧಾ ಬದ್ಧಮಿದಂ ಜಗತ್ ॥ ೪೬ ॥

---

೪೩. ವೇದಮಾರ್ಗವನ್ನು ಬಿಟ್ಟ ಪಶುಭಾವದವನು ಪತಿತನಾದಾಗ ಪಾಶರೂಪವಾದ ಪಾಶುಪತಶಾಸ್ತ್ರವೇ ಅವನಿಗೆ ವೇದವಾಗುವುದು.

೪೪. ಬ್ರಹ್ಮರ್ಷಿಯೇ, ನಾನು ವೇದಮೂರ್ತಿಯು. ಅನಾದಿಯಾದ ವೇದವನ್ನು ಬಿಟ್ಟ ಅನ್ಯಶಾಸ್ತ್ರಾರ್ಥವಾದಿಗಳು ನನ್ನ ಸ್ವರೂಪವನ್ನು ತಿಳಿಯಲಾರರು. ವಿಶೇಷವಾಗಿ ಬ್ರಾಹ್ಮಣರು ವೇದಗಳಿಂದ ನನ್ನನ್ನು ತಿಳಿಯುವರು.

೪೫–೪೬. ಬ್ರಾಹ್ಮಣನೇ, ಮೂರು ಯುಗಗಳೂ, ಬ್ರಹ್ಮವಿಷ್ಣುಗಳೂ, ಸತ್ವಾದಿ ಮೂರು ಗುಣಗಳೂ, ಋಗ್ಯಜುಸ್ಸಾಮವೇದತ್ರಯವೂ, ದಕ್ಷಿಣಗಾರ್ಹಪತ್ಯಾಹವನೀಯಗಳೆಂಬ ಮೂರು ಅಗ್ನಿಗಳೂ, ಮೂರು ಲೋಕಗಳೂ, ತ್ರಿಸಂಧ್ಯೆಗಳೂ ತ್ರಿವರ್ಣಗಳೂ, ತ್ರಿಸವನಗಳೂ ನಾನೇ. ಈ ಲೋಕವು ಮೂರು ಬಗೆಯಾಗಿ ಬಂಧಿತವಾಗಿದೆ, (ವಿಂಗಡವಾಗಿದೆ).

---

* ದೇವಮನಾದಿಮತ್.

ಯ ಏವಂ ವೇತ್ತಿ ವಿಪ್ರರ್ಷೇ ಪರಂ ನಾರಾಯಣಂ ತಥಾ ।
ಅಪರಂ ಪದ್ಮಯೋನಿಂ ತು ಬ್ರಹ್ಮಾಣಂ ತ್ವಪರಂ ತು ಮಾಂ ॥
ಗುಣತೋ ಮುಖ್ಯತಸ್ತ್ವೇಕ *ಏವಾಹಂ ಮೋಹ ಇತ್ಯಭೀ ॥ ೪೭ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಕೃತತ್ರೇತಾದ್ವಾಪರ ವರ್ಣನಂ ನಾಮ ಸಪ್ತತಿತಮೋಽಧ್ಯಾಯಃ

---

೪೭. ಬ್ರಹ್ಮರ್ಷಿಯೇ, ಗುಣಗಳಿಂದ ನಾರಾಯಣನನ್ನೇ ಪರನನ್ನಾಗಿಯೂ, ಪದ್ಮಗರ್ಭನಾದ ಬ್ರಹ್ಮನನ್ನೂ ನನ್ನನ್ನೂ ಅಪರರನ್ನಾಗಿಯೂ ಜ್ಞಾನಿಯು ತಿಳಿಯುತ್ತಾನೆ. ಮುಖ್ಯವಾಗಿಯಾದರೆ ನಾನೊಬ್ಬನೇ. ಇಬ್ಬರೆಂಬುದು (ಮೋಹ)ಅಜ್ಞಾನ

ಅಧ್ಯಾಯದ ಸಾರಾಂಶ :—

ಹರಿಯನ್ನು ಯಜ್ಞಗಳಿಂದಾರಾಧಿಸುತ್ತಿದ್ದ ಅಗಸ್ತ್ಯನೆಡೆಗೆ ಬ್ರಹ್ಮಾದಿ ದೇವತೆಗಳು ಬಂದುದು, ಅವರಲ್ಲಿ ಯಾರು ಪರಮಪೂಜ್ಯರೆಂದು ಚಿಂತಿಸಿದ ಅಗಸ್ತ್ಯನಿಗೆ ರುದ್ರನು ತ್ರಿಮೂರ್ತಿಗಳಲ್ಲಿ ಭೇದವಿಲ್ಲವಾದರೂ ನಾರಾಯಣನೇ ಪರನೆಂದೂ ಶ್ರೇಷ್ಠನೆಂದೂ ಹೇಳಿ, ಕೃತಾದಿಯುಗಗಳಲ್ಲಿ ಆ ನಾರಾಯಣನನ್ನು ಪೂಜಿಸುವ ಕ್ರಮವನ್ನು ತಿಳಿಸುವುದು, ನಾರಾಣನು ಹೇಳಿದಂತೆ ರುದ್ರನು ಪಾಶುಪತವೆಂಬ ಮೋಹಶಾಸ್ತ್ರವನ್ನು ಸೃಷ್ಟಿಸಿ, ವೇದಮಾರ್ಗರಹಿತರು ಪರಮಾತ್ಮನನ್ನು ಅರಿಯಲಾರರೆಂದು ತಿಳಿಸಿದುದು. ಈ ಅಂಶಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಪ್ಪತ್ತನೆಯ ಅಧ್ಯಾಯ.

---

* ಇಲ್ಲಿ "ಅಹಂ" ಶಬ್ದಕ್ಕೆ ನನ್ನ ಅಂತರ್ಯಾಮಿಯೆಂದು ಅರ್ಥವೆಂತಲೂ, ಆ ನಾರಾಯಣನೊಬ್ಬನೇ ಸ್ವತಂತ್ರನೆಂತಲೂ, ಸ್ವತಂತ್ರರಾದವರು ಇಬ್ಬರೆಂಬುದು ಮೋಹವೆಂತಲೂ ವಿಶಿಷ್ಟಾದ್ವೈತಿಗಳ ಅಭಿಪ್ರಾಯ.

॥ ಶ್ರೀಃ ॥

-X-

ಏಕಸಪ್ತತಿತಮೋಽಧ್ಯಾಯಃ

ಅಥ ಕಲಿಯುಗೀಯಾ ವಿಷಯಾಃ

॥ ಅಗಸ್ತ್ಯ ಉವಾಚ ॥

ಏವಮುಕ್ತಾಸ್ತತೋ ದೇವಾ ಋಷಯಶ್ಚ ಪಿನಾಕಿನಾ ।
ಅಹಂ ಚ ನೃಪತೇ ತಸ್ಯ ದೇವಸ್ಯ ಪ್ರಣತೋಽಭವಂ ॥ ೧ ॥

ಪ್ರಣಮ್ಯ ಶಿರಸಾ ದೇವಂ ಯಾವತ್ಪಶ್ಯಾಮಿ ಭೋ ನೃಪ ।
ತಾವತ್ತಸ್ಯೈವ ರುದ್ರಸ್ಯ ದೇಹ*ಸ್ಥಂ ಕಮಲಾಸನಂ ॥ ೨ ॥

ನಾರಾಯಣಂ ಚ ಹೃದಯೇ ತ್ರಸರೇಣುಸುಸೂಕ್ಷ್ಮಕಂ ।
ಜ್ವಲದ್ಭಾಸ್ಕರವರ್ಣಾಭಂ ಪಶ್ಯಾಮಿ ಭವದೇಹತಃ ॥ ೩ ॥

ಎಪ್ಪತ್ತೊಂದನೆಯ ಅಧ್ಯಾಯ

ಕಲಿಯುಗದ ವಿಷಯಗಳು.

೧. ಅಗಸ್ತ್ಯಮುನಿ—ದೊರೆಯೇ, ಈಶ್ವರನಿಂದ ಹೀಗೆ ದೇವತೆಗಳೂ ಋಷಿಗಳೂ, ನಾನೂ ಕೇಳಿದೆವು. ಬಳಿಕ ನಾನು ಆ ದೇವನಿಗೆ ಪ್ರಣಾಮ ಮಾಡಿದೆನು.

೨-೪. ದೊರೆಯೇ, ನಾನು ತಲೆಬಾಗಿ ವಂದಿಸಿ, ಆ ದೇವನನ್ನು ನೋಡಿದಾಗ ಅದೇ ರುದ್ರನ ದೇಹದಲ್ಲಿ (ರುವ) ಬ್ರಹ್ಮನನ್ನೂ, ಹೃದಯದಲ್ಲಿ ಚಲಿಸುವ ಅಣುವಿನಂತೆ ಸೂಕ್ಷ್ಮನೂ, ಹೊಳೆಯುವ ಸೂರ್ಯನಂತೆ ವರ್ಣಕಾಂತಿ

---

* ದೇವಸ್ಥಂ [ಬೊಂ]

ತಂ ದೃಷ್ಟ್ವಾ ಯಾಜಕಾಸ್ಸರ್ವೇ ವಿಸ್ಮಿತಾ ಋಷಯೋಽಭವನ್ ॥ ೪ ॥

ಜಯಶಬ್ದರವಾಂಶ್ಚಕ್ರುಃ ಸಾಮಋಗ್ಯಜುಷಾಂ ಸ್ವನಂ ।
ಕೃತ್ವೋಚುಸ್ತಂ ತದಾ ದೇವಂ ಕಿಮಿದಂ ಪರಮೇಶ್ವರಂ ॥
ಏಕಸ್ಯಾಮೇವ ಮೂರ್ತೌ ತೇ ಲಕ್ಷ್ಯಂತೇ ಚ ತ್ರಿಮೂರ್ತಯಃ ॥ ೫ ॥

॥ ರುದ್ರ ಉವಾಚ ॥

ಯಜ್ಞೇಽಸ್ಮಿನ್ಯದ್ಧುತಂ ಹವ್ಯಂ ಮಾಮುದ್ದಿಶ್ಯ ಮಹರ್ಷಯಃ ।
ತೇ ತ್ರಯೋಽಪಿ ವಯಂ ಭಾಗಂ ಗೃಹ್ಣೀಮಃ ಕವಿಸತ್ತಮಾಃ ॥ ೬ ॥

ನಾಸ್ಮಾಕಂ ವಿವಿಧೋ ಭಾವೋ ವರ್ತತೇ ಮುನಿಸತ್ತಮಾಃ ।
ಸಮ್ಯಗ್ದೃಶಃ ಪ್ರಪಶ್ಯಂತಿ ವಿಪರೀತೇಷ್ವನೇಕಶಃ ॥ ೭ ॥

ಏವಮುಕ್ತೇ ತು ರುದ್ರೇಣ ಸರ್ವೇ ತೇ ಮುನಯೋ ನೃಪ ।
ಪಪ್ರಚ್ಛುಃ ಶಂಕರಂ ದೇವಂ ಮೋಹಶಾಸ್ತ್ರಪ್ರಯೋಜನಂ ॥ ೮ ॥

ಗಳುಳ್ಳವನೂ ಆದ ನಾರಾಯಣನನ್ನು ಕಂಡೆನು. ಶಿವನ ದೇಹದಲ್ಲಿ ಆ ನಾರಾಯಣನನ್ನು ನೋಡಿ, ಎಲ್ಲಾ ಋತ್ವಿಜರೂ, ಋಷಿಗಳೂ ಅಚ್ಚರಿಗೊಂಡರು.

೫. ಜಯಧ್ವನಿಗಳನ್ನೂ, ಸಾಮಋಗ್ಯಜುರ್ವೇದ ಧ್ವನಿಗಳನ್ನೂ ಮಾಡಿ, ಆಗ ಆ ದೇವನಾದ ಪರಮೇಶ್ವರನನ್ನು ಕುರಿತು, "ಇದೇನು? ಒಂದೇ ಮೂರ್ತಿಯಲ್ಲಿ ತ್ರಿಮೂರ್ತಿಗಳೂ ಕಾಣಿಸುತ್ತಾರೆ!'' ಎಂದು ಕೇಳಿದರು.

೬. ರುದ್ರ—ಮಹರ್ಷಿಗಳೇ, ಕವಿಶ್ರೇಷ್ಠರೇ, ಈ ಯಜ್ಞದಲ್ಲಿ ನನಗೋಸ್ಕರ ಹೋಮಮಾಡಿದ ಹವಿಸ್ಸಿನ ಭಾಗವನ್ನು ಆ ನಾವು ಮೂವರೂ ತೆಗೆದುಕೊಳ್ಳುತ್ತೇವೆ.

೭ ಋಷಿವರ್ಯರೇ, ನಮ್ಮಲ್ಲಿ (ತ್ರಿಮೂರ್ತಿಗಳಲ್ಲಿ) ಭೇದಭಾವವಿಲ್ಲ. ಇದನ್ನು ಉತ್ತಮವಾದ ದೃಷ್ಟಿಯುಳ್ಳವರು ಅರಿಯುವರು. ಕುದೃಷ್ಟಿಗಳು ಬೇರೆ ಬೇರೆಯಾಗಿ ತಿಳಿಯುವರು.

೮. ದೊರೆಯೇ, ರುದ್ರನು ಹೀಗೆನಲು ಆ ಮುನಿಗಳೆಲ್ಲರೂ ದೇವನಾದ ಶಂಕರನನ್ನು ಮೋಹಶಾಸ್ತ್ರದ ಪ್ರಯೋಜನವೇನೆಂದು ಕೇಳಿದರು.

॥ ಋಷಯ ಊಚುಃ ॥

ಮೋಹನಾರ್ಥಂ ತು ಲೋಕಾನಾಂ ತ್ವಯಾ ಶಾಸ್ತ್ರಂ ಪೃಥಕ್ಕೃತಂ ।
ತತ್ತ್ವಯಾ ಹೇತುನಾ ಕೇನ ಕೃತಂ ದೇವ ವದಸ್ವ ನಃ ॥ ೯ ॥

॥ ರುದ್ರ ಉವಾಚ ॥

ಅಸ್ತ್ಯೇಕಂ ಭಾರತೇ ವರ್ಷೇ ವನಂ ದಂಡಕಸಂಜ್ಞಿತಂ ॥ ೧೦ ॥

ತತ್ರ ತೀವ್ರಂ ತಪೋ ಘೋರಂ ಗೌತಮೋ ನಾಮ ವೈ ದ್ವಿಜಃ ।
ಚಕಾರ ತಸ್ಯ ಬ್ರಹ್ಮಾ ತು ಪರಿತೋಷಂ ಗತಃ ಪ್ರಭುಃ ॥

ಉವಾಚ ತಂ ಮುನಿಂ ಬ್ರಹ್ಮಾ ವರಂ ಬ್ರೂಹಿ ತಪೋಧನ ॥ ೧೧ ॥

ಏವಮುಕ್ತಸ್ತದಾ ತೇನ ಬ್ರಹ್ಮಣಾ ಲೋಕಕರ್ತೃಣಾ ।
ಉವಾಚ ಸಸ್ಯಪಂಕ್ತಿಂ ಮೇ ಧಾನ್ಯಾನಾಂ ದೇಹಿ ಸಂಗತಾಂ ॥ ೧೨ ॥

ಏವಮುಕ್ತೋ ದದೌ ತಸ್ಯ ತಮೇವಾರ್ಥಂ ಪಿತಾಮಹಃ ॥ ೧೩ ॥

---

೯. ಋಷಿಗಳು—ಲೋಕಗಳನ್ನು ಮೋಹಗೊಳಿಸಲು ನೀನು ಶಾಸ್ತ್ರಗಳನ್ನು ಬೇರೆಯಾಗಿ ಮಾಡಿದೆಯಷ್ಟೆ. ದೇವ, ಏತಕ್ಕಾಗಿ ಮೋಹಗೊಳಿಸಲು ಅದನ್ನು ನೀನು ಮಾಡಿದೆಯೆಂಬುದನ್ನು ನಮಗೆ ಹೇಳು.

೧೦. ರುದ್ರ—ಭಾರತವರ್ಷದಲ್ಲಿ ದಂಡಕವೆಂಬ ಹೆಸರಿನ ವನವೊಂದಿದೆ.

೧೧. ಆ ವನದಲ್ಲಿ ಗೌತಮನೆಂಬ ಬ್ರಾಹ್ಮಣನು ತೀವ್ರವಾದ ಘೋರ ತಪಸ್ಸನ್ನು ಮಾಡಿದನು. ಅವನಿಗೆ ಸಂತುಷ್ಟನಾದ ಪ್ರಭುವಾದ ಬ್ರಹ್ಮನು, "ತಪೋಧನನೇ, ವರವನ್ನು ಕೇಳು" ಎಂದನು.

೧೨. ಲೋಕಕರ್ತೃವಾದ ಬ್ರಹ್ಮನಿಂದ ಹಾಗೆ ಹೇಳಿಸಿಕೊಂಡ ಆ ಗೌತಮನು "ನನಗೆ ಧಾನ್ಯಗಳಿಂದ ಮನೋಹರವಾದ ಸಸ್ಯಪಂಕ್ತಿಯನ್ನು ಕೊಡು." ಎಂದನು.

೧೩. ಹಾಗೆ ಬೇಡಲು ಬ್ರಹ್ಮನು ಅವನಿಗೆ ಅದೇ ವರವನ್ನಿತ್ತನು.

ಲಬ್ಧ್ವಾ ತು ತಂ ವರಂ ವಿಪ್ರಃ ಶತಶೃಂಗೇ ಮಹಾಶ್ರಮಂ ।
ಚಕಾರ ತಸ್ಯೋಷಸಿ ಚ ಪಾಕಾಂತೇ ಶಾಲಯೋ ದ್ವಿಜೈಃ ॥ ೧೪ ॥

ಲೂಯಂತೇ ತೇನ ಮುನಿನಾ ಮಧ್ಯಾಹ್ನೇ ಪಚ್ಯತೇ ತಥಾ ।
ಸರ್ವಾತಿಥ್ಯಮಸೌ ವಿಪ್ರೋ ಬ್ರಾಹ್ಮಣೇಭ್ಯೋ ದದಾತ್ಯಲಂ ॥ ೧೫ ॥

ಕಸ್ಯಚಿತ್ತ್ವಥ ಕಾಲಸ್ಯ ಮಹತೀ ದ್ವಾದಶಾಬ್ದಿಕಾ ।
ಅನಾವೃಷ್ಟಿರ್ದ್ವಿಜವರ ಹ್ಯಭವಲ್ಲೋಮಹರ್ಷಿಣೀ ॥ ೧೬ ॥

ತಾಂ ದೃಷ್ಟ್ವಾ ಮುನಯಸ್ಸರ್ವೇ ಅನಾವೃಷ್ಟಿಂ ವನೇಚರಾಃ ।
ಕ್ಷುಧಯಾ ಪೀಡ್ಯಮಾನಾಶ್ಚ ಪ್ರಯಯುರ್ಗೌತಮಂ ತದಾ ॥ ೧೭ ॥

ಅಥ ತಾನಾಗತಾನ್ದೃಷ್ಟ್ವಾ ಗೌತಮಃ ಶಿರಸಾ ನತಃ ।
ಉವಾಚ ಸ್ಥೀಯತಾಂ ಮಹ್ಯಂ ಗೃಹೇ ಮುನಿವರಾತ್ಮಜಾಃ ॥ ೧೮ ॥

೧೪–೧೫. ಆ ವರವನ್ನು ಪಡೆದು, ಗೌತಮನು ಶತಶೃಂಗದಲ್ಲಿ ತನ್ನ ಮಹಾಶ್ರಮವನ್ನು ಮಾಡಿದನು. ಅಲ್ಲಿ ಬೆಳಗ್ಗೆ ಕೊಯ್ಲಿಗೆ ಬಂದ ಬತ್ತವನ್ನು ಋಷಿಗಳು ಕೊಯ್ದು ಸಿದ್ಧಪಡಿಸುತ್ತಿದ್ದರು. ಗೌತಮ ಋಷಿಯು ಮಧ್ಯಾಹ್ನ ಅಡಿಗೆಯನ್ನು ಮಾಡಿ ಬ್ರಾಹ್ಮಣರಿಗೆ ತೃಪ್ತಿಯಾಗುವಂತೆ ಆತಿಥ್ಯವನ್ನು ಮಾಡುತ್ತಿದ್ದನು.

೧೬. ಸ್ವಲ್ಪಕಾಲ ಕಳೆದಮೇಲೆ ಹನ್ನೆರಡು ವರ್ಷಕಾಲ ಮಳೆಯಿಲ್ಲದೆ ಭಯಂಕರವಾದ ಘೋರಕ್ಷಾಮವುಂಟಾಯಿತು.

೧೭. ಆ ಕ್ಷಾಮವನ್ನು ನೋಡಿಯೂ, ಹಸಿವಿನಿಂದ ಪೀಡಿತರಾಗಿಯೂ ಕಾಡಿನಲ್ಲಿದ್ದ ಋಷಿಗಳೆಲ್ಲರೂ ಗೌತಮನ ಹತ್ತಿರಕ್ಕೆ ಹೋದರು.

೧೮. ಬಳಿಕ ಗೌತಮನು ತನ್ನಲ್ಲಿ ಬಂದ ಅವರನ್ನು ನೋಡಿ, ತಲೆಬಾಗಿ ವಂದಿಸಿ, “ಋಷಿಪುತ್ರರೇ, ನನ್ನ ಮನೆಯಲ್ಲಿರಿ” ಎಂದು ಹೇಳಿದನು.

ಏವಮುಕ್ತ್ವಾಸ್ತು ತೇ ತೇನ ತಸ್ಥುರ್ವಿವಿಧಭೋಜನಂ ।
ಭುಂಜಮಾನಾ ಅನಾವೃಷ್ಟಿರ್ಯಾವತ್ಸಾ ನಿವೃತ್ತಾಭವತ್ ॥ ೧೯ ॥

ನಿವೃತ್ತಾಯಾಂ ಚ ತೇ ತಸ್ಯಾಮನಾವೃಷ್ಟ್ಯಾಂ ತು ತೇ ದ್ವಿಜಾಃ ।
ತೀರ್ಥಯಾತ್ರಾನಿಮಿತ್ತಂ ತು ಪ್ರಯಾತುಮನಸೋಽಭವನ್ ॥ ೨೦ ॥

ತತ್ರ ಶಾಂಡಿಲ್ಯನಾಮಾನಂ ತಾಪಸಂ ಮುನಿಸತ್ತಮಂ ।
ಪ್ರತ್ಯುವಾಚೇತಿ ಸಂಚಿಂತ್ಯ ಮರೀಚಃ ಪರಮೋ ಮುನಿಃ ॥ ೨೧ ॥

॥ ಮರೀಚ ಉವಾಚ ॥

ಶಾಂಡಿಲ್ಯ ಶೋಭನಂ ವಕ್ಷ್ಯೇ ಪಿತಾ *ನೋ ಗೌತಮೋ ಮುನಿಃ ।
ತಮನುಕ್ತ್ವಾ ನ ಗಚ್ಛಾಮಃ ತಪಶ್ಚರ್ತುಂ ತಪೋವನಂ ॥ ೨೨ ॥

ಏವಮುಕ್ತೇಥ ಜಹಸುಃ ಸರ್ವೇ ತೇ ಮುನಯಸ್ತಥಾ ।
ಕಿಮಸ್ಮಾಭಿಃ ಸ್ವಕೋ ದೇಹೋ ವಿಕ್ರೀತೋಽಸ್ಯಾನ್ನಭಕ್ಷಣಾತ್ ॥
ಏವಮುಕ್ತ್ವಾ ಪುನಶ್ಚೋಚುಃ ಸೋಪಾಧಿಂ ಗಮನಂ ಪ್ರತಿ ॥ ೨೩ ॥

---

೧೯. ಅವನು ಹಾಗೆ ಹೇಳಲು ಅವರು ಕ್ಷಾಮವು ನಿವಾರಣೆಯಾಗುವವರೆಗೂ ಬಗೆಬಗೆಯ ಭೋಜನವನ್ನು ಮಾಡುವವರಾಗಿ ಅಲ್ಲಿಯೇ ನಿಂತರು.

೨೦. ಆ ಕ್ಷಾಮವು ನಿವಾರಣೆಯಾಗಲು ಆ ಬ್ರಾಹ್ಮಣರು ತೀರ್ಥಯಾತ್ರೆಗಾಗಿ ಹೊರಡಲು ಮನಸುಳ್ಳವರಾದರು.

೨೧. ಅವರಲ್ಲಿ ಮರೀಚನೆಂಬ ಪರಮಮುನಿಯು, ಆಲೋಚಿಸಿ, ಶಾಂಡಿಲ್ಯನೆಂಬ ಹೆಸರಿನ ಮುನಿವರ್ಯನನ್ನು ಕುರಿತು ಮುಂದಿನಂತೆ ಹೇಳಿದನು.

೨೨. ಮರೀಚ—ಶಾಂಡಿಲ್ಯನೇ, ಒಳ್ಳೆಯದನ್ನು ಹೇಳುತ್ತೇನೆ. ಗೌತಮ ಋಷಿಯು ನಮಗೆ ತಂದೆ. ಆತನಿಗೆ ಹೇಳದೆ ತಪಸ್ಸು ಮಾಡುವುದಕ್ಕೆ ನಾವು ಬೇರೆ ತಪೋವನಕ್ಕೆ ಹೋಗಬಾರದು.

೨೩. ಮರೀಚನು ಹಾಗೆ ಹೇಳಲು, ಅಲ್ಲಿದ್ದ ಮುನಿಗಳೆಲ್ಲರೂ 'ಇವನ ಅನ್ನವನ್ನು ತಿಂದುದರಿಂದ ನಾವೇನು ನಮ್ಮ ದೇಹವನ್ನು ಇವನಿಗೆ

---

* ತೇ.

ಕೃತ್ವಾ ಮಾಯಾಮಯೀಂ ಗಾಂ ತು ತಚ್ಛಾಲಾಯಾಂ ವ್ಯಸರ್ಜಯನ್ ।
ತಾಂ ಚರಂತೀಂ ತತೋ ದೃಷ್ಟ್ವಾ ಶಾಲಾಯಾಂ ಗೌತಮೋ ಮುನಿಃ ।
ಗೃಹೀತ್ವಾ ಸಲಿಲಂ ಪಾಣೌ ಪ್ರಾಣಿರುದ್ರೇತ್ಯಭಾಷತ ॥ ೨೪ ॥

ತತೋ ಮಾಯಾಮಯೀ ಸಾ ಗೌಃ ಪಪಾತ ಜಲಬಿಂದುವತ್ ॥ ೨೫ ॥

ನಿಹತಾಂ ತಾಂ ತತೋ ದೃಷ್ಟ್ವಾ ಮುನೀನ್‌ಜಿಗಮಿಷೂಂಸ್ತಥಾ ।
ಉವಾಚ ಗೌತಮೋ ಧೀಮಾಂಸ್ತಾನ್ಮುನೀನ್ ಪ್ರಣತಃ ಸ್ಥಿತಃ ॥ ೨೬ ॥

ಕಿಮರ್ಥಂ ಗಮ್ಯತೇ ವಿಪ್ರಾಃ ಸಾಧು ಶಂಸತ ಮಾಚಿರಂ ।
ಮಾಂ ವಿಹಾಯ ಸದಾಭಕ್ತಂ ಪ್ರಣತಂ ಚ ವಿಶೇಷತಃ ॥ ೨೭ ॥

॥ ಋಷಯ ಊಚುಃ ॥

ಗೋವಧ್ಯೇಯಮಿಹ ಬ್ರಹ್ಮನ್ಯಾವತ್ತವ ಶರೀರಗಾ ।
ತಾವದತ್ರ ನ ಭುಂಜಾಮೋ ಭವತೋಽನ್ನಂ ಮಹಾಮುನೇ ॥ ೨೮ ॥

ಮಾರಿದ್ದೇವೋ?!’ ಎಂದು ನಕ್ಕರು ಅಲ್ಲದೆ ಹೊರಡುವ ವಿಚಾರದಲ್ಲಿ ಧರ್ಮ ಚಿಂತೆಯಿಂದ ಕೂಡಿದ ಮಾತನ್ನೂ ಆಡಿಕೊಂಡರು.

೨೪. ಬಳಿಕ ಅವರು ಮಾಯಾಮಯವಾದ ಒಂದು ಹಸುವನ್ನು ಮಾಡಿ ಆ ಶಾಲೆಯಲ್ಲಿ ಬಿಟ್ಟರು. ಶಾಲೆಯಲ್ಲಿ ಸಂಚರಿಸುತ್ತಿದ್ದ ಅದನ್ನು ಕಂಡು ಗೌತಮ ಋಷಿಯು ಕೈಯಲ್ಲಿ ನೀರನ್ನು ತೆಗೆದುಕೊಂಡು “ಪ್ರಾಣಿ ರುದ್ರಾ” ಎಂದನು.

೨೫. ಬಳಿಕ ಮಾಯಾಮಯವಾದ ಆ ಹಸುವು ನೀರ ಹನಿಯಂತೆ ಬಿದ್ದುಬಿಟ್ಟಿತು.

೨೬–೨೭. ಧೀಮಂತನಾದ ಆ ಗೌತಮನು, ಆ ಹಸುವು ಸತ್ತುಬಿದ್ದುದನ್ನೂ, ಹೊರಡಲಿಚ್ಛಿಸುತ್ತಿರುವ ಮುನಿಗಳನ್ನೂ ನೋಡಿ, ಆ ಮುನಿಗಳಿಗೆ ಪ್ರಣಾಮಮಾಡಿ ನಿಂತು, “ಬ್ರಾಹ್ಮಣರೇ, ಸದಾ ಭಕ್ತನೂ, ಮುಖ್ಯವಾಗಿ ಪ್ರಣತನೂ ಆದ ನನ್ನನ್ನು ಬಿಟ್ಟು ಏಕೆ ಹೋಗುತ್ತೀರಿ? ಸರಿಯಾಗಿ ಹೇಳಿ. ತಡಮಾಡಬೇಡಿ” ಎಂದನು.

೨೮. ಋಷಿಗಳು—ಬ್ರಹ್ಮನೇ, ಮಹಾಮುನಿಯೇ, ಈ ಗೋಹತ್ಯ ಪಾತಕವು ನಿನ್ನ ದೇಹದಲ್ಲಿರುವವರೆಗೆ ನಿನ್ನ ಅನ್ನವನ್ನು ನಾವು ಊಟ ಮಾಡುವುದಿಲ್ಲ.

ಏವಮುಕ್ತೋ ಗೌತಮಸ್ತು ತಾನ್ಮುನೀನ್ಪ್ರಾಹ ಧರ್ಮವಿತ್ ।
ಪ್ರಾಯಶ್ಚಿತ್ತಂ ಗೋವಧಸ್ಯ ದೀಯತಾಂ ಮೇ ತಪೋಧನಾಃ ॥ ೨೯ ॥

॥ ಋಷಯ ಊಚುಃ ॥

ಇಯಂ ಗೌರಮೃತಾ ಬ್ರಹ್ಮನ್ಮೂರ್ಛಿತೇವ ವ್ಯವಸ್ಥಿತಾ ।
ಗಂಗಾಜಲಪ್ಲುತಾ ಚೇಯಮುತ್ಥಾಸ್ಯತಿ ನ ಸಂಶಯಃ ॥ ೩೦ ॥

ಪ್ರಾಯಶ್ಚಿತ್ತಂ ಮೃತಾಯಾಃ ಸ್ಯಾದಮೃತಾಯಾಃ ಕೃತಂ ತ್ವಿದಂ ।
ವ್ರತಂ ವಾ ಮಾ ಕೃಥಾಃ ಕೋಪಮಿತ್ಯುಕ್ತ್ವಾ ಪ್ರಯಯುಸ್ತು ತೇ ॥೩೧॥

ಗತೈಸ್ತೈರ್ಗೌತಮೋ ಧೀಮಾನ್ ಹಿಮವಂತಂ ಮಹಾಗಿರಿಂ ।
ಆರಿರಾಧಯಿಷುಃ ಪ್ರಾಯಾತ್ತಪ್ತುಂ ಚಾಶು ಮಹಾತಪಃ ॥ ೩೨ ॥

ಶತಮೇಕಂ ತು ವರ್ಷಾಣಾಮಹಮಾರಾಧಿತೋಽಭವಂ ।
ತುಷ್ಟೇನ ಚ ಮಯಾ ಪ್ರೋಕ್ತೋ ವರಂ ವರಯ ಸುವ್ರತ ॥ ೩೩ ॥

---

೨೯. ಹೀಗೆನಿಸಿಕೊಂಡ ಧರ್ಮಜ್ಞನಾದ ಗೌತಮನು "ತಪೋಧನರೇ, ನನ್ನ ಗೋಹತ್ಯೆಗೆ (ಗೋವಧೆಗೆ) ಪ್ರಾಯಶ್ಚಿತ್ತವನ್ನು ವಿಧಿಸಿರಿ" ಎಂದು ಆ ಮುನಿಗಳಿಗೆ ಹೇಳಿದನು.

೩೦. "ಬ್ರಹ್ಮನೇ, ಈ ಹಸುವು ಸತ್ತಿಲ್ಲ. ಮೂರ್ಛೆ ಹೋದಂತೆ ಇದೆ. ಗಂಗೆಯ ನೀರಿನಲ್ಲಿ ತೇಲಿಸಿದರೆ ಇದು ಏಳುವುದರಲ್ಲಿ ಸಂದೇಹವಿಲ್ಲ.

೩೧. ಸತ್ತಿದ್ದರೆ ಪ್ರಾಯಶ್ಚಿತ್ತವಾಗುತ್ತಿದ್ದಿತು. ಸಾಯದಿರುವುದರಿಂದ ನಾವು ಈ ವ್ರತವನ್ನು ಮಾಡಿದ್ದೇವೆ. ಕೋಪಮಾಡಬೇಡ" ಎಂದು ಹೇಳಿ, ಅವರು ಹೊರಟುಹೋದರು.

೩೨. ಅವರು ಹೊರಟುಹೋಗಲು, ಬುದ್ಧಿವಂತನಾದ ಗೌತಮನು ದೇವನನ್ನು ಆರಾಧಿಸುವುದಕ್ಕೂ, ಬೇಗನೆ ಮಹಾತಪಸ್ಸನ್ನು ಮಾಡುವುದಕ್ಕೂ, ಹಿಮವನ್ಮಹಾಗಿರಿಗೆ ಹೊರಟುಹೋದನು.

೩೩. ಅಲ್ಲಿ ಒಂದುನೂರು ವರ್ಷಕಾಲ ನಾನು (ಶಿವ) ಆರಾಧಿತನಾದೆನು. ತೃಪ್ತನಾದ ನಾನು "ಸುವ್ರತನೇ, ವರವನ್ನು ಬೇಡು" ಎಂದೆನು.

ಸೋಽಬ್ರವೀನ್ಮಾಂ ಜಟಾಸಂಸ್ಥಾಂ ದೇಹಿ ಗಂಗಾಂ ತಪಸ್ವಿನೀಂ ।
ಮಯಾ ಸಾರ್ಧಂ ಪ್ರಯಾತ್ವೇಷಾ ಪುಣ್ಯಾ ಭಾಗೀರಥೀ ನದೀ ॥ ೩೪ ॥

ಏವಮುಕ್ತೋ ಜಟಾಖಂಡಮೇಕಂ ಸ ಪ್ರದದೌ ಶಿವಃ ।
ತಾಂ ಗೃಹ್ಯ ಗತವಾನ್ಸೋಽಪಿ ಯತ್ರಾಸ್ತೇ ಸಾ ತು ಗೌರ್ಮೃತಾ ॥ ೩೫ ॥

ತಜ್ಜಲಪ್ಲಾವಿತಾ ಸಾ ಗೌರ್ಗತಾ ಚೋತ್ಥಾಯ ಭಾಮಿನೀ ।
ನದೀ ಚ ಮಹತೀ ಜಾತಾ ಪುಣ್ಯತೋಯಾ ಶುಚಿಹ್ರದಾ ॥ ೩೬ ॥

ತಂ ದೃಷ್ಟ್ವಾ ಮಹದಾಶ್ಚರ್ಯಂ ತತ್ರ ಸಪ್ತರ್ಷಯೋಽಮಲಾಃ ।
ಆಜಗ್ಮುಶ್ಚ ವಿಮಾನಸ್ಥಾಃ ಸಾಧು ಸಾಧ್ವಿತಿ ವಾದಿನಃ ॥ ೩೭ ॥

ಸಾಧು ಗೌತಮ ಸಾಧೂನಾಂ ಕೋಽಸ್ತಿ ನಾ ಸದೃಶಸ್ತವ ।
ಯದೇವಂ ಜಾಹ್ನವೀ ದೇವೀ ದಂಡಕೇ ಚಾವತಾರಿತಾ ॥ ೩೮ ॥

---

೩೪. ಆತನು ನನಗೆ "ನಿನ್ನ ಜಟೆಯಲ್ಲಿರುವ ತಪಸ್ವಿನಿಯಾದ ಗಂಗೆಯನ್ನು ನನಗೆ ದಯೆಪಾಲಿಸು. ಈ ಪವಿತ್ರಳಾದ ಭಾಗೀರಥೀನದಿಯು ನನ್ನೊಡನೆ ಬರಲಿ'' ಎಂದು ಹೇಳಿದನು.

೩೫. ಹಾಗೆನಲು ನಾನು (ಶಿವನು) ಜಟೆಯ ಚೂರೊಂದನ್ನು ಕೊಟ್ಟೆನು. ಗೌತಮನೂ ಅವಳನ್ನು ಕರೆದುಕೊಂಡು ಹಸುವು ಸತ್ತುಬಿದ್ದಿದ್ದೆಡೆಗೆ ಹೊರಟು ಹೋದನು.

೩೬. ಆ ನೀರಿನಿಂದ ತೇಲಿಸಲ್ಪಟ್ಟ ಆ ಹಸುವು ಎದ್ದು ಕೋಪವುಳ್ಳ ದಾಗಿ ಹೊರಟುಹೋಯಿತು. ಅಲ್ಲಿ ಪವಿತ್ರವಾದ ನೀರುಳ್ಳ ನಿರ್ಮಲವಾದ ಮಡುಗಳುಳ್ಳ ದೊಡ್ಡ ನದಿಯೂ ಉಂಟಾಯಿತು.

೩೭-೩೮. ಆ ಅತ್ಯಾಶ್ಚರ್ಯವನ್ನು ನೋಡಿ, ನಿರ್ಮಲರಾದ ಸಪ್ತರ್ಷಿ ಗಳೂ ವಿಮಾನಾರೂಢರಾಗಿ, *"ಸಾಧು, ಸಾಧು" ಎಂದು ಹೇಳುತ್ತಾ ಅಲ್ಲಿಗೆ

---

* ಸಾಧು = ಸುಂದರ, ಮನೋಹರ, ಚೆನ್ನಾಗಿದೆ, ರುಚಿರ

ಏವಮುಕ್ತಸ್ತದಾ ತೈಸ್ತು ಗೌತಮಃ ಕಿಮಿದಂ ತ್ವಿತಿ ।
ಗೋವಧ್ಯಕಾರಣಂ ಮಹ್ಯಂ ತಾವತ್ಪಶ್ಯತಿ ಗೌತಮಃ || ೩೯ ||

ಋಷೀಣಾಂ ಮಾಯಯಾ ಸರ್ವಮಿದಂ ಜಾತಂ ವಿಚಿಂತ್ಯ ವೈ ।
ಶಶಾಪ ತಾನ್ ಜಟಾಭಸ್ಮಮಿಥ್ಯಾವ್ರತಧರಾಂಸ್ತಥಾ ।
ಭವಿಷ್ಯಥ ತ್ರಯೀಬಾಹ್ಯಾ ವೇದಕರ್ಮಬಹಿಷ್ಕೃತಾಃ || ೪೦ ||

ತಚ್ಛ್ರುತ್ವಾ ಕ್ರೂರವಚನಂ ಗೌತಮಸ್ಯ ಮಹಾಮುನೇಃ ।
ಊಚುಃ ಸಪ್ತರ್ಷಯೋ ನ್ಯೈವಂ ಸರ್ವಕಾಲಂ ದ್ವಿಜೋತ್ತಮ || ೪೧ ||

ಏವಂ ನ ಕಿಂ ತು ತೇ ವಾಕ್ಯಂ ಮೋಘಂ ನಾಸ್ತ್ಯತ್ರ ಸಂಶಯಃ || ೪೨ ||

ಯದಿ ನಾಮ ಕಲೌ ಸರ್ವೇ ಭವಿಷ್ಯಂತಿ ದ್ವಿಜೋತ್ತಮಾಃ ।
ಉಪಕಾರಿಣಿ ಏತೇ ಹಿ ಅಪಕರ್ತಾರ ಏವ ತು ||
ಇತ್ಥಂಭೂತಾ ಅಪಿ ಕಲೌ ಭಕ್ತಿಭಾಜೋ ಭವಂತು ತೇ || ೪೩ ||

ಬಂದರು. 'ಗೌತಮನೇ, ಚೆನ್ನಾಗಿದೆ. ಹೀಗೆ ಗಂಗಾದೇವಿಯನ್ನು ದಂಡಕಾರಣ್ಯದಲ್ಲಿ ಅವತಾರಮಾಡಿಸಿದ್ದೀಯೆ. ಸಾಧುಗಳಲ್ಲಿ ನಿನಗೆ ಸಮಾನರಾರಿರುವರು ?" ಎಂದು ಅವರಿಂದ ಹೇಳಿಸಿಕೊಂಡ ಗೌತಮನು, ಇದೇನು! ನನಗೆ ಗೋವಧೆಯೊದಗಲು ಕಾರಣವೇನು? ಎಂದು ಜ್ಞಾನದೃಷ್ಟಿಯಿಂದ ನೋಡಿದನು.

೪೦. ಇದೆಲ್ಲವೂ ಋಷಿಗಳ ಮಾಯೆಯಿಂದ ಉಂಟಾದುದೆಂದು ಆಲೋಚಿಸಿ, ಜಡೆವಿಭೂತಿಗಳನ್ನೂ ಮಿಥ್ಯಾವ್ರತವನ್ನೂ ಧರಿಸಿದ ಆ ಋಷಿಗಳನ್ನು "ನೀವು ವೇದಬಾಹ್ಯರೂ, ವೇದಕರ್ಮಬಹಿಷ್ಕೃತರೂ ಆಗಿರಿ." ಎಂದು ಶಪಿಸಿದನು.

೪೧-೪೨. ಮಹಾಮುನಿಯಾದ ಗೌತಮನ ಕ್ರೂರವಾದ ಆ ಮಾತನ್ನು ಕೇಳಿ, ಸಪ್ತರ್ಷಿಗಳು ಹೇಳಿದರು. "ಬ್ರಾಹ್ಮಣೋತ್ತಮನೇ, ಅವರು ಸರ್ವಕಾಲವೂ ಹಾಗಾಗಬಾರದು. ಆದರೆ ನಿನ್ನ ಮಾತು ವ್ಯರ್ಥವಾಗುವುದಿಲ್ಲ. ಎಂಬುದರಲ್ಲಿ ಸಂದೇಹವಿಲ್ಲ."

೪೩. ಇವರು ಉಪಕಾರಿಗೆ ಅಪಕಾರವನ್ನು ಮಾಡುವವರು. ಕಲಿಯುಗದಲ್ಲಿ ಬ್ರಾಹ್ಮಣೋತ್ತಮರೆಲ್ಲರೂ ಒಂದುವೇಳೆ ಹೀಗೆಯೇ ಆದರೂ ಅವರು (ಕಲಿಯುಗದಲ್ಲಿ)ಭಕ್ತಿಯುಳ್ಳವರಾಗಲಿ.

ತ್ವದ್ವಾಕ್ಯವಹ್ನಿನಿರ್ದಗ್ಧಾಃ ಸದಾ ಕಲಿಯುಗೇ ದ್ವಿಜಾಃ ।
ಭವಿಷ್ಯಂತಿ ಕ್ರಿಯಾಹೀನಾ ವೇದಕರ್ಮಬಹಿಷ್ಕೃತಾಃ ॥ ೪೪ ॥

ಅಸ್ಯಾಶ್ಚ ಗೌಣಂ ನಾಮೇಹ ನದೀ ಗೋದಾವರೀತಿ ಚ ॥ ೪೫ ॥

ಏತಾಂ ಪ್ರಾಪ್ಯ ಕಲೌ ಬ್ರಹ್ಮನ್ ಗಾಂದದಾತಿ ಜನಾಶ್ಚ ಯೇ ।
ಯಥಾಶಕ್ತ್ಯಾ ತು ದಾನಾನಿ ಮೋದಂತೇ ತ್ರಿದಶೈಃ ಸಹ ॥ ೪೬ ॥

ಸಿಂಹಸ್ಥೇ ಚ ಗುರೌ ತತ್ರ ಯೋ ಗಚ್ಛತಿ ಸಮಾಹಿತಃ ।
ಸ್ನಾತ್ವಾ ಚ ವಿಧಿನಾ ತತ್ರ ಪಿತ್ರ್ಯಾಂಸ್ತರ್ಪಯತೇ ತಥಾ ॥
ಸ್ವರ್ಗಂ ಗಚ್ಛಂತಿ ಪಿತರೋ ನಿರಯೇ ಪತಿತಾ ಅಪಿ ॥ ೪೭ ॥

ಸ್ವರ್ಗಸ್ಥಾಃ ಪಿತರಸ್ತಸ್ಯ ಮುಕ್ತಿಭಾಜೋ ನ ಸಂಶಯಃ ॥ ೪೮ ॥

---

೪೪. ನಿನ್ನ ಶಾಪಾಗ್ನಿಯಿಂದ ಸುಟ್ಟುಹೋಗಿರುವ ಈ ಬ್ರಾಹ್ಮಣರು ಕಲಿಯುಗದಲ್ಲಿ ಯಾವಾಗಲೂ ಕ್ರಿಯಾಹೀನರೂ, ವೇದಕರ್ಮಬಹಿಷ್ಕೃತರೂ ಆಗುವರು.

೪೫. ಈ ಗಂಗೆಗೆ ಇಲ್ಲಿ 'ಗೋದಾವರಿ' ಎಂದು ಅಡ್ಡಹೆಸರಾಗಲಿ.

೪೬. ಬ್ರಹ್ಮನೇ, ಕಲಿಯುಗದಲ್ಲಿ ಈ ನದಿಗೆ ಬಂದು ಗೋದಾನವನ್ನು ಮಾಡುವವರೂ, ಯಥಾಶಕ್ತಿಯಾಗಿ ಬೇರೆಯ ದಾನಗಳನ್ನು ಮಾಡುವವರೂ ದೇವತೆಗಳೊಡನೆ ಸೇರಿ, ಸಂತೋಷಪಡುವರು.

೪೭. ಗುರು(ಗ್ರಹವು) ಸಿಂಹರಾಶಿಯಲ್ಲಿರುವಾಗ ಮನುಷ್ಯನು ಶಾಂತಚಿತ್ತನಾಗಿ ಈ ಗೋದಾವರಿಗೆ ಬಂದು ಸ್ನಾನಮಾಡಿ ವಿಧ್ಯುಕ್ತವಾಗಿ ಪಿತೃಗಳಿಗೆ ತರ್ಪಣ ಮಾಡಿದರೆ, ನರಕದಲ್ಲಿ ಬಿದ್ದಿರುವ ಪಿತೃಗಳು ಕೂಡ ಸ್ವರ್ಗವನ್ನು ಪಡೆಯುವರು.

೪೮. ಅವನ ಪಿತೃಗಳು ಮೊದಲೇ ಸ್ವರ್ಗದಲ್ಲಿದ್ದರೆ ಮುಕ್ತಿಯನ್ನೇ ಪಡೆಯುವುದರಲ್ಲಿ ಸಂಶಯವಿಲ್ಲ.

ತ್ವಂ ಖ್ಯಾತಿಂ ಮಹತೀಂ ಪ್ರಾಪ್ಯ ಮುಕ್ತಿಂ ಯಾಸ್ಯಸಿ ಶಾಶ್ವತೀಂ ॥ ೪೯ ॥
ಏವಮುಕ್ತ್ವಾಥ ಮುನಯೋ ಯಯುಃ ಕೈಲಾಸಪರ್ವತಂ ।
ಯತ್ರಾಹಮುಮಯಾ ಸಾರ್ಧಂ ಸದಾ ತಿಷ್ಠಾಮಿ ಸತ್ತಮಾಃ ॥ ೫೦ ॥

ಊಚುರ್ಮಾಂ ತೇ ಚ ಮುನಯೋ ಭವಿತಾರೋ ದ್ವಿಜೋತ್ತಮಾಃ ।
ಕಲೌ ತ್ವದ್ರೂಪಿಣಸ್ಸರ್ವೇ ಜಟಾಮುಕುಟಧಾರಿಣಃ ॥
ಸ್ವೇಚ್ಛಯಾ ಪ್ರೇತವೇಷಾಶ್ಚ ಮಿಥ್ಯಾಲಿಂಗಧರಾಃ ಪ್ರಭೋ ॥ ೫೧ ॥

ತೇಷಾಮನುಗ್ರಹಾರ್ಥಾಯ ಕಿಂಚಿಚ್ಛಾಸ್ತ್ರಂ ಪ್ರದೀಯತಾಮ್ ।
ಯೇ ಚಾಸ್ಮದ್ವಂಶಜಾಸ್ಸರ್ವೇ ವರ್ತೇಯುಃ ಕಲಿಪೀಡಿತಾಃ ॥ ೫೨ ॥

ಏವಮಭ್ಯರ್ಥಿತಸ್ತೈಸ್ತು ಪುರಾಹಂ ದ್ವಿಜಸತ್ತಮಾಃ ।
ವೇದಕ್ರಿಯಾಸಮಾಯುಕ್ತಾಂ ಕೃತವಾನಸ್ಮಿ ಸಂಹಿತಾಮ್ ॥
ನಿಃಶ್ವಾಸಾಖ್ಯಾಂ ತತಸ್ತಸ್ಯಾಂ ಲೀನಾ ಬಾಭ್ರವ್ಯಶಾಂಡಿಲಾಃ ॥ ೫೩ ॥

---

೪೯. ನೀನೂ(ಗೌತಮ) ಬಹು ಯಶಸ್ಸನ್ನು ಪಡೆದು, ಶಾಶ್ವತವಾದ ಮೋಕ್ಷವನ್ನು ಪಡೆಯುವೆ.

೫೦. ಸಜ್ಜನೋತ್ತಮರೇ, ಹೀಗೆ ಹೇಳಿ ಆ ಸಪ್ತರ್ಷಿಗಳು, ನಾನು ಯಾವಾಗಲೂ ಪಾರ್ವತಿಯೊಡನೆ ಇರುವೆಡೆಯಾದ ಕೈಲಾಸಪರ್ವತಕ್ಕೆ ಬಂದರು.

೫೧-೫೨. ಬಂದ ಆ ಮುನಿಗಳು ನನ್ನನ್ನು "ಪ್ರಭುವೇ, ಗೌತಮಶಪ್ತರಾದ ಆ ದ್ವಿಜೋತ್ತಮರೆಲ್ಲರೂ ಕಲಿಯುಗದಲ್ಲಿ ನಿನ್ನಂತೆ ಜಟಾಕಿರೀಟಧಾರಿಗಳೂ, ಸ್ವೇಚ್ಛೆಯಿಂದ ಪ್ರೇತವೇಷರೂ, ಮಿಥ್ಯಾಲಿಂಗಧರರೂ ಆಗುವರು. ನಮ್ಮ ವಂಶಜರೇ ಆಗಿ ಕಲಿಪೀಡಿತರಾಗಿ ನಡೆಯುವ ಅವರೆಲ್ಲರ ಅನುಗ್ರಹಾರ್ಥವಾಗಿ ಯಾವುದಾದರೊಂದು ಶಾಸ್ತ್ರವನ್ನು ಕೊಡು." ಎಂದು ಬೇಡಿದರು.

೫೩. ದ್ವಿಜೋತ್ತಮರೇ, ಪೂರ್ವದಲ್ಲಿ ಸಪ್ತರ್ಷಿಗಳಿಂದ ಹಾಗೆ ಪ್ರಾರ್ಥಿತನಾದ ನಾನು ವೇದಸಮಾಯುಕ್ತವಾದ ನಿಶ್ವಾಸವೆಂಬ ಹೆಸರಿನ ಸಂಹಿತೆಯನ್ನು ಮಾಡಿದ್ದೇನೆ. ಬಳಿಕ ಬಾಭ್ರವ್ಯಶಾಂಡಿಲರು ಅದರಲ್ಲಿಯೇ ಲೀನರಾದರು.

ಅಲ್ಪಾಪರಾಧಂ ಶ್ರುತ್ವೈವ ಗತಾಸ್ತೇ ದಾಂಭಿಕಾಽಭವನ್ || ೫೪ ||

ಮಯೈವ ಮೋಹಿತಾಸ್ತೇ ತು ಭವಿಷ್ಯಜ್ಞಾನತಾ ದ್ವಿಜಾಃ |
ಲೌಲ್ಯಾರ್ಥಿನಃ ಸ್ವಶಾಸ್ತ್ರಾಣಿ ಕರಿಷ್ಯಂತಿ ಕಲೌ ನರಾಃ || ೫೫ ||

ನಿಃಶ್ವಾಸಸಂಹಿತಾಯಾ ಹಿ ಲಕ್ಷಮಾತ್ರಂ ಪ್ರಮಾಣತಃ ।
ಸೈವ ಪಾಶುಪತೀ ದೀಕ್ಷಾ ಯೋಗಃ ಪಶುಪತೇ ಸ್ತಥಾ || ೫೬ ||

ಏತಸ್ಮಾದ್ವೇದಮಾರ್ಗಾದ್ಧಿ ಯದನ್ಯದಿಹ ಜಾಯತೇ |
ತತ್ ಕ್ಷುದ್ರಕರ್ಮ ವಿಜ್ಞೇಯಂ ರೌದ್ರಂ ಶೌಚವಿವರ್ಜಿತಮ್ || ೫೭ ||

ಯೇ ರುದ್ರಮುಪಜೀವಂತಿ ಕಲೌ ವೇದಾಂತಿಕಾ ನರಾಃ |
ಲೌಲ್ಯಾರ್ಥಿನಃ ಸ್ವಶಾಸ್ತ್ರಾಣಿ ಕರಿಷ್ಯಂತಿ ಕಲೌ ನರಾಃ ||
ಉಚ್ಛುಷ್ಮರುದ್ರಾಸ್ತೇ ಜ್ಞೇಯಾ ನಾಹಂ ತೇಷು ವ್ಯವಸ್ಥಿತಃ || ೫೮ ||

---

೫೪. ಗೌತಮನ ಅಲ್ಪಾಪರಾಧವನ್ನು ಕೇಳಿಯೇ ಹೊರಟುಹೋದವರು ದಾಂಭಿಕರಾದರು.

೫೫. ಮುಂದಿನದನ್ನು ತಿಳಿದ ನನ್ನಿಂದಲೇ ಮೋಹಿತರಾದ ಆ ಬ್ರಾಹ್ಮಣರು ಕಲಿಯುಗದಲ್ಲಿ ಚಂಚಲರೂ, ಆಸೆಯುಳ್ಳವರೂ ಆಗಿ ಸ್ವಶಾಸ್ತ್ರಗಳನ್ನೇ ರಚಿಸುವರು.

೫೬. ನಿಶ್ವಾಸಸಂಹಿತೆಯಲ್ಲಿ ಲಕ್ಷಗ್ರಂಥವು ಮಾತ್ರ ಇರುವುದು. ಅದೇ ಪಾಶುಪತೀದೀಕ್ಷೆಯೆಂದೂ, ಪಾಶುಪತಯೋಗವೆಂದೂ ಎನಿಸಿಕೊಳ್ಳುವುದು.

೫೭. ಈ ವೇದಮಾರ್ಗದಿಂದ ಬೇರಾವುದು ಉದಿಸುವುದೋ ಅದು ಶೌಚವಿಲ್ಲದ ರೌದ್ರವಾದ ಕ್ಷುದ್ರಕರ್ಮವೆಂದು ತಿಳಿಯಬೇಕು.

೫೮. ಕಲಿಯುಗದಲ್ಲಿ ವೇದಾಂತಿಗಳಾದ ಯಾರು ಲೌಲ್ಯಾರ್ಥಿಗಳಾಗಿ ರುದ್ರನನ್ನು ಆಶ್ರಯಿಸುವರೋ ಅವರನ್ನು ಉಚ್ಛುಷ್ಮರುದ್ರರೆಂದು ಅರಿಯಬೇಕು. ಅವರಲ್ಲಿ ನಾನಿರುವುದಿಲ್ಲ.

ಭೈರವೇಣ ಸ್ವರೂಪೇಣ ದೇವಕಾರ್ಯೇ ಯದಾ ಪುರಾ ।
ನರ್ತಿತಂ ತು ಮಯಾ ಸೋಽಯಂ ಸಂಬಂಧಃ ಕ್ರೂರಕರ್ಮಣಾಂ ॥ ೫೯ ॥

ಕ್ಷಯಂ ನಿನೀಷತಾ ದೈತ್ಯಾನ್ಸೋಽಟ್ಟಹಾಸೋ ಮಯಾ ಕೃತಃ ॥ ೬೦ ॥

ಯಃ ಪುರಾ ತತ್ರ ಯೇ ಮಹ್ಯಾಂ ಪತಿತಾ ಅಶ್ರುಬಿಂದವಃ ।
ಅಸಂಖ್ಯಾತಾಸ್ತು ತೇ ರೌದ್ರಾ ಭವಿತಾರೋ ಮಹೀತಲೇ ॥ ೬೧ ॥

ಉಚ್ಛುಷ್ಮನಿರತಾ ರೌದ್ರಾಃ ಸುರಾಮಾಂಸಪ್ರಿಯಾಸ್ಸದಾ ।
ಸ್ತ್ರೀಲೋಲಾಃ ಪಾಪಕರ್ಮಾಣಃ ಸಂಭೂತಾ ಭೂತಲೇಷು ತೇ ॥ ೬೨ ॥

ತೇಷಾಂ ಗೌತಮಶಾಪಾದ್ಧಿ ಭವಿಷ್ಯಂತ್ಯನ್ವಯೇ ದ್ವಿಜಾಃ ॥ ೬೩ ॥

ತೇಷಾಂ ಮಚ್ಛಾಸನರತಾಃ ಸದಾಚಾರಾಶ್ಚ ಯೇ ದ್ವಿಜಾಃ ।
ಸ್ವರ್ಗಂ ಚೈವಾಪವರ್ಗಂ ಚ ಇತ್ಯುಕ್ತ್ವಾ ಸಂಶಯಾತ್ಪುರಾ ।
ವೈದಾಂತಿಕಾಧೋ ಯಾಸ್ಯಂತಿ ಮಮ ಸಂತತಿದೂಷಕಾಃ ॥ ೬೪ ॥

ಪ್ರಾಗ್ಗೌತಮಾಗ್ನಿನಾ ದಗ್ಧಾಃ ಪುನರ್ಮದ್ವಚನಾದ್ದ್ವಿಜಾಃ ।
ನರಕಂ ತು ಗಮಿಷ್ಯಂತಿ ನಾತ್ರ ಕಾರ್ಯಾ ವಿಚಾರಣಾ ॥ ೬೫ ॥

೫೯-೬೧. ಪೂರ್ವದಲ್ಲಿ ದೇವಕಾರ್ಯದಲ್ಲಿ ನಾನು ಭೈರವಸ್ವರೂಪದಿಂದ ಮಾಡಿದ ನರ್ತನ, ರಾಕ್ಷಸರನ್ನು ನಾಶಮಾಡಲು ಬಯಸಿದ ನನಗುಂಟಾದ ಕ್ರೂರ ಕರ್ಮಗಳ ಸಂಬಂಧ, ಪೂರ್ವದ ನನ್ನ ಅಟ್ಟಹಾಸ ಇವುಗಳಲ್ಲಿ ಭೂಮಿಯಮೇಲೆ ಬಿದ್ದ ಲೆಕ್ಕವಿಲ್ಲದ ಕಣ್ಣೀರ ಹನಿಗಳು ಭೂತಲದಲ್ಲಿ ರೌದ್ರರಾಗುವರು.

೬೨. ಉಚ್ಛುಷ್ಮನಿರತರಾದ ಆ ರೌದ್ರರು ಯಾವಾಗಲೂ ಮದ್ಯಮಾಂಸ ಪ್ರಿಯರೂ, ಸ್ತ್ರೀಲೋಲರೂ, ಪಾಪಕರ್ಮಿಗಳೂ ಆಗಿ ಭೂತಲದಲ್ಲಿ ಉದಿಸುವರು.

೬೩. ಅವರ ವಂಶದಲ್ಲಿ ಗೌತಮಶಾಪಗ್ರಸ್ತರಾದ ಬ್ರಾಹ್ಮಣರು ಹುಟ್ಟುವರು.

೬೪. ಅವರಲ್ಲಿ ನನ್ನ ನಿಯಮಗಳಲ್ಲಾಸಕ್ತರಾದ ಸದಾಚಾರವುಳ್ಳವರು ಯಾರೋ ಅವರು ಸ್ವರ್ಗ ಮೋಕ್ಷ ಎಂದು ಹೇಳುತ್ತ ಸಂದೇಹದಿಂದ, ಪೂರ್ವದಲ್ಲಿ ವೇದಾಂತಿಗಳಾಗಿದ್ದವರು ನನ್ನ ಸಂತತಿದೂಷಕರಾಗಿ ಅಧೋಗತಿಯನ್ನು ಪಡೆಯುವರು.

೬೫. ಮೊದಲು ಗೌತಮಶಾಪಾಗ್ನಿಯಿಂದ ದಗ್ಧರಾದ ಬ್ರಾಹ್ಮಣರು ಮತ್ತೆ ನನ್ನ ಮಾತಿನಿಂದ ನರಕಕ್ಕೆ ಹೋಗುವರು. ಇದರಲ್ಲಿ ವಿಚಾರವು ಬೇಕಿಲ್ಲ.

॥ ರುದ್ರ ಉವಾಚ ॥

ಏವಂ ಮಯಾ ಬ್ರಹ್ಮಸುತಾಃ ಪ್ರೋಕ್ತಾ ಜಗ್ಮುರ್ಯಥಾಗತಂ ।
ಗೌತಮೋಽಪಿ ಸ್ವಕಂ ಗೇಹಂ ಜಗಾಮಾಶು ಪರಂತಪಾಃ ॥ ೬೬ ॥

ಏತದ್ವಃ ಕಥಿತಂ ವಿಪ್ರಾ ಮಯಾ ಧರ್ಮಸ್ಯ ಲಕ್ಷಣಂ ।
ಏತಸ್ಮಾದ್ವಿಪರೀತೋ ಯಃ ಸ ಪಾಷಂಡರತೋ ಭವೇತ್ ॥ ೬೭ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಬ್ರಾಹ್ಮಣಾನಾಂ ಶಾಪೋ ನಾಮ ಏಕಸಪ್ತತಿತಮೋಽಧ್ಯಾಯಃ

೬೬–೬೭. ರುದ್ರ— ಹೀಗೆ ನನ್ನಿಂದ ಹೇಳಿಸಿಕೊಂಡ ಬ್ರಹ್ಮಪುತ್ರರಾದ ಸಪ್ತಷಿರ್ಗಳು ಬಂದಿದ್ದಂತೆ ಹೊರಟುಹೋದರು ಗೌತಮನೂ ತನ್ನ ಬೀಡಿಗೆ ಹೊರಟುಹೋದನು. ಶತ್ರುತಾಪಕರಾದ ಬ್ರಾಹ್ಮಣರೇ, ನಿಮಗೆ ನಾನು ಈ ಧರ್ಮದ ಲಕ್ಷಣವನ್ನು ಹೇಳಿದೆನು. ಇದಕ್ಕೆ ವಿರೋಧಿಯು ಪಾಷಂಡರತನಾಗುವನು.

ಅಧ್ಯಾಯದ ಸಾರಾಂಶ—ಅಗಸ್ತ್ಯರು ರುದ್ರಹೃದಯದಲ್ಲಿ ಬ್ರಹ್ಮವಿಷ್ಣುಗಳನ್ನು ಕಂಡು, ಆಶ್ಚರ್ಯದಿಂದ ಇದೇನೆಂದು ಪ್ರಶ್ನಿಸಲು, ರುದ್ರನು ತ್ರಿಮೂರ್ತಿಗಳಲ್ಲಿ ಅಭೇದವನ್ನು ತಿಳಿಸುವನು. ಅಲ್ಲದೆ ಮೋಹನಶಾಸ್ತ್ರರಚನೆಯು ಪ್ರಯೋಜನವೇನೆಂದು ಕೇಳಿದ ಋಷಿಗಳಿಗೆ ರುದ್ರನು— ದಂಡಕಾರಣ್ಯದಲ್ಲಿ ಗೌತಮಋಷಿಯು ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿ ವರಪಡೆದು ಅದರಿಂದ ದ್ವಾದಶವರ್ಷಕ್ಷಾಮದಲ್ಲಿ ಸಾವಿರಾರುಜನ ಋಷಿಗಳನ್ನೂ ಬ್ರಾಹ್ಮಣರನ್ನೂ ಅನ್ನದಾನದಿಂದ ರಕ್ಷಿಸಿದುದು, ಕ್ಷಾಮನಿವಾರಣೆಯಾದ ಬಳಿಕ ಹೊರಟುಹೋಗಲು ಬಯಸಿದ ಬ್ರಾಹ್ಮಣರು ಮಾಯೆಯಿಂದ ಗೋವಧೆಯ ಪಾಪವನ್ನು ಗೌತಮರಿಗೆ ಆರೋಪಿಸಿ ಹೊರಟುಹೋದುದು, ಗೌತಮನು ತಪಸ್ಸಿನಿಂದ ಗಂಗೆಯನ್ನು ಗೋರಕ್ಷಣೆಗಾಗಿ ದಂಡಕಾರಣ್ಯಕ್ಕೆ ತಂದು ಗೋದಾವರಿಯನ್ನಾಗಿಸಿದುದು, ಗೋದಾವರೀ ಮಹಿಮೆ, ಬ್ರಾಹ್ಮಣರ ಮೋಸವನ್ನರಿತು ಅವರಿಗೆ ವೇದಬಾಹ್ಯರಾಗುವಂತೆ ಗೌತಮನು ಶಾಪವನ್ನು ಕೊಟ್ಟುದು, ಸಪ್ತರ್ಷಿಗಳ ಪ್ರಾರ್ಥನೆಯಂತೆ ಗೌತಮಶಾಪಗ್ರಸ್ತರಾದವರಿಗಾಗಿ (ಶಿವನು) ತಾನು ನಿಶ್ವಾಸಸಂಹಿತೆಯೆಂಬ ಪಾಶುಪತಯೋಗವನ್ನು ಸೃಜಿಸಿದುದು ಇವೇ ಮೊದಲಾದ ವಿಚಾರಗಳನ್ನು ತಿಳಿಸಿರುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

-x-

ದ್ವಿಸಪ್ತತಿತಮೋಽಧ್ಯಾಯಃ

ಅಥ ಪ್ರಕೃತಿಪುರುಷನಿರ್ಣಯಃ

॥ ಶ್ರೀ ವರಾಹ ಉವಾಚ ॥

ಸರ್ವಜ್ಞಂ ಸರ್ವಕರ್ತಾರಂ ಭವಂ ರುದ್ರಂ ಪುರಾತನಂ ।
ಪ್ರಣಮ್ಯ ಪ್ರಯತೋಽಗಸ್ತ್ಯಃ ಪಪ್ರಚ್ಛ ಪರಮೇಶ್ವರಂ ॥ ೧ ॥

॥ ಅಗಸ್ತ್ಯ ಉವಾಚ ॥

ಭವಾನ್ ಬ್ರಹ್ಮಾ ಚ ವಿಷ್ಣುಶ್ಚ ತ್ರಯಮೇತತ್ತ್ರಯೀ ಸ್ಮೃತಾ ।
ದೀಪೋಽಗ್ನಿರ್ದೀಪಸಂಯೋಗೈಃ ಸರ್ವಶಾಸ್ತ್ರೇಷು ಸರ್ವಗಃ ॥ ೨ ॥

ಕಸ್ಮಿನ್ಪ್ರಧಾನೋ ಭಗವಾನ್ ಕಾಲೇ ಕಸ್ಮಿನ್ನಧೋಕ್ಷಜಃ ।
ಬ್ರಹ್ಮಾ ವಾ ಏತದಾಚಕ್ಷ್ವ ಮಮ ದೇವ ತ್ರಿಲೋಚನ ॥ ೩ ॥

ಎಪ್ಪತ್ತೆರಡನೆಯ ಅಧ್ಯಾಯ

ಪ್ರಕೃತಿಪುರುಷನಿರ್ಣಯ

೧. ಶ್ರೀವರಾಹ—ಸರ್ವಜ್ಞನೂ, ಸರ್ವಕರ್ತೃವೂ, ಭವನೂ, ರುದ್ರನೂ, ಪುರಾತನನೂ ಆದ ಪರಮೇಶ್ವರನನ್ನು ಶುದ್ಧನಾದ ಅಗಸ್ತ್ಯನು ಕೇಳಿದನು.

೨-೩. ಅಗಸ್ತ್ಯ—ದೇವ, ತ್ರಿಲೋಚನ, ನೀನು, ಬ್ರಹ್ಮ, ವಿಷ್ಣು ಈ ಮೂವರೂ ದೀಪ, ಅಗ್ನಿ, ದೀಪಾಗ್ನಿಸಂಯೋಗಗಳಂತೆ ಸರ್ವಶಾಸ್ತ್ರಗಳಲ್ಲಿಯೂ ತ್ರಿಮೂರ್ತಿಗಳೆಂದೂ, ವೇದತ್ರಯವೆಂದೂ ಹೇಳಿದೆ. ಆದರೆ ನಿಮ್ಮಲ್ಲಿ ಸರ್ವಗ ನಾರು? ಯಾವ ಕಾಲದಲ್ಲಿ ನಿನಗೆ ಪ್ರಾಧಾನ್ಯ (ಮುಖ್ಯತೆ)? ಯಾವ ಕಾಲದಲ್ಲಿ ವಿಷ್ಣುವಿಗೆ ಪ್ರಾಧಾನ್ಯ? ಯಾವಾಗ ಬ್ರಹ್ಮನಿಗೆ ಮುಖ್ಯತೆ? ಇದನ್ನು ನನಗೆ ಹೇಳು.

॥ ರುದ್ರ ಉವಾಚ ॥

ವಿಷ್ಣುರೇವ ಪರಂ ಬ್ರಹ್ಮ ತ್ರಿಭೇದಮಿಹ ಪಠ್ಯತೇ ।
ವೇದಸಿದ್ಧಾಂತಮಾರ್ಗೇಷು ತನ್ನ ಜಾನಂತಿ ಮೋಹಿತಾಃ ॥ ೪ ॥

ವಿಶಪ್ರವೇಶನೇ ಧಾತುಃ ತತ್ರ ಸ್ನುಪ್ರತ್ಯಯಾದನು ।
ವಿಷ್ಣುರ್ಯಸ್ಸರ್ವದೇವೇಷು ಪರಮಾತ್ಮಾ ಸನಾತನಃ ॥ ೫ ॥

ಯೋಽಯಂ ವಿಷ್ಣುಸ್ತು ದಶಧಾ ಕೀರ್ತ್ಯತೇ ಚೈಕಧಾ ದ್ವಿಜೈಃ ।
ಸ ಆದಿತ್ಯೋ ಮಹಾಭಾಗ ಯೋಗೈಶ್ವರ್ಯಸಮನ್ವಿತಃ ॥ ೬ ॥

ಯೋ ದೇವಕಾರ್ಯಾಣಿ ಸದಾ ಕುರುತೇ ಪರಮೇಶ್ವರಃ ।
ಮನುಷ್ಯಭಾವಮಾಶ್ರಿತ್ಯ ಸ ಮಾಂ ಸ್ತೌತಿ ಯುಗೇ ಯುಗೇ ॥ ೭ ॥

ಲೋಕಮಾರ್ಗಪ್ರವೃತ್ತ್ಯರ್ಥಂ ದೇವಕಾರ್ಯಾರ್ಥಸಿದ್ಧಯೇ ।
ಅಹಂ ಚ ತೌ ಸದಾ ಸ್ತೌಮಿ ಶ್ವೇತದ್ವೀಪೇ ಕೃತೇ ಯುಗೇ ॥
ಸೃಷ್ಟಿಕಾಲೇ ಚತುರ್ವಕ್ತ್ರಂ ಸ್ತೌಮಿ ಕಾಲೋ ಭವಾಮಿ ಚ ॥ ೮ ॥

---

೪. ರುದ್ರ—ವಿಷ್ಣುವೇ ಪರಬ್ರಹ್ಮನು. ವೇದಸಿದ್ಧಾಂತ ಮಾರ್ಗಗಳಲ್ಲಿ ಅವನಿಗೆ ತ್ರಿಮೂರ್ತಿ ಭೇದವನ್ನು ಹೇಳಿದೆ. ಮೂಢರು ಅದನ್ನರಿಯುವುದಿಲ್ಲ.

೫. ಪ್ರವೇಶಮಾಡು, ಹೋಗು ಎಂಬ ಅರ್ಥವುಳ್ಳ ವಿಶ್ ಎಂಬ ಧಾತುವಿಗೆ ಸ್ನು ಎಂಬ ಪ್ರತ್ಯಯವು ಸೇರಿ, ವಿಷ್ಣುಃ ಎಂದು ಸರ್ವದೇವತೆಗಳಲ್ಲೂ ಪ್ರವೇಶಿಸಿರುವ ಪರಮಾತ್ಮನು, ಸನಾತನನು ಎಂಬರ್ಥವುಳ್ಳ ಪದವಾಗಿದೆ.

೬. ಆ ವಿಷ್ಣುವನ್ನೇ ದ್ವಿಜರು, ದಶರೂಪನನ್ನಾಗಿಯೂ, ಏಕರೂಪನನ್ನಾಗಿಯೂ ಕೀರ್ತಿಸುತ್ತಾರೆ. ಮಹಾಭಾಗನೇ, ಅವನು ಯೋಗೈಶ್ವರ್ಯವುಳ್ಳವನೂ, ಆದಿತ್ಯರೂಪಿಯೂ ಆಗಿರುವನು.

೭. ಯುಗ ಯುಗದಲ್ಲಿಯೂ ಮನುಷ್ಯಭಾವವನ್ನು ಪಡೆದು, ಆ ಪರಮೇಶ್ವರನು ಸರ್ವದಾ ದೇವಕಾರ್ಯಗಳನ್ನು ಮಾಡುವನು. ನನ್ನನ್ನು ಸ್ತುತಿಸುವನು.

೮. ಲೋಕಮಾರ್ಗಪ್ರವರ್ತನೆಗಾಗಿಯೂ, ದೇವಕಾರ್ಯಾರ್ಥಸಿದ್ಧಿಗಾಗಿಯೂ, ನಾನೂ ಯಾವಾಗಲೂ ಆ ವಿಷ್ಣುಬ್ರಹ್ಮರನ್ನು ಸ್ತುತಿಸುತ್ತೇನೆ. ಕೃತಯುಗದಲ್ಲಿ ಶ್ವೇತದ್ವೀಪದಲ್ಲಿ ಸೃಷ್ಟಿಕಾಲದಲ್ಲಿ ಬ್ರಹ್ಮನನ್ನು ಸ್ತುತಿಸುತ್ತೇನೆ. ಕಾಲನೂ ಆಗುತ್ತೇನೆ.

ಬ್ರಹ್ಮಾ ದೇವಾಸುರಾಃ ಸ್ತೌತಿ ಮಾಂ ಸದಾ ತು ಕೃತೇ ಯುಗೇ ॥ ೯ ॥
ಲಿಂಗಮೂರ್ತಿಂ ಚ ಮಾಂ ದೇವಾ ಯಜಂತೇ ಭೋಗಕಾಂಕ್ಷಿಣಃ ।
ಸಹಸ್ರಶೀರ್ಷಕಂ ದೇವಂ ಮನಸಾ ತು ಮುಮುಕ್ಷವಃ ॥
ಯಜಂತೇ ಯಂ ಸ ವಿಶ್ವಾತ್ಮಾ ದೇವೋ ನಾರಾಯಣಃ ಸ್ವಯಂ ॥ ೧೦ ॥

ಬ್ರಹ್ಮಯಜ್ಞೇನ ಯೇ ನಿತ್ಯಂ ಯಜಂತೇ ದ್ವಿಜಸತ್ತಮ ।
ತೇ ಬ್ರಹ್ಮಾಣಂ ಪ್ರೀಣಯಂತಿ ವೇದೋ ಬ್ರಹ್ಮಾ ಪ್ರಕೀರ್ತಿತಃ ॥ ೧೧ ॥

ನಾರಾಯಣಃ ಶಿವೋ ವಿಷ್ಣುಃ ಶಂಕರಃ ಪುರುಷೋತ್ತಮಃ ।
ಏತೇಸು ನಾಮಭಿಃ ಬ್ರಹ್ಮ ಪರಂ ಪ್ರೋಕ್ತಂ ಸನಾತನಂ ॥ ೧೨ ॥

ಕರ್ಮವೇದಯುಜಾಂ ವಿಪ್ರ ಬ್ರಹ್ಮಾ ವಿಷ್ಣುರ್ಮಹೇಶ್ವರಃ ।
ವಯಂ ತ್ರಯೋಽಪಿ ಮಂತ್ರಾದ್ಯಾ ನಾತ್ರ ಕಾರ್ಯಾ ವಿಚಾರಣಾ ॥ ೧೩ ॥

---

೯. ಬ್ರಹ್ಮನೂ, ದೇವಾಸುರರೂ ಕೃತಯುಗದಲ್ಲಿ ಯಾವಾಗಲೂ ನನ್ನನ್ನು ಸ್ತುತಿಸುತ್ತಾರೆ.

೧೦. ಭೋಗವನ್ನು ಬಯಸುವ ದೇವತೆಗಳು ಲಿಂಗಮೂರ್ತಿಯಾದ ನನ್ನನ್ನು ಪೂಜಿಸುತ್ತಾರೆ. ಮೋಕ್ಷವನ್ನು ಬಯಸುವವರಾದರೆ ಮನಸ್ಸಿನಿಂದ ಸಹಸ್ರಶೀರ್ಷನಾದ ದೇವನನ್ನು ಪೂಜಿಸುತ್ತಾರೆ. ಅವನೇ ವಿಶ್ವಾತ್ಮನಾದ ಸಾಕ್ಷಾನ್ನಾರಾಯಣ ದೇವನು.

೧೧. ದ್ವಿಜೋತ್ತಮನೇ, ನಿತ್ಯವೂ ಬ್ರಹ್ಮಯಜ್ಞದಿಂದ ಪೂಜಿಸುವವರು ಬ್ರಹ್ಮನನ್ನು ಸಂತೋಷಪಡಿಸುತ್ತಾರೆ. ವೇದವು ಬ್ರಹ್ಮನೆಂದು ಕೀರ್ತಿಸಲ್ಪಡುವುದು.

೧೨. ನಾರಾಯಣ, ಶಿವ, ವಿಷ್ಣು, ಶಂಕರ, ಪುರುಷೋತ್ತಮ ಎಂಬ ಹೆಸರುಗಳಿಂದ ಸನಾತನನಾದ ಪರಬ್ರಹ್ಮನನ್ನೇ ಹೇಳಿದೆ.

೧೩. ಬ್ರಾಹ್ಮಣನೇ, ಕರ್ಮವೇದಯುಕ್ತರಾದವರಿಗೆ ಬ್ರಹ್ಮ ವಿಷ್ಣು ಮಹೇಶ್ವರರೆಂಬ ನಾವು ಮೂವರೂ ಮಂತ್ರಾದ್ಯರು. ಇದರಲ್ಲಿ ವಿಚಾರಮಾಡಬೇಕಾಗಿಲ್ಲ.

ಅಹಂ ವಿಷ್ಣುಸ್ತಥಾ ವೇದಾ ಬ್ರಹ್ಮಕರ್ಮಾಣಿ ಚಾಪ್ಯುತ ।
ಏತತ್ತ್ರಯಂ ತ್ವೇಕಮೇವ ನ ಪೃಥಗ್ಭಾವಯೇತ್ಸುಧೀಃ ॥ ೧೪ ॥

ಯೋಽನ್ಯಥಾ ಭಾವಯೇದೇತತ್ ಪಕ್ಷಪಾತೇನ ಸುವ್ರತ ।
ಸ ಯಾತಿ ನರಕಂ ಘೋರಂ ತೇನೈವಂ ಪಾಪಪೂರುಷಃ ॥ ೧೫ ॥

ಅಹಂ ಬ್ರಹ್ಮಾ ಚ ವಿಷ್ಣುಶ್ಚ ಋಗ್ಯಜುಃಸಾಮಚೈವ ತು ।
ತೇನಾಸ್ಮಿನ್ನೇದಮಪ್ಯಾಹುಃ ಸರ್ವೇಷಾಂ ದ್ವಿಜಸತ್ತಮಾಃ ॥ ೧೬ ॥

ಇತಿ ಶ್ರೀ ವರಾಹಪುರಾಣೇ ಪ್ರಕೃತಿಪುರುಷನಿರ್ಣಯೇ
ದ್ವಿಸಪ್ತತಿತಮೋಽಧ್ಯಾಯಃ

---

೧೪ ನಾನು, ವಿಷ್ಣು, ವೇದಗಳು, ಬ್ರಹ್ಮ, ಕರ್ಮಗಳು ಈ ಎಲ್ಲವೂ ಒಂದೇ. ವಿದ್ವಾಂಸನಾದವನು ಬೇರೆಯೆಂದು ಭಾವಿಸಬಾರದು.

೧೫. ಸುವ್ರತನೇ, ಪಕ್ಷಪಾತದಿಂದ ಬೇರೆ ವಿಧವಾಗಿ ಭಾವಿಸುವವನು ಪಾಪಪುರುಷನು ಅವನು ಅದರಿಂದಲೇ ಘೋರನರಕಕ್ಕೆ ಹೋಗುವನು.

೧೬. ನಾನೂ(ಶಿವ), ಬ್ರಹ್ಮನೂ, ವಿಷ್ಣುವೂ ಋಗ್ಯಜುಸ್ಸಾಮವೇದಗಳಾಗಿರುವುದರಿಂದ ದ್ವಿಜೋತ್ತಮರು ತ್ರಿಮೂರ್ತಿಗಳಲ್ಲೂ ಭೇದವನ್ನು ಎಲ್ಲರಿಗೂ ಹೇಳುವರು.

ಅಧ್ಯಾಯದ ಸಾರಾಂಶ :—

ಈ ಅಧ್ಯಾಯದಲ್ಲಿ ಅಗಸ್ತ್ಯರು, ಶಿವನನ್ನು ತ್ರಿಮೂರ್ತಿಗಳಲ್ಲಿ ಸರ್ವಗತನಾರು ? ಎಂದು ಪ್ರಶ್ನಿಸಲು ಶಿವನು ವಿಷ್ಣುವೇ ಪರಬ್ರಹ್ಮನು, ಮೂರ್ತಿತ್ರಯಾತ್ಮಕನೂ ಅವನೇ. ನಮ್ಮಲ್ಲಿ ಭೇದವಿಲ್ಲ. ಭೇದವನ್ನೆಣಿಸುವವರು ನರಕಭಾಗಿಗಳಾಗುವರು ಎಂದು ಹೇಳಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ.

॥ ಶ್ರೀಃ ॥

–x–

ತ್ರಯಸ್ಸಪ್ತತಿತಮೋಽಧ್ಯಾಯಃ

ಅಥ ವೈರಾಜವೃತ್ತಾಂತಂ

॥ ರುದ್ರ ಉವಾಚ ॥

ಶೃಣು ಚಾನ್ಯದ್ದ್ವಿಜಶ್ರೇಷ್ಠ ಕೌತೂಹಲಸಮನ್ವಿತಂ ।
ಅಭೂತಪೂರ್ವಂ ಸಲಿಲೇ ಮಗ್ನೇನ ಮುನಿಪುಂಗವ ॥ ೧ ॥

ಬ್ರಹ್ಮಣಾಹಂ ಪುರಾ ಸೃಷ್ಟಃ ಪ್ರೋಕ್ತಶ್ಚ ಸೃಜ ವೈ ಪ್ರಜಾಃ ।
ಅವಿಜ್ಞಾನಸಮರ್ಥೋಽಹಂ ನಿಮಗ್ನಃ ಸಲಿಲೇ ದ್ವಿಜ ॥ ೨ ॥

ತತ್ರ ಯಾವತ್ ಕ್ಷಣಂ ಚೈಕಂ ತಿಷ್ಠಾಮಿ ಪರಮೇಶ್ವರಂ ।
ಅಂಗುಷ್ಠಮಾತ್ರಪುರುಷಂ ಧ್ಯಾಯನ್ಪ್ರಯತಮಾನಸಃ ॥ ೩ ॥

ಎಪ್ಪತ್ತಮೂರನೆಯ ಅಧ್ಯಾಯ

ವೈರಾಜವೃತ್ತಾಂತ

೧. ರುದ್ರ—ದ್ವಿಜೋತ್ತಮಾ, ಮುನಿವರ್ಯಾ, ನೀರಲ್ಲಿ ಮುಳುಗಿದ ನಾನು ನೋಡಿದ ಹಿಂದೆಂದೂ ನಡೆಯದ ಕುತೂಹಲಕರವಾದ ಬೇರೊಂದು ವಿಚಾರವನ್ನು ಕೇಳು.

೨. ಪೂರ್ವದಲ್ಲಿ ಬ್ರಹ್ಮನು ನನ್ನನ್ನು ಸೃಷ್ಟಿಸಿ, 'ಪ್ರಜೆಗಳನ್ನು ಸೃಜಿಸು.' ಎಂದು ಹೇಳಿದನು. ವಿಜ್ಞಾನಸಾಮರ್ಥ್ಯವಿಲ್ಲದ ನಾನು ನೀರಿನಲ್ಲಿ ಮುಳುಗಿದೆನು.

೩–೪. ಅಲ್ಲಿ ಶುದ್ಧಮನಸ್ಸುಳ್ಳವನಾಗಿ, ಅಂಗುಷ್ಠಮಾತ್ರಪುರುಷನಾದ ಪರಮೇಶ್ವರನನ್ನು ಧ್ಯಾನಿಸುತ್ತಾ, ಒಂದು ಕ್ಷಣವಿರುವಷ್ಟರಲ್ಲಿ ಪ್ರಳಯಾಗ್ನಿ

ತಾವಜ್ಜಲಾತ್ಸಮುತ್ತಸ್ಥುಃ ಪ್ರಲಯಾಗ್ನಿಸಮಪ್ರಭಾಃ |
ಪುರುಷಾ ದಶ ಚೈಕಶ್ಚ ತಾಪಯಂತೋಂಶುಭಿರ್ಜಲಂ || ೪ ||

ಮಯಾ ಪೃಷ್ಟಾ ಕೇ ಭವಂತೋ ಜಲಾದುತ್ತೀರ್ಯ ತೇಜಸಾ |
ತಾಪಯಂತೋ ಜಲಂ ಚೇದಂ ಕ್ವ ವಾ ಯಾಸ್ಯಥ ಶಂಸತ || ೫ ||

ಏವಮುಕ್ತಾ ಮಯಾ ತೇ ತು ನೋಚುಃ ಕಿಂಚನ ಸತ್ತಮಾಃ |
ಏವಮೇವ ಗತಾಸ್ತೂಷ್ಣೀಂ ತೇ ನರಾ ದ್ವಿಜಪುಂಗವಾಃ || ೬ ||

ತತಸ್ತೇಷಾಮನು ಮಹಾಪುರುಷೋಽತೀವ ಶೋಭನಃ |
ಸ ತಸ್ಮಿನ್ಮೇಘಸಂಕಾಶಃ ಪುಂಡರೀಕನಿಭೇಕ್ಷಣಃ || ೭ ||

ತಮಹಂ ಪೃಷ್ಟವಾನ್ ಕಸ್ತ್ವಂ ಕೇ ಚೇಮೇ ಪುರುಷಾಗತಾಃ |
ಕಿಂ ವಾ ಪ್ರಯೋಜನಮಿಹ ಕಥ್ಯತಾಂ ಪುರುಷರ್ಷಭ || ೮ ||

ಸಮಾನಕಾಂತಿಯುಳ್ಳ ಹನ್ನೊಂದು ಜನ ಪುರುಷರು ತಮ್ಮ ಕಿರಣಗಳಿಂದ ನೀರನ್ನು ಕಾಯಿಸುತ್ತ, ನೀರಿನಿಂದ ಮೇಲೆದ್ದರು.

೫. ನಾನು "ನೀವಾರು ? ತೇಜಸ್ಸಿನಿಂದ ಈ ನೀರನ್ನು ಕಾಯಿಸುತ್ತ ನೀರಿನಿಂದೆದ್ದು, ಎಲ್ಲಿ ಹೋಗುವಿರಿ ? ಹೇಳಿರಿ" ಎಂದು ಕೇಳಿದೆನು.

೬. ನಾನು ಹಾಗೆ ಕೇಳಿದರೂ ಆ ಸಜ್ಜನೋತ್ತಮರಾದರೋ ಏನನ್ನೂ ಹೇಳಲಿಲ್ಲ. ಅವರು ಹಾಗೆಯೇ ಸುಮ್ಮನೆ ಹೊರಟು ಹೋದುರು.

೭. ಬಳಿಕ ಅವರ ಹಿಂದೆ ಅತಿಸುಂದರನೂ, ಮೇಘಸದೃಶನೂ, ಪುಂಡರೀಕನೇತ್ರನೂ, ಆದ ಮಹಾಪುರುಷನೊಬ್ಬನು ಬಂದನು.

೮. ಆತನನ್ನು ನಾನು "ನೀನಾರು ? ಹೊರಟು ಹೋದ ಪುರುಷರಾರು ? ಇಲ್ಲಿ ಪ್ರಯೋಜನವೇನು ? ಪುರುಷೋತ್ತಮನೇ, ಹೇಳು" ಎಂದು ಕೇಳಿದೆನು.

॥ ಪುರುಷ ಉವಾಚ ॥

ಯ ಏತೇ ವೈ ಗತಾಃ ಪೂರ್ವಂ ಪುರುಷಾ ದೀಪ್ತತೇಜಸಃ ।
ಆದಿತ್ಯಾಸ್ತೇಜಸಾ ಯಾಂತಿ ಧ್ಯಾತಾ ವೈ ಬ್ರಹ್ಮಣಾಭವನ್ ॥ ೯ ॥

ಸೃಷ್ಟಿಂ ಸೃಜತಿ ವೈ ಬ್ರಹ್ಮಾತದರ್ಥಂ ಯಾಂತ್ಯಮೀ ನರಾಃ ।
ಪ್ರತಿಪಾಲನಾಯ ತಸ್ಯಾಸ್ತು ಸೃಷ್ಟೇರ್ದೇವ ನ ಸಂಶಯಃ ॥ ೧೦ ॥

ಜಾನೀಯಾಂ ಭಗವನ್ಕಥಂ ಮಹಾಪುರುಷಸತ್ತಮಮ್ ।
ಭವೇತಿ ನಾಮ್ನಾ ತತ್ಸರ್ವಂ ಕಥಯಸ್ವ ಪರೋಹ್ಯಹಮ್ ॥ ೧೧ ॥

ಏವಮುಕ್ತಸ್ತು ರುದ್ರೇಣ ಸ ಪುಮಾನ್ ಪ್ರತ್ಯಭಾಷತ ।
ಅಹಂ ನಾರಾಯಣೋ ದೇವೋ ಜಲಶಾಯೀ ಸನಾತನಃ ।
ದಿವ್ಯಂ ಚಕ್ಷುರ್ಭವತಿ ವೈ ತವ ಮಾಂ ಪಶ್ಯ ಯತ್ನತಃ ॥ ೧೨ ॥

---

೯. ಪುರುಷ—ದೇವ, ಮೊದಲು ಹೊರಟು ಹೋದ ಆ ಹೊಳೆಯುವ ತೇಜಸ್ಸುಳ್ಳವರು ಆದಿತ್ಯರು. ಬ್ರಹ್ಮನು ಅವರನ್ನು ಧ್ಯಾನಿಸಿದನು. ಆದುದರಿಂದ ಇವರು ಹೋಗುತ್ತಾರೆ.

೧೦. ಬ್ರಹ್ಮನು ಸೃಷ್ಟಿಯನ್ನು ಮಾಡುತ್ತಾನೆ. ಆದುದರಿಂದ ಆ ಸೃಷ್ಟಿಯ ಪರಿಪಾಲನೆಗಾಗಿ ಇವರು ಹೋಗುತ್ತಾರೆ. ಸಂದೇಹವಿಲ್ಲ.

೧೧. ನಾನು "ಪೂಜ್ಯನೇ, ಮಹಾಪುರುಷೋತ್ತಮನಾದ ನಿನ್ನನ್ನು ಯಾವ ನಾಮಧೇಯವುಳ್ಳವನೆಂದು ತಿಳಿಯಲಿ? ಭವನೆಂಬ ನಾನು ಪರನಲ್ಲವೆ? ಎಲ್ಲವನ್ನೂ ನನಗೆ ಹೇಳು." ಎಂದೆನು.

೧೨. ಹೀಗೆಂಬುದಾಗಿ ರುದ್ರನಾದ ನಾನು ಕೇಳಲು ಆ ಪುರುಷನು "ನಾನು ಜಲಶಾಯಿಯೂ, ಸನಾತನನೂ ಆದ ನಾರಾಯಣದೇವನು. ನಿನಗೆ ದಿವ್ಯದೃಷ್ಟಿಯುಂಟಾಗುತ್ತದೆ. ನನ್ನನ್ನು ಪ್ರಯತ್ನಪೂರ್ವಕವಾಗಿ ನೋಡು" ಎಂದು ಪ್ರತ್ಯುತ್ತರ ಹೇಳಿದನು.

ಏವಮುಕ್ತಸ್ತದಾ ತೇನ ಯಾವತ್ಪಶ್ಯಾಮ್ಯಹಂ ತು ತಂ ।
ತಾವದಂಗುಷ್ಠಮಾತ್ರಂ ತು ಜ್ವಲದ್ಭಾಸ್ಕರತೇಜಸಂ ॥ ೧೩ ॥

ತಮೇವಾಹಂ ಪ್ರಪಶ್ಯಾಮಿ ತಸ್ಯ ನಾಭೌ ತು ಪಂಕಜಂ ।
ಬ್ರಹ್ಮಾಣಂ ತತ್ರ ಪಶ್ಯಾಮಿ ಆತ್ಮಾನಂ ಚ ತದಂತಿಕೇ ॥ ೧೪ ॥

ಏವಂ ದೃಷ್ಟ್ವಾ ಮಹಾತ್ಮಾನಂ ತತೋ ಹರ್ಷಮುಪಾಗತಃ ॥ ೧೫ ॥

ತಂ ಸ್ತೋತುಂ ದ್ವಿಜಶಾರ್ದೂಲ ಮತಿರ್ಮೇ ಸಮಜಾಯತ ॥ ೧೬ ॥

ತಸ್ಯಾಂ ಮತೌ ತು ಜಾತಾಯಾಂ ಸ್ತೋತ್ರೇಣಾನೇನ ಸುವ್ರತ ।
ಸ್ತುತೋ ಮಯಾ ಸ ವಿಶ್ವಾತ್ಮಾ ತಪಸಾ ಸ್ಮೃತಕರ್ಮಣಾ ॥ ೧೭ ॥

॥ ರುದ್ರ ಉವಾಚ ॥

ನಮೋಽಸ್ತ್ವನಂತಾಯ ವಿಶುದ್ಧಚೇತಸೇ
ಸರೂಪರೂಪಾಯ ಸಹಸ್ರಬಾಹವೇ ।
ಸಹಸ್ರರಶ್ಮಿಪ್ರವರಾಯ ವೇಧಸೇ
ವಿಶಾಲದೇಹಾಯ ವಿಶುದ್ಧಕರ್ಮಣೇ ॥ ೧೮ ॥

೧೩–೧೪. ಆಗ ಅವನಿಂದ ಹಾಗೆ ಹೇಳಿಸಿಕೊಂಡ ನಾನು ಮತ್ತೆ ಅವನನ್ನು ನೋಡಿದಾಗ ಹೊಳೆಯುವ ಸೂರ್ಯನಂತೆ ತೇಜಸ್ಸುಳ್ಳ, ಅದೇ ಅಂಗುಷ್ಠಮಾತ್ರನಾದ ಪುರುಷನನ್ನು ಕಂಡೆನು. ಅವನ ಹೊಕ್ಕುಳಿನಲ್ಲಿ ಕಮಲವನ್ನೂ, ಆ ಕಮಲದಲ್ಲಿ ಬ್ರಹ್ಮನನ್ನೂ, ಅವನ ಸಮೀಪದಲ್ಲಿ ನನ್ನನ್ನೂ ಕಂಡೆನು.

೧೫. ಮಹಾತ್ಮನನ್ನು ಹಾಗೆ ಕಂಡು, ಬಳಿಕ ಸಂತೋಷವುಳ್ಳವನಾದೆನು.

೧೬. ಬ್ರಾಹ್ಮಣೋತ್ತಮನೇ, ಆತನನ್ನು ಸ್ತೋತ್ರಮಾಡಬೇಕೆಂದು ನನಗೆ ಬುದ್ಧಿಯುಂಟಾಯಿತು.

೧೭. ಸುವ್ರತನೇ, ಹಾಗೆ ಬುದ್ಧಿಯುಂಟಾಗಲು, ನಾನು ತಪಸ್ಸಿನಿಂದ ಸ್ಮರಿಸಿ, ಮಾಡಿದ ಈ(ಮುಂದಿನ)ಸ್ತೋತ್ರದಿಂದ ಆ ವಿಶ್ವಾತ್ಮನನ್ನು ಸ್ತುತಿಸಿದೆನು.

೧೮. ಸ್ತೋತ್ರ—ಅನಂತನೂ, ಪರಿಶುದ್ಧಚೇತನನೂ, ಸರೂಪರೂಪನೂ, ಸಹಸ್ರಬಾಹುವೂ, ಭಾಸ್ಕರೋತ್ತಮನೂ, ವಿಶಾಲದೇಹನೂ, ಪರಿಶುದ್ಧಕರ್ಮನೂ, ಸಮಸ್ತವನ್ನೂ ಸೃಜಿಸುವವನೂ ಆದ ನಿನಗೆ ನಮಸ್ಕಾರ.

ಸಮಸ್ತವಿಶ್ವಾರ್ತಿಹರಾಯ ಶಂಭವೇ
ಸಹಸ್ರಸೂರ್ಯಾನಲತಿಗ್ಮತೇಜಸೇ ।
ಸಮಸ್ತವಿದ್ಯಾವಿಧೃತಾಯ ಚಕ್ರಿಣೇ
ಸಮಸ್ತಗೀರ್ವಾಣನುತೇ ಸದಾ ನಮಃ ॥ ೧೯ ॥

ಅನಾದಿದೇವಾಚ್ಯುತ ಶೇಷಶೇಖರ
ಪ್ರಭೋ ವಿಭೋ ಭೂತಪತೇ ಮಹೇಶ್ವರ ।
ಮರುತ್ಪತೇ ಸರ್ವಪತೇ ಜಗತ್ಪತೇ
ಭುವಃಪತೇ ಭುವನಪತೇ ಸದಾ ನಮಃ ॥ ೨೦ ॥

ಜಲೇಶ ನಾರಾಯಣ ವಿಶ್ವಶಂಕರ
ಕ್ಷಿತೀಶ ವಿಶ್ವೇಶ್ವರ ವಿಶ್ವಲೋಚನ ।
ಶಶಾಂಕ ಸೂರ್ಯಾಚ್ಯುತ ವೀರವಿಶ್ವಗಾ
ಪ್ರತರ್ಕ್ಯಮೂರ್ತೇಽಮೃತಮೂರ್ತಿರವ್ಯಯ ॥ ೨೧ ॥

---

೧೯. ಸರ್ವಲೋಕಾರ್ತಿನಾಶಕನೂ ಶಂಭುವೂ, ಸಹಸ್ರಸೂರ್ಯಾಗ್ನಿ ತೀಕ್ಷ್ಣತೇಜನೂ, ಸಮಸ್ತವಿಧ್ಯಾಧರನೂ, ಸರ್ವದೇವನುತನೂ, ಚಕ್ರಧಾರಿಯೂ ಆದ ವಿಷ್ಣುವಿಗೆ ಯಾವಾಗಲೂ ನಮಸ್ಕಾರ.

೨೦. ಅನಾದಿದೇವಾಚ್ಯುತ, ಶೇಷಶೇಖರ, ಪ್ರಭೂ, ವಿಭೂ, ಭೂತಪತೀ, ಮಹೇಶ್ವರಾ, ಮರುತ್ಪತೀ, ಸರ್ವಪತೀ, ಜಗತ್ಪತೀ, ಧರಾಪತೀ, ಭುವನಪತೀಶ ವಂದನಂ.

೨೧-೨೨. ಜಲೇಶ, ನಾರಾಯಣ, ವಿಶ್ವಶಂಕರ, ಕ್ಷಿತೀಶ, ವಿಶ್ವೇಶ್ವರ, ವಿಶ್ವಲೋಚನ, ಶಶಾಂಕ, ಸೂರ್ಯ, ಅಚ್ಯುತ, ವೀರ, ವಿಶ್ವಗ, ಅಪ್ರತರ್ಕ್ಯ ರೂಪಾ, ಅಮೃತಮೂರ್ತಿ, ಅವ್ಯಯ, ನಾರಾಯಣ, ಸರ್ವತೋಮುಖ,

ಜ್ವಲದ್ಧೃತಾಶಾರ್ಚಿವಿರುದ್ಧಮಂಡಲ (?)
ಪ್ರಸಾಹಿ ನಾರಾಯಣ ವಿಶ್ವತೋಮುಖ ।
ನಮೋಽಸ್ತು ದೇವಾರ್ತಿಹರಾಮೃತಾವ್ಯಯ
ಪ್ರಸಾಹಿ ಮಾಂ ಶರಣಗತಂ ಸದಾಚ್ಯುತ ॥ ೨೨ ॥

ವಕ್ತ್ರಾಣ್ಯನೇಕಾನಿ ವಿಭೋ ತವಾಹಂ
ಪಶ್ಯಾಮಿ ಮಧ್ಯಸ್ಥಗತಂ ಪುರಾಣಮ್ ।
ಬ್ರಹ್ಮಾಣಮೀಶಂ ಜಗತಾಂ ಪ್ರಸೂತಿಮ್
ನಮೋಽಸ್ತು ಮಹ್ಯಂ ತು ಪಿತಾಮಹಾಯ ॥ ೨೩ ॥

ಸಂಸಾರಚಕ್ರಭ್ರಮಣೈರನೇಕೈಃ ।
ಕ್ವಚಿದ್ಭವಾನ್ದೇವವರಾದಿದೇವ
ಸನ್ಮಾರ್ಗಿಭಿರ್ಜ್ಞಾನವಿಶುದ್ಧಸತ್ತ್ವೈಃ
ಉಪಾಸ್ಯತೇ ಕಿಂ ಪ್ರಣಮಾಮ್ಯಹಂ ತ್ವಾಮ್ ॥ ೨೪ ॥

ದೇವಾರ್ತಿಹರ, ಅಮೃತ, ಅವ್ಯಯ, ಅಚ್ಯುತ ನಿನಗೆ. ನಮಸ್ಕಾರ. ಶರಣಾಗತನಾದ ನನ್ನನ್ನು ಯಾವಾಗಲೂ ಪರಿಪಾಲಿಸು.

೨೩. ವಿಭುವೇ, ನಾನು ನಿನ್ನ ಹಲವು ಮುಖಗಳನ್ನೂ, ನಿನ್ನ ನಾಭಿಕಮಲದಲ್ಲಿ ಜಗದುದಯಕಾರಣನಾದ ಪುರಾತನನಾದ ಬ್ರಹ್ಮೇಶನನ್ನೂ ನೋಡುತ್ತೇನೆ. ನನಗೆ ಪಿತಾಮಹ(ಅಜ್ಜ)ನಾದ ನಿನಗೆ ನಮಸ್ಕಾರ.

೨೪. ದೇವವರನೇ, ಆದಿದೇವನೇ, ಸಂಸಾರಚಕ್ರದಲ್ಲಿ ಸುತ್ತುತ್ತಿರುವವರೂ, ಸನ್ಮಾರ್ಗಗಾಮಿಗಳೂ ಜ್ಞಾನದಿಂದ ಪರಿಶುದ್ಧಸತ್ವರೂ ಆದ ಹಲವರು ನಿನ್ನನ್ನು ಸರ್ವದಾ ಸೇವಿಸುತ್ತಿರುವವರು. ಇಂತಹ ನಿನ್ನನ್ನು ನಾನು ಒಂದುಸಾರಿ ಏನೆಂದು ನಮಸ್ಕರಿಸಲಿ!

ಏಕಂ ಭವಂತಂ ಪ್ರಕೃತೇಃ ಪರಸ್ತಾ |
ದ್ಯೋ ವೇತ್ತಿ ವಾ ಸರ್ವವಿದಾದಿದೇವ |
ಗುಣಾ ನ ತೇತು ಪ್ರಸಭಂ ವಿಭೇದ್ಯಾ
ವಿಶಾಲಮೂರ್ತಿರ್ಹಿ ಸುಸೂಕ್ಷ್ಮರೂಪಃ || ೨೫ ||

ವಾಗ್ಯೋನಿಮಾನ್ನೋ ವಿಗತೇಂದ್ರಿಯೋಽಸಿ |
ವಿಕರ್ಮಭಾವಾನ್ನವಿಗತೈಕಕರ್ಮಾ |
ಸಂಸಾರವಾಸ್ತ್ವಂ ಹಿ ನ ತಾದೃಶೋಽಸಿ
ಪರಂ ವಪುರ್ದೇವ ವಿಶುದ್ಧಭಾವೈಃ || ೨೬ ||

ಸಂಸಾರವಿಚ್ಛಿತ್ತಿಕರೈರ್ಯಜದ್ಭಿಃ |
ಅತೋಽವಸೀಯೇತ ಚತುರ್ಭುಜಸ್ತ್ವಂ ।
ಪರಂ ನ ಜಾನಂತಿ ಯತೋ ವಪುಸ್ತೇ
ದೇವಾದಯೋಽಪ್ಯದ್ಭುತಕಾರಣಂ ತತ್ || ೨೭ ||

೨೫-೨೭. ಆದಿದೇವನೇ, ಅದ್ವಿತೀಯನಾದ ನಿನ್ನನ್ನು ಮೂಲಪ್ರಕೃತಿಗೆ ವಿಲಕ್ಷಣನನ್ನಾಗಿ ಯಾವನು ತಿಳಿಯುವನೋ ಅವನು ಸರ್ವಜ್ಞನು. ನಿನ್ನ ಗುಣಗಳನ್ನು ಬಲದಿಂದ ವಿವರಿಸಲಾಗುವುದಿಲ್ಲ. ನಮಗೆ ನೀನು ವಿಶಾಲ ಮೂರ್ತಿಯಾಗಿಯೂ, ಸೂಕ್ಷ್ಮರೂಪನಾಗಿಯೂ, ವೇದಮೂಲಭೂತನಾಗಿಯೂ, ಇಂದ್ರಿಯರಹಿತನಾಗಿಯೂ, ಸಂಸಾರವಿಲ್ಲದವನಾಗಿದ್ದರೂ ಸಂಸಾರಿಯಾಗಿಯೂ ಕಾಣಿಸುತ್ತೀಯೆ. ದೇವ ಪರರೂಪನಾದ ನಿನ್ನನ್ನು ಸಂಸಾರವಿಚ್ಛೇದಕರಾಗಿ ಪರಿಶುದ್ಧಭಾವದಿಂದ ಪೂಜಿಸುವವರು(ನಿನ್ನನ್ನು)ಚತುರ್ಭುಜನೆಂದು ನಿಶ್ಚಯಿಸಿ ಕೊಳ್ಳುವರು. ದೇವತೆಗಳೇ ಮೊದಲಾದವರೂ ವಿಸ್ಮಯಕಾರಣವಾದ ನಿನ್ನ ಪರರೂಪ(ದೇಹ)ವನ್ನು ಅರಿಯರು.

ಅತೋಽವತಾರೋಕ್ತತನುಂ ಪುರಾಣಮ್ ।
ಆರಾಧಯೇಯುಃ ಕಮಲಾಸನಾದ್ಯಾಃ ।
ನ ತೇ ವಪುರ್ವಿಶ್ವಸೃಗಬ್ಜಯೋನಿಃ
ಏಕಾಂತತೋ ದೇವ ಮಹಾನುಭಾವಃ ॥ ೨೮ ॥

ಪರಂ ತ್ವಹಂ ವೇದ್ಮಿ ಕವಿಂ ಪುರಾಣಮ್ ।
ಭವಂತಮಾದ್ಯಂ ತಪಸಾ ವಿಶುದ್ಧಃ ।
ಪದ್ಮಾಸನೋ ಮೇ ಜನಕಃ ಪ್ರಸಿದ್ಧಃ
ಚೇತಃ ಪ್ರಸೂತಾವಸಕೃತ್ಪುರಾಣೈಃ ॥ ೨೯ ॥

ಸಂಬುಧ್ಯತೇ ನಾಥ ನ ಮದ್ವಿಧಾಪಿ ।
ವಿದುರ್ಭವಂತಂ ತಪಸಾ ವಿಹೀನಾಃ ।
ಬ್ರಹ್ಮಾದಿಭಿಸ್ತತ್ಪ್ರವರೈರಬೋಧ್ಯಂ
ತ್ವಾಂ ದೇವರೂಪಾಃ ‡ಪ್ರಣಮಂತಿ ನಿತ್ಯಮ್ ॥ ೩೦ ॥

---

೨೮. ಆದುದರಿಂದ ಬ್ರಹ್ಮನೇ ಮೊದಲಾದವರು ಪುರಾತನವಾದ ನಿನ್ನ ಮತ್ಸ್ಯಾದ್ಯವತಾರಗಳ ರೂಪವನ್ನೇ ಪೂಜಿಸುವರು. ದೇವ, ಪ್ರಪಂಚವನ್ನು ಸೃಷ್ಟಿಸುವ ಮಹಾನುಭಾವನಾದ ಬ್ರಹ್ಮನೂ ನಿನ್ನ ಪರರೂಪವನ್ನು ನಿಜವಾಗಿ ತಿಳಿಯನು.

೨೯. ಆದರೆ ತಪಸ್ಸಿನಿಂದ ಪರಿಶುದ್ಧನಾದ ನಾನು ಕವಿಯೂ, ಪುರಾಣ ಪುರುಷನೂ, ಆದ್ಯನೂ ಆದ ನಿನ್ನನ್ನು ಬಲ್ಲೆನು. ಮಾನಸಸೃಷ್ಟಿಯಲ್ಲಿ ನನಗೆ ತಂದೆಯಾದ ಚತುರ್ಮುಖಬ್ರಹ್ಮನು ಹಲವುವೇಳೆ ಪುರಾಣಗಳಿಂದ ಪ್ರಸಿದ್ಧನಾಗಿ ಲೋಕದ ಅರಿಕೆಗೆ ಬಂದಿರುವನು.

೩೦. ನಾಥ, ನಿನ್ನನ್ನು ಮಾತ್ರ ತಪೋಹೀನರಾದರೆ ನನ್ನಂತಹವರು ಕೂಡ ಸರಿಯಾಗಿ ಅರಿಯರು. ಆದುದರಿಂದ ಬಹು ಶ್ರೇಷ್ಠರಾದ ಬ್ರಹ್ಮನೇ ಮೊದಲಾದವರೂ ಅರಿಯದಿರುವ ನಿನ್ನನ್ನು ದೇವತೆಗಳು (ಅರಿಯಲು) ಯಾವಾಗಲೂ ವಂದಿಸುತ್ತಿರುವರು

---

‡ ಸಮನಂತನತ್ವಾ

ಪ್ರಬೋಧಮೃಚ್ಛಂತಿ ನ ತೇಷು ಬುದ್ಧೇ ।
ರುದಾರಕೀರ್ತಿಷ್ವಪಿ ವೇದಹೀನಾಃ ।
ಜನ್ಮಾಂತರೈರ್ವೇದವಿದಾಂ ವಿವೇಕೈಃ
ಬುದ್ಧಿರ್ಭವೇನ್ನಾಥ ತವ ಪ್ರಸಾದಾತ್ ॥ ೩೧ ॥

ತ್ವಲ್ಲಬ್ಧಲಾಭಸ್ಯ ನ ಮಾನುಷತ್ವ ।
ನ ದೇವಗಂಧರ್ವಗತಿಃ ಶಿವಂ ಸ್ಯಾತ್ ।
ತ್ವಂ ವಿಶ್ವರೂಪೋಽಸಿ ಭವಾನ್ಸುಸೂಕ್ಷ್ಮ
ಸ್ಥೂಲೋಽಸಿ ಚೇದಂ ಕೃತಕೃತ್ಯತಾದ್ಯ ॥ ೩೨ ॥

ಸ್ಥೂಲಃ ಸೂಕ್ಷ್ಮಃ ಸುಲಭೋಽಸಿ ದೇವ
ತ್ವದ್ಬಾಹ್ಯವೃತ್ತ್ಯಾ ನರಕೇ ಪತಂತಿ ।
ಕಿಮುಚ್ಯತೇ ವಾ ಭವತಿ ಸ್ಥಿತೇಽಸ್ಮಿನ್
ನಾಥೇ ತು ವಸ್ತ್ವರ್ಕಮರುನ್ಮಹೀಭಿಃ ॥ ೩೩ ॥

---

೩೧. ಬಹು ಕೀರ್ತಿವಂತರಾದರೂ ಅವರಲ್ಲಿ ವೇದಹೀನರಾದವರು ಜ್ಞಾನವನ್ನು ಪಡೆಯುವುದಿಲ್ಲ ನಾಥ ನಿನ್ನ ಅನುಗ್ರಹದಿಂದ ಜನ್ಮಾಂತರ (ಬಹುಜನ್ಮ) ಗಳಲ್ಲಿ ವೇದವನ್ನರಿತವರಿಗೆ ವಿವೇಕದಿಂದ (ನಿನ್ನ) ಜ್ಞಾನವುಂಟಾಗುವುದು.

೩೨. ನಿನ್ನಿಂದ ಲಾಭವನ್ನು ಪಡೆದವನಿಗೆ ಮುಂದೆ ಮನುಷ್ಯಜನ್ಮವಾಗಲಿ, ದೇವಗಂಧರ್ವಗತಿಗಳಾಗಲಿ ಇರುವುದಿಲ್ಲ. ಶ್ರೇಯಸ್ಸಾಗುವುದು. ದೇವ, ನೀನು ವಿಶ್ವರೂಪನೂ, ಅತಿಸೂಕ್ಷ್ಮನೂ, ಅತಿಸ್ಥೂಲನೂ ಆಗಿದ್ದೀಯೆ. ಇದನ್ನರಿತ ನಾನು ಈಗ ಕೃತಕೃತ್ಯ (ಧನ್ಯ)ನಾದೆನು.

೩೩–೩೪. ದೇವ, ನೀನು ಸ್ಥೂಲನೂ, ಅತಿ ಸೂಕ್ಷ್ಮನೂ, ಭಕ್ತಸುಲಭನೂ ಆಗಿದ್ದೀಯೆ. ನಿನ್ನನ್ನು ಮರೆತವರು ನರಕದಲ್ಲಿ ಬೀಳುವರು. ನೀರಿನಲ್ಲಿರುವ ಮತ್ಸ್ಯಾದಿಜಂತುಗಳಿಗೆ ಸಮವಾದ ರೂಪವನ್ನು ಧರಿಸುವವನೂ, ಸರ್ವಾಂತ

ಸತ್ತ್ವೈಃ ಸತೋಯೈಃ ಸಮರೂಪಧಾರಿಣಿ ।
ಆತ್ಮಸ್ವರೂಪೇ ವಿತತಸ್ವಭಾವೇ ।
ಇತಿ ಸ್ತುತೀರ್ನೋ ಭಗವನ್ನನಂತ
ಜುಷಸ್ವ ಭಕ್ತಸ್ಯ ವಿಶೇಷತಶ್ಚ ॥ ೩೪ ॥

ಸ್ವಷ್ಟಿಂ ಸೃಜಸ್ವೇತಿ ತವೋದಿತಸ್ಯ ।
ಸರ್ವಜ್ಞತಾಂ ದೇಹಿ ನಮೋಽಸ್ತು ವಿಷ್ಣೋ ।
ಚತುರ್ಮುಖೋ ವಾ ಯದಿ ಕೋಟಿವಕ್ತ್ರೋ
ಭವೇನ್ನರಃ ಕೋಽಪಿ ವಿಶುದ್ಧಚೇತಾಃ ॥ ೩೫ ॥

‡ಸ ತೇ ಗುಣಾನಾಮಯುತೈಕಮಂಶಂ ।
ವದೇತ್ತದಾ ದೇವವರಂ ಪ್ರಸೀದ ।
ಸಮೋ ವಿಯುಕ್ತಸ್ಯ ವಿಶುದ್ಧಭಾವ
ಸ್ತದ್ಭಾವಭಾವ್ಯೈಕಮನೋಽನುಗಸ್ಯ ॥ ೩೬ ॥

ರ್ಯಾಮಿಯೂ, ವಿಶಾಲಸ್ವಭಾವನೂ, ಲೋಕನಾಥನೂ ಆದ ಈ ನೀನಿರುವಾಗ ವಸುಸೂರ್ಯಮರುದ್ಭೂಮಿಗಳಿಂದ ಆಗಬೇಕಾದುದು ಆವುದೆಂದು ಹೇಳೋಣ! ಭಗವಂತನೇ, ಅನಂತಾ, ಅತಿಭಕ್ತನಾದ ನನ್ನ ಈ ಸ್ತುತಿಗಳನ್ನು ಅಂಗೀಕರಿಸು.

೩೫–೩೬. ವಿಷ್ಣುವೇ, ನಿನಗೆ ನಮಸ್ಕಾರ. ಸೃಷ್ಟಿಯನ್ನು ಮಾಡೆಂದು ನಿನ್ನಿಂದ ಆಜ್ಞಪ್ತನಾದ ನನಗೆ (ಅದಕ್ಕೆ ಬೇಕಾದ) ಸರ್ವಜ್ಞತೆಯನ್ನು ಕೊಡು. ಚತುರ್ಮುಖಬ್ರಹ್ಮನಾಗಲಿ, ಪರಿಶುದ್ಧಚಿತ್ತನಾದ ಬೇರೆ ಕೋಟಿಮುಖವುಳ್ಳ ಮನುಷ್ಯನೇ ಆಗಲಿ ಪರಮಾತ್ಮಸ್ವಭಾವದಲ್ಲಿ ಅಭಿಪ್ರಾಯವುಳ್ಳ ವಿರಕ್ತನಾದ ಅವನಿಗೆ ಸಮವಾದ ಪರಿಶುದ್ಧಭಾವವುಂಟಾದರೆ ಆಗ ಅವನು ನಿನ್ನ ಹತ್ತುಸಾವಿರ ಗುಣಗಳಲ್ಲಿ ಒಂದು ಭಾಗವನ್ನು ಹೇಳಬಲ್ಲನು. ದೇವೋತ್ತಮನೇ, ಪ್ರಸನ್ನನಾಗು.

---

‡ ಸ ಮೇ ಗುಣಾನಾಮಯುತೈರನ್ಯೈಕೈರ್ವದೇತ್

ಸದಾಹೃದಿಸ್ಥೋಽಸಿ ಭವಾನ್ನಮಸ್ತೇ
ನ ಸರ್ವಗಸ್ಯಾಸ್ತಿ ಪೃಥಗ್ವ್ಯವಸ್ಥಾ ।
ಇತಿಪ್ರಕಾಶಂ ಕೃತಮೇತದೀಶ
ಸ್ತವಂ ಮಯಾ ಸರ್ವಗತಂ ವಿಬುಧ್ವಾ ॥ ೩೭ ॥

ಸಂಸಾರಚಕ್ರಕ್ರಮಮಾಣಯುಕ್ತ್ಯಾ ।
ಭೀತಂ ಪುನೀಹ್ಯಚ್ಯುತ ಕೇವಲ ತ್ವಂ ॥ ೩೮ ॥

॥ ಶ್ರೀವರಾಹ ಉವಾಚ ॥

ಇತಿ ಸ್ತುತಸ್ತದಾ ದೇವೋ ರುದ್ರೇಣಾಮಿತತೇಜಸಾ ।
ಉವಾಚ ವಾಕ್ಯಂ ಸಂತುಷ್ಟೋ ಮೇಘಗಂಭೀರನಿಸ್ವನಃ ॥ ೩೯ ॥

॥ ವಿಷ್ಣುರು ವಾಚ ॥

ವರಂ ವರಯ ಭದ್ರಂ ತೇ ದೇವದೇವ ಉಮಾಪತೇ ।
ನ ಭೇದಶ್ಚಾವಯೋರ್ದೇವ ಏಕಾವಾವಾಮುಭಾವಪಿ ॥ ೪೦ ॥

೩೭-೩೮. ಈಶನೇ, ನೀನು ಸದಾ ನನ್ನ ಹೃದಯದಲ್ಲಿಯೇ ನೆಲಸಿರುವೆ. ಸರ್ವಗನಾದವನಿಗೆ ಬೇರೆಯಾದ ಇರವು (ನೆಲೆ) ಒಂದಿಲ್ಲ. 'ನೀನು ಸರ್ವಗತನು ಎಂದರಿತು ಹೀಗೆ ನಾನು ಈ ಸ್ತುತಿಯನ್ನು ಪ್ರಕಾಶಪಡಿಸಿರುವೆನು. ಸಂಸಾರ ಚಕ್ರದಲ್ಲಿ ಸುತ್ತುವುದರಲ್ಲಿ ಭೀತನಾಗಿರುವವನನ್ನು ಶುದ್ಧನೂ, ಅಚ್ಯುತನೂ ಆದ ನೀನು ಪವಿತ್ರನನ್ನಾಗಿ ಮಾಡು. ನಿನಗೆ ನಮಸ್ಕಾರ.

೩೯. ಶ್ರೀವರಾಹ—ಅಮಿತತೇಜನಾದ ರುದ್ರನಿಂದ ಹೀಗೆ ಸ್ತುತನಾದ ದೇವನು ಗುಡುಗಿನಂತೆ ಗಂಭೀರವಾದ ಧ್ವನಿಯಿಂದ ಮುಂದಿನ ಮಾತನಾಡಿದನು.

೪೦. ವಿಷ್ಣು—ದೇವದೇವ, ಪಾರ್ವತೀಪತೀ, ನಿನಗೆ ಮಂಗಳವಾಗಲಿ, ವರವನ್ನು ಕೇಳು. ದೇವ, ನಮ್ಮಿಬ್ಬರಲ್ಲಿ ಭೇದವಿಲ್ಲ. ನಾವಿಬ್ಬರೂ ಒಂದೇ.

|| ರುದ್ರ ಉವಾಚ ||

ಬ್ರಹ್ಮಣಾಹಂ ನಿಯುಕ್ತಸ್ತು ಪ್ರಜಾಃ ಸೃಜ ಇತಿ ಪ್ರಭೋ ।
ತತ್ರ ಜ್ಞಾನಂ ಪ್ರಯಚ್ಛಸ್ವ ತ್ರಿವಿಧಂ ಭೂತಭಾವನ || ೪೧ ||

|| ವಿಷ್ಣುರುವಾಚ ||

ಸರ್ವಜ್ಞಸ್ತ್ವಂ ನ ಸಂದೇಹೋ ಜ್ಞಾನರಾಶಿಃ ಸನಾತನಃ ।
ದೇವಾನಾಂ ಚ ಪರಂ ಪೂಜ್ಯಃ ಸರ್ವಥಾ ತ್ವಂ ಭವಿಷ್ಯಸಿ || ೪೨ ||

ಏವಮುಕ್ತಃ ಪುನರ್ವಾಕ್ಯಮುವಾಚೋಮಾಪತಿಸ್ತದಾ ।
ಅನ್ಯಂ ದೇಹಿ ವರಂ ದೇವ ಪ್ರಸಿದ್ಧಂ ಸರ್ವಜಂತುಷು || ೪೩ ||

ಮೂರ್ತೋ ಭೂತ್ವಾ ಭವಾನೇವಂ ಮಾಮಾರಾಧಯ ಕೇಶವ ।
ಮಾಂ ವಹಸ್ವ ಸ ದೇವೇಶ ವರಂ ಮತ್ತೋ ಗೃಹಾಣಚ ।
ತೇನ ತ್ವಂ ಸರ್ವದೇವಾನಾಂ ಪೂಜ್ಯಾತ್ಪೂಜ್ಯತರೋ ಭವ || ೪೪ ||

---

೪೧. ರುದ್ರ—ಪ್ರಭುವೇ, ಬ್ರಹ್ಮನು ಪ್ರಜೆಗಳನ್ನು ಸೃಜಿಸೆಂದು ನನಗೆ ನಿಯಮಿಸಿದನು. ಭೂತಭಾವನನೇ, ಆ ಸೃಷ್ಟಿಯ ವಿಚಾರದಲ್ಲಿ ಮೂರು ಬಗೆಯಾದ (ಭೂತವರ್ತಮಾನಭವಿಷ್ಯ) ಜ್ಞಾನವನ್ನು ಕೊಡು.

೪೨. ವಿಷ್ಣು—ಸನಾತನನಾದ ನೀನು ಸಂಶಯವಿಲ್ಲದೆ ಖಂಡಿತವಾಗಿಯೂ, ಸರ್ವಜ್ಞನೂ, ಜ್ಞಾನರಾಶಿಯೂ, ದೇವತೆಗಳಿಗೂ ಅಧಿಕ ಪೂಜ್ಯನೂ ಆಗುವೆ.

೪೩–೪೪. ಹೀಗೆ ಹೇಳಿಸಿಕೊಂಡ ಪಾರ್ವತೀಪತಿಯು ಆಗ ತಿರುಗಿ "ದೇವ, ಸರ್ವಜಂತುಗಳಲ್ಲೂ ಪ್ರಸಿದ್ಧವಾದ ಬೇರೆಯ ವರವನ್ನೂ ಕೊಡು. ಕೇಶವ, ದೇವೇಶ, ನೀನು ಹೀಗೆ ದೇಹಧಾರಿಯಾಗಿ ನನ್ನನ್ನು ಆರಾಧಿಸು. ನನ್ನನ್ನು ವಹಿಸು. ನನ್ನಿಂದ ವರವನ್ನು ತೆಗೆದುಕೊಂಡು ಸರ್ವದೇವತೆಗಳಿಗೂ ಪೂಜ್ಯತಮನಾಗು."

|| ವಿಷ್ಣುರುವಾಚ ||

ದೇವಕಾರ್ಯಾವತಾರೇಷು ಮಾನುಷತ್ವಮುಪಾಗತಃ |
ತ್ವಾಮೇವಾರಾಧಯಿಷ್ಯಾಮಿ ತ್ವಂ ಚ ಮೇ ವರದೋ ಭವ || ೪೫ ||

ಯತ್ತ್ವಯೋಕ್ತಂ ವಹಸ್ವೇತಿ ದೇವದೇವ ಉಮಾಪತೇ ।
ಸೋಽಹಂ ವಹಾಮಿ ದೇವ ತ್ವಾಂ ಮೇಘೋ ಭೂತ್ವಾ ಶತಂ ಸಮಾಃ || ೪೬ ||

ಏವಮುಕ್ತ್ವಾ ಹರಿರ್ಮೇಘಃ ಸ್ವಯಂ ಭೂತ್ವಾ ಮಹೇಶ್ವರಂ |
ಉಜ್ಜಹಾರ ಜಲಾತ್ತಸ್ಮಾತ್ ವಾಕ್ಯಂ ದೇವಮುವಾಚ ಹ || ೪೭ ||

ಯ ಏತೇ ದಶ ಚೈಕಶ್ಚ ಪುರುಷಾಃ ಪ್ರಾಕೃತಾಃ ಪ್ರಭೋ |
ತೇ ವೈರಾಜಾ ಮಹೀಂ ಯಾತಾ ಆದಿತ್ಯಾ ಇತಿ ಸಂಜ್ಞಿತಾಃ || ೪೮ ||

ಮದಂಶೋ ದ್ವಾದಶೋ ಯಸ್ತು ವಿಷ್ಣುನಾಮಾ ಮಹೀತಲೇ |
ಅವತೀರ್ಣೋ ಭವಂತಂ ತು ಆರಾಧಯತಿ ಶಂಕರ || ೪೯ ||

ಏವಮುಕ್ತ್ವಾ ಸ ಕಾದಂಶಾತ್ಸೃಷ್ಟ್ವಾ ದಿವ್ಯಂ ಘನಂ ತಥಾ |
ನಾರಾಯಣಃ ಶಬ್ದವಚ್ಚ ನ ವಿದ್ಮಃ ಕ್ವ ಲಯಂ ಗತಃ || ೫೦ ||

೪೫–೪೬. ವಿಷ್ಣು—ದೇವಕಾರ್ಯಗಳಿಗಾಗಿ ಮಾಡುವ ಅವತಾರಗಳಲ್ಲಿ ನಾನು ಮನುಷ್ಯನಾಗಿ ನಿನ್ನನ್ನೇ ಆರಾಧಿಸುವೆನು. ನೀನು ನನಗೆ ವರದನಾಗು. ದೇವದೇವ, ಉಮಾಪತೀ, ನೀನು ನನ್ನನ್ನು ವಹಿಸು ಎಂದು ಹೇಳಿದೆಯಷ್ಟೆ. ನಾನು ಮೇಘವಾಗಿ ನಿನ್ನನ್ನು ನೂರುವರ್ಷಕಾಲ ವಹಿಸುವೆನು.

೪೭. ಹರಿಯು ಹೀಗೆ ಹೇಳಿ, ತಾನೇ ಮೇಘವಾಗಿ ಮಹೇಶ್ವರನನ್ನು ಆ ನೀರಿನಿಂದ ಮೇಲಕ್ಕೆತ್ತಿದನು. ಅಲ್ಲದೆ ರುದ್ರನನ್ನು ಕುರಿತು ಹೀಗೆ ಹೇಳಿದನು.

೪೮–೪೯. ಪ್ರಭುವೇ, ಶಂಕರ, ಮೊದಲು ನೀರಿನಿಂದೆದ್ದುಬಂದ ಪ್ರಾಕೃತ ಪುರುಷರು ಆದಿತ್ಯರೆಂಬ ಹೆಸರಿನವರು. ತೇಜೋಲೋಕದಿಂದ ಭೂಮಿಗೆ ಬಂದವರು. ನನ್ನ ಅಂಶಭೂತನಾದ ವಿಷ್ಣುವೆಂಬ ಹೆಸರಿನ ಹನ್ನೆರಡನೆಯವನು ಭೂಮಿಯಲ್ಲಿ ಅವತರಿಸಿ, ನಿನ್ನನ್ನು ಆರಾಧಿಸುತ್ತಾನೆ.

೫೦. ಹೀಗೆ ಹೇಳಿ, ನಾರಾಯಣನು ತನ್ನ ಅಂಶದಿಂದ ಶಬ್ದಮಾಡುವ ದಿವ್ಯವಾದ ಮೇಘವನ್ನು ಸೃಷ್ಟಿಸಿ, ಶಬ್ದದಂತೆ ಎಲ್ಲಿ ಲೀನನಾದನೆಂಬುದನ್ನು ಅರಿಯೆವು.

॥ ರುದ್ರ ಉವಾಚ ॥

ಏವಮೇಷ ಹರಿರ್ದೇವಃ ಸರ್ವಗಃ ಸರ್ವಭಾವನಃ ।
ವರದೋಽಭೂತ್ಪುರಾ ಮಹ್ಯಂ ತೇನಾಹಂ ದೈವತೈರ್ವರಃ ॥ ೫೧ ॥

ನಾರಾಯಣಾತ್ಪರೋ ದೇವೋ ನ ಭೂತೋ ನ ಭವಿಷ್ಯತಿ ॥ ೫೨ ॥

ಏತದ್ರಹಸ್ಯಂ ವೇದಾನಾಂ ಪುರಾಣಾನಾಂ ಚ ಸತ್ತಮ ।
ಮಯಾ ವಃ ಕೀರ್ತಿತಂ ಸರ್ವಂ ಯಥಾವಿಷ್ಣುರಿಹೇಜ್ಯತೇ ॥ ೫೩ ॥

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ವೈರಾಜವೃತ್ತಂ ನಾಮ
ತ್ರಯಸ್ಸಪ್ತತಿತಮೋಽಧ್ಯಾಯಃ

೫೧–೫೩. ರುದ್ರ—ಸರ್ವಗನೂ ಸರ್ವಭಾವನನೂ ಆದ ಹರಿಯು ಹಿಂಗೆ ಹಿಂದೆನನಗೆ ವರವನ್ನು ಕೊಟ್ಟನು. ಆದುದರಿಂದ ನಾನು ದೇವತೆಗಳಲ್ಲಿ ಉತ್ತಮನಾದೆನು. ನಾರಾಯಣನಿಗಿಂತಲೂ ಬೇರೆಯಾದ ಅಥವಾ ಅಧಿಕನಾದ ದೇವರು ಹಿಂದಿರಲಿಲ್ಲ. ಮುಂದೂ ಇರುವುದಿಲ್ಲ. ಸಜ್ಜನೋತ್ತಮನೇ, ವೇದಪುರಾಣಗಳ ಈ ರಹಸ್ಯವನ್ನೂ, ವಿಷ್ಣುವನ್ನು ಹೇಗೆ ಪೂಜಿಸಬೇಕೆಂಬುದೆಲ್ಲವನ್ನೂ ನಾನು ನಿಮಗೆ ಹೇಳಿದ್ದೇನೆ.

ಅಧ್ಯಾಯದ ಸಾರಾಂಶ :—

ರುದ್ರನು ಅಗಸ್ತ್ಯಾದಿ ಋಷಿಗಳಿಗೆ ಪ್ರಜೆಗಳನ್ನು ಸೃಷ್ಟಿಸೆಂದು ಬ್ರಹ್ಮನು ಹೇಳಲು ತಾನು ತಪದಿಂದ ಆ ಸಾಮರ್ಥ್ಯವನ್ನು ಪಡೆಯಲು ನೀರಲ್ಲಿ ಮುಳುಗಿ ಅಂಗುಷ್ಠಮಾತ್ರ ಪುರುಷನಾದ ಪರಮಾತ್ಮನನ್ನು ಧ್ಯಾನಿಸುತ್ತಿರಲು, ನೀರಿನಿಂದ ದ್ವಾದಶಾದಿತ್ಯರೂ ಪರಮಾತ್ಮನೂ ಮೇಲೆದ್ದು ಬಂದುದನ್ನು ಕಂಡು, ಯಾರೆಂದು ಪ್ರಶ್ನಿಸಿದುದು, ಪರಮಾತ್ಮನು ತನಗೆ ದಿವ್ಯದೃಷ್ಟಿಯನ್ನಿತ್ತುದು, ಅದರಿಂದ ಅಂಗುಷ್ಠಮಾತ್ರನಾದ ಅಮಿತತೇಜನಾದ ಪುರುಷನನ್ನೂ ಅವನ ನಾಭಿಕಮಲದಲ್ಲಿ ಬ್ರಹ್ಮನನ್ನೂ, ಆ ಬ್ರಹ್ಮನ ಹತ್ತಿರ ತನ್ನನ್ನೂ ಕಂಡುದು, ಬಳಿಕ ತಾನು ಆ ಪುರುಷನನ್ನು ಕುರಿತು ಮಾಡಿದ ಸ್ತುತಿ, ದೇವದೇವನು "ನಾವಿಬ್ಬರೂ ಒಂದೇ" ಎಂದು ಹೇಳಿ ತನ್ನ ಪ್ರಾರ್ಥನೆಯಂತೆ ಮನುಷ್ಯನಾಗಿ ತನ್ನನ್ನು (ಶಿವನನ್ನು) ಪೂಜಿಸುವುದಾಗಿ ವರವನ್ನು ಕೊಟ್ಟುದು, ಇವೇ ಮೊದಲಾದ ವಿಚಾರಗಳನ್ನು ಹೇಳಿ 'ನಾರಾಯಣನಿಗಿಂತ ಪರದೇವನಿಲ್ಲ' ಎಂದು ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಎಪ್ಪತ್ತಮೂರನೆಯ ಅಧ್ಯಾಯ.

॥ ಶ್ರೀಃ ॥

-X-

ಚತುಸ್ಸಪ್ತತಿತಮೋಽಧ್ಯಾಯಃ

ಅಥ ಭುವನಕೋಶವರ್ಣನಂ

॥ ವರಾಹ ಉವಾಚ ॥

ಪುನಸ್ತೇ ಋಷಯಃಸರ್ವೇ ತಂ ಪಪ್ರಚ್ಛುಃ ಸನಾತನಂ ।
ರುದ್ರಂ ಪುರಾಣಪುರುಷಂ ಶಾಶ್ವತಂ ಕ್ರತುಮವ್ಯಯಂ ।
ವಿಶ್ವರೂಪಮಜಂ ಶಂಭುಂ ತ್ರಿಣೇತ್ರಂ ಶೂಲಪಾಣಿನಂ ॥ ೧ ॥

॥ ಋಷಯ ಊಚುಃ ॥

ತ್ವಂ ಪರಃ ಸರ್ವದೇವಾನಾಮಸ್ಮಾಕಂ ಚ ಸುರೇಶ್ವರ ।
ಪೃಚ್ಛಾಮಸ್ತೇನ ತ್ವಾಂ ಪ್ರಶ್ನಮೇಕಂ ತದ್ವಕ್ತುಮರ್ಹಸಿ ॥ ೨ ॥

ಭೂಮಿಪ್ರಮಾಣಂ ಸಂಸ್ಥಾನಂ ಪರ್ವತಾನಾಂ ಚ ವಿಸ್ತರಮ್ ।
ಅಸ್ಮಾಕಂ ಬ್ರೂಹಿ ಕೃಪಯಾ ದೇವದೇವ ಉಮಾಪತೇ ॥ ೩ ॥

ಎಪ್ಪತ್ತನಾಲ್ಕನೆಯ ಅಧ್ಯಾಯ

ಭುವನಕೋಶವರ್ಣನೆ

೧. ವರಾಹ—ಮತ್ತೆ ಆ ಋಷಿಗಳೆಲ್ಲರೂ ಸನಾತನನೂ, ರುದ್ರನೂ, ಪುರಾಣಪುರುಷನೂ, ಶಾಶ್ವತನೂ, ಯಜ್ಞಮೂರ್ತಿಯೂ, ನಾಶರಹಿತನೂ, ವಿಶ್ವರೂಪನೂ, ಅಜನೂ, ತ್ರಿಣೇತ್ರನೂ, ಶೂಲಪಾಣಿಯೂ ಆದ ಶಂಭುವನ್ನು ಕೇಳಿದರು.

೨-೩. ಋಷಿಗಳು— ಸುರೇಶ್ವರನೇ, ನೀನು ಸರ್ವದೇವತೆಗಳಿಗೂ ನಮಗೂ ಶ್ರೇಷ್ಠನೂ, ಜ್ಯೇಷ್ಠನೂ ಆಗಿದ್ದೀಯೆ. ಆದುದರಿಂದ ಪ್ರಶ್ನೆಯೊಂದನ್ನು ಕೇಳುತ್ತೇವೆ. ಅದನ್ನು ಹೇಳಿ ಅನುಗ್ರಹಿಸಬೇಕು. ದೇವದೇವ, ಉಮಾಪತೀ, ಭೂಮಿಯ ಮತ್ತು ಪರ್ವತಗಳ ಪ್ರಮಾಣವನ್ನೂ, ಸನ್ನಿವೇಶವನ್ನೂ (ಆಕಾರವನ್ನೂ), ವಿಸ್ತಾರವನ್ನೂ ನಮಗೆ ದಯೆಯಿಂದ ಹೇಳು.

॥ ರುದ್ರ ಉವಾಚ ॥

ಸರ್ವೇಷ್ವೇವ ಪುರಾಣೇಷು ಭೂರ್ಲೋಕಃ ಪರಿಕೀರ್ತ್ಯತೇ ।
ಇದಾನೀಂ ಚ ಪ್ರವಕ್ಷ್ಯಾಮಿ ಸಮಾಸಾದ್ವಃ ಕ್ಷಮಾತಲಂ ॥ ೪ ॥

ತನ್ನಿಬೋಧತ ಧರ್ಮಜ್ಞಾ ಗದತೋ ಮಮ ಸತ್ತಮಾಃ ॥ ೫ ॥

ಗದ್ಯಂ—ಯೋಽಸೌ ಸಕಲವಿದ್ಯಾವಬೋಧಿತಪರಮಾತ್ಮರೂಪೀ ವಿಗತಕಲ್ಮಷಃ ಪರಮಾಣುರಚಿಂತ್ಯಾತ್ಮಾ ನಾರಾಯಣಃ ಸಕಲಲೋಕ ವ್ಯಾಪೀ ಪೀತಾಂಬರೋರುವಕ್ಷಃ ಕ್ಷಿತಿಧರೋ ಗುಣತಃ ಸೂಚ್ಯತೇ ತಮಸ್ತ್ವಪ್ರಪಂಚಮದೀರ್ಘಮಹ್ರಸ್ವಮಕೃಶಮಲೋಹಿತಮಿತ್ಯೇವಮಾ ದ್ಯುಪಲಕ್ಷಿತವಿಜ್ಞಾನಮಾತ್ರರೂಪಃ ಸ ಭಗವಾಂಸ್ತ್ವಪ್ರಕಾರಃ ಸತ್ವರಜಸ್ತ ಮೋದ್ರಿಕ್ತಃ ಸಲಿಲಂ ಸಸರ್ಜ. ॥ ೬ ॥

೪-೫. ರುದ್ರ—ಎಲ್ಲಾ ಪುರಾಣಗಳಲ್ಲೂ ಭೂಲೋಕದ ವಿಚಾರವನ್ನು ಹೇಳಿದೆ. ಸಜ್ಜನೋತ್ತಮರೇ, ಧರ್ಮಜ್ಞರೇ, ಈಗ ಸಂಗ್ರಹವಾಗಿ ಭೂತಲದ ವಿಚಾರವನ್ನು ನಾನು ಹೇಳುತ್ತೇನೆ. ಕೇಳಿ.

೬. ಸಕಲವಿದ್ಯೆಗಳಿಂದ ಅರಿಯಲ್ಪಡುವ ಸರ್ವೋತ್ಕೃಷ್ಟವಾದ ತನ್ನ ಸ್ವರೂಪವುಳ್ಳವನೂ, ದೋಷರಹಿತನೂ, ಪರಮಾಣುರೂಪನೂ ಎಂದರೆ ಅತ್ಯಂತ ಸೂಕ್ಷ್ಮವಸ್ತುಗಳಲ್ಲೂ ತಡೆಯಿಲ್ಲದ ಗಮನವುಳ್ಳವನೂ, ಅಚಿಂತ್ಯರೂಪನೂ ಆದ ಯಾವ ನಾರಾಯಣನು ಸರ್ವಲೋಕವ್ಯಾಪಿ, ಪೀತಾಂಬರಧಾರಿ, ವಿಶಾಲ ಹೃದಯ, ಭೂಧರ ಎಂಬುದೇ ಮೊದಲಾದ ಕಲ್ಯಾಣಗುಣಗಳಿಂದ ಸೂಚಿಸಲ್ಪಡುತ್ತಿರುವನೋ ಮತ್ತು ಪ್ರಳಯಕಾಲದಲ್ಲಿ ಈ ಪ್ರಪಂಚರಹಿತವಾಗಿ ಹ್ರಸ್ವದೀರ್ಘ ಲೋಹಿತಾದಿ ಗುಣರಹಿತವಾದ (ಸುಬಾಲೋಪನಿಷತ್ತಿನಲ್ಲಿ ಹೇಳುವಂತೆ) ತಮಶ್ಶಬ್ದದಿಂದ ವ್ಯವಹರಿಸಲ್ಪಡುವ ಅಚೇತನದ್ರವ್ಯವನ್ನೂ, ವಿಜ್ಞಾನಶಬ್ದದಿಂದ ವ್ಯವಹರಿಸಲ್ಪಡುವ ಚೇತನದ್ರವ್ಯವನ್ನೂ ಶರೀರವನ್ನಾಗಿ ಉಳ್ಳವನೋ ಆ ನಾಮರೂಪ ವಿಭಾಗರಹಿತನಾದ ಭಗವಂತನು ಉದ್ರಿಕ್ತವಾದ ಸತ್ವರಜಸ್ತಮೋಗುಣಗಳುಳ್ಳ ಅಚೇತನದ್ರವ್ಯವನ್ನು ನೀರನ್ನಾಗಿ ಸೃಷ್ಟಿಸಿದನು.

ತತ್ಸೃಷ್ಟ್ವಾ ಆದಿಪುರುಷಃ ಪರಮೇಶ್ವರೋ ನಾರಾಯಣಃ ಸಕಲಜಗನ್ಮಯಃ ಸರ್ವಮಯೋ ದೇವಮಯೋ ಯಜ್ಞಮಯ ಆಪೋಮಯ ಆಪೋಮೂರ್ತಿಃ ಯೋಗನಿದ್ರಯಾ ಸುಪ್ತಃ. ತಸ್ಯ ನಾಭೌ ತದಬ್ಜಂ ನಿಸ್ಸಸಾರ. || ೭ ||

ತಸ್ಮಿನ್ ಸಕಲವೇದನಿಧಿರಚಿಂತ್ಯಾತ್ಮಾ ಪರಮೇಶ್ವರೋ ಬ್ರಹ್ಮಾ ಪ್ರಜಾಪತಿರಭವತ್. || ೮ ||

ಸ ಚ ಸನಕಸನಂದನಸನಾತನಸನತ್ಕುಮಾರಾದೀನ್ ಜ್ಞಾನಧರ್ಮಣಃ ಪೂರ್ವಮುತ್ಪಾದ್ಯ ಪಶ್ಚಾನ್ಮನುಂ ಸ್ವಾಯಂಭುವಂ ಮರೀಚ್ಯಾದೀನ್ದಕ್ಷಾಂತ್ಯಾನ್ಸಸರ್ಜ. || ೯ ||

ಯಃ ಸ್ವಾಯಂಭುವೋ ಮನುರ್ಭಗವತಾ ಸೃಷ್ಟಃ ತಸ್ಮಾದಾರಭ್ಯ ಭುವನಸ್ಯಾತಿವಿಸ್ತರೋ ವರ್ಣ್ಯತೇ. || ೧೦ ||

---

೭. ಅದನ್ನು ಸೃಷ್ಟಿಸಿ, ಆದಿಪುರುಷನೂ, ಪರಮೇಶ್ವರನೂ, ಸಕಲ ಜಗನ್ಮಯನೂ, ಸರ್ವಮಯನೂ, ಯಜ್ಞಮಯನೂ, ಆಪೋಮಯನೂ, ಆಪೋಮೂರ್ತಿಯೂ ಆದ ನಾರಾಯಣನು ಯೋಗನಿದ್ರೆಯಿಂದ ಮಲಗಿದನು. ಅವನ ಹೊಕ್ಕುಳಲ್ಲಿ ಆ ಪ್ರಸಿದ್ಧವಾದ ಕಮಲವು ಹೊರಗಾಣಿಸಿತು.

೮. ಆ ಕಮಲದಲ್ಲಿ ಸಕಲ ವೇದನಿಧಿಯೂ, ಅಚಿಂತ್ಯಾತ್ಮನೂ, ಪರಮೇಶ್ವರನೂ, ಪ್ರಜಾಸೃಷ್ಟಿಕರ್ತನೂ ಆದ ಬ್ರಹ್ಮನುದಿಸಿದನು.

೯. ಆ ಬ್ರಹ್ಮನು ಜ್ಞಾನಧರ್ಮರಾದ ಸನಕ ಸನಂದ ಸನಾತನ ಸನತ್ಕುಮಾರಾದಿಗಳನ್ನು ಮೊದಲು ಮನಸ್ಸಿನಿಂದ ಸೃಷ್ಟಿಸಿ, ಬಳಿಕ ಸ್ವಾಯಂಭುವ ಮನುವನ್ನೂ ಮರೀಚ್ಯಾದಿ ದಕ್ಷಾಂತ್ಯರಾದ ನವಪ್ರಜೇಶ್ವರರನ್ನೂ ಸೃಜಿಸಿದನು.

೧೦. ಭಗವಂತನಿಂದ ಸೃಷ್ಟನಾದ ಆ ಸ್ವಾಯಂಭುವಮನುವಿನಿಂದ ಆರಂಭಿಸಿ, ಪ್ರಪಂಚದ ಅತಿ ವಿಸ್ತಾರವನ್ನು ವರ್ಣಿಸುತ್ತೇನೆ.

ತಸ್ಯ ಚ ಮನೋರ್ದ್ವೌ ಪುತ್ರೌ ಬಭೂವತುಃ ಪ್ರಿಯವ್ರತೋ ತ್ತಾನಪಾದೌ. ಪ್ರಿಯವ್ರತಸ್ಯ ದಶ ಪುತ್ರಾ ಬಭೂವುಃ. ಅಗ್ನೀಧ್ರೋ ಽಗ್ನಿಬಾಹುರ್ಮೇಧೋಮೇಧಾತಿಥಿರ್ಧ್ರುವೋ ಜ್ಯೋತಿಷ್ಮಾನ್ ದ್ಯುತಿಮಾನ್ ಹವ್ಯೋ ವಪುಷ್ಮಾನ್ ಸವನಾಂತಾಃ. ॥ ೧೧ ॥

ದ್ವಿತೀಯಃ ಸ ಚ ಪ್ರಿಯವ್ರತಃ ಸಪ್ತದ್ವೀಪೇಷು ಸಪ್ತ ಪುತ್ರಾನ್ ಸ್ಥಾಪಯಾಮಾಸ. ತತ್ರ ಚಾಗ್ನೀಧ್ರಂ ಜಂಬೂ ದ್ವೀಪೇಶ್ವರಂಚಕ್ರೇ. ॥ ೧೨ ॥

ಶಾಕದ್ವೀಪೇಶ್ವರಂ ಮೇಧಾತಿಥಿಂ ಜ್ಯೋತಿಷ್ಮಂತಂ ಕ್ರೌಂಚೇ* ದ್ಯುತಿಮಂತಂ ಶಾಲ್ಮಲೌ+ ಗೋಮೇದಸ್ಯೇಶ್ವರಂ ಹವ್ಯಂ ವಪುಷ್ಮಂತಂ ಪ್ಲಕ್ಷದ್ವೀಪೇಶ್ವರಂ ಪುಷ್ಕರಾಧಿಪತಿಂ ಸವನಮಿತಿ. ॥ ೧೩ ॥

---

೧೧. ಆ ಮನುವಿಗೆ ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಪುತ್ರರಾದರು. ಪ್ರಿಯವ್ರತನಿಗೆ ಅಗ್ನೀಧ್ರ, ಅಗ್ನಿಬಾಹು, ಮೇಧ, ಮೇಧಾತಿಥಿ, ಧ್ರುವ, ಜ್ಯೋತಿಷ್ಮಂತ, ದ್ಯುತಿಮಂತ, ಹವ್ಯ, ವಪುಷ್ಮಂತ, ಸವನ ಎಂಬ ಹತ್ತುಜನ ಗಂಡುಮಕ್ಕಳಾದರು.

೧೨. ಎರಡನೆಯವನಾದ ಆ ಪ್ರಿಯವ್ರತನು ಸಪ್ತದ್ವೀಪಗಳಲ್ಲೂ ತನ್ನ ಏಳುಜನ ಮಕ್ಕಳನ್ನು ಇಟ್ಟನು. ಅವರಲ್ಲಿ ಅಗ್ನೀಧ್ರನನ್ನು ಜಂಬೂದ್ವೀಪದ ದೊರೆಯನ್ನಾಗಿ ಮಾಡಿದನು.

೧೩. ಮೇಧಾತಿಥಿಯನ್ನು ಶಾಕ ದ್ವೀಪಕ್ಕೂ, ಜ್ಯೋತಿಷ್ಮಂತನನ್ನು ಶಾಲ್ಮಲಿ ದ್ವೀಪಕ್ಕೂ, ದ್ಯುತಿಮಂತನನ್ನು ಕ್ರೌಂಚ ದ್ವೀಪಕ್ಕೂ, ಹವ್ಯವನ್ನು ಗೋಮೇದಕ್ಕೂ, ವಪುಷ್ಮಂತನನ್ನು ಪ್ಲಕ್ಷ ದ್ವೀಪಕ್ಕೂ, ಸವನನನ್ನು ಪುಷ್ಕರ ದ್ವೀಪಕ್ಕೂ ಒಡೆಯರನ್ನಾಗಿ ಮಾಡಿದನು.

---

* ಶಾಲ್ಮಲೌ ಎಂದೂ, + ಕ್ರೌಂಚೇ ಎಂದೂ ಇರಬೇಕಾಗಿದ್ದಿತೆಂದು ಮುಂದಿನ ವಿವರಣೆಯಿಂದ ತಿಳಿಯುತ್ತದೆ.

ಪುಷ್ಕರೇಶಸ್ಯಾಪಿ ಸವನಸ್ಯ ದ್ವೌ ಪುತ್ರೌ ಮಹಾವೀತಿಧಾತಕೌ ಭವೇತಾಂ. ತಯೋರ್ನಾಮ್ನಾ ತೌ ದೇಶೌ ವ್ಯವಸ್ಥಿತೌ. ಧಾತಕೇ ಧಾತಕೀಖಂಡಂ ಕುಮುದಸ್ಯ ಚ ಕೌಮುದಂ. ॥ ೧೪ ॥

ಶಾಲ್ಮಲಾಧಿಪತೇರಪಿ ಜ್ಯೋತಿಷ್ಮತಸ್ತ್ರಯಃ ಪುತ್ರಾಃ ಸ್ಯುಃ. ಕುಶ ವೈದ್ಯುತ ಜಿಮೂತವಾಹನಾಃ. ತೇಷಾಂ ನಾಮ್ನಾ ತೇ ದೇಶಾಃ ಜಾತಾಃ. ॥ ೧೫ ॥

ತಥಾ ಚ ದ್ಯುತಿಮತಃ ಸಪ್ತ ಪುತ್ರಾಃ ಕುಶಲೋ ಮನುಗವ್ಯಾಸ್ತಃ ಪೀವರೋಽಘ್ರಾಂಧಕಾರಕಮುನೀದುಂದುಭಿಶ್ಚೇತಿ. ತನ್ನಾಮ್ನಾ ಕ್ರೌಂಚೇ ಸಪ್ತ ಮಹಾದೇಶನಾಮಾನಿ. ॥ ೧೬ ॥

---

೧೪. ಪುಷ್ಕರಾಧಿಪತಿಯಾದ ಸವನನಿಗೆ ಮಹಾವೀತಿ, ಧಾತಕ ಎಂಬಿಬ್ಬರು ಗಂಡುಮಕ್ಕಳಾದರು. ಆವರಿಬ್ಬರ ಹೆಸರಿನಿಂದ ಆ ಎರಡು ದೇಶಗಳು ಹೆಸರುಗೊಂಡವು. ಧಾತಕನದು ಧಾತಕೀಖಂಡವೆಂದೂ, ಕುಮುದನದು ಕೌಮುದಖಂಡವೆಂದೂ ಹೆಸರನ್ನು ಪಡೆಯಿತು.

೧೫ ಶಾಲ್ಮಲಿದ್ವೀಪಾಧಿಪನಾದ ಜ್ಯೋತಿಷ್ಮಂತನಿಗೂ ಕುಶ, ವೈದ್ಯುತ, ಜೀಮೂತವಾಹನರೆಂಬ ಮೂವರು ಪುತ್ರರುದಿಸಿದರು. ಅವರು ಆಳುತ್ತಿದ್ದ ದೇಶಗಳು ಅವರ ಹೆಸರುಗಳುಳ್ಳವಾದುವು.

೧೬. ದ್ಯುತಿಮಂತನಿಗೆ ಕುಶಲ, ಮನು, ಗವ್ಯ, ಪೀವರ, ಅಘ್ರಾಂಧ, ಕಾರಕಮುನಿ, ದುಂದುಭಿಯೆಂಬ ಏಳು ಜನ ಗಂಡುಮಕ್ಕಳು. ಅವರ ಹೆಸರುಗಳಿಂದ ಕ್ರೌಂಚದ್ವೀಪದಲ್ಲಿ ಏಳು ಮಹಾದೇಶಗಳಾದುವು.

ಕುಶದ್ವೀಪೇಶ್ವರಸ್ಯಾಪಿ ಜ್ಯೋತಿಷ್ಮತಃ ಸಪ್ತ ಪುತ್ರಾಃ ಉದ್ಭಿದೋ ವೇಣುಮಾಂಶ್ಚೈವ ರಥಪಾಲೋ ಮನುರ್ಧೃತಿಃ ಪ್ರಭಾಕರಃ ಕಪಿಲ ಇತಿ. ತತ್ತನ್ನಾಮಾನಿ ವರ್ಷಾಣಿ ದ್ರಷ್ಟವ್ಯಾನಿ. ॥ ೧೭ ॥

ಶಾಕಾಧಿಪಸ್ಯಾಪಿ ಮೇಧಾತಿಥೇಃ ಸಪ್ತ ಪುತ್ರಾಃ ನಾಭಿಶಾಂತ ಭಯಶಿಶಿರಮುಖೋದಮನಂದ ಶಿವಕ್ಷೇಮಕಧ್ರುವಾ ಇತಿ. ॥ ೧೮ ॥

ತನ್ನಾಮಾನ್ಯೇವ ವರ್ಷಾಣಿ ನಾಭೇರ್ಹೇಮವಂತಂ ಹೇಮಕೂಟಂ ಕಿಂಪುರುಷಂ ನೈಷಧಂ ಹರಿವರ್ಷಂ ಮೇರುಮಧ್ಯಮಿಲಾವೃತಂ. ॥ ೧೯ ॥

ನೀಲಂ ರಮ್ಯಕಂ ಶ್ವೇತಂ ಹಿರಣ್ಮಯಂ ಉತ್ತರಂಚ ಶೃಂಗವತಃ ಕುರವೋ ಮಾಲ್ಯವಂತಂ ಭದ್ರಾಶ್ವಂ ಗಂಧಮಾದನಂ ಕೇತುಮಾಲಂ. ॥ ೨೦ ॥

---

೧೭. ಕುಶದ್ವೀಪಾಧಿಪತಿಯಾದ ಜ್ಯೋತಿಷ್ಮಂತನಿಗೆ ಉದ್ಭಿದ, ವೇಣುಮಂತ, ರಥಪಾಲ, ಮನು, ಧೃತಿ, ಪ್ರಭಾಕರ, ಕಪಿಲ ಎಂಬ ಏಳುಜನ ಗಂಡುಮಕ್ಕಳು. ಅವರವರ ದೇಶಗಳು ಆವರವರ ಹೆಸರುಗಳುಳ್ಳವು.

೧೮. ಶಾಕದ್ವೀಪಾಧಿಪತಿಯಾದ ಮೇಧಾತಿಥಿಗೆ ನಾಭಿ, ಶಾಂತ, ಭಯ ಶಿಶಿರ, ಮುಖೋದಮ, ನಂದ, ಶಿವಕ್ಷೇಮಕ, ಧ್ರುವರೆಂಬ ಏಳುಜನ ಗಂಡುಮಕ್ಕಳು.

೧೯. ವರ್ಷಗಳೂ ಅವರ ಹೆಸರಿನವೇ. ನಾಭಿರಾಜನದು ಹೈಮವತ (ಭಾರತ) ಎನಿಸುವುದು. ಹೇಮಕೂಟದವರೆಗೆ ಕಿಂಪುರುಷವರ್ಷ. ಅದರಿಂದ ನಿಷಧಪರ್ವತದವರೆಗಿನದು ಹರಿವರ್ಷ. ಮೇರುವನ್ನು ಮಧ್ಯದಲ್ಲಿ ಪಡೆದಿರುವುದು ಇಲಾವೃತವರ್ಷ.

೨೦. ಬಳಿಕ ಇಲಾವೃತದ ಉತ್ತರಕ್ಕೆ ನೀಲದಿಂದಾಚೆ (ನೀಲಶ್ವೇತಗಳ ಮಧ್ಯೆ) ರಮ್ಯಕವರ್ಷ. ಶ್ವೇತಪರ್ವತದಿಂದ ಉತ್ತರಕ್ಕೆ ಶೃಂಗವತ್ಪರ್ವತದವರೆಗೆ ಹಿರಣ್ಮಯ ವರ್ಷ. ಶೃಂಗವತ್ಪರ್ವತಕ್ಕೆ ಉತ್ತರದಲ್ಲಿ ಕುರುವರ್ಷ. ಇಲಾವೃತಕ್ಕೆ ಪೂರ್ವದಲ್ಲಿ ಮಾಲ್ಯವತ್ಪರ್ವತವಿರುವುದು ಭದ್ರಾಶ್ವವರ್ಷ. ಇಲಾವೃತಕ್ಕೆ ಪಶ್ಚಿಮದಲ್ಲಿ ಗಂಧಮಾದನಪರ್ವತವಿರುವುದು ಕೇತುಮಾಲವರ್ಷ.

ಏವಂ ಸ್ವಾಯಂಭುವೇಂತರೇ ಭುವನಪ್ರತಿಷ್ಠಾ ಕಲ್ಪೇ ಕಲ್ಪೇ ಚೈವಮೇವ ಸಪ್ತಸಪ್ತಪಾರ್ಥಿವೈಃ ಕ್ರಿಯತೇ ಭೂಮೇಃ ಪಾಲನ ವ್ಯವಸ್ಥಾ ಚ. ಏಷ ಸ್ವಭಾವಃ ಕಲ್ಪಸ್ಯ ಸದಾ ಭವತೀತಿ. || ೨೦ ||

ಅತ್ರ ನಾಭೇಃ ಸರ್ಗಂ ಕಥಯಾಮಿ. ನಾಭಿರ್ಮೇರುದೇವ್ಯಾಂ ಪುತ್ರಮಜನಯದೃಷಭನಾಮಾನಂ. || ೨೧ ||

ತಸ್ಯ ಭರತೋ ಜಜ್ಞೇ ಪುತ್ರಶ್ಚ ತಾವದಗ್ರಜಃ. ತಸ್ಯ ಭರತಸ್ಯ ಪಿತಾ ಋಷಭಃ ಹೇಮಾದ್ರೇಃ ದಕ್ಷಿಣಂ ವರ್ಷಂ ಮಹದ್ಭಾರತಂ ನಾಮ ಶಶಾಸ. || ೨೩ ||

ಭರತಸ್ಯ ಪುತ್ರಃ ಸುಮತಿಸ್ತಸ್ಯ ರಾಜ್ಯಂ ದತ್ವಾ ಸೋಽಪಿ ವನಂ ಯಯೌ. || ೨೪ ||

---

೨೦. ಸ್ವಾಯಂಭುವಮನ್ವಂತರದಲ್ಲಿ ಲೋಕದ ಸ್ಥಿತಿಯು ಹೀಗೆ. ಪ್ರತಿಕಲ್ಪದಲ್ಲಿಯೂ ಹೀಗೆ ಏಳೇಳುಜನ ರಾಜರಿಂದ ಭೂಮಿಯ ರಕ್ಷಣೆಯ ವ್ಯವಸ್ಥೆಯು ಮಾಡುತ್ತದೆ. ಕಲ್ಪದ ಈ ಸ್ವಭಾವವು (ಸ್ಥಿತಿಯು) ಯಾವಾಗಲೂ ಇರುತ್ತದೆ.

೨೨. ಇನ್ನು ನಾಭಿಯ ಸೃಷ್ಟಿಯನ್ನು ಹೇಳುತ್ತೇನೆ. ಅಗ್ನೀಧ್ರ ಪುತ್ರನಾದ ನಾಭಿರಾಜನು ಮೇರುದೇವಿಯಲ್ಲಿ ಋಷಭನೆಂಬ ಹೆಸರಿನ ಮಗನನ್ನು ಪಡೆದನು.

೨೩. ಋಷಭನಿಗೆ ಭರತನು ಹಿರಿಯ ಮಗನಾಗಿ ಉದಿಸಿದನು. ಆ ಭರತನ ತಂದೆಯಾದ ಋಷಭನು ಮೇರುಗಿರಿಯ ದಕ್ಷಿಣದ ದೊಡ್ಡದಾದ ಭರತಖಂಡ ವೆಂಬುದನ್ನು ಆಳಿದನು.

೨೪. ಭರತನ ಮಗನು ಸುಮತಿಯೆಂಬುವನು. ಅವನಿಗೆ ರಾಜ್ಯವನ್ನು ಕೊಟ್ಟು ಭರತನೂ ವನಕ್ಕೆ ಹೋದನು.

ಸುಮತೇಸ್ತೇಜಸ್ತತ್ಪುತ್ರಃ ಸತ್ಸ್ನತಸ್ತಸ್ಯಾsಪೀಂದ್ರದ್ಯುಮ್ನಃ ತಸ್ಮಾಪಿ ಪರಮೇಷ್ಠೀ ತಸ್ಯ ಪ್ರತಿಹರ್ತಾ ತಸ್ಯ ನಿಖಾತಃ ನಿಖಾತಸ್ಯ ಉನ್ನೇತಾ ಉನ್ನೇತುರಪ್ಯಭಾವಸ್ತಸ್ಯೋದ್ಗಾತಾ ತಸ್ಯ ಪ್ರಸ್ತೋತಾ ಪ್ರಸ್ತೋತುರ್ವಿಭುರ್ವಿಭೋಃ ಪೃಥುಃ ಪೃಥೋರನಂತಃ. ॥ ೨೫ ॥

ಅನಂತಸ್ಯ ಗಯಃ ಗಯಸ್ಯ ನಯಸ್ತಸ್ಯ ವಿರಾಟಃ ತಸ್ಯ ಮಹಾವೀರ್ಯಸ್ಯ ಸುಧೀಮಾನ್ ॥ ೨೬ ॥

ತಸ್ಯ ಪುತ್ರಶತಂ ಜಜ್ಞೇ ತೇನೇಮಾ ವರ್ಧಿತಾಃ ಪ್ರಜಾಃ ॥ ೨೭ ॥

ತೈರಿಂದ ಭಾರತಂ ವರ್ಷಂ ಸಪ್ತದ್ವೀಪಂ ಸಮಾಂಕಿತಮ್ |
ತೇಷಾಂ ವಂಶಪ್ರಸೂತ್ಯಾತು ಭುಕ್ತೇಯಂ ಭೂಮಿರುತ್ತಮಾ ॥ ೨೮ ॥

---

೨೫. ಸುಮತಿಯ ಮಗನು ತೇಜನೆಂಬುವನು. ತೇಜನಿಗೆ ಸತ್ಸ್ನತನೂ, ಸತ್ಸ್ನತನಿಗೆ ಇಂದ್ರದ್ಯುಮ್ನನೂ, ಇಂದ್ರದ್ಯುಮ್ನನಿಗೆ ಪರಮೇಷ್ಠಿಯೆಂಬುವನೂ, ಪರಮೇಷ್ಠಿಗೆ ಪ್ರತಿಹರ್ತೃವೂ, ಪ್ರತಿಹರ್ತೃವಿಗೆ ನಿಖಾತನೂ, ನಿಖಾತನಿಗೆ ಉನ್ನೇತೃವೂ, ಉನ್ನೇತೃವಿಗೆ ಅಭಾವನೂ, ಅಭಾವನಿಗೆ ಉದ್ಗಾತೃವೂ, ಉದ್ಗಾತೃವಿಗೆ ಪ್ರಸ್ತೋತೃವೂ, ಪ್ರಸ್ತೋತೃವಿಗೆ ವಿಭುವೂ, ವಿಭುವಿಗೆ ಪೃಥುವೂ, ಪೃಥುವಿಗೆ ಅನಂತನೂ ಉದಿಸಿದರು.

೨೬. ಅನಂತನಿಗೆ ಗಯನೂ, ಗಯನಿಗೆ ನಯನೆಂಬುವನೂ, ನಯನಿಗೆ ವಿರಾಟನೂ ಪುತ್ರರಾದರು. ಮಹಾವೀರನಾದ ವಿರಾಟನಿಗೆ ಸುಧೀಮಂತನೆಂಬ ಪುತ್ರನುದಿಸಿದನು.

೨೭. ಆತನಿಗೆ ನೂರುಜನ ಗಂಡುಮಕ್ಕಳುದಿಸಿದರು. ಅವರಿಂದ ಈ ಪ್ರಜೆಗಳು ವೃದ್ಧಿಯನ್ನೈದಿದರು.

೨೮. ಅವರಿಂದ ಈ ಭಾರತವರ್ಷವೂ, ಸಪ್ತದ್ವೀಪವೂ ತುಂಬಿತು. ಅವರ ಸಂತತಿಯವರು ಈ ಉತ್ತಮಭೂಮಿಯನ್ನನುಭವಿಸಿದರು.

ಕೃತತ್ರೇತಾದಿಯುಕ್ತ್ಯಾ ತು ಯುಗಾಖ್ಯಾ ಹ್ಯೇಕಸಪ್ತತಿಃ
ಭುವನಸ್ಯ ಪ್ರಸಂಗೇನ ಮನ್ವಂತರಮಿದಂ ಶುಭಂ
ಸ್ವಾಯಂಭುವಂಚಕಥಿತಮುಪರಂ ಯನ್ನಿಬೋಧತ || ೨೯ ||

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ಭುವನಕೋಶ ವರ್ಣನಂ
ನಾಮ ಚತುಃ ಸಪ್ತತಿತಮೋಽಧ್ಯಾಯಃ

---

೨೯. ಕೃತ ತ್ರೇತಾದಿ ಚತುರ್ಯುಗಗಳು ಎಪ್ಪತ್ತೊಂದು ಆದರೆ ಒಂದು ಮನ್ವಂತರವಾಗುವುದು. ಭೂಮಿಯ ವಿಚಾರವನ್ನು ಹೇಳುತ್ತ, ಶುಭವಾದ ಈ ಸ್ವಾಯಂಭುವ ಮನ್ವಂತರವನ್ನೂ ಹೇಳಿದೆನು. ತಿಳಿಯಿರಿ.

ಅಧ್ಯಾಯದ ಸಾರಾಂಶ—ಭೂಮಿಯ ಪ್ರಮಾಣ ಸನ್ನಿವೇಶಾದಿಗಳನ್ನು ಕೇಳಿದ ಅಗಸ್ತ್ಯಾದಿಮುನಿಗಳಿಗೆ ರುದ್ರದೇವನು ಸ್ವಾಯಂಭುವಮನುವಿನ ಸಂತತಿಯನ್ನೂ, ಆ ಸಂತತಿಯವರು ಆಳಿದ ಸಪ್ತದ್ವೀಪಗಳ ಮತ್ತು ಅವುಗಳಲ್ಲಿರುವ ದೇಶಗಳ ವಿಚಾರವನ್ನೂ, ನಾಭಿರಾಜನ ಸಂತಾನವನ್ನೂ, ಅವರು ಆಳಿದ ಭರತ ವರ್ಷದ ವಿಚಾರವನ್ನೂ ಹೇಳಿರುವನು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಪ್ಪತ್ತನಾಲ್ಕನೆಯ ಅಧ್ಯಾಯ.

|| ಶ್ರೀಃ ||

-x-

ಪಂಚಸಪ್ತತಿತಮೋಽಧ್ಯಾಯಃ

ಅಥ ಜಂಬೂದ್ವೀಪ ಮೇರು ನಿರೂಪಣಂ

|| ರುದ್ರ ಉವಾಚ ||

ಅಥ ಊರ್ಧ್ವಂ ಪ್ರವಕ್ಷ್ಯಾಮಿ ಜಂಬೂದ್ವೀಪಂ ಯಥಾತಥಂ ।
ಸಂಖ್ಯಾಂಚಾಪಿ ಸಮುದ್ರಾಣಾಂ ದ್ವೀಪಾನಾಂ ಚೈವ ವಿಸ್ತರಂ || ೧ ||

ಯಾವಂತಿ ಚೈವ ವರ್ಷಾಣಿ ತೇಷು ನದ್ಯಶ್ಚಯಾಃ ಸ್ಮೃತಾಃ ।
ಮಹಾಭೂತಪ್ರಮಾಣಂ ಚ ಗತಿಂ ಚಂದ್ರಾರ್ಕಯೋಃ ಪೃಥಕ್ || ೨ ||

ದ್ವೀಪಭೇದಸಹಸ್ರಾಣಿ ಸಪ್ತಸ್ವಂತರ್ಗತಾನಿ ಚ ।
ನ ಶಕ್ಯಂತೇ ಕ್ರಮೇಣೇಹ ವಕ್ತುಂ ಯೈರ್ವಿತತಂ ಜಗತ್ || ೩ ||

ಎಪ್ಪತ್ತೈದನೆಯ ಅಧ್ಯಾಯ

ಜಂಬೂದ್ವೀಪಮೇರುಗಳ ವಿಚಾರ

೧-೩. ರುದ್ರ—ಇನ್ನು ಮುಂದೆ ನಿಜವಾಗಿ ಜಂಬೂದ್ವೀಪವಿಚಾರವನ್ನು ಹೇಳುತ್ತೇನೆ. ಸಮುದ್ರಗಳ ಸಂಖ್ಯೆಯನ್ನೂ ದ್ವೀಪಗಳ ವಿಸ್ತಾರವನ್ನೂ ವರ್ಷ (ಭೂಭಾಗ)ಗಳೆಷ್ಟು, ಅವುಗಳಲ್ಲಿರುವ ನದಿಗಳಾವುವು ಎಂಬುದನ್ನೂ ಹೇಳುತ್ತೇನೆ. ಮಹಾಭೂತಗಳ ಪ್ರಮಾಣವನ್ನೂ ಬೇರೆ ಬೇರೆಯಾಗಿ ಚಂದ್ರಸೂರ್ಯರ ಗತಿಯನ್ನೂ, ಸಪ್ತದ್ವೀಪಗಳಲ್ಲಿ ಅಂತರ್ಗತವಾಗಿರುವ ಸಾವಿರಾರು ದ್ವೀಪಗಳ ವ್ಯತ್ಯಾಸವನ್ನೂ ಇಲ್ಲಿ ಕ್ರಮವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಸಪ್ತ ದ್ವೀಪಾನ್‌ಪ್ರವಕ್ಷ್ಯಾಮಿ ಚಂದ್ರಾದಿತ್ಯಗ್ರಹೈಃ ಸಹ ।
ಯೇಷಾಂ ಮನುಷ್ಯಾಸ್ತರ್ಕೇಣ ಪ್ರಮಾಣಾನಿ ಪ್ರಚಕ್ಷತೇ ॥ ೪ ॥

ಅಚಿಂತ್ಯಾಃ ಖಲು ಯೇ ಭಾವಾ ನ ತಾಂಸ್ತರ್ಕೇಣ ಸಾಧಯೇತ್ ।
ಪ್ರಕೃತೇಶ್ಚ ಪರಂ ಯತ್ತು ತದಚಿಂತ್ಯಂ ವಿಭಾವ್ಯತೇ ॥ ೫ ॥

ನವವರ್ಷಂ ಪ್ರವಕ್ಷ್ಯಾಮಿ ಜಂಬೂದ್ವೀಪಂ ಯಥಾತಥಂ ।
ವಿಸ್ತಾರಂ ಮಂಡಲಂ ಚೈವ ಯೋಜನೈಸ್ತನ್ನಿಬೋಧತ ॥ ೬ ॥

ಶತಮೇಕಂ ಸಹಸ್ರಾಣಾಂ ಯೋಜನಾನಾಂ ಸಮಂತತಃ ।
ನಾನಾಜನಪದಾಕೀರ್ಣಂ ಯೋಜನೈರ್ವಿವಿಧೈಃ ಶುಭೈಃ ॥ ೭ ॥

ಸಿದ್ಧಚಾರಣಸಂಕೀರ್ಣಂ ಪರ್ವತೈರುಪಶೋಭಿತಂ ।
ಸರ್ವಧಾತುವಿವೃದ್ಧೈಶ್ಚ ಶಿಲಾಜಾಲಸಮುದ್ಭವೈಃ ॥ ೮ ॥

---

೪. ಜಗತ್ತು ಯಾವುದರಿಂದ ವಿಸ್ತಾರವಾಗಿದೆಯೋ ಅಥವಾ ವ್ಯಾಪ್ತವಾಗಿದೆಯೋ, ಮತ್ತು ಮನುಷ್ಯರು ಯಾವುದರ ಪ್ರಮಾಣಗಳನ್ನೂ ಊಹೆಯಿಂದ(ತರ್ಕದಿಂದ)ಹೇಳುವರೋ, ಆ ಸಪ್ತದ್ವೀಪಗಳನ್ನೂ ಚಂದ್ರಸೂರ್ಯ ಗ್ರಹಗಳೊಡನೆ ಹೇಳುವೆನು.

೫. ಯಾವ ಭಾವಗಳು ಅಚಿಂತ್ಯಗಳೋ ಅವುಗಳನ್ನು ತರ್ಕದಿಂದ ಸಾಧಿಸಬಾರದು. ಪ್ರಕೃತಿಗಿಂತ ಪರವಾದುದು ಅಚಿಂತ್ಯವೆನಿಸುವುದು.

೬. ನವ(ಒಂಬತ್ತು)ವರ್ಷಗಳುಳ್ಳ ಜಂಬೂದ್ವೀಪದ ವಿಸ್ತಾರವನ್ನೂ, ಮಂಡಲವನ್ನೂ ದಿಟವಾಗಿ ಯೋಜನಗಳಿಂದ ಹೇಳುತ್ತೇನೆ. ತಿಳಿಯಿರಿ.

೭-೯. ಜಂಬೂದ್ವೀಪವು, ಒಂದು ಲಕ್ಷಯೋಜನ ವಿಸ್ತಾರವುಳ್ಳುದಾಗಿ, ಸುತ್ತಲೂ ಹಲವು ದೇಶಗಳಿಂದ ಕೂಡಿ, ಬಗೆ ಬಗೆಯಾದ ಶುಭಗಳುಳ್ಳುದಾಗಿ ಸಿದ್ಧಚಾರಣರಿಂದ ನಿಬಿಡವಾದುದೂ, ಎಲ್ಲೆಡೆಯಲ್ಲಿಯೂ ಸರ್ವಧಾತುಗಳನ್ನೂ

ಪರ್ವತಪ್ರಭವಾಭಿಶ್ಚ ನದೀಭಿಃ ಸರ್ವತಶ್ಚಿತಂ ।
ಜಂಬೂದ್ವೀಪಂ ಪೃಥು ಶ್ರೀಮತ್ಸರ್ವತಃ ಪರಿಮಂಡಲಂ ॥
ನವಭಿಶ್ಚಾವೃತಂ ಶ್ರೀಮಾನ್ಯತ್ರಾಸ್ತೇ ಭೂತಭಾವನಃ ॥ ೯ ॥

ಲವಣೇನ ಸಮುದ್ರೇಣ ಸರ್ವತಃ ಪರಿವಾರಿತಃ ।
ಜಂಬೂದ್ವೀಪಸ್ಯ ವಿಸ್ತಾರಾತ್ಸಮೇನ ತು ಸಮಂತತಃ ॥ ೧೦ ॥

ತಸ್ಯ ಪ್ರಾಗಾಯತಾ ದೀರ್ಘಾ ಷಡೇತೇ ವರ್ಷಪರ್ವತಾಃ ।
ಉಭಯತ್ರಾವಗಾಹಾಶ್ಚ ಸಮುದ್ರೌ ಪೂರ್ವಪಶ್ಚಿಮೌ ॥ ೧೧ ॥

ಹಿಮಪ್ರಾಯಶ್ಚ ಹಿಮವಾನ್ ಹೇಮಕೂಟಶ್ಚ ಹೇಮವಾನ್ ॥ ೧೨ ॥

ಸರ್ವತ್ರ ಸುಸುಖಶ್ಚಾಪಿ ನಿಷಧಃ ಪರ್ವತೋ ಮಹಾನ್ ।
ಚತುರ್ವರ್ಣಃ ಸಸೌವರ್ಣೋ ಮೇರುಶ್ಚೋಕ್ತೋ ಮಯಾ ಗಿರಿಃ ॥ ೧೩ ॥

ಹೆಚ್ಚಾಗಿ ಪಡೆದಿರುವ ಬಂಡೆಗಳಿಂದ ಕೂಡಿದ ಪರ್ವತಗಳ ಸೊಗಸುಳ್ಳದ್ದೂ, ಪರ್ವತಗಳಿಂದ ಹುಟ್ಟುವ ನದಿಗಳಿಂದ ಕೂಡಿದುದೂ, ಐಶ್ವರ್ಯ ಕಾಂತಿಯುಳ್ಳದ್ದೂ, ದೊಡ್ಡದೂ, ಎಲ್ಲಾ ಕಡೆಯಲ್ಲೂ ಮಂಡಲಾಕಾರವಾದುದೂ, ನವ(ಒಂಭತ್ತು)ವರ್ಷ(ಭೂಭಾಗ)ಗಳಿಂದ ಕೂಡಿದುದೂ, ಶ್ರೀಯುತನಾದ ನಾರಾಯಣನು ನೆಲಸಿರುವುದೂ ಆಗಿದೆ.

೧೦. ಜಂಬೂದ್ವೀಪದ ವಿಸ್ತಾರಕ್ಕೆ ಸರಿಯಾದ ಉಪ್ಪುನೀರಿನ ಸಮುದ್ರವು ಅದನ್ನು ಎಲ್ಲಾ ಕಡೆಯಲ್ಲಿಯೂ ಸುತ್ತಿಕೊಂಡಿದೆ.

೧೧. ಅದರಲ್ಲಿ ಪೂರ್ವಕ್ಕೆ ಹಬ್ಬಿ, ಅತಿ ದೀರ್ಘವಾದ ಮುಂದೆ ಹೇಳುವ ಆರು ವರ್ಷಪರ್ವತಗಳು ಎರಡು ಕಡೆಗಳಲ್ಲಿಯೂ ಪೂರ್ವಪಶ್ಚಿಮ ಸಮುದ್ರಗಳನ್ನು ಪ್ರವೇಶಿಸಿರುವುವು.

೧೨. ಅವುಗಳಲ್ಲಿ ಹಿಮವತ್ಪರ್ವತವು ಹಿಮಮಯವಾದುದು. ಹೇಮಕೂಟವೆಂಬುದು ಸುವರ್ಣಮಯವಾದುದು.

೧೩. ದೊಡ್ಡದಾದ ನಿಷಧವು ಎಲ್ಲೆಡೆಯಲ್ಲೂ ಅತಿಸುಖಕರವಾದುದು. ಈ ವರ್ಷಪರ್ವತಗಳು ಮೂರರ ಉತ್ತರದಲ್ಲಿ ಸುವರ್ಣಾದ್ರಿಯೆನಿಸಿಕೊಂಡಿರುವ ನಾನು ಹೇಳಿದ ಮೇರುಪರ್ವತವು ನಾಲ್ಕು ಬಣ್ಣಗಳುಳ್ಳದಾಗಿರುವುದು.

ವೃತ್ತಾಕೃತಿಪ್ರಮಾಣಶ್ಚ ಚತುರಸ್ರಃ ಸಮುತ್ಥಿತಃ ।
ನಾನಾವರ್ಣಃ ಸುಪಾರ್ಶ್ವೇಷು ಪ್ರಜಾಪತಿಗಣಾನ್ವಿತಃ ॥ ೧೪ ॥

ನಾಭಿಮಂಡಲಸಂಭೂತೋ ಬ್ರಹ್ಮಣಃ ಪರಮೇಷ್ಠಿನಃ ।
ಪೂರ್ವತಃ ಶ್ವೇತವರ್ಣಸ್ತು ಬ್ರಾಹ್ಮಣ್ಯಂ ತೇನ ತಸ್ಯ ತತ್ ॥ ೧೫ ॥

ಪೀತಶ್ಚ ದಕ್ಷಿಣೇನಾಸೌ ತೇನ ವೈಶ್ಯತ್ವಮಿಷ್ಯತೇ ।
ಭೃಂಗಪತ್ರನಿಭಶ್ಚಾಸೌ ಪಶ್ಚಿಮೇನ ಯುತೋಽಥ ಸಃ ॥
ತೇನಾಸ್ಯ ಶೂದ್ರತಾ ಪ್ರೋಕ್ತಾ ಮೇರೋರ್ಗ್ರಾಮಾರ್ಥಕರ್ಮಣಃ॥ ೧೬ ॥

ಪಾರ್ಶ್ವಮುತ್ತರತಸ್ತಸ್ಯ ರಕ್ತವರ್ಣಂ ವಿಭಾವ್ಯತೇ ।
ತೇನಾಸ್ಯ ಕ್ಷತ್ರಭಾವಃ ಸ್ಯಾದಿತಿ ವರ್ಣಾಃ ಪ್ರಕೀರ್ತಿತಾಃ ॥ ೧೭ ॥

ವೃತ್ತಃ ಸ್ವಭಾವತಃ ಪ್ರೋಕ್ತೋ ವರ್ಣತಃ ಪರಿಮಾಣತಃ ॥ ೧೮ ॥

---

೧೪. ಮೇರುವು ವೃತ್ತಾಕೃತಿಯುಳ್ಳುದಾಗಿ ನಿಂತಿದೆ. ಸುಂದರವಾದ ಪಕ್ಕಗಳಲ್ಲಿ ಅದು ಹಲವು ಬಣ್ಣಗಳುಳ್ಳುದಾಗಿ ಬ್ರಹ್ಮಗಣದಿಂದ ಕೂಡಿದುದಾಗಿದೆ.

೧೫. ಅದು ಪರಮೇಷ್ಠಿಯಾದ ಬ್ರಹ್ಮನ ನಾಭಿಪದ್ಮದಿಂದುದಿಸಿದುದು. ಪೂರ್ವಭಾಗದಲ್ಲಿ ಅದು ಬೆಳ್ಳಗಿರುವುದರಿಂದ ಅದಕ್ಕೆ ಬ್ರಾಹ್ಮಣ್ಯವು ಇದ್ದಂತಾಗಿದೆ.

೧೬. ಅದು ದಕ್ಷಿಣದಕಡೆ ಹಳದಿಯ ಬಣ್ಣವುಳ್ಳುದಾಗಿರುವುದರಿಂದ ಅದಕ್ಕೆ ವೈಶ್ಯತೆಯಿದ್ದಂತಾಗಿದೆ. ಪಶ್ಚಿಮದಕಡೆ ದುಂಬಿಯ ರೆಕ್ಕೆಯ ಬಣ್ಣವುಳ್ಳುದಾಗಿರುವುದರಿಂದ ಗ್ರಾಮಾರ್ಥಕರ್ಮವುಳ್ಳ ಅದಕ್ಕೆ ಶೂದ್ರತ್ವವೂ ಇದೆಯೆನ್ನುವರು.

೧೭. ಆ ಮೇರುವಿನ ಉತ್ತರಭಾಗದಲ್ಲಿ ಕೆಂಪುಬಣ್ಣವು ಕಾಣುತ್ತದೆ. ಆದರಿಂದ ಅದಕ್ಕೆ ಕ್ಷತ್ರಿಯತ್ವವು ಇದೆ. ಹೀಗೆ ವರ್ಣಗಳ ವಿಚಾರವನ್ನು ಹೇಳಿದುದಾಯಿತು.

೧೮. ವರ್ಣದಲ್ಲಿಯೂ, ಪರಿಮಾಣದಲ್ಲಿಯೂ ಅದರ ಚರಿತ್ರೆ ಅಥವಾ ಸ್ಥಿತಿಯನ್ನು ಹೇಳಿದುದಾಯಿತು.

ನೀಲಶ್ಚ ವೈಡೂರ್ಯಮಯಃ ಶ್ವೇತಶುಕ್ಲೋ ಹಿರಣ್ಮಯಃ ।
ಮಯೂರಬರ್ಹಿವರ್ಣಸ್ತು ಶಾತಕೌಂಭಸ್ಯ ಶೃಂಗವಾನ್ ॥ ೧೯ ॥

ಏತೇ ಪರ್ವತರಾಜಾ ವೈ ಸಿದ್ಧಚಾರಣಸೇವಿತಾಃ ।
ತೇಷಾಮಂತರವಿಷ್ಕಂಭೋ ನವಸಾಹಸ್ರ ಉಚ್ಯತೇ ॥ ೨೦ ॥

ಮಧ್ಯೇ ತ್ವಿಲಾವೃತಂ ನಾಮ ಮಹಾಮೇರೋಸ್ತು ಸಂಭವಃ ।
ತೇನೈವ ತು ಸಹಸ್ರಾಣಿ ವಿಸ್ತೀರ್ಣಃ ಸರ್ವತಶ್ಚ ಸಃ ॥ ೨೧ ॥

ಮಧ್ಯಂ ತಸ್ಯ ಮಹಾಮೇರುಃ ವಿಧೂಮ ಇವ ಪಾವಕಃ ।
ವೇದ್ಯರ್ಧಂದಕ್ಷಿಣಂ ಮೇರೋರುತ್ತರಾರ್ಧಂ ತಥೋತ್ತರಂ ॥ ೨೨ ॥

ಷಡತ್ರ ಯಾನಿ ವರ್ಷಾಣಿ ತೇಷಾಂ ತೇ ವರ್ಷಪರ್ವತಾಃ ॥ ೨೩ ॥

---

೧೯. ಮೇರುವಿಗೆ ಉತ್ತರದಲ್ಲಿ ವೈಡೂರ್ಯಮಯವಾದ ನೀಲಪರ್ವತವೂ, ಹಿರಣ್ಮಯವಾಗಿ ಬೆಳ್ಳಗಿರುವ ಶ್ವೇತಪರ್ವತವೂ, ಸುವರ್ಣಮಯವಾಗಿ ನವಿಲ ಗರಿಯ ಬಣ್ಣದಿಂದಿರುವ ಶೃಂಗವತ್‌ಪರ್ವತವೂ ಇವೆ.

೨೦. ಶ್ರೇಷ್ಠವಾದ ಈ ಮೂರುವರ್ಷ ಪರ್ವತಗಳೂ ಸಿದ್ಧಚಾರಣರು ವಿಹರಿಸುವುವುಗಳಾಗಿವೆ. ಅವುಗಳ ನಡುವೆ ಇರುವ ವಿಸ್ತಾರವು ಒಂಬತ್ತುಸಾವಿರ ಯೋಜನವೆನ್ನುವರು.

೨೧. ಜಂಬೂದ್ವೀಪದ ನಡುವೆ ಮೇರುವಿನಿಂದುದಿಸಿದ ಇಲಾವೃತವೆಂಬ ವರ್ಷವಿದೆ. ಅದು ಮೇರುವಿನ ಸುತ್ತಲೂ ಒಂಬತ್ತುಸಾವಿರಯೋಜನ ವಿಸ್ತಾರವುಳ್ಳುದಾಗಿದೆ.

೨೨–೨೩. ಇಲಾವೃತದ ಮಧ್ಯದಲ್ಲಿ ಮಹಾಮೇರುವು ಹೊಗೆಯಿಲ್ಲದ ಅಗ್ನಿಯಂತಿದೆ. ಮೇರುಪರ್ವತದ ಆಧಾರಕ್ಕಾಗಿ ಅದರ ದಕ್ಷಿಣೋತ್ತರ ಭಾಗಗಳಲ್ಲಿ ಆರುವರ್ಷಗಳಲ್ಲೂ ವರ್ಷಪರ್ವತಗಳಿವೆ.

ಯೋಜನಾಗ್ರಂ ತು ವರ್ಷಾಣಾಂ ಸರ್ವೇಷಾಂ ತದ್ವಿಧೀಯತೇ ।
ದ್ವೇ ದ್ವೇ ವರ್ಷೇ ಸಹಸ್ರಾಣಾಂ ರಾಜನ್ಯಾನಾಂ ಸಮುಚ್ಛ್ರಯಃ ॥
ಜಂಬೂದ್ವೀಪಸ್ಯ ವಿಸ್ತಾರಸ್ತೇಷಾಮಾಯಾಮ ಉಚ್ಯತೇ ॥ ೨೪ ॥

ಯೋಜನಾನಾಂ ಸಹಸ್ರಾಣಾಂ ಶತಂ ದ್ವೌ ಚಾಪಿ ತೌ ಗಿರೀ ।
ನೀಲಶ್ಚ ನಿಷಧಶ್ಚೈವ ತಾಭ್ಯಾಂ ಹೀನಾಶ್ಚ ಯೇ ಪರೇ ॥
ಶ್ವೇತಶ್ಚ ಹೇಮಕೂಟಶ್ಚ ಹಿಮವಾನ್ ಶೃಂಗವಾಂಶ್ಚ ಯಃ ॥ ೨೫ ॥

ಜಂಬೂದ್ವೀಪಪ್ರಮಾಣೇನ ನಿಷಧಃ ಪರಿಕೀರ್ತಿತಃ ॥ ೨೬ ॥

ತಸ್ಮಾಚ್ಚ ದಶಭಾಗೇನ ಹೇಮಕೂಟಃ ಪ್ರಹೀಯತೇ ॥ ೨೭ ॥

ಹಿಮವಾನ್ವಿಂಶಭಾಗೇನ ಹೇಮಕೂಟಾತ್ಪ್ರಹೀಯತೇ ॥ ೨೮ ॥

---

೨೪. ವರ್ಷಪರ್ವತಗಳೆಲ್ಲವೂ ತುದಿಯಲ್ಲಿ ಯೋಜನದಷ್ಟು ಅಗಲವುಳ್ಳುವಾಗಿವೆ. ಈ ರಾಜಪರ್ವತಗಳು ಎರಡುಸಾವಿರ ಯೋಜನ ಎತ್ತರವುಳ್ಳವು. ಜಂಬೂದ್ವೀಪದ ವಿಸ್ತಾರಕ್ಕನುಗುಣವಾಗಿ ಅವುಗಳ ಉದ್ದವಿದೆ.

೨೫. ಅವುಗಳಲ್ಲಿ ನೀಲನಿಷಧ ಪರ್ವತಗಳೆರಡು ಲಕ್ಷಯೋಜನ ಉದ್ದವಾಗಿವೆ. ಶ್ವೇತ, ಹೇಮಕೂಟ, ಹಿಮವತ್, ಶೃಂಗವತ್ಪರ್ವತಗಳು ನೀಲ ನಿಷಧಗಳಿಗಿಂತ ಕಡಿಮೆಯಾದ ಉದ್ದವುಳ್ಳವು.

೨೬. ಜಂಬೂದ್ವೀಪದ ಪರಿಮಿತಿಗನುಸಾರವಾಗಿ ನಿಷಧವೂ ನೀಲವೂ ಲಕ್ಷಯೋಜನ ಉದ್ದವುಳ್ಳುದಾಗಿದೆ.

೨೭. ಹೇಮಕೂಟಶ್ವೇತಗಳು ನಿಷಧಕ್ಕಿಂತ ಹತ್ತನೆಯ ಒಂದುಭಾಗ ಕಡಿಮೆಯಾದ ಉದ್ದವುಳ್ಳವು.

೨೮. ಹಿಮವತ್ ಶೃಂಗವತ್ಪರ್ವತಗಳು ಹೇಮಕೂಟಕ್ಕಿಂತ ಇಪ್ಪತ್ತನೆಯ ಒಂದುಭಾಗ ಕಡಿಮೆಯಾದ ಉದ್ದವುಳ್ಳವುಗಳಾಗಿವೆ.

ಅಷ್ಟಾಂಶಾದ್ಧಿಮವಾಂಚ್ಛೈಲಃ ಆಯತಃ ಪೂರ್ವಪಶ್ಚಿಮೇ |
ದ್ವೀಪಸ್ಯ ಮಂಡಲೀಭಾವಾದ್ಧ್ರಾಸವೃದ್ಧೀ ಪ್ರಕೀರ್ತ್ಯತೇ ||
ವರ್ಷಾಣಾಂ ಪರ್ವತಾನಾಂ ಚ ಯಥಾ ಚೇಮೇ ತಥೋತ್ತರಂ || ೨೯ ||

ತೇಷಾಂ ಮಧ್ಯೇ ಜನಪದಾಸ್ತಾನಿ ವರ್ಷಾಣಿ ಚೈವ ತತ್ |
ಪ್ರಪಾತವಿಷಮೈಸ್ತೈಸ್ತು ಪರ್ವತೈರಾವೃತಾನಿ ತು ||
ಸಂತತಾನಿ ನದೀಭೇದೈರಗಮ್ಯಾನಿ ಪರಸ್ಪರಂ || ೩೦ ||

ವಸಂತಿ ತೇಷು ಸತ್ವಾನಿ ನಾನಾಜಾತೀನಿ ಸರ್ವಶಃ |
ಏತದ್ಧೈಮವತಂ ವರ್ಷಂ ಭಾರತೀ ಯತ್ರ ಸಂತತಿಃ || ೩೧ ||

ಹೇಮಕೂಟೇ ಪರಂ ಯತ್ರ ನಾಮ್ನಾ ಕಿಂಪುರುಷೋತ್ತಮಃ |
ಹೇಮಕೂಟಾತ್ತು ನಿಷಧಂ ಹರಿವರ್ಷಂ ತದುಚ್ಯತೇ || ೩೨ ||

---

೨೯. ಹಿಮವತ್ಪರ್ವತವು ಪೂರ್ವ ಪಶ್ಚಿಮದ ಕೊನೆಗಳಲ್ಲಿ ಎಂಟರಲ್ಲೊಂದುಭಾಗ ವಿಸ್ತಾರವುಳ್ಳದಾಗಿದೆ. ಜಂಬೂದ್ವೀಪವು ವೃತ್ತಾಕಾರವಾಗಿರುವುದರಿಂದ ವರ್ಷಗಳ ಮತ್ತು ವರ್ಷಪರ್ವತಗಳ ಉದ್ದವು ಹೆಚ್ಚುಕಡಿಮೆಯಾಗುತ್ತದೆ.

೩೦. ಆ ವರ್ಷಪರ್ವತಗಳ ಮಧ್ಯದಲ್ಲಿರುವ ದೇಶಗಳೂ ವರ್ಷಗಳೂ, ಝುರಿಗಳ ಮತ್ತು ಜಲಪಾತಗಳ ಹಳ್ಳತಿಟ್ಟುಗಳಿಂದಲೂ, ಪರ್ವತಗಳಿಂದಲೂ, ಹಲವು ನದಿಗಳಿಂದಲೂ ಆವೃತಗಳಾಗಿರುವುದರಿಂದ ಒಂದರಿಂದ ಮತ್ತೊಂದಕ್ಕೆ ಹೋಗುವುದು ಅಸಾಧ್ಯ.

೩೧. ಅವುಗಳಲ್ಲಿ ಎಲ್ಲೆಲ್ಲಿಯೂ ನಾನಾಜಾತಿಯ ಪ್ರಾಣಿಗಳು ವಾಸಿಸುತ್ತವೆ. ಭರತನ ಸಂತತಿಯುವರು ವಾಸಮಾಡುವುದು ಹೈಮವತ ಅಥವಾ ಭಾರತ ವರ್ಷವೆನಿಸಿಕೊಳ್ಳುವುದು.

೩೨. ಹಿಮವತ್ಪರ್ವತದಿಂದ ಹೇಮಕೂಟದವರೆಗಿರುವುದು ಕಿಂಪುರುಷ ವರ್ಷ. ಹೇಮಕೂಟದಿಂದಾಚೆಗೆ ನಿಷಧದವರೆಗಿರುವುದು ಹರಿವರ್ಷವೆನಿಸುವುದು.

ಹರಿವರ್ಷಾತ್ಪರಂ ಚೈವ ಹೇಮುಪಾರ್ಶ್ವೇ ಇಲಾವೃತಂ ।
ಇಲಾವೃತಾತ್ಪರಂ ನೀಲಂ ರಮ್ಯಕಂ ನಾಮ ವಿಶ್ರುತಂ ॥ ೩೩ ॥

ರಮ್ಯಕಾಚ್ಚ ಪರಂ ಶ್ವೇತಂ ವಿಶ್ರುತಂ ತದ್ಧಿರಣ್ಮಯಂ ।
ಹಿರಣ್ಮಯಾತ್ಪರಂ ಚೈವ ಶೃಂಗವಂತಂ ಕುರು ಸ್ಮೃತಂ ॥ ೩೪ ॥

ಧನುಃಸಂಸ್ಥೇ ತು ದ್ವೇ ವರ್ಷೇ ವಿಜ್ಞೇಯೇ ದಕ್ಷಿಣೋತ್ತರೇ ।
*ದೀರ್ಘಾಣಿ ಖಲು ಚತ್ವಾರಿ ಚತುರಸ್ರಮಿಲಾವೃತಂ ॥ ೩೫ ॥

ಅರ್ವಾಕ್ಚ ನಿಷಧಸ್ಯಾಥ ವೇದ್ಯರ್ಧಂ ದಕ್ಷಿಣಂ ಸ್ಮೃತಂ ।
ಪರಂ ಶೃಂಗವತೋ ಯಚ್ಚ ವೇದ್ಯರ್ಧಂ ಹಿ ತದುತ್ತರಂ ॥ ೩೬ ॥

---

೩೩. ಹರಿವರ್ಷಕ್ಕಿಂತ ಆಚೆಗೆ ಮೇರುಪರ್ವತದ ಪಕ್ಕದಲ್ಲಿರುವುದು ಇಲಾವೃತವರ್ಷ. ಇಲಾವೃತಕ್ಕಿಂತ ಆಚೆಗೆ ಉತ್ತರದಲ್ಲಿ ನೀಲಪರ್ವತವಿದೆ. ಅದರಾಚೆಗೆ ರಮ್ಯಕವರ್ಷವು ಪ್ರಸಿದ್ಧವಾಗಿದೆ.

೩೪. ರಮ್ಯಕದಿಂದಾಚೆಗೆ ಶ್ವೇತಪರ್ವತ. ಶ್ವೇತಕ್ಕೆ ಉತ್ತರದಲ್ಲಿ ಹಿರಣ್ಮಯವರ್ಷವೆಂದು ಪ್ರಸಿದ್ಧವಾಗಿದೆ. ಹಿರಣ್ಮಯಕ್ಕಿಂತ ಆಚೆಗೆ ಶೃಂಗವತ್ಪರ್ವತವಿರುವುದು. ಅದರಾಚೆ ಇರುವುದು ಕುರುವರ್ಷವೆನಿಸಿ ಕೊಳ್ಳುವುದು.

೩೫. ದಕ್ಷಿಣೋತ್ತರಗಳಲ್ಲಿರುವ ಭಾರತಕುರುವರ್ಷಗಳೆರಡು ಬಿಲ್ಲಿನ ಆಕಾರವಾಗಿವೆ. ಕಿಂಪುರುಷವೇ ಮೊದಲಾದ ನಾಲ್ಕು ವರ್ಷಗಳು ಉದ್ದವಾಗಿವೆ. ಇಲಾವೃತವರ್ಷವು ಚಚ್ಚೌಕವಾಗಿದೆ.

೩೬. ನಿಷಧವು ಮೇರೆಯಾಗಿರುವ ಪ್ರದೇಶಕ್ಕೆ ಕೆಳಭಾಗದಲ್ಲಿರುವವು ಮೇರುವಿಗೆ ದಕ್ಷಿಣಭಾಗದ ಆಧಾರಾರ್ಥವಾದುವುಗಳೆಂದೂ, ಶೃಂಗವತ್ಪರ್ವತಕ್ಕೆ ಮೇಲುಗಡೆ ಮೇರುವಿನ ಕಡೆಗಿರುವವು ಉತ್ತರಭಾಗದ ಆಧಾರಾರ್ಥವಾದುವು ಗಳೆಂದೂ ಹೇಳುವರು.

---

* ದ್ವೀಪಾನಾಂ.

ವೇದ್ಯರ್ಧಂ ದಕ್ಷಿಣೇ ತ್ರೀಣಿ ವರ್ಷಾಣಿ ತ್ರೀಣಿ ಚೋತ್ತರೇ ।
ತಯೋರ್ಮಧ್ಯೇ ತು ವಿಜ್ಞೇಯೋ ಯತ್ರಮೇರುಸ್ತ್ವಿಲಾವೃತಃ ॥
ಆಯಾಮತಶ್ಚತುಸ್ತ್ರಿಂಶತ್ಸಹಸ್ರಾಣಿ ಪ್ರಕೀರ್ತಿತಃ || ೩೭ ||

ತಸ್ಯ +ಪ್ರತೀಚ್ಯಾಂ ವಿಜ್ಞೇಯಃ ಪರ್ವತೋ ಗಂಧಮಾದನಃ ।
ಆಯಾಮೋಚ್ಛ್ರಾಯವಿಸ್ತಾರಾತ್ತುಲ್ಯೋ ಮಾಲ್ಯವತಾ ತು ಸಃ || ೩೮ ||

ಪರಿಮಂಡಲಸ್ತಯೋರ್ಮಧ್ಯೇ ಮೇರುಃ ಕನಕಪರ್ವತಃ || ೩೯ ||

ಚತುರ್ವರ್ಣಃ ಸ ಸೌವರ್ಣಃ ಚತುರಸ್ರಃ ಸಮುತ್ಥಿತಃ ।
ಅವ್ಯಕ್ತಧಾತವಸ್ಸರ್ವೇ ಸಮುತ್ಪನ್ನಾ ಜನಾದಯಃ || ೪೦ ||

ಅವ್ಯಕ್ತಂಪೃಥಿವೀ ಪದ್ಮಂ ಮೇರುಸ್ತಸ್ಯ ಚ ಕರ್ಣಿಕಾ ।
ಚತುಷ್ಪತ್ರಂ ಸಮುತ್ಪನ್ನಂ ವ್ಯಕ್ತಂ ಪಂಚಗುಣಂ ಮಹತ್ ॥
ತತಃ ಸರ್ವಾ ಸಮುತ್ಪನ್ನಾ ವಿತತಾ ಹಿ ಪ್ರವೃತ್ತಯಃ || ೪೧ ||

---

೩೭. ಹೀಗೆ ಆಧಾರಕ್ಕಾಗಿ(ನೆಲೆಗಟ್ಟಿಗಾಗಿ)ಮೇರುವಿಗೆ ದಕ್ಷಿಣದಲ್ಲಿ ಮೂರುವರ್ಷಗಳೂ, ಉತ್ತರದಲ್ಲಿ ಮೂರುವರ್ಷಗಳೂ ಇವೆ. ಅವುಗಳ ನಡುವೆ ಮೇರುವಿರುವ ಇಲಾವೃತವರ್ಷವಿದೆಯೆಂದರಿಯಬೇಕು. ಅದರ ಉದ್ದವು ಮೂವತ್ತನಾಲ್ಕುಸಾವಿರ ಯೋಜನವೆಂದು ಹೇಳಿದೆ.

೩೮. ಅದರ +ಪಶ್ಚಿಮದಲ್ಲಿ ಗಂಧಮಾದನ ಪರ್ವತವಿದೆ. ಅದು ಉದ್ದಎತ್ತರ ವಿಸ್ತಾರಗಳಲ್ಲಿ ಮಾಲ್ಯವತ್ಪರ್ವತಕ್ಕೆ ಸಮಾನವಾದುದು

೩೯. ಅವೆರಡರ ನಡುವೆ ದುಂಡಾದ ಕನಕಪರ್ವತವಾದ ಮೇರುವಿದೆ.

೪೦. ಆ ಸುವರ್ಣಾದ್ರಿಯು ನಾಲ್ಕು ಬಣ್ಣಗಳುಳ್ಳದಾಗಿ ಬುಡದಲ್ಲಿ ಚಚ್ಚೌಕವಾಗಿದೆ. ಅವ್ಯಕ್ತವಾಗಿದ್ದ ಎಲ್ಲಾ ಧಾತುಗಳೂ, ಜನಾದಿಗಳೂ ಉದಿಸಿದುದು ಆ ಸುವರ್ಣಾದ್ರಿಯಿಂದಲೇ.

೪೧. ಪ್ರಕೃತಿಪರಿಣಾಮರೂಪವಾದುದೂ, ಶಬ್ದಸ್ಪರ್ಶಾದಿ ಗುಣಗಳುಳ್ಳದೂ, ನಾಲ್ಕುದಳಗಳುಳ್ಳದೂ, ದೊಡ್ಡದೂ ಆದ ಭೂಮಿಯೆಂಬ ಕಮಲವು

+ ಪೂರ್ವದಲ್ಲಿದೆಯೆಂದು ದೇವೀಭಾಗವತ, ಭಾಗವತಗಳಲ್ಲಿ ಹೇಳಿದೆ.

ಅನೇಕಕಲ್ಪಜೀವದ್ಭಿಃ ಪುರುಷೈಃ ಪುಣ್ಯಕಾರಿಭಿಃ ।
ಕೃತಾತ್ಮಭಿರ್ಮಹಾತ್ಮಭಿಃ ಪ್ರಾಪ್ಯತೇ ಪುರುಷೋತ್ತಮಃ ॥ ೪೨ ॥

ಮಹಾಯೋಗೀ ಮಹಾದೇವೋ ಜಗದ್ಧ್ಯೇಯೋ ಜನಾರ್ದನಃ ।
ಸರ್ವಲೋಕಗತೋನಂತೋ ವ್ಯಾಪಕೋ ಮೂರ್ತಿರವ್ಯಯಃ ॥ ೪೩ ॥

ನ ತಸ್ಯ ಪ್ರಾಕೃತಾ ಮೂರ್ತಿರ್ಮಾಂಸಮೇದೋಸ್ಥಿಸಂಭವಾ ॥ ೪೪ ॥

ಯೋಗಿತ್ವಾಚ್ಚೇಶ್ವರತ್ವಾಚ್ಚ ಸರ್ವರೂಪಧರೋ ವಿಭುಃ ।
ತನ್ನಿಮಿತ್ತಂ ಸಮುತ್ಪನ್ನಂ ಲೋಕೇ ಪದ್ಮಂ ಸನಾತನಂ ॥
ಕಲ್ಪಶೇಷಸ್ಯ ತಸ್ಯಾಸೌ ಕಾಲಸ್ಯ ಗತಿರೀದೃಶೀ ॥ ೪೫ ॥

ಸ್ಪಷ್ಟವಾಗಿ ತಿಳಿಯದೆ ಇರುವುದಾಗಿದೆ. ಆ ಭೂಕಮಲಕ್ಕೆ ಮೇರುಪರ್ವತವೇ ಬೀಜಕೋಶವಾಗಿದೆ. ಮೇರುವಿನೊಡಗೂಡಿದ ಪೃಥಿವೀಪದ್ಮದಿಂದ(ವಿಸ್ತಾರವಾದ) ಹಲವು ಬಗೆಯ ಕಾರ್ಯಗಳೆಲ್ಲವೂ ಉದಿಸಿದುವು.

೪೨-೪೩. ಅಲ್ಲಿ ಅನೇಕ ಕಲ್ಪಕಾಲ ಜೀವಿಸುವ ಪುಣ್ಯಶಾಲಿಗಳೂ, ಜ್ಞಾನಿಗಳೂ ಆದ ಮಹಾತ್ಮರು ಮಹಾಯೋಗಿಯೂ, ಮಹಾದೇವನೂ, ಜಗತ್ತಿನಿಂದಲೇ ಧ್ಯಾನಮಾಡಿಸಿಕೊಳ್ಳುವವನೂ, ಜನಾರ್ದನನೂ, ಸರ್ವ ಲೋಕಗತನೂ, ಅನಂತನೂ, ಸರ್ವವ್ಯಾಪಕನೂ, ನಾಶರಹಿತನೂ, ಪುರುಷೋತ್ತಮನೂ, ಸಾಕಾರನೂ ಆದ ಪರಮಾತ್ಮನನ್ನು ಪಡೆಯುವರು.

೪೪. ಅವನ ಮೂರ್ತಿಯು ಅಪ್ರಾಕೃತವಾದುದು. ಮಾಂಸ ಮೇದೋಸ್ಥಿಗಳಿಂದಾದುದಲ್ಲ.

೪೫. ಆ ವಿಭುವು ಸರ್ವಜ್ಞತ್ವಸರ್ವಶಕ್ತಿಗಳುಳ್ಳವನಾಗಿರುವುದರಿಂದ ಸರ್ವರೂಪಧರನೂ ಆಗಿರುವನು. ಅವನಿಂದಲೇ ಲೋಕದಲ್ಲಿ ಸನಾತನವಾದ ಪದ್ಮವುದಿಸಿತು. ಪ್ರಳಯಾವಸಾನಭೂತವಾದ ಆ ಕಾಲದ ಗತಿಯೇ ಈ ಬಗೆಯಾದುದು.

ತಸ್ಮಿನ್ಪದ್ಮೇ ಸಮುತ್ಪನ್ನೋ ದೇವದೇವಶ್ಚತುರ್ಮುಖಃ |
ಪ್ರಜಾಪತಿಪತಿರ್ದೇವ ಈಶಾನೋ ಜಗತಃ ಪ್ರಭುಃ || ೪೬ ||

ತಸ್ಯ ಬೀಜನಿಸರ್ಗಂ ಹಿ ಪುಷ್ಕರಸ್ಯ ಯಥಾರ್ಥವತ್ |
ಕೃತ್ಸ್ನಂ ಪ್ರಜಾನಿಸರ್ಗೇಣ ವಿಸ್ತರೇಣೈವ ವರ್ಣ್ಯತೇ || ೪೭ ||

ತದಂಬು ವೈಷ್ಣವಃ ಕಾಯೋ ಯತೋ ರತ್ನವಿಭೂಷಿತಾ* |
ಪದ್ಮಾಕಾರಾ ಸಮುತ್ಪನ್ನಾ ಪೃಥಿವೀ ಸವನಹ್ರದಾ || ೪೮ ||

ತತ್ತಸ್ಯ ಲೋಕಪದ್ಮಸ್ಯ ವಿಸ್ತರಂ ಸಿದ್ಧಭಾಷಿತಂ |
ವರ್ಣ್ಯಮಾನಂ ವಿಭಾಗೇನ ಕ್ರಮಶಃ ಶೃಣುತ ದ್ವಿಜಾಃ || ೪೯ ||

ಮಹಾವರ್ಷಾಣಿ ಖ್ಯಾತಾನಿ ಚತ್ವಾರ್ಯತ್ರ ಚ ಸಂಸ್ಥಿತಾಃ || ೫೦ ||

---

೪೬. ಆ ಸನಾತನಪದ್ಮದಲ್ಲಿ ದೇವ ದೇವನೂ, ನಾಲ್ಕು ಮುಖದವನೂ, ನವಬ್ರಹ್ಮರಲ್ಲಿ ಮುಖ್ಯನೂ, ಶಕ್ತಿವಂತನೂ, ಜಗದೊಡೆಯನೂ ಆದ ಬ್ರಹ್ಮ ದೇವನುದಿಸಿದನು.

೪೭. ಆ ಸನಾತನಪದ್ಮದ ಕಾರಣಸ್ವಭಾವವು ಕಾರ್ಯಭೂತವಾದ ಪ್ರಜೆಗಳ ಸ್ವಭಾವದೊಡನೆ ಇರುವಂತೆಯೇ ಪೂರ್ಣವಾಗಿಯೂ, ವಿಸ್ತಾರವಾಗಿಯೂ ವರ್ಣಿಸಲ್ಪಡುತ್ತದೆ.

೪೮. ರತ್ನಾಲಂಕೃತವೂ, ಕಾಡುಮಡು ಮೊದಲಾದುವುಗಳಿಂದ ಕೂಡಿದುದೂ, ಕಮಲಾಕಾರವೂ ಆದ ಭೂಮಿಯು ಯಾವುದರಿಂದ ಉದಿಸಿತೋ ಆ ನೀರು ವಿಷ್ಣುಸಂಬಂಧಶರೀರವಾಗಿದೆ.

೪೯. ಆ ಲೋಕಪದ್ಮವಿಚಾರದಲ್ಲಿ ವಿಸ್ತಾರವಾಗಿ ಸಿದ್ಧರು ಹೇಳಿರುವುದನ್ನು ವಿಭಾಗದಿಂದ ಕ್ರಮವಾಗಿ ವರ್ಣಿಸುತ್ತೇನೆ. ಬ್ರಾಹ್ಮಣರೇ ಕೇಳಿ.

೫೦. ಆ ಪದ್ಮದಲ್ಲಿ ನಾಲ್ಕು ಪ್ರಸಿದ್ಧವಾದ ಮಹಾವರ್ಷ(ಭೂಭಾಗ)ಗಳಿವೆ.

---

* ರತ್ನವಿಭೂಷಿತಃ

ತತ್ರ ಪರ್ವತಸಂಸ್ಥಾನೋ ಮೇರುರ್ನಾಮ ಮಹಾಬಲಃ || ೫೧ ||

ನಾನಾವರ್ಣಃ ಸ ಪಾರ್ಶ್ವೇಷು ಪೂರ್ವತಃ ಶ್ವೇತ ಉಚ್ಯತೇ |
ಪೀತಂ ಚ ದಕ್ಷಿಣೇ ತಸ್ಯ ಭೃಂ+ಗವರ್ಣಂ ತು ಪಶ್ಚಿಮಂ ||
ಉತ್ತರಂ ರಕ್ತವರ್ಣಂ ತು ತಸ್ಯ ಪಾರ್ಶ್ವಂ ಮಹಾತ್ಮನಃ || ೫೨ ||

ಮೇರುಸ್ತು ಶೋಭತೇ ಶುಕ್ಲೋ ರಾಜಹಂಸೈರ(ವಂ)ಧಿಷ್ಠಿತಃ |
ತರುಣಾದಿತ್ಯಸಂಕಾಶೋ ವಿಧೂಮ ಇವ ಪಾವಕಃ || ೫೩ ||

ಯೋಜನಾನಾಂ ಸಹಸ್ರಾಣಿ ಚತುರಶೀತಿಸಮುಚ್ಛ್ರಿತಃ |
ಪ್ರವಿಷ್ಟಃ ಷೋಡಶಾಧಸ್ತಾದ್ವಿಸ್ತೃತಃ ಷೋಡಶೈವ ತು || ೫೪ ||

ಶರಾವಸಂಸ್ಥಿತತ್ವಾಚ್ಚ ದ್ವಾತ್ರಿಂಶನ್ಮೂರ್ಧ್ನಿ ವಿಸ್ತೃತಃ |
ವಿಸ್ತಾರಸ್ತ್ರಿಗುಣಶ್ಚಾಸ್ಯ ಪರಿಣಾಹಃ ಸಮಂತತಃ || ೫೫ ||

---

೫೧. ಅಲ್ಲಿ ಪರ್ವತರೂಪವಾದ ಅವಯವಗಳುಳ್ಳ ಮೇರುವೆಂಬುದು ಮಹಾಬಲವುಳ್ಳದು.

೫೨. ಅದು ಪಕ್ಕಗಳಲ್ಲಿ ಹಲವು ಬಣ್ಣಗಳುಳ್ಳದು. ಪೂರ್ವದಕಡೆಯಲ್ಲಿ ಬೆಳ್ಳಗಿದೆ. ದಕ್ಷಿಣದ ಕಡೆಯಲ್ಲಿ ಹಳದಿಯಬಣ್ಣವುಳ್ಳದಾಗಿದೆ. ಪಶ್ಚಿಮಭಾಗದಲ್ಲಿ ದುಂಬಿಯಬಣ್ಣವುಳ್ಳದಾಗಿದೆ. ಮಹಾತ್ಮನಾದ ಆ ಮೇರುವಿನ ಉತ್ತರ ಪಾರ್ಶ್ವವು ಕೆಂಪುಬಣ್ಣವುಳ್ಳದಾಗಿದೆ.

೫೩. ಚಂದ್ರಸೂರ್ಯರಿಗೆ ಆಶ್ರಯವಾಗಿರುವ ಆ ಮೇರುವು ಬಾಲಸೂರ್ಯನಂತೆಯೂ, ಹೊಗೆಯಿಲ್ಲದ ಅಗ್ನಿಯಂತೆಯೂ ಬೆಳ್ಳಗೆ ಹೊಳೆಯುತ್ತದೆ.

೫೪. ಅದು ಎಂಬತ್ತನಾಲ್ಕುಸಾವಿರ ಯೋಜನ ಉನ್ನತವಾದುದು. ಕೆಳಗಡೆಯಲ್ಲಿ ಹದಿನಾರುಸಾವಿರ ಯೋಜನ ಆಳಕ್ಕೆ ಹೋಗಿದೆ. ಅದರ ವಿಸ್ತಾರವೂ ಹದಿನಾರು ಸಾವಿರಯೋಜನವೇ ಆಗಿದೆ.

೫೫. ಶರಾವೆಯಂತಿರುವುದರಿಂದ ಮೇಲುಗಡೆಯಲ್ಲಿ ಮೂವತ್ತೆರಡು ಸಾವಿರಯೋಜನ ವಿಸ್ತಾರವುಳ್ಳದಾಗಿದೆ. ಮೇರುವಿನ ಸುತ್ತಳತೆಯು ಇದಕ್ಕೆ ಮೂರರಷ್ಟು.

+ ಶೃಂಗ.

ಮಂಡಲೇನ ಪ್ರಮಾಣೇನ ವ್ಯಸ್ಯಮಾನಂ ತದಿಷ್ಯತೇ ।
ನವತಿಶ್ಚ ಸಹಸ್ರಾಣಿ ಯೋಜನಾನಾಂ ಸಮಂತತಃ ॥ ೫೬ ॥

ತತಃ ಷಟ್ಕಾಧಿಕಾನಾಂ ಚ ವ್ಯಸ್ಯಮಾನಂ ಪ್ರಕೀರ್ತಿತಂ ।
ಚತುರಸ್ರೇಣ ಮಾನೇನ ಪರಿಣಾಹಃ ಸಮಂತತಃ ॥ ೫೭ ॥

ಸ ಪರ್ವತೋ ಮಹಾದಿವ್ಯೋ ದಿವ್ಯೌಷಧಿಸಮನ್ವಿತಃ ।
ಭವನೈರಾವೃತಃ ಸರ್ವೈರ್ಜಾತರೂಪಮಯೈಃ ಶುಭೈಃ ॥ ೫೮ ॥

ತತ್ರ ದೇವಗಣಾಃ ಸರ್ವೇ ಗಂಧರ್ವೋರಗರಾಕ್ಷಸಾಃ ।
ಶೈಲರಾಜೇ ಪ್ರಮೋದಂತೇ ತಥೈವಾಪ್ಸರಸಾಂ ಗಣಾಃ ॥ ೫೯ ॥

ಸ ತು ಮೇರುಃ ಪರಿವೃತೋ ‡ಭವನೈರ್ಭೂತಭಾವನೈಃ ।
ಚತ್ವಾರೋ ಯಸ್ಯ ದೇಶಾಸ್ತು ನಾನಾಪಾರ್ಶ್ವೇಷ್ವಧಿಷ್ಠಿತಾಃ ॥ ೬೦ ॥

೫೬–೫೭. ಮೇರುವು ದುಂಡಾಗಿರುವುದರಿಂದ ಈ ಅಳತೆಯನ್ನು ವ್ಯಾಸಪ್ರಮಾಣದಿಂದ ಹೇಳಿದೆ. ಎಂದರೆ ಮೇರುವಿನ ಮೇಲ್ಭಾಗಸುತ್ತಳತೆಯು ತೊಂಬತ್ತಾರುಸಾವಿರ ಯೋಜನವೆಂದು ಹೇಳಿದಂತಾಯಿತು. ಎಲ್ಲಾ ಕಡೆಯಲ್ಲೂ ವಿಸ್ತಾರವೆಂಬುದು ಇಲ್ಲಿ ಚಚ್ಚೌಕವಾದ ಅಳತೆ ಎಂದರೆ ವ್ಯಾಸದ ಅಳತೆಯಾಗಿದೆ.

೫೮. ಮಹಾದಿವ್ಯವಾದ ಆ ಮೇರುಪರ್ವತವು ದಿವ್ಯೌಷಧಿಗಳಿಂದ ಕೂಡಿಯೂ, ಕನಕಮಯವೂ ಶುಭವೂ ಆದ ಸರ್ವದೇವಗೃಹಗಳಿಂದ ವ್ಯಾಪ್ತವಾಗಿಯೂ ಇದೆ.

೫೯. ಪರ್ವತರಾಜನಾದ ಆ ಮೇರುವಿನಲ್ಲಿ ಎಲ್ಲಾ ಗಂಧರ್ವೋರಗ ರಾಕ್ಷಸರೂ, ಅಪ್ಸರರ ಗುಂಪಿನವರೂ ಆನಂದಪಡುವರು.

೬೦. ತನ್ನ ನಾನಾಪಾರ್ಶ್ವಗಳಲ್ಲಿ ನಾಲ್ಕು ದೇಶಗಳನ್ನಿರಿಸಿಕೊಂಡಿರುವ ಆ ಮೇರುವು ಪ್ರಾಣಿಗಳನ್ನು ಧಾರಣಪೋಷಣಗಳಿಂದ ರಕ್ಷಿಸುವ ‡ಭವನಗಳಿಂದ ಆವೃತವಾಗಿದೆ.

---

‡ ಭವನ = ಆಶ್ರಯ, ಮನೆ, ಜನ್ಮಾಶ್ರಯ.

ಭದ್ರಾಶ್ವೋ ಭಾರತಶ್ಚೈವ ಕೇತುಮಾಲಶ್ಚ* ಪಶ್ಚಿಮೇ ।
ಉತ್ತರೇ ಕುರುವಶ್ಚೈವ ಕೃತಪುಣ್ಯಪ್ರತಿಶ್ರಯಾಃ ॥ ೬೧ ॥

ಕರ್ಣಿಕಾ ತಸ್ಯ ಪದ್ಮಸ್ಯ ಸಮಂತಾತ್ಪರಿಮಂಡಲಂ ।
ಯೋಜನಾನಾಂ ಸಹಸ್ರಾಣಿ ಯೋಜನಾನಾಂ ಪ್ರಮಾಣತಃ ॥ ೬೨ ॥

ತಸ್ಯ ಕೇಸರಜಾಲಾನಿ ನವ ಷಟ್ಚ ಪ್ರಕೀರ್ತಿತಾಃ ।
ಚತುರಶೀತಿರುತ್ಸೇಧೋ ವಿವರಾಂತರಗೋಚರಾಃ ॥ ೬೩ ॥

ತ್ರಿಂಶಚ್ಚಾಪಿ ಸಹಸ್ರಾಣಿ ಯೋಜನಾನಾಂ ಪ್ರಮಾಣತಃ ।
ತಸ್ಯ ಕೇಸರಜಾಲಾನಿ ವಿಕೀರ್ಣಾನಿ ಸಮಂತತಃ ॥ ೬೪ ॥

ಶತಸಾಹಸ್ರ ಆಯಾಮಃ ಅಶೀತಿಃ ಪೃಥುಲಾನಿ ಚ ।
ಚತ್ವಾರಿ ತತ್ರ ಪರ್ವಾಣಿ ಯೋಜನಾನಾಂ ಚತುರ್ದಶ ॥ ೬೫ ॥

---

೬೧. ಪುಣ್ಯಶಾಲಿಗಳಿಗೆ ಆಶ್ರಯವಾಗಿರುವ ಭದ್ರಾಶ್ವ, ಭಾರತ, ಕೇತುಮಾಲಗಳೆಂಬ ವರ್ಷ(ದೇಶ)ಗಳು ಅನುಕ್ರಮವಾಗಿ ಆ ಮೇರುವಿನ ಪೂರ್ವದಕ್ಷಿಣ ಪಶ್ಚಿಮದಲ್ಲೂ ಕುರುವರ್ಷವು ಉತ್ತರಲ್ಲೂ ಇವೆ.

೬೨–೬೪. ಆ ಭೂಪದ್ಮಕರ್ಣಿಕೆಯಾದ ಮೇರುವಿನ ಸುತ್ತಳತೆಯು ಸಾವಿರಯೋಜನ. ಅದರ ಕೇಸರಗಳು ಹದಿನೈದುಸಾವಿರ ಎಂದು ಹೇಳುವರು. ಅವು ಎಂಬತ್ತನಾಲ್ಕುಸಾವಿರ ಯೋಜನ ಉದ್ದವುಳ್ಳವಾಗಿ ಹೊರಗೆ ಕಾಣಿಸುತ್ತವೆ. ಅವು ಸುತ್ತಲೂ ಮೂವತ್ತುಸಾವಿರ ಯೋಜನದಳತೆಗೆ ಹರಡಿಕೊಂಡಿವೆ.

೬೫. ಆ ಕೇಸರಗಳ ನಿಜವಾದ ಉದ್ದವು (ಬುಡದಲ್ಲಿ ಮರೆಯಾಗಿರುವುದೂ ಸೇರಿ) ಒಂದು ಲಕ್ಷ ಯೋಜನ. ಅವು ಎಂಬತ್ತು ಯೋಜನದಷ್ಟು ದಪ್ಪವಾಗಿವೆ. ಅವುಗಳಲ್ಲಿ ಹದಿನಾಲ್ಕು ಸಾವಿರ ಯೋಜನಕ್ಕೊಂದರಂತೆ ನಾಲ್ಕು ಗೆಣ್ಣುಗಳಿವೆ.

---

* ಭದ್ರಾಶ್ವಭಾರತಗಳೂ ಪಶ್ಚಿಮದಲ್ಲಿವೆಯೆಂದು ಅರ್ಥವಾಗುವಂತೆ ಇಲ್ಲಿರುವುದು ಸರಿಯಾಗಿಲ್ಲ.

ತತ್ರ ಯಾ ಸಾ ಮಯಾ ತುಭ್ಯಂ ಕರ್ಣಿಕೇತ್ಯಭಿವಿಶ್ರುತಾ ।
ತಾಂ ವರ್ಣ್ಯಮಾನಾಮೇಕಾಗ್ರ್ಯಾತ್ಸಮಾಸೇನ ನಿಬೋಧತ || ೬೬ ||

ಮಣಿಪರ್ಣಶತೈಶ್ಚಿತ್ರಾಂ ನಾನಾವರ್ಣಪ್ರಭಾಸಿತಾಂ ।
ಅನೇಕಪರ್ಣನಿಚಯಂ ಸೌವರ್ಣಮರುಣಪ್ರಭಂ || ೬೭ ||

ಕಾಂತಂ ಸಹಸ್ರಪರ್ವಾಣಂ ಸಹಸ್ರೋದರಕಂದರಂ ।
ಸಹಸ್ರಶತಪತ್ರಂ ಚ ಕೃತಮೇಕಂ ನಗೋತ್ತಮಂ || ೬೮ ||

ಮಣಿರತ್ನಾರ್ಪಿತೈಃ ಶ್ವಭ್ರೈರ್ಮಣಿಚಿತ್ರಿತತೋರಣೈಃ ।
ತತ್ರ ಬ್ರಹ್ಮಸಭಾ ರಮ್ಯಾ ಬ್ರಹ್ಮರ್ಷಿಜನಸಂಕುಲಾ ||
ನಾಮ್ನಾ ಮನೋವತೀ ಸಾ ತು ಸರ್ವಲೋಕೇಷು ವಿಶ್ರುತಾ || ೬೯ ||

ತತ್ರೇಶಾನಸ್ಯ ದೇವಸ್ಯ ಸಹಸ್ರಾದಿತ್ಯವರ್ಚಸಃ ।
ಮಹಾವಿಮಾನಸಂಸ್ಥಸ್ಯ ಮಹಿಮಾ ವರ್ತತೇ ಸದಾ || ೭೦ ||

---

೬೬. ಅವುಗಳಲ್ಲಿ ಕರ್ಣಿಕೆಯೆಂದು ಪ್ರಸಿದ್ಧವಾಗಿರುವುದನ್ನು ಈಗ ಸಂಗ್ರಹವಾಗಿ ವರ್ಣಿಸುತ್ತೇನೆ. ಗಮನಿಸಿ ಕೇಳಿ.

೬೭-೬೮. ಆ ಕರ್ಣಿಕೆಯು (ಮೇರು) ರತ್ನಗಳೆಂಬ ನೂರಾರು ಎಲೆಗಳಿಂದ ಚಿತ್ರಿತವಾದುದು. ಹಲವು ಬಣ್ಣಗಳಿಂದ ಹೊಳೆಯುವ ಅನೇಕ ಪರ್ಣ (ರೆಕ್ಕೆ)ಗಳುಳ್ಳದು. ಸ್ವರ್ಣಮಯವಾದುದು. ಅರುಣವರ್ಣದ ಕಾಂತಿಯುಳ್ಳದು, ಸಾವಿರ ಗೆಣ್ಣುಗಳುಳ್ಳದು. ಸಾವಿರಾರು ಗುಹೆಗಳೆಂಬ ಉದರವುಳ್ಳದು. ಲಕ್ಷ ಪತ್ರಗಳುಳ್ಳದು ಅದು ಒಂದು ಉತ್ತಮಪರ್ವತವಾಗಿ ಆಗಿದೆ.

೬೯. ಆ ಮೇರುವಿನಲ್ಲಿ ರತ್ನಗಳು ತುಂಬಿರುವ ಕಣಜ (ಹಗೇವು)ಗಳಿಂದಲೂ, ಮಣಿಗಳಿಂದಲಂಕೃತವಾದ ಹೆಬ್ಬಾಗಿಲುಗಳಿಂದಲೂ ಕೂಡಿ ಬ್ರಹ್ಮರ್ಷಿಜನಗಳಿಂದ ತುಂಬಿರುವ ರಮ್ಯವಾದ ಬ್ರಹ್ಮಸಭೆಯಿರುವುದು. ಮನೋವತಿಯೆಂಬ ಹೆಸರಿನ ಆ ಸಭೆಯು ಸರ್ವಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ.

೭೦. ಅಲ್ಲಿ ಸಹಸ್ರ ಸೂರ್ಯತೇಜನೂ, ಮಹಾವಿಮಾನದಲ್ಲಿರುವವನೂ ಆದ ಈಶ್ವರದೇವನ ಮಹಿಮೆಯು ಯಾವಾಗಲೂ ಇರುತ್ತದೆ.

ತತ್ರ ದೇವಗಣಾಃ ಸರ್ವೇ ಚತುರ್ವಕ್ತ್ರಂ ಸ್ವಯಂಪ್ರಭುಂ ।
ಇಷ್ಟ್ವಾ ಪೂಜ್ಯ ನಮಸ್ಕಾರೈರರ್ಚನೀಯಮುಪಸ್ಥಿತಾಃ ॥ ೭೧ ॥

ಯೈಸ್ತದಾ ಜಿತಸಂಕಲ್ಪೈಃ ಬ್ರಹ್ಮಚರ್ಯಂ ಮಹಾತ್ಮಭಿಃ ।
ಚೀರ್ಣಂ ಚಾರುಮನೋಭಿಶ್ಚ ಸದಾಚಾರಪರಿಸ್ಥಿತೈಃ ॥ ೭೨ ॥

ಸಮ್ಯಗ್ಭಕ್ತ್ಯಾ ಸತುಷ್ಟ್ಯಾ ಚ ಪಿತೃದೇವಾರ್ಚನೇ ರತಾಃ ।
ಗೃಹಾಶ್ರಮಪರಾಸ್ತತ್ರ ವಿನೀತಾ ಅತಿಥಿಪ್ರಿಯಾಃ ॥ ೭೩ ॥

ಗೃಹಿಣಃ ಶುಕ್ಲಕರ್ಮಸ್ಥಾಃ ವಿರಕ್ತಾಃ ಕಾರಣಾತ್ಮಕಾಃ ।
ಯಮೈರ್ನಿಯಮಧ್ಯಾನೈಶ್ಚ ದೃಢನಿರ್ದಗ್ಧಕಿಲ್ಬಿಷಾಃ ॥ ೭೪ ॥

ತೇಷಾಂ ನಿವಾಸಃ ಶುಕ್ಲೇ ಚ ಬ್ರಹ್ಮಲೋಕೇ ಹ್ಯನಿಂದಿತೇ ॥ ೭೫ ॥

ಉಪರ್ಯುಪರಿ ಸರ್ವಾಸಾಂ ಗತೀನಾಂ ಪರಮಾ ಗತಿಃ ॥ ೭೬ ॥

---

೭೧. ಅಲ್ಲಿ ದೇವತೆಗಳ ಸಮೂಹಗಳೆಲ್ಲವೂ. ಸ್ವಯಂಪ್ರಭುವೂ, ಪೂಜ್ಯನೂ ಆದ ಚತುರ್ಮುಖಬ್ರಹ್ಮನನ್ನು ಪೂಜಿಸಿ, ನಮಸ್ಕಾರಗಳಿಂದಲೂ ಸಂತೋಷ ಪಡಿಸಿ ಸೇವಿಸುತ್ತಿರುವುವು.

೭೨–೭೪. ವಿರಕ್ತರೂ, ಒಳ್ಳೆಯ ಮನಸ್ಸುಳ್ಳವರೂ, ಸಚಾರನಿಷ್ಠರೂ ಆಗಿ ಬ್ರಹ್ಮಚರ್ಯವ್ರತವನ್ನು ಅನುಸರಿಸುತ್ತಿದ್ದ ಮಹಾತ್ಮರೂ ಹೆಚ್ಚಾದ ಭಕ್ತಿ ಯಿಂದಲೂ, ಸಂತೋಷದಿಂದಲೂ ಅಲ್ಲಿ ಆ ಬ್ರಹ್ಮನನ್ನು ಸೇವಿಸುವರು. ಅಲ್ಲಿ ಗೃಹಸ್ಥಾಶ್ರಮಿಗಳಾಗಿ ಮನೆಗಳಲ್ಲಿ ವಾಸಮಾಡುವವರು, ಪಿತೃದೇವತೆಗಳ ಪೂಜೆ ಯಲ್ಲಿ ಆಸಕ್ತರಾಗಿಯೂ, ವಿನಯವುಳ್ಳವರಾಗಿಯೂ, ಅತಿಥಿಸತ್ಕಾರಪ್ರಿಯರಾ ಗಿಯೂ, ಪರಿಶುದ್ಧಕರ್ಮಿಗಳಾಗಿಯೂ ಇರುವರು. ವಿರಕ್ತರು ಸರ್ವಕಾರಣ ಭೂತನಾದ ಪರಮಾತ್ಮನನ್ನೇ ಯಾವಾಗಲೂ ಅಂತರ್ಯಾಮಿಯಾಗಿ ಧ್ಯಾನಿಸುವವ ರಾಗಿ ಯಮನಿಯಮಧ್ಯಾನಾದ್ಯಂಗಗಳುಳ್ಳ ಯೋಗಾಗ್ನಿಯಿಂದ ನಿಜವಾಗಿಯೂ ಪಾಪವನ್ನು ಪೂರ್ಣವಾಗಿ ಸುಟ್ಟುರಿಸಿರುವರು.

೭೫–೭೬. ಅವರ ನಿವಾಸವು, ದೋಷರಹಿತವೂ, ಶುಭ್ರವೂ ಆದ ಬ್ರಹ್ಮ ಲೋಕದಲ್ಲಿ. ಅದು ಮೇಲುಮೇಲಿನ ಸ್ಥಾನಗಳಲ್ಲೆಲ್ಲಾ ಉತ್ತಮಸ್ಥಾನ.

ಚತುರ್ದಶಸಹಸ್ರಾಣಿ ಯೋಜನಾನಾಂ ತು ಕೀರ್ತಿತಂ ।
ತತೋರ್ಧ್ವಂ ರುಚಿರೇ ಕೃಷ್ಣೇ ತರುಣಾದಿತ್ಯವರ್ಚಸಿ ॥ ೭೭ ॥

ಮಹಾಗಿರೌ ತತೋ ರಮ್ಯೇ ರತ್ನಧಾತುವಿಚಿತ್ರಿತೇ ।
ನೈಕರತ್ನಸಮಾವಾಸೇ ಮಣಿತೋರಣಮಂದಿರೇ ॥ ೭೮ ॥

ಮೆರೋಃ* ಸರ್ವೇಷು ಪಾರ್ಶ್ವೇಷು ಸಮಂತಾತ್ಪರಿಮಂಡಲೇ ।
ತ್ರಿಂಶದ್ಯೋಜನಸಾಹಸ್ರಂ ಚಕ್ರಪಾದೋ ನಗೋತ್ತಮಃ ।
ತಾನ್ದೃಷ್ಟ್ವಂತಿ ದ್ವಿಜಾಃ ಸರ್ವಾನಷ್ಟಾವಷ್ಯಚಲೋತ್ತಮಾನ್ ॥ ೭೯ ॥

ದಶಯೋಜನವಿಸ್ತೀರ್ಣಾ ಚಕ್ರಪಾದೋಪನಿರ್ಗತಾ ।
ಸಾ ತೂರ್ಧ್ವವಾಹಿನೀ ಚಾಪೀ ನದೀ ಭೂಮೌ ಪ್ರತಿಷ್ಠಿತಾ ॥ ೮೦ ॥

೭೭-೭೮. ಆ ಬ್ರಹ್ಮನ ಸಭಾಸ್ಥಾನವು ಹದಿನಾಲ್ಕು ಸಾವಿರ ಯೋಜನದ ಎತ್ತರಕ್ಕಿಂತ ಮೇಲೆ ಸುಂದರವೂ, ಒಂದು ಕಡೆಯಲ್ಲಿ ಕಪ್ಪುಬಣ್ಣದಿಂದಲೂ, ಮತ್ತೊಂದು ಕಡೆಯಲ್ಲಿ ಬಾಲಸೂರ್ಯನ ಬಣ್ಣದಿಂದಲೂ ಹೊಳೆಯುವುದೂ, ರತ್ನಧಾತುಗಳಿಂದ ಚಿತ್ರಿತವೂ, ಬಗೆಬಗೆಯ ಹಲವು ರತ್ನಗಳ ನೆಲೆಯೂ, ರತ್ನ ತೋರಣಗೃಹಗಳುಳ್ಳದೂ ಆದ ಆ ಮಹಾಮೇರುಗಿರಿಯಲ್ಲಿದೆ.

೭೯. ಮೇರುವಿನ ಎಲ್ಲಾ ಪಕ್ಕಗಳಲ್ಲೂ ಸುತ್ತಲೂ ಉತ್ತಮವಾದ ಚಕ್ರ ಪಾದ (ಚಕ್ರದ ಆರೆಕಾಲುಗಳಂತೆ ಅಥವಾ ಕಮಲದಳದಂತೆ ಇರುವ) ಪರ್ವತ ಗಳು ಮೂವತ್ತು ಸಾವಿರ ಯೋಜನ ಪರಿಮಾಣವುಳ್ಳವುಗಳಾಗಿವೆ. ಉತ್ತಮ ವಾದ ಆ ಎಂಟು ಪರ್ವತಗಳನ್ನೂ ಕಂಡರೆ ದ್ವಿಜರಿಗೆ ಸಂತೋಷ.

೮೦-೮೨. ಮೇಲೆ ಅಮರಾವತಿಯಲ್ಲಿ ಪ್ರವಹಿಸುವವಳೂ, ಚಂದ್ರಸಮಾನ ಕಾಂತಿಯುಳ್ಳವಳೂ, ಸೂರ್ಯ ಚಂದ್ರ ನಕ್ಷತ್ರಾದಿಗಳನ್ನು ಕಾಂತಿಯಿಂದ ತಿರಸ್ಕ

---

* ಮೇರುಃ

ಸಾ ಪುರ್ಯಾಮಮರಾವತ್ಯಾಂ ಕ್ರಮಮಾಣೇಂದುಸ ಪ್ರಭಾ ।
‡ಯಯಾ ತಿರಸ್ಕೃತಾಶ್ಚಾಪಿ ಸೂರ್ಯೇಂದುಜ್ಯೋತಿಷಾಂ ಗಣಾಃ ॥ ೮೧ ॥

ಉದಯಾಸ್ತಮಿತೀ ಸಂಧ್ಯೇ ಯಾಂ ಸೇವಂತೇ ದ್ವಿಜೋತ್ತಮಾಃ ।
ಪರಿಭ್ರಮಜ್ಯೋತಿಷಾಂ ಯಾ ಸಾ ರುದ್ರೇಂದ್ರಮತಾ ಶುಭಾ ॥ ೮೨ ॥

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಜಂಬೂ ದ್ವೀಪಮೇರುನಿರೂಪಣಂ ನಾಮ ಪಂಚಸಪ್ತತಿತಮೋಧ್ಯಾಯಃ

ರಿಸಿರುವವಳೂ, ಬ್ರಾಹ್ಮಣರ ಪ್ರಾತಸ್ಸಾಯಂ ಸಂಧ್ಯಾವಂದನೆಗೆ ಅವಕಾಶವಾಗಿರು ವಳೂ, ಸುತ್ತುತ್ತಿರುವ ಗ್ರಹಗಳ ನಡುವೆ ಇರುವವಳೂ, ರುದ್ರೇಂದ್ರರಿಗೆ ಇಷ್ಟಳೂ, ಶುಭೆಯೂ, ಹತ್ತುಯೋಜನ ವಿಸ್ತೀರ್ಣವುಳ್ಳವಳೂ ಆದ ಗಂಗೆಯು ಚಕ್ರಪಾದ ಪರ್ವತಸಮೀಪದಲ್ಲಿ ಹೊರಹೊರಟು ಭೂಮಿಯಲ್ಲಿ ನೆಲಸಿರುವಳು.

ಅಧ್ಯಾಯದ ಸಾರಾಂಶ—ರುದ್ರನು ಅಗಸ್ತ್ಯಾದಿ ಮುನಿಗಳಿಗೆ ಜಂಬೂ ದ್ವೀಪ, ಮೇರುಪರ್ವತಗಳ ವಿಚಾರವನ್ನು ಎಂದರೆ ಜಂಬೂದ್ವೀಪದ ವಿಸ್ತೀರ್ಣ ಆ ದ್ವೀಪದಲ್ಲಿರುವ ಮಹಾಪರ್ವತಗಳ ಮತ್ತು ಸಾಮಾನ್ಯಪರ್ವತಗಳ ಪರಿಮಾಣ, ವರ್ಣನೆ, ಜಂಬೂದ್ವೀಪದಲ್ಲಿರುವ ಖಂಡ (ವರ್ಷ)ಗಳ ಪರಿಮಾಣ, ವರ್ಣನೆ, ಮೇರುಪರ್ವತದ ಪರಿಮಾಣ, ಅದರ ಪೂರ್ವಾದಿಭಾಗಗಳಲ್ಲಿರುವ ಪರ್ವತಗಳು, ಮೇರುವಿನ ನಾಲ್ಕು ಕಡೆಗಳಲ್ಲೂ ಇರುವ ದೇಶಗಳು, ಮೇರುವಿನ ಮೇಲಿರುವ ಮನೋವತಿಯೆಂಬ ಬ್ರಹ್ಮಸಭೆಯ ವರ್ಣನೆ, ಮೇರುವಿನ ಪಕ್ಕದಲ್ಲಿರುವ ಚಕ್ರ ಪಾದಪರ್ವತಗಳ ವರ್ಣನೆ ಅಲ್ಲಿ ಗಂಗೋತ್ಪತ್ತಿ ಇವುಗಳನ್ನು ಹೇಳಿರುವನು. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಎಪ್ಪತ್ತೈದನೆಯ ಅಧ್ಯಾಯ.

---

‡ ತಯಾ ತಿರಸ್ಕೃತೌ ವಾಪಿ

|| ಶ್ರೀಃ ||

–x–

ಷಟ್ಸಪ್ತತಿತಮೋಽಧ್ಯಾಯಃ

ಅಥ ಅಷ್ಟದಿಕ್ಪಾಲಪುರ್ಯಃ

|| ರುದ್ರ ಉವಾಚ ||

ತಸ್ಯೈವ ಮೇರೋಃ *ಪೂರ್ವೇ ತು ದೇಶೇ ಪರಮವರ್ಚಸೇ ।
ಚಕ್ರಪಾದಪರಿಕ್ಷಿಪ್ತೇ ನಾನಾಧಾತುವಿರಾಜಿತೇ || ೧ ||

ತತ್ರ ಸರ್ವಾಮರಪುರಂ ಚಕ್ರಪಾದಸಮುದ್ಧೃತಂ ।
ದುರ್ಧರ್ಷಬಲದೃಪ್ತಾನಾಂ ದೇವದಾನವರಕ್ಷಸಾಂ || ೨ ||

ತತ್ರ ಜಾಂಬೂನದಮಯಃ ಸುಪ್ರಾಕಾರಃ ಸುತೋರಣಃ || ೩ ||

ಎಪ್ಪತ್ತಾರನೆಯ ಅಧ್ಯಾಯ

ಅಷ್ಟದಿಕ್ಪಾಲಪುರಗಳು

೧–೩. ರುದ್ರ—ಚಕ್ರದ ಆರೆಕಾಲುಗಳಂತಿರುವ ಪರ್ವತಗಳನ್ನು ದಿಕ್ಕು ದಿಕ್ಕಿಗೂ ಹರಡಿ ನಾನಾ ಧಾತುಗಳಿಂದ ಹೊಳೆಯುತ್ತ ಅತಿ ಕಾಂತಿಯುತವಾಗಿರುವ ಅದೇ ಮೇರುವಿನ ಪೂರ್ವಭಾಗದಲ್ಲಿ ಅಸಾಧ್ಯಬಲದಿಂದ ಗರ್ವಿತರಾದ ದೇವದಾನವರಾಕ್ಷಸಾದಿಗಳ ಸರ್ವಾಮರಪುರವು ಸುವರ್ಣಮಯವಾಗಿ ಒಳ್ಳೆಯ ಪ್ರಾಕಾರವೂ ಹೆಬ್ಬಾಗಿಲೂ ಉಳ್ಳುದಾಗಿದೆ.

---

* ಭಾಗವತ ಮತ್ತು ದೇವೀ ಭಾಗವತಗಳಲ್ಲಿ ಬ್ರಹ್ಮನ ಮನೋವತಿಯೆಂಬ ಪಟ್ಟಣವು ಮೇರುವಿನ ಮೇಲೆ ಮಧ್ಯಭಾಗದಲ್ಲಿದೆಯೆಂದು ಹೇಳಿದೆ.

ತಸ್ಯಾಪ್ಯುತ್ತರಪೂರ್ವೇ ತು ದೇಶೇ ಪರಮವರ್ಚಸೇ ।
ಆಲೋಕಜನಸಂಪೂರ್ಣಾ ವಿಮಾನಶತಸಂಕುಲಾ || ೪ ||

ಮಹಾವಾಪೀಸಮಾಯುಕ್ತಾ ನಿತ್ಯಂ ಸಮುದಿತಾ ಶುಭಾ ।
ಶೋಭಿತಾ ಪುಷ್ಪಶಬಲೈಃ ಪತಾಕಾಧ್ವಜಮಾಲಿನೀ || ೫ ||

ದೇವೈರ್ಯಕ್ಷಾಪ್ಸರೋಭಿಶ್ಚ ಋಷಿಭಿಶ್ಚ ಸುಶೋಭಿತಾ ।
ಪುರಂದರಪುರೀ ರಮ್ಯಾ ಸಮೃದ್ಧಾ ತ್ವಮರಾವತೀ || ೬ ||

ತಸ್ಯಾ ಮಧ್ಯೇಽಮರಾವತ್ಯಾ ವಜ್ರವೈಡೂರ್ಯವೇದಿಕಾ ।
ತ್ರೈಲೋಕ್ಯಗುಣವಿಖ್ಯಾತಾ ಸುಧರ್ಮಾ ನಾಮ ವೈ ಸಭಾ || ೭ ||

ತತ್ರಾಸ್ತೇ ಶ್ರೀಪತೇಃ ಶ್ರೀಮಾನ್ಸಹಸ್ರಾಕ್ಷಃ ಶಚೀಪತಿಃ ।
ಸಿದ್ಧಾದಿಭಿಃ ಪರಿವೃತಃ ಸರ್ವಾಭಿರ್ದೇವಯೋನಿಭಿಃ || ೮ ||

೪-೬. ಆ ಪಟ್ಟಣದ ಶ್ರೇಷ್ಠವಾದ ಪೂರ್ವಭಾಗದ ಅತಿ ಕಾಂತಿಯುತವಾದ ಪ್ರದೇಶದಲ್ಲಿ, ಅಮಾನುಷರಿಂದ ಪೂರ್ಣವಾದುದೂ, ನೂರಾರು ವಿಮಾನಗಳುಳ್ಳುದೂ, ದೊಡ್ಡ ಕೊಳಗಳಿಂದ ಕೂಡಿದುದೂ, ಸರ್ವದಾ ಶುಭಯುತವೂ, ಹೂಗಳ ಚಿತ್ರವರ್ಣಗಳ ಸೊಗಸುಳ್ಳುದೂ, ಪತಾಕಾಧ್ವಜಗಳ ಸಾಲುಗಳಿಂದೊಪ್ಪುವುದೂ, ದೇವಯಕ್ಷಾಪ್ಸರರಿಂದಲೂ, ಋಷಿಗಳಿಂದಲೂ ಶೋಭಿಸುವುದೂ, ಸಮೃದ್ಧವೂ, ಮನೋಹರವೂ ಆದ ಅಮರಾವತಿಯೆಂಬ ಇಂದ್ರನ ನಗರವು ಮೆರೆಯುವುದು.

೭. ಆ ಅಮರಾವತಿಯ ನಡುವೆ ವಜ್ರವೈಡೂರ್ಯಗಳ ಜಗುಲಿಯುಳ್ಳುದೂ, ಗುಣಗಳಿಂದ ಲೋಕತ್ರಯದಲ್ಲೂ ಪ್ರಸಿದ್ಧವೂ ಆದ ಸುಧರ್ಮವೆಂಬ ಹೆಸರಿನ ಸಭೆಯು ಒಪ್ಪುತ್ತಿರುವುದು.

೮-೯. ಆ ಸಭೆಯಲ್ಲಿ ಶ್ರೀಪತಿಗಿಂತಲೂ ಶ್ರೀಮಂತನೂ, ಸಹಸ್ರಾಕ್ಷನೂ, ಶಚೀಪತಿಯೂ ಮಹಾತ್ಮನಾದ ಸೂರ್ಯನ ವಂಶೀಯನೂ ಆದ ಸಾಕ್ಷಾದಿಂದ್ರನು

ತತ್ರ ಚೈವ ತು ವಂಶಃ ಸ್ಯಾದ್ಭಾಸ್ಕರಸ್ಯ ಮಹಾತ್ಮನಃ |
ಸಾಕ್ಷಾತ್ತತ್ರ ಸುರಾಧ್ಯಕ್ಷಃ ಸರ್ವದೇವನಮಸ್ಕೃತಃ || ೯ ||

ತಸ್ಯಾಶ್ಚ ದಿಕ್ಷು ವಿಸ್ತೀರ್ಣಾ ತತ್ತದ್ಗುಣಸಮನ್ವಿತಾ |
ತೇಜೋವತೀ ನಾಮ ಪುರೀ ಹುತಾಶಸ್ಯ ಮಹಾತ್ಮನಃ || ೧೦ ||

ತದ್ವದ್ಗುಣವತೀ ರಮ್ಯಾ ಪುರೀ ವೈವಸ್ವತಸ್ಯ ಚ |
ನಾಮ್ನಾ ಸಂಯಮನೀ ನಾಮ ಪುರೀ ತ್ರೈಲೋಕ್ಯವಿಶ್ರುತಾ || ೧೧ ||

ತಥಾ ಚತುರ್ಥೇ ದಿಗ್ಭಾಗೇ ನೈಋತಾಧಿಪತೇಃ ಶ್ರುತಾ |
ನಾಮ್ನಾ ಕೃಷ್ಣವತೀ ನಾಮ ವಿರೂಪಾಕ್ಷಸ್ಯ ಧೀಮತಃ || ೧೨ ||

ಪಂಚಮೇ ಹ್ಯುತ್ತರಪುಟೇ ನಾಮ್ನಾ ಶುದ್ಧವತೀ ಪುರೀ |
ಉದಕಾಧಿಪತೇಃ ಖ್ಯಾತಾ ವರುಣಸ್ಯ ಮಹಾತ್ಮನಃ || ೧೩ ||

ದೇವವಂಶೀಯರಾದ ಸಿದ್ಧಾದಿ ಸರ್ವರಿಂದ ಪರಿವೃತನಾಗಿ ಸುರಾಧ್ಯಕ್ಷನಾಗಿ ಸರ್ವದೇವನಮಸ್ಕೃತನಾಗಿರುವನು.

೧೦. ಆ ಅಮರಾವತಿಯ (ದಕ್ಷಿಣ) ದಿಕ್ಕಿನಲ್ಲಿ ವಿಸ್ತಾರವಾದುದೂ, ಅನೇಕ ಗುಣಗಳುಳ್ಳದೂ ಅಥವಾ ಅಗ್ನಿಯಂತೆ ಹೊಳೆಯುವುದೂ ಆದ ತೇಜೋವತಿಯೆಂಬ ಮಹಾತ್ಮನಾದ ಅಗ್ನಿದೇವನ ಪಟ್ಟಣವಿರುವುದು.

೧೧. ಅದಕ್ಕೆ ಪಶ್ಚಿಮದಲ್ಲಿ ಅದರಂತೆಯೇ ಗುಣಯುತವೂ, ಅಥವಾ ಯಮನಂತೆಯೇ ಬಣ್ಣವುಳ್ಳದೂ, ಮನೋಹರವೂ, ತ್ರಿಲೋಕಪ್ರಸಿದ್ಧವೂ ಆದ ಯಮಪುರಿಯು ಸಂಯಮನಿಯೆಂಬ ಹೆಸರಿನಿಂದೊಪ್ಪುವುದು.

೧೨. ನಾಲ್ಕನೆಯ ದಿಕ್ಕಿನಲ್ಲಿ ವಿರೂಪಾಕ್ಷನೂ, ಬುದ್ಧಿವಂತನೂ ಆದ ನೈಋತಾಧಿಪತಿಯ ಕೃಷ್ಣವತಿಯೆಂಬ ಪ್ರಸಿದ್ಧವಾದ ಪಟ್ಟಣವಿರುವುದು.

೧೩. ಆದಕ್ಕೆ ಉತ್ತರಭಾಗದ ಐದನೆಯ (ಪಶ್ಚಿಮ) ದಿಕ್ಕಿನಲ್ಲಿ ಉದಕಾಧಿಪತಿಯೂ, ಮಹಾತ್ಮನೂ ಆದ ವರುಣನ ಶುದ್ಧವತಿಯೆಂಬ ಪಟ್ಟಣವು ಪ್ರಸಿದ್ಧವಾಗಿರುವುದು.

ತಥಾ ಪಂಚೋತ್ತರೇ ದೇವಸ್ಯಾಸ್ಯೋತ್ತರಪುಟೇ ಪುರೀ ।
ವಾಯೋರ್ಗಂಧವತೀ ನಾಮ ಖ್ಯಾತಾ ಸರ್ವಗುಣೋತ್ತರಾ ॥ ೧೪ ॥

ತಸ್ಯೋತ್ತರಪುಟೇ ರಮ್ಯಾ ಗುಹ್ಯಕಾಧಿಪತೇಃ ಪುರೀ ।
ನಾಮ್ನಾ ಮಹೋದಯಾ ನಾಮ ಶುಭಾ ವೈಡೂರ್ಯವೇದಿಕಾ ॥ ೧೫ ॥

ತಥಾಷ್ಟಮೇಂತರಪುಟೇ ಈಶಾನಸ್ಯ ಮಹಾತ್ಮನಃ ।
ಪುರೀ ಮನೋಹರಾ ನಾಮ ಭೂತೈರ್ನಾನಾವಿಧೈರ್ಯುತಾ ॥ ೧೬ ॥

ಪುಷ್ಪೈರ್ಧರ್ಮ್ಯೈಶ್ಚ ವಿವಿಧೈರ್ವನೈರಾಶ್ರಮಸಂಸ್ಥಿತೈಃ ।
ಪ್ರಾರ್ಥ್ಯತೇ ದೇವಲೋಕೋಽಯಂ ಸ ಸ್ವರ್ಗ ಇತಿ ಕೀರ್ತಿತಃ ॥ ೧೭ ॥

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ಭುವನಕೋಶೇಷ್ಟದಿಕ್ಪಾಲ
ಪುರೀನಿರೂಪಣಂ ನಾಮ ಷಟ್ಸಪ್ತತಿತಮೋಽಧ್ಯಾಯಃ

---

೧೪. ಆರನೆಯ ವಾಯುವ್ಯದಿಕ್ಕಿನಲ್ಲಿ ಶುದ್ಧವತಿಗುತ್ತರದಲ್ಲಿ ಸರ್ವಗುಣಾಧಿಕವಾದ, ವಾಯುದೇವನ ಗಂಧವತಿಯೆಂಬ ಪಟ್ಟಣವು ಹೆಸರುಗೊಂಡಿರುವುದು.

೧೫. ಅದರಿಂದಾಚೆಗೆ ಉತ್ತರದಿಕ್ಕಿನಲ್ಲಿ ಯಕ್ಷಾಧಿಪನಾದ ಕುಬೇರನ ಮಹೋದಯವೆಂಬ ಹೆಸರಿನ ವೈಡೂರ್ಯವೇದಿಕೆಯ ಶುಭಕರವಾದ ಪಟ್ಟಣವು ಮನೋಹರವಾಗಿದೆ.

೧೬. ಹೀಗೆಯೇ ಎಂಟನೆಯ ಈಶಾನ್ಯದಲ್ಲಿ ನಾನಾವಿಧಭೂತಗಳಿಂದ ಕೂಡಿದ ಮನೋಹರಾ ಎಂಬ ಮಹಾತ್ಮನಾದ ಈಶಾನದೇವನ ಪಟ್ಟಣವಿರುವುದು.

೧೭. ಬಗೆಬಗೆಯ ವನಗಳಿಂದಲೂ, ಹೂಗಳಿಂದಲೂ, ಒಪ್ಪುತ್ತ ಆಶ್ರಮಗಳಿಂದ ಪ್ರಾರ್ಥಿಸಲ್ಪಡುವ ಈ ದೇವಲೋಕವು ಸ್ವರ್ಗವೆನಿಸಿಕೊಂಡಿರುವುದು.

ಅಧ್ಯಾಯದ ಸಾರಾಂಶ—ಮೇರುಪರ್ವತದಮೇಲೆ ಪೂರ್ವವೇ ಮೊದಲಾದ ಎಂಟು ದಿಕ್ಕುಗಳಲ್ಲೂ ಇರುವ ಇಂದ್ರನೇ ಮೊದಲಾದ ಅಷ್ಟದಿಕ್ಪಾಲಕರ ರಾಜಧಾನಿಗಳನ್ನು ಹೇಳಿದೆ. ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಎಪ್ಪತ್ತಾರನೆಯ ಅಧ್ಯಾಯ.

॥ ಶ್ರೀಃ ॥

-x-

ಸಪ್ತಸಪ್ತತಿತಮೋಽಧ್ಯಾಯಃ

ಅಥ ಮೇರು ವರ್ಣನಂ

॥ ರುದ್ರ ಉವಾಚ ॥

ಯದೇತತ್ಕರ್ಣಿಕಾಮೂಲಂ ಮೇರೋರ್ಮಧ್ಯಂ ಪ್ರಕೀರ್ತಿತಂ ।
ತದ್ಯೋಜನಸಹಸ್ರಾಣಿ ಸಂಖ್ಯಯಾ ಮಾನತಃ ಸ್ಮೃತಂ ॥ ೧ ॥

ಚತ್ವಾರಿಂಶತ್ತಥಾ ಚಾಷ್ಟೌ ಸಹಸ್ರಾಣಿ ತು ಮಂಡಲೈಃ ।
ಶೈಲರಾಜಸ್ಯ ತತ್ತತ್ರ ಮೇರುಮೂಲಮಿತಿ ಸ್ಮೃತಂ ॥ ೨ ॥

ತೇಷಾಂ ಗಿರಿಸಹಸ್ರಾಣಾಮನೇಕಾನಾಂ ಮಹೋಚ್ಛ್ರಯಃ ।
ದಿಗಷ್ಟೌ ಚ ಪುನಸ್ತಸ್ಯ ಮರ್ಯಾದಾಪರ್ವತಾಶ್ಶುಭಾಃ ॥ ೩ ॥

ಎಪ್ಪತ್ತೇಳನೆಯ ಅಧ್ಯಾಯ

ಮೇರುವರ್ಣನೆ

೧. ರುದ್ರ— ಭೂಪದ್ಮಕರ್ಣಿಕೆಯ ಮೂಲ (ಬುಡ)ವು ಮೇರುವಿನ ಮಧ್ಯವೆನಿಸುವುದು. ಅದು ಆಳತೆಯಲ್ಲಿ ಸಾವಿರಯೋಜನವೆಂದು ಹೇಳಿದೆ.

೨. ಪರ್ವತರಾಜನಾದ ಆ ಮೇರುವಿನ ಮೂಲದ ಸುತ್ತಳತೆಯು ನಲವತ್ತೆಂಟು ಸಾವಿರವೆಂದು ಹೇಳಿದೆ.

೩. ಮೇರುವಿಗೆ ಸೇರಿದ ಸಾವಿರಾರು ಗಿರಿಗಳಲ್ಲಿ ಹಲವು ಹೆಚ್ಚು ಎತ್ತರವಾಗಿವೆ. ಮೇರುವಿನ ಎಂಟು ದಿಕ್ಕುಗಳಲ್ಲೂ ಶುಭಕರವಾದ ಮರ್ಯಾದಾ (ಉಪ) ಪರ್ವತಗಳಿವೆ.

ಜಠರೋ ದೇವಕೂಟಶ್ಚ ಪೂರ್ವಸ್ಯಾಂ ದಿಶಿ ಪರ್ವತೌ ।
ಮರ್ಯಾದಾಪರ್ವತಾನೇತಾನಷ್ಟಾವಾಹುರ್ಮನೀಷಿಣಃ ॥ ೪ ॥

ಯೋಽಸೌ ಮೇರುರ್ದ್ವಿಜಶ್ರೇಷ್ಠಾಃ ಪ್ರೋಕ್ತಃ ಕನಕಪರ್ವತಃ ।
ದಿಕ್ ಸ್ಥಾನಸ್ಯ ತು ವಕ್ಷ್ಯಾಮಿ ಶೃಣುಧ್ವಂ ಗದತಸ್ತತಃ ॥ ೫ ॥

ಮರ್ಯಾದಾಯಾಸ್ತು ಚತ್ವಾರೋ ಮೇರೋರಗ್ರಂ ಚತುರ್ದಶ ।
ಯೇನಾಚಚಾಲ ವಿಷ್ಟಬ್ಧಾ ಸಪ್ತದ್ವೀಪವತೀ ಮಹೀ ॥ ೬ ॥

ದಶಯೋಜನಸಾಹಸ್ರಂ ವ್ಯಾಯಾಮಸ್ತೇಷು ಶಂಕ್ಯತೇ ।
ತಿರ್ಯಗೂರ್ಧ್ವಂ ಚ ರಚಿತಾ ಹರಿತಾಲತಲೈರ್ವೃತಾ ॥ ೭ ॥

ಮನಶಿಶಿಲಾದರೀಭಿಶ್ಚ ಸುವರ್ಣಮಣಿಚಿತ್ರಿತಾ ।
ಅನೇಕಸಿದ್ಧಭವನೈಃ ಕ್ರೀಡಾಸ್ಥಾನೈಶ್ಚ ಸಪ್ರಭಾ ॥ ೮ ॥

---

೪. ಮೇರುವಿನ ಪೂರ್ವದಿಕ್ಕಿನಲ್ಲಿ ಜಠರ, ದೇವಕೂಟ ಎಂಬ ಉಪಪರ್ವತಗಳಿವೆ. ವಿದ್ವಾಂಸರು ಈ ಉಪಪರ್ವತಗಳು ಎಂಟೆಂದು ಹೇಳುವರು.

೫ ಬ್ರಾಹ್ಮಣೋತ್ತಮರೇ, ಯಾವ ಮೇರುವನ್ನು ಕನಕಪರ್ವತವೆಂದು ಹೇಳಿದೆನೋ ಅದರ ದಿಕ್ ಸ್ಥಾನಗಳನ್ನು ಹೇಳುತ್ತೇನೆ. ಕೇಳಿ.

೬. ಸಪ್ತದ್ವೀಪಗಳಿಂದ ಕೂಡಿ ಸ್ಥಿರವಾಗಿರುವ ಭೂಮಿಯು ಅಲುಗದಿರುವಂತೆ ಮೇರುವಿನ ನಾಲ್ಕು ದಿಕ್ಕುಗಳಲ್ಲೂ ಪಾದ (ಮರ್ಯಾದಾ) ಪರ್ವತಗಳು ನಾಲ್ಕೂ, ಹದಿನಾಲ್ಕು ಶಿಖರಗಳೂ ಇವೆ.

೭-೮. ಅವು ಹತ್ತುಸಾವಿರ ಯೋಜನ (ಉದ್ದ) ಎತ್ತರವುಳ್ಳವೆಂದು ತೋರುತ್ತದೆ. ಅವು ಇರುವ ಭೂಮಿಯು ಅರಿದಳದ ಪ್ರದೇಶಗಳಿಂದಲೂ ಮಣಿಶಿಲೆಯ ಗುಹೆಗಳಿಂದಲೂ ಕೂಡಿ ಸುವರ್ಣಮಣಿಗಳಿಂದ ಅಲಂಕೃತವಾಗಿ ಹಲವು ಸಿದ್ಧಗೃಹಗಳಿಂದಲೂ, ವಿಹಾರಪ್ರದೇಶಗಳಿಂದಲೂ ಹೊಳೆಯುತ್ತದೆ.

ಪೂರ್ವೇಣ ಮಂದರಸ್ತಸ್ಯ ದಕ್ಷಿಣೇ ಗಂಧಮಾದನಃ ।
ವಿಪುಲಃ ಪಶ್ಚಿಮೇ ಪಾರ್ಶ್ವೇ ಸುಪಾರ್ಶ್ವಶ್ಚೋತ್ತರೇ ಸ್ಥಿತಃ ॥ ೯ ॥

ತೇಷಾಂ ಶೃಂಗೇಷು ಚತ್ವಾರೋ ಮಹಾವೃಕ್ಷಾಃ ಪ್ರತಿಷ್ಠಿತಾಃ ।
ದೇವದೈತ್ಯಾಪ್ಸರೋಭಿಶ್ಚ ಸೇವಿತಾಶ್ಚ ಸಮೃದ್ಧಿಭಿಃ ॥ ೧೦ ॥

ಮಂದರಸ್ಯ ಗಿರೇಃ ಶೃಂಗೇ ಕದಂಬೋ ನಾಮಪಾದಪಃ ॥ ೧೧ ॥

ಪ್ರಲಂಬಶಾಖಾಶಿಖರಕದಂಬಶ್ಚೈವ ಪಾದಪಃ ।
ಮಹಾಕುಂಭಪ್ರಮಾಣೈಶ್ಚ ಪುಷ್ಪೈರ್ವಿಕಚಕೇಸರೈಃ ।
ಮಹಾಗಂಧಮನೋಜ್ಞೈಶ್ಚ ಶೋಭಿತಸ್ಸರ್ವಕಾಲಜಃ ॥ ೧೨ ॥

ಸಮಂತಾದ್ವೈ*ಪರಿವೃತೋ ಭವನೈ+ರ್ಭೂತಭಾವನೈಃ ।
ಸಹಸ್ರಾ೧ದಧಿಕೈಃ ಸೋಥ ಗಂಧೇನಾಪೂರಯನ್ದಿಶಃ ॥ ೧೩ ॥

---

೯. ಮೇರುವಿನ ಪೂರ್ವಭಾಗದಲ್ಲಿ ಮಂದರವೂ, ಅದರ ದಕ್ಷಿಣದಲ್ಲಿ ಗಂಧಮಾದನವೂ, ಪಶ್ಚಿಮದಲ್ಲಿ ವಿಪುಲವೂ, ಉತ್ತರದಲ್ಲಿ ಸುಪಾರ್ಶ್ವವೂ ಪಾದ ಪರ್ವತಗಳಾಗಿವೆ.

೧೦. ಅವುಗಳ ಶಿಖರಗಳಲ್ಲಿ ಬೇಕಾದಷ್ಟುಜನ ದೇವದೈತ್ಯಾಪ್ಸರರು ಸೇವಿಸುವ ನಾಲ್ಕು ಮಹಾವೃಕ್ಷಗಳಿವೆ.

೧೧. ಮಂದರಗಿರಿಯ ಶಿಖರದಲ್ಲಿ ಕದಂಬವೆಂಬ ವೃಕ್ಷವಿರುವುದು.

೧೨. ಆ ಕದಂಬವೃಕ್ಷವು ಬಹಳ ಉದ್ದವಾದ ಕೊಂಬೆಗಳುಳ್ಳುದಾಗಿ, ಯಾವಾಗಲೂ ಅರಳಿದ ಕೇಸರಗಳುಳ್ಳವಾಗಿ ಸುಗಂಧದಿಂದ ಮನೋಹರಗಳಾದುವೂ, ದೊಡ್ಡ ಕೊಡಗಳಷ್ಟು ಗಾತ್ರದವೂ ಆದ ಹೂಗಳಿಂದ ಸೊಗಸುತ್ತಿರುವುದು.

೧೩–೧೪. ಸಾವಿರಕ್ಕಿಂತಲೂ ಹೆಚ್ಚಾಗಿರುವ ಭೂತಭಾವನಗಳಾದ ಆಶ್ರಯ ಅಥವಾ ಗೃಹಗಳಿಂದ ಎಲ್ಲಾ ಕಡೆಯೂ ಪರಿವೃತವಾಗಿ ಸುಗಂಧಗಳಿಂದ ದಿಕ್ಕು

---

* ಸಮಸೇನಾ + ಭುವನೈಃ ೧ ಸಹಸ್ರಮಧಿಕೈಃ (ಬೊಂ) ಸಹಸ್ರಮಧಿಕಂ (ಕ)

ಭದ್ರಾಶ್ವೋ ನಾಮ ವೃಕ್ಷೋಽಯಂ ವರ್ಷೇಽಸ್ಮಿನ್ಕೇತುಸಂಭವಃ |
ಕೀರ್ತಿಮಾನ್ರೂಪವಾನ್ ಶ್ರೀಮಾನ್ ಮಹಾಪಾದಪಪಾದಪಃ ॥ ೧೪ ॥

ಯತ್ರ ಸಾಕ್ಷಾದ್ಧೃಷೀಕೇಶಃ ಸಿದ್ಧಮಂತ್ರೈರ್ನಿಷೇವಿತಃ |
ತಸ್ಯ ಲೋಕಸಹಸ್ರಸ್ಯ ತಥಾಽಶ್ವವದನೋ ಹರಿಃ ॥ ೧೫ ॥

ಪೃಷ್ಟವಾಂಶ್ಚಾಮರಃಶ್ರೇಷ್ಠಃ ಸ ಹಿ ಸಾನುಂ ಪುನಃ ಪುನಃ |
ತೇನ ಚಾಲೋಕಿತಂ ವರ್ಷಂ ಸರ್ವ*ದ್ವೀಪೇ ಚ ನಾಯಕಃ ||
ಯಸ್ಯ ನಾಮ್ನಾ ಸಮಾಖ್ಯಾತೋ ಭದ್ರಾಶ್ವೇತಿ ನ ಸಂಶಯಃ ॥ ೧೬ ॥

ದಕ್ಷಿಣಸ್ಯಾಪಿ ಶೈಲಸ್ಯ ಶಿಖರೇ ದ್ವೇ ಚ ಸೇವಿತೇ |
ಜಂಬೂವೃಕ್ಷಃ‡ ಪುಷ್ಪಫಲಮಹಾಶಾಖೋಪಶೋಭಿತಃ ॥ ೧೭ ॥

ಗಳನ್ನು ತುಂಬುತ್ತ ಇರುವ ಭದ್ರಾಶ್ವವೆಂಬ ವೃಕ್ಷವು ಆ ಭದ್ರಾಶ್ವವರ್ಷ (ಭೂಭಾಗ)ದಲ್ಲಿ ಧ್ವಜದಂತೆ ಇದೆ. ಮಹಾವೃಕ್ಷವಾದ ಅದು ಸುಂದರರೂಪವುಳ್ಳದೂ, ಕಾಂತ್ಯೈಶ್ವರ್ಯಗಳುಳ್ಳದೂ, ಕೀರ್ತಿಯುಳ್ಳದೂ, ಆಗಿದೆ.

೧೫–೧೬. ಅಲ್ಲಿಯೇ ಸಾಕ್ಷಾದ್ವಿಷ್ಣುವು ಹಯಗ್ರೀವನಾಗಿ ಸಾವಿರಾರು ಜನರಿಂದ ಅಥವಾ ಲೋಕದಿಂದ ಸಿದ್ಧಮಂತ್ರಗಳಿಂದ ಸೇವಿತನಾದನು. ಅಲ್ಲದೆ ಆ ದೇವೋತ್ತಮನು, ಆ ಸಾನುಪ್ರದೇಶವನ್ನು ಮತ್ತೆ ಮತ್ತೆ ಕೇಳಿದನು. ಆ ಜಂಬೂದ್ವಿಪದಲ್ಲೆಲ್ಲಾ ಶ್ರೇಷ್ಠವಾಗಿಯೂ, ಆ ಅಶ್ವಮುಖನಾದ ಹರಿಯು ನೋಡಿದುದಾಗಿಯೂ ಇರುವ ಆ ವರ್ಷವು ಭದ್ರಾಶ್ವವೆಂದು ಆ ದೇವನ ಹೆಸರಿನಿಂದಲೇ ಪ್ರಸಿದ್ಧವಾಯಿತೆಂಬುದರಲ್ಲಿ ಸಂದೇಹವಿಲ್ಲ.

೧೭. ದಕ್ಷಿಣಶೈಲಶಿಖರದಲ್ಲಿಯೂ ಎರಡು ಸೇವಿಸತಕ್ಕವು. ಹೂಗಳಿಂದಲೂ, ಹಣ್ಣುಗಳಿಂದಲೂ ತುಂಬಿರುವ ಕೊಂಬೆಗಳಿಂದೊಪ್ಪುತ್ತಿರುವ ದೊಡ್ಡ ನೇರಿಲೆಯ ಮರವು ಅವುಗಳಲ್ಲೊಂದು.

---

೧. ವರ್ಷದ್ಧಿಃ　　೨. ಸ್ವವದನೋ

* ದ್ವಿಪದನಾಯಕಃ　　‡ ಸಂಘಃ

ಸದಾಹ್ಯತಿ+ಸಮಾನಾನಿ ಸ್ವಾದೂನಿ ಸುರಭೀಣಿ ಚ ।
ಫಲಾನ್ಯಮೃತಕಲ್ಪಾನಿ ಪತಂತಿ ಗಿರಿಮೂರ್ಧನಿ ॥ ೧೮ ॥

ತಸ್ಮಾದ್ಗಿರಿವರಶ್ರೇಷ್ಠಾತ್ಫಲಪ್ರಸರವಾಹಿನೀ ॥ ೧೯ ॥

ತತ್ರ ಜಾಂಬೂನದಂ ನಾಮ ಸುವರ್ಣಮನಲಪ್ರಭಂ ।
ದೇವಾಲಂಕಾರಮತುಲಂ ಅತಿಸುಂದರವರ್ಚಸಂ ॥ ೨೦ ॥

ದೇವದಾನವಗಂಧರ್ವಯಕ್ಷರಾಕ್ಷಸಗುಹ್ಯಕಾಃ ।
ಪಿಬಂತ್ಯಮೃತಕಲ್ಪಂ ಚ ಪ್ರೀತ್ಯಾ ಜಂಬೂಫಲಾಸವಂ ॥ ೨೧ ॥

ಮೋಕ್ಷತೇ ದಕ್ಷಿಣೇ ವರ್ಷೇ ಜಂಬೂಲೋಕೇತಿವಿಶ್ರುತಾ ।
ಯಸ್ಯಾ ನಾಮ್ನಾ ಸಮಾಖ್ಯಾತಾ ಜಂಬೂದ್ವೀಪೇತಿ ಮಾನವೈಃ ॥ ೨೨ ॥

---

೧೮. ಆ ಮರದಿಂದ ಯಾವಾಗಲೂ, ಒಂದೇ ಸಮವಾಗಿ ಅಮೃತದಂತೆ ಸಿಹಿಯಾಗಿಯೂ, ಸುವಾಸನೆಯುಳ್ಳವಾಗಿಯೂ ಇರುವ ಹಣ್ಣುಗಳು ಗಿರಿಶಿಖರದಲ್ಲಿ ಬೀಳುತ್ತವೆ.

೧೯. ಆ ಉತ್ತಮಗಿರಿವರದಿಂದ ಹರಿಯುವ ಜಂಬೂಫಲರಸದ (ನೇರಿಳೆ ಹಣ್ಣಿನರಸದ) ವಿಶಾಲವಾದ ನದಿಯು ಎರಡನೆಯದು.

೨೦. ಅಲ್ಲಿ ದೇವತೆಗಳಿಗೂ ಅಲಂಕಾರವಾಗುವ ಅತಿಸುಂದರವಾದ ತೇಜವೂ, ಅಗ್ನಿಪ್ರಭೆಯೂ ಉಳ್ಳ ಅಸದೃಶವಾದ ಜಾಂಬೂನದವೆಂಬ ಹೆಸರಿನ ಸುವರ್ಣವು ಇರುವುದು.

೨೧. ದೇವದಾನವಗಂಧರ್ವಯಕ್ಷರಾಕ್ಷಸಗುಹ್ಯಕರೆಲ್ಲರೂ ಅಮೃತದಂತೆ ಇರುವ ನೇರಿಳೆಯ ಹಣ್ಣಿನ ರಸವನ್ನು ಪ್ರೀತಿಯಿಂದ ಕುಡಿಯುವರು.

೨೨. ಲೋಕದಲ್ಲಿ ಅತಿಪ್ರಸಿದ್ಧವಾಗಿರುವ ದೊಡ್ಡದಾದ (ನೇರಿಳೆ)ಜಂಬೂವೃಕ್ಷವೂ, ನದಿಯೂ ಆ ವರ್ಷದ ದಕ್ಷಿಣ ಭಾಗದಲ್ಲಿದೆ. ಅದರ ಹೆಸರಿನಿಂದಲೇ ಆ ದ್ವೀಪವನ್ನು ಜನರು ಜಂಬೂದ್ವೀಪವೆಂದು ಕರೆಯುವರು.

\+ ಸನಾಮಾನಿ

ವಿಪುಲಸ್ಯ ಚ ಶೈಲಸ್ಯ ದಕ್ಷಿಣೇನ ಮಹಾತ್ಮನಃ ।
ಜಾತಿಶೃಂಗೋತಿಸುಮಹಾನಶ್ವತ್ಥಶ್ಚೇತಿ ಪಾದಪಃ ।
ಮಹೋಚ್ಛ್ರಾಯೋ ಮಹಾಸ್ಕಂಧೋ ನೈಕಸತ್ತ್ವಗುಣಾಲಯಃ ॥ ೨೩ ॥

ಕುಂಭಪ್ರಮಾಣೈ ರುಚಿರೈಃ ಫಲೈಸ್ಸರ್ವರ್ತುಕೈಶ್ಶುಭೈಃ ।
ಸಕೇತುಕೇತುಮಾಲೋಕ್ಯ ದೇವಗಂಧರ್ವಸೇವಿತೈಃ ॥ ೨೪ ॥

ಕೇತುಮಾಲೇತಿ ಯಃ ಖ್ಯಾತೋ ನಾಮ್ನಾ ತತ್ರ ಪ್ರಕೀರ್ತಿತಃ ।
ತನ್ನಿಬೋಧತ ವಿಪ್ರೇಂದ್ರಾ ನಿರುಕ್ತಂ ತೇನ ವರ್ಷಕೇ ॥ ೨೫ ॥

ಕ್ಷೀರೋದಮಥನೇ ವೃತ್ತೇ ಮಾಲಾಂ ಸ್ಕಂಧನಿಷೇವಿತಾಂ ।
ಇಂದ್ರೇಣ ಚೈತ್ಯ ಕೇತೋಶ್ಚ ಕೇತುಮಾಲಸ್ತತಃ ಸ್ಮೃತಃ ॥ ೨೬ ॥

ತೇನ ತಚ್ಚಿಹ್ನಿತಂ ವರ್ಷಂ ಕೇತುಮಾಲೇತಿ ವಿಶ್ರುತಂ ॥ ೨೭ ॥

---

೨೩. ವಿಸ್ತಾರವಾದ ಆ ಮಹಾಪರ್ವತದ ದಕ್ಷಿಣದಲ್ಲಿ, ಜಾತಿಯಲ್ಲಿ ಉತ್ಕೃಷ್ಟವೂ, ಅತಿಮಹಿಮೆಯುಳ್ಳದೂ, ಅತ್ಯುನ್ನತವೂ, ದಪ್ಪವಾದ ಪ್ರಕಾಂಡ ವುಳ್ಳದೂ, ಹಲವು ಪ್ರಾಣಿಗಳಿಗೂ, ಗುಣಗಳಿಗೂ ನೆಲೆಯೂ ಆದ ಅಶ್ವತ್ಥವೃಕ್ಷ (ಅಂಳಿಯಮರ)ವು ಇದೆ

೨೪. ಆ ಮರದಲ್ಲಿ ಎಲ್ಲಾ ಋತುಗಳಲ್ಲೂ, ಮಾಲೆಯ ಚಿಹ್ನೆಯಿಂದ ಕೂಡಿದ ಅಲ್ಲಿಯ ಧ್ವಜವನ್ನು ನೋಡಿ ದೇವಗಂಧರ್ವರೂ ಸೇವಿಸುವ, ಮನೋಹರವೂ, ರುಚಿಕರವೂ, ಶುಭವೂ ಆದ ಕೊಡದಷ್ಟು ಗಾತ್ರದ ಹಣ್ಣುಗಳಿರುವುವು.

೨೫. ಬ್ರಾಹ್ಮಣೋತ್ತಮರೇ, ಅಲ್ಲಿ ಕೇತುಮಾಲೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ವರ್ಷಕ್ಕೆ ಆ ಹೆಸರು ಏತರಿಂದ ಬಂದಿತೆಂಬುದನ್ನು ಸರಿಯಾಗಿ ತಿಳಿಯಿರಿ.

೨೬–೨೭. ಕ್ಷೀರಸಮುದ್ರಮಥನವು ನಡೆಯಲಾಗಿ ಇಂದ್ರನು ಅಲ್ಲಿಗೆ ಬಂದು, ತನ್ನ ಕತ್ತಿನಲ್ಲಿರುವ ಮಾಲೆಯನ್ನು ಅಲ್ಲಿದ್ದ ಒಂದು ಕೇತುವಿನ (ಧ್ವಜದ) ಮೇಲಿರಿಸಿದನು. ಆದುದರಿಂದ ಬಳಿಕ ಅದು ಕೇತುಮಾಲೆಯೆನಿಸಿಕೊಂಡಿತು. ಬಳಿಕ ಆ ಕೇತುಮಾಲೆಯ ಚಿಹ್ನೆಯುಳ್ಳ ವರ್ಷವೂ ಕೇತುಮಾಲೆಯೆಂದು ಪ್ರಸಿದ್ಧವಾಯಿತು.

ಸುಪಾರ್ಶ್ವಸ್ಯೋತ್ತರೇ ಶೃಂಗೇ ವಟೋ ನಾಮ ಮಹಾದ್ರುಮಃ ।
ನ್ಯಗ್ರೋಧೋ ವಿಪುಲಸ್ಕಂಧೋ ಯಸ್ತ್ರಿಯೋಜನಮಂಡಲಃ ॥
ಮಾಲ್ಯಮಾನಃ ಕಲಾಪೈಶ್ಚ ವಿವಿಧೈಸ್ತು ಸಮಂತತಃ ॥ ೨೮ ॥

ಶಾಖಾಭಿರ್ಲಂಬಮಾನಾಭಿಃ ಸೇವಿತೋ ಸಿದ್ಧಸೇವಿತೈಃ ।
ಪ್ರಲಂಬಕುಂಭಸದೃಶೈಃ ಹೇಮವರ್ಣಫಲೈಸ್ಸದಾ ॥ ೨೯ ॥

ಸದೃಸ್ತೇ ವೈ ತತಸ್ತಸ್ಮಿನ್ವಟವೃಕ್ಷಪ್ರಕಾಶಕಾಃ ।
ಸನತ್ಕುಮಾರಾವರಜಾ ಮಾನಸಾ ಬ್ರಹ್ಮಣಃ ಸುತಾಃ ॥ ೩೦ ॥

ಸಪ್ತ ತತ್ರ ಮಹಾಭಾಗಾ ಕುರವೋ ನಾಮ ವಿಶ್ರುತಾಃ ॥ ೩೧ ॥

ತತ್ರ ಸ್ಥಿರಗತೈಃ ಕ್ಷಾಂತೈಃ ನೀರಜಸ್ಕೈರ್ಮಹಾತ್ಮಭಿಃ ।
ಅಬ್ದೈಃ ಸ್ವಪಕ್ಷಪರ್ಯಂತೈಃ ಖಂ ಪ್ರಾಪ್ತಾಸ್ತೇ ಸನಾತನಾಃ ॥ ೩೨ ॥

೨೮-೨೯. ಸುಪಾರ್ಶ್ವಪರ್ವತದ ಉತ್ತರ ಶಿಖರದಲ್ಲಿ ವಟವೆಂಬ, ದಪ್ಪವಾದ ಕಾಂಡ ಪ್ರಕಾಂಡಗಳುಳ್ಳದೂ, ಮೂರು ಯೋಜನ ಸುತ್ತಳತೆಯುಳ್ಳದೂ ಸುತ್ತಲೂ ಕೊಂಬೆಗಳಿಂದಲೂ, ಅವುಗಳಿಂದ ಜೋಲುತ್ತಿರುವ ಬಗೆ ಬಗೆಯ ಬಿಳಲುಗಳ ಸಮೂಹವೆಂಬ ಮಾಲೆಗಳಿಂದ ಅಲಂಕೃತವಾದುದೂ ಆಗಿರುವ ಆಲದಮರವಿದೆ. ಅದು ದೊಡ್ಡದಾದ ಕಲಶದಂತಿರುವ, ಸಿದ್ಧರು ಸೇವಿಸುವ, ಬಂಗಾರದ ಬಣ್ಣದ ಹಣ್ಣುಗಳಿಂದ ಯಾವಾಗಲೂ ತುಂಬಿರುವುದು

೩೦. ಈಗ ಆ ವಟವೃಕ್ಷವನ್ನು ಆಶ್ರಯಿಸಿ, ಅದನ್ನು ಪ್ರಕಾಶಪಡಿಸಿರುವವರು ಬ್ರಹ್ಮನ ಮಾನಸಪುತ್ರರೂ, ಸನತ್ಕುಮಾರನ ತಮ್ಮಂದಿರೂ ಆದ ಸನತ್ಸುಜಾತಾದಿಗಳು.

೩೧. ಅಲ್ಲಿ ಕುರುಗಳೆಂದು ಪ್ರಸಿದ್ಧರಾದ ಮಹಾಭಾಗ್ಯಶಾಲಿಗಳು ಏಳು ಜನ.

೩೨. ಸನಾತನರಾದ ಅವರು ತಮ್ಮ ಕಾಲವಾದ ಬಳಿಕ ಆ ಕುರುವರ್ಷದಲ್ಲಿದ್ದ ಸ್ಥಿರವಾದ ನಡತೆಯುಳ್ಳವರೂ, ಕ್ಷಮಾಶೀಲರೂ, ದೋಷರಹಿತರೂ ಆದ ಮಹಾತ್ಮರೇ ಮೊದಲಾದ ತಮ್ಮ ಕಡೆಯವರೆಲ್ಲರೊಂದಿಗೆ ಸ್ವರ್ಗವನ್ನು ಸೇರಿದರು.

ತೇಷಾಂ ನಾಮಾಂಕಿತಂ ವರ್ಷಂ ಸಪ್ತತಿರ್ವೈ ಮಹಾತ್ಮನಾಂ ।
ದಿವಿ ದೇವೇಷು ವಿಖ್ಯಾತಾ ಭರ್ತಾರಃ ಕುರವಸ್ಸದಾ ॥ ೩೩ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಮೇರುವರ್ಣನಂ ನಾಮ ಸಪ್ತಸಪ್ತತಿತಮೋಽಧ್ಯಾಯಃ

---

೩೩. ಮಹಾತ್ಮರಾದ ಅವರ ಹೆಸರನ್ನೇ ಪಡೆದಿರುವ ವರ್ಷವು ಎಂದರೆ ಕುರುವರ್ಷವೆಂಬುದು ಎಪ್ಪತ್ತು. ಕುರುರಾಜರು ಯಾವಾಗಲೂ, ಸ್ವರ್ಗದಲ್ಲಿ ದೇವತೆಗಳಲ್ಲಿ ಪ್ರಸಿದ್ಧರಾಗಿರುವರು.

ಅಧ್ಯಾಯದ ಸಾರಾಂಶ :—

ಭೂಮಿಯೆಂಬ ಕಮಲದ ಕರ್ಣಿಕೆಯಂತಿರುವ ಮೇರುಪರ್ವತದ ಸನ್ನಿವೇಶ, ಪರಿಮಾಣ, ರೂಪ, ಮಹಿಮೆ ಇವುಗಳನ್ನೂ, ಅದರ ಮರ್ಯಾದಾ ಪರ್ವತಗಳನ್ನೂ(ಉಪಪರ್ವತಗಳನ್ನೂ) ಅವುಗಳಲ್ಲಿರುವ ಮಹಾವೃಕ್ಷಗಳನ್ನೂ, ಭದ್ರಾಶ್ವಕೇತುಮಾಲಾದಿವರ್ಷಗಳ ವಿಚಾರವನ್ನೂ ಹೇಳುವಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಎಪ್ಪತ್ತೇಳನೆಯ ಅಧ್ಯಾಯ.

|| ಶ್ರೀಃ ||

-x-

ಅಷ್ಟಸಪ್ತತಿತಮೋಽಧ್ಯಾಯಃ

ಅಥ ಮಂದರಾದಿಪರ್ವತಚತುಷ್ಟಯವರ್ಣನಂ

|| ರುದ್ರ ಉವಾಚ ||

ತಥಾ ಚತುರ್ಣಾಂ ವಕ್ಷ್ಯಾಮಿ ಶೈಲೇಂದ್ರಾಣಾಂ ಯಥಾಕ್ರಮಂ |
ಅನುವಿಂಧ್ಯಾನಿ ರಮ್ಯಾಣಿ ವಿಹಂಗೈಃ ಕೂಜಿತಾನಿ ಚ || ೧ ||

ಅನೇಕಪಕ್ಷಿಯುಕ್ತಾತ್ತಶೃಂಗಾಣಿ ಸುಬಹೂನಿ ಚ |
ದೇವಾನಾಂ ದಿವ್ಯನಾರೀಭಿಃ ಸಮಂ ಕ್ರೀಡಾಮಯಾನಿ ಚ || ೨ ||

ಕಿನ್ನರೈಃ ಹಿತಘುಷ್ಟಾನಿ ಶೀತಮಂದಸುಗಂಧಿಭಿಃ |
ಪವನೈಃ ಸೇವ್ಯಮಾನಾನಿ ರಮಣೀಯತರಾಣಿ ಚ || ೩ ||

ಎಪ್ಪತ್ತೆಂಟನೆಯ ಅಧ್ಯಾಯ

ಮಂದರವೇ ಮೊದಲಾದ ನಾಲ್ಕು ಪರ್ವತಗಳ ವರ್ಣನೆ.

೧-೩. ರುದ್ರ—ಇನ್ನು, ಅತಿ ಮನೋಹರಗಳೂ, ಪಕ್ಷಿಗಳ ಧ್ವನಿಗಳುಳ್ಳವೂ, ಬಗೆಬಗೆಯ ಹಕ್ಕಿಗಳುಳ್ಳ ಶಿಖರಗಳುಳ್ಳವೂ, ದೇವತೆಗಳು ದಿವ್ಯನಾರಿಯರೊಡನೆ ಕ್ರೀಡಿಸುವುವೂ, ಕಿನ್ನರರ ಗಾನದಿಂದ ಕೂಡಿದುವೂ, ಶೈತ್ಯಸೌರಭ್ಯಮಾಂದ್ಯಯುತವಾದ ಗಾಳಿ ಬೀಸುವುವೂ ಆದ ಮಂದರವೇ ಮೊದಲಾದ ನಾಲ್ಕು ಪರ್ವತಗಳನ್ನನುಸರಿಸಿರುವ ಹಲವು ಉಪಪರ್ವತವನಗಳನ್ನು ಹೇಳುವೆನು.

ಚತುರ್ದಿಕ್ಷು ವಿರಾಜಂತೇ ನಾಮತಃ ಶೃಣು ತಾ ನದೀಃ ।
ಪೂರ್ವೇ ಚೈತ್ರರಥಂ ನಾಮ ದಕ್ಷಿಣೇ ಗಂಧಮಾದನಂ ॥ ೪ ॥

ಪ್ರಭಾವೇಣ ಸುತೋಯಾನಿ ನವಖಂಡಯುತಾನಿ ಚ ।
ವನಖಂಡಾಂಸ್ತಥಾಕ್ರಮ್ಯ ದೇವತಾ ಲಲನಾಯುತಾಃ ॥ ೫ ॥

ಯತ್ರ ಕ್ರೀಡಂತಿ ಚೋದ್ದೇಶೇ ಮುದಾ ಪರಮಯಾ ಯುತಾಃ ।
ರತ್ನೌಘಕೀರ್ಣತೀರ್ಥಾನಿ ಮಹಾಪುಣ್ಯಜಲಾನಿ ಚ ॥ ೬ ॥

ಅನೇಕಜಲಯಂತ್ರೈಶ್ಚ ನಾದಿತಾನಿ ಮಹಾಂತಿ ಚ ।
ಶಾಖಾಭಿರ್ಲಂಬಮಾನಾಭಿರುಪಕ್ಷಿಪ್ತಕುಲಾಲಿಭಿಃ ॥ ೭ ॥

ಕಮಲೋತ್ಪಲಕಲ್ಹಾರಶೋಭಿತಾನಿ ಸರಾಂಸಿ ಚ ।
ಚತುರ್ಷು ತೇಷು ಗಿರಿಷು ನಾನಾಗುಣಯುತೇಷು ಚ ॥ ೮ ॥

---

೪. ನಾಲ್ಕು ದಿಕ್ಕುಗಳಲ್ಲಿಯೂ ಹೊಳೆಯುವ ನದಿಗಳ ಹೆಸರನ್ನು ಕೇಳಿ. ಪೂರ್ವದಲ್ಲಿ ಚೈತ್ರರಥವೂ, ದಕ್ಷಿಣದಲ್ಲಿ ಗಂಧಮಾದನವೂ ಇವೆ.

೫–೬. ಅವು ಮಹಿಮೆಯಿಂದ ಒಳ್ಳೆಯ ನೀರುಳ್ಳವೂ, ನವಖಂಡಗಳನ್ನೂ ಆಕ್ರಮಿಸಿರುವುವೂ, ಪರಮಸಂತೋಷದಿಂದ ವನಗಳಲ್ಲಿ ರಮಿಸುವ ದೇವವನಿತೆಯರಿಂದ ಕೂಡಿದುವೂ, ರತ್ನಸಮೂಹಗಳ ಮೆಟ್ಟಲುಗಳುಳ್ಳ ಮಹಾಪುಣ್ಯತೀರ್ಥವುಳ್ಳವೂ ಆಗಿವೆ.

೭–೮. ನಾನಾಗುಣಗಳಿಂದ ಕೂಡಿದ ಆ ನಾಲ್ಕು ಪರ್ವತಗಳಲ್ಲಿರುವ ಸರೋವರಗಳೂ, ದೊಡ್ಡವಾಗಿ ಅನೇಕ ಜಲಯಂತ್ರನಾದವುಳ್ಳವೂ, ದುಂಬಿಗಳ ಗುಂಪಿನಿಂದ ಕೂಡಿ ಮೇಲುಗಡೆ ಜೋಲುತ್ತಿರುವ ತೀರವೃಕ್ಷಗಳ ಕೊಂಬೆಗಳುಳ್ಳವೂ, ಕಮಲೋತ್ಪಲಕಲ್ಹಾರಪುಷ್ಪಗಳಿಂದೊಪ್ಪುವುವೂ ಆಗಿವೆ.

ಅರುಣೋದಂ ತು ಪೂರ್ವೇಣ ದಕ್ಷಿಣೇ ಮಾನಸಂ ಸ್ಥಿತಂ ।
ಅಸಿತೋದಂ ಪಶ್ಚಿಮೇ ಚ ಮಹಾಭದ್ರಂ ತಥೋತ್ತರೇ ॥
ಕುಮುದ್ವೈಃ ಶ್ವೇತಕಪಿಲ್ಯೈಃ ಕಡಾರೈರ್ಭೂಷಿತಾನಿ ಚ ॥ ೯ ॥

ಅರುಣೋದಸ್ಯ ಯೇ ಶೈಲಾಃ ಪ್ರಾಚ್ಯಾ ವೈ ನಾಮತಃ ಸ್ಮೃತಾಃ ।
ತಾನ್ಕೀರ್ತ್ಯಮಾನಾಂಸ್ತತ್ವೇನ ಶೃಣುಧ್ವಂ ಗದತೋ ಮಮ ॥ ೧೦ ॥

*ವಿಕಂಕೋ ಮಣಿಶೃಂಗಶ್ಚ ಸುಪಾತ್ರಶ್ಚೋಪಲೋ ಮಹಾನ್ ।
ಮಹಾನಿಲೋಥ ಕುಂಭಶ್ಚ ಸುಬಿಂದುರ್ಮದನಸ್ತಥಾ ॥ ೧೧ ॥

ವೇಣುನದ್ಧಃ ಸುಮೇದಾಶ್ಚ ನಿಷಧೋ ದೇವಪರ್ವತಃ ।
ಇತ್ಯೇತೇ ಪರ್ವತವರಾ ಪುಣ್ಯಾಶ್ಚ ಗಿರಯೋಽಪಿ ಚ ॥ ೧೨ ॥

ಸರಸೋ ಮಾನಸಸ್ಯೇಹ ದಕ್ಷಿಣೇನ ಮಹಾಚಲಾಃ ।
ಯೇ ಕೀರ್ತಿತಾ ಮಯಾ ತುಭ್ಯಂ ನಾಮತಸ್ತಾನ್ನಿಬೋಧ ಮೇ ॥ ೧೩ ॥

---

೯. ಪೂರ್ವದಲ್ಲಿ ಅರುಣೋದಸರೋವರವೂ, ದಕ್ಷಿಣದಲ್ಲಿ ಮಾನಸ ಸರೋವರವೂ, ಪಶ್ಚಿಮದಲ್ಲಿ ಅಸಿತೋದ ಸರೋವರವೂ ಉತ್ತರದಲ್ಲಿ ಮಹಾಭದ್ರ ಸರೋವರವೂ ಇವೆ. ಅವು ಬಿಳಿಯ ಕರಿಯ ಮತ್ತು ಗೋರೋಚನವರ್ಣದ ನೈದಿಲೆಗಳಿಂದೊಪ್ಪುವುವು.

೧೦. ಅರುಣೋದದ ಪೂರ್ವದಲ್ಲಿರುವ ಪರ್ವತಗಳ ಹೆಸರುಗಳನ್ನು ಸರಿಯಾಗಿ ಹೇಳುತ್ತೇನೆ. ಕೇಳಿ.

೧೧-೧೨. *ವಿಕಂಕ, ಮಣಿಶೃಂಗ, ಸುಪಾತ್ರ, ಉಪಲ, ಮಹಾನಿಲ, ಕುಂಭ, ಸುಬಿಂದು, ಮದನ, ವೇಣುನದ್ಧ, ಸುಮೇದ, ನಿಷಧ, ದೇವಪರ್ವತ ಇವೆಲ್ಲವೂ ಪುಣ್ಯಕರವಾದ ಉತ್ತಮಪರ್ವತಗಳು.

೧೩. ಇನ್ನು ಮಾನಸಸರೋವರಕ್ಕೆ ದಕ್ಷಿಣದಲ್ಲಿವೆಯೆಂದು ಹೇಳಿದ ಮಹಾಪರ್ವತಗಳ ಹೆಸರನ್ನು ಹೇಳುತ್ತೇನೆ. ಕೇಳಿ.

---

* ಭಾಗವತ, ದೇವೀ ಭಾಗವತಗಳಲ್ಲಿ ಹೇಳಿರುವ ಹೆಸರುಗಳಿಗೂ, ಇಲ್ಲಿ ಹೇಳಿರುವ ಹೆಸರುಗಳಿಗೂ ವ್ಯತ್ಯಾಸವಿದೆ.

ಶೈಲಸ್ತ್ರಿಶಿಖರಶ್ಚೈವ ಶಿಶಿರಶ್ಚಾಚಲೋತ್ತಮಃ ।
ಕಪಿಶ್ಚ ಶತಮುಕ್ಷಶ್ಚ ತುರುಗಶ್ಚೈವ ಸಾನುಮಾನ್ ॥ ೧೪ ॥

ತಾಮ್ರಾಹಶ್ಚ ವಿಷಶ್ಚೈವ ತಥಾ ಶ್ವೇತೋದನೋ ಗಿರಿಃ ।
ಸಮೂಲಶ್ಚೈವ ಸರಲೋ ರತ್ನಕೇತುಶ್ಚ ಪರ್ವತಃ ॥ ೧೫ ॥

ಏಕಮೂಲೋ ಮಹಾಶೃಂಗೋ ಗಜಮೂಲೋಽಪಿ ಶಾವಕಃ ।
ಪಂಚಶೈಲಶ್ಚ ಕೈಲಾಸೋ ಹಿಮವಾನಚಲೋತ್ತಮಃ ॥ ೧೬ ॥

ಪಶ್ಚಿಮೇ+ ಯೇ ಮಹಾಶೈಲಾಸ್ತಾನ್ವಕ್ಷ್ಯಾಮಿ ನಿಬೋಧತ ॥ ೧೭ ॥

ಕಪಿಲಃ ಪಿಂಗಲೋ ಭದ್ರಃ ಸರಸಶ್ಚ ಮಹಾಚಲಃ ।
ಕುಮುದೋ ಮಧುಮಾಂಶ್ಚೈವ ಗರ್ಜನೋ ಮರ್ಕಟಸ್ತಥಾ ॥ ೧೮ ॥

ಕೃಷ್ಣಶ್ಚ ಪಾಂಡವಶ್ಚೈವ ಸಹಸ್ರಶಿರಸಸ್ತಥಾ ।
ಪಾರಿಯಾತ್ರಶ್ಚ ಶೈಲೇಂದ್ರಃ ಶೃಂಗವಾನಚಲೋತ್ತಮಃ ॥ ೧೯ ॥

ಇತ್ಯೇತೇ ಪರ್ವತವರಾಃ ಶ್ರೀಮಂತಃ ಪಶ್ಚಿಮೇ ಸ್ಮೃತಾಃ ॥ ೨೦ ॥

೧೪-೧೬. ತ್ರಿಶಿಖರಪರ್ವತ, ಶಿಶಿರ, ಕಪಿ, ಶತಮುಕ್ಷ, ತುರಗಪರ್ವತ, ತಾಮ್ರಾಹ, ವಿಷ, ಶ್ವೇತೋದನಗಿರಿ, ಸಮೂಲ, ಸರಲ, ರತ್ನಕೇತು, ಏಕಮೂಲ, ಮಹಾಶೃಂಗ, ಗಜಮೂಲ, ಶಾವಕ, ಪಂಚಶೈಲ, ಕೈಲಾಸ, ಹಿಮವತ್ಪರ್ವತ ಇವು ದಕ್ಷಿಣದವು.

೧೭. ಪಶ್ಚಿಮದಲ್ಲಿರುವ ಮಹಾಶೈಲಗಳನ್ನು ಹೇಳುತ್ತೇನೆ ಕೇಳಿ.

೧೮-೨೦. ಕಪಿಲ, ಪಿಂಗಲ, ಭದ್ರ, ಸರಸ, ಕುಮುದ, ಮಧುಮಂತ, ಗರ್ಜನ, ಮರ್ಕಟ, ಕೃಷ್ಣ, ಪಾಂಡವ, ಸಹಸ್ರಶಿಖರ, ಪಾರಿಯಾತ್ರ, ಶೃಂಗವಂತ, ಎಂಬ ಶ್ರೀಮಂತಪರ್ವತಗಳು ಪಶ್ಚಿಮದವು.

+ ಉತ್ತರೇ ಎಂದು ಮುದ್ರಿತ ಪುಸ್ತಕಗಳಲ್ಲಿ ತಪ್ಪಾಗಿದೆ. ಇಲ್ಲಿಯೇ ೨೦ ನೆಯ ಶ್ಲೋಕದಲ್ಲಿ ಪಶ್ಚಿಮೇ ಎಂಬುದಾಗಿ ಇದೆ.

ಮಹಾಭದ್ರಸ್ಯ ಸರಸ ಉತ್ತರೇಣ ದ್ವಿಜೋತ್ತಮಾಃ ।
ಯೇ ಪರ್ವತಾಃ ಸ್ಥಿತಾ ವಿಪ್ರಾಃ ತಾನ್ವಕ್ಷ್ಯಾಮಿ ನಿಬೋಧತ ॥ ೨೧ ॥

ಹಂಸಕೂಟೋ ಮಹಾಶೈಲೋ ವೃಷಹಂಸಶ್ಚ ಪರ್ವತಃ ।
ಕಪಿಂಜಲಶ್ಚ ಶೈಲೇಂದ್ರ ಇಂದ್ರಶೈಲಶ್ಚ ಸಾನುಮಾನ್ ॥
ನೀಲಃ ಕನಕಶೃಂಗಶ್ಚ ಶತಶೃಂಗಶ್ಚ ಪರ್ವತಃ ॥ ೨೨ ॥

ಪುಷ್ಕರೋ ಮೇಘಶೈಲೋಥ ವಿರಾಜಶ್ಚಾಚಲೋತ್ತಮಃ
ಜಾರುಚಿಶ್ಚೈವ ಶೈಲೇಂದ್ರ ಇತ್ಯೇತೇ ಉತ್ತರಾಃ ಸ್ಮೃತಾಃ ॥ ೨೩ ॥

ಇತ್ಯೇತೇಷಾಂ ತು ಮುಖ್ಯಾನಾಮುತ್ತರೇಷು ಯಥಾಕ್ರಮಂ ।
ಸ್ಥಲೀರ್ನಗರದ್ರೋಣೀಶ್ಚ ಸರಾಂಸಿ ಚ ನಿಬೋಧತ ॥ ೨೪ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಮಂದರಾದಿ ಪರ್ವತಚತುಷ್ಟಯವರ್ಣನಂ ನಾಮಾಷ್ಟಸಪ್ತತಿತಮೋಧ್ಯಾಯಃ

---

೨೧. ಬ್ರಾಹ್ಮಣೋತ್ತಮರೇ, ಮಹಾಭದ್ರಸರೋವರದ ಉತ್ತರದಲ್ಲಿರುವ ಪರ್ವತಗಳನ್ನು ಹೇಳುತ್ತೇನೆ. ಕೇಳಿ.

೨೨-೨೩. ಹಂಸಕೂಟ, ವೃಷಹಂಸ, ಕಪಿಂಜಲ, ಇಂದ್ರಶೈಲ, ನೀಲ, ಕನಕಶೃಂಗ, ಶತಶೃಂಗ, ಪುಷ್ಕರ, ಮೇಘಶೈಲ, ವಿರಾಜ, ಜಾರುಚಿ ಎಂಬ ಈ ಪರ್ವತಗಳು ಉತ್ತರದವು.

೨೪. ಇವೇ ಮೊದಲಾದ ಮುಖ್ಯಪರ್ವತಗಳ ಮುಂದೆ (ಉತ್ತರದಲ್ಲಿ) ಇರುವ ಸ್ಥಲ, ನಗರ, ಕಣಿವೆ, ಸರೋವರಗಳನ್ನೂ ಅನುಕ್ರಮವಾಗಿ ತಿಳಿಯಿರಿ.

ಅಧ್ಯಾಯದ ಸಾರಾಂಶ :—

ಈ ಅಧ್ಯಾಯದಲ್ಲಿ ಮಂದರವೇ ಮೊದಲಾದ ನಾಲ್ಕು ಪಾದಪರ್ವತಗಳ ಸಮೀಪದಲ್ಲಿರುವ ಉಪಪರ್ವತ ನದೀ ಸರೋವರಾದಿಗಳನ್ನು ಹೇಳಿದೆ. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ.

॥ ಶ್ರೀಃ ॥

–x–

ಏಕೋನಾಶೀತಿತಮೋಽಧ್ಯಾಯಃ

ಅಥ ಮೇರೋರ್ದ್ರೋಣೀನಾಂ ನಿರೂಪಣಂ

॥ ರುದ್ರ ಉವಾಚ ॥

ಸೀತಾಂತಸ್ಯಾಚಲೇಂದ್ರಸ್ಯ ಕುಮುದಸ್ಯಾಂತರೇಣ ಚ ।
ದ್ರೋಣ್ಯಾಂ ವಿಹಂಗಜುಷ್ಟಾಯಾಂ +[ನಾನಾಸತ್ವನಿಷೇವಿತಂ ॥ ೧ ॥

ತ್ರಿಯೋಜನಶತಾಯಾಮಂ ಶತಯೋಜನವಿಸ್ತೃತಂ ।
ಸುರಸಾಮಲಪಾನೀಯಂ ರಮ್ಯಂ ತತ್ರ ಸುರೋಚನಂ] ॥ ೨ ॥

ದ್ರೋಣಮಾತ್ರಪ್ರಮಾಣೈಶ್ಚ ಪುಂಡರೀಕೈಸ್ಸುಗಂಧಿಭಿಃ ।
ಸಹಸ್ರಶತಪತ್ರೈಶ್ಚ ಮಹಾಪದ್ಮೈರಲಂಕೃತಂ ॥ ೩ ॥

ಎಪ್ಪತ್ತೊಂಭತ್ತನೆಯ ಅಧ್ಯಾಯ

ಮೇರುವಿನ ಕಣಿವೆ(ಸಂಧಿ)ಗಳ ವಿಚಾರ

೧–೪. ರುದ್ರ—ಸೀತಾಂತ ಮತ್ತು ಕುಮುದ ಪರ್ವತಗಳ ನಡುವೆ ಇರುವ, ಹಕ್ಕಿಗಳ ನೆಲೆಯಾದ ಕಣಿವೆಯಲ್ಲಿ ಮುನ್ನೂರುಯೋಜನ ಉದ್ದವೂ, ನೂರುಯೋಜನ ಅಗಲವೂ ಉಳ್ಳದ್ದೂ, ನಾನಾಪ್ರಾಣಿಗಳಿಂದ ಕೂಡಿದುದೂ, ಬಹಳಸಿಹಿಯೂ, ನಿರ್ಮಲವೂ ಆದ ನೀರುಳ್ಳದ್ದೂ, ಮನೋಹರವಾಗಿ ಹೊಳೆಯುವುದೂ, ದ್ರೋಣ(ಕಲಶ)ದಷ್ಟು ಗಾತ್ರದ ಸುವಾಸನೆಯುಳ್ಳ ಲಕ್ಷದಳಗಳುಳ್ಳ ಬೆಳ್ದಾವರೆಯ ಹೂಗಳಿಂದಲಂಕೃತವೂ, ದೇವದಾನವ

+ [ ] ಈ ಆವರಣ ಚಿಹ್ನೆಯೊಳಗಿರುವ ಪದಗಳು ಬೊಂ. ಕ. ಮುದ್ರಿತ ಪುಸ್ತಕಗಳಲ್ಲಿ ಸ್ತ್ರೀಲಿಂಗದಲ್ಲಿವೆ. ನಪುಂಸಕಲಿಂಗ ವಿಶೇಷಣಗಳಾಗುವಂತೆ ಸರಿಪಡಿಸಿದೆ.

ದೇವದಾನವಗಂಧರ್ವೈರ್ಮಹಾಸರ್ಪೈರಧಿಷ್ಠಿತಂ ।
ಪುಣ್ಯಂ ತಚ್ಛ್ರೀಸರೋ ನಾಮ ಸಪ್ರಕಾಶಮಿಹೈವ ಚ ॥
ಪ್ರಸನ್ನಸಲಿಲೈಃ ಪೂರ್ಣಂ ಶರಣ್ಯಂ ಸರ್ವದೇಹಿನಾಂ ॥ ೪ ॥

ತತ್ರ ಶ್ಚೈಕಂ ಮಹಾಪದ್ಮಂ ಮಧ್ಯೇ ಪದ್ಮವನಸ್ಯ ಚ ।
ಕೋಟಿಪತ್ರಪ್ರಕಲಿತಂ ತರುಣಾದಿತ್ಯವರ್ಚಸಂ ॥ ೫ ॥

ನಿತ್ಯಂ ವ್ಯಾಕೋಚಮಧುರಂ ಚರತ್ವಾದತಿಮಂಡಲಂ ।
ಚಾರುಕೇಸರಜಾಲಾಢ್ಯಂ ಮತ್ತಭ್ರಮರನಾದಿತಂ ॥ ೬ ॥

ತಸ್ಮಿನ್ಮಧ್ಯೇ ಭಗವತೀ ಸಾಕ್ಷಾಚ್ಛ್ರೀರ್ನಿತ್ಯಮೇವ ಹಿ ।
ಲಕ್ಷ್ಮೀಸ್ತು ತಂ ತದಾವಾಸಂ ಮೂರ್ತಿಮಂತಂ ನ ಸಂಶಯಃ ॥ ೭ ॥

ಸರಸಸ್ತಸ್ಯ ತೀರೇ ತು ತಸ್ಮಿನ್ಸಿದ್ಧನಿಷೇವಿತಂ ॥ ೮ ॥

ಸದಾಪುಷ್ಪಫಲಂ ರಮ್ಯಂ ತತ್ರ ಬಿಲ್ವವನಂ ಮಹತ್ ।
ಶತಯೋಜನವಿಸ್ತೀರ್ಣಂ ದ್ವಿಯೋಜನ ಶತಾಯತಂ ॥ ೯ ॥

ಗಂಧರ್ವನಾಗರಿಂದ ಸೇವಿತವೂ, ಸರ್ವಪ್ರಾಣಿಗಳಿಗೂ ರಕ್ಷಕವೂ, ಪವಿತ್ರವೂ ಆದ ಶ್ರೀಸರೋವರವೆಂಬುದಿದೆ.

೫–೬. ಅದರಲ್ಲಿರುವ ಕಮಲವನದ ನಡುವೆ ಕೋಟಿದಳಗಳುಳ್ಳ, ಬಾಲಸೂರ್ಯನಂತೆ ಹೊಳೆಯುವ, ಯಾವಾಗಲೂ ಅರಳಿ ದುಂಡಾಗಿರುವ, ಮನೋಹರವಾದ ಕೇಸರಗಳಿಂದ ತುಂಬಿ, ಮದಿಸಿದ ದುಂಬಿಗಳ ನಾದವುಳ್ಳ (ಗಾನವುಳ್ಳ) ಅತಿ ರಮಣೀಯವಾದ ಮಹಾಪದ್ಮವೊಂದಿದೆ.

೭. ಅದರ ನಡುವೆ ಪೂಜ್ಯಳೂ, ಸಾಕ್ಷಾತ್ ಶ್ರೀಯೂ ಆದ ಲಕ್ಷ್ಮೀ ದೇವಿಯು ಯಾವಾಗಲೂ ನೆಲಸಿರುವುದರಲ್ಲಿ ಸಂಶಯವಿಲ್ಲ.

೮-೯. ಆ ಶ್ರೀ ಸರೋವರದ ದಡದಲ್ಲಾದರೋ ಸಿದ್ಧರ ನೆಲೆಯಾಗಿ, ಯಾವಾಗಲೂ ಪುಷ್ಪಫಲಗಳುಳ್ಳ ಮನೋಹರವಾದ ದೊಡ್ಡ ಬಿಲ್ವವನವು ನೂರು ಯೋಜನ ಅಗಲವೂ, ಇನ್ನೂರು ಯೋಜನ ಉದ್ದವೂ ಉಳ್ಳದಾಗಿದೆ.

ಅರ್ಧಕ್ರೋಶೋಚ್ಚಶಿಖರೈರ್ಮಹಾವೃಕ್ಷೈಃ ಸಮಂತತಃ ।
ಶಾಖಾಸಹಸ್ರಕಲಿತೈಃ ಮಹಾಸ್ಕಂಧೈಃ ಸಮಾಕುಲಂ ॥ ೧೦ ॥

ಫಲೈಃ ಸಹಸ್ರಸಂಕಾಶೈರ್ಹರಿತೈಃ ಪಾಂಡುರೈಸ್ತಥಾ ।
ಅಮೃತಸ್ವಾದುಸದೃಶೈಃ ಭೇರೀಮಾತ್ರೈಃ ಸುಗಂಧಿಭಿಃ ॥ ೧೧ ॥

ಶೀರ್ಯದ್ಭಿಶ್ಚ ಪತದ್ಭಿಶ್ಚ ಕೀರ್ಣಭೂಮಿವನಾಂತರಂ ।
ನಾಮ್ನಾ ತಚ್ಛ್ರೀವನಂ ನಾಮ ಸರ್ವಲೋಕೇಷು ವಿಶ್ರುತಂ ॥ ೧೨ ॥

ದೇವಾದಿಭಿಃ ಸಮಾಕೀರ್ಣಮಷ್ಟಾಭಿಃ ಕಕುಭಿಃ ಶುಭಂ ।
ಬಿಲ್ವಾಶಿಭಿಶ್ಚ ಮುನಿಭಿಃ ಸೇವಿತಂ ಪುಣ್ಯಕಾರಿಭಿಃ ॥ ೧೩ ॥

ತತ್ರ ಶ್ರೀಃ ಸಂಸ್ಥಿತಾ ನಿತ್ಯಂ ಸಿದ್ಧಸಂಘನಿಷೇವಿತಾ ॥ ೧೪ ॥

ಏಕೈಕಸ್ಯಾಚಲೇಂದ್ರಸ್ಯ ಮಣಿಶೈಲಸ್ಯ ಚಾಂತರಂ ।
ಶತಯೋಜನವಿಸ್ತೀರ್ಣಂ ದ್ವಿಯೋಜನಶತಾಯುತಂ ॥ ೧೫ ॥

೧೦-೧೨. ಅರ್ಧ (ಕ್ರೋಶ) ಹರಿದಾರಿಯಷ್ಟು ಎತ್ತರವಾಗಿ ಸುತ್ತಲೂ ಇರುವ ಸಾವಿರಾರು ಕೊಂಬೆಗಳುಳ್ಳ ಪ್ರಕಾಂಡಗಳಿಂದ ಕೂಡಿದ ದೊಡ್ಡ ಮರಗಳಿಂದೊಪ್ಪುವ, ಗಿಣಿಹಸುರು ಮತ್ತು ಎಲೆಯ ಹಸುರು ಬಣ್ಣಗಳ, ನಗಾರಿಯ ಗಾತ್ರದ, ಸುವಾಸನೆಯುಳ್ಳ, ಸಾವಿರಗಟ್ಟಲೆಯಾಗಿ ಬಿದ್ದು ಒಡೆದಿರುವ ಮತ್ತು ಬೀಳುತ್ತಿರುವ, ಅಮೃತದಂತೆ ರುಚಿಯಾದ ಹಣ್ಣುಗಳು ಹರಡಿರುವ ಭೂಪ್ರದೇಶವುಳ್ಳ ಆ ಶ್ರೀವನವೆಂಬುದು ಸರ್ವಲೋಕಪ್ರಸಿದ್ಧವಾದುದು.

೧೩. ಆ ಬಿಲ್ವವನವು ದೇವಾದಿಗಳಿಂದ ನಿಬಿಡವಾಗಿ, ಎಂಟು ದಿಕ್ಕುಗಳಲ್ಲಿಯೂ ಶುಭಕರವಾಗಿ, ಬಿಲ್ವಫಲವನ್ನು ತಿನ್ನುವ ಪುಣ್ಯಕಾರಿಗಳಾದ ಮುನಿಗಳಿಂದ ಸೇವಿತವಾಗಿರುವುದು,

೧೪. ಅಲ್ಲಿ ಶ್ರೀ ದೇವಿಯು ಸಿದ್ಧಸಂಘಸೇವಿತಳಾಗಿ ಯಾವಾಗಲೂ ಇರುವಳು.

೧೫. ಮಣಿಮಯವಾದ ಒಂದೊಂದು ಪರ್ವತದ ಮಧ್ಯಭಾಗವೂ ನೂರು ಯೋಜನ ಅಗಲವುಳ್ಳದೂ, ಇನ್ನೂರುಯೋಜನ ಉದ್ದವುಳ್ಳದೂ ಆಗಿರುವುದು.

ವಿಮಲಂ ಪಂಕಜವನಂ ಸಿದ್ಧಚಾರಣಸೇವಿತಂ ।
ಪುಷ್ಪಂ ಲಕ್ಷ್ಮ್ಯಾ ಭೃತಂ ಭಾತಿ ನಿತ್ಯಂ ಪ್ರಜ್ವಲತೀವ ಹ ॥ ೧೬ ॥

ಅರ್ಧಕ್ರೋಶಂ ಚ ಶಿಖರೈರ್ಮಹಾಸ್ಕಂಧೈಃ ಸಮಾವೃತಂ ।
ಪ್ರಫುಲ್ಲಶಾಖಾಶಿಖರಂ ಪಿಂಜರಂ ಭಾತಿ ತದ್ವನಂ ॥ ೧೭ ॥

ದ್ವಿಬಾಹುಪರಿಣಾಹೈಸ್ತೈಃ ತ್ರಿಹಸ್ತಾಯಾಮವಿಸ್ತೃತೈಃ ।
ಮಣಿಶೈಲಾಪೂರ್ವನಿಭೈಃ ಪಾಂಡುಕೇಸರಶಾಲಿಭಿಃ ।
ಪುಷ್ಪೈರ್ಮನೋಹರೈರ್ವ್ಯಾಪ್ತಂ ವ್ಯಾಕೋಚೈರ್ಗಂಧಶಾಲಿಭಿಃ ॥ ೧೮ ॥

ವಿರಾಜತೇ ವನಂ ಸರ್ವಂ ಮತ್ತಭ್ರಮರನಾದಿತಂ ।
ತದ್ವನಂ ದಾನವೈರ್ದೇವೈರ್ಗಂಧರ್ವೈರ್ಯಕ್ಷರಾಕ್ಷಸೈಃ ।
ಕಿನ್ನರೈರಪ್ಸರೋಭಿಶ್ಚ ಮಹಾಭೋಗೈಶ್ಚ ಸೇವಿತಂ ॥ ೧೯ ॥

ಸಿದ್ಧಸಾಧುಗಣಾಕೀರ್ಣಂ ನಾನಾಶ್ರಮಸಮಾಕುಲಂ ।
ತತ್ರಾಶ್ರಮೋ ಭಗವತಃ ಕಶ್ಯಪಸ್ಯ ಪ್ರಜಾಪತೇಃ ॥ ೨೦ ॥

---

೧೬. ಅಲ್ಲಿರುವ ಸಿದ್ಧಚಾರಣ ಸೇವಿತವಾದ ಕಮಲವನವೂ, ಲಕ್ಷ್ಮಿಯು ನೆಲಸಿದ ಹೂವೂ ಯಾವಾಗಲೂ ಉರಿಯುತ್ತಿರುವಂತೆ ಹೊಳೆಯುವುದು.

೧೭. ಅರ್ಧಹರಿದಾರಿಯಷ್ಟು ಉದ್ದವಾದ, ಅರಳಿದ ಹೂಗಳ ಕೊಂಬೆಗಳುಳ್ಳ ದೊಡ್ಡಮರಗಳಿಂದ ಕೂಡಿ, ಹಸುರಾದ ಅಲ್ಲಿಯ ವನವೂ ಚೆನ್ನಾಗಿರುವುದು.

೧೮. ಆ ವನವು ಎರಡು ತೋಳಷ್ಟು ವಿಸ್ತಾರವೂ, ಮೂರುಮೊಳ ಉದ್ದವೂ, ಮಣಿಶಿಲೆಯ ಬಣ್ಣವೂ ಉಳ್ಳ, ಬಿಳಿಯ ಕೇಸರಗಳಿಂದಲೂ ಸುಗಂಧದಿಂದಲೂ ಒಪ್ಪುವ, ಮನೋಹರವಾದ ಹೂಗಳಿಂದ ತುಂಬಿರುವುದು.

೧೯. ಆ ವನವೆಲ್ಲವೂ ಮದಿಸಿದ ದುಂಬಿಗಳ ದನಿಯುಳ್ಳದಾಗಿ, ದೇವ ದಾನವ ಗಂಧರ್ವ ಯಕ್ಷರಾಕ್ಷಸ ಕಿನ್ನರಾಪ್ಸರೋನಾಗರಿಂದ ಸೇವಿತವಾಗಿರುವುದು.

೨೦. ಅಲ್ಲದೆ ಸಿದ್ಧಸಾಧುಗಳ ಸಮೂಹದಿಂದ ತುಂಬಿ ಹಲವು ಆಶ್ರಮಗಳಿಂದ ಕೂಡಿರುವುದು. ಅಲ್ಲಿ ಪೂಜ್ಯನಾದ ಕಶ್ಯಪಬ್ರಹ್ಮನ ಆಶ್ರಮವೂ ಇದೆ.

ಮಹಾನೀಲಸ್ಯ ಮಧ್ಯೇ ತು ಕಕುಭಸ್ಯ ಗಿರೇಸ್ತಥಾ ।
ಮಧ್ಯೇ ಸುಖಾ ನದೀ ನಾಮ ತಸ್ಯಾಸ್ತೀರೇ ಮಹದ್ವನಂ ॥ ೨೧ ॥

ಪಂಚಾಶದ್ಯೋಜನಾಯಾಮಂ ತ್ರಿಂಶದ್ಯೋಜನಮಂಡಲಂ ।
ರಮ್ಯಂ ತಾಲವನಂ ಶ್ರೀಮತ್ಕ್ರೋಶಾರ್ಧೋಚ್ಛ್ರಿತಪಾದಪಂ ॥ ೨೨ ॥

ಮಹಾಬಲೈರ್ಮಹಾಸಾರೈಃ ಸ್ಥಿರೈರವಿಚಲೈಃ ಶುಭೈಃ ।
ಮಹದಂಜನಸಂಸ್ಥಾನೈಃ ಪರಿವೃತ್ತೈರ್ಮಹಾಫಲೈಃ ॥ ೨೩ ॥

ಮೃಷ್ಟಗಂಧಗುಣೋಪೇತೈರುಪೇತಂ ಸಿದ್ಧಸೇವಿತಂ ॥ ೨೪ ॥

ಐರಾವತಸ್ಯ ಕರಿಣಸ್ತತ್ರೈವ ಸುಮಹಾಕೃತಿಃ ॥ ೨೫ ॥

ಐರಾವತಸ್ಯ ರುದ್ರಸ್ಯ ದೇವಶೀಲಸ್ಯ ಚಾಂತರೇ ।
ಸಹಸ್ರಯೋಜನಾಯಾಮಾ* ಶತಯೋಜನವಿಸ್ತೃತಾ+ ॥ ೨೬ ॥

೨೧-೨೨. ಮಹಾನೀಲ ಮತ್ತು ಕಕುಭಗಿರಿಗಳ ನಡುವೆ ಸುಖಾ ಎಂಬ ನದಿಯಿರುವುದು. ಅದರ ದಡದಲ್ಲಿ ಐವತ್ತುಯೋಜನ ಉದ್ದವೂ, ಮೂವತ್ತು ಯೋಜನ ಅಗಲವೂ ಆದ, ಅರ್ಧಕ್ರೋಶದಷ್ಟು ಎತ್ತರವಾದ ಮರಗಳ, ದೊಡ್ಡದೂ, ಕಾಂತಿಯುತವೂ ಆದ ತಾಲವನವು ಮನೋಹರವಾಗಿರುವುದು.

೨೩-೨೪. ಬಹು ಸಾರವುಳ್ಳವೂ, ಶುಭಕರಗಳೂ, ಕಾಡಿಗೆಯ ಬಣ್ಣವುಳ್ಳವೂ, ಗುಂಡಗಿರುವುವೂ, ಸುವಾಸನೆಯುಳ್ಳವೂ ಆಗಿ ಯಾವಾಗಲೂ ಇರುವ ದೊಡ್ಡ ಹಣ್ಣುಗಳಿಂದ ಕೂಡಿರುವ ಆ ವನವು ಸಿದ್ಧರಿಗೆ ನೆಲೆಯಾಗಿರುವುದು.

೨೫. ಅಲ್ಲಿಯೇ, ಐರಾವತವೆಂಬ ಆನೆಯ ಸುಂದರವಾದ ದೊಡ್ಡದಾದ ಆಕೃತಿಯಿರುವುದು.

೨೬-೨೭. ಐರಾವತಪರ್ವತದ ಮತ್ತು ಕ್ರೂರವಾದ ದೇವಶೀಲಪರ್ವತದ ನಡುವೆ ಸಾವಿರಯೋಜನ ಉದ್ದವೂ, ನೂರುಯೋಜನ ಅಗಲವೂ ಉಳ್ಳ,

---

* ಸಹಸ್ರಯೋಜನಾಯಾಮಃ [ಬೊಂ]   + ಶತಯೋಜನವಿಸ್ತೃತಃ [ಬೊಂ]

ಸರ್ವಾ ಹ್ಯೇಕಶಿಲಾ ಭೂಮಿರ್ವೃಕ್ಷವೀರುಧವರ್ಜಿತಾ ।
ಆಪ್ಲುತಾ ಪಾದಮಾತ್ರೇಣ ಸಲಿಲೇನ ಸಮಂತತಃ ॥ ೨೭ ॥

ಇತ್ಯೇತಾ ಅಂತರೇ ದ್ರೋಣ್ಯೋ ನಾನಾಕಾರಾಃ ಪ್ರಕೀರ್ತಿತಾಃ ।
ಮೇರೋಃ ಪಾರ್ಶ್ವೇನ ವಿಪ್ರೇಂದ್ರಾ ಯಥಾವದನುಪೂರ್ವಶಃ ॥ ೨೮ ॥

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಮೇರು ದ್ರೋಣೀನಾಂ ನಿರೂಪಣಂ ನಾಮೈಕೋನಾಶೀತಿತಮೋಧ್ಯಾಯಃ

ಪೂರ್ತಿಯಾಗಿ ಒಂದೇ ಕಲ್ಲಿನ ಭೂಪ್ರದೇಶವು, ಮರಗಿಡಬಳ್ಳಿಗಳಿಲ್ಲದುದಾಗಿ, ಎಲ್ಲಾ ಕಡೆಯಲ್ಲೂ ಪಾದದಷ್ಟು ಆಳದ ನೀರುಳ್ಳುದಾಗಿದೆ.

೨೮. ಬ್ರಾಹ್ಮಣೋತ್ತಮರೇ, ಮೇರುವಿನ ಪಕ್ಕದಲ್ಲಿ, ಬೆಟ್ಟಗಳ ನಡುವೆ ಬಗೆಬಗೆಯಾದ ಈ ಕಣಿವೆಗಳನ್ನು ಅನುಕ್ರಮವಾಗಿ ಹೇಳಿದುದಾಯಿತು.

ಅಧ್ಯಾಯದ ಸಾರಾಂಶ:—

ಮೇರುಪರ್ವತದ ಪಕ್ಕದ ಹಲವು ಪರ್ವತಗಳ ನಡುವೆ ಇರುವ ಕಣಿವೆಗಳು, ಅಲ್ಲಿರುವ ಶ್ರೀಸರೋವರ, ಬಿಲ್ವವನ, ಸುಖಾನದಿಯ ತೀರದ ತಾಲವನ ಇವೇ ಮೊದಲಾದುವುಗಳ ವಿಸ್ತಾರ ಸೌಂದರ್ಯಾದಿಗಳನ್ನು ವರ್ಣಿಸುವಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

-X-

ಅಶೀತಿತಮೋಧ್ಯಾಯಃ

ಅಥ ಮೇರೋಃ ದ್ರೋಣ್ಯಾದಿವರ್ಣನಂ

॥ ರುದ್ರ ಉವಾಚ ॥

ಅಥ ದಕ್ಷಿಣದಿಗ್ವ್ಯವಸ್ಥಿತಾಃ ಪರ್ವತದ್ರೋಣ್ಯಃ ಸಿದ್ಧಾ ಚರಿತಾಃ ಕೀರ್ತ್ಯಂತೇ. ಶಿಶಿರಪತಂಗಯೋರ್ಮಧ್ಯೇ ಶುಕ್ಲಾ ಭೂಮಿಃ ಸ್ತ್ರಿಯಾ ಮುಕ್ತಾ ಗಲಿತಪಾದಪಾ. ॥ ೧ ॥

ಇಕ್ಷುಕ್ಷೇಪೇ ಚ ಶಿಖರೇ ಪಾದಪೈರುಪಶೋಭಿತೇ ।
ಉದುಂಬರವನಂ ರಮ್ಯಂ ಪಕ್ಷಿಸಂಘನಿಷೇವಿತಂ ॥ ೨ ॥

ಫಲಿತಂ ತದ್ವನಂ ಭಾತಿ ಮಹಾಕೂರ್ಮೋಪಮೈಃ ಫಲೈಃ ।
ತದ್ವನಂ ದೇವಯೋನ್ಯೋಷ್ಟೌ ಸೇವಂತೇ ಸರ್ವ ಏವ ಹಿ ॥ ೩ ॥

ಎಂಭತ್ತನೆಯ ಅಧ್ಯಾಯ.

ಮೇರುವಿನ ಕಣಿವೆಗಳೇ ಮೊದಲಾದುವುಗಳ ವರ್ಣನೆ.

೧. ಇನ್ನು ದಕ್ಷಿಣ ದಿಕ್ಕಿನಲ್ಲಿರುವ ಸಿದ್ಧರ ನೆಲೆಯಾದ ಪರ್ವತಗಳ ಕಣಿವೆಗಳನ್ನು ಹೇಳುತ್ತೇನೆ. ಶಿಶಿರಪತಂಗಗಳ ನಡುವೆ ಬಿಳಿಯ ನೆಲವು ಹೆಂಗಸರೂ, ಮರಗಳೂ ಇಲ್ಲದುದಾಗಿದೆ.

೨. ಮರಗಳಿಂದೊಪ್ಪುವ ಇಕ್ಷುಕ್ಷೇಪವೆಂಬ ಶಿಖರದಲ್ಲಿ ಹಕ್ಕಿಗಳ ಗುಂಪಿನಿಂದ ಕೂಡಿದ ಅತ್ತಿಯ ಮರಗಳ ಕಾಡು ಮನೋಹರವಾಗಿದೆ.

೩. ದೊಡ್ಡ ಆಮೆಯಷ್ಟು ಗಾತ್ರದ ಹಣ್ಣುಬಿಟ್ಟಿರುವ, ಚೆನ್ನಾಗಿರುವ ಆ ಕಾಡನ್ನು ಎಂಟು ಜನ ದೇವವನಿತೆಯರು ಸೇವಿಸುವರು.

ತತ್ರ ಪ್ರಸನ್ನಸ್ವಾದುಸಲಿಲಾ ಬಹೂದಕಾ ನದ್ಯೋ ವಹಂತಿ. ತತ್ರಾಶ್ರಮೋ ಭಗವತಃ ಕರ್ದಮಸ್ಯ ಪ್ರಜಾಪತೇಃ ನಾನಾ ಮುನಿ ಜನಾಕೀರ್ಣ ಸ್ತಬ್ಧಶತಯೋಜನಮೇಕಂ ಪರಿಮಂಡಲಂ ವನಂ ಚ ತಥಾ ಚ ತಾಮ್ರಾಭಸ್ಯ ಶೈಲಸ್ಯ ಪತಂಗಸ್ಯ ಚಾಂತರೇ ಶತಯೋಜನ ವಿಸ್ತೀರ್ಣಂ ದ್ವಿಗುಣಾಯತಂ ಬಾಲಾರ್ಕಸದೃಶರಾಜೀವಪುಂಡರೀಕೈಃ ಸಮಂತತಃ ಸಹಸ್ರಪತ್ರೈರವಿರಲೈರಲಂಕೃತಂ ಮಹತ್ಸರಃ ಅನೇಕಗಂಧ ಸಿದ್ಧಗಂಧರ್ವಾಧ್ಯುಷಿತಂ. ॥ ೪ ॥

ತಸ್ಯ ಚ ಮಧ್ಯೇ ಮಹಾಶಿಖರಃ ಶತಯೋಜನಾಯಾಮಃ ತ್ರಿಂಶದ್ಯೋಜನವಿಸ್ತೀರ್ಣೋನೇಕಧಾತುರತ್ನಭೂಷಿತಃ. ತಸ್ಯ ಚೋಪರಿ ಮಹತೀರಥ್ಯಾ ರತ್ನಪ್ರಾಕಾರತೋರಣಾ. ತಸ್ಯಾಂ ಮಹದ್ವಿದ್ಯಾಧರಪುರಂ. ತತ್ರ ಪುಲೋಮನಾಮಾ ವಿದ್ಯಾಧರರಾಜಃ ಶತಸಹಸ್ರಪರೀವಾರಃ. ॥ ೫ ॥

---

೪. ಅಲ್ಲಿ ಸ್ವಚ್ಛವೂ ರುಚಿಯೂ ಆದ ಹೆಚ್ಚು ನೀರುಳ್ಳ ನದಿಗಳು ಹರಿಯುತ್ತವೆ. ಅಲ್ಲಿ ಪೂಜ್ಯನಾದ ಕರ್ದಮಬ್ರಹ್ಮನ ಆಶ್ರಮವೂ, ನಾನಾ ಮುನಿಜನರಿಂದ ಕೂಡಿ ನಿಶ್ಶಬ್ದವಾದ, ನೂರುಯೋಜನ ಸುತ್ತಳತೆಯುಳ್ಳ ಒಂದು ವನವೂ ಇವೆ. ಅಲ್ಲದೆ ತಾಮ್ರಾಭ ಪತಂಗಪರ್ವತಗಳ ನಡುವೆ ನೂರು ಯೋಜನ ಅಗಲವೂ, ಇನ್ನೂರುಯೋಜನ ಉದ್ದವೂ ಉಳ್ಳ ದೊಡ್ಡ ಸರೋವರವು, ಎಲ್ಲೆಡೆಯಲ್ಲೂ ಒತ್ತಾಗಿರುವ ಸಾವಿರ ಎಸಳುಗಳುಳ್ಳ ಕೆಂದಾವರೆ ಬೆಳ್ದಾವರೆ ಗಳಿಂದಲಂಕೃತವಾಗಿ ಅನೇಕ ಸಿದ್ಧಗಂಧರ್ವರಿಗೆ ನೆಲೆಯಾಗಿದೆ.

೫. ಅದರ ನಡುವೆ ನೂರುಯೋಜನ ಉದ್ದವೂ, ಮೂವತ್ತುಯೋಜನ ಅಗಲವೂ ಉಳ್ಳ, ಅನೇಕ ಧಾತುರತ್ನಾಲಂಕೃತವಾದ ಶಿಖರವೊಂದಿದೆ. ಅದರ ಮೇಲೆ ರತ್ನಪ್ರಾಕಾರವೂ ಹೆಬ್ಬಾಗಿಲೂ ಉಳ್ಳ ದೊಡ್ಡ ಬೀದಿ. ಅದರಲ್ಲಿ ದೊಡ್ಡದಾದ ವಿದ್ಯಾಧರಪುರ. ಆ ಪುರದಲ್ಲಿ ಪುಲೋಮನೆಂಬ ವಿದ್ಯಾಧರರಾಜನು ಲಕ್ಷಪರಿವಾರವುಳ್ಳವನಾಗಿರುವನು.

ತಥಾ ಚ ವಿಶಾಖಾಚಲೇಂದ್ರಸ್ಯ ಶ್ವೇತಸ್ಯ ಚಾಂತರೇ ಸರಃ. ತಸ್ಯ ಚ ಪೂರ್ವತೀರೇ ಮಹದಾಮ್ರವನಂ ಕನಕಸಂಕಾಶೈಃ ಫಲೈರತಿ ಸುಗಂಧಿಭಿಃ ಮಹಾಕುಂಭಮಾತ್ರೈಃ ಸರ್ವತಶ್ಚಿತಂ. ದೇವಗಂಧರ್ವಾದಯಶ್ಚ ತತ್ರ ನಿವಸಂತಿ. || ೬ ||

ಸುಮೂಲಸ್ಯಾಚಲೇಂದ್ರಸ್ಯ ವಸುಧಾರಸ್ಯ ಚಾಂತರೇ |
ತ್ರಿಂಶದ್ಯೋಜನವಿಸ್ತೀರ್ಣೇ ಪಂಚಾಶದ್ಯೋಜನಾಯತೇ || ೭ ||

ಬಿಲ್ವಸ್ಥಲೀ ನಾಮ ತತ್ರ ಫಲಾನಿ ಮಹಾಕುಂಭ ಸಂಕಾಶಾನಿ. ತೈಶ್ಚ ಪತದ್ಭಿಃ ಸ್ಥಲಮೃತ್ತಿಕಾ ಕ್ಲಿನ್ನಾ. ತಾಂ ಚ ಸ್ಥಲೀಂ ಸುಗುಹ್ಯ ಕಾದಯಃ ಸೇವಂತೇ ಬಿಲ್ವಫಲಾಶಿನಃ. || ೮ ||

---

೬. ಹೀಗೆಯೇ ವಿಶಾಖಾಚಲ ಶ್ವೇತಪರ್ವತಗಳ ನಡುವೆ ಒಂದು ಸರೋವರ. ಅದರ ಪೂರ್ವದ ದಡದಲ್ಲಿ ದೊಡ್ಡ ಮಾವಿನಮರಗಳ ವನವು, ಚಿನ್ನದ ಬಣ್ಣದ, ಅತಿ ಸುವಾಸನೆಯ, ದೊಡ್ಡಕೊಡದ ಗಾತ್ರದ ಹಣ್ಣುಗಳಿಂದ ಎಲ್ಲೆಡೆಯಲ್ಲೂ ಒಪ್ಪುವುದು. ದೇವಗಂಧರ್ವಾದಿಗಳು ಅಲ್ಲಿ ವಾಸಿಸುವರು.

೭–೮. ಸುಮೂಲ, ವಸುಧಾರ ಪರ್ವತಗಳ ನಡುವೆ ಮೂವತ್ತು ಯೋಜನ ಅಗಲವೂ, ಐವತ್ತುಯೋಜನ ಉದ್ದವೂ ಉಳ್ಳೆಡೆಯಲ್ಲಿ ಬಿಲ್ವಸ್ಥಲ ವೆಂಬ ವನವಿದೆ. ಅಲ್ಲಿ ದೊಡ್ಡ ಕೊಡಗಳಷ್ಟು ಗಾತ್ರದ ಹಣ್ಣುಗಳು ಬಿಡುತ್ತವೆ. ಬಿದ್ದ ಹಣ್ಣುಗಳಿಂದ ಕೆಳಗಡೆಯ ಮಣ್ಣು ಒದ್ದೆಯಾಗುವುದು. ಅಲ್ಲಿ ಸುಗುಹ್ಯಕಾದಿಗಳು ಬಿಲ್ವಫಲವನ್ನು ತಿನ್ನುತ್ತ ವಾಸಿಸುವರು.

ತಥಾ ಚ ವಸುಧಾರ ರತ್ನಧಾರಯೋರ್ಮಧ್ಯೇ ತ್ರಿಂಶದ್ಯೋಜನ ವಿಸ್ತೀರ್ಣಂ ಶತಯೋಜನಾಯತಂ ಸುಗಂಧಿ ಕಿಂಶುಕವನಂ ಸದಾ ಕುಸುಮಚಯಸ್ಯ ಗಂಧೇನ ವಾಸಯತೇ ಯೋಜನಶತಂ. ತಚ್ಚ ಸಿದ್ಧಾಧ್ಯುಷಿತಂ ಜಲೋಪೇತಂ ಚ. ॥ ೯ ॥

ತತ್ರ ಚಾದಿತ್ಯದೇವಸ್ಯ ಮಹದಾಯತನಂ. ಸ ಮಾಸೇ ಮಾಸೇ ಭಗವಾನವತರತಿ ಸೂರ್ಯಃ. ಪ್ರಜಾಪತಿಂ ಲೋಕಜನಕಂ ದೇವಾದಯೋ ನಮಸ್ಯಂತಿ. ॥ ೧೦ ॥

ತಥಾ ಚ ಪಂಚಕೂಟಸ್ಯ ಕೈಲಾಸಸ್ಯ ಚಾಂತರೇ ಸಹಸ್ರ ಯೋಜನಾಯಾಮಂ ಶತಯೋಜನ ವಿಸ್ತೀರ್ಣಂ. ಹಂಸಪಾಂಡುರಂ ಕ್ಷುದ್ರಸತ್ತ್ವೈರನಾಧೃಷ್ಯಂ ಸ್ವರ್ಗಸೋಪಾನಮಿವ ಭೂಮಂಡಲಂ. ॥ ೧೧ ॥

---

೯. ಹಾಗೆಯೇ ವಸುಧಾರ ರತ್ನಧಾರಪರ್ವತಗಳ ನಡುವೆ ಮೂವತ್ತು ಯೋಜನ ಅಗಲವೂ, ನೂರುಯೋಜನ ಉದ್ದವೂ ಉಳ್ಳ ಸುಗಂಧದ ಮುತ್ತುಗದ ಕಾಡು ಯಾವಾಗಲೂ ಹೂಗಳ ಗುಂಪಿನ ವಾಸನೆಯಿಂದ ನೂರು ಯೋಜನವನ್ನೂ ಸುಗಂಧವುಳ್ಳದನ್ನಾಗಿ ಮಾಡುತ್ತದೆ. ಅದು ನೀರಿನಿಂದ ಕೂಡಿದುದೂ, ಸಿದ್ಧರ ವಾಸಸ್ಥಳವೂ ಆಗಿದೆ.

೧೦. ಅಲ್ಲಿ ಸೂರ್ಯದೇವನ ದೊಡ್ಡದಾದ ದೇವಾಲಯವಿದೆ. ಪೂಜ್ಯನಾದ ಆ ಸೂರ್ಯನು ಒಂದೊಂದು ತಿಂಗಳಲ್ಲಿಯೂ ಅಲ್ಲಿ ಇಳಿಯುತ್ತಾನೆ. ಲೋಕಜನಕನಾದ ಆ ಬ್ರಹ್ಮನನ್ನು ದೇವತೆಗಳೇ ಮೊದಲಾದವರು ನಮಸ್ಕರಿಸುತ್ತಾರೆ.

೧೧. ಹಾಗೆಯೇ ಪಂಚಕೂಟ ಕೈಲಾಸಪರ್ವತಗಳ ಮಧ್ಯದಲ್ಲಿ ಸಾವಿರ ಯೋಜನ ಉದ್ದವೂ ನೂರುಯೋಜನ ಅಗಲವೂ ಉಳ್ಳ, ಹಂಸದಂತೆ ಬೆಳ್ಳಗಿರುವ, ಹೀನ ಅಥವಾ ಅಲ್ಪಪ್ರಾಣಿಗಳಿಗೆ ಅಸಾಧ್ಯವಾದ ಭೂಮಂಡಲವು ಸ್ವರ್ಗಕ್ಕೆ ಸೋಪಾನದಂತಿದೆ.

ಅಥ ಪಶ್ಚಿಮೇ ದಿಗ್ಭಾಗೇ ವ್ಯವಸ್ಥಿತಾ ಗಿರಿದ್ರೋಣ್ಯಃ ಕೀರ್ತ್ಯಂತೇ. ಸುಪಾರ್ಶ್ವಶಿಖಿಶೈಲಯೋರ್ಮಧ್ಯೇ ಸಮಂತಾದ್ಯೋಜನಶತಮೇಕಂ ಭೌಮ ಶಿಲಾತಲಂ ನಿತ್ಯತಪ್ತಂ ದುಸ್ಪರ್ಶಂ ತಸ್ಯ ಮಧ್ಯೇ ತ್ರಿಂಶದ್ಯೋಜನ ವಿಸ್ತೀರ್ಣಂ ಮಂಡಲಂ ವಹ್ನಿಸ್ಥಾನಂ. ಸ ಚ ಸರ್ವಕಾಲಮನಿಂಧನೋ ಭಗವಾನ್ ಲೋಕಕ್ಷಯಕಾರೀ ಸಂವರ್ತಕೋ ಜ್ವಲತೇ. ॥ ೧೨ ॥

ಅಂತರೇ ಚ ಶೈಲವರಯೋಃ ಕುಮುದಾಂಜನಯೋಃ ಶತ ಯೋಜನವಿಸ್ತೀರ್ಣಾ ಮಾತುಲುಂಗಸ್ಥಲೀ ಸರ್ವಸತ್ವಾನಾಮಗಮ್ಯಾ ಪೀತವರ್ಣೈಃ ಫಲೈರಾವೃತಾ ಸಾ ಸ್ಥಲೀ ಶೋಭತೇ. ತತ್ರ ಚ ಪುಣ್ಯೋ ಹ್ರದಃ ಸಿದ್ಧೈರುಪೇತಃ ಬೃಹಸ್ಪತೇಸ್ತದ್ವನಂ. ತಥಾ ಚ ಶೈಲಯೋಃ ಪಿಂಜರಗೌರಯೋರಂತರೇ ಸರೋದ್ರೋಣ್ಯೋ ಹ್ಯನೇಕಶತಯೋಜನಾ ಯತಾಃ ಮಹದ್ಭಿಶ್ಚ ಷಟ್ಪದೋಂಗುಷ್ಠೈಃ ಕುಮುದೈರುಪಶೋಭಿತಾಃ. ತತ್ರ ಚ ಭಗವತೋ ವಿಷ್ಣೋಃ ಪರಮೇಶ್ವರಸ್ಯಾಯತನಂ. ॥ ೧೩ ॥

---

೧೨. ಇನ್ನು ಪಶ್ಚಿಮದಿಕ್ಕಿನಲ್ಲಿರುವ ಬೆಟ್ಟಕಣಿವೆಗಳನ್ನು ಹೇಳುತ್ತೇನೆ. ಸುಪಾರ್ಶ್ವ ಶಿಖಿಶೈಲಗಳ ನಡುವೆ ನೂರುಯೋಜನ ಚದುರದ ಭೂಮಿಯ ಒಂದೇ ಕಲ್ಲಿನೆಡೆಯು ಯಾವಾಗಲೂ ಕಾಯ್ದು ಮುಟ್ಟಲು ಕಷ್ಟವಾದುದಾಗಿದೆ. ಅದರ ನಡುವೆ ಮೂವತ್ತುಯೋಜನ ಮಂಡಲದ ಅಗ್ನಿಪ್ರದೇಶವಿದೆ. ಪೂಜ್ಯವೂ, ಲೋಕನಾಶಕರವೂ ಆದ ಪ್ರಳಯಾಗ್ನಿಯು ಅಲ್ಲಿ ಸೌದೆಯಿಲ್ಲದೆಯೇ ಉರಿಯುತ್ತದೆ.

೧೩. ಕುಮುದಾಂಜನಪರ್ವತಗಳ ನಡುವೆ ನೂರುಯೋಜನ ವಿಸ್ತಾರ ವುಳ್ಳ ಮಾದಳದ ಪ್ರದೇಶವು ಹಳದಿಯ ಬಣ್ಣದ ಹಣ್ಣುಗಳಿಂದ ತುಂಬಿ ಯಾವ ಪ್ರಾಣಿಗೂ ಅಗಮ್ಯವಾಗಿ ಹೊಳೆಯುತ್ತಿದೆ. ಅಲ್ಲಿ ಸಿದ್ಧರಿಂದ ಕೂಡಿದ ಪುಣ್ಯಕರ ವಾದ ಮಡುವಿದೆ. ಆ ವನವು ಬೃಹಸ್ಪತಿಯದು. ಪಿಂಜರ ಗೌರ ಪರ್ವತ ಗಳ ನಡುವೆ ಸರೋವರಗಳುಳ್ಳ ಕಣಿವೆಗಳು ಹಲವು ನೂರು ಯೋಜನ ವಿಸ್ತಾರ ವುಳ್ಳುವಾಗಿ ದೊಡ್ಡ ದುಂಬಿಗಳಿಂದ ಕೂಡಿದ ಬಿಳಿಯ ನೈದಿಲೆಗಳಿಂದೊಪ್ಪುವುವು. ಅಲ್ಲಿ ಪರಮೇಶ್ವರನೂ, ಭಗವಂತನೂ ಆದ ವಿಷ್ಣುವಿನ ದೇವಾಲಯವಿದೆ.

ತಥಾ ಚ ಶುಕ್ಲಪಾಂಡುರಯೋರಪಿ ಮಹಾಗಿರ್ಯೋರಂತರೇ ತ್ರಿಂಶದ್ಯೋಜನವಿಸ್ತೀರ್ಣೋ ನವತ್ಯಾಯತ ಏಕಶಿಲೋದ್ದೇಶೋ ವೃಕ್ಷವಿವರ್ಜಿತಃ. ತತ್ರ ಚ ನಿಷ್ಕಂಪಾ ದೀರ್ಘಿಕಾ ಸವೃಕ್ಷಾ ಸ್ಥಲಪದ್ಮಿನೀ ಅನೇಕಜಾತಿಜೈಶ್ಚ ಪದ್ಮೈಃ ಶೋಭಿತಾ. ತಸ್ಯಾಶ್ಚ ಮಧ್ಯೇ ಪಂಚ ಯೋಜನಪ್ರಮಾಣೋನ್ಯಗ್ರೋಧೋ ವೃಕ್ಷಃ. ತಸ್ಮಿಂಶ್ಚಂದ್ರಶೇಖರೋ ಮಾಪತಿರ್ನೀಲವಾಸಾಶ್ಚ ದೇವೋ ನಿವಸತಿ ಯಕ್ಷಾದಿಭಿರೀಡ್ಯಮಾನಃ.॥೧೪॥

ಸಹಸ್ರಶಿಖರಸ್ಯ ಗಿರೇಃ ಕುಮುದಸ್ಯ ಚಾಂತರೇ ವರ್ತಮಾನಂ ಪಂಚಾಶದ್ಯೋಜನಾಯಾಮಂ ವಿಂಶದ್ಯೋಜನವಿಸ್ತೃತಂ ಇಕ್ಷುಕ್ಷೇಪೋಚ್ಚಶಿಖರಮನೇಕಪಕ್ಷಿಸೇವಿತಂ. ಅನೇಕವೃಕ್ಷಫಲೈರ್ಮಧುರಸೈರುಪ ಶೋಭಿತಂ. ತತ್ರ ಚೇಂದ್ರಸ್ಯ ಮಹಾನಾಶ್ರಮೋ ದಿವ್ಯಾಭಿಪ್ರಾಯ ನಿರ್ಮಿತಃ. ॥ ೧೫ ॥

---

೧೪. ಅಲ್ಲದೆ ಶುಕ್ಲಪಾಂಡುರ ಮಹಾಗಿರಿಗಳ ನಡುವೆ ಮೂವತ್ತುಯೋಜನ ಅಗಲವೂ, ತೊಂಬತ್ತು ಯೋಜನ ಉದ್ದವೂ ಉಳ್ಳ ಒಂದೇ ಕಲ್ಲಿನ ಪ್ರದೇಶವು ಮರಗಳಿಲ್ಲದುದಾಗಿದೆ. ಅಲ್ಲಿ ಅಲುಗದಿರುವ ಕೊಳವಿದೆ. ಮರಗಳಿಂದ ಕೂಡಿದ ಭೂಕಮಲವನವು ಹಲವುಜಾತಿಯ ಕಮಲಗಳಿಂದೊಪ್ಪುವುದು. ಅದರ ನಡುವೆ ಐದು ಯೋಜನ ಪ್ರಮಾಣದ ಆಲದ ಮರವಿದೆ. ಅದರಲ್ಲಿ ಪಾರ್ವತೀಪತಿಯೂ, ನೀಲಾಂಬರನೂ ಆದ ಚಂದ್ರಶೇಖರ (ಶಿವ)ದೇವನು ಯಕ್ಷರೇ ಮೊದಲಾದವ ರಿಂದ ಸ್ತೋತ್ರಮಾಡಿಸಿಕೊಳ್ಳುತ್ತಾ ವಾಸಿಸುವನು.

೧೫. ಸಹಸ್ರಶಿಖರ ಮತ್ತು ಕುಮುದಗಿರಿಗಳ ನಡುವೆ ಇರುವ ಐವತ್ತು ಯೋಜನ ಉದ್ದವೂ ಇಪ್ಪತ್ತುಯೋಜನ ಅಗಲವೂ ಉಳ್ಳ ಇಕ್ಷುಕ್ಷೇಪವೆಂಬ ಉನ್ನತಶಿಖರವು ಹಲವು ಪಕ್ಷಿಗಳಿಗೆ ನೆಲೆಯಾಗಿ, ಜೇನುತುಪ್ಪದಂತೆ ರಸವುಳ್ಳ ಅನೇಕ ವೃಕ್ಷಫಲಗಳಿಂದ ಸೊಗಸುವುದು. ಅಲ್ಲಿ ಇಂದ್ರನ ದೊಡ್ಡ ಆಶ್ರಮವು ದೇವತೆಗಳ ಇಷ್ಟದಂತೆ ನಿರ್ಮಿತವಾಗಿದೆ.

ತಥಾ ಚ ಶಂಖಕೂಟಋಷಭಯೋರ್ಮಧ್ಯೇ ಪುರುಷಸ್ಥಲೀ ರಮ್ಯಾಽನೇಕ ಗುಣಾನೇಕಯೋಜನಾಯುತಾ. ಬಿಲ್ವಪ್ರಮಾಣೈಃ ಕಂಕೋಲಕೈಃ ಸುಗಂಧಿಭಿರುಪೇತಾ ತತ್ರ ಪುರುಷರಸೋನ್ಮತ್ತಾಃ ಅನೇಕವೃಕ್ಷವಲ್ಲೀಭಿರುಪೇತಾಃ ನಾಗಾದ್ಯಾಃ ಪ್ರತಿವಸಂತಿ. ॥ ೧೬ ॥

ತಥಾ ಕಪಿಂಜಲನಾಗಶೈಲಯೋರಂತರೇ ದ್ವಿಶತಯೋಜನಾಯುತಾ ಶತಯೋಜನವಿಸ್ತೀರ್ಣಾ ಸ್ಥಲೀ ನಾನಾಜನವಿಭೂಷಿತಾ ದ್ರಾಕ್ಷಾಖರ್ಜೂರಖಂಡೈರುಪೇತಾ ಸಾ ಸ್ಥಲೀ. ॥ ೧೭ ॥

ತಥಾ ಚ ಪುಷ್ಕರಮಹಾಮೇಘಯೋರಂತರೇ ಷಷ್ಟಿಯೋಜನವಿಸ್ತೀರ್ಣಾ ಶತಾಯಾಮಾ ಪಾಣಿತಲಪ್ರಖ್ಯಾ ಮಹತೀ ಸ್ಥಲೀ ವೃಕ್ಷವೀರುಧ್ವಿವರ್ಜಿತಾ. ತಸ್ಯಾಶ್ಚ ಪಾರ್ಶ್ವೇ ಚತ್ವಾರಿ ಮಹಾವನಾನಿ ಸರಾಂಸಿ ಚಾನೇಕಯೋಜನಾನಿ. ॥ ೧೮ ॥

---

೧೬. ಅಲ್ಲದೆ ಶಂಖಕೂಟ ಋಷಭಪರ್ವತಗಳ ನಡುವೆ ಪುರುಷಸ್ಥಳವೆಂಬುದು ಮನೋಹರವಾದ ಅನೇಕ ಗುಣಗಳುಳ್ಳದಾಗಿ ಸುಗಂಧದ ಬಿಲ್ವಪ್ರಮಾಣದ ಕಂಕೋಲಗಳಿಂದ ಕೂಡಿ ಅನೇಕಯೋಜನ ವಿಸ್ತಾರವುಳ್ಳದಾಗಿದೆ. ಅಲ್ಲಿ ಪುರುಷರಸೋನ್ಮತ್ತಗಳಾದ ಆನೆ (ಅಥವಾ ಹಾವು) ಮೊದಲಾದುವು ಹಲವು ಮರಬಳ್ಳಿಗಳ ನಡುವೆ ವಾಸಿಸುವುವು.

೧೭. ಹಾಗೆಯೇ ಕಪಿಂಜಲನಾಗಪರ್ವತಗಳ ನಡುವೆ ಎರಡುನೂರು ಯೋಜನ ಉದ್ದವೂ ನೂರುಯೋಜನ ಅಗಲವೂ ಉಳ್ಳ ಪ್ರದೇಶವು ನಾನಾ ಜನರಿಂದಲಂಕೃವಾಗಿ ದ್ರಾಕ್ಷೀ ಖರ್ಜೂರ ವನಗಳಿಂದ ಕೂಡಿರುವುದು.

೧೮. ಇದಲ್ಲದೆ ಪುಷ್ಕರಮಹಾಮೇಘಪರ್ವತಗಳ ನಡುವೆ ಅರವತ್ತು ಯೋಜನ ಅಗಲವೂ ನೂರು ಯೋಜನ ಉದ್ದವೂ ಉಳ್ಳ ಅಂಗಯ್ಯಂತಿರುವ ದೊಡ್ಡೆಡೆಯು ಮರಬಳ್ಳಿಗಳಿಲ್ಲದುದಾಗಿದೆ. ಅದರ ಪಕ್ಕದಲ್ಲಿ ಅನೇಕ ಯೋಜನ ವಿಸ್ತಾರವುಳ್ಳ ನಾಲ್ಕು ವನಗಳೂ ಕೊಳಗಳೂ ಇವೆ.

ದಶ ಪಂಚ ಸಪ್ತ ತಥಾಷ್ಟೌ ತ್ರಿಂಶದ್ವಿಂಶತಿಯೋಜನಾಃ ಸ್ಥಲ್ಯೋ ದ್ರೋಣ್ಯಶ್ಚ ತತ್ರ ಕಾಶ್ಚಿನ್ಮಹಾಘೋರಾಃ ಪರ್ವತಕ್ಷಯಾಃ ॥ ೧೯ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಮೇರುಸ್ಥದ್ರೋಣ್ಯಾದಿವರ್ಣನಂ ನಾಮಾಶೀತಿತಮೋಽಧ್ಯಾಯಃ

---

೧೯. ಇವಲ್ಲದೆ ಅಲ್ಲಿ ಐದು, ಏಳು, ಎಂಟು, ಹತ್ತು, ಇಪ್ಪತ್ತು, ಮೂವತ್ತು ಯೋಜನದಳತೆಯ ಮಹಾಭಯಂಕರವಾದ ಪರ್ವತಪ್ರದೇಶಗಳೂ, ಕಣಿವೆಗಳೂ, ಸ್ಥಳಗಳೂ, ಇರುವುವು.

ಅಧ್ಯಾಯದ ಸಾರಾಂಶ—

ಮೇರುಪರ್ವತದ ಪಕ್ಕದಲ್ಲಿರುವ ಶಿಶಿರಪತಂಗಾದಿಗಳಾದ ಹಲವು ಪರ್ವತಗಳ ನಡುವೆ ಇರುವ ಕಣಿವೆಗಳನ್ನೂ, ವನಸರೋವರಗಳನ್ನೂ ವರ್ಣಿಸಿದೆ. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಂಬತ್ತನೆಯ ಅಧ್ಯಾಯ.

॥ ಶ್ರೀಃ ॥

-X-

ಏಕಾಶೀತಿತಮೋಧ್ಯಾಯಃ

ಅಥ ತೇಷು ಪರ್ವತೇಷು ದೇವಾನಾಮವಕಾಶಾ ವರ್ಣ್ಯಂತೇ

॥ ರುದ್ರ ಉವಾಚ ॥

ಅತಃ ಪರಂ ಪರ್ವತಾಂತೇಷು ದೇವಾನಾಮವಕಾಶಾವರ್ಣ್ಯಂತೇ. ತತ್ರ ಯೋಽಸೌ ಸೀತಾಖ್ಯಃ ಪರ್ವತಸ್ತಸ್ಯೋಪರಿ ಮಹೇಂದ್ರಸ್ಯ ಕ್ರೀಡಾಸ್ಥಾನಂ. ತತ್ರ ದೇವರಾಜಸ್ಯ ಪಾರಿಜಾತಕವೃಕ್ಷವನಂ. ತಸ್ಯ ಪೂರ್ವಪಾರ್ಶ್ವೇ ಕುಂಜರೋ ನಾಮ ಗಿರಿಃ. ತಸ್ಯೋಪರಿ ದಾನವಾನಾಮಷ್ಟೌ ಪುರಾಣಿ ಚ. ॥ ೧ ॥

ತಥಾ ವಜ್ರಕೇ ಪರ್ವತೇ ರಾಕ್ಷಸಾನಾಮನೇಕಾನಿ ಪುರಾಣಿ. ತೇ ಚ ನಾಮ್ನಾ ನೀಲಕಾಃ ಕಾಮರೂಪಿಣಃ. ॥ ೨ ॥

ಎಂಭತ್ತೊಂದನೆಯ ಅಧ್ಯಾಯ.

ಪರ್ವತಗಳಲ್ಲಿರುವ ದೇವನಿವಾಸಗಳ ವರ್ಣನೆ.

೧. ರುದ್ರ—ಮುಂದೆ, ಪರ್ವತಗಳ ಮೇಲಿನ ದೇವನಿವಾಸಗಳನ್ನು ವರ್ಣಿಸುವುದಾಗುತ್ತದೆ. ಅವುಗಳಲ್ಲಿ ಸೀತಾ ಎಂಬ ಹೆಸರಿನ ಪರ್ವತದ ಮೇಲೆ ಮಹೇಂದ್ರನ ಕ್ರೀಡಾಸ್ಥಾನ. ಅದರಲ್ಲಿ ದೇವರಾಜನ ಪಾರಿಜಾತವೃಕ್ಷದವನ. ಅದರ ಪೂರ್ವಪಾರ್ಶ್ವದಲ್ಲಿ ಕುಂಜರವೆಂಬಗಿರಿ. ಅದರ ಮೇಲೆ ದಾನವರ ಎಂಟು ಪಟ್ಟಣಗಳು.

೨. ಹಾಗೆಯೇ ವಜ್ರಕಪರ್ವತದಲ್ಲಿ ರಾಕ್ಷಸರ ಅನೇಕ ಪಟ್ಟಣಗಳು. ಅವುಗಳ ಹೆಸರು ನೀಲಕಗಳೆಂದು. ಅವು ಕಾಮರೂಪಿಗಳು.

ಮಹಾನೀಲೇ ಚ ಶೈಲೇಂದ್ರೇ ಪುರಾಣಿ ಪಂಚದಶಸಹಸ್ರಾಣಿ ಕಿನ್ನರಾಣಾಂ ಖ್ಯಾತಾನಿ. ತತ್ರ ದೇವದತ್ತಚಂದ್ರಾದಯಃ ರಾಜಾನಃ. ಪಂಚದಶ ಕಿನ್ನರಾಣಾಂ ಗರ್ವಿತಾಃ. ॥ ೩ ॥

ತಾನಿ ಸೌವರ್ಣಾನಿ ಬಿಲಪ್ರವೇಶನಾನಿ ಚ ಪುರಾಣಿ. ಚಂದ್ರೋದಯೇ ಚ ಪರ್ವತವರೇ ನಾಗಾನಾಮಧಿವಾಸಃ. ತೇಚ ಬಿಲಪ್ರವೇಶಾಃ ಬಿಲೇಷು ವೈನತೇಯವಿಷಯವರ್ತಿನಾ ವ್ಯವಸ್ಥಿತಾನುರಾಗೇಣ ದಾನವೇಂದ್ರಾ ವ್ಯವಸ್ಥಿತಾಃ. ॥ ೪ ॥

ವೇಣುಮತ್ಯಪಿ ವಿದ್ಯಾಧರಪುರತ್ರಯಂ. ತ್ರಿಂಶದ್ಯೋಜನ (ಶತ) ವಿಸ್ತೀರ್ಣಮೇಕೈಕಂತಾವದಾಯತಂ. ಉಲೂಕರೋಮಶಮಹಾವೇತ್ರಾದಯೋ ರಾಜಾನೋ ವಿದ್ಯಾಧರಾಣಾಂ ಚ. ತತ್ರ ಏಕೈಕೇ ಶೈಲರಾಜನಿ ಸ್ವಯಮೇವ ಗರುಡೋ ವ್ಯವಸ್ಥಿತಃ. ॥ ೫ ॥

---

೩. ಮಹಾನೀಲವೆಂಬ ಉತ್ತಮ ಪರ್ವತದಲ್ಲಿ ಕಿನ್ನರರ ಹದಿನೈದು ಸಾವಿರ ಪಟ್ಟಣಗಳು ಪ್ರಸಿದ್ಧವಾಗಿವೆ. ಅಲ್ಲಿ ದೇವದತ್ತಚಂದ್ರಾದಿಗಳಾದ ಹದಿನೈದು ಜನ ಗರ್ವಿತರಾದ ಕಿನ್ನರರಾಜರು.

೪. ಚಂದ್ರೋದಯ ಪರ್ವತದಲ್ಲಿ ಸುವರ್ಣದ ಪಟ್ಟಣಗಳು ಗುಹೆಗಳಲ್ಲಿರುವುವು. ಅವು ನಾಗರ ನಿವಾಸಗಳು. ಗುಹಾಪ್ರವೇಶಮಾಡುವ ಆ ದಾನವೇಂದ್ರರು ಗರುಡನ ವಿಷಯದಲ್ಲಿ ಸ್ಥಿರವಾದ ಅನುರಾಗದಿಂದ ಗುಹೆಗಳಲ್ಲಿ ನೆಲಸಿರುವರು.

೫. ವೇಣುಮತ್ಪರ್ವತದಲ್ಲೂ ವಿದ್ಯಾಧರರ ಮೂರು ಪಟ್ಟಣಗಳು. ಒಂದೊಂದೂ ಮೂವತ್ತು(ನೂರು) ಯೋಜನ ವಿಸ್ತಾರವುಳ್ಳವು. ವಿದ್ಯಾಧರರಿಗೆ, ಉಲೂಕ, ರೋಮಶ, ಮಹಾವೇತ್ರ, ಮೊದಲಾದವರು ದೊರೆಗಳು. ಅಲ್ಲಿ ಒಂದೊಂದು ಉತ್ತಮಪರ್ವತದಲ್ಲಿ ಗರುಡನು ತಾನೇ ನೆಲಸಿರುವನು.

ಕುಂಜರೇ ತು ಪರ್ವತವರೇ ನಿತ್ಯಂ ಪಶುಪತಿರ್ವ್ಯವಸ್ಥಿತಃ. ವಸುಧಾರೇ ತು ವೃಷಭಾಂಕೋ ಮಹಾದೇವಃ. ಶಂಕರೋ ಯೋಗಿನಾಂ ವರೋನೇಕಗಣಭೂತಕೋಟಿಸಹಸ್ರಪರಿವಾರೋಽನಾದಿಪುರುಷೋ ವ್ಯವಸ್ಥಿತಃ. ವಸುಧಾರೇ ತು ಪುಷ್ಪವತಾಂ ವಸೂನಾಂ ಸಮಾವಾಸಃ. ॥ ೬ ॥

ವಸುಧಾರರತ್ನಧಾರಯೋರ್ಮೂರ್ಧ್ನಿ ಅಷ್ಟೌ ಸಪ್ತ ಚ ಸಂಖ್ಯಯಾ ಪುರಾಣಿ ವಸುಸಪ್ತರ್ಷೀಣಾಂ ಚೇತಿ. ॥ ೭ ॥

ಏಕಶೃಂಗೇ ಚ ಪರ್ವತೋತ್ತಮೇ ಪ್ರಜಾಪತೇಃ ಸ್ಥಾನಂ ಚತುರ್ವಕ್ತ್ರಸ್ಯ ಬ್ರಹ್ಮಣಃ. ॥ ೮ ॥

ಗಜಪರ್ವತೇ ಚ ಮಹಾಭೂತಪರಿವೃತಾ ಸ್ವಯಮೇವ ಭಗವತೀ ತಿಷ್ಠತೀತಿ. ॥ ೯ ॥

---

೬. ಕುಂಜರವೆಂಬ ಒಳ್ಳೆಯ ಬೆಟ್ಟದಲ್ಲಿ ಶಿವನು ಯಾವಾಗಲೂ ನೆಲಸಿರುವನು. ವಸುಧಾರ ಪರ್ವತದಲ್ಲಿಯೂ ವೃಷಭಧ್ವಜನೂ, ಮಹಾದೇವನೂ, ಯೋಗಿವರನೂ, ಅನಾದಿಪುರುಷನೂ ಆದ ಶಂಕರನು ಅನೇಕ ಕೋಟಿಸಹಸ್ರ ಭೂತಗಣಪರಿವಾರವುಳ್ಳವನಾಗಿ ನೆಲಸಿರುವನು. ವಸುಧಾರದಲ್ಲಿ ಪುಷ್ಪವಂತ(ಚಂದ್ರಸೂರ್ಯರ)ರ ಮತ್ತೂ ವಸುಗಳ ನಿವಾಸವೂ ಇದೆ.

೭. ವಸುಧಾರ, ರತ್ನಧಾರ ಪರ್ವತಗಳ ಮೇಲೆ ಕ್ರಮವಾಗಿ ಅಷ್ಟ ವಸುಗಳ ಎಂಟು ಪಟ್ಟಣಗಳೂ ಸಪ್ತರ್ಷಿಗಳ ಏಳು ಪಟ್ಟಣಗಳೂ ಇರುವುವು.

೮. ಉತ್ತಮವಾದ ಏಕಶೃಂಗ ಪರ್ವತದಲ್ಲಿ ಚತುರ್ಮುಖ ಬ್ರಹ್ಮನ ನಿವಾಸವಿದೆ.

೯. ಗಜಪರ್ವತದಲ್ಲಿ ಮಹಾಭೂತಗಳಿಂದ ಪರಿವೃತಳಾಗಿ ಸಾಕ್ಷಾದ್ಭಗವತಿ ಗೌರಿಯಿರುವಳು.

ವಸುಧಾರೇ ಚ ಪರ್ವತವರೇ ಮುನಿಸಿದ್ಧವಿದ್ಯಾಧರಾಣಾಂ ಆಯತನಂ ಚತುರಾಶೀತ್ಯಂ ವರಪುರಮಿಹ ಪ್ರಾಕಾರತೋರಣಾಃ. ತತ್ರ ಚಾನೇಕಪರ್ವತಾ ನಾಮ ಗಂಧರ್ವಾಃ ಯುದ್ಧಶಾಲಿನೋ ನಿವಸಂತಿ ತೇಷಾಂ ಚಾಧಿಪತಿರ್ದೇವೋ ರಾಜರಾಜೈಕಪಿಂಗಲಃ. ॥ ೧೦ ॥

ಸುರರಾಕ್ಷಸಾಃ ಪಂಚಕೂಟೇ ದಾನವಾಃ. ಶತಶೃಂಗೇ ದಾನವ ಯಕ್ಷಾಣಾಂ ಪುರಃಶತಂ. ॥ ೧೧ ॥

ಪ್ರಭೇದಕಸ್ಯ ಪಶ್ಚಿಮೇ ದಲೇ ದೇವದಾನವಸಿದ್ಧಾದಿಪುರಾಣಿ. ತಸ್ಯ ಗಿರೇರ್ಮೂರ್ಧ್ನಿ ಮಹತೀ ನಾಮ ಶಿಲಾ ತಿಷ್ಠತಿ. ತಸ್ಯಾಂ ಚ ಪರ್ವಣಿ ಪರ್ವಣಿ ಸೋಮಃ ಸ್ವಯಮೇವಾವತರತಿ. ॥ ೧೨ ॥

ತಸ್ಯೈವೋತ್ತರಪಾರ್ಶ್ವೇ ತ್ರಿಕೂಟಂ ನಾಮ. ತತ್ರ ಬ್ರಹ್ಮಾ ತಿಷ್ಠತಿ. ಕ್ವಚಿತ್ತತ್ರ ತಥಾ ಚ ವಹ್ನ್ಯಾಯತನಂ. ಮೂರ್ತಿಮಾನ್ವಹ್ನಿರುಪಾಸ್ಯತೇ ದೇವೈಃ. ॥ ೧೩ ॥

---

೧೦. ಶ್ರೇಷ್ಠವಾದ ವಸುಧಾರೆ ಪರ್ವತದಲ್ಲಿ ಮುನಿಸಿದ್ಧವಿದ್ಯಾಧರರ ನೆಲೆಯಾದ ಎಂಬತ್ತನಾಲ್ಕು ಉತ್ತಮವಾದ ಪಟ್ಟಣಗಳು ಕೋಟೆಹೆಬ್ಬಾಗಿಲುಗಳಿಂದ ಕೂಡಿರುವುವು. ಅಲ್ಲಿ ಯುದ್ಧಶೀಲರಾದ ಪರ್ವತರೆಂಬ ಹೆಸರಿನ ಗಂಧರ್ವರು ವಾಸಮಾಡುವರು. ಅವರ ಒಡೆಯನು ರಾಜರಾಜನಾದ ಕುಬೇರ ದೇವನು.

೧೧. ಪಂಚಕೂಟದಲ್ಲಿ ಸುರಶ್ರೇಷ್ಠರೂ, ದಾನವರೂ ಇರುವರು. ಶತಶೃಂಗದಲ್ಲಿ ದಾನವ ಯಕ್ಷರ ನೂರು ಪಟ್ಟಣಗಳಿವೆ.

೧೨. ಪ್ರಭೇದಕಪರ್ವತದ ಪಶ್ಚಿಮಾರ್ಧದಲ್ಲಿ ದೇವದಾನವಸಿದ್ಧಾದಿಗಳ ಪಟ್ಟಣಗಳಿವೆ. ಆ ಗಿರಿಯ ಶಿಖರದಲ್ಲಿ ಮಹತೀ ಎಂಬ ಕಲ್ಲಿದೆ. ಪ್ರತಿ(ಪರ್ವ) ಪೌರ್ಣಿಮೆಯಲ್ಲೂ ಸಾಕ್ಷಾತ್ ಚಂದ್ರನು ಅಲ್ಲಿಳಿಯುವನು.

೧೩. ಆ ಪರ್ವತದ ಉತ್ತರ ಭಾಗದಲ್ಲಿ ತ್ರಿಕೂಟವೆಂಬ ಪರ್ವತವಿದೆ. ಅಲ್ಲಿ ಬ್ರಹ್ಮನಿರುವನು, ಅಲ್ಲಿ ಒಂದೆಡೆಯಲ್ಲಿ ಅಗ್ನಿದೇವಾಲಯವಿದೆ. ದೇವತೆಗಳು ಮೂರ್ತಿಮಂತನಾದ ಅಗ್ನಿಯನ್ನು ಸೇವಿಸುವರು.

ಉತ್ತರೇ ಚ ಶೃಂಗಾಖ್ಯೇ ಪರ್ವತವರೇ ದೇವತಾನಾಮಾಯತನಾನಿ. ಪೂರ್ವೇಣ ನಾರಾಯಣಸ್ಯಾಯತನಂ ಮಧ್ಯೇ ಬ್ರಹ್ಮಣಃ ಶಂಕರಸ್ಯ ಪಶ್ಚಿಮೇ. ತತ್ರ ಯಕ್ಷಾದೀನಾಂ ಕಾನಿಚಿತ್ಪುರಾಣಿ. ॥ ೧೪ ॥

ತಸ್ಯ ಚೋತ್ತರೇ ತೀರೇ ಜಾತುಚ್ಛಮಹಾಪರ್ವತೇ ತ್ರಿಂಶದ್ಯೋಜನಮಂಡಲಂ ನಂದಜಲಂ ನಾಮ ಸರಃ. ತತ್ರ ನಂದೋ ನಾಮ ನಾಗರಾಜೋ ವಸತಿ ಶತಶೀರ್ಷಪ್ರಚಂಡ ಇತಿ. ॥ ೧೫ ॥

ಇತ್ಯೇತೇಷ್ಟೌ ದೇವಪರ್ವತಾ ವಿಜ್ಞೇಯಾಃ. ತೇ ಚಾನುಕ್ರಮೇಣ ಹೇಮರಜತರತ್ನವೈಡೂರ್ಯಮನಶ್ಶಿಲಾದಿವರ್ಣಾಃ. ॥ ೧೬ ॥

ಇಯಂ ಚ ಪೃಥ್ವೀ ಲಕ್ಷಕೋಟಿಶತಾನೇಕಸಂಖ್ಯಾತಾಪೂರ್ಣಾ ತೇಷು ಚ ಸಿದ್ಧವಿದ್ಯಾಧರಾಣಾಂ ನಿಲಯಾಃ. ॥ ೧೭ ॥

---

೧೪. ಉತ್ತರದಲ್ಲಾದರೋ ಶೃಂಗವೆಂಬ ಉತ್ತಮಪರ್ವತದಲ್ಲಿ ದೇವತೆಗಳ ಆಲಯಗಳಿವೆ. ಪೂರ್ವದಲ್ಲಿ ನಾರಾಯಣದೇವಾಲಯವೂ, ಮಧ್ಯದಲ್ಲಿ ಬ್ರಹ್ಮ ದೇವಾಲಯವೂ, ಪಶ್ಚಿಮದಲ್ಲಿ ಶಂಕರದೇವಾಲಯವೂ ಇವೆ. ಅಲ್ಲಿ ಯಕ್ಷರೇ ಮೊದಲಾದವರ ಕೆಲವು ಪಟ್ಟಣಗಳಿವೆ.

೧೫. ಅದರ ಉತ್ತರತೀರದಲ್ಲಿ ಜಾತುಚ್ಛವೆಂಬ ಮಹಾಪರ್ವತದಲ್ಲಿ ಮೂವತ್ತುಯೋಜನದಳತೆಯ ವೃತ್ತಾಕಾರವಾದ ನಂದಜಲವೆಂಬ ಸರೋವರವಿದೆ. ಅಲ್ಲಿ ಶತಶೀರ್ಷಪ್ರಚಂಡನೆನಿಸಿಕೊಂಡಿರುವ ನಂದನೆಂಬ ನಾಗರಾಜನು ವಾಸಮಾಡುವನು.

೧೬. ಮೇಲೆ ಹೇಳಿದ ಇವೆಂಟನ್ನೂ ದೇವಪರ್ವತಗಳೆಂದು ತಿಳಿಯಬೇಕು. ಅವು ಅನುಕ್ರಮವಾಗಿ ಚಿನ್ನ, ಬೆಳ್ಳಿ, ರತ್ನ, ವೈಡೂರ್ಯ, ಮಣಿಶಿಲೆ ಮೊದಲಾದುವುಗಳ ಬಣ್ಣವುಳ್ಳವು.

೧೭. ಈ ಪೃಥ್ವಿಯು ನೂರಾರುಲಕ್ಷ ಕೋಟಿ ಸಂಖ್ಯೆಯ ಪರ್ವತಗಳಿಂದ ಪೂರ್ಣವಾಗಿದೆ. ಅವುಗಳಲ್ಲಿ ಸಿದ್ಧವಿದ್ಯಾಧರರ ಗೃಹಗಳಿವೆ.

ತದ್ಯಥಾ ಮೇರೋಃ ಪಾರ್ಶ್ವತಃ ಕೇಸರವಲಯಾಲವಾಲಂ ಸಿದ್ಧಲೋಕ ಇತಿ ಕೀರ್ತ್ಯತೇ. ಇಯಂ ಚ ಪೃಥ್ವೀ ಪದ್ಮಾಕಾರೇಣ ವ್ಯವಸ್ಥಿತಾ. ಏಷ ಸರ್ವಪುರಾಣೇಷು ಕ್ರಮಃ ಸಾಮಾನ್ಯತಃ ಪ್ರತಿಪಾದ್ಯತೇ || ೧೮ ||

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಮೇರುಪರ್ವತೇ ದೇವಾನಾಮವಕಾಶವರ್ಣನಂ ನಾಮೈಕಾಶೀತಿತಮೋಧ್ಯಾಯಃ

---

೧೮. ಮೇರುವಿನ ಪಕ್ಕದ ಕೇಸರಮಂಡಲದ ಪಾತಿಯು ಸಿದ್ಧಲೋಕವೆಂದು ಹೊಗಳಿಸಿಕೊಳ್ಳುವುದು. ಈ ಭೂಮಿಯು ಕಮಲಾಕಾರದಿಂದಿದೆ. ಈ ಕ್ರಮವನ್ನೇ ಎಲ್ಲಾ ಪುರಾಣಗಳಲ್ಲಿಯೂ ಸಮಾನವಾಗಿ ಹೇಳಿದೆ.

ಅಧ್ಯಾಯದ ಸಾರಾಂಶ—

ಸೀತಾ ಕುಂಜರ ಮಹಾನೀಲಾದಿಗಳಾದ ಎಂಟು ದೇವಪರ್ವತಗಳಲ್ಲಿರುವ ಮಹೇಂದ್ರ ಕಿನ್ನರಾದಿ ದೇವತೆಗಳ ನಿವಾಸಗಳನ್ನು ಹೇಳುವಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ಎಂಬತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

-x-

ದ್ವ್ಯಶೀತಿತಮೋಽಧ್ಯಾಯಃ

ಅಥ ನದ್ಯವತಾರಾಃ

॥ ರುದ್ರ ಉವಾಚ ॥

ಅಥ ನದೀನಾಮವತಾರಂ ಶೃಣುತ. ಆಕಾಶಸಮುದ್ರೋ ಯಃ ಪ್ರೋಚ್ಯತೇ ತಸ್ಮಾದಾಕಾಶಗಾಮಿನೀ ನದೀ ಪ್ರವೃತ್ತಾ. ಸಾ ಚಾನವರತಂ ಇಂದ್ರಗಜೇನ ಕ್ಷೋಭ್ಯತೇ. ಸಾ ಚ ಚತುರಶೀತಿಸಹಸ್ರೋಚ್ಛ್ರಾಯಾನ್ಮೇರೋರುಪರಿ ಪತತಿ. ಸಾ ಚ ಮೇರುಕೂಟತಟಾಂತೇಭ್ಯಃ ಪ್ರಸ್ಖಲಿತಾ ಚತುರ್ಧಾ ಸಂಜಾತಾ ಷಷ್ಟಿಸಹಸ್ರಯೋಜನಾನ್ನಿರಾಲಂಬಾ ಪತಮಾನಾ ಪ್ರದಕ್ಷಿಣಮನುಸರಂತೀ ಚತುರ್ಧಾ ಜಗಾಮ ಸೀತಾ ಚಾಲಕನಂದಾ ಚಕ್ಷುರ್ಭದ್ರಾ ಚೇತಿ ನಾಮಭಿಃ. ತಾಸಾಂ ಮಧ್ಯೇ ಏಕಾಶೀತಿಸಹಸ್ರಪರ್ವತಾನ್ದಾರಯಂತೀ ಗಾಂ ಗತಾ ಗಂಗೇತ್ಯುಚ್ಯತೇ. ॥ ೧ ॥

ಎಂಭತ್ತೆರಡನೆಯ ಅಧ್ಯಾಯ

ನದಿಗಳ ಹುಟ್ಟು

೧. ರುದ್ರ—ಇನ್ನು ನದಿಗಳ ಉತ್ಪತ್ತಿಯನ್ನು ಕೇಳಿ. ಯಾವುದು ಆಕಾಶ ಸಮುದ್ರವೆನಿಸಿಕೊಳ್ಳುವುದೋ ಅದರಿಂದ ಆಕಾಶಗಾಮಿನಿಯಾದ ನದಿಯು ಪ್ರವಹಿಸಿತು. ಅದನ್ನು ಯಾವಾಗಲೂ ಐರಾವತವು ಕಲಕುತ್ತದೆ. ಆ ಗಂಗೆಯು ಎಂಭತ್ತನಾಲ್ಕುಸಾವಿರಯೋಜನ ಎತ್ತರದಿಂದ ಮೇರುವಿನ ಮೇಲೆ ಬೀಳುತ್ತದೆ. ಹೀಗೆ ಬಿದ್ದ ಗಂಗೆಯು ಮೇರುಶಿಖರಪ್ರದೇಶಗಳಿಂದ ಜಾರಿ ನಾಲ್ಕುಭಾಗ (ಶಾಖೆ)ಗಳಾಗಿ ಸೀತಾ, ಅಲಕನಂದಾ, ಚಕ್ಷು, ಭದ್ರಾ ಎಂಬ ಹೆಸರುಗಳಿಂದ ಹರಿಯಿತು. ಆ ಶಾಖೆಗಳಲ್ಲಿ ಎಂಭತ್ತೊಂದುಸಾವಿರ ಪರ್ವತಗಳನ್ನು ಸೀಳಿ (ಭೇದಿಸಿ)ಕೊಂಡು ಭೂಮಿಗೆ ಬಂದುದು (ಅಲಕನಂದೆಯು) ಗಂಗೆಯೆನಿಸಿಕೊಳ್ಳುತ್ತದೆ.

ಅಥ ಗಂಧಮಾದನಪಾರ್ಶ್ವೇಽಮರಗಂಡಿಕಾ ವರ್ಣ್ಯತೇ. ಏಕತ್ರಿಂಶದ್ಯೋಜನಸಹಸ್ರಾಣಿ ಆಯಾಮಶ್ಚತುಶ್ಶತವಿಸ್ತೀರ್ಣಂ. ತತ್ರ ಕೇತುಮಾಲಾಃ ಸರ್ವೇಜನಪದಾಃ ಕೃಷ್ಣವರ್ಣಾಃ ಪುರುಷಾಃ ಮಹಾಬಲಿನಃ ಉತ್ಪಲವವರ್ಣಾಃ ಸ್ತ್ರಿಯಃ ಶುಭದರ್ಶನಾಃ. ತತ್ರ ಚ ಮಹಾವೃಕ್ಷಾಃ ಪನಸಾಃ ಸಂತಿ. ತತ್ರೇಶ್ವರೋ ಬ್ರಹ್ಮಪುತ್ರಸ್ತಿಷ್ಠತಿ ತತ್ರೋದಪಾನಾಜ್ಜ ಜರಾರೋಗವಿವರ್ಜಿತಾ ವರ್ಷಾಯುತಾಯುಷೋ ಜುಷ್ಟಾಪಶ್ಚನರಾಃ. ॥ ೨ ॥

ಮಾಲ್ಯವತಃ ಪೂರ್ವಪಾರ್ಶ್ವೇ ಪೂರ್ವಗಂಡಿಕಾ ಏಕಶೃಂಗಾದ್ಯೋಜನ ಸಹಸ್ರಾಣಿ ಮಾನತಃ ತೇಽಚಭದ್ರಾಶ್ವಾ ನಾಮಜನಪದಾಃ. ಭದ್ರರಸಾಲವನಂ ಚ ತತ್ರ ವ್ಯವಸ್ಥಿತಂ. ಕಾಲಾಮ್ರ ವೃಕ್ಷಾಃ. ಪುರುಷಾಶ್ವೇತಾಃ ಪದ್ಮವರ್ಣಿನಃ ಸ್ತ್ರಿಯಃ ಕುಮುದ ವರ್ಣಾದಶವರ್ಷ ಸಹಸ್ರಾಣಿ ತೇಷಾಮಾಯುಃ. ತತ್ರ ಚ ಪಂಚಕುಲಪರ್ವತಾಃ. ತೇ ಚ ಶೈಲವರ್ಣೋ ಮಾಲಾಖ್ಯಃ ಕೋರಜಸ್ಕಸ್ತ್ರಿಪರ್ಣಃ ನೀಲಶ್ಚೇತಿ. ತದ್ವಿನಿರ್ಗತಾಭಃಸ್ಥಿತಾನಾಂ ದೇಶಾನಾಂ ತಾನ್ಯೇವ ನಾಮಾನಿ. ॥ ೩ ॥

---

೨. ಇನ್ನು ಗಂಧನ ಮಾದನದ ಪಕ್ಕದ ಅಮರಗಂಡಿಕೆಯು ವರ್ಣಿಸಲ್ಪಡುತ್ತದೆ ಅದರ ಉದ್ದವು ಮೂವತ್ತೊಂದುಸಾವಿರಯೋಜನ, ಅಗಲವು ನಾಲ್ಕುನೂರುಯೋಜನ. ಅಲ್ಲಿ ದೇಶಗಳೆಲ್ಲವೂ ಕೇತುಮಾಲೆಗಳು. ಪುರುಷರು ಕೃಷ್ಣವರ್ಣದವರು. ಮಹಾಬಲಶಾಲಿಗಳು. ಸ್ತ್ರೀಯರು ಉತ್ಪಲವರ್ಣದವರಾಗಿ ಶುಭದರ್ಶನೆಯರಾಗಿರುವರು. ಅಲ್ಲಿ ದೊಡ್ಡ ಹಲಸಿನಮರಗಳಿವೆ. ಬ್ರಹ್ಮಪುತ್ರನಾದ ಈಶ್ವರನು ವಾಸಿಸುವನು. ಅಲ್ಲಿರುವ ಮನುಷ್ಯರು ಅಲ್ಲಿಯ ನೀರು ಕುಡಿಯುವುದರಿಂದ ಹತ್ತು ಸಾವಿರವರ್ಷ ಜೀವಿಸುವವರಾಗಿ ರೋಗವೂ ಮುಪ್ಪೂ ಇಲ್ಲದವರಾಗಿರುವರು.

೩. ಒಂದೇ ಶಿಖರವುಳ್ಳ ಮಾಲವತ್ಪರ್ವತದ ಪೂರ್ವದಕಡೆ ಪೂರ್ವಗಂಡಿಕೆಯಿದೆ. ಸಾವಿರಯೋಜನ ಅಳತೆಯುಳ್ಳದು. ಅಲ್ಲಿರುವವು ಭದ್ರಾಶ್ವಗಳೆಂಬ ದೇಶಗಳು. ಮಂಗಳಕರವಾದ ಮಾವಿನಮರಗಳ ವನವು ಅಲ್ಲಿದೆ. ಕರಿಯ ಮಾವಿನಮರಗಳು. ಅಲ್ಲಿಯ ಪುರುಷರು ಬೆಳ್ಳಗೆ ಪದ್ಮ ವರ್ಣದವರಾಗಿಯೂ, ಸ್ತ್ರೀಯರು ಬಿಳಿಯ ನೈದಿಲೆಯ ಬಣ್ಣದವರಾಗಿಯೂ ಇರುವರು. ಅವರ ಆಯುಸ್ಸು ಹತ್ತುಸಾವಿರ ವರ್ಷ. ಅಲ್ಲಿ ಐದು ಕುಲಪರ್ವತಗಳಿರುವುವು. ಅವು ಶೈಲವರ್ಣ, ಮಾಲ, ಕೋರಜಸ್ಕ, ತ್ರಿಪರ್ಣ, ನೀಲ ಎಂಬ ಹೆಸರಿನವು. ಅವುಗಳಿಂದ ಪ್ರವಹಿಸುವ ನದಿಗಳ ತೀರದಲ್ಲಿರುವ ದೇಶಗಳಿಗೆ ಆ ನದಿಗಳ ಹೆಸರೇ ಇದೆ.

ತೇ ಚ ದೇಶಾ ಏತಾ ನದೀಃ ಪಿಬಂತಿ ತದ್ಯಥಾ ಸೀತಾಸುವಾಹಿನೀ ಹಂಸವತೀಕಾಸಾ ಮಹಾವಕ್ತ್ರಾ ಚಂದ್ರವತೀ ಕಾವೇರೀ ಸುರಸಾಖ್ಯಾವತೀ ಇಂದ್ರವತೀ ಅಂಗಾರವಾಹಿನೀ ಹರಿತ್ತೋಯಾ ಸೋಮಾವರ್ತಾ ಶತ ಹ್ರದಾ ವನಮಾಲಾ ವಸುಮತೀ ಹಂಸಾ ಸುಪರ್ಣಾ ಪಂಚಗಂಗಾ ಧನು ಷ್ಮತೀ ಮಣಿವಪ್ರಾ ಸುಬ್ರಹ್ಮಭಾಗಾ ವಿಲಾಸಿನೀ ಕೃಷ್ಣತೋಯಾ ಪುಣ್ಯೋದಾ ನಾಗವತೀ ಶಿವಾ ಶೈವಾಲಿನೀ ಮಣಿ ತಟಾಕೀ ರೋದಾ ವರುಣಶಾಲೀ ವಿಷ್ಣುಪದೀ ಮಹಾನದೀನಾಂಪಯೋಯೇ ಪಿಬಂತಿ ತೇ ದಶವರ್ಷ ಸಹಸ್ರಾಯುಷೋ ರುದ್ರೋಮಾಭಕ್ತಾ ಇತಿ. ॥ ೪ ॥

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ಭುವನಕೋಶೇ ನದ್ಯವತಾರ ನಿರೂಪಣಂ ನಾಮ ದ್ವ್ಯಶೀತಿತಮೋಧ್ಯಾಯಃ.

---

೪. ಆ ದೇಶಗಳು ಆ ನದಿಗಳ ನೀರನ್ನು ಸೇವಿಸುತ್ತವೆ. ಸೀತಾ, ಸುವಾಹಿನೀ, ಹಂಸವತೀ, ಕಾಸಾ, ಮಹಾವಕ್ತ್ರಾ, ಚಂದ್ರವತೀ, ಕಾವೇರೀ, ಸುರಸಾಖ್ಯಾವತೀ, ಇಂದ್ರವತೀ, ಅಂಗಾರವಾಹಿನೀ, ಹರಿತ್ತೋಯಾ, ಸೋಮಾವರ್ತಾ, ಶತಹ್ರದಾ ವನಮಾಲಾ, ವಸುಮತೀ, ಹಂಸಾ, ಸುಪರ್ಣಾ, ಪಂಚಗಂಗಾ, ಧನುಷ್ಮತೀ, ಮಣಿವಪ್ರಾ, ಸುಬ್ರಹ್ಮಭಾಗಾ, ವಿಲಾಸಿನೀ, ಕೃಷ್ಣತೋಯಾ, ಪುಣ್ಯೋದಾ ನಾಗವತೀ, ಶಿವಾ, ಶೈವಾಲಿನೀ, ಮಣಿತಟಾ, ಕ್ಷೀರೋದಾ, ವರುಣಶಾಲೀ, ವಿಷ್ಣುಪದೀ, ಎಂಬಿವು ಆ ಪರ್ವತಗಳಿಂದ ಪ್ರವಹಿಸುವ ನದಿಗಳು. ಈ ಮಹಾನದಿಗಳ ನೀರನ್ನು ಕುಡಿಯುವವರು ಹತ್ತುಸಾವಿರ ವರ್ಷ ಆಯುಸ್ಸುಳ್ಳವರಾಗಿ ಪಾರ್ವತೀಪರಮೇಶ್ವರ ಭಕ್ತರಾಗಿರುವರು.

ಅಧ್ಯಾಯದ ಸಾರಾಂಶ—

ಮೇರು ಮತ್ತು ಅದರ ಉಪಪರ್ವತಗಳಲ್ಲಿ ಹುಟ್ಟುವ ನದಿಗಳನ್ನು ವರ್ಣಿಸುವುದರಿಂದ ವರಾಹಪುರಾಣದ ಎಂಭತ್ತೆರಡನೆಯ ಅಧ್ಯಾಯವು ಮುಗಿಯುವುದು.

|| ಶ್ರೀಃ ||

–x–

ತ್ರ್ಯಶೀತಿತಮೋಧ್ಯಾಯಃ

ಅಥ ನೈಷಧಸ್ಥಕುಲಾಚಲಜನಪದನದೀವರ್ಣನಂ

|| ರುದ್ರ ಉವಾಚ ||

ನಿಸರ್ಗ ಏಷಭದ್ರಾಶ್ವಾನಾಂ ಕೀರ್ತಿತೋವಃ ಕೇತುಮಾಲಾನಾಂ ವಿಸ್ತರೇಣಕಥಿತಂ. ನೈಷಧಸ್ಯಾಚಲೇಂದ್ರಸ್ಯ ಪಶ್ಚಿಮೇನ ಕುಲಾಚಲ ಜನಪದನದ್ಯಃ ಕೀರ್ತ್ಯಂತೇ. ತಥಾಚ ವಿಶಾಖ ಕಂಬಲಜಯಂತ ಕೃಷ್ಣ ಹರಿತಾಶೋಕ ವರ್ಧಮಾನ ಇತ್ಯೇತೇ ಸಪ್ತಕುಲಪರ್ವತಾನಾಂ ಕೋಟಿಶಃ ಪ್ರಸೂತಿಃ. ತನ್ನಿವಾಸನೋ ಜನಪದಾಸ್ತನ್ನಾಮಾನ ಏವದ್ರಷ್ಟವ್ಯಾಃ.|| ೧ ||

ಎಂಭತ್ತಮೂರನೆಯ ಅಧ್ಯಾಯ

ನೈಷಧದಲ್ಲಿರುವ ಕುಲಾಚಲ ದೇಶ ನದಿಗಳ ವರ್ಣನೆ

೧. ರುದ್ರ—ಭದ್ರಾಶ್ವವರ್ಷದೇಶಗಳ ಮತ್ತು ಕೇತುಮಾಲವರ್ಷದೇಶಗಳ ಸ್ವಭಾವವನ್ನು ನಿಮಗೆ ವಿಸ್ತಾರವಾಗಿ ಹೇಳಿದುದಾಯಿತು. ನೈಷಧವೆಂಬ ಮಹಾಪರ್ವತದ ಪಶ್ಚಿಮದಲ್ಲಿರುವ ಕುಲಪರ್ವತದೇಶನದಿಗಳನ್ನು ಹೇಳುತ್ತೇನೆ. ವಿಶಾಖ, ಕಂಬಲ, ಜಯಂತ, ಕೃಷ್ಣ, ಹರಿತ, ಅಶೋಕ, ವರ್ಧಮಾನ ಎಂಬ ಈ ಏಳು ಕುಲಪರ್ವತಗಳು ಕೋಟಿಸಂಖ್ಯೆಯ ಪರ್ವತಗಳ ಜನಕಗಳು. ಅವುಗಳಲ್ಲಿರುವ ದೇಶಗಳನ್ನು ಅದೇ ಹೆಸರಿನವುಗಳನ್ನಾಗಿಯೇ ಅರಿಯಬೇಕು.

ತದ್ಯಥಾ ಸೌರಗ್ರಾಮಾಂತ ಸಾತಪಃ ಕೃತಸುರಾಶ್ರವಣಕಂಬಲ ಮಾಹೇಯಾ ಚಲಕೂಟವಾಸಮೂಲತಪಕ್ರೌಂಚ ಕೃಷ್ಣಾಂಗಮಣಿಪಂಕಜ ಚೂಡಮಲ ಸೋಮಿಾಯ ಸಮುದ್ರಾಂತಕ ಕುರಕುಂಜ ಸುವರ್ಣತಟ ಕುಹಶ್ವೇತಾಂಗ ಕೃಷ್ಣಪಾದವಿದ ಕಪಿಲಕರ್ಣಿಕಮಹಿಷ ಕುಬ್ಜಕರನಾಟ ಮಹೋತ್ಕಟ ಶುಕನಾಕ ಸಗಜಭೂಮ ಕಕುರಂಜನಮಹಾನಾಹಕಿಕಿ ಸಪರ್ಣಭೌಮುಕ, ಚೋರಕ ಧೂಮಜನ್ಮಾಂಗಾರ ಜಜೀವಲೌಕಿಕಾ ವಾಚಾಂಸಹಾಂಗ ಮಧುರೇಯ ಶುಕೇಯ ಚಕೇಯ ಶ್ರವಣ ಮತ್ತ ಕಾಶಿಕ ಗೋದಾವಾಮ ಕುಲಪಂಜಾಬ ವರ್ಜಹ ಮೋದಶಾಲಕಾ ಏತೇ ಜನಪದಾಸ್ತತ್ಪರ್ವತಸ್ಥಾ ನದೀಃ ಪಿಬಂತಿ. || ೨ ||

ತದ್ಯಥಾ ಪ್ಲಾಕ್ಷಾ ಮಹಾಕದಂಬಾ ಮಾನಸೀ ಶ್ಯಾಮಾಸುಮೇಧಾ ಬಹುಲಾ ವಿವರ್ಣಾ ಪುಂಖಾಮಾಲಾ ದರ್ಭವತೀ ಭದ್ರನದೀ ಶುಕನದೀ

---

೨. ಸೌರಗ್ರಾಮಾಂತ, ಸಾತಪ, ಕೃತಸುರಾ, ಶ್ರವಣ, ಕಂಬಲ, ಮಾಹೇಯಾಚಲ, ಕೂಟವಾಸ, ಮೂಲ, ತಪ, ಕ್ರೌಂಚ ಕೃಷ್ಣಾಂಗ, ಮಣಿ, ಪಂಕಜ, ಚೂಡಮಲ, ಸೋಮಿಾಯ, ಸಮುದ್ರಾಂತಕ, ಕುರಕುಂಜ, ಸುವರ್ಣತಟ, ಕುಹ, ಶ್ವೇತಾಂಗ, ಕೃಷ್ಣಪಾದ, ವಿದ, ಕಪಿಲ, ಕರ್ಣಿಕ, ಮಹಿಷ, ಕುಬ್ಜ, ಕರನಾಟ, ಮಹೋತ್ಕಟ, ಶುಕ, ನಾಕ, ಸಗಜ, ಭೂಮ, ಕಕುರಂಜನ, ಮಹಾನಾಹ, ಕಿಕಿಸಪರ್ಣ, ಭೌಮುಕ, ಚೋರಕ, ಧೂಮಜನ್ಮ, ಅಂಗಾರಜ, ಜೀವಲೌಕಿತಾ, ವಾಚಾಂಸಹಾಂಗ, ಮಧುರೇಯ, ಶುಕೇಯ, ಚಕೇಯ, ಶ್ರವಣ, ಮತ್ತಕಾಶಿಕ, ಗೋದಾವಾಮ, ಕುಲಪಂಜಾಬ, ವರ್ಜ್ಜಹ, ಮೋದಶಾಲ ಎಂಬ ದೇಶಗಳು ಆ ಪರ್ವತಗಳಲ್ಲಿರುವ ನದಿಗಳನ್ನು ಸೇವಿಸುವುವು.

೩. ಪ್ಲಾಕ್ಷಾ, ಮಹಾಕದಂಬಾ, ಮಾನಸೀ, ಶ್ಯಾಮಾ, ಸುಮೇಧಾ, ಬಹುಲಾ, ವಿವರ್ಣಾ, ಪುಂಖಾ, ಮಾಲಾ, ದರ್ಭವತೀ, ಭದ್ರನದೀ, ಶುಕನದೀ,

ಪಲ್ಲವಾ ಭೀಮಾ ಪ್ರಭಂಜನಾ ಕಾಂಬಾ ಕುಶಾವತೀ ದಕ್ಷಾ ಕಾಸವತೀ ತುಂಗಾ ಪುಣ್ಯೋದಾ ಚಂದ್ರಾವತೀ ಸುಮೂಲಾವತೀ ಕಕುಪದ್ಮಿನೀ ವಿಶಾಲಾ ಕರಂಟಿಕಾ ಪೀವರೀ ಮಹಾಮಾಯಾ ಮಹಿಷೀ ಮಾನುಷೀ ಚಂಡಾ ಏತಾಃ ನದೀಪ್ರಧಾನಾಃ. ಶೇಷಾಃ ಕ್ಷುದ್ರನದ್ಯಃ ಸಹಸ್ರಶಶ್ಚೇತಿ. ॥ ೩ ॥

ಇತಿ ಶ್ರೀವರಾಹಪುರಾಣೇ ರುದ್ರಗೀತಾಸು ನೈಷಧಸ್ಥಕುಲಾಚಲ ಜನಪದನದೀನಿರೂಪಣಂ ನಾಮ ತ್ರ್ಯಶೀತಿತಮೋಽಧ್ಯಾಯಃ.

ಪಲ್ಲವಾ, ಭೀಮಾ, ಪ್ರಭಂಜನಾ, ಕಾಂಬಾ, ಕುಶಾವತೀ, ದಕ್ಷಾ, ಕಾಸಾವತೀ, ತುಂಗಾ, ಪುಣ್ಯೋದಾ, ಚಂದ್ರಾವತೀ, ಸುಮೂಲಾವತೀ, ಕಕುಪದ್ಮಿನೀ, ವಿಶಾಲಾ, ಕರಂಟಿಕಾ, ಪೀವರೀ, ಮಹಾಮಾಯಾ, ಮಹಿಷೀ, ಮಾನುಷೀ, ಚಂಡಾ ಎಂಬಿವು ಮುಖ್ಯನದಿಗಳು. ಉಳಿದ ಸಾವಿರಾರು, ಚಿಕ್ಕ ನದಿಗಳು.

ಅಧ್ಯಾಯದ ಸಾರಾಂಶ—

ನೈಷಧಪರ್ವತಪ್ರಾಂತದಲ್ಲಿರುವ ಕುಲಪರ್ವತಗಳನ್ನೂ ದೇಶಗಳನ್ನೂ ನದಿಗಳನ್ನೂ ವರ್ಣಿಸುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಎಂಭತ್ತಮೂರನೆಯ ಅಧ್ಯಾಯ.

|| ಶ್ರೀಃ ||

–x–

ಚತುರಶೀತಿತಮೋಧ್ಯಾಯಃ

ಅಥ ಮೇರೋರ್ದಕ್ಷಿಣೋತ್ತರವರ್ಷವರ್ಣನಂ

॥ ರುದ್ರ ಉವಾಚ ॥

ಉತ್ತರಾಣಾಂ ಚ ವರ್ಷಾಣಾಂ ದಕ್ಷಿಣಾನಾಂ ಚ ಸರ್ವಶಃ |
ಆಚಕ್ಷತೇ ಯಥಾನ್ಯಾಯಂ ಯೇ ಯೇ ಪರ್ವತವಾಸಿನಃ |
ತಚ್ಛೃಣುಧ್ವಂ ಮಯಾ ವಿಪ್ರಾಃ ಕೀರ್ತ್ಯಮಾನಂ ಸಮಾಹಿತಾಃ ॥ ೧ ॥

ಉತ್ತರೇಣ ತು ಮೇರೋಶ್ಚ ತಥಾ ಶ್ವೇತಸ್ಯ ದಕ್ಷಿಣೇ* || ೨ ||

ವಾಯವ್ಯಂ ರಮ್ಯಕಂ ನಾಮ ಜಾಯಂತೇ ತತ್ರ ಮಾನವಾಃ ।
ಮತಿಪ್ರಧಾನಾ ವಿಮಲಾ ಜರಾದುರ್ಗತಿವರ್ಜಿತಾಃ || ೩ ||

ಎಂಭತ್ತನಾಲ್ಕನೆಯ ಅಧ್ಯಾಯ

ಮೇರುವಿನ ದಕ್ಷಿಣೋತ್ತರಗಳಲ್ಲಿರುವ ವರ್ಷ(ಭೂಭಾಗ)ಗಳ ವರ್ಣನೆ

೧. ರುದ್ರ—ಮೇರುವಿನ ಉತ್ತರದಲ್ಲಿಯೂ, ದಕ್ಷಿಣದಲ್ಲಿಯೂ ಪರ್ವತ ಪ್ರಾಂತದಲ್ಲಿರುವ ವರ್ಷ(ಭೂಭಾಗ)ಮೊದಲಾದುವುಗಳನ್ನು ಕ್ರಮವಾಗಿ ಹೇಳುತ್ತೇನೆ. ಬ್ರಾಹ್ಮಣರೇ, ಗಮನವಿಟ್ಟು ಕೇಳಿ.

೨–೩. ಮೇರುವಿನ ಉತ್ತರದಲ್ಲೂ, ಶ್ವೇತಪರ್ವತಕ್ಕೆ ದಕ್ಷಿಣದಲ್ಲೂ ವಾಯುವ್ಯದಲ್ಲಿ ರಮ್ಯಕರವೆಂಬ ವರ್ಷ(ಭೂಭಾಗ)ವಿದೆ. ಅಲ್ಲಿ ಬುದ್ಧಿ ಪ್ರಧಾನರೂ, ನಿರ್ಮಲರೂ, ಮುಪ್ಪು, ದುರ್ಗತಿಯೂ, ಇಲ್ಲದವರೂ ಆದ ಮನುಷ್ಯರಿರುವರು.

---

* ದಕ್ಷಿಣೇನ ತು ಮೇರೋಶ್ಚ ಶ್ವೇತಸ್ಯ ಚೋತ್ತರೇಣ ಚ । ಎಂಬ ಅಸಂಬದ್ಧವೂ, ಛಂದೋ ಭಂಗವೂ ಉಳ್ಳ ಪಾಠವು ಮುದ್ರಿತ ಪುಸ್ತಕಗಳಲ್ಲಿದೆ. ಅರ್ಥವು ಹೊಂದದಿರುವುದರಿಂದ ಮೇಲಿನಂತೆ ತಿದ್ದಿದೆ.

ತತ್ರಾಪಿ ಸುಮಹಾನ್ವೃಕ್ಷೋ ನ್ಯಗ್ರೋಧೋ ರೋಹಿತಃ ಸ್ಮೃತಃ ॥ ೪ ॥

ತತ್ಫಲರಸಪಾನಾಚ್ಚ ದಶವರ್ಷಸಹಸ್ರಿಣಃ ।
ಆಯುಷಾ ಸರ್ವಮನುಜಾ ಜಾಯಂತೇ ದೇವರೂಪಿಣಃ ॥ ೫ ॥

ಉತ್ತರೇಣ ಚ ಶ್ವೇತಸ್ಯ ತ್ರಿಶೃಂಗಸ್ಯ ಚ ದಕ್ಷಿಣೇ
ವರ್ಷಂ ಹಿರಣ್ಮಯಂ ನಾಮ ತತ್ರ ಹೈರಣ್ವತೀ ನದೀ ।
ಯಕ್ಷಾವಸಂತಿ ತತ್ರೈವ ಬಲಿನಃ ಕಾಮರೂಪಿಣಃ ॥ ೬ ॥

ಏಕಾದಶಸಹಸ್ರಾಣಿ ಸಮಾನಾಂ ತತ್ರ ಜೀವಿತಂ ।
ಶತಾನ್ಯನ್ಯಾನಿ ಜೀವ್ಯಂತೇ ವರ್ಷಾಣಾಂ ದಶ ಪಂಚ ಚ ॥ ೭ ॥

ಲಕುಚಾಃ ಪನಸಾಃ ವೃಕ್ಷಾಸ್ತಸ್ಮಿನ್ದೇಶೇ ವ್ಯವಸ್ಥಿತಾಃ ।
ತತ್ಫಲಪ್ರಾಶನಾದೇವ ಜೀವಂತಿ ಬಹುವಾಸರಂ ॥ ೮ ॥

---

೪. ಅಲ್ಲಿಯ ಬಹಳ ದೊಡ್ಡ ಆಲದ ಮರವು ಕೆಂಪುಬಣ್ಣದ್ದೆನಿಸಿಕೊಂಡಿದೆ

೫. ಅದರ ಹಣ್ಣಿನ ರಸವನ್ನು ಕುಡಿಯುವುದರಿಂದ ಮನುಷ್ಯರೆಲ್ಲರೂ ಹತ್ತುಸಾವಿರವರ್ಷ ಆಯುಸ್ಸುಳ್ಳವರೂ, ದೇವರೂಪಿಗಳೂ ಆಗುವರು.

೬. ಶ್ವೇತಪರ್ವತಕ್ಕೆ ಉತ್ತರದಲ್ಲಿ ತ್ರಿಶೃಂಗಕ್ಕೆ ದಕ್ಷಿಣದಲ್ಲಿ ಹಿರಣ್ಮಯ ವೆಂಬ ವರ್ಷವಿದೆ. ಅಲ್ಲಿ ಹೈರಣ್ವತೀ ನದಿ. ಬಲಶಾಲಿಗಳೂ, ಕಾಮ ರೂಪಿಗಳೂ ಆದ ಯಕ್ಷರು ಅಲ್ಲೇ ವಾಸಿಸುವರು.

೭. ಅಲ್ಲಿಯವರ ಆಯುಸ್ಸು ಹನ್ನೊಂದುಸಾವಿರವರ್ಷ. ಅಲ್ಲಿಯ ಬೇರೆ ಪ್ರಾಣಿಗಳು ಸಾವಿರದೈನೂರುವರ್ಷಕಾಲ ಜೀವಿಸುವುವು.

೮. ಆ ಸ್ಥಳದಲ್ಲಿ ನಿಂಬೆಗಿಡಗಳೂ, ಹಲಸಿನ ಮರಗಳೂ ಇವೆ. ಆ ಹಣ್ಣುಗಳನ್ನು ಒಂದು ಸಾರಿ ತಿನ್ನುವುದರಿಂಲೇ ಅಲ್ಲಿಯವರು ಹಲವು ವಾರಗಳು ಜೀವಿಸುವರು.

ತಥಾ ತ್ರಿಶೃಂಗೇ ಚ ಮಣಿಕಾಂಚನಸರ್ವರತ್ನಶಿಖರೋರುಕ್ರಮೇಣ ।
ತಸ್ಯ ಚೋತ್ತರಶೃಂಗಾ*ದುತ್ತರಸಮುದ್ರಾಂತಂ ಚೋತ್ತರಕುರವಃ ॥ ೯ ॥

ತತ್ರ ಚ ಕ್ಷೀರವೃಕ್ಷಾ ಮಧ್ವಾಸವಾಃ ಸಂತಿ. ತೇಷು ವೃಕ್ಷೇಷ್ವೇವ ವಸ್ತ್ರಾಣ್ಯಾಭರಣಾನಿ ಚ. ಮಣಿಮಯಾ ಭೂಮಿಃ ಸುವರ್ಣವಾಲುಕಾ. ತಸ್ಮಿನ್ ಸ್ವರ್ಗಚ್ಯುತ್ಯಾಃ ಪುರುಷಾಃ ವಸಂತಿ. ತ್ರಯೋದಶವರ್ಷ ಸಹಸ್ರಾಯುಷಃ. ॥ ೧೦ ॥

ತಸ್ಯೈವ ದ್ವೀಪಸ್ಯ ಪಶ್ಚಿಮೇನ ಚತುರ್ಯೋಜನಸಹಸ್ರಮತಿಕ್ರಮ್ಯ ದೇವಲೋಕಾಚ್ಚಂದ್ರದ್ವೀಪೋ ಭವತಿ ಯೋಜನಸಹಸ್ರಪರಿಮಂಡಲಃ. ತಸ್ಯ ಮಧ್ಯೇ ಚಂದ್ರಕಾಂತಸೂರ್ಯಕಾಂತನಾಮಾನೌ ಗಿರಿಪ್ರಸ್ರವಣೌ. ॥ ೧೧ ॥

---

೯. ಹಾಗೆಯೇ ತ್ರಿಶೃಂಗದಲ್ಲಿ ರತ್ನಸುವರ್ಣಸರ್ವರತ್ನಶಿಖರಗಳೆಂದು ಕ್ರಮವಾಗಿ ಮೇಲಾಗಿರುವವುಗಳಲ್ಲಿ ಉತ್ತರಭಾಗದ ಶಿಖರದಿಂದ ಉತ್ತರಸಮುದ್ರದವರೆಗೂ ಉತ್ತರಕುರು(ವರ್ಷ)ದೇಶವಿದೆ.

೧೦. ಅಲ್ಲಿ ಕ್ಷೀರವೃಕ್ಷಗಳೂ ಮಾವಿನಮದ್ಯಗಳೂ ಇವೆ. ಆ ಮರಗಳಲ್ಲಿಯೇ ವಸ್ತ್ರಾಭರಣಗಳೂ ದೊರೆಯುವುವು. ಭೂಮಿಯು ಚಿನ್ನದ ಮರಳುಳ್ಳುದಾಗಿ ರತ್ನಮಯವಾಗಿದೆ. ಅಲ್ಲಿ ಸ್ವರ್ಗಚ್ಯುತರಾದ ಮನುಷ್ಯರು ವಾಸಿಸುವರು ಅವರು ಹದಿಮೂರುಸಾವಿರವರ್ಷ ಆಯುಸ್ಸುಳ್ಳವರು.

೧೧. ಅದೇ ದ್ವೀಪದ ಪಶ್ಚಿಮದಲ್ಲಿ ದೇವಲೋಕದಿಂದ ನಾಲ್ಕುಸಾವಿರ ಯೋಜನದಿಂದಾಚೆ ಸಾವಿರಯೋಜನ ಸುತ್ತಳತೆಯುಳ್ಳ ಚಂದ್ರದ್ವೀಪವಿದೆ. ಅದರ ಮಧ್ಯದಲ್ಲಿ ಚಂದ್ರಕಾಂತ ಸೂರ್ಯಕಾಂತಗಳೆಂಬ ಹೆಸರಿನ ಬೆಟ್ಟದ ಚಿಲುಮೆಗಳಿವೆ.

---

* ದಕ್ಷಿಣ ಎಂಬ ಅಸಂಬದ್ಧಪಾಠವು ಮುದ್ರಿತಪುಸ್ತಕಗಳಲ್ಲಿದೆ.

ತಯೋರ್ಮಧ್ಯೇ ಚಂದ್ರಾವರ್ತಾ ನಾಮ ಮಹಾನದೀ ಅನೇಕ ವೃಕ್ಷಸಮಾಕುಲಾನೇಕನದೀಯುಕ್ತಾ. ॥ ೧೨ ॥

ಏತತ್ಕುರುವರ್ಷಾಂತಸ್ಯೋತ್ತರಪಾರ್ಶ್ವೇ ಸಮುದ್ರೋರ್ಮಿ ಮಾಲಾಢ್ಯಂ ಪಂಚಯೋಜನಸಹಸ್ರಮತಿಕ್ರಮ್ಯ ದೇವಲೋಕಾತ್ಸೂರ್ಯ ದ್ವೀಪೋ ಭವತಿ ಯೋಜನಸಹಸ್ರಪರಿಮಂಡಲಃ. ॥ ೧೩ ॥

ತಸ್ಯ ಮಧ್ಯೇ ಗಿರಿವರಃ ಶತಯೋಜನವಿಸ್ತೀರ್ಣಸ್ತದುಚ್ಛ್ರಿತಃ. ತಸ್ಮಾತ್ಸೂರ್ಯಾವರ್ತನಾಮಾ ನದೀ ನಿರ್ಗತಾ. ತತ್ರ ಚ ಸೂರ್ಯಸ್ಯಾ ಧಿಷ್ಠಾನಂ. ತತ್ರ ಸೂರ್ಯದೈವತ್ಯಾಸ್ತದ್ವರ್ಣಾಶ್ಚ ಪ್ರಜಾಃ ದಶವರ್ಷ ಸಹಸ್ರಾಯುಷಃ ॥ ೧೪ ॥

ತಸ್ಯ ಚ ದ್ವೀಪಸ್ಯ ಪಶ್ಚಿಮೇನ ಚತುರ್ಯೋಜನಸಹಸ್ರಂ ಅತಿಕ್ರಮ್ಯ ಸಮುದ್ರದೇಶೇ ಯೋಜನಸಾಹಸ್ರಪರಿಮಂಡಲೇನ ದ್ವೀಪೋ ಭದ್ರಾಕಾರೋ ನಾಮ. ॥ ೧೫ ॥

---

೧೨. ಅವುಗಳ ನಡುವೆ ಅನೇಕವೃಕ್ಷಗಳಿಂದಿಡಿದು ಅನೇಕ ಉಪನದಿಗಳಿಂದ ಕೂಡಿದ ಚಂದ್ರಾವರ್ತಾ ಎಂಬ ದೊಡ್ಡ ನದಿಯಿದೆ.

೧೩. ಆ ಕುರುವರ್ಷದ ಕಡೆಯ ಉತ್ತರ ಪಾರ್ಶ್ವದಲ್ಲಿ ದೇವಲೋಕದಿಂದ ಐದುಸಾವಿರ ಯೋಜನದಿಂದಾಚೆಗೆ ಸಮುದ್ರದ ಅಲೆಗಳಸಾಲಿನಿಂದ ತುಂಬಿದ ಸಾವಿರಯೋಜನಮಂಡಲಾಕಾರವಾದ ಸೂರ್ಯದ್ವೀಪವಿದೆ.

೧೪. ಅದರ ನಡುವೆ ಉತ್ತಮವಾದ ಗಿರಿಯೊಂದಿದೆ. ಅದರ ಎತ್ತರವು ನೂರು ಯೋಜನ. ಅದರಿಂದ ಸೂರ್ಯಾವರ್ತವೆಂಬ ನದಿಯು ಹೊರಟಿದೆ. ಅಲ್ಲಿ ಸೂರ್ಯನ ವಾಸಸ್ಥಾನವಿದೆ. ಅಲ್ಲಿ ಸೂರ್ಯದೇವಭಕ್ತರಾದ ಸೂರ್ಯನ ಬಣ್ಣದ ಪ್ರಜೆಗಳು ಹತ್ತುಸಾವಿರ ವರ್ಷ ಆಯುಸ್ಸುಳ್ಳವರಾಗಿರುವರು.

೧೫. ಆ ದ್ವೀಪದ ಪಶ್ಚಿಮದಲ್ಲಿ ನಾಲ್ಕುಸಾವಿರಯೋಜನದಿಂದಾಚೆಗೆ ಸಮುದ್ರ ಪ್ರದೇಶದಲ್ಲಿ ಸಾವಿರಯೋಜನ ಸುತ್ತಳತೆಯುಳ್ಳ ಭದ್ರಾಕಾರವೆಂಬ ವೃತ್ತಾಕಾರದ್ವೀಪವಿದೆ.

ತತ್ರ ಚ ಭದ್ರಾಸನಂ ವಾಯೋರನೇಕರತ್ನಶೋಭಿತಂ. ತತ್ರ ಸಕಲವಿಗ್ರಹವಾನ್ವಾಯುಸ್ತಿಷ್ಠತಿ. ತಪನೀಯವರ್ಣಾಶ್ಚ ಪ್ರಜಾಃ ಪಂಚ ವರ್ಷ ಸಹಸ್ರಾಯುಷಃ. ॥ ೧೬ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ದಕ್ಷಿಣೋತ್ತರ ವರ್ಷವರ್ಣನಂ ನಾಮ ಚತುರಶೀತಿತಮೋಽಧ್ಯಾಯಃ

---

೧೬. ಅಲ್ಲಿ ವಾಯುದೇವನ ಭದ್ರಾಸನವು ಹಲವು ರತ್ನಗಳಿಂದ ಕೂಡಿ ಮನೋಹರವಾಗಿದೆ. ಅಲ್ಲಿ ಪೂರ್ಣದೇಹಧಾರಿಯಾದ ವಾಯುದೇವ ನಿರುವನು. ಜನರು ಚಿನ್ನದ ಬಣ್ಣದವರಾಗಿ ಐದುಸಾವಿರವರ್ಷ ಆಯುಸ್ಸು ಳ್ಳವರಾಗಿರುವರು.

ಅಧ್ಯಾಯದ ಸಾರಾಂಶ:—

ಮೇರುವಿನ ಉತ್ತರದಲ್ಲಿರುವ ರಮ್ಯಕ ಹಿರಣ್ಮಯಾದಿ ವರ್ಷಗಳನ್ನೂ, ದ್ವೀಪಗಳನ್ನೂ, ಅವುಗಳ ಮಹಿಮೆಯನ್ನೂ ವರ್ಣಿಸುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಎಂಬತ್ತನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

-X-

ಪಂಚಾಶೀತಿತಮೋಽಧ್ಯಾಯಃ

ಅಥ ಭಾರತೇನವಖಂಡವರ್ಣನಂ

॥ ರುದ್ರ ಉವಾಚ ॥

ಇಯಂ ಭೂಃ ಪದ್ಮವ್ಯವಸ್ಥಾ ಕಥಿತಾ. ಇದಾನೀಂ ಭಾರತ ನವಭೇದಂ ಶೃಣುತ. ತದ್ಯಥಾ ಇಂದ್ರಃ ಕಸೇರುಃ ತಾಮ್ರವರ್ಣೋ ಗಭಸ್ತಿಃ ನಾಗದ್ವೀಪಃ ತಥಾ ಸೌಮ್ಯೋ ಗಂಧರ್ವೋ ವಾರುಣೋ ಭಾರತಂ ಚೇತಿ. ॥ ೧ ॥

ಸಾಗರಸಂವೃತಮೇಕೈಕಂ ಯೋಜನಸಹಸ್ರಪ್ರಮಾಣಂ ತತ್ರ ಚ ಸಪ್ತ ಕುಲಪರ್ವತಾಃ ಸಂತಿ ತದ್ಯಥಾ. ॥ ೨ ॥

ಎಂಬತ್ತೈದನೆಯ ಅಧ್ಯಾಯ.

ಇನ್ನು ಭಾರತವರ್ಷದ ಒಂಬತ್ತು ಖಂಡಗಳ ವರ್ಣನೆ.

೧. ರುದ್ರ—ಈ ಭೂಮಿಯು ಕಮಲದಂತಿದೆಯೆಂದು ಹೇಳಿದಂತಾಯಿತು. ಈಗ ಭಾರತವರ್ಷದ ಒಂಬತ್ತು ಭೇದಗಳನ್ನು ಕೇಳಿ. ಇಂದ್ರ, ಕಸೇರು, ತಾಮ್ರವರ್ಣ, ಗಭಸ್ತಿ, ನಾಗದ್ವೀಪ, ಸೌಮ್ಯ, ಗಂಧರ್ವ, ವಾರುಣ, ಭಾರತ ಎಂಬಿವು ಒಂಭತ್ತು ಖಂಡಗಳು.

೨. ಸಾಗರದಿಂದ ಸುತ್ತಲ್ಪಟ್ಟ ಒಂದೊಂದೂ ಸಾವಿರಯೋಜನದಳತೆಯವು. ಅಲ್ಲಿ ಏಳು ಕುಲಪರ್ವತಗಳಿವೆ.

ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನೃಕ್ಷಪರ್ವತಃ |
ವಿಂಧ್ಯಶ್ಚ ಪಾರಿಯಾತ್ರಶ್ಚ ಇತ್ಯೇತೇ ಕುಲಪರ್ವತಾಃ || ೩ ||

ಅನ್ಯೇ ಚ ಮಂದರಶಾರದರ್ದುರ ಕೈಲಾಸ ಮೈನಾಕ ವೈದ್ಯುತ ವಾರಂಧಮ ಪಾಂಡುರ ತುಂಗಪ್ರಸ್ಥ ಕೃಷ್ಣಗಿರಿ ಜಯಂತೈರಾವತ ಋಷ್ಯಮೂಕ ಗೋಮಂತ ಚಿತ್ರಕೂಟ. ಶ್ರೀಪರ್ವತ ಚಕೋರಕೂಟ ಶ್ರೀಶೈಲ ಕೃತಸ್ಥಲಾ ಇತ್ಯೇತೇ ಕ್ಷುದ್ರಪರ್ವತಾಃ ಏತೇಷಾಮಪಿ ಕ್ಷುದ್ರ ತರಾಃ. ತೇಷಾಮಾರ್ಯಾ ಮ್ಲೇಚ್ಛಾ ಜನಪದಾ ವಸಂತಿ- || ೪ ||

ಪಿಬಂತಿ ಚೈತಾಸು ನದೀಷು ಪಾನೀಯಂ. ತದ್ಯಥಾ ಗಂಗಾ ಸಿಂಧುಃ ಸರಸ್ವತೀ ಶತದ್ರುರ್ವಿತಸ್ತಾ ವಿಪಾಶಾ ಚಂದ್ರಭಾಗಾ ಸರಯೂ ರ್ಯಮುನಾ ಇರಾವತೀ ದೇವಿಕಾ ಕುಹೂರ್ಗೋಮತೀ ಧೂತಪಾಪಾ ಬಾಹುದಾ ದೃಷದ್ವತೀ ಕೌಶಿಕೀ ನಿಸ್ವೀರಾ ಗಂಡಕೀ ಚಕ್ಷುಷ್ಮತೀ ಲೋಹಿತಾ ಇತ್ಯೇತಾ ಹಿಮವತ್ಪಾದನಿರ್ಗತಾಃ. || ೫ ||

---

೩. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಂತ, ಋಕ್ಷ, ವಿಂಧ್ಯ, ಪಾರಿಯಾತ್ರ ಎಂಬಿವೇ ಕುಲಪರ್ವತಗಳು.

೪. ಬೇರೆಯವಾದ ಮಂದರ, ಶಾರ, ದರ್ದುರ, ಕೈಲಾಸ, ಮೈನಾಕ, ವೈದ್ಯುತ, ವಾರಂಧಮ, ಪಾಂಡುರ, ತುಂಗಪ್ರಸ್ಥ, ಕೃಷ್ಣಗಿರಿ, ಜಯಂತ, ಐರಾವತ, ಋಷ್ಯಮೂಕ, ಗೋಮಂತ, ಚಿತ್ರಕೂಟ, ಶ್ರೀಪರ್ವತ, ಚಕೋರ ಕೂಟ, ಶ್ರೀಶೈಲ, ಕೃತಸ್ಥಲ ಎಂಬಿವು ಚಿಕ್ಕ ಬೆಟ್ಟಗಳು. ಇವುಗಳಿಗಿಂತಲೂ ಚಿಕ್ಕವೂ ಉಂಟು. ಅವುಗಳಲ್ಲಿ ಆರ್ಯರ ಮತ್ತು ಮ್ಲೇಚ್ಛರ ದೇಶಗಳಿವೆ.

೫. ಆ ದೇಶಗಳು ಮುಂದಿನ ನದಿಗಳ ನೀರನ್ನು ಕುಡಿಯುತ್ತವೆ. ಗಂಗಾ, ಸಿಂಧು, ಸರಸ್ವತಿ, ಶತದ್ರು, ವಿತಸ್ತಾ, ವಿಪಾಶಾ, ಚಂದ್ರಭಾಗಾ, ಸರಯೂ, ಯಮುನಾ, ಇರಾವತಿ, ದೇವಿಕಾ, ಕುಹೂ, ಗೋಮತೀ, ಧೂತಪಾಪಾ, ಬಾಹುದಾ, ದೃಷದ್ವತೀ, ಕೌಶಿಕೀ, ನಿಸ್ವೀರಾ, ಗಂಡಕೀ, ಚಕ್ಷುಷ್ಮತೀ, ಲೋಹಿತಾ ಎಂಬಿವು ಹಿಮವತ್ಪಾದದಿಂದ ಉದಿಸಿದ ನದಿಗಳು.

ವೇದಸ್ಮೃತಿರ್ವೇದವತೀ ಸಿಂಧುಪರ್ಣಾ ಚಂದನಾಭಾ ನಾಶದಾ ಚಾರಾ ರೋಹೀಪಾರಾ ಚರ್ಮಣ್ವತೀ ವಿದಿಶಾ ವೇದತ್ರಯೀ ವಪಂತೀ ಇತ್ಯೇತಾ ಪಾರಿಯಾತ್ರೋದ್ಭವಾಃ. ॥ ೬ ॥

ಶೋಣಾ ಜ್ಯೋತೀರಥಾ ನರ್ಮದಾ ಸುರಸಾ ಮಂದಾಕಿನೀ ದಶಾರ್ಣಾ ಚಿತ್ರಕೂಟಾ ತಮಸಾ ಪಿಪ್ಪಲಾ ಕರತೋಯಾ ಪಿಶಾಚಿಕಾ ಚಿತ್ರೋತ್ಪಲಾ ವಿಶಾಲಾ ವಂಜುಕಾ ಬಾಲವಾಹಿನೀ ಶುಕ್ತಿಮತೀ ವೀರಜಾ ಪಂಕಿನೀ ರಾತ್ರೀ ಇತ್ಯೇತಾಃ ಋಕ್ಷಪ್ರಸೂತಾಃ. ॥ ೭ ॥

ಮಣಿಜಾಲಾ ಶುಭಾ ತಾಪೀ ಪಯೋಷ್ಣೀ ಶೀಘ್ರೋದಾ ವೇಷ್ಣಾ ಪಾಶಾ ವೈತರಣೀ ವೈದಿಪಾಲಾ ಕುಮುದ್ವತೀ ತೋಯಾ ದುರ್ಗಾ ಅಂತ್ಯಾ ಗಿರಾ ಏತಾ ವಿಂಧ್ಯಪಾದೋದ್ಭವಾಃ. ॥ ೮ ॥

ಗೋದಾವರೀ ಭೀಮರಥೀ ಕೃಷ್ಣಾ ವೇಣೀ ವಂಜುಲಾ ತುಂಗಭದ್ರಾ ಸುಪ್ರಯೋಗಾ ಬಾಹ್ಯಕಾವೇರೀ ಇತ್ಯೇತಾಃ ಸಹ್ಯಪಾದೋದ್ಭವಾಃ. ॥ ೯ ॥

---

೬. ವೇದಸ್ಮೃತಿ, ವೇದವತೀ, ಸಿಂಧುಪರ್ಣಾ, ಚಂದನಾಭಾ, ನಾಶದಾಚಾರಾ, ರೋಹೀಪಾರಾ, ಚರ್ಮಣ್ವತೀ, ವಿದಿಶಾ, ವೇದತ್ರಯಿಾ, ವಪಂತೀ ಎಂಬಿವು ಪಾರಿಯಾತ್ರದಲ್ಲಿ ಹುಟ್ಟಿದ ನದಿಗಳು.

೭. ಶೋಣಾ, ಜ್ಯೋತೀರಥಾ, ನರ್ಮದಾ, ಸುರಸಾ, ಮಂದಾಕಿನೀ, ದಶಾರ್ಣಾ, ಚಿತ್ರಕೂಟಾ, ತಮಸಾ, ಪಿಪ್ಪಲಾ, ಕರತೋಯಾ, ಪಿಶಾಚಿಕಾ. ಚಿತ್ರೋತ್ಪಲಾ, ವಿಶಾಲಾ, ವಂಜುಕಾ, ಬಾಲವಾಹಿನೀ, ಶುಕ್ತಿಮತೀ, ವೀರಜಾ, ಪಂಕಿನೀ, ರಾತ್ರೀ ಎಂಬೀ ನದಿಗಳು ಋಕ್ಷಪರ್ವತದಲ್ಲಿ ಹುಟ್ಟುವುವು.

೮. ಮಣಿಜಾಲಾ, ಶುಭಾ, ತಾಪೀ, ಪಯೋಷ್ಣೀ, ಶೀಘ್ರೋದಾ, ವೇಷ್ಣಾ, ಪಾಶಾ, ವೈತರಣೀ, ವೈದಿಪಾಲಾ, ಕುಮುದ್ವತೀ, ತೋಯಾ, ದುರ್ಗಾ, ಅಂತ್ಯಾ, ಗಿರಾ, ಈ ನದಿಗಳು ವಿಂಧ್ಯಪಾದೋತ್ಪನ್ನಗಳು.

೯. ಗೋದಾವರೀ, ಭೀಮರಥೀ, ಕೃಷ್ಣಾ, ವೇಣೀ, ವಂಜುಲಾ, ತುಂಗಭದ್ರಾ, ಸುಪ್ರಯೋಗಾ, ಬಾಹ್ಯಕಾವೇರೀ ಎಂಬೀ ನದಿಗಳು ಸಹ್ಯಪರ್ವತ ಪಾದದಲ್ಲಿ ಹುಟ್ಟಿದುವುಗಳು.

ಶತಮಾಲಾ ತಾಮ್ರಪರ್ಣೀ ಪುಷ್ಪಾವತೀ ಉತ್ಪಲಾವತೀ ಇತ್ಯೇತಾ ಮಲಯಜಾಃ. ॥ ೧೦ ॥

ತ್ರಿಯಾಮಾ ಋಷಿಕುಲ್ಯಾ ಇಕ್ಷುಲಾ ತ್ರಿವಿಂದಾಲಾ ಮೂಲಿನೀ ವಂಶವರಾ ಮಹೇಂದ್ರತನಯಾಃ. ॥ ೧೧ ॥

ಋಷಿಕಾ ಲೂಸತೀ ಮಂದಗಾಮಿನೀ ಪಲಾಶಿನೀ ಇತ್ಯೇತಾಃ ಶುಕ್ತಿಮತ್ಪ್ರಭವಾಃ. ॥ ೧೨ ॥

ಏತಾಃ ಪ್ರಾಧಾನ್ಯೇನ ಕುಲಪರ್ವತನದ್ಯಃ. ಶೇಷಾಃ ಕ್ಷುದ್ರನದ್ಯಃ ಏಷ ಜಂಬೂದ್ವೀಪೋ ಯೋಜನಲಕ್ಷಪ್ರಮಾಣಃ. ॥ ೧೩ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಭಾರತೀಯ ನವಖಂಡನಿರೂಪಣಂ ನಾಮ ಪಂಚಾಶೀತಿತಮೋಽಧ್ಯಾಯಃ

---

೧೦. ಶತಮಾಲಾ, ತಾಮ್ರಪರ್ಣೀ, ಪುಷ್ಪಾವತೀ, ಉತ್ಪಲಾವತೀ ಎಂಬಿವು ಮಲಯಪರ್ವತಜಗಳು.

೧೧. ತ್ರಿಯಾಮಾ, ಋಷಿಕುಲ್ಯಾ, ಇಕ್ಷುಲಾ, ತ್ರಿವಿಂದಾಲಾ, ಮೂಲಿನೀ, ವಂಶವರಾ, ಎಂಬ ನದಿಗಳು ಮಹೇಂದ್ರಪರ್ವತದಲ್ಲಿ ಹುಟ್ಟುವವು.

೧೨. ಋಷಿಕಾ, ಲೂಸತೀ, ಮಂದಗಾಮಿನೀ, ಪಲಾಶಿನೀ ಎಂಬೀ ನದಿಗಳು ಶುಕ್ತಿಮತ್ಪರ್ವತದಲ್ಲಿ ಹುಟ್ಟುವುವು.

೧೩. ಮೇಲೆ ಹೇಳಿದ ಇವು ಮುಖ್ಯವಾದ ಕುಲಪರ್ವತನದಿಗಳು. ಉಳಿದುವು ಕ್ಷುದ್ರನದಿಗಳು. ಜಂಬೂದ್ವೀಪವು ಲಕ್ಷಯೋಜನದಳತೆಯುಳ್ಳದು.

ಅಧ್ಯಾಯದ ಸಾರಾಂಶ :—

ಭರತವರ್ಷದಲ್ಲಿರುವ ನವಖಂಡಗಳನ್ನೂ, ಆ ಖಂಡಗಳಲ್ಲಿರುವ ಕುಲ ಪರ್ವತೋಪಪರ್ವತಗಳನ್ನೂ, ಆ ಪರ್ವತಗಳಲ್ಲಿ ಹುಟ್ಟಿ ಹರಿಯುವ ಮಹಾ ನದಿಗಳನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಂಭತ್ತೈದನೆಯ ಅಧ್ಯಾಯ.

॥ ಶ್ರೀಃ ॥

-x-

ಷಡಶೀತಿತಮೋಽಧ್ಯಾಯಃ

ಅಥ ಶಾಕದ್ವೀಪನಿರೂಪಣಂ

॥ ರುದ್ರ ಉವಾಚ ॥

ಅತಃ ಪರಂ *ಶಾಕದ್ವೀಪಂ ನಿಬೋಧತ. ಜಂಬೂದ್ವೀಪಸ್ಯ ವಿಸ್ತಾರಾದ್ದ್ವಿಗುಣಪರಿಣಾಹಾಲ್ಲವಣೋದಕಜಂಬೂದ್ವೀಪಸಮಃ ತೇನ ದ್ವಿಗುಣಾವೃತ್ತಃ. ॥ ೧ ॥

ಎಂಭತ್ತಾರನೆಯ ಅಧ್ಯಾಯ

ಶಾಕದ್ವೀಪವರ್ಣನೆ

೧. ರುದ್ರ—ಇನ್ನು ಶಾಕದ್ವೀಪವನ್ನು ತಿಳಿಯಿರಿ. ಅದು ಜಂಬೂದ್ವೀಪದ ವಿಸ್ತಾರಕ್ಕೆ ಎರಡರಷ್ಟು ವಿಸ್ತಾರವಾಗಿರುವುದರಿಂದ ಲವಣಸಮುದ್ರ ಜಂಬೂ ದ್ವೀಪಗಳ ವಿಸ್ತಾರಕ್ಕೆ ಸಮವಾಗಿದೆ. ಆದುದರಿಂದ ಎರಡರಷ್ಟು ಸುತ್ತಳತೆ ಯುಳ್ಳುದು.

---

* ಜಂಬೂದ್ವೀಪದ ಸುತ್ತಲೂ ಲವಣಸಮುದ್ರವೂ, ಅದರ ಸುತ್ತಲೂ ಜಂಬೂ ದ್ವೀಪಕ್ಕೆ ಎರಡರಷ್ಟು ವಿಸ್ತಾರವಾದ ಪ್ಲಕ್ಷದ್ವೀಪವೂ ಇದೆಯೆಂದು ವಿಷ್ಣುಭಾಗವತ (೫ನೆಯ ಸ್ಕಂಧ ೨೦ನೆಯ ಅಧ್ಯಾಯ) ದೇವೀ ಭಾಗವತ (೮ನೆಯ ಸ್ಕಂದ ೧೨ನೆಯ ಅಧ್ಯಾಯ) ಮೊದ ಲಾದುವುಗಳಲ್ಲಿ ಹೇಳಿದೆ. ಈ ವರಾಹ ಪುರಾಣದಲ್ಲಿ ಹೇಳಿರುವುದು ಬೇರೆಯಾಗಿದೆ. ಕುಶ, ಶಾಲ್ಮಲಿ ಮೊದಲಾದ ದ್ವೀಪಗಳ ವಿಚಾರವೂ ಹೀಗೆಯೇ ಇತರ ಪುರಾಣಗಳಿಗಿಂತ ಇಲ್ಲಿ ಭಿನ್ನವಾಗಿದೆ.

ತತ್ರ ಚ ಪುಣ್ಯಾಃ ಜನಪದಾಶ್ಚಿರಾತ್ಮಾನಃ. ತೇ ದುರ್ಭಿಕ್ಷಜರಾವ್ಯಾಧಿರಹಿತಾಶ್ಚ. ದೇಶೇತ್ರ ಸಪ್ತೈವ ಕುಲಪರ್ವತಾಸ್ತಾವತ್ತಿಷ್ಠಂತಿ. ತಸ್ಯ ಚೋಭಯತೋ ಲವಣಕ್ಷೀರೋದಧೀ ವ್ಯವಸ್ಥಿತೌ. ॥ ೨ ॥

ತತ್ರ ಚ ಪ್ರಾಗಾಯತಃ ಶೈಲೇಂದ್ರ ಉದಯೋ ನಾಮ ಪರ್ವತಃ. ತಸ್ಯಾಪರೇಣ ಜಲಧಾರೋ ನಾಮ ಗಿರಿಃ ಸ ಏವ ಚಂದ್ರೇತಿ ಕೀರ್ತಿತಃ ತಸ್ಯ ಜಲಂ ಚ ಇಂದ್ರೋ ಗೃಹೀತ್ವಾ ವರ್ಷತಿ. ॥ ೩ ॥

ತಸ್ಯಾಪರಃ ಶ್ವೇತಕೋ ನಾಮ ಗಿರಿಃ. ತಸ್ಮಿನ್ ಷಟ್ಪೇತಿ ಕೀರ್ತಿತಾಃ. ಪ್ರಜಾ ಅನೇಕವಿಧಾಃ ಕ್ರೀಡಂತಿ. ॥ ೪ ॥

ತಸ್ಯಾಪರೋ ರಜತೋ ಗಿರಿಃ. ಸ ಏವ ಶಾಕೋ ನಾಮ್ನೋಚ್ಯತೇ. ತಸ್ಯ ಪರೇಣಾಂಬಿಕೇಯಃ ಸ ಚ ವಿಭ್ರಾಜಸೋ ಭಣ್ಯತೇ. ಸ ಏವ ಕೇಸರೀತ್ಯುಚ್ಯತೇ. ತತೋ ವಾಯುಃ ಪ್ರವರ್ತತೇ. ॥ ೫ ॥

---

೨. ಆ ದೇಶದವರು ಪುಣ್ಯಾತ್ಮರೂ, ಚಿರಜೀವಿಗಳೂ ಆಗಿರುವರು. ಕ್ಷಾಮವಾರ್ಧಕ್ಯವ್ಯಾಧಿರಹಿತರೂ ಅಹುದು. ಆ ದೇಶದಲ್ಲಿ ಏಳೇ ಕುಲಪರ್ವತಗಳಿರುವುವು. ಆ ದ್ವೀಪದ ಒಂದು ಕಡೆ ಲವಣಸಮುದ್ರವೂ, ಮತ್ತೊಂದು ಕಡೆ ಕ್ಷೀರ ಸಮುದ್ರವೂ ಇವೆ.

೩. ಆ ದ್ವೀಪದ ಪೂರ್ವಭಾಗದಲ್ಲಿ ವಿಸ್ತಾರವಾದ ಉದಯವೆಂಬ ಮಹಾ ಪರ್ವತ. ಅದರ ಪಶ್ಚಿಮದಲ್ಲಿ ಜಲಧಾರವೆಂಬ ಗಿರಿಯಿದೆ. ಅದೇ ಚಂದ್ರ ಎಂದು ಪ್ರಸಿದ್ಧವಾಗಿದೆ. ಇಂದ್ರನು ಅದರ ನೀರನ್ನು ತೆಗೆದುಕೊಂಡು ಮಳೆಯನ್ನು ಸುರಿಸುತ್ತಾನೆ.

೪. ಅದರ ಪಶ್ಚಿಮದಲ್ಲಿ ಶ್ವೇತಕವೆಂಬ ಗಿರಿಗಳು ಆರೆನ್ನುವರು. ಹಲವು ಬಗೆಯ ಪ್ರಜೆಗಳು ಅಲ್ಲಿ ವಿಹರಿಸುವರು.

೫. ಅದರ ಪಶ್ಚಿಮದಲ್ಲಿ ರಜತಗಿರಿ. ಅದನ್ನೇ ಶಾಕವೆಂಬ ಹೆಸರಿನಿಂದ ಕರೆಯುವರು. ಅದರ ಪಕ್ಕದಲ್ಲಿ ಅಂಬಿಕೇಯಪರ್ವತ. ಅದನ್ನೇ ವಿಭ್ರಾಜಸವೆಂದೂ ಕೇಸರಿಯೆಂದೂ ಹೇಳುವರು. ಅದರಿಂದ ವಾಯು ಬೀಸುವುದು.

ಗಿರಿನಾಮಾನ್ಯೇವ ವರ್ಷಾಣಿ. ತದ್ಯಥಾ ಉದಯಸುಕುಮಾರೋ ಜಲಧಾರಕ್ಷೇಮಕಮಹಾದ್ರುಮಾ ಇತಿ ಪ್ರಧಾನನಾಮಾನಿ. ದ್ವಿತೀಯ ಪರ್ವತನಾಮಭಿರಪಿ ವಕ್ತವ್ಯಾನಿ. ॥ ೬ ॥

ತಸ್ಯ ಚ ಮಧ್ಯೇ ಶಾಕವೃಕ್ಷಃ. ತತ್ರ ಚ ಸಪ್ತ ಮಹಾನದ್ಯೋ ದ್ವಿನಾಮ್ನ್ಯಃ. ತದ್ಯಥಾ ಸುಕುಮಾರೀ ಕುಮಾರೀ ನಂದಾ ವೇಣಿಕಾ ಧೇನುರಿಕ್ಷುಮತೀ ಗಭಸ್ತಿರಿತ್ಯೇತಾ ನದ್ಯಃ. ॥ ೭ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಶಾಕದ್ವೀಪ ನಿರೂಪಣಂ ನಾಮ ಷಡಶೀತಿತಮೋಽಧ್ಯಾಯಃ

---

೬. ದ್ವೀಪದಲ್ಲಿರುವ ವರ್ಷ (ಭೂಭಾಗ) ಗಳಿಗೂ ಆಯಾ ಪರ್ವತಗಳ ಹೆಸರೇ. ಹೇಗೆಂದರೆ—ಉದಯ, ಸುಕುಮಾರ, ಜಲಧಾರ, ಕ್ಷೇಮಕ, ಮಹಾದ್ರುಮ, ಎಂಬಿವು (ವರ್ಷಗಳ) ಮುಖ್ಯನಾಮಗಳು. ಪರ್ವತಗಳ ಎರಡನೆಯ ಹೆಸರುಗಳನ್ನು ವರ್ಷಗಳಿಗೂ ಹೇಳಬಹುದು.

೭. ದ್ವೀಪದ ನಡುವೆ ಶಾಕವೃಕ್ಷವಿದೆ. ಅಲ್ಲಿ ಏಳು ಮಹಾನದಿಗಳು ಎರಡೆರಡು ಹೆಸರಿನವು. ಸುಕುಮಾರೀ, ಕುಮಾರೀ, ನಂದಾ, ವೇಣಿಕಾ, ಧೇನು, ಇಕ್ಷುಮತೀ, ಗಭಸ್ತಿ ಎಂಬಿವು ನದಿಗಳು.

ಅಧ್ಯಾಯದ ಸಾರಾಂಶ:—

ಶಾಕದ್ವೀಪದ ಸನ್ನಿವೇಶ, ವಿಸ್ತಾರ, ವರ್ಷ, ಪರ್ವತ, ದೇಶ, ನದಿ, ಮೊದಲಾದುವುಗಳನ್ನು ವರ್ಣಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಂಭತ್ತಾರನೆಯ ಅಧ್ಯಾಯ.

॥ ಶ್ರೀಃ ॥

ಸಪ್ತಾಶೀತಿತಮೋಧ್ಯಾಯಃ

ಅಥ ಕುಶದ್ವೀಪವರ್ಣನಂ

॥ ರುದ್ರ ಉವಾಚ ॥

ಅಥ ತೃತೀಯಂ ಕುಶದ್ವೀಪಂ ಶೃಣುತ. ಕುಶದ್ವೀಪೇನ ಕ್ಷೀರೋದಃ ಪರಿವೃತಃ ಶಾಕದ್ವೀಪಸ್ಯ ವಿಸ್ತಾರಾದ್ದ್ವಿಗುಣೇನ. ॥ ೧ ॥

ತತ್ರಾಪಿ ಸಪ್ತ ಕುಲಪರ್ವತಾಃ, ಸರ್ವೇ ಚ ದ್ವಿನಾಮಾನಃ ತದ್ಯಥಾ ಕುಮುದಃ ವಿದ್ರುಮೇತಿ ಚೋಚ್ಯತೇ. ಸ ಉನ್ನತೋ ಹೇಮಪರ್ವತಃ ಸ ಏವ ದ್ರೋಣಃ ಪುಷ್ಪವಾನ್ಸ ಏವ ಕಂಕಶ್ಚ ಪರ್ವತಃ. ॥ ೨ ॥

ಎಂಭತ್ತೇಳನೆಯ ಅಧ್ಯಾಯ

ಕುಶದ್ವೀಪವರ್ಣನೆ.

೧. ರುದ್ರ—ಬಳಿಕ ಮೂರನೆಯದಾದ ಕುಶದ್ವೀಪವನ್ನು ಕೇಳಿ. ಕ್ಷೀರಸಮುದ್ರವನ್ನು ಶಾಕದ್ವೀಪದ ವಿಸ್ತಾರಕ್ಕೆ ಎರಡರಷ್ಟಿರುವ ಕುಶದ್ವೀಪವು ಸುತ್ತಿಕೊಂಡಿದೆ.

೨. ಅಲ್ಲಿಯೂ ಏಳು ಕುಲಪರ್ವತಗಳು ಒಂದೊಂದೂ ಎರಡು ಹೆಸರುಗಳುಳ್ಳವು. ಹೇಗೆಂದರೆ—ಕುಮುದಕ್ಕೇ ವಿದ್ರುಮವೆಂದೂ ಹೆಸರು. ಉನ್ನತವಾದ ಆ ಹೇಮಪರ್ವತವೇ ದ್ರೋಣವೆನಿಸುವುದು. ಪುಷ್ಪವಂತವೇ ಕಂಕಪರ್ವತವೆನಿಸಿಕೊಳ್ಳುವುದು.

ಸ ಏವ ಕುಶೇಶಯೋಗ್ನಿಮಾನ್. ತಥಾ ಷಷ್ಠೋ* ಮಹಿಷನಾಮಾ ಸ ಏವ ಹರಿರುಚ್ಯತೇ ತತ್ರಾಗ್ನಿರ್ವಸತಿ ಸಪ್ತಮಸ್ತು ಕಕುದ್ಮನಾಮಾ ಸ ಏವ ಮಂದರಃ ಕೀರ್ತ್ಯತೇ ಇತ್ಯೇತೇ ಪರ್ವತಾಃ ಕುಶದ್ವೀಪೇ ವ್ಯವಸ್ಥಿತಾಃ. || ೩ ||

ಏತೇಷಾಂ ವರ್ಷಭೇದೋ ಭವತಿ ದ್ವಿನಾಮಸಂಜ್ಞಃ ಕುಮುದಸ್ಯ ಶ್ವೇತಮುದ್ಭಿದಂ ತದೇವಾದೌ ಕೀರ್ತ್ಯತೇ. ಉನ್ನತಸ್ಯ ಲೋಹಿತಂ ವೇಣುಮಂಡಲಂ ತದೇವ ಭವತಿ ಬಲಾಹಕಸ್ಯ ಜೀಮೂತಂ ತದೇವಾಸ್ಯ ರಥಾಕಾರ ಇತಿ ದ್ರೋಣಸ್ಯ ಹರಿಂ ತದೇವ ಬಲಾಧನಂ ಭವತಿ. || ೪ ||

ತತ್ರ ದ್ವಿನಾಮ್ನ್ಯೋ ನದ್ಯಃ ಪ್ರತೋಯಾ ಪ್ರವೇಶಾ ಸೈವೋಚ್ಯತೇ ದ್ವಿತೀಯಾ ಶಿವಾ ಯಶೋದಾ ಸಾ ಚ ಭವತಿ ತೃತೀಯಾ ಚಿತ್ರಾ ನಾಮ ಸೈವ ಕೃಷ್ಣಾ ಭಣ್ಯತೇ. || ೫ ||

---

೩. ಕುಶೇಶಯವೇ ಅಗ್ನಿಮಂತವು. ಆರನೆಯದಾದ ಮಹಿಷಪರ್ವತವೇ ಹರಿಪರ್ವತವೆನಿಸಿಕೊಳ್ಳುವುದು. ಅಲ್ಲಿ ಅಗ್ನಿಯು ವಾಸಿಸುವನು. ಏಳನೆಯದು ಕಕುದ್ಮವೆಂಬ ಹೆಸರಿನದು. ಅದೇ ಮಂದರವೆನಿಸಿಕೊಳ್ಳುವುದು. ಈ ಪರ್ವತಗಳು ಕುಶದ್ವೀಪದಲ್ಲಿರುವುವು.

೪. ಈ ಪರ್ವತಗಳವರ್ಷ (ಭೂಭಾಗ) ಗಳೂ ಎರಡು ಹೆಸರುಗಳುಳ್ಳವು. ಕುಮುದಪರ್ವತ ಪ್ರದೇಶದ ಶ್ವೇತವರ್ಷಕ್ಕೇ ಮೊದಲು ಉದ್ಭಿದವೆಂದು ಹೆಸರು. ಉನ್ನತ ಅಥವಾ ಹೇಮಪರ್ವತಪ್ರದೇಶವಾದ ಲೋಹಿತವರ್ಷವೇ ವೇಣುಮಂಡಲವೆನಿಸಿಕೊಳ್ಳುವುದು. ಬಲಾಹಕಪರ್ವತದ ಜೀಮೂತವರ್ಷಕ್ಕೇ ರಥಾಕಾರವೆಂದೂ ಹೆಸರು. ದ್ರೋಣಪರ್ವತದ ಹರಿವರ್ಷವೇ ಬಲಾಧನವೆನಿಸಿಕೊಳ್ಳುವುದು.

೫. ಕುಶದ್ವೀಪದಲ್ಲಿ ನದಿಗಳು ಎರಡು ಹೆಸರುಗಳುಳ್ಳವು. ಪ್ರತೋಯಾ ನದಿಗೇ ಪ್ರವೇಶಾ ಎಂದೂ ಹೆಸರು. ಎರಡನೆಯದಾದ ಶಿವಾನದಿಯು ಯಶೋದಾ ಎಂಬ ಹೆಸರನ್ನೂ ಪಡೆದಿರುವುದು. ಮೂರನೆಯದಾದ ಚಿತ್ರಾ ಎಂಬುದೇ ಕೃಷ್ಣಾ ಎಂದೆನಿಸಿಕೊಳ್ಳುವುದು.

---

* ಇದಕ್ಕೆ ಮೊದಲು ನಾಲ್ಕು ಪರ್ವತಗಳ ಹೆಸರುಗಳು ಮಾತ್ರವೇ ಇವೆ. ಒಂದು ಪರ್ವತದ ಹೆಸರು ಇಲ್ಲವಾಗಿದೆ. ಬಲಾಹಕವೆಂಬುದು ಮೂರನೆಯದಾಗಿರಬೇಕೆಂದು ಮುಂದಿನ "ಬಲಾಹಕಸ್ಯಜೀಮೂತಂ" ವಾಕ್ಯದಿಂದ ಸ್ಪಷ್ಟವಾಗುತ್ತದೆ.

ಚತುರ್ಥೀ ಹ್ರಾದಿನೀ ನಾಮ ಸೈಸ ಚಂದ್ರಾ ನಿಗದ್ಯತೇ. ವಿದ್ಯುಲ್ಲಾ ಪಂಚಮೀ ಶುಕ್ಲಾ ಸೈವ ವರ್ಣಾ ಷಷ್ಠೀ ಸೈವ ವಿಭಾವರೀ. ಮಹತೀ ಸಪ್ತಮೀ ಸೈವ ಧೃತಿಃ. ಏತಾಃ ಪ್ರಧಾನಾಃ ಶೇಷಾಃ ಕ್ಷುದ್ರನದ್ಯಃ ॥ ೬ ॥

ಇತ್ಯೇಷ ಕುಶದ್ವೀಪಸನ್ನಿವೇಶಃ ಕಥಿತಃ ತಸ್ಯ ಚ ಮಧ್ಯೇ ಮಹಾ ಕುಶಸ್ತಂಬಃ. ಏಷ ಚ ಕುಶದ್ವೀಪಃ ದಧಿಮಂಡೋದೇನಾಮೃತಸಮ್ಮಿತೇನ ಕ್ಷೀರೋದದ್ವಿಗುಣೇನ ಸಂವೃತಃ. ॥ ೭ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಕುಶದ್ವೀಪ ವರ್ಣನಂ ನಾಮ ಸಪ್ತಾಶೀತಿತಮೋಧ್ಯಾಯಃ

---

೬. ನಾಲ್ಕನೆಯ ಹ್ರಾದಿನಿಗೇ ಚಂದ್ರೆಯೆಂದೂ ಹೆಸರು. ವಿದ್ಯುಲ್ಲೆಯೆಂಬ ಐದನೆಯದಕ್ಕೆ ಶುಕ್ಲೆಯೆಂದೂ ಹೆಸರು. ಆರನೆಯ ವರ್ಣೆಯೇ ವಿಭಾವರಿಯೂ ಆಗಿದೆ. ಏಳನೆಯ ಮಹತೀನದಿಗೇ ಧೃತಿಯೆಂದೂ ಹೆಸರು. ಇವು ಮುಖ್ಯನದಿ ಗಳು. ಉಳಿದವು ಅಲ್ಪನದಿಗಳು.

೭. ಹೀಗೆ ಈ ಕುಶದ್ವೀಪದ ಸನ್ನಿವೇಶವನ್ನು ಹೇಳಿದುದಾಯಿತು. ಈ ದ್ವೀಪದ ನಡುವೆ ದೊಡ್ಡದಾದ ದರ್ಭೆಯ ಪೊದೆಯಿದೆ. ಈ ಕುಶದ್ವೀಪವು ಅಮೃತ ಸಮಾನವಾದ ಕ್ಷೀರಸಮುದ್ರಕ್ಕೆರಡರಷ್ಟಿರುವ ದಧಿಸಮುದ್ರದಿಂದ ಸುತ್ತಲ್ಪಟ್ಟಿದೆ.

ಅಧ್ಯಾಯದ ಸಾರಾಂಶ:—

ಕುಶದ್ವೀಪದ ಸನ್ನಿವೇಶವನ್ನೂ ವರ್ಷ (ದೇಶ) ಗಳನ್ನೂ ಪರ್ವತಗಳನ್ನೂ ನದಿಗಳನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಂಭತ್ತೇಳನೆಯ ಅಧ್ಯಾಯ.

॥ ಶ್ರೀಃ ॥

-X-

ಅಷ್ಟಾಶೀತಿತಮೋಽಧ್ಯಾಯಃ

ಅಥ ಕ್ರೌಂಚದ್ವೀಪವರ್ಣನಂ

॥ ರುದ್ರ ಉವಾಚ ॥

ಅಥ ಕ್ರೌಂಚೋ ಭವತಿ ಚತುರ್ಥಃ ಶಾಕದ್ವೀಪಾದ್ದ್ವಿಗುಣ ಮಾನತಃ ಸಮುದ್ರಃ ಕ್ರೌಂಚೇನ ದ್ವಿಗುಣೇನಾವೃತಃ. ತಸ್ಮಿಂಶ್ಚ ಸಪ್ತೈವ ಪ್ರಧಾನಪರ್ವತಾಃ. ॥ ೧ ॥

ಪ್ರಥಮಃ ಕ್ರೌಂಚೋ ವಿದ್ಯುಲ್ಲತೋ, ರೈವತೋ ಮಾನಸಃ ಸ ಏವ ಪಾವಕಃ, ತಥೈವಾಂಧಕಾರಃ ಸ ಏವಾಚ್ಛೋದಕಃ ದೇವಾವೃತ್ತೋ ದೇವಾವೃತಃ ಸ ಚ ಸುರಾಪೋ ಭಣ್ಯತೇ ತತೋ ದೇವಿಷ್ಟಃ ಸ ಏವ ಕಾಂಚನಶೃಂಗೋ ಭವತಿ ॥ ೨ ॥

ಎಂಭತ್ತೆಂಟನೆಯ ಅಧ್ಯಾಯ

ಕ್ರೌಂಚದ್ವೀಪವರ್ಣನೆ

೧. ರುದ್ರ—ಇನ್ನು ಕ್ರೌಂಚದ್ವೀಪವು ನಾಲ್ಕನೆಯದಾಗಿದೆ. ಕುಶದ್ವೀಪದ ಎರಡರಷ್ಟು ಳತೆಯುಳ್ಳ ಕ್ರೌಂಚದ್ವೀಪದಿಂದ ದಧಿಸಮುದ್ರವು ಆವೃತವಾಗಿದೆ. ಕ್ರೌಂಚದ್ವೀಪದಲ್ಲಿ ಏಳೇ ಮುಖ್ಯಪರ್ವತಗಳು.

೨. ಕ್ರೌಂಚಪರ್ವತಕ್ಕೇ ವಿದ್ಯುಲ್ಲತವೆಂದೂ ಹೆಸರು. ರೈವತಪರ್ವತಕ್ಕೇ ಮಾನಸವೆಂದೂ, ಪಾವಕವೆಂದೂ ಹೆಸರು. ಅಂಧಕಾರಪರ್ವತಕ್ಕೆ ಅಚ್ಛೋದಕ ವೆಂದೂ ಹೆಸರು. ದೇವಾವೃತ್ತವು ದೇವಾವೃತವೆಂದೂ ಹೆಸರುಳ್ಳದು. ಅದು ಸುರಾಪವೆಂದೂ ಹೇಳಿಸಿಕೊಳ್ಳುವುದು. ದೇವಿಷ್ಠಪರ್ವತಕ್ಕೇ ಕಾಂಚನಶೃಂಗ ವೆಂದೂ ಹೆಸರು.

ದೇವಸಂಪಾತ್ಪರೋ ಗೋವಿಂದೋ ದ್ವಿವಿಂದ ಇತಿ. ತತಃ ಪುಂಡರೀಕಃ ಸ ಏವ ತೋಯಾಸಹಃ. ॥ ೩ ॥

ಏತೇ ಸಪ್ತ ರತ್ನಮಯಾಃ ಪರ್ವತಾಃ ಕ್ರೌಂಚದ್ವೀಪೇ ವ್ಯವಸ್ಥಿತಾಃ ಸರ್ವೇ ಚ ಪರಸ್ಪರೇಣೋಚ್ಛ್ರಯಾಃ. ॥ ೪ ॥

ತತ್ರ ವರ್ಷಾಣಿ ತಥಾ ಕ್ರೌಂಚಸ್ಯ ಕುಶಲೋ ದೇಶಃ ಸ ಏವ ಮಾಧವಃ ಸ್ಮೃತಃ. ॥ ೫ ॥

ವಾಮುಕಸ್ಯ ಮನೋನುಗಃ ಸ ಏವ ಸಂವರ್ತಕಃ ತತ ಉಷ್ಣವಾನ್ ಸ ಸಪ್ರಕಾಶಃ. ॥ ೬ ॥

ತತಃ ಪಾವಕಃ ಸ ಏವ ಸುದರ್ಶನಃ. ತಥಾ ಚಾಂಧಕಾರಃ ಸ ಏವ ಸಂಮೋಹಃ. ॥ ೭ ॥

ತತೋ ಮುನಿದೇಶಃ ಸ ಚ ಪ್ರಕಾಶಃ. ತತೋ ದುಂದುಭಿಃ ಸ ಏವಾಽನರ್ಥಃ ಉಚ್ಯತೇ. ತತ್ರಾಪಿ ಸಪ್ತೈವ ನದ್ಯಃ. ॥ ೮ ॥

---

೩. ದೇವಾನಂದಕ್ಕೆ ಪಕ್ಕದಲ್ಲಿರುವ ಗೋವಿಂದಪರ್ವತಕ್ಕೆ ದ್ವಿವಿಂದವೆಂದೂ ಹೆಸರು. ಪುಂಡರೀಕಪರ್ವತವು ತೋಯಾಸಹವೆಂದು ಹೆಸರುಳ್ಳದಾಗಿದೆ.

೪. ಈ ಏಳು ರತ್ನಮಯವಾದ ಪರ್ವತಗಳು ಕ್ರೌಂಚದ್ವೀಪದಲ್ಲಿರುವುವು. ಎಲ್ಲವೂ ಒಂದಕ್ಕಿಂತ ಮತ್ತೊಂದು ಎತ್ತರವುಳ್ಳವು.

೫. ಅಲ್ಲಿಯ ವರ್ಷಗಳು—ಕ್ರೌಂಚಪರ್ವತಪ್ರಾಂತದಲ್ಲಿ ಕುಶಲವೆಂಬ ದೇಶವಿದೆ. ಅದಕ್ಕೇ ಮಾಧವವೆಂದೂ ಹೆಸರು.

೬. ವಾಮುಕದ ಮನೋನುಗವೆಂಬ ವರ್ಷಕ್ಕೇ ಸಂವರ್ತಕವೆಂದೂ ಹೆಸರು. ಅದಾದಮೇಲೆ ಉಷ್ಣವುಳ್ಳ ಸಪ್ರಕಾಶವರ್ಷವಿದೆ.

೭. ಆ ಮೇಲೆ ಪಾವಕವರ್ಷ. ಅದೇ ಸುದರ್ಶನವೆನಿಸಿಕೊಳ್ಳುವುದು. ಆಮೇಲೆ ಅಂಧಕಾರವರ್ಷ. ಅದಕ್ಕೇ ಸಮ್ಮೋಹವೆಂದೂ ಹೆಸರು.

೮. ಆಮೇಲೆ ಮುನಿದೇಶ. ಅದು ಪ್ರಕಾಶವೆನಿಸಿಕೊಳ್ಳುವುದು. ಅದಾದಮೇಲೆ ದುಂದುಭಿದೇಶ. ಅದೇ ಅನರ್ಥವೆನಿಸಿಕೊಳ್ಳುವುದು.

ಗೌರೀ ಕುಮುದ್ವತೀ ಚೈವ ಸಂಧ್ಯಾ ರಾತ್ರಿರ್ಮನೋಜವಾ ।
ಖ್ಯಾತಿಶ್ಚ ಪುಂಡರೀಕಾ ಚ ನದ್ಯಃ ಸಪ್ತವಿಧಾಃ ಸ್ಮೃತಾಃ ॥ ೮ ॥

ಗೌರೀ ಸೈವ ಪುಷ್ಪವಹಾ, ಕುಮುದ್ವತೀ ಸಾದ್ರ್ರವತೀ. ॥ ೯ ॥

ರೌದ್ರಾ ಸಂಧ್ಯಾ, ಸುಖಾವಹಾ ಭೋಗಜವಾ ಕ್ಷಿಪ್ರೋದಾ ಚಾ ಖ್ಯಾತಿಃ, ಸೈವ ವಹುಲಾ ಪುಂಡರೀಕಾ ಚಿತ್ರವರ್ಣದೇಶಾ ಕ್ಷುದ್ರನದ್ಯಃ. ॥ ೧೦ ॥

ಕ್ರೌಂಚದ್ವೀಪೋ ಘೃತಾಂಕೇನಾವೃತೋ ಘೃತೋದಃ ಶಾಲ್ಮಲೇನೇತಿ. ॥ ೧೧ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಕ್ರೌಂಚದ್ವೀಪ ವರ್ಣನಂ ನಾಮಾಷ್ಟಾಶೀತಿತಮೋಧ್ಯಾಯಃ

---

೮. ಕ್ರೌಂಚದ್ವೀಪದಲ್ಲಿಯೂ ಏಳೇ ನದಿಗಳು. ಗೌರೀ, ಕುಮುದ್ವತೀ, ಸಂಧ್ಯಾ, ರಾತ್ರಿ, ಮನೋಜವಾ, ಖ್ಯಾತಿ, ಪುಂಡರೀಕಾ, ಎಂಬ ಇವೇ ಆ ಏಳು ನದಿಗಳು.

೯–೧೦. ಗೌರಿಯೇ ಪುಷ್ಪವಹಾ ಎನಿಸಿಕೊಳ್ಳುವುದು. ಕುಮುದ್ವತಿಗೇ ಆದ್ರ್ರವತಿಯೆಂದೂ, ಸಂಧ್ಯೆಗೇ ರೌದ್ರೆಯೆಂದೂ, ರಾತ್ರಿಗೆ ಸುಖಾವಹೆಯೆಂದೂ, ಮನೋಜವೆಗೆ ಭೋಗಜವೆಯೆಂದೂ, ಆ ಖ್ಯಾತಿಗೆ ಕ್ಷಿಪ್ರೋದಾ ಎಂದೂ, ಪುಂಡರೀಕೆಗೆ ವಹುಲೆಯೆಂದೂ ಹೆಸರು.

೧೧. ಕ್ಷುದ್ರನದಿಗಳು. ದೇಶವು ಚಿತ್ರವರ್ಣದ್ದು. ಕ್ರೌಂಚದ್ವೀಪವು ಘೃತಸಮುದ್ರದಿಂದಲೂ, ಘೃತಸಮುದ್ರವು ಶಾಲ್ಮಲಿದ್ವೀಪದಿಂದಲೂ ಆವೃತವಾಗಿದೆ.

ಅಧ್ಯಾಯದ ಸಾರಾಂಶ:—

ಕ್ರೌಂಚದ್ವೀಪದ ಸನ್ನಿವೇಶವನ್ನೂ, ಅದರಲ್ಲಿರುವ ಪರ್ವತವರ್ಷನದಿಗಳನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ಎಂಬತ್ತೆಂಟನೆಯ ಅಧ್ಯಾಯ.

|| ಶ್ರೀಃ ||

–X–

ಊನನವತಿತಮೋಧ್ಯಾಯಃ

ಅಥ ಶಾಲ್ಮಲಿದ್ವೀಪವರ್ಣನಂ

|| ರುದ್ರ ಉವಾಚ ||

ತ್ರಿಷು ಶಿಷ್ಟೇಷು ವಕ್ಷ್ಯಾಮಿ ದ್ವೀಪೇಷು ಮನುಜಾನಥ ।
ಶಾಲ್ಮಲಿಂ ಪಂಚಮಂ ವರ್ಷಂ ಪ್ರವಕ್ಷ್ಯಂತಂ ನಿಬೋಧತ || ೧ ||

ಕ್ರೌಂಚದ್ವೀಪಸ್ಯ ವಿಸ್ತಾರಾಚ್ಛಾಲ್ಮಲೋ ದ್ವಿಗುಣೋ ಮತಃ || ೨ ||

ಘೃತಸಮುದ್ರಮಾವೃತ್ಯ ವ್ಯವಸ್ಥಿತಃ ತದ್ವಿಸ್ತಾರೋ ದ್ವಿಗುಣಃ
ತತ್ರ ಚ ಸಪ್ತ ಪರ್ವತಾಃ ಪ್ರಧಾನಾಃ ತಾವತ್ಯೋ ನದ್ಯಃ. || ೩ ||

ಎಂಬತ್ತೊಂಬತ್ತನೆಯ ಅಧ್ಯಾಯ

ಶಾಲ್ಮಲಿದ್ವೀಪವರ್ಣನೆ.

೧. ರುದ್ರ—ಉಳಿದ ಮೂರು ದ್ವೀಪಗಳಲ್ಲಿರುವ ಮನುಷ್ಯರನ್ನು ಬಳಿಕ ಹೇಳುತ್ತೇನೆ. ಐದನೆಯದಾದ ಶಾಲ್ಮಲಿದ್ವೀಪದ ವಿಚಾರವನ್ನು ಹೇಳುತ್ತೇನೆ. ಕೇಳಿ.

೨–೩. ಕ್ರೌಂಚದ್ವೀಪದ ಅಥವಾ ಘೃತ ಸಮುದ್ರದ ಎರಡರಷ್ಟು ವಿಸ್ತಾರವುಳ್ಳ ಶಾಲ್ಮಲಿದ್ವೀಪವು ಘೃತಸಮುದ್ರವನ್ನು ಸುತ್ತಿಕೊಂಡಿದೆ. ಅಲ್ಲಿರುವ ಮುಖ್ಯಪರ್ವತಗಳು ಏಳು. ನದಿಗಳೂ ಅಷ್ಟೇ ಇವೆ.

ತತ್ರ ಚ ಪರ್ವತಾಃ ಸುಮಹಾನ್ಪೀತಶಾತಕೌಂಭಾತ್ಸರ್ವಗುಣ ಸೌವರ್ಣರೋಹಿತ ಸುಮನಸ ಕುಶಲ ಜಾಂಬೂನದ ವೈದ್ಯುತಾ ಇತ್ಯೇತೇ ಕುಲಪರ್ವತಾಃ ವರ್ಷಾಣಿ ಚ ॥ ೪ ॥

ಅಥ ಷಷ್ಠಂ ಗೋಮೇದಂ ಕಥ್ಯತೇ. ಶಾಲ್ಮಲಂ ಯಥಾ ಸುರೋದೇನಾವೃತಂ ತದ್ವತ್ಸುರೋದೋಽಪಿ ತದ್ದ್ವಿಗುಣೇನ ಗೋಮೇದೇನಾವೃತಃ. ॥ ೫ ॥

ತತ್ರ ಚ ಪ್ರಧಾನಪರ್ವತಾ ದ್ವಾವೇವ. ಏಕಶ್ಚ ತಾವತಾವಸರಃ ಅಪರಶ್ಚ ಕುಮುದ ಇತಿ. ॥ ೬ ॥

ಸಮುದ್ರ ಇಕ್ಷುರಸಸ್ತದ್ದ್ವಿಗುಣೇನ ಪುಷ್ಕರೇಣಾವೃತಃ ತತ್ರ ಚ ಪುಷ್ಕರಾಖ್ಯೇ ಮಾನಸೋ ನಾಮ ಪರ್ವತಃ. ತದಪಿ ದ್ವಿಧಾ ಛಿನ್ನಂ ವರ್ಷಂ ತತ್ಸ್ವಮಾಣೇನ ಚ ಸ್ವಾದೂದಕೇನಾವೃತಂ. ॥ ೭ ॥

---

೪. ಬಹಳ ದೊಡ್ಡದಾದ ಪೀತ, ಸುವರ್ಣಮಯವಾಗಿಯೂ ಸರ್ವಗುಣವುಳ್ಳದಾಗಿಯೂ ಇರುವ ಸೌವರ್ಣ, ರೋಹಿತ, ಸುಮನಸ, ಕುಶಲ, ಜಾಂಬೂನದ, ವೈದ್ಯುತ ಎಂಬಿವು ಕುಲಪರ್ವತಗಳ ಮತ್ತು ವರ್ಷಗಳ ಹೆಸರುಗಳಾಗಿವೆ.

೫. ಇನ್ನು ಆರನೆಯದಾದ ಗೋಮೇದದ್ವೀಪವನ್ನು ಹೇಳುತ್ತೇನೆ. ಶಾಲ್ಮಲದ್ವೀಪವು ಸುರಾಸಮುದ್ರದಿಂದಾವೃತವಾಗಿರುವಂತೆ ಸುರಾಸಮುದ್ರವು ಅದಕ್ಕೆರಡರಷ್ಟಿರುವ ಗೋಮೇದದಿಂದಾವೃತವಾಗಿದೆ.

೬. ಗೋಮೇದದಲ್ಲಿ ಮುಖ್ಯಪರ್ವತಗಳು ಎರಡೇ. ತಾವತಾವಸರವೆಂಬುದು ಒಂದು. ಕುಮುದವೆಂಬುದು ಮತ್ತೊಂದು.

೭. ಕಬ್ಬಿನಹಾಲಿನ ಸಮುದ್ರವು ಗೋಮೇದದ್ವೀಪವನ್ನು ಸುತ್ತಿದೆ. ಆ ಸಮುದ್ರವನ್ನು ಅದಕ್ಕೆರಡರಷ್ಟಿರುವ ಪುಷ್ಕರದ್ವೀಪವು ಆವರಿಸಿರುವುದು. ಆ ಪುಷ್ಕರದ್ವೀಪದಲ್ಲಿ ಮಾನಸವೆಂಬ ಪರ್ವತವಿದೆ. ತನ್ನಷ್ಟೇ ಅಳತೆಯ ಸಿಹಿ ನೀರಿನ ಸಮುದ್ರದಿಂದ ಸುತ್ತಲ್ಪಟ್ಟಿರುವ ಪುಷ್ಕರದ್ವೀಪವು ಎರಡುವರ್ಷ(ದೇಶ) ಗಳಾಗಿ ಭಾಗವಾಗಿದೆ.

ತತಶ್ಚ ಕಟಾಹಂ. ಏತತ್ ಪೃಥಿವ್ಯಾಃ ಪ್ರಮಾಣಂ. ಬ್ರಹ್ಮಾಂಡಸ್ಯ ಚ ಸಕಟಾಹವಿಸ್ತಾರಪ್ರಮಾಣಂ. ಏವಂ ವಿಧಾನಾಂ ಮಂಡಲಾನಾಂ ಪರಿಸಂಖ್ಯಾನಂ ವಿದ್ಯತೇ. ॥ ೮ ॥

ಏತಾನ್ ಕಲ್ಪೇ ಕಲ್ಪೇ ಭಗವಾನ್ನಾರಾಯಣಃ. ಕ್ರೋಡ ರೂಪೀ ರಸಾತಲಾಂತಃಪ್ರವಿಷ್ಟಾನ್ ದಂಷ್ಟ್ರಯೈಕಯೋದ್ಧೃತ್ಯ ಸ್ಥಿತೌ ಸ್ಥಾಪಯತಿ. ॥ ೯ ॥

ಏಷ ವಃ ಕಥಿತೋ ಮಾರ್ಗೋ ಭೂಮೇರಾಯಾಮವಿಸ್ತರಃ ।
ಸ್ವಸ್ತಿ ವೋಽಸ್ತು ಗಮಿಷ್ಯಾಮಿ ಕೈಲಾಸನಿಲಯಂ ದ್ವಿಜಾಃ ॥ ೧೦ ॥

---

೮. ಸಿಹಿನೀರಿನ ಸಮುದ್ರವಾದ ಮೇಲೂ ಕೊಪ್ಪರಿಗೆಯಂತೆ ಸುತ್ತಲೂ ಭೂಮಿಯಿದೆ. ಅಥವಾ ಈ ಭೂಮಿಯು ಹಂಡೆಯ ಆಕಾರವುಳ್ಳದಾಗಿದೆ. ಕೊಪ್ಪರಿಗೆಯಂತಿರುವ ಭೂಮಿಯಿಂದ ಕೂಡಿರುವ ಬ್ರಹ್ಮಾಂಡದ ಸ್ಥಿತಿಯೂ ಇಷ್ಟೆ. ಈ ಬಗೆಯ ಮಂಡಲಾಕಾರವಾದ ದ್ವೀಪಗಳ ಗಣನೆಯಿದೆ. ಇಂತಹ ದ್ವೀಪಗಳು ಏಳು.

೯. ಕಲ್ಪಕಲ್ಪದಲ್ಲೂ ರಸಾತಲದೊಳಹೊಗುವ ಈ ಮಂಡಲಗಳನ್ನು ಶ್ರೀವರಾಹರೂಪಧಾರಿಯಾದ ಭಗವಾನ್ನಾರಾಯಣನು ಒಂದೇ ದಾಡೆಯಿಂದೆತ್ತಿ ನೆಲೆಯಲ್ಲಿ ನಿಲ್ಲಿಸುತ್ತಾನೆ.

೧೦. ಬ್ರಾಹ್ಮಣರೇ, ನಿಮಗೆ ಭೂಮಿಯ ಉದ್ದ, ಅಗಲಗಳನ್ನೂ, ಮಾರ್ಗವನ್ನೂ ಹೇಳಿದ್ದೇನೆ. ನಿಮಗೆ ಮಂಗಳವಾಗಲಿ. ಕೈಲಾಸನಿವಾಸಕ್ಕೆ ಹೋಗುವೆನು.

॥ ಶ್ರೀ ವರಾಹ ಉವಾಚ ॥

ಏವಮುಕ್ತ್ವಾ ಗತೋ ರುದ್ರಃ ಕ್ಷಣಾತ್ಕೈಲಾಸಪರ್ವತಂ ।
ತೇ ಚ ಸರ್ವೇ ಗತಾ ದೇವಾ ಋಷಯಶ್ಚ ಯಥಾಗತಂ ॥ ೧೧ ॥

ಇತಿ ಶ್ರೀ ವರಾಹಪುರಾಣೇ ರುದ್ರಗೀತಾಸು ಭುವನಕೋಶೇ ಶಾಲ್ಮಲಿ ದ್ವೀಪವರ್ಣನಂ ನಾಮ ಊನನವತಿತಮೋಧ್ಯಾಯಃ

---

೧೧. ಶ್ರೀವರಾಹ—ಹೀಗೆ ಹೇಳಿ, ರುದ್ರನು ಕ್ಷಣಮಾತ್ರದಲ್ಲಿ ಕೈಲಾಸ ಪರ್ವತಕ್ಕೆ ಹೊರಟುಹೋದನು. ಆ ದೇವತೆಗಳೂ ಋಷಿಗಳೇ ಮೊದಲಾದವರೆಲ್ಲರೂ ಬಂದಂತೆಯೇ ಹಿಂದಕ್ಕೆ ಹೊರಟುಹೋದರು.

ಅಧ್ಯಾಯದ ಸಾರಾಂಶ—

ಶಾಲ್ಮಲಿ ಗೋಮೇದ ಪುಷ್ಕರದ್ವೀಪಗಳ ಮತ್ತು ಅವುಗಳಲ್ಲಿರುವ ಮುಖ್ಯ ಪರ್ವತಗಳ ಮತ್ತು ನದಿಗಳ ವಿಚಾರವನ್ನು ತಿಳಿಸುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ.

|| ಶ್ರೀಃ ||

-x-

ನವತಿತಮೋಽಧ್ಯಾಯಃ

ಅಥ ತ್ರಿಶಕ್ತಿಗತಸೃಷ್ಟಿಮಾಹಾತ್ಮ್ಯಂ

|| ಧರಣ್ಯುವಾಚ ||

ಪರಮಾತ್ಮಾ ಶಿವಃ ಪುಣ್ಯ ಇತಿ ಕೇಚಿದ್ಭವಂ ವಿದುಃ ।
ಅಪರೇ ಹರಿಮೀಶಾನಂ ಇತಿ ಕೇಚಿಚ್ಚತುರ್ಮುಖಂ || ೧ ||

ಏತೇಷಾಂ ಕತಮೋ ದೇವಃ ಪರಃ ಕೋ ವಾಥ ವಾಪರಃ || ೨ ||

ಏತದ್ದೇವ ಮಮಾಚಕ್ಷ್ವ ಪರಂ ಕೌತೂಹಲಂ ಹಿ ಮೇ || ೩ ||

ತೊಂಬತ್ತನೆಯ ಅಧ್ಯಾಯ.

ತ್ರಿಶಕ್ತಿಗತವಾದ ಸೃಷ್ಟಿಯ ಮಹಿಮೆ.

೧. ಭೂದೇವಿ—ದೇವ, ಕೆಲವರು ಈಶಾನ, ಭವ ಎಂಬ ಹೆಸರುಗಳುಳ್ಳ ಶಿವನೇ ಪವಿತ್ರನಾದ ಪರಮಾತ್ಮನೆಂದು ತಿಳಿಯುವರು. ಮತ್ತೆ ಕೆಲವರು ಹರಿಯೇ ಪರಮಾತ್ಮನೆನ್ನುವರು. ಇನ್ನು ಕೆಲವರು ನಾಲ್ಕು ಮುಖಗಳುಳ್ಳ ಬ್ರಹ್ಮನೇ ಪರಮಾತ್ಮನೆನ್ನುವರು.

೨-೩. ಈ ಮೂವರು ದೇವರಲ್ಲಿ ಯಾರು ಅತ್ಯಧಿಕನು ಅಥವಾ ಪರಮಾತ್ಮನು ? ಯಾರು ಅಪರ ಅಥವಾ ಎರಡನೆಯವನು? ಎಂಬುದನ್ನು ನನಗೆ ಹೇಳು. ಕೇಳಲು ಬಹಳ ಕುತೂಹಲಪಡುತ್ತೇನೆ.

॥ ಶ್ರೀ ವರಾಹ ಉವಾಚ ॥

ಪರೋ ನಾರಾಯಣೋ ದೇವಸ್ತತಸ್ತಸ್ಮಾಚ್ಚತುರ್ಮುಖಃ ।
ತಸ್ಮಾದ್ರುದ್ರೋಽಭವದ್ದೇವಿ ಸ ಚ ಸರ್ವಜ್ಞತಾಂ ಗತಃ ॥ ೧ ॥

ತಸ್ಯಾಶ್ಚರ್ಯಾಣ್ಯನೇಕಾನಿ ವಿವಿಧಾನಿ ವರಾನನೇ ।
ಶೃಣು ಸರ್ವಾಣಿ ಚಾರ್ವಾಂಗಿ ಕಥ್ಯಮಾನಂ ಮಯಾನಘೇ ॥ ೨ ॥

ಕೈಲಾಸಶಿಖರೇ ರಮ್ಯೇ ನಾನಾಧಾತುವಿಚಿತ್ರಿತೇ ।
ವಸತ್ಯನುದಿನಂ ದೇವಃ ಶೂಲಪಾಣಿಸ್ತ್ರಿಲೋಚನಃ ॥ ೩ ॥

ಸ್ವೈಕಸ್ಮಿನ್ದಿವಸೇ ದೇವಃ ಸರ್ವದೇವನಮಸ್ಕೃತಃ ।
ಗಣೈಃ ಪರಿವೃತೋ ದೇವ್ಯಾ ಮಹಾನಾಸೀತ್ಪಿನಾಕಧೃಕ್ ॥ ೪ ॥

ತತ್ರ ಸಿಂಹಮುಖಾಃ ಕೇಚಿದ್ಗಣಾ ನರ್ದಂತಿ ಸಿಂಹವತ್ ॥ ೫ ॥

---

೧. ಶ್ರೀವರಾಹ—ದೇವಿ, ನಾರಾಯಣದೇವನೇ ಪರಮಾತ್ಮನು ಅವನಿಂದ ಚತುರ್ಮುಖಬ್ರಹ್ಮನೂ, ಅವನಿಂದ ರುದ್ರನೂ ಉದಿಸಿದರು. ರುದ್ರನು ಸರ್ವಜ್ಞತೆಯನ್ನು ಪಡೆದನು.

೨. ವರಾನನೇ, ಮನೋಹರಾಂಗೀ, ಅನಘಳೇ, ಅವನ ಬಗೆಬಗೆಯಾದ ಹಲವು ಆಶ್ಚರ್ಯಗಳನ್ನು ಹೇಳುತ್ತೇನೆ, ಕೇಳು.

೩. ಬಗೆಬಗೆಯ ಧಾತುಗಳಿಂದ ವಿಚಿತ್ರವಾಗಿರುವ ರಮ್ಯವಾದ ಕೈಲಾಸ ಶಿಖರದಲ್ಲಿ ಮುಕ್ಕಣ್ಣನೂ, ಶೂಲಪಾಣಿಯೂ, ಆದ ಆ ರುದ್ರದೇವನು ಯಾವಾಗಲೂ ವಾಸಮಾಡುವನು.

೪. ಪಿನಾಕವೆಂಬ ಬಿಲ್ಲನ್ನು ಧರಿಸಿರುವನೂ, ಸರ್ವಭೂತನಮಸ್ಕೃತನೂ, ಮಹಾತ್ಮನೂ ಆದ ಆ ದೇವನು ಒಂದು ದಿನ ಪಾರ್ವತೀಸಮೇತನಾಗಿ ಗಣಗಳಿಂದ ಪರಿವೃತನಾಗಿ (ಸಭೆಯಲ್ಲಿ) ಇದ್ದನು.

೫. ಅಲ್ಲಿ ಸಿಂಹದಂತೆ ಮುಖವುಳ್ಳ ಕೆಲವರು ಗಣಗಳವರು ಸಿಂಹದಂತೆ ಗರ್ಜಿಸುತ್ತಿದ್ದರು.

ಅಪರೇ ಹಸ್ತಿವಕ್ತ್ರಾಶ್ಚ ಹಯವಕ್ತ್ರಾಸ್ತಥಾಪರೇ |
ಅಪರೇ ಶಿಂಶುಮಾರಾಸ್ಯಾ ಅಪರೇ ಸೂಕರಾನನಾಃ ||
ಅಪರೇಶ್ವಮುಖಾ ರೌದ್ರಾಃ ಖರಾಸ್ಯಾಜಾನನಾಸ್ತಥಾ || ೯ ||

ಛಾಗಮತ್ಸ್ಯಾನನಾಶ್ಶೂರಾಃ ಅನಂತಾಶ್ಶಸ್ತ್ರಪಾಣಯಃ |
ಕೇಚಿದ್ಗಾಯಂತಿ ನೃತ್ಯಂತಿ ಧಾವಂತಿ ಸ್ಫೋಟಯಂತಿ ಚ ||
ಹಸಂತಿ ಕಿಲಕಿಲಾಯಂತಿ ಗರ್ಜಂತಿ ಚ ಮಹಾಬಲಾಃ || ೧೦ ||

ಕೇಚಿಲ್ಲೋಷ್ಟಾಂಸ್ತು ಸಂಗೃಹ್ಯ ಯುಯುಧುರ್ಗಣನಾಯಕಾಃ || ೧೧ ||

ಅಪರೇ ಮಲ್ಲಯುದ್ಧೇನ ಯುಯುಧುರ್ಬಲದರ್ಪಿತಾಃ || ೧೨ ||

ಏವಂ ಗಣಸಹಸ್ರೇಣ ವೃತೋ ದೇವೋ ಮಹೇಶ್ವರಃ |
ಯಾವದಾಸ್ತೇ ಸ್ವಯಂ ದೇವ್ಯಾ ಕ್ರೀಡನ್ ದೇವವರಃ ಸ್ವಯಂ ||
ತಾವದ್ಬ್ರಹ್ಮಾ ಸ್ವಯಂ ದೇವೈರುಪಾಯಾತ್ಸಹ ಸತ್ವರಃ || ೧೩ ||

೯-೧೧. ಆನೆಯ ಮೊಗದವರು ಕೆಲವರೂ, ಕುದುರೆಮೊಗದವರು ಕೆಲವರೂ, ಹಂದಿಮೊಗದವರು ಕೆಲವರೂ, ಮೊಸಳೆಮೊಗದವರು ಕೆಲವರೂ, ಕ್ರೂರಿಗಳಾದ ನಾಯಿ ಕತ್ತೆಗಳಂತೆ ಮುಖವುಳ್ಳವರು ಕೆಲವರೂ, ಆಡು, ಹೋತ, ಮೀನುಗಳಂತೆ ಮುಖವುಳ್ಳ ಕೆಲ ಕೆಲವರೂ ಸೇರಿ, ಲೆಕ್ಕವಿಲ್ಲದಷ್ಟು ಜನ ಶಸ್ತ್ರಪಾಣಿಗಳಾದ ಶೂರರು ಇದ್ದರು. ಅವರಲ್ಲಿ ಕೆಲವರು ಹಾಡುವರು, ಕೆಲವರು ಕುಣಿಯುವರು, ಓಡುವರು, ನೆಗೆಯುವರು, ನಗುವರು, ಕಿಲಕಿಲ ಗುಟ್ಟುವರು, ಗರ್ಜಿಸುವರು, ಹೆಚ್ಚಾದ ಬಲವುಳ್ಳ ಕೆಲವರು ಗಣನಾಯಕರು ಮಣ್ಣು ಹೆಂಟೆಗಳನ್ನು ತೆಗೆದುಕೊಂಡು ಯುದ್ಧಮಾಡುತ್ತಿದ್ದರು.

೧೨. ಬಲದಿಂದ ಕೊಬ್ಬಿದ ಬೇರೆ ಕೆಲವರು ಜಟ್ಟಿಯಕಾಳಗವನ್ನು ಮಾಡುತ್ತಿದ್ದರು.

೧೩. ಹೀಗೆ ಗಣಸಹಸ್ರಪರಿವೃತನಾದ ಮಹೇಶ್ವರದೇವನು ದೇವಿಯಾದ ಪಾರ್ವತಿಯೊಡನೆ ವಿನೋದದಿಂದಿರುವಾಗ ಸಾಕ್ಷಾದ್ಬ್ರಹ್ಮನು ದೇವತೆಗಳೊಡನೆ ತ್ವರೆಯಿಂದ ಅಲ್ಲಿಗೆ ಬಂದನು.

ತಮಾಗತಮಥೋ ದೃಷ್ಟ್ವಾ ಪೂಜಯಿತ್ವಾ ವಿಧಾನತಃ |
ಉವಾಚ ಪರಮೋ ದೇವೋ ರುದ್ರೋ ಬ್ರಹ್ಮಾಣಮವ್ಯಯಂ ॥ ೧೪ ॥

ಕಿಮಾಗಮನಕೃತ್ಯಂ ತೇ ಬ್ರಹ್ಮನ್ಬ್ರೂಹಿ ಮಮಾಚಿರಂ |
ಕಿಂ ಚ ದೇವ ತ್ವರಾಯುಕ್ತ ಆಗತೋ ಮಮ ಸನ್ನಿಧೌ ॥ ೧೫ ॥

॥ ಬ್ರಹ್ಮೋವಾಚ ॥

ಅಸ್ತ್ಯಂಧಕೋ ಮಹಾದೈತ್ಯಃ ತೇನ ಸರ್ವೇ ದಿವೌಕಸಃ |
ಅರ್ದಿತಾ ಮತ್ಸಮೀಪಂ ತು ದೃಷ್ಟ್ವಾ ಮಾಂ ಶರಣೈಷಿಣಃ ॥೧೬॥

ತತಶ್ಚೈತೇ ಮಯಾ ಪ್ರೋಕ್ತಾಃ ಸರ್ವೇ ದೇವಾ ಭವಂ ಪ್ರತಿ |
ಗಚ್ಛಾಮ ಇತಿ ದೇವೇಶ ತತಸ್ತ್ವೇತೇ ಸಮಾಗತಾಃ ॥ ೧೭ ॥

ಏವಮುಕ್ತ್ವಾ ಸ್ವಯಂ ಬ್ರಹ್ಮಾ ವೀಕ್ಷಾಂಚಕ್ರೇ ಪಿನಾಕಿನಂ |
ನಾರಾಯಣಂ ಚ ಮನಸಾ ಸಸ್ಮಾರ ಪರಮೇಶ್ವರಂ ॥ ೧೮ ॥

೧೪-೧೫. ಪರಮದೇವನಾದ ರುದ್ರನು, ನಾಶರಹಿನಾದ ಆ ಬ್ರಹ್ಮನು ಬಂದುದನ್ನು ನೋಡಿ, ವಿಧಿಪೂರ್ವಕವಾಗಿ ಪೂಜಿಸಿ, "ಬ್ರಹ್ಮನೇ, ನೀನು ಬಂದ ಕಾರ್ಯವೇನು ? ಅಲ್ಲದೆ ನೀನು ತ್ವರೆಯಿಂದ ಕೂಡಿದವನಾಗಿ ನನ್ನ ಹತ್ತಿರಕ್ಕೆ ಬಂದಿದ್ದೀಯೆ. ತಡಮಾಡದೆ ಹೇಳು" ಎಂದನು.

೧೬-೧೭. ಬ್ರಹ್ಮ—ದೇವೇಶ, ಅಂಧಕನೆಂಬ ಮಹಾರಾಕ್ಷಸನಿರುವನು. ಅವನಿಂದ ಪೀಡಿತರಾದ ದೇವತೆಗಳು ನನ್ನ ರಕ್ಷಣೆಯನ್ನು ಬಯಸಿ, ನನ್ನ ಬಳಿಗೆ ಬಂದರು. ಬಳಿಕ ನಾನು ಇವರಿಗೆ ಶಿವನಹತ್ತಿರ ಹೋಗೋಣ ಎಂದು ಹೇಳಲು, ಈ ದೇವತೆಗಳೆಲ್ಲರೂ ಇಲ್ಲಿ ಬಂದಿದ್ದಾರೆ.

೧೮. ಹೀಗೆಂದು ಬ್ರಹ್ಮನು ತಾನು ಶಿವನನ್ನು ನೋಡಿದನು. ಅಲ್ಲದೆ ಪರಮೇಶ್ವರನಾದ ನಾರಾಯಣನನ್ನು ಮನಸ್ಸಿನಿಂದ ಸ್ಮರಿಸಿದನು.

ತತೋನಾರಾಯಣೋ ದೇವಃ ದ್ವಾಭ್ಯಾಂ ಮಧ್ಯೇ ವ್ಯವಸ್ಥಿತಃ ।
ತತಸ್ತ್ವೇಕೀಕೃತಾಸ್ತೇ ತು ಬ್ರಹ್ಮವಿಷ್ಣುಮಹೇಶ್ವರಾಃ ॥
ಪರಸ್ಪರಂ ಸೂಕ್ಷ್ಮದೃಷ್ಟ್ಯಾ ವೀಕ್ಷಾಂಚಕ್ರುರ್ಮುದಾ ಯುತಾಃ ॥ ೧೯ ॥

ತತಸ್ತೇಷಾಂ ತ್ರಿಧಾ ದೃಷ್ಟಿರ್ಭೂತ್ವೈಕಾ ಸಮಜಾಯತ ॥ ೨೦ ॥

ತಸ್ಯಾಂ ದೃಷ್ಟ್ಯಾಂ ಸಮುತ್ಪನ್ನಾ ಕುಮಾರೀ ದಿವ್ಯರೂಪಿಣೀ ।
ನೀಲೋತ್ಪಲದಲಶ್ಯಾಮಾ ನೀಲಕುಂಚಿತಮೂರ್ಧಜಾ ।
ಸುನಾಸಾ ಸುಲಲಾಟಾಂತಾ ಸುವಕ್ತ್ರಾ ಸುಪ್ರತಿಷ್ಠಿತಾ ॥ ೨೧ ॥

ತ್ವಷ್ಟ್ರಾ ಯದಗ್ನಿಜಿಹ್ವಂ ತು ಲಕ್ಷಣಂ ಪರಿಭಾಷಿತಂ ।
ತತ್ಸರ್ವಮೇಕತಃ ಸಂಸ್ಥಂ ಕನ್ಯಾಯಾಂ ಸಂಪ್ರದೃಶ್ಯತೇ ॥ ೨೨ ॥

ಅಥ ತಾಂ ದೃಶ್ಯ ಕನ್ಯಾಂ ತು ಬ್ರಹ್ಮವಿಷ್ಣುಮಹೇಶ್ವರಾಃ ।
ಊಚುಃ ಕಾಸಿ ಶುಭೇ ಬ್ರೂಹಿ ಕಿಂ ವಾ ಕಾರ್ಯಂ ವಿಪಶ್ಚಿತೇ ॥ ೨೩ ॥

---

೧೯. ಬಳಿಕ ದೇವನಾದ ನಾರಾಯಣನು ಬ್ರಹ್ಮರುದ್ರರ ನಡುವೆ ಬಂದು ನಿಂತನು. ಒಂದಾದ ಆ ಬ್ರಹ್ಮವಿಷ್ಣು ಮಹೇಶ್ವರರು ಸಂತೋಷವುಳ್ಳವರಾಗಿ ಸೂಕ್ಷ್ಮದೃಷ್ಟಿಯಿಂದ ಪರಸ್ಪರ ನೋಡಿದರು.

೨೦. ಮೂರಾದ ಅವರ ದೃಷ್ಟಿಯು ಒಂದೇ ಆಯಿತು.

೨೧. ಒಂದಾದ ಆ ದೃಷ್ಟಿಯಿಂದ ನೀಲೋತ್ಪಲದಳಶ್ಯಾಮಳೂ, ಕಪ್ಪಾದ ಮುಂಗುರುಳುಳ್ಳವಳೂ, ಸುಂದರವಾದ ಮೂಗುನೆತ್ತಿ ಮೊಗಗಳುಳ್ಳವಳೂ, ದೃಢಾಂಗಿಯೂ, ದಿವ್ಯರೂಪಿಣಿಯೂ ಆದ ಕನ್ನೆಯೊಬ್ಬಳು ಉದಿಸಿದಳು.

೨೨. ತ್ವಷ್ಟೃವು ಅಗ್ನಿಜಿಹ್ವವೆಂದು ಹೇಳಿರುವ ಸರ್ವಲಕ್ಷಣವೂ ಒಂದೆಡೆಯಲ್ಲಿ ಸೇರಿ ಆ ಕನ್ನೆಯಲ್ಲಿ ಕಾಣಿಸುತ್ತಿತ್ತು.

೨೩. ಬಳಿಕ ಬ್ರಹ್ಮವಿಷ್ಣು ಮಹೇಶ್ವರರು ಆ ಕನ್ನೆಯನ್ನು ನೋಡಿ, "ಮಂಗಳೇ, ವಿದ್ಯಾವತೀ, ನೀನಾರು ? ಕಾರ್ಯವೇನು ? ಹೇಳು" ಎಂದರು.

ತ್ರಿವರ್ಣಾ ಚ ಕುಮಾರೀ ಸಾ ಕೃಷ್ಣಾ ಶುಕ್ಲಾ ಚ ಪೀತಿಕಾ ।
ಉವಾಚ ಭವತಾಂ ದೃಷ್ಟ್ಯೋರ್ಯೋಗಾಜ್ಜಾತಾಸ್ಮಿ ಸತ್ತಮಾಃ ।
ಕಿಂ ಮಾಂ ನ ವೇತ್ಥ ಸುಶ್ರೋಣೀಂ ಸ್ವಶಕ್ತಿಂ ಪರಮೇಶ್ವರೀಂ ॥ ೨೪ ॥

ತತೋ ಬ್ರಹ್ಮಾದಯಸ್ತೇ ಚ ತಸ್ಯಾಸ್ತುಷ್ಟಾ ವರಂ ದದುಃ ।
ನಾಮ್ನಾಸಿ ತ್ರಿಕಲಾ ದೇವೀ ಪಾಹಿ ವಿಶ್ವಂ ಚ ಸರ್ವದಾ ॥ ೨೫ ॥

ಅಪರಾಣ್ಯಪಿ ನಾಮಾನಿ ಭವಿಷ್ಯಂತಿ ತವಾನಘೇ ।
ಗುಣೋತ್ಥಾನಿ ಮಹಾಭಾಗೇ ಸರ್ವಸಿದ್ಧಿಕರಾಣಿ ಚ ॥ ೨೬ ॥

ಅನ್ಯಚ್ಚ ಕಾರಣಂ ದೇವಿ ತ್ರಿವರ್ಣಾಸಿ ವರಾನನೇ ।
ಮೂರ್ತಿತ್ರಯಂ ತ್ರಿಭಿರ್ವರ್ಣೈಃ ಕುರು ದೇವಿ ಸ್ವಕಂ ದ್ರುತಂ ॥ ೨೭ ॥

ಏವಮುಕ್ತಾ ತದಾ ದೇವ್ಯೈರಕರೋತ್ತ್ರಿವಿಧಾಂ ತನುಂ ।
ಸಿತಾಂ ರಕ್ತಾಂ ತಥಾ ಕೃಷ್ಣಾಂ ತ್ರಿಮೂರ್ತಿತ್ವಂ ಜಗಾಮ ಸಾ ॥ ೨೮ ॥

---

೨೪ ಕಪ್ಪು, ಬಿಳುಪು, ಹಳದಿ ಎಂಬ ಮೂರು ಬಣ್ಣಗಳುಳ್ಳ ಆ ಕನ್ನೆಯು "ಸತ್ತಮರೇ, ನಿಮ್ಮ ನೋಟದ ಸೇರುವೆಯಿಂದುದಿಸಿದ್ದೇನೆ. ನಿಮ್ಮ ಶಕ್ತಿಯೂ, ಸುಂದರಾಗಿಯೂ ಆದ ನನ್ನನ್ನು ನೀವು ಅರಿಯಿರಾ ?" ಎಂದಳು

೨೫-೨೭. ಬಳಿಕ ಆ ಬ್ರಹ್ಮನೇ ಮೊದಲಾದವರು ಸಂತೋಷಗೊಂಡು ಆ ಕನ್ನೆಗೆ "ನಿನ್ನ ಹೆಸರು ತ್ರಿಕಲಾದೇವಿಯೆಂದು ಆಗಲಿ. ಪುಣ್ಯಶಾಲಿನೀ, ಪ್ರಪಂಚವನ್ನು ಯಾವಾಗಲೂ ರಕ್ಷಿಸು. ಪೂಜ್ಯಳೇ, ನಿನ್ನ ಗುಣಗಳಿಗೆ ತಕ್ಕ ಸರ್ವಸಿದ್ಧಿಕರಗಳಾದ ಬೇರೆಯ ಹೆಸರುಗಳೂ ನಿನಗೆ ಉಂಟಾಗುವುವು. ದೇವಿ, ಸುಂದರಾನನೇ, ನೀನು ಮೂರು ಬಣ್ಣವುಳ್ಳವಳಾಗಿರುವುದರಿಂದ ಮೂರುಬಣ್ಣಗಳಿಂದಲೂ ಬೇಗನೆ ಮೂರುರೂಪಗಳನ್ನು ಧರಿಸು!" ಎಂದು ವರವನ್ನು ಕೊಟ್ಟರು.

೨೮. ದೇವರಿಂದ ಹೀಗೆ ಹೇಳಿಸಿಕೊಂಡ ಆ ದೇವಿಯು ದೇಹವನ್ನು ಮೂರು ಬಗೆಯಾಗಿ ಮಾಡಿ, ಬಿಳಿಯ ಕೆಂಪಿನ ಮತ್ತು ಕಪ್ಪಾದ ಮೂರು ರೂಪಗಳನ್ನು ಧರಿಸಿದಳು.

ಯಾ ಸಾ ಬ್ರಾಹ್ಮೀ ಶುಭಾ ಮೂರ್ತಿಸ್ತ್ವಯಾ ಸೃಜತಿ ವೈ ಪ್ರಜಾಃ ।
ಸೌಮ್ಯರೂಪೇಣ ಸುಶ್ರೋಣೀ ಬ್ರಹ್ಮಸೃಷ್ಟಿವಿಧಾನತಃ ॥ ೨೯ ॥

ಯಾ ಸಾ ರಕ್ತೇನ ವರ್ಣೇನ ಸುರೂಪಾ ತನುಮಧ್ಯಮಾ ।
ಶಂಖಚಕ್ರಧರಾ ದೇವೀ ವೈಷ್ಣವೀ ಸಾ ಕಲಾ ಸ್ಮೃತಾ ।
ಸಾ ಪಾತಿ ಸಕಲಂ ವಿಶ್ವಂ ವಿಷ್ಣುಮಾಯೇತಿ ಕೀರ್ತ್ಯತೇ ॥ ೩೦॥

ಯಾ ಸಾ ಕೃಷ್ಣೇನ ವರ್ಣೇನ ರೌದ್ರಾ ಮೂರ್ತಿಸ್ತ್ರಿಶೂಲಿನೀ ।
ದಂಷ್ಟ್ರಾಕರಾಲಿನೀ ದೇವೀ ಸಾ ಸಂಹರತಿ ವೈ ಜಗತ್ ॥ ೩೧ ॥

ಯಾ ಸೃಷ್ಟಿರ್ಬ್ರಹ್ಮಣೋ ದೇವೀ ಶ್ವೇತವರ್ಣಾ ವಿಭಾವರೀ ।
ಸಾ ಕುಮಾರೀ ಮಹಾಭಾಗಾ ವಿಪುಲಾಬ್ಜದಲೇಕ್ಷಣಾ ॥ ೩೨ ॥

ಸದ್ಯೋ ಬ್ರಹ್ಮಾಣಮಾಮಂತ್ರ್ಯ ತತ್ರೈವಾಂತರಧೀಯತ ॥ ೩೩ ॥

---

೨೯. ಸೌಮ್ಯವೂ, ಶುಭಕರವೂ ಆದ(ಬೆಳ್ಳಗಿರುವ)ಬ್ರಾಹ್ಮೀಮೂರ್ತಿಯಿಂದ ಆ ಸುಂದರಾಗಿಯು ಬ್ರಹ್ಮಸೃಷ್ಟಿವಿಧಾನದಿಂದ ಪ್ರಜೆಗಳನ್ನು ಸೃಷ್ಟಿಸುತ್ತಾಳೆ.

೩೦ ಕೆಂಪುಬಣ್ಣದವಳೂ, ಸಣ್ಣನಡುವಿನವಳೂ, ಸುಂದರಿಯೂ, ಶಂಖಚಕ್ರಧರೆಯೂ, ಆಗಿ ವಿಷ್ಣುಕಲೆ ವಿಷ್ಣುಮಾಯೆ ಎನಿಸಿಕೊಳ್ಳುವ ವೈಷ್ಣವೀದೇವಿಯು ಸಕಲಲೋಕವನ್ನೂ ಪಾಲಿಸುವಳು.

೩೧. ಕಪ್ಪುಬಣ್ಣದವಳೂ, ತ್ರಿಶೂಲಿನಿಯೂ, ರೌದ್ರಮೂರ್ತಿಯೂ; ಕೋರೆಯ ಹಲ್ಲುಗಳಿಂದ ಭಯಂಕರಳೂ ಆದ ದೇವಿಯು ಜಗತ್ತನ್ನು ಸಂಹರಿಸುತ್ತಾಳೆ.

೩೨-೩೩. ಬೆಳ್ಳಗಿರುವಳೂ, ಕಾಂತಿಯುತಳೂ, ಬ್ರಹ್ಮನ ಸೃಷ್ಟಿದೇವಿಯೂ, ವಿಶಾಲವಾದ ಕಮಲದ ಎಸಳಿನಂತೆ ಕಣ್ಣುಳ್ಳವಳೂ, ಮಹಾಭಾಗ್ಯಶಾಲಿನಿಯೂ, ಆದ ಆ ಕನ್ನೆಯು ಒಡನೆಯೇ ಬ್ರಹ್ಮನನ್ನು ಕೇಳಿಕೊಂಡು ಅಲ್ಲಿಯೇ ಕಣ್ಮರೆಯಾದಳು.

ಸಾಂತರ್ಹಿತಾ ಯಯೌ ದೇವೀ ವರದಾ ಶ್ವೇತಪರ್ವತಂ ।
ತಪಸ್ತಪ್ತುಂ ಮಹಾತೀವ್ರಂ ಸರ್ವಜ್ಞತ್ವಮಭೀಪ್ಸತೀ ॥ ೩೪ ॥

ಯಾ ವೈಷ್ಣವೀ ಕುಮಾರೀ ತು ಸಾಪ್ಯನುಜ್ಞಾಯ ಕೇಶವಂ ।
ಮಂದರಾದ್ರಿಂ ಯಯೌ ತಪ್ತುಂ ತಪಃ ಪರಮದುಶ್ಚರಂ ॥ ೩೫ ॥

ಯಾ ಸಾ ಕೃಷ್ಣಾ ವಿಶಾಲಾಕ್ಷೀ ರೌದ್ರೀ ದಂಷ್ಟ್ರಾಕರಾಲಿನೀ ।
ಸಾ ನೀಲಪರ್ವತವರಂ ತಪಶ್ಚರ್ತುಂ ಯಯೌ ಶುಭಾ ॥ ೩೬ ॥

ಅಥ ಕಾಲೇನ ಮಹತಾ ಪ್ರಜಾಃ ಸ್ರಷ್ಟುಂ ಪ್ರಜಾಪತಿಃ ।
ಆರಬ್ಧವಾನ್ನ ತಾಸ್ತಸ್ಯ ವವೃಧುಃ ಸೃಜತಃ ಪ್ರಜಾಃ ॥ ೩೭ ॥

---

೩೪. ಹಾಗೆ ಕಣ್ಮರೆಯಾದ ವರದೆಯಾದ ಆ ದೇವಿಯು ಸರ್ವಜ್ಞತ್ವವನ್ನು ಪಡೆಯಲು ಬಯಸಿ, ಅತಿತೀವ್ರವಾದ ತಪಸ್ಸನ್ನು ಮಾಡಲು ಶ್ವೇತಪರ್ವತಕ್ಕೆ ಹೋದಳು.

೩೫. ಆ ವೈಷ್ಣವೀಕುಮಾರಿಯೂ, ವಿಷ್ಣುವಿನ ಅನುಮತಿಯನ್ನು ಪಡೆದು ಅತಿ ಕಠಿಣವಾದ ತಪಸ್ಸನ್ನು ಆಚರಿಸಲು ಮಂದರಪರ್ವತಕ್ಕೆ ಹೊರಟು ಹೋದಳು.

೩೬. ಕಪ್ಪುಬಣ್ಣದವಳೂ, ವಿಶಾಲಾಕ್ಷಿಯೂ, ಕೋರೆಯ ಹಲ್ಲುಗಳಿಂದ ಭಯಂಕರಳೂ, ಶುಭೆಯೂ ಆದ ರೌದ್ರೀದೇವಿಯು ತಪಸ್ಸಿಗಾಗಿ ನೀಲಪರ್ವತಕ್ಕೆ ಹೊರಟು ಹೋದಳು.

೩೭. ಬಳಿಕ ಬಹುಕಾಲವಾದಮೇಲೆ ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಲು ಆರಂಭಿಸಿದನು. ಅವನು ಸೃಷ್ಟಿಸಿದ ಆ ಪ್ರಜೆಗಳು ಅಭಿವೃದ್ಧಿಗೆ ಬರಲಿಲ್ಲ.

ಯದಾ ನ ವವೃಧುಸ್ತಸ್ಯ ಬ್ರಹ್ಮಣೋ ಮಾನಸಪ್ರಜಾಃ ।
ತದಾ ದಧ್ಯೌ ಕಿಮೇತನ್ಮೇ ನ ತಥಾ ವರ್ಧತೇ ಪ್ರಜಾಃ ॥ ೩೮ ॥

ತತೋಽಬ್ರಹ್ಮಾ ಹೃದಾ ದಧ್ಯೌ ಯೋಗಾಭ್ಯಾಸೇನ ಸುವ್ರತೇ ।
ಚಿಂತಯನ್ನುಬುಧೇ ದೇವಸ್ತಾಂ ಕನ್ಯಾಂ ಶ್ವೇತಪರ್ವತೇ ॥
ತಪಶ್ಚರಂತೀಂ ಸುಮಹತ್ತಪಸಾ ದಗ್ಧಕಿಲ್ಬಿಷಾಂ ॥ ೩೯ ॥

ತತೋ ಬ್ರಹ್ಮಾ ಯಯೌ ತತ್ರ ಯತ್ರ ಸಾ ಕಮಲೇಕ್ಷಣಾ ।
ತಪಶ್ಚರಂತೀಂ ತಾಂ ದೃಷ್ಟ್ವಾ ವಾಕ್ಯಮೇತದುವಾಚ ಹ ॥ ೪೦ ॥

॥ ಬ್ರಹ್ಮೋವಾಚ ॥

ಕಿಂ ತಪಃ ಕ್ರಿಯತೇ ಭದ್ರೇ ಕಾರ್ಯಮಾಪೇಕ್ಷ್ಯ ಶೋಭನೇ ।
ತುಷ್ಟೋಽಸ್ಮಿ ತೇ ವಿಶಾಲಾಕ್ಷಿ ವರಂ ವರಯ ಕನ್ಯಕೇ ॥ ೪೧ ॥

---

೩೮. ತನ್ನ ಮಾನಸಪ್ರಜೆಗಳು ಅಭಿವೃದ್ಧಿಗೆ ಬಾರದಿರಲು ಬ್ರಹ್ಮನು "ಇದೇಕೆ ನನ್ನ ಪ್ರಜೆಗಳು ಸರಿಯಾಗಿ ಅಭಿವೃದ್ಧಿಗೆ ಬರುವುದಿಲ್ಲ" ಎಂದು ಚಿಂತಿಸಿದನು.

೩೯. ಸುವ್ರತೇ, ಹಾಗೆ ಚಿಂತಿಸಿದ ಬ್ರಹ್ಮನು ಯೋಗಾಭ್ಯಾಸದಿಂದ ಧ್ಯಾನಿಸುತ್ತ ಆ ಸೃಷ್ಟಿಕನ್ಯೆಯು ಶ್ವೇತಪರ್ವತದಲ್ಲಿ ಮಹಾತಪಸ್ಸನ್ನು ಆಚರಿಸುತ್ತ ಅದರಿಂದ ಪಾಪರಹಿತಳಾಗಿರುವುದನ್ನು ತಿಳಿದನು.

೪೦. ಬಳಿಕ ಬ್ರಹ್ಮನು ಆ ಕಮಲನೇತ್ರೆಯೆಡೆಗೆ ಹೋಗಿ, ತಪಸ್ಸನ್ನಾಚರಿಸುತ್ತಿದ್ದ ಅವಳನ್ನು ನೋಡಿ ಮುಂದಿನ ಮಾತನಾಡಿದನು.

೪೧. ಬ್ರಹ್ಮ—ಭದ್ರೇ, ಮಂಗಳೇ, ಯಾವ ಕಾರ್ಯವನ್ನುದ್ದೇಶಿಸಿ ತಪಸ್ಸನ್ನು ಮಾಡುತ್ತೀಯೆ ? ವಿಶಾಲಾಕ್ಷೀ, ಕನ್ಯೇ, ನಿನಗೆ ಒಲಿದಿದ್ದೇನೆ. ವರವನ್ನು ಬೇಡು.

|| ಸೃಷ್ಟಿರುವಾಚ ||

ಭಗವನ್ನೇಕದೇಶಸ್ಥಾ ನೋತ್ಸಹೇ ಸ್ಥಾತುಮಂಜಸಾ |
ಅತೋರ್ಥಂ ತ್ವಾಂ ವರಂ ಯಾಚೇ ಸರ್ವಗತ್ವಮಭೀಪ್ಸತೀ || ೪೨ ||

ಏವಮುಕ್ತಸ್ತದಾ ದೇವ್ಯಾ ಸೃಷ್ಟ್ಯಾ ಬ್ರಹ್ಮಾ ಪ್ರಜಾಪತಿಃ |
ಉವಾಚ ತಾಂ ತದಾ ದೇವೀಂ ಸರ್ವಗಾ ತ್ವಂ ಭವಿಷ್ಯಸಿ || ೪೩ ||

ಏವಮುಕ್ತಾ ತದಾ ತೇನ ಸೃಷ್ಟಿಃ ಸಾ ಕಮಲೇಕ್ಷಣಾ |
ತಸ್ಯ ಹ್ಯಂಕೇ ಲಯಂ ಪ್ರಾಪ್ತಾ ಸಾ ದೇವೀ ಪದ್ಮಲೋಚನಾ || ೪೪ ||

ತಸ್ಮಾದಾರಭ್ಯ ಕಾಲಾತ್ತು ಬ್ರಹ್ಮಸೃಷ್ಟಿರ್ವ್ಯವರ್ಧತ || ೪೫ ||

ಬ್ರಹ್ಮಣೋ ಮಾನಸಾಃ ಸಪ್ತ ತೇಷಾಮನ್ಯೇ ತಪೋಧನಾಃ |
ತೇಷಾಮನ್ಯೇ ತತಸ್ತ್ವನ್ಯೇ ಚತುರ್ಧಾ ಭೂತಸಂಗ್ರಹಃ || ೪೬ ||

---

೪೨. ಸೃಷ್ಟಿಕನ್ಯೆ—ಪೂಜ್ಯನೇ, ಒಂದೆಡೆಯಲ್ಲಿದ್ದುಕೊಂಡಿರಲು ನನಗೆ ಇಷ್ಟವಿಲ್ಲ. ಆದುದರಿಂದ ಬೇಗನೆ ಎಲ್ಲೆಲ್ಲೂ ಇರಲು ಬಯಸಿ ನಿನ್ನನ್ನು ವರವನ್ನು ಬೇಡುತ್ತೇನೆ.

೪೩. ಆಗ ಸೃಷ್ಟಿದೇವಿಯು ಹೀಗೆ ಬೇಡಲು ಪ್ರಜೆಗಳೊಡೆಯನಾದ ಬ್ರಹ್ಮನು "ಅವಳಿಗೆ ನೀನು ಸರ್ವಗಾಮಿನಿಯಾಗುವೆ" ಎಂದು ಹೇಳಿದನು.

೪೪. ಹೀಗೆ ವರವನ್ನು ಪಡೆದ ಕಮಲನೇತ್ರೆಯಾದ ಆ ಸೃಷ್ಟಿದೇವಿಯು ಆ ಬ್ರಹ್ಮನ ತೊಡೆಯಲ್ಲಿ ಲೀನಳಾದಳು.

೪೫. ಅದು ಮೊದಲುಗೊಂಡು ಕಾಲಕ್ರಮದಲ್ಲಿ ಬ್ರಹ್ಮಸೃಷ್ಟಿಯು ವಿಶೇಷವಾಗಿ ಬೆಳೆಯಿತು.

೪೬. ಬ್ರಹ್ಮನ ಮಾನಸಪುತ್ರರಾದವರು ಏಳುಜನ ತಪಸ್ವಿಗಳು ಅವರಿಗಿಂತ ಬೇರೆಯಾದವರು ಕೆಲವರು ಋಷಿಗಳು. ಅವರಲ್ಲದೆ ಬೇರೆಯವರು ಮತ್ತೂ ಕೆಲವರು ಅಥವಾ ಕೆಲವು. ಹೀಗೆ ಪ್ರಾಣಿಗಳು ನಾಲ್ಕುಬಗೆ.

ಸಸ್ಥಾಣುಜಂಗಮಾನಾಂ ಚ ಸೃಷ್ಟಿಸ್ಸರ್ವತ್ರ ಸಂಸ್ಥಿತಾ ॥ ೪೭ ॥

ಯತ್ಕಿಂಚಿದ್ವಾಙ್ಮಯಂ ಲೋಕೇ ಜಗತ್ ಸ್ಥಾವರಜಂಗಮಂ ।
ತತ್ಸರ್ವಂ ಸ್ಥಾಪಿತಂ ಸೃಷ್ಟ್ಯಾ ಭೂತಂ ಭವ್ಯಂ ಚ ಸರ್ವದಾ ॥ ೪೮ ॥

ಇತಿ ಶ್ರೀ ವರಾಹಪುರಾಣೇ ಸೃಷ್ಟಿವಿಭಾಗೇ ತ್ರಿಶಕ್ತಿಮಾಹಾತ್ಮ್ಯೇ
ಸೃಷ್ಟಿದೇವತಾನಿರೂಪಣಂ ನಾಮ ನವತಿತಮೋಽಧ್ಯಾಯಃ

೪೭–೪೮. ಸ್ಥಾವರ ಜಂಗಮಗಳ ಸೃಷ್ಟಿಯೂ ಎಲ್ಲೆಲ್ಲೂ ಆಯಿತು. ಲೋಕದಲ್ಲಿ ಸ್ಥಾವರ ಜಂಗಮವೆಂದು ಯಾವುದನ್ನು ಹೇಳುತ್ತೇವೋ, ಅದೆಲ್ಲವೂ, ಹಿಂದೆ ಹುಟ್ಟಿದುದೂ, ಮುಂದೆ ಹುಟ್ಟುವುದೂ ಯಾವಾಗಲೂ ಸೃಷ್ಟಿದೇವಿಯಿಂದಲೇ ಸ್ಥಾಪಿಸಲ್ಪಡುವುದು.

ಅಧ್ಯಾಯದ ಸಾರಾಂಶ :—

ಅಂಧಕಾಸುರನ ತೊಂದರೆಯನ್ನು ತಡೆಯಲಾರದ ದೇವತೆಗಳು ಅವನ ವಧೆಯನ್ನುದ್ದೇಶಿಸಿ ಬ್ರಹ್ಮನೊಡನೆ ಈಶ್ವರನ ಹತ್ತಿರಕ್ಕೆ ಬಂದುದು, ಬ್ರಹ್ಮನಿಂದ ಎಲ್ಲವನ್ನೂ ಕೇಳಿದ ಶಿವನು ವಿಷ್ಣುವನ್ನು ಸ್ಮರಿಸಲು ಅವನೂ ಅಲ್ಲಿಗೆ ಬಂದುದು, ಏಕೀಭೂತವಾದ ಆ ತ್ರಿಮೂರ್ತಿಗಳ ದೃಷ್ಟಿಯಿಂದ ತ್ರಿವರ್ಣದೇವಿಯು ಜನಿಸಿದುದು, ಅವರಿಂದ ವರವನ್ನು ಪಡೆದ ಅವಳು, ಬ್ರಾಹ್ಮಿ, ವೈಷ್ಣವಿ ರೌದ್ರಿಯೆಂಬ ಮೂರು ರೂಪಗಳನ್ನು ಧರಿಸಿದುದು, ಕ್ರಮವಾಗಿ ಅವರು ಸೃಷ್ಟಿಸ್ಥಿತಿಲಯಗಳಿಗೆ ಕರ್ತೃಗಳಾದುದು, ಅವರು ಅನುಕ್ರಮವಾಗಿ ಶ್ವೇತ, ಮಂದರ, ನೀಲಪರ್ವತಗಳಿಗೆ ತಪಸ್ಸನ್ನಾಚರಿಸಲು ಹೊರಟು ಹೋದುದು, ಬ್ರಹ್ಮನು ಬ್ರಾಹ್ಮಿಯಿಂದ ಸೃಷ್ಟಿಯನ್ನು ಬೆಳೆಸಿದುದು ಈ ವಿಚಾರಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

–X–

ಏಕನವತಿತಮೋಽಧ್ಯಾಯಃ

ಅಥ ಸರಸ್ವತೀವರ್ಣನಾದಿಕಂ

॥ ಶ್ರೀ ವರಾಹ ಉವಾಚ ॥

ಶೃಣು ಚಾನ್ಯಂ ವರಾರೋಹೇ ತಸ್ಯಾ ದೇವ್ಯಾ ಮಹಾವಿಧಿಂ ।
ಯಾ ಸಾ ತ್ರಿಶಕ್ತಿರುದ್ದಿಷ್ಟಾ ಶಿವೇನ ಪರಮೇಷ್ಠಿನಾ ॥ ೧ ॥

ತತ್ರ ಸೃಷ್ಟಿಃ ಪುರಾ ಪ್ರೋಕ್ತಾ ಶ್ವೇತವರ್ಣಾ ಸುರೂಪಿಣೀ ।
ಏಕಾಕ್ಷರೇತಿ ವಿಖ್ಯಾತಾ ಸರ್ವಾಕ್ಷರಮಯೀ ಶುಭಾ ॥ ೨ ॥

ವಾಗೀಶೇತಿ ಸಮಾಖ್ಯಾತಾ ಕ್ವಚಿದ್ದೇವೀ ಸರಸ್ವತೀ ।
ಸೈವ ವಿದ್ಯೇಶ್ವರೀ ದೇವೀ ಸೈವ ಕ್ವಾಪ್ಯಮಿತಾಕ್ಷರಾ ॥ ೩ ॥

ತೊಂಬತ್ತೊಂದನೆಯ ಅಧ್ಯಾಯ

ಸರಸ್ವತಿಯ ವರ್ಣನೆಯೇ ಮೊದಲಾದುದು

೧. ಶ್ರೀವರಾಹ—ವರಾರೋಹೇ, ಶಿವನಿಂದಲೂ, ಬ್ರಹ್ಮನಿಂದಲೂ, ಉದ್ದಿಷ್ಟಳಾದ ಆ ತ್ರಿಶಕ್ತಿದೇವಿಯ ಬೇರೆಯ ಮಹಾವಿಧಿಗಳನ್ನೂ ಕೇಳು.

೨. ಬೆಳ್ಳಗಿರುವಳೂ, ಸುಂದರಿಯೂ, ಆದ ಸೃಷ್ಟಿದೇವಿಯ ವಿಚಾರವನ್ನು ಹಿಂದೆ ಹೇಳಿದೆನು. ಸರ್ವಾಕ್ಷರಮಯಿಯಾದ ಆ ಶುಭೆಗೆ ಏಕಾಕ್ಷರೆಯೆಂಬ ಹೆಸರೂ ಪ್ರಸಿದ್ಧವಾಗಿದೆ.

೩. ಆ ದೇವಿಯನ್ನೇ ವಾಗೀಶೆಯೆಂದೂ, ಸರಸ್ವತಿಯೆಂದೂ, ವಿದ್ಯೇಶ್ವರಿಯೆಂದೂ, ಅಮಿತಾಕ್ಷರಿಯೆಂದೂ ಕರೆಯುವರು.

ಸೈವ ಜ್ಞಾನನಿಧಿಃ ಕ್ವಾಪಿ ಸೈವ ದೇವೀ ವಿಭಾವರೀ ।
ಯಾನಿ ಸೌಮ್ಯಾನಿ ನಾಮಾನಿ ಯಾನಿ ಜ್ಞಾನೋದ್ಭವಾನಿ ಚ ।
ತಾನಿ ತಸ್ಯಾ ವಿಶಾಲಾಕ್ಷಿ ದ್ರಷ್ಟವ್ಯಾನಿ ವರಾನನೇ ॥ ೪ ॥

ಯಾ ವೈಷ್ಣವೀ ವಿಶಾಲಾಕ್ಷೀ ರಕ್ತವರ್ಣಾ ಸುರೂಪಿಣೀ ।
ಅಪರಾ ಸಾ ಸಮಾಖ್ಯಾತಾ ರೌದ್ರೀ ಚೈವ ಪರಾಯಣಾ ॥ ೫ ॥

ಏತಾಸ್ತ್ರಯೋಽಪಿ ಸಿಧ್ಯಂತಿ ಯೋ ರುದ್ರಂ ವೇತ್ತಿ ತತ್ತ್ವತಃ ॥ ೬ ॥

ಸರ್ವಾ ಸೇಯಂ ವರಾರೋಹೇ ಏಕೈವ ತ್ರಿವಿಧಾ ಸ್ಮೃತಾ ।
ಏಷಾ ಸೃಷ್ಟಿರ್ವರಾರೋಹೇ ಕಥಿತಾ ತೇ ಪುರಾತನೀ ॥ ೭ ॥

ತಯಾ ಸರ್ವಮಿದಂ ವ್ಯಾಪ್ತಂ ಜಗತ್ ಸ್ಥಾವರಜಂಗಮಂ ॥ ೮ ॥

ಯಾ ಸಾದೌ ವರ್ಧಿತಾ ಸೃಷ್ಟಿರ್ಬ್ರಹ್ಮಣೋಽವ್ಯಕ್ತಜನ್ಮನಃ ।
ತಯಾ ತುಲ್ಯಾಂ ಸ್ತುತಿಂ ಚಕ್ರೇ ತಸ್ಯಾ ದೇವ್ಯಾಃ ಪಿತಾಮಹಃ ॥ ೯ ॥

---

೪. ವಿಶಾಲಾಕ್ಷಿ, ವರಾನನೇ, ಅವಳೇ ಜ್ಞಾನನಿಧಿ. ವಿಭಾವರಿಯೂ ಅವಳೇ. ಜ್ಞಾನಿಗೆ ತಕ್ಕ ಸೌಮ್ಯವಾದ ಹೆಸರುಗಳೆಲ್ಲವೂ ಅವಳವು.

೫–೬. ವಿಶಾಲಾಕ್ಷಿಯೂ, ಕೆಂಪಗಿರುವವಳೂ, ಸುರೂಪಿಣಿಯೂ ಆದ ವೈಷ್ಣವೀದೇವಿ, ಪರಾಯಣಳಾದ ರೌದ್ರೀದೇವಿ, ಸರಸ್ವತಿ ಈ ಮೂವರೂ, ರುದ್ರನನ್ನು ನಿಜವಾಗಿ ಯಾರು ಅರಿಯುವರೋ ಅವರಿಗೆ ಸಿದ್ಧಿಸುವರು.

೭. ವರಾರೋಹೇ, ಆ ಒಬ್ಬಳೇ ಶಕ್ತಿಯು ಮೂರು ಬಗೆಯಾಗಿರುವಳು. ಈ ಪುರಾತನ ಸೃಷ್ಟಿಯನ್ನು ನಿನಗೆ ಹೇಳಿದೆನು.

೮. ಆ ಸೃಷ್ಟಿಯಿಂದ ಚರಾಚರಾತ್ಮಕವಾದ ಈ ಜಗತ್ತೆಲ್ಲವೂ ವ್ಯಾಪ್ತವಾಗಿದೆ.

೯. ಅವ್ಯಕ್ತಜನ್ಮನಾದ ಬ್ರಹ್ಮನ ಯಾವ ಸೃಷ್ಟಿಯು ಮೊದಲು ಬೆಳೆಯಿತೋ, ಅದಕ್ಕೆ ಅನುರೂಪವಾಗಿ ಬ್ರಹ್ಮನು ಆ ದೇವಿಯನ್ನು ಸ್ತುತಿಸಿದನು.

॥ ಬ್ರಹ್ಮೋವಾಚ ॥

ಜಯಸ್ವ ಸತ್ಯಸಂಭೂತೇ ಧ್ರುವೇ ದೇವಿ ಧರೇಽಕ್ಷರೇ ।
ಸರ್ವಗೇ ಸರ್ವಜನನಿ ಸರ್ವಭೂತಮಹೇಶ್ವರಿ ॥ ೧೦ ॥

ಸರ್ವಜ್ಞಾ ತ್ವಂ ವರಾರೋಹೇ ಸರ್ವಸಿದ್ಧಿಪ್ರದಾಯಿನೀ ।
ಸಿದ್ಧಿಬುದ್ಧಿಕರೇ ದೇವಿ ಪ್ರಸೂತಿಃ ಪರಮೇಶ್ವರೀ ॥ ೧೧ ॥

ತ್ವಂ ಸ್ವಾಹಾ ತ್ವಂ ಸ್ವಧಾ ದೇವಿ ತ್ವಮುತ್ಪತ್ತಿರ್ವರಾನನೇ ।
ತ್ವಮೋಂಕಾರಃ ಸ್ಥಿತಾ ದೇವಿ ವೇದೋತ್ಪತ್ತಿಸ್ತ್ವಮೇವ ಚ ॥ ೧೨ ॥

ದೇವಾನಾಂ ದಾನವಾನಾಂ ಚ ಯಕ್ಷಗಂಧರ್ವರಕ್ಷಸಾಂ ।
ಪಶೂನಾಂ ವೀರುಧಾಂ ಚಾಪಿ ತ್ವಮುತ್ಪತ್ತಿರ್ವರಾನನೇ ॥ ೧೩ ॥

ವಿದ್ಯಾ ವಿದ್ಯೇಶ್ವರೀ ಸಿದ್ಧಾಪ್ರಸಿದ್ಧಾತ್ವಂ* ಸುರೇಶ್ವರೀ ।
ಸರ್ವಜ್ಞಾ ತ್ವಂ ವರಾರೋಹೇ ಸರ್ವಸಿದ್ಧಿವಿಧಾಯಿನೀ ॥ ೧೪ ॥

---

೧೦. ಬ್ರಹ್ಮ—ಜಯಿಸು ಸತ್ಯಸಂಭೂತೇ, ಧ್ರುವೇ, ದೇವಿ, ಧರೇಽಕ್ಷರೇ, ಸರ್ವಗೇ, ಸರ್ವಜನನೀ, ಸರ್ವಭೂತಮಹೇಶ್ವರೀ.

೧೧. ನೀಂ ಸರ್ವಜ್ಞೆ ವರಾರೋಹೇ, ಸರ್ವಸಿದ್ಧಿಪ್ರದಾಯಿನೀ, ಸಿದ್ಧಿ ಬುದ್ಧಿಪ್ರದೇ, ದೇವಿ, ಜನನೀ, ಪರಮೇಶ್ವರೀ.

೧೨. ಸ್ವಾಹೆಯೂ ಸ್ವಧೆಯೂ ನೀನೇ, ನೀನುತ್ಪತ್ತಿವರಾನನೇ, ಓಂಕಾರ ಸ್ಥಿತಿಯೂ ನೀನೇ, ವೇದೋತ್ಪತ್ತಿಯೂ ನೀನೆಯೇ.

೧೩. ದೇವದಾನವವರ್ಗಕ್ಕೂ ಯಕ್ಷಗಂಧರ್ವವರ್ಗಕ್ಕೂ ಪಶುಗುಲ್ಮದ ವರ್ಗಕ್ಕೂ ಮಾತೃ ನೀನೇ ವರಾನನೇ.

೧೪. ವಿದ್ಯೇ, ವಿದ್ಯೇಶ್ವರೀ, ಸಿದ್ಧೇ, ನೀಂ ಪ್ರಸಿದ್ಧೆ ಸುರೇಶ್ವರೀ, ಸರ್ವಜ್ಞೆ ನೀಂ ವರಾರೋಹೇ, ಸರ್ವಸಿದ್ಧಿವಿಧಾಯಿನೀ.

---

* ಪ್ರಸಿದ್ಧಾಹಂ.

ಸರ್ವಗಾ ಗತಸಂದೇಹಾ ಸರ್ವಶತ್ರುನಿಬರ್ಹಿಣೀ ।
ಸರ್ವವಿದ್ಯೇಶ್ವರೀ ದೇವೀ ನಮಸ್ತೇ ಸ್ವಸ್ತಿಕಾರಿಣಿ ॥ ೧೫ ॥

ಋತುಸ್ನಾತಾಂ ಸ್ತ್ರಿಯಂ ಗಚ್ಛೇದ್ಯಸ್ತ್ವಾಂ ಸ್ಮೃತ್ವಾ ವರಾನನೇ ।
ತಸ್ಯಾವಶ್ಯಂ ಭವೇತ್ಸೃಷ್ಟಿಸ್ತ್ವತ್ಪ್ರಸಾದಾತ್ಪ್ರಜೇಶ್ವರಿ ॥
ಸುರೂಪಾ ವಿಜಯಾ ಭದ್ರೇ ಸರ್ವಶತ್ರುವಿನಾಶಿನೀ ॥ ೧೬ ॥

ಇತಿ ಶ್ರೀ ವರಾಹಪುರಾಣೇ ತ್ರಿಶಕ್ತಿಮಾಹಾತ್ಮ್ಯೇ ಸೃಷ್ಟಿಸರಸ್ವತೀ
ವರ್ಣನಾದಿಕಂ ನಾಮೈಕನವತಿತಮೋಧ್ಯಾಯಃ

---

೧೫. ಸರ್ವಗೇ, ಗತಸಂದೇಹೇ, ಸರ್ವಶತ್ರುವಿನಾಶಿನೀ, ಸರ್ವವಿದ್ಯೇಶ್ವರೀ, ದೇವೀ, ನಮಿಪೆಂ ಸ್ವಸ್ತಿಕಾರಿಣೀ.

೧೬. ಸುರೂಪೇ, ವಿಜಯೇ ಭದ್ರೇ ಸರ್ವಶತ್ರುವಿನಾಶಿನೀ, ನಿನ್ನನ್ನು ಸ್ಮರಿಸಿ, ಋತುಸ್ನಾನಮಾಡಿದ ಪತ್ನಿಯ ಸಂಗಮಾಡುವವನಿಗೆ ನಿನ್ನ ಅನುಗ್ರಹದಿಂದ ನಿಜವಾಗಿಯೂ ಪುತ್ರಲಾಭವು ಆಗುವುದು.

ಅಧ್ಯಾಯದ ಸಾರಾಂಶ :—

ಸೃಷ್ಟಿ ಅಥವಾ ಸರಸ್ವತೀದೇವಿಯ ನಾಮಾಂತರಗಳನ್ನೂ, ಮಹಿಮೆಯನ್ನೂ, ಅವಳ ವಿಚಾರದಲ್ಲಿ ಬ್ರಹ್ಮನು ಮಾಡಿದ ಸ್ತುತಿಯನ್ನೂ, ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ತೊಂಬತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

–x–

ದ್ವಿನವತಿತಮೋಽಧ್ಯಾಯಃ

ಅಥ ವೈಷ್ಣವೀಮಾಹಾತ್ಮ್ಯಂ

॥ ಶ್ರೀ ವರಾಹ ಉವಾಚ ॥

ಯಾ ಮಂದರಗತಾ ದೇವೀ ತಪಃ ಕರ್ತುಂ ತು ವೈಷ್ಣವೀ ।
ರಾಜಸೀ ಪರಮಾ ಶಕ್ತಿಃ ಕೌಮಾರವ್ರತಧಾರಿಣೀ ।
ಸೈಕಾಕಿನೀ ತಪಸ್ತೇಪೇ ವಿಶಾಲಾಯಾಂ ತು ಶೋಭನಾ ॥ ೧ ॥

ತಸ್ಯಾಸ್ತ್ತಪಂನ್ತ್ಯಾಃ ಕಾಲೇನ ಮಹತಾ ಕ್ಷುಭಿತಂ ಮನಃ ॥ ೨ ॥

ತಸ್ಮಾತ್ ಕ್ಷೋಭಾತ್ಸಮುತ್ತಸ್ಥುಃ ಕುಮಾರ್ಯಃ ಸೌಮ್ಯಲೋಚನಾಃ ।
ನಿತಂಬರಶನೋದ್ದಾಮನೂಪುರಾಢ್ಯಾಃ ಸುವರ್ಚಸಃ ॥ ೩ ॥

ತೊಂಬತ್ತೆರಡನೆಯ ಅಧ್ಯಾಯ

ವೈಷ್ಣವಿಯ ಮಾಹಾತ್ಮ್ಯೆ

೧. ಶ್ರೀವರಾಹ—ತಪಸ್ಸನ್ನು ಮಾಡಲು ಮಂದರಪರ್ವತಕ್ಕೆ ಹೋದ ಪರಮರಾಜಸಶಕ್ತಿಯೂ, ಮಂಗಳೆಯೂ ಆದ ವೈಷ್ಣವೀದೇವಿಯು ಕೌಮಾರ ವ್ರತವನ್ನು ಧರಿಸಿ ಏಕಾಂಗಿನಿಯಾಗಿ ವಿಶಾಲೆಯಲ್ಲಿ ತಪಸ್ಸನ್ನು ಮಾಡಿದಳು.

೨. ಬಹುಕಾಲ ತಪಸ್ಸುಮಾಡುತ್ತಿದ್ದ ಅವಳ ಮನಸ್ಸು ಕಲಕಿತು.

೩-೪. ಆ ಕದಡುವಿಕೆಯಿಂದ ಆ ದೇವಿಯ ಮನಸ್ಸಿನಲ್ಲಿ ಸೌಮ್ಯದೃಷ್ಟಿ ಯುಳ್ಳವರೂ, ನೀಲವಾದ ಗುಂಗುರು ಕೂದಲುಳ್ಳವರೂ, ತೊಂಡೆಯ ಹಣ್ಣಿನಂತೆ

ಏವಂ ವಿಧಾ ಸ್ತ್ರಿಯೋ ದೇವ್ಯಾಃ ಕ್ಷೋಭಿತೇ ಮನಸಿ ದ್ರುತಂ ।
ಉತ್ತಸ್ಥುಃ ಶತಸಾಹಸ್ರಾಃ ಕೋಟಿಶೋ ವಿವಿಧಾಃ ಪ್ರಜಾಃ ॥ ೪ ॥

ದೃಷ್ಟ್ವಾ ಕುಮಾರ್ಯಃ ಸಾ ದೇವೀ ತಸ್ಮಿನ್ನೇವ ಗಿರೌ ಶುಭಾಃ ॥ ೫-॥

ತಪಸಾ ನಿರ್ಮಮೇ ದೇವಿ ಪುರಂ ಹರ್ಮ್ಯಶತಾಕುಲಂ ।
ವಿಶಾಲರಥ್ಯಂ ಸೌವರ್ಣಪ್ರಾಸಾದೈರುಪಶೋಭಿತಂ ॥ ೬ ॥

ಅಂತರ್ಜಲಾನಿ ವೇಶ್ಮಾನಿ ಮಣಿಸೋಪಾನವಂತಿ ಚ ।
ರತ್ನಜಾಲಗವಾಕ್ಷಾನಿ ಆಸನ್ನೋಪವನಾನಿ ಚ ॥
ಅಸಂಖ್ಯಾತಾನಿ ಹರ್ಮ್ಯಾಣಿ ತಥಾ ಕನ್ಯಾ ಧರಾಧರೇ ॥ ೭ ॥

ಪ್ರಾಧಾನ್ಯೇನ ಪ್ರವಕ್ಷ್ಯಾಮಿ ಕನ್ಯಾನಾಮಾನಿ ಶೋಭನೇ ॥ ೮ ॥

ತುಟಿಯುಳ್ಳವರೂ, ವಿಶಾಲಾಕ್ಷಿಯರೂ, ದಿವ್ಯವಾದ ಒಡ್ಯಾಣ ಕಾಲುಬಳೆಗಳಿಂದೊಪ್ಪುವರೂ, ಸುತೇಜಸ್ವಿನಿಯರೂ ಆದ ಲಕ್ಷಜನಕುಮಾರಿಯರೂ, ಕೋಟಿಸಂಖ್ಯೆಯ ಬಗೆಬಗೆಯ ಪ್ರಜೆಗಳೂ ಉದಿಸಿದರು.

೫-೬. ಆ ದೇವಿಯು ಮಂಗಳೆಯರಾದ ಆ ಕುಮಾರಿಯರನ್ನು ನೋಡಿ, ಅದೇ ಪರ್ವತದಲ್ಲಿ ತಪಶ್ಶಕ್ತಿಯಿಂದ ನೂರಾರು ಉಪ್ಪರಿಗೆಯ ಮನೆಗಳಿಂದಲೂ, ಸುವರ್ಣಪ್ರಾಸಾದಗಳಿಂದಲೂ ಕೂಡಿ ವಿಶಾಲವಾದ ಬೀದಿಗಳುಳ್ಳ ಪಟ್ಟಣವೊಂದನ್ನು ನಿರ್ಮಿಸಿದಳು.

೭. ಭೂಧರೇ, ಆ ಪಟ್ಟಣದ ಅಸಂಖ್ಯಾತವಾದ ಮನೆಗಳೂ, ಉಪ್ಪರಿಗೆಗಳೂ ಬಾವಿ ಕೊಳಗಳಿಂದಲೂ, ರತ್ನದ ಮೆಟ್ಟಲುಗಳಿಂದಲೂ, ರತ್ನದ ಕಿಟಕಿಗಳಿಂದಲೂ, ಉಪವನಗಳಿಂದಲೂ ಕೂಡಿದ್ದುವು.

೮. ಶೋಭನೇ, ಮುಖ್ಯರಾದ ಕನ್ಯೆಯರ ಹೆಸರುಗಳನ್ನು ಹೇಳುತ್ತೇನೆ.

ವಿದ್ಯುತ್ಪ್ರಭಾ ಚಂದ್ರಕಾಂತಿಃ ಸೂರ್ಯಕಾಂತಿಸ್ತಥಾ ಪರಾ ।
ಗಂಭೀರಾ ಚಾರುಕೇಶೀ ಚ ಸುಜಾತಾ ಮುಂಜಕೇಶಿನೀ ॥ ೯ ॥

ಘೃತಾಚೀ ಚೋರ್ವಶೀ ಚಾನ್ಯಾ ಶಶಿನೀ ಶೀಲಮಂಡಿತಾ ।

ಚಾರುಕನ್ಯಾ ವಿಶಾಲಾಕ್ಷೀ ಧನ್ಯಾ ಪೀನಪಯೋಧರಾ ॥ ೧೦ ॥
ಚಂದ್ರಪ್ರಭಾ ಗಿರಿಸುತಾ ತಥಾ ಸೂರ್ಯಪ್ರಭಾಽಮೃತಾ ।
ಸ್ವಯಂಪ್ರಭಾ ಚಾರುಮುಖೀ ಶಿವದೂತೀ ವಿಭಾವರೀ ॥ ೧೧ ॥

ಜಯಾ ಚ ವಿಜಯಾ ಚೈವ ಜಯಂತೀ ಚಾಪರಾಜಿತಾ ।
ಏತಾಶ್ಚಾನ್ಯಾಶ್ಚ ಶತಶಃ ಕನ್ಯಾಸ್ತಸ್ಮಿನ್ಪುರೋತ್ತಮೇ ॥ ೧೨ ॥

ದೇವ್ಯಾ ಅನುಚರಾಸ್ಸರ್ವಾಃ ಪಾಶಾಂಕುಶಧರಾಶ್ಶುಭಾಃ ॥ ೧೩ ॥

ತಾಭಿಃ ಪರಿವೃತಾ ದೇವೀ ಸಿಂಹಾಸನಗತಾ ಶುಭಾ ।
ಸುಸಿತೈಶ್ಚಾಮರೈಃ ಸ್ತ್ರೀಭಿಃ ವೀಜ್ಯಮಾನಾ ವಿಲಾಸಿನೀ ॥
ಕೌಮಾರಂ ವ್ರತಮಾಸ್ಥಾಯ ತಪಃ ಕರ್ತುಂಸಮುದ್ಯತಾ ॥ ೧೪ ॥

೯-೧೨. ವಿದ್ಯುತ್ಪ್ರಭೆ, ಚಂದ್ರಕಾಂತಿ, ಸೂರ್ಯಕಾಂತಿ, ಗಂಭೀರೆ, ಚಾರುಕೇಶೀ, ಸುಜಾತೆ, ಮುಂಜುಕೇಶಿನೀ, ಘೃತಾಚಿ, ಊರ್ವಶೀ, ಶಶಿನಿ, ಶೀಲ ಮಂಡಿತೆ, ಚಾರುಕನ್ಯೆ, ವಿಶಾಲಾಕ್ಷಿ, ಧನ್ಯೆ, ಪೀನಪಯೋಧರೆ, ಚಂದ್ರಪ್ರಭೆ, ಗಿರಿಸುತೆ, ಸೂರ್ಯಪ್ರಭೆ, ಅಮೃತೆ, ಸ್ವಯಂಪ್ರಭೆ, ಚಾರುಮುಖಿ, ಶಿವದೂತಿ, ವಿಭಾವರಿ, ಜಯೆ, ವಿಜಯೆ, ಜಯಂತಿ, ಅಪರಾಜಿತೆ ಎಂಬುವರೂ, ಬೇರೆಯ ಕನ್ನೆಯರೂ ಆ ಪುರದಲ್ಲಿ ಸಾವಿರಾರು ಜನರಿದ್ದರು.

೧೩. ದೇವಿಯ ಅನುಚರೆಯರೆಲ್ಲರೂ ಪಾಶಾಂಕುಶಧರೆಯರು; ಮಂಗ ಳೆಯರು.

೧೪. ಅವರಿಂದ ಪರಿವೃತಳಾಗಿ ಸಿಂಹಾಸನದಲ್ಲಿ ಮಂಡಿಸಿರುವ ಶುಭೆಯಾದ ಆ ವೈಷ್ಣವೀದೇವಿಯು ಸೊಗಸಾದ ಬಿಳಿಯ ಚಾಮರಗಳಿಂದ ಸ್ತ್ರೀಯರು ಬೀಸುತ್ತಿರಲು ಕೌಮಾರವ್ರತವನ್ನು ಧರಿಸಿ ತಪಸ್ಸುಮಾಡುತ್ತಿದ್ದಳು.

ಪೂಜ್ಯಮಾನಾ ವರಸ್ತ್ರೀಭಿಃ ಕುಮಾರೀಭಿಃ ಸಮಂತತಃ ।
ಸರ್ವಾಂಗಶೋಭಿನೀ ದೇವೀ ಯಾವದಾಸ್ತೇ ತಪೋನ್ವಿತಾ ॥
ತಾವದಾಗತವಾಂಸ್ತತ್ರ ನಾರದೋ ಬ್ರಹ್ಮಣಃ ಸುತಃ ॥ ೧೫ ॥

ತಂ ದೃಷ್ಟ್ವಾ ಸಹಸಾ ದೇವೀ ಬ್ರಹ್ಮಪುತ್ರಂ ತಪೋಧನಂ ॥ ೧೬ ॥

ವಿದ್ಯುತ್ಪ್ರಭಾಮುವಾಚೇದಮಾಸನಂ ದೀಯತಾಮಿತಿ ।
ಪಾದ್ಯಮಾಚಮನೀಯಂ ಚ ಕ್ಷಿಪ್ರಮರ್ಘ್ಯಂ ಪ್ರದೀಯತಾಂ ॥ ೧೭ ॥

ಏವಮುಕ್ತಾ ತದಾ ದೇವ್ಯಾ ಕನ್ಯಾ ವಿದ್ಯುತ್ಪ್ರಭಾ ಶುಭಾ ।
ಆಸನಂ ಪಾದ್ಯಮರ್ಘ್ಯಂ ಚ ನಾರದಾಯ ನ್ಯವೇದಯತ್ ॥ ೧೮ ॥

ತತಃ ಕೃತಾಸನಂ ದೃಷ್ಟ್ವಾ ಪ್ರಣತಂ ನಾರದಂ ಮುನಿಂ ।
ಉವಾಚ ದೇವೀ ವಚನಂ ಹರ್ಷೇಣ ಮಹತಾನ್ವಿತಾ ॥ ೧೯ ॥

---

೧೫. ಸರ್ವಾಂಗಸುಂದರಿಯಾದ ಆ ದೇವಿಯು, ಸುತ್ತಿರುವ ಉತ್ತಮ ಕನ್ನೆಯರಿಂದ ಪೂಜೆಗೊಳ್ಳುತ್ತ, ತಪಸ್ಸುಮಾಡುತ್ತಿರಲು ಬ್ರಹ್ಮಪುತ್ರನಾದ ನಾರದನು ಅಲ್ಲಿಗೆ ಬಂದನು.

೧೬-೧೭. ಬ್ರಹ್ಮಪುತ್ರನೂ, ತಪೋಧನನೂ ಆದ ಆತನನ್ನು ಕಂಡು, ದೇವಿಯು ಕೂಡಲೆ "ಈತನಿಗೆ ಪೀಠವನ್ನೂ, ಅರ್ಘ್ಯಪಾದ್ಯಾಚಮನೀಯಗಳನ್ನೂ ಬೇಗನೆ ಕೊಡಬೇಕು" ಎಂದು ವಿದ್ಯುತ್ಪ್ರಭೆಯೆಂಬವಳಿಗೆ ಹೇಳಿದಳು.

೧೭. ಆಗ ದೇವಿಯಿಂದ ಹೀಗೆ ಹೇಳಿಸಿಕೊಂಡ ಕನ್ನೆಯೂ, ಶುಭೆಯೂ ಆದ ವಿದ್ಯುತ್ಪ್ರಭೆಯು ನಾರದನಿಗೆ ಆಸನವನ್ನೂ, ಅರ್ಘ್ಯಪಾದ್ಯಾದಿಗಳನ್ನೂ ಅರ್ಪಿಸಿದಳು.

೧೯-೨೦. ಬಳಿಕ ನಮಸ್ಕರಿಸಿ, ಪೀಠದಲ್ಲಿ ಕುಳಿತಿರುವ ನಾರದಮುನಿಯನ್ನು ನೋಡಿ, ಅತಿ ಸಂತೋಷದಿಂದ ಕೂಡಿದ ದೇವಿಯು, 'ಮುನಿವರ್ಯನೇ,

ಸ್ವಾಗತಂ ಭೋ ಮುನಿಶ್ರೇಷ್ಠ ಕಸ್ಮಾಲ್ಲೋಕಾದಿಹಾಗತಃ ।
ಕಿಂ ಕಾರ್ಯಂ ವದ ತೇ ಕೃತ್ಯಂ ಮಾ ತೇ ಕಾಲಾತ್ಯಯೋ ಭವೇತ್ ॥೨೦॥

ಏವಮುಕ್ತಸ್ತದಾ ದೇವ್ಯಾ ನಾರದಃ ಪ್ರಾಹ ಲೋಕವಿತ್ ॥ ೨೧ ॥

ಬ್ರಹ್ಮಲೋಕಾದಿಂದ್ರಲೋಕಂ ತಸ್ಮಾದ್ರೌದ್ರಮಥಾಚಲಂ ।
ತತಸ್ತ್ವಾಮಿಹ ದೇವೇಶಿ ದ್ರಷ್ಟುಮಭ್ಯಾಗತಃ ಶುಭೇ ॥
ಏವಮುಕ್ತ್ವಾ ಮುನಿಃ ಶ್ರೀಮಾಂಸ್ತಾಂ ದೇವೀಮನ್ವವೈಕ್ಷತ ॥ ೨೨ ॥

ದೃಷ್ಟ್ವಾ ಮುಹೂರ್ತಂ ದೇವೇಶೀಂ ವಿಸ್ಮಿತೋ ನಾರದೋಽಭವತ್ ।
ಅಹೋ ರೂಪಮಹೋ ಕಾಂತಿರಹೋ ಧೈರ್ಯಮಹೋ ವಯಃ ॥
ಅಹೋ ನಿಷ್ಕಾಮತಾ ದೇವ್ಯಾ ಇತಿ ಖೇದಮುಪಾಯಯೌ ॥ ೨೩ ॥

ನಿನಗೆ ಸುಖಾಗಮನ. ಯಾವ ಲೋಕದಿಂದ ಇಲ್ಲಿ ಬಂದೆ? ಯಾವ ಕೆಲಸಕ್ಕಾಗಿ? ನಿನಗೆ ನನ್ನಿಂದೇನಾಗಬೇಕು? ಹೇಳು. ಸಾವಕಾಶ ಮಾಡಬಾರದು.' ಎಂದು ಹೇಳಿದಳು.

೨೧. ದೇವಿಯು ಹಾಗೆನಲು, ಲೋಕಜ್ಞನಾದ ಆ ನಾರದನು ಹೀಗೆ ಹೇಳಿದನು.—

೨೨. 'ದೇವೇಶೀ, ಶುಭೇ, ಬ್ರಹ್ಮಲೋಕದಿಂದ ಇಂದ್ರಲೋಕಕ್ಕೂ, ಬಳಿಕ ಅಲ್ಲಿಂದ ಕೈಲಾಸಕ್ಕೂ ಹೋಗಿ, ಅಲ್ಲಿಂದ ನಿನ್ನನ್ನು ನೋಡಲು ಇಲ್ಲಿ ಬಂದೆನು' ಎಂದು ಹೇಳಿ ಶ್ರೀಮಂತನಾದ ಆ ಮುನಿಯು ದೇವಿಯನ್ನು ನೋಡಿದನು.

೨೩. ಹಾಗೆ ಮುಹೂರ್ತಕಾಲ ದೇವೇಶಿಯನ್ನು ನೋಡಿದ ನಾರದನು ವಿಸ್ಮಿತನಾಗಿ "ದೇವಿಯ ರೂಪವೂ, ಕಾಂತಿಯೂ, ಧೈರ್ಯವೂ, ವಯಸ್ಸೂ, ವಿರಕ್ತಿಯೂ ಆಶ್ಚರ್ಯಕರವಾದುದು" ಎಂದುಕೊಂಡು, ಬಳಿಕ ಖೇದಗೊಂಡನು.

ದೇವಗಂಧರ್ವಸಿದ್ಧಾನಾಂ ಯಕ್ಷಕಿನ್ನರರಕ್ಷಸಾಂ ।
ನ ರೂಪಮೀದೃಶಂ ಕ್ವಾಪಿ ಸ್ತ್ರೀಷ್ವನ್ಯಾಸು ಪ್ರದೃಶ್ಯತೇ ॥ ೨೪ ॥

ಏವಂ ಸಚಿಂತ್ಯ ಮನಸಾ ನಾರದೋ ವಿಸ್ಮಯಾನ್ವಿತಃ ।
ಪ್ರಣಮ್ಯ ದೇವೀಂ ಸಹಸಾ ಉತ್ಪಪಾತ ನಭಸ್ತಲಂ ॥ ೨೫ ॥

ಗತಶ್ಚ ತ್ವರಯಾ ಯುಕ್ತಃ ಪುರೀಂ ದೈತ್ಯೇಂದ್ರಪಾಲಿತಾಂ ।
ಮಹಿಷಾಖ್ಯೇನ ಭೂತೇಶಿ ಸಮುದ್ರಾಂತಃ ಸ್ಥಿತಾಂ ಪುರೀಂ ॥ ೨೬ ॥

ತತ್ರಾಸಸಾದ ಭಗವಾನಸುರಂ ಮಹಿಷಾಕೃತಿಂ ।
ದೃಷ್ಟ್ವಾ ಲಬ್ಧವರಂ ವೀರಂ ದೇವಸೈನ್ಯಾಂತಕಂ ಮಹತಃ ॥ ೨೭ ॥

ಸ ತೇನ ಪೂಜಿತೋ ಭಕ್ತ್ಯಾ ತದಾ ಲೋಕಚರೋ ಮುನಿಃ ।
ಪ್ರೀತಾತ್ಮಾ ನಾರದಸ್ತಸ್ಮೈ ದೇವ್ಯಾ ರೂಪಮನುತ್ತಮಂ ।
ಆಚಚಕ್ಷೇ ಯಥಾನ್ಯಾಯಂ ಯದ್ವೃತ್ತಂ ದೇವತಾಪುರೇ ॥ ೨೮ ॥

೨೪-೨೫. ದೇವಗಂಧರ್ವಸಿದ್ಧರಲ್ಲಾಗಲಿ, ಯಕ್ಷಕಿನ್ನರರಾಕ್ಷಸರಲ್ಲಾಗಲಿ, ಬೇರಾವ ಸ್ತ್ರೀಯರಲ್ಲೂ ಇಂತಹ ರೂಪವನ್ನು ಕಂಡುದಿಲ್ಲ" ಎಂದು ಮನದಲ್ಲಿ ಯೋಚಿಸಿ, ಆಶ್ಚರ್ಯಗೊಂಡ ನಾರದನು ದೇವಿಗೆ ವಂದಿಸಿ, ತಟ್ಟನೆ ಆಕಾಶಕ್ಕೆ ಹಾರಿದನು.

೨೬. ಭೂತೇಶಿ, ನಾರದನು ತ್ವರೆಯಿಂದ ಸಮುದ್ರದೊಳಗೆ ಮಹಿಷನೆಂಬ ರಾಕ್ಷಸನಿಂದ ರಕ್ಷಿತವಾಗಿದ್ದ ಪಟ್ಟಣಕ್ಕೆ ಹೋದನು

೨೭-೨೮. ಪೂಜ್ಯನಾದ ನಾರದನು ಅಲ್ಲಿ ಕೋಣನಾಕಾರದಿಂದಿದ್ದ ರಕ್ಕಸನ ಹತ್ತಿರಕ್ಕೆ ಹೋಗಿ, ವರವನ್ನು ಪಡೆದವನೂ, ದೇವಸೈನ್ಯಾಂತಕನೂ ಮಹಾವೀರನೂ ಆದ ಅವನನ್ನು ಕಂಡು ಅವನಿಂದ ಭಕ್ತಿಪೂರ್ವಕವಾಗಿ ಪೂಜಿತನಾಗಿ ಲೋಕಸಂಚಾರಿಯಾದ ಆ ನಾರದ ಮುನಿಯು ಸಂತಸಗೊಂಡು ವೈಷ್ಣವೀಪುರದಲ್ಲಿ ನಡೆದುದನ್ನೂ, ದೇವಿಯು ಅತ್ಯುತ್ತಮವಾದ ರೂಪವನ್ನೂ ಇದ್ದಂತೆಯೇ ಅವನಿಗೆ ಹೇಳಿದನು.

|| ನಾರದ ಉವಾಚ ||

ಅಸುರೇಂದ್ರ ಶೃಣುಷ್ವೇಕಂ ಕನ್ಯಾರತ್ನಂ ಸಮಾಹಿತಃ |
ತ್ರೈಲೋಕ್ಯಂ ವರದಾನೇನ ಸ್ವಾಧೀನಂ ತೇ ಚರಾಚರಂ || ೩೦ ||

ಬ್ರಹ್ಮಲೋಕಾದಹಂ ದೈತ್ಯ ಮಂದರಾದ್ರಿಮುಪಾಗತಃ |
ತತ್ರ ದೇವೀಪುರಂ ದೃಷ್ಟಂ ಕುಮಾರೀಶತಸಂಕುಲಂ || ೩೧ ||

ತತ್ರ ಪ್ರಧಾನಾ ಯಾ ಕನ್ಯಾ ತಾಪಸೀ ವ್ರತಚಾರಿಣೀ
ಸಾ ದೇವದೈತ್ಯಯಕ್ಷಾಣಾಂ ಮಧ್ಯೇ ಕಾಚಿನ್ನದೃಶ್ಯತೇ || ೩೨ ||

ಯಾದೃಶೀ ಸಾ ಮಯಾ ದೃಷ್ಟಾ ತಾದೃಶೀ ಕಾಂಡಮಧ್ಯತಃ |
ಭ್ರಮತಾ ಚೇದೃಶೀ ದೃಷ್ಟಾ ನ ಕದಾಚಿನ್ಮಯಾ ಸತೀ || ೩೩ ||

ತಸ್ಯಾಶ್ಚ ದೇವಗಂಧರ್ವಾ ಋಷಯಃ ಸಿದ್ಧಚಾರಣಾಃ |
ಉಪಾಸಾಂಚಕ್ರಿರೇ ಸರ್ವೇ ಯೇಽಪ್ಯನ್ಯೇ ದೈತ್ಯನಾಯಕಾಃ || ೩೪ ||

---

೩೦. ನಾರದ—ಅಸುರೇಂದ್ರನೇ, ವರವನ್ನು ಪಡೆದಿರುವುದರಿಂದ ಚರಾಚರಸಹಿತವಾದ ಮೂರು ಲೋಕವೂ ನಿನ್ನ ಅಧೀನವಾಗಿದೆ. ಕನ್ಯಾರತ್ನವೊಂದರ ವಿಚಾರವನ್ನು ಗಮನವಿಟ್ಟು ಕೇಳು.

೩೧. ದೈತ್ಯನೇ, ನಾನು ಬ್ರಹ್ಮಲೋಕದಿಂದ ಮಂದರಾದ್ರಿಗೆ ಹೋದೆನು. ಅಲ್ಲಿ ನೂರಾರುಜನ ಕನ್ನೆಯರಿಂದ ತುಂಬಿದ ದೇವೀಪುರವನ್ನು ನೋಡಿದೆನು.

೩೨. ಅಲ್ಲಿ ವ್ರತಚಾರಿಣಿಯೂ, ತಾಪಸಿಯೂ ಆಗಿರುವ ಮುಖ್ಯಳಾದ ಆ ಕನ್ನೆಯಂತಹವಳು ದೇವದೈತ್ಯಯಕ್ಷರಲ್ಲೂ ಯಾರೂ ಕಾಣುವುದಿಲ್ಲ.

೩೩. ಎಲ್ಲೆಲ್ಲೂ ಸುತ್ತುವ ನಾನು ನೋಡಿದ ಸಣ್ಣನಡುವಿನ ಆ ಸತಿಯಂತಹವಳನ್ನು ಹಿಂದೆ ಯಾವಾಗಲೂ ನೋಡಿಲ್ಲ.

೩೪. ದೇವತೆಗಳೂ, ಗಂಧರ್ವರೂ, ಋಷಿಗಳೂ, ಸಿದ್ಧಚಾರಣರೂ, ಇತರ ಎಲ್ಲಾ ದೈತ್ಯನಾಯಕರೂ ಅವಳನ್ನು ಸೇವಿಸುವರು.

ತಾಂ ದೃಷ್ಟ್ವಾ ವರದಾಂ ದೇವೀಮಹಂ ತೂರ್ಣಮಿಹಾಗತಃ ।
ಅಜಿತ್ವಾ ದೇವಗಂಧರ್ವಾನ್ನ ತಾಂ ಜಯತಿ ಕಶ್ಚನ ॥ ೩೫ ॥

ಏವಮುಕ್ತ್ವಾ ಕ್ಷಣಂ ಸ್ಥಿತ್ವಾ ತಮನುಜ್ಞಾಪ್ಯ ನಾರದಃ ।
ಯಥಾಗತಂ ಯಯೌ ಧೀಮಾನಂತರ್ಧಾನೇನ ತತ್ಕ್ಷಣಾತ್ ॥ ೩೬ ॥

ಇತಿ ಶ್ರೀವರಾಹಪುರಾಣೇ ಪ್ರಾಗಿತಿಹಾಸೇ ತ್ರಿಶಕ್ತಿಮಾಹಾತ್ಮ್ಯೇ
ಶ್ರೀವೈಷ್ಣವೀಮಾಹಾತ್ಮ್ಯಂ ನಾಮ ದ್ವಿನವತಿತಮೋಽಧ್ಯಾಯಃ

---

೩೫. ವರದೆಯಾದ ಆ ದೇವಿಯನ್ನು ನೋಡಿ, ನಾನು ಬೇಗನೆ ಇಲ್ಲಿಗೆ ಬಂದೆನು. ದೇವಗಂಧರ್ವರನ್ನು ಜಯಿಸದೆ ಯಾವನೂ ಆಕೆಯನ್ನು ಜಯಿಸಲಾರನು.

೩೬. ಹೀಗೆ ಹೇಳಿ, ಬುದ್ಧಿವಂತನಾದ ಆ ನಾರದನು ಕ್ಷಣಕಾಲವಿದ್ದು, ಅವನ ಅನುಮತಿಯನ್ನು ಪಡೆದು, ಒಡನೆಯೇ ಕಣ್ಮರೆಯಾಗಿ ಬಂದಂತೆಯೇ ಹೊರಟುಹೋದನು.

ಅಧ್ಯಾಯದ ಸಾರಾಂಶ :—

ಮಂದರಗಿರಿಯಲ್ಲಿ ತಪಸ್ಸನ್ನು ಮಾಡುತ್ತಿದ್ದ ವೈಷ್ಣವೀದೇವಿಯು ತನ್ನ ಮನದಿಂದಲೇ ಸಾವಿರಾರುಜನ ಕನ್ಯೆಯರನ್ನೂ, ಅವರಿಗಾಗಿ ಸುಂದರ ಪುರವೊಂದನ್ನೂ ಸೃಷ್ಟಿಸಿದುದನ್ನೂ, ಅಲ್ಲಿಗೆ ಬಂದ ನಾರದನು ಆ ದೇವಿಯ ರೂಪಾದಿಗಳಿಂದ ವಿಸ್ಮಿತನಾಗಿ ಬಳಿಕ ಮಹಿಷಾಸುರನೆಡೆಗೆ ಹೋಗಿ ಅವನಿಗೆ ದೇವಿಯ ರೂಪಾದಿಗಳ ಮಹಿಮೆಯನ್ನು ತಿಳಿಸಿದುದನ್ನೂ ಹೇಳುವಲ್ಲಿಗೆ ಶ್ರೀ ವರಾಹ ಪುರಾಣದಲ್ಲಿ ತೊಂಭತ್ತೆರಡನೆಯ ಅಧ್ಯಾಯ.

|| ಶ್ರೀಃ ||

–x–

ತ್ರಿನವತಿತಮೋಽಧ್ಯಾಯಃ

ಅಥ ಮಂತ್ರಿಮಹಿಷಾಸುರಸಂವಾದಃ

|| ಶ್ರೀ ವರಾಹ ಉವಾಚ ||

ಗತೇ ತು ನಾರದೇ ದೈತ್ಯಶ್ಚಿಂತಯಾಮಾಸ ತಾಂ ಶುಭಾಂ |
ಕಥಿತಾಂ ನಾರದಮುಖಾಚ್ಛ್ರುತ್ವಾ ವಿಸ್ಮಿತಮಾನಸಃ || ೧ ||

ತಾಮೇವ ಚಿಂತಯನ್ ಶರ್ಮ ನ ಲೇಭೇ ದೈತ್ಯಸತ್ತಮಃ |
ಮಂತ್ರಿಣಂ ಚಾನಯಾಮಾಸ ಅಲಂಶರ್ಮಾಣಮುತ್ತಮಂ || ೨ ||

ತಸ್ಯಾಷ್ಟೌ ಮಂತ್ರಿಣಶ್ಶೂರಾಃ ನೀತಿಮಂತೋ ಬಹುಶ್ರುತಾಃ |
ಪ್ರಘಸೋ ವಿಘಸಶ್ಚೈವ ಶಂಕುಕರ್ಣೋ ವಿಭಾವಸುಃ || ೩ ||

ತೊಂಭತ್ತಮೂರನೆಯ ಅಧ್ಯಾಯ

ಮಹಿಷಾಸುರನಿಗೂ ಅವನ ಮಂತ್ರಿಗಳಿಗೂ ನಡೆದ ಸಂವಾದ.

೧-೨. ಶ್ರೀವರಾಹ—ನಾರದನು ಹೊರಟುಹೋದ ಬಳಿಕ, ಅವನ ಬಾಯಿಂದ ಕೇಳಿ ವಿಸ್ಮಯಗೊಂಡ ಮನಸ್ಸುಳ್ಳ ದೈತ್ಯೇಂದ್ರನಾದ ಆ ಮಹಿಷಾಸುರನು ಆ ಶುಭೆ (ವೈಷ್ಣವಿ) ಯನ್ನೇ ನೆನೆಯುತ್ತ, ಮತ್ತಾವುದರಿಂದಲೂ, ಸುಖವಿಲ್ಲದವನಾಗಿ ಅಲಂಶರ್ಮನೆಂಬ ಉತ್ತಮನಾದ ಮಂತ್ರಿಯನ್ನು ಬರಮಾಡಿದನು.

೩-೪. ಅವನಿಗೆ ಶೂರರೂ, ನೀತಿವಂತರೂ, ಬಹುಶ್ರುತರೂ ಆದ ಪ್ರಘಸ, ವಿಘಸ, ಶಂಕುಕರ್ಣ, ವಿಭಾವಸು, ವಿದ್ಯುನ್ಮಾಲಿ, ಸುಮಾಲಿ, ಪರ್ಜನ್ಯ,

ವಿದ್ಯುನ್ಮಾಲೀ ಸುಮಾಲೀ ಚ ಪರ್ಜನ್ಯಃ ಕ್ರೂರ ಏವ ಚ ।
ಏತೇ ಮಂತ್ರಿವರಾಸ್ತಸ್ಯ ಪ್ರಾಧಾನ್ಯೇನ ಪ್ರಕೀರ್ತಿತಾಃ ॥ ೪ ॥

ತೇ ದಾನವೇಂದ್ರಮಾಸೀನಮೂಚುಃ ಕೃತ್ಯಂ ವಿಧೀಯತಾಂ ॥ ೫ ॥

ತೇಷಾಂ ತದ್ವಚನಂ ಶ್ರುತ್ವಾ ದಾನವೇಂದ್ರೋ ಮಹಾಬಲಃ ।
ಉವಾಚ ಕನ್ಯಾಲಾಭಾರ್ಥಂ ನಾರದಾವಾಪ್ತನಿಶ್ಚಯಃ ॥ ೬ ॥

॥ ಮಹಿಷ ಉವಾಚ ॥

ಮಹ್ಯಂ ತು ಕಥಿತಾ ಬಾಲಾ ನಾರದೇನ ಮಹರ್ಷಿಣಾ ।
* ಸಾ ಚಾಜಿತ್ಯ ಸುರಾಧ್ಯಕ್ಷಂ ನ ಲಭ್ಯೇತ ವರಾಂಗನಾ ॥ ೭ ॥

ಏತದರ್ಥಂ ಭವಂತೋ ವೈ ಕಥಯಂತು ವಿಮೃಶ್ಯ ಮೇ ॥ ೮ ॥

ಕ್ರೂರ, ಎಂಬ ಎಂಟುಜನ ಸಮರ್ಥರಾದ ಮಂತ್ರಿಗಳು ಮುಖ್ಯರೆನಿಸಿಕೊಂಡಿದ್ದರು.

೫. ಅವರು, ಕುಳಿತಿದ್ದ ರಾಕ್ಷಸೇಂದ್ರನನ್ನು "ನಾವು ಮಾಡಬೇಕಾದುದನ್ನು ಆಜ್ಞಾಪಿಸೋಣವಾಗಲಿ" ಎಂದು ಬೇಡಿದರು.

೬. ಅವರ ಮಾತನ್ನು ಕೇಳಿ, ನಾರದನಿಂದ ನಿಜಾಂಶವನ್ನು ತಿಳಿದಿದ್ದ, ಮಹಾಬಲಶಾಲಿಯಾದ ಆ ಮಹಿಷಾಸುರನು ಕನ್ಯೆಯನ್ನು ಪಡೆಯುವದಕ್ಕಾಗಿ ಹೀಗೆ ಹೇಳಿದನು.

೭. ಮಹಿಷ—ನನಗೆ ನಾರದಮಹರ್ಷಿಯು ವೈಷ್ಣವೀಬಾಲೆಯ ವಿಚಾರವನ್ನು ಹೇಳಿದ್ದಾನೆ. ಸುರಾಧ್ಯಕ್ಷನನ್ನು ಜಯಿಸದೆ ಅವಳನ್ನು ಪಡೆಯಲಾಗುವುದಿಲ್ಲ.

೮. ಈ ವಿಚಾರವನ್ನು ವಿಮರ್ಶಿಸಿ ನನಗೆ ಹೇಳಿರಿ.

---

* ಸಾಚಾಜಿತ್ವಾಸುರಾಧ್ಯಕ್ಷಂ ಎಂದು ಮುದ್ರಿತ ಪುಸ್ತಕಗಳಲ್ಲಿದೆ.

ಕಥಂ ಸಾ ಲಭ್ಯತೇ ಬಾಲಾ ಕಥಂ ದೇವಾಶ್ಚ ನಿರ್ಜಿತಾಃ ।
ಭವೇಯುರಿತಿ ತತ್ಸರ್ವಂ ಕಥಯಂತು ದ್ರುತಂ ಮಮ ॥ ೯ ॥

ಏವಮುಕ್ತಾಸ್ತತಸ್ಸರ್ವೇ ಕಥಯಾಮಾಸುರಂಜಸಾ ।
ಏವಮುಕ್ತೈಸ್ತಥೋವಾಚ ಪ್ರಘಸೋ ದಾನವೇಶ್ವರಂ ॥
ಯಾ ಸಾ ತೇ ಕಥಿತಾ ದೈತ್ಯ ನಾರದೇನ ಮಹಾಸತೀ ॥ ೧೦ ॥

ಸಾ ಶಕ್ತಿಃ ಪರಮಾ ದೇವೀ ವೈಷ್ಣವೀ ರೂಪಧಾರಿಣೀ ।
ಗುರುಪತ್ನೀ ರಾಜಪತ್ನೀ ತಥಾ ಸಾಮಂತಯೋಷಿತಃ ॥
ಜಿಘೃಕ್ಷನ್ನಶ್ಯತೇ ರಾಜಾ ತಥಾಗಮ್ಯಾಗಮೇನ ಚ ॥ ೧೧ ॥

ಪ್ರಘಸೇನೈವಮುಕ್ತಸ್ತು ವಿಘಸೋ ವಾಕ್ಯಮಬ್ರವೀತ್ ।
ಸಮ್ಯಗುಕ್ತಂ ಪ್ರಘಸೇನ ತಾಂ ದೇವೀಂ ಪ್ರತಿ ಪಾರ್ಥಿವ ॥ ೧೨ ॥

---

೯. ಆ ಬಾಲೆಯನ್ನು ನಾನು ಹೇಗೆ ಪಡೆಯಬೇಕು? ದೇವತೆಗಳು ಹೇಗೆ ನನ್ನಿಂದ ಜಿತರಾಗುವರು? ಎಂಬಿದನ್ನೆಲ್ಲಾ ನನಗೆ ಬೇಗನೆ ಹೇಳಿ.

೧೦-೧೧. ಹೀಗೆ ಅವನು ಕೇಳಲು ಅವರೆಲ್ಲರೂ ತಟ್ಟನೆ ಹೇಳಲಾರಂಭಿಸಿದರು. ಅವರಲ್ಲಿ ಪ್ರಘಸನು ರಾಕ್ಷಸೇಶ್ವರನನ್ನು ಕುರಿತು, "ರಕ್ಕಸನೇ, ನಿನಗೆ ನಾರದನು ಹೇಳಿದ ಆ ಸತಿಯು, ವೈಷ್ಣವೀರೂಪವನ್ನು ಧರಿಸಿರುವ ಪರಮಶಕ್ತಿ ದೇವಿ. ಗುರುಪತ್ನಿಯನ್ನೂ, ರಾಜಪತ್ನಿಯನ್ನೂ, ಸಾಮಂತರಾಜರ ಸ್ತ್ರೀಯರನ್ನೂ, ಅಪಹರಿಸಲಿಚ್ಛಿಸುವುದರಿಂದಲೂ, ಅಗಮ್ಯಾಗಮನದಿಂದಲೂ ರಾಜನು ನಾಶಹೊಂದುವನು" ಎಂದು ಹೇಳಿದನು.

೧೨. ಪ್ರಘಸನು ಹೀಗೆ ಹೇಳಲು ವಿಘಸನು ಹೇಳಿದನು "ದೊರೆಯೇ, ಆ ದೇವಿಯ ವಿಚಾರದಲ್ಲಿ ಪ್ರಘಸನು ಹೇಳಿದುದು ಸರಿಯಾಗಿದೆ.

ಯದಿ ನಾಮ ಮತ್ಯೈಕ್ಯಂ ತು ಬುದ್ಧಿಃ ಸ್ಮರಣಮಾಗತಾ ।
ವರಣೀಯಾ ಕುಮಾರೀ ತು ಸರ್ವದಾ ವಿಜಿಗೀಷುಭಿಃ ॥ ೧೩ ॥

ನ ಸ್ವತಂತ್ರೇಣ ಕನ್ಯಾಯಾಃ ಕಾರ್ಯಂ ಕ್ವಾಪಿ ಪ್ರಕರ್ಷಣಂ ॥ ೧೪ ॥

ಯದಿ ವೋ ರೋಚತೇ ವಾಕ್ಯಂ ಮದೀಯಂ ಮಂತ್ರಿಸತ್ತಮಾಃ ।
ತದಾನೀಂ ತಾಂ ಶುಭಾಂ ದೇವೀಂ ಗತ್ವಾಯಾಚಂತು ಮಂತ್ರಿಣಃ ॥
ಯೋ ಮಹಾತ್ಮಾ ಭವೇತ್ತಸ್ಯಾಃ ಬಂಧುಸ್ತಂ ಯಾಚಯಾಮಹೇ ॥ ೧೫ ॥

ಸಾಮ್ನೈವಾದೌ ತತಃ ಪಶ್ಚಾತ್ಕರಿಷ್ಯಾಮಃ ಪ್ರದಾನಕಂ ।
ತತೋ ಭೇದಂ ಕರಿಷ್ಯಾಮಸ್ತತೋ ದಂಡಂ ಕ್ರಮೇಣ ಚ ॥ ೧೬ ॥

ಅನೇನ ಕ್ರಮಯೋಗೇನ ಯದಿ ಸಾ ನೈವ ಲಭ್ಯತೇ ।
ತತಃ ಸನ್ನಹ್ಯ ಗಚ್ಛಾಮೋ ಬಲಾದ್ಗೃಹ್ಣೀಮ ತಾಂ ಶುಭಾಂ ॥ ೧೭ ॥

೧೩–೧೪. ನಮ್ಮ ಏಕಾಭಿಪ್ರಾಯವು ಮನಸ್ಸಿಗೆ ಹಿಡಿದರೆ ಜಯವನ್ನು ಬಯಸುವ ನಾವು ಆ ಕುಮಾರಿಯನ್ನು ಬೇಡಬೇಕು. ಸ್ವತಂತ್ರವಾಗಿ ಎಂದಿಗೂ ಕನ್ನೆಯನ್ನು ಎಳೆದು ತರಬಾರದು.

೧೫. ಮಂತ್ರಿವರ್ಯರೇ, ನನ್ನ ಮಾತು ನಿಮಗೆ ಒಪ್ಪಿದರೆ, ಆಕೆಗೆ ಬಂಧು ವಾವನೋ ಆ ಮಹಾತ್ಮನಲ್ಲಿ ಶುಭೆಯಾದ ಆ ದೇವಿಯನ್ನು ಕೊಡಲು ಮಂತ್ರಿಗಳಾದ ನಾವು ಬೇಡೋಣ.

೧೬. ಮೊದಲು ಸಾಮೋಪಾಯವನ್ನೂ, ಬಳಿಕ ದಾನವನ್ನೂ, ಆಮೇಲೆ ಭೇದೋಪಾಯವನ್ನೂ, ಅದೂ ಆದನಂತರ ದಂಡೋಪಾಯವನ್ನೂ ಕ್ರಮವಾಗಿ ಮಾಡೋಣ.

೧೭. ಈ ಕ್ರಮವಾದ ಉಪಾಯಗಳಿಂದ ಅವಳು ದೊರೆಯದಿದ್ದರೆ ಆಮೇಲೆ ಸನ್ನದ್ಧರಾಗಿ ಹೋಗಿ ಬಲಾತ್ಕಾರದಿಂದಲೇ ಆ ಮಂಗಳೆಯನ್ನು ವಶಪಡಿಸಿಕೊಳ್ಳೋಣ."

ವಿಘಸೇನೈವಮುಕ್ತಾಸ್ತು ಶೇಷಾಸ್ತು ಮಂತ್ರಿಣೋ ವಚಃ |
ಶುಭಮೂಚುಃ ಪ್ರಶಂಸಂತಃ ಸರ್ವೇ ಹರ್ಷಿತಮಾನಸಾಃ ॥ ೧೮ ॥

ಸಾಧೂಕ್ತಂ ವಿಘಸೇನೇದಂ ಯತ್ತಾಂ ಪ್ರತಿ ವರಾನನಾಂ |
ತದೇವ ಕ್ರಿಯತಾಂ ಶೀಘ್ರಂ ದೂತಸ್ತತ್ರ ವಿಸೃಜ್ಯತಾಂ ||
ಯಸ್ಸರ್ವಶಾಸ್ತ್ರನೀತಿಜ್ಞಃ ಶುಚಿಃ ಶೌರ್ಯಸಮನ್ವಿತಃ || ೧೯ ||

ತಸ್ಮಾದ್ಜ್ಞಾತ್ವಾ ತು ತಾಂ ದೇವೀಂ ವರ್ಣತೋ ರೂಪತೋ ಗುಣೈಃ || ೨೦ ||

ಪರಾಕ್ರಮೇಣ ಶೌರ್ಯೇಣ ಶೌಂಡೀರ್ಯೇಣ ಬಲೇನ ಚ |
ಬಂಧುವರ್ಗೇಣ ಸಾಮಗ್ರ್ಯಾತ್ವಸ್ಥಾನಕರಣೇನ ಚ ॥ ೨೧ ॥

ಏವಂ ಜ್ಞಾತ್ವಾ ತು ತಾಂ ದೇವೀಂ ತತಃ ಕಾರ್ಯಂ ವಿಧೀಯತಾಂ |
ತತಃ ಸಪದಿ ದೈತ್ಯಸ್ಯ ದ್ವಚಃ ಸಾಧು ಸಾಧ್ವಿತಿ || ೨೨ ||

ಪ್ರಶಶಂಸುರ್ವರಾರೋಹೇ ವಿಘಸಂ ಮಂತ್ರಿಸತ್ತಮಂ |
ಪ್ರಶಸ್ಯ ಸರ್ವೇ ತಂ ದೂತಂ ಸಂದೇಷ್ಟುಮುಪಚಕ್ರಮುಃ ॥ ೨೩ ॥

---

೧೮. ವಿಘಸನು ಹೀಗೆ ಹೇಳಲು ಉಳಿದ ಮಂತ್ರಿಗಳೆಲ್ಲರೂ ಸಂತಸಗೊಂಡು, ಹೊಗಳುತ್ತ 'ಈ ಮಾತು ಶುಭವಾದುದು' ಎಂದರು.

೧೯-೨೩. "ಆ ಸುಂದರಮುಖಿಯ ವಿಚಾರದಲ್ಲಿ ವಿಘಸನು ಹೇಳಿದುದು ಉಚಿತವಾಗಿದೆ. ಹಾಗೆಯೇ ಮಾಡಬೇಕು. ಸರ್ವಶಾಸ್ತ್ರನೀತಿಜ್ಞನೂ, ಪರಿಶುದ್ಧನೂ, ಶೂರನೂ, ಆದ ದೂತನನ್ನು ಅಲ್ಲಿಗೆ ಕಳುಹಿಸಬೇಕು. ಆ ದೂತನಿಂದ ಆ ದೇವಿಯ ಬಣ್ಣ, ರೂಪ, ಗುಣಗಳು, ಪರಾಕ್ರಮ, ಶೌರ್ಯ, ಮದ, ಬಲ, ಬಂಧುವರ್ಗ, ಸಾಮಗ್ರಿ ಇವುಗಳನ್ನೆಲ್ಲಾ ಆಕೆಯು ಬೇರೆಡೆಯಲ್ಲಿರುವಂತೆ ಮಾಡುವುದರಿಂದಲೂ ಅರಿತು ಬಳಿಕ ಮಾಡಬೇಕಾದುದನ್ನು ಮಾಡಬೇಕು" ಎಂಬ ದೈತ್ಯನ ಮಾತನ್ನು ಕೇಳಿ ಎಲ್ಲರೂ, "ಚೆನ್ನಾದೆ! ಚೆನ್ನಾಗಿದೆ" ಎಂದು ಹೊಗಳಿದರು. ವರಾರೋಹೇ ಮಂತ್ರಿವರ್ಯನಾದ ವಿಘಸನನ್ನೂ ಹೊಗಳಿ, ಅಂತಹ ದೂತನಿಗೆ ಹೇಳಿಕಳುಹಲು ಪ್ರಯತ್ನಿಸಿದರು.

ವಿದ್ಯುತ್ಪ್ರಭಂ ಮಹಾಭಾಗಂ ಬಹುಮಾಯಾವಿದಂ ಶುಭಂ ।
ವಿಸರ್ಜಯಿತ್ವಾ ತಂ ದೂತಂ ವಿಘಸೋ ವಾಕ್ಯಮಬ್ರವೀತ್ ॥ ೨೪ ॥

ಕ್ರಿಯತಾಂ ವಿಜಯಯಾತ್ರಾವದ್ದೇವಸೈನ್ಯಂ ಪ್ರತಿಪ್ರಭೋ ।
ಸನ್ನಹ್ಯತಾಂ ದಾನವೇಂದ್ರಾಶ್ಚತುರಂಗಬಲೇನ ಹ ॥ ೨೫ ॥

ಅಸುರೇಂದ್ರ ಸುರೈರ್ಭಗ್ನೈಃ ತ್ವತ್ಪರಾಕ್ರಮಭೀಷಿತೈಃ ।
ಸಾ ಕನ್ಯಾ ವಶತಾಮೇತಿ ತ್ವಯಿ ಶಕ್ರೇ ಸಮಾಗತೇ ॥ ೨೬ ॥

ಲೋಕಪಾಲೈರ್ಜಿತೈಃ ಸರ್ವೈಃ ತಥೈವ ಮರುತಾಂ ಗಣೈಃ ।
ನಾಗೈರ್ವಿದ್ಯಾಧರೈಸ್ಸಿದ್ಧೈಃ ಗಂಧರ್ವೈರಸ್ಸರ್ಪಭೋಜನೈಃ ।
ರುದ್ರೈರ್ವಸುಭಿರಾದಿತ್ಯೈಸ್ತ್ವಮೇವೇಂದ್ರೋ ಭವಿಷ್ಯಸಿ ॥ ೨೭ ॥

ಇಂದ್ರಸ್ಯ ತೇ ಶತಂ ಕನ್ಯಾ ದೇವಗಂಧರ್ವಯೋಷಿತಃ ॥ ೨೮ ॥

---

೨೪. ಯೋಗ್ಯನೂ, ಬಹು ಮಾಯೆಗಳನ್ನರಿತವನೂ, ಮಂಗಳಕರನೂ ಆದ ವಿದ್ಯುತ್ಪ್ರಭನೆಂಬ ದೂತನನ್ನು ಕಳುಹಿ, ವಿಘಸನು ಮುಂದಿನ ಮಾತನಾಡಿದನು.

೨೫. "ಪ್ರಭುವೇ, ದೇವತೆಗಳ ಸೈನ್ಯದ ಮೇಲೆ ವಿಜಯಯಾತ್ರೆಯನ್ನು ಮಾಡೋಣವಾಗಲಿ. ದಾನವೇಂದ್ರರು ಚತುರಂಗಬಲದೊಡನೆ ಸಿದ್ಧರಾಗಲಿ.

೨೬. ಅಸುರೇಂದ್ರನೇ, ನಿನ್ನಮೇಲೆ ಇಂದ್ರನು ಬಂದನಾದರೆ ನಿನ್ನ ಪರಾಕ್ರಮದಿಂದ ಭಯಗೊಂಡ ದೇವತೆಗಳು ಭಗ್ನರಾಗುವುದರಿಂದ ಆ ಕನ್ನೆಯು ನಿನ್ನ ವಶಳಾಗುವಳು.

೨೭. ಲೋಕಪಾಲರೂ, ಮರುದ್ಗಣಗಳೂ, ನಾಗರೂ, ವಿದ್ಯಾಧರರೂ, ಸಿದ್ಧರೂ, ಗಂಧರ್ವರೂ, ಗರುಡರೂ, ರುದ್ರರೂ, ವಸುಗಳೂ, ಆದಿತ್ಯರೂ ನಿನ್ನಿಂದ ಜಿತರಾಗಲು, (ಅವರಿಗೆಲ್ಲಾ) ನೀನೇ ಇಂದ್ರನಾಗುವೆ.

೨೮. ಇಂದ್ರನಾದ ನಿನಗೆ ಆ ನೂರುಜನ ಕನ್ನೆಯರೂ, ದೇವಗಂಧರ್ವ ಸ್ತ್ರೀಯರೂ ವಶರಾಗುವರು.

ವಶಮಾಯಾಂತಿ ಸಾಪಿ ಸ್ಯಾತ್ಸರ್ವಥಾ ವಶವಾಗತಾ ॥ ೨೯ ॥

ಏವಮುಕ್ತಸ್ತದಾ ದೈತ್ಯಃ ಸೇನಾಪತಿಮುವಾಚ ಹ ।
ವಿರೂಪಾಕ್ಷಂ ಮಹಾಮೇಘವರ್ಣಂ ನೀಲಾಂಜನಪ್ರಭಂ ॥ ೩೦ ॥

ಆನೀಯತಾಂ ದ್ರುತಂ ಸೈನ್ಯಂ ಹಸ್ತ್ಯಶ್ವರಥಪತ್ತಿನಾಂ ।
ಯೇನ ದೇವಾನ್ಸಗಂಧರ್ವಾನ್ ಕ್ಷಯಾಮಿ ಯುಧಿ ದುರ್ಜಯಾನ್ ॥ ೩೧ ॥

ಏವಮುಕ್ತೋ ವಿರೂಪಾಕ್ಷೋ ತದಾ ಸೇನಾಪತಿರ್ದ್ರುತಂ ।
ಆನಿನಾಯ ಮಹತ್ಸೈನ್ಯಮನಂತಮಪರಾಜಿತಂ ॥ ೩೨ ॥

ಏಕೈಕೋ ದಾನವಸ್ತತ್ರ ವಜ್ರಹಸ್ತಸಮೋ ಯುಧಿ ।
ಏಕೈಕಂ ಸ್ಪರ್ಧತೇ ದೇವಂ ಜೇತುಂ ಸ್ವೇನ ಬಲೇನ ಹ ॥ ೩೩ ॥

ತೇಷಾಂ ಪ್ರಧಾನಭೂತಾನಾಮರ್ಬುದಂ ನವಕೋಟಿಯುಃ ।
ಏಕಸ್ಯ ಯೇಷಾಮನುಪಾತಿ ತಾವದ್ಬಲಮುಘೋರ್ಜಿತಂ ॥
ತೇಷಾಂ ನೈಕಸಹಸ್ರಾಣಿ ದೈತ್ಯಾನಾಂ ತು ಮಹಾತ್ಮನಾಂ ॥ ೩೪ ॥

---

೨೯. ಆ ವೈಷ್ಣವೀದೇವಿಯೂ ನಿಜವಾಗಿಯೂ ಸ್ವಾಧೀನಳಾಗುವಳು."

೩೦-೩೧. ವಿಘಸನು ಹೀಗೆನಲು ಆ ಮಹಿಷಾಸುರನು ಮಹಾಮೇಘದಂತೆ ಬಣ್ಣವುಳ್ಳವನೂ, ನೀಲವಾದ ಕಣ್ಣುಕಪ್ಪಿನ ಕಾಂತಿಯುಳ್ಳವನೂ ಆದ ವಿರೂಪಾಕ್ಷನೆಂಬ ಸೇನಾಪತಿಗೆ "ಆನೆ ಕುದುರೆ ಬಂಡಿ ಕಾಲಾಳುಗಳ ದಂಡನ್ನು ಬೇಗನೆ ತೆಗೆದುಕೊಂಡು ಬರಬೇಕು. ಅದರಿಂದ ಯುದ್ಧದಲ್ಲಿ ಜಯಿಸಲು ಕಷ್ಟರಾದ ಗಂಧರ್ವರೊಡಗೂಡಿದ ದೇವತೆಗಳನ್ನು ನಾಶಗೊಳಿಸುತ್ತೇನೆ" ಎಂದು ಹೇಳಿದನು.

೩೨. ಹೀಗೆ ಹೇಳಿಸಿಕೊಂಡ ಸೇನಾಪತಿಯಾದ ವಿರೂಪಾಕ್ಷನು ಬೇಗನೆ ಅನಂತವೂ, ಪರಾಜಯವಿಲ್ಲದುದೂ ಆದ ದೊಡ್ಡ ದಂಡನ್ನು ತಂದನು.

೩೩. ಆ ಸೈನ್ಯದಲ್ಲಿ ಒಬ್ಬೊಬ್ಬ ರಕ್ಕಸನೂ ಇಂದ್ರನಿಗೆ ಸಮನಾದವನು. ತನ್ನ ಬಲದಿಂದ ಒಬ್ಬೊಬ್ಬ ದೇವನನ್ನು ಜಯಿಸಲು ಸ್ಪರ್ಧಿಸುವನು.

೩೪. ಅಂತಹ ಸೇನಾಪತಿಗಳಾದ ದೊಡ್ಡ ರಕ್ಕಸರು ಒಂದು ಸಾವಿರ ಜನ ಮಾತ್ರವಲ್ಲ. ಅವರೆಲ್ಲರ ಕೈಕೆಳಗೂ ಒಡೆಯನನ್ನನುಸರಿಸಿ ನಡೆಯುವ ಅರ್ಬುದವೂ ಒಂಬತ್ತುಕೋಟಿ ಶಕ್ತರಾದ ಸೈನಿಕರು.

ಸಮಿತಿಂ ಚಕ್ರುರವ್ಯಗ್ರಾಸ್ತದಾ ದೈತ್ಯಾಃ ಪ್ರಹಾರಿಣಃ ।
ಪ್ರಯಾಣಂ ಕಾರಯಾಮಾಸುರ್ದೇವಸೈನ್ಯಜಿಘಾಂಸಯಾ ॥ ೩೫ ॥

ವಿಚಿತ್ರಯಾನಾ ವಿವಿಧಧ್ವಜಾಗ್ರಾ
ವಿಚಿತ್ರಶಸ್ತ್ರಾ ವಿವಿಧೋಗ್ರರೂಪಾಃ ।
ದೈತ್ಯಾಸ್ಸುರಾನ್ ಜೇತುಮಿಚ್ಛಂತ ಉಚ್ಚೈ
ರ್ನನರ್ತುರಾತ್ತಾಯುಧಯುಕ್ತಹಸ್ತಾಃ ॥ ೩೬ ॥

ಇತಿ ಶ್ರೀ ವರಾಹಪುರಾಣೇ ತ್ರಿಶಕ್ತಿಮಾಹಾತ್ಮ್ಯೇ ಮಂತ್ರಿಮಹಿಷಾಸುರ ಸಂವಾದೋ ನಾಮ ತ್ರಿನವತಿತಮೋಽಧ್ಯಾಯಃ

---

೩೫. ಶತ್ರುಗಳನ್ನು ಹೊಡೆಯುವ ಆ ರಕ್ಕಸರು ಗಾಬರಿಗೊಳ್ಳದೆ ಒಂದುಗೂಡಿದರು. ದೇವಸೈನ್ಯವನ್ನು ಜಯಿಸುವ ಆಸೆಯಿಂದ ಅವರೆಲ್ಲರನ್ನೂ ಪ್ರಯಾಣ ಮಾಡಿಸಿದರು.

೩೬. ವಿಚಿತ್ರವಾದ ವಾಹನಶಸ್ತ್ರಗಳೂ, ಬಗೆಬಗೆಯ ಬಾವುಟಗಳೂ, ಭಯಂಕರರೂಪಗಳೂ ಉಳ್ಳ ರಾಕ್ಷಸರು ದೇವತೆಗಳನ್ನು ಜಯಿಸಲು ಕುತೂಹಲ ದಿಂದ ಆಯುಧಗಳನ್ನು ಕೈಯ್ಯಲ್ಲಿ ಹಿಡಿದುಕೊಂಡು ಮೇಲೆ ನೆಗೆದು ಕುಣಿದಾಡಿದರು.

ಅಧ್ಯಾಯದ ಸಾರಾಂಶ—

ವೈಷ್ಣವೀದೇವಿಯಲ್ಲಿ ಆಸೆಯನ್ನುಂಟುಮಾಡಿ ನಾರದನು ಹೊರಟು ಹೋಗಲು, ಮಹಿಷಾಸುರನು ಆ ದೇವಿಯನ್ನು ಹೇಗೆ ಪಡೆಯಬೇಕೆಂಬುದನ್ನು ತನ್ನ ಮಂತ್ರಿಗಳೊಡನೆ ಆಲೋಚಿಸಿ, ಅವರು ಹೇಳಿದಂತೆ ದೇವಿಯ ಬಳಿಗೆ ದೂತನನ್ನು ಕಳುಹಿಸಿ, ಯುದ್ಧಸನ್ನದ್ಧನಾಗಿ ದೇವತೆಗಳನ್ನು ಜಯಿಸಲು ಹೊರಟನೆಂಬುದನ್ನೂ, ಆ ಸೇನೆಯ ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತಮೂರನೆಯ ಅಧ್ಯಾಯ.

|| ಶ್ರೀಃ ||

-X-

ಚತುರ್ನವತಿತಮೋಧ್ಯಾಯಃ

ಅಥ ಸುರಾಸುರಯುದ್ಧವರ್ಣನಂ

|| ಶ್ರೀ ವರಾಹ ಉವಾಚ ||

ತತೋ ಮಹಿಷದೈತ್ಯಸ್ತು ಕಾಮರೂಪೀ ಮಹಾಬಲಃ |
ಮತ್ತಹಸ್ತಿನಮಾರುಹ್ಯ ಯಿಯಾಸುರ್ಮೇರುಪರ್ವತಂ || ೧ ||

ತತ್ರೈಂದ್ರಪುರಮಾಸಾದ್ಯ ದೇವೈಸ್ಸಹ ಶತಕ್ರತುಂ |
ಅಭಿದುದ್ರಾವ ದೈತ್ಯೇಂದ್ರೋ ದೇವಾನ್ಕ್ರೋಧಸಮನ್ವಿತಃ || ೨ ||

ಆದಾಯ ಸ್ವಾನಿ ಶಸ್ತ್ರಾಣಿ ವಾಹನಾನಿ ವಿಶೇಷತಃ |
ಅಧಿಷ್ಠಾಯ ಸುರಾನಾಜೌ ದುದ್ರುವುರ್ಮುದಿತಾ ಭೃಶಂ || ೩ ||

ತೊಂಬತ್ತನಾಲ್ಕನೆಯ ಅಧ್ಯಾಯ

ಸುರಾಸುರಯುದ್ಧವರ್ಣನೆ

೧-೨. ಶ್ರೀವರಾಹ—ಬಳಿಕ ಮನಸ್ಸಿಗೆ ಬಂದ ರೂಪವನ್ನು ಧರಿಸಬಲ್ಲವನೂ, ಮಹಾಬಲಶಾಲಿಯೂ, ದೈತ್ಯೇಂದ್ರನೂ ಆದ ಮಹಿಷಾಸುರನು ಮದಗಜವನ್ನೇರಿ ಮೇರುಪರ್ವತಕ್ಕೆ ಹೋಗಲು ಬಯಸಿ ಹೊರಟು, ಅಲ್ಲಿ ಅಮರಾವತಿಯನ್ನು ಸೇರಿ, ಕೋಪಗೊಂಡು ದೇವತೆಗಳೊಡಗೂಡಿದ ಇಂದ್ರನನ್ನು ಎದುರಿಸಿದನು.

೩. ತಮ್ಮ ಆಯುಧಗಳನ್ನು ತೆಗೆದುಕೊಂಡು, ವಾಹನಗಳನ್ನೇರಿ, ರಾಕ್ಷಸರು ಹೆಚ್ಚಾದ ಸಂತೋಷದಿಂದ ಯುದ್ಧದಲ್ಲಿ ದೇವತೆಗಳನ್ನೆದುರಿಸಿದರು.

ತೇಷಾಂ ಪ್ರವವೃತೇ ಯುದ್ಧಂ ತುಮುಲಂ ಲೋಮಹರ್ಷಣಂ ।
ಘೋರಂ ಪ್ರಚಂಡಯೋಧಾನಾಮನ್ಯೋನ್ಯಮಭಿಗರ್ಜತಾಂ ॥ ೪ ॥

ತತ್ರಾಂಜನೋ ನೀಲಕುಕ್ಷಿರ್ಮೇಘವರ್ಣೋ ಬಲಾಹಕಃ ।
ಉದಾರಾಕ್ಷೋ ಲಲಾಟಾಕ್ಷಃ ಸುಭೀಮೋ ಭೀಮವಿಕ್ರಮಃ ।
ಸ್ವರ್ಭಾನುಶ್ಚಾಷ್ಟ ದೈತ್ಯಾಸ್ತೇ ವಸೂನ್ದುದ್ರುವುರಾಹವೇ ॥ ೫ ॥

ಯಥಾಸಂಖ್ಯೇನ ತದ್ವಚ್ಚ ದೈತ್ಯಾ ದ್ವಾದಶ ಚಾಪರೇ ।
ಆದಿತ್ಯಾನ್ದೈತ್ಯವರ್ಯಾಸ್ತು ತೇಷಾಂ ಪ್ರಾಧಾನ್ಯತಃ ಶೃಣು ॥ ೬ ॥

ಭೀಮೋ ಧ್ವಾಂಕ್ಷೋ ಧ್ವಸ್ತಕರ್ಣಃ ಶಂಕುಕರ್ಣಸ್ತಥೈವ ಚ ।
ವಜ್ರಕೋ ಜ್ಯೋತಿವೀರ್ಯಶ್ಚ ವಿದ್ಯುನ್ಮಾಲಿಃ ತಥೈವ ಚ ॥ ೭ ॥

ರಕ್ತಾಕ್ಷೋ ಭೀಮದಂಷ್ಟ್ರಸ್ತು ವಿದ್ಯುಜ್ಜಿಹ್ವಸ್ತಥೈವ ಚ ।
ಅತಿಕಾಯೋ ಮಹಾಕಾಯೋ ದೀರ್ಘಬಾಹುಃ ಕೃತಾಂತಕಃ ॥ ೮ ॥

ಏತೇ ದ್ವಾದಶದೈತ್ಯೇಂದ್ರಾಃ ಆದಿತ್ಯಾನ್ಯುಧಿ ದುದ್ರುವುಃ ॥ ೯ ॥

---

೪. ಪರಸ್ಪರ ಮೂದಲಿಸಿ ಗರ್ಜಿಸುವ ಆ ಪ್ರಚಂಡ ಯೋಧರಿಗೆ, ರೋಮಾಂಚವನ್ನುಂಟುಮಾಡುವ ಘೋರವಾದ ತುಮುಲಯುದ್ಧವು ಮೊದಲಾಯಿತು.

೫-೬. ಅಲ್ಲಿ ಅಂಜನ, ನೀಲಕುಕ್ಷಿ, ಮೇಘವರ್ಣ, ಬಲಾಹಕ, ಉದಾರಾಕ್ಷ, ಲಲಾಟಾಕ್ಷ, ಭೀಮವಿಕ್ರಮನಾದ ಸುಭೀಮ, ಸ್ವರ್ಭಾನು ಎಂಬ ಎಂಟುಜನ ರಾಕ್ಷಸರು ಯುದ್ಧದಲ್ಲಿ ಅನುಕ್ರಮವಾಗಿ ಅಷ್ಟವಸುಗಳನ್ನು ಎದುರಿಸಿದರು. ಹಾಗೆಯೇ ಬೇರೆ ಹನ್ನೆರಡುಜನ ರಾಕ್ಷಸಶ್ರೇಷ್ಠರು ಆದಿತ್ಯರನ್ನು ಎದುರಿಸಿದರು. ಅವರ ಹೆಸರುಗಳನ್ನು ಕೇಳು.

೭-೯. ಭೀಮ, ಧ್ವಾಂಕ್ಷ, ಧ್ವಸ್ತಕರ್ಣ, ಶಂಕುಕರ್ಣ, ವಜ್ರಕ, ಜ್ಯೋತಿವೀರ್ಯ, ವಿದ್ಯುನ್ಮಾಲಿ, ರಕ್ತಾಕ್ಷ, ಭೀಮದಂಷ್ಟ್ರ, ವಿದ್ಯುಜ್ಜಿಹ್ವ, ದೊಡ್ಡ ದೇಹವುಳ್ಳ ಅತಿಕಾಯ, ಉದ್ದವಾದ ತೋಳುಗಳುಳ್ಳ ಕೃತಾಂತಕ ಎಂಬ ಈ ಹನ್ನೆರಡುಜನ ರಾಕ್ಷಸೇಂದ್ರರು ದ್ವಾದಶಾದಿತ್ಯರನ್ನು ಎದುರಿಸಿದರು.

ಸ್ವಕಂ ಸೈನ್ಯಮುಪಾದಾಯ ತದ್ವದನ್ಯೇಽಪಿ ದಾನವಾಃ ।
ರುದ್ರಾನ್ಸಮುದ್ರುವುರವ್ಯಗ್ರಾ ಯಥಾಸಂಖ್ಯೇನ ಕೋಪಿತಾಃ ॥ ೧೦ ॥

ಕಾಲಃ ಕೃತಾಂತೋ ರಕ್ತಾಕ್ಷೋ ಹರಣೋ ಮಿತ್ರಹಾನಲಃ ।
ಯಜ್ಞಹಾ ಬ್ರಹ್ಮಹಾ ಗೋಘ್ನಃ ಸ್ತ್ರೀಘ್ನಃ ಸಂವರ್ತಕಸ್ತಥಾ ॥ ೧೧ ॥

ಇತ್ಯೇತೇ ದಶ ಚೈಕಶ್ಚ ದೈತ್ಯೇಂದ್ರಾಃ ಯುದ್ಧದುರ್ಮದಾಃ
ಯಥಾಸಂಖ್ಯೇನ ರುದ್ರಾಂಸ್ತು ದುದ್ರುವುರ್ಭೀಮವಿಕ್ರಮಾಃ ॥ ೧೨ ॥

ಶೇಷಾನ್ದೇವಾನ್ ಶೇಷದೈತ್ಯಾ ಯಥಾಯೋಗಮುಪಾದ್ರವನ್ ।
ಸ್ವಯಂ ಮಹಿಷದೈತ್ಯಸ್ತು ಇಂದ್ರಂ ದುದ್ರಾವ ವೇಗತಃ ॥ ೧೩ ॥

ಸ ಚಾಪಿ ಬಲವಾನ್ದೈತ್ಯೋ ಬ್ರಹ್ಮಣೋ ವರದರ್ಪಿತಃ ।
ಅವಧ್ಯಃ ಪುರುಷೇಣಾಜೌ ಯದ್ಯಪಿ ಸ್ಯಾತ್ಪಿನಾಕಧೃಕ್ ॥ ೧೪ ॥

---

೧೦. ಅಲ್ಲದೆ ಬೇರೆಯ ಸಮರ್ಥರಾದ ರಾಕ್ಷಸರು ತಮ್ಮತಮ್ಮ ಸೈನ್ಯವನ್ನು ತೆಗೆದುಕೊಂಡು ಜಾಗರೂಕತೆಯಿಂದ ಏಕಾದಶರುದ್ರರನ್ನು ಅನುಕ್ರಮದಲ್ಲಿ ಎದುರಿಸಿದರು.

೧೧-೧೨. ಕಾಲ, ಕೃಕಾಂತ, ರಕ್ತಾಕ್ಷ, ಹರಣ, ಮಿತ್ರಘ್ನ, ಅನಲ, ಯಜ್ಞಘ್ನ, ಬ್ರಹ್ಮಘ್ನ, ಗೋಘ್ನ, ಸ್ತ್ರೀಘ್ನ, ಸಂವರ್ತಕ ಎಂಬ ಈ ಹನ್ನೊಂದು ಜನ ಯುದ್ಧದಲ್ಲಿ ಕೊಬ್ಬುಳ್ಳವರು ಅನುಕ್ರಮವಾಗಿ ಏಕಾದಶರುದ್ರರನ್ನು ಎದುರಿಸಿದರು.

೧೩. ಮಿಕ್ಕದೇವತೆಗಳನ್ನು ಮಿಕ್ಕದೈತ್ಯರು ತಮತಮಗೆ ಸಿಕ್ಕಿದವರನ್ನು ಎದುರಿಸಿದರು. ಮಹಿಷಾಸುರನಾದರೋ ತಾನೇ ವೇಗದಿಂದ ಇಂದ್ರನನ್ನು ಎದುರಿಸಿದನು.

೧೪. ಬಲಶಾಲಿಯೂ, ಬ್ರಹ್ಮನ ವರದಿಂದ ಕೊಬ್ಬಿದವನೂ ಆದ ಆ ಮಹಿಷಾಸುರನು ಪ್ರಾಯಶಃ ಯುದ್ಧಹಲ್ಲಿ ಪುರುಷನಿಂದ ಅವಧ್ಯನಾಗಿ ರುದ್ರನಂತಿದ್ದನು.

ಆದಿತ್ಯೈರ್ವಸುಭಿಃ ಸಾರ್ಧಂ ರುದ್ರೈಶ್ಚ ನಿಹತಾ ಭೃಶಂ ।
ಅಸುರಾ ಯಾತುಧಾನಾಶ್ಚ ಸಂಖ್ಯಾಪೂರಣಕಾರಕಾಃ ॥ ೧೫ ॥

ದೇವಾನಾಮಪಿ ಸೈನ್ಯಾನಿ ನಿಹತಾನ್ಯಸುರೈರ್ಯುಧಿ ॥ ೧೬ ॥

ಏವಂಭೂತೇ ತದಾ ಭಗ್ನೇ ದೇವೇಂದ್ರೇ ವಿದ್ರುತಾಃ ಸುರಾಃ ।
ಅರ್ದಿತಾ ವಿವಿಧೈಶ್ಶಸ್ತ್ರೈಃ ಶೂಲಪಟ್ಟಿಶಮುದ್ಗರೈಃ ।
ಗತವಂತೋ ಬ್ರಹ್ಮಲೋಕಮಸುರೈರರ್ದಿತಾಸ್ಸುರಾಃ ॥ ೧೭ ॥

ಇತಿ ಶ್ರೀ ವರಾಹಪುರಾಣೇ ತ್ರಿಶಕ್ತಿಮಾಹಾತ್ಮ್ಯೇ ಸುರಾಸುರಯುದ್ಧ
ವರ್ಣನಂ ನಾಮ ಚತುರ್ನವತಿತಮೋಽಧ್ಯಾಯಃ

---

೧೫. ಲೆಕ್ಕಕ್ಕೆ ತುಂಬಿದ್ದ ಅಸುರರೂ, ನೈಋುತರೂ ಆದಿತ್ಯರಿಂದಲೂ, ವಸುಗಳೊಡಗೂಡಿದ ರುದ್ರರಿಂದಲೂ ಹೆಚ್ಚಾಗಿ ಕೊಲೆಯಾದರು.

೧೬. ದೇವತೆಗಳ ಸೈನ್ಯಗಳನ್ನೂ ಅಸುರರು ಯುದ್ಧದಲ್ಲಿ ಕೊಂದರು.

೧೭. ಹೀಗಾಗಿ ದೇವೇಂದ್ರನು ಭಂಗಹೊಂದಲು, ರಾಕ್ಷಸರಿಂದ ಶೂಲಪಟ್ಟಿ ಸಮುದ್ಗರಗಳಿಂದಲೂ,, ಇನ್ನೂ ಬಗೆಬಗೆಯ ಶಸ್ತ್ರಗಳಿಂದಲೂ ಪೀಡಿತರಾದ ದೇವತೆಗಳು ಬ್ರಹ್ಮಲೋಕಕ್ಕೆ ಹೊರಟುಹೋದರು.

ಅಧ್ಯಾಯದ ಸಾರಾಂಶ:—

ಮಹಿಷಾಸುರನು ಅಮರಾವತಿಯ ಮೇಲೆ ದಂಡೆತ್ತಿ ನಡೆದನು. ಅಲ್ಲಿ ವಸು ರುದ್ರಾದಿತ್ಯರೇ ಮೊದಲಾದವರೊಡಗೂಡಿದ ದೇವೇಂದ್ರನಿಗೂ, ಹಲವರು ವೀರಸೇನಾಪತಿಗಳಿಂದ ಕೂಡಿದ ಮಹಿಷಾಸುರನಿಗೂ, ದೊಡ್ಡ ಕದನವಾಯಿತು. ದೇವತೆಗಳೂ ಬಲವಾಗಿ ಯುದ್ಧಮಾಡಿ ಹಲವರು ರಕ್ಕಸರನ್ನು ಕೊಂದರಾದರೂ ರಾಕ್ಷಸರ ಹೊಡೆತವನ್ನು ತಡೆಯಲಾರದೆ ಬ್ರಹ್ಮಲೋಕಕ್ಕೆ ಓಡಿದರು. ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ತೊಂಬತ್ತನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

–X–

ಪಂಚನವತಿತಮೋಽಧ್ಯಾಯಃ

ಅಥ ಮಹಿಷಾಸುರವಧಃ

॥ ಶ್ರೀ ವರಾಹ ಉವಾಚ ॥

ಅಥ ವಿದ್ಯುತ್ಪ್ರಭೋ ದೈತ್ಯಃ ತಥಾ ದೂತೋ ವಿಸರ್ಜಿತಃ ।
ಪ್ರಣಮ್ಯ ಪ್ರಯತೋ ಭೂತ್ವಾ ಕುಮಾರೀಶತಸಂಕುಲಾಂ ॥ ೧ ॥
ಅಸ್ಥಾನೇ ವಿಜಯಾಪನ್ನಸ್ತತೋ ವಚನಮಬ್ರವೀತ್ ॥ ೨ ॥

॥ ವಿದ್ಯುತ್ಪ್ರಭ ಉವಾಚ ॥

ದೇವಿ ಪೂರ್ವಮೃಷಿಸ್ತ್ವಾಸೀದಾದಿಸರ್ಗೈಕಸಂಭವಃ ।
ಸಖಾ ಸಾರಸ್ವತೋ ಜಾತಃ ಸುಪಾರ್ಶ್ವೋ ನಾಮ ವೈ ವಿಭುಃ ।
ತಸ್ಯಾಭವನ್ಮಹಾತೇಜಾಃ ಸಿಂಧುದ್ವೀಪಃ ಪ್ರತಾಪವಾನ್ ॥ ೩ ॥

ತೊಂಬತ್ತೈದನೆಯ ಅಧ್ಯಾಯ

ಮಹಿಷಾಸುರವಧೆ

೧-೨. ಶ್ರೀವರಾಹ—ಇತ್ತ ಮಹಿಷಾಸುರನು ಕಳುಹಿಸಿದ ವಿದ್ಯುತ್ಪ್ರಭನೆಂಬ ದೈತ್ಯದೂತನು ಶುಚಿರ್ಭೂತನಾಗಿ ನೂರಾರುಜನ ಕುಮಾರಿಯರಿಂದೊಡಗೂಡಿದ ವೈಷ್ಣವೀದೇವಿಯ ಬಳಿಗೆ ಬಂದು, ನಮಸ್ಕರಿಸಿ, ಬಳಿಕ ಮುಂದಿನ ಮಾತನಾಡಿದನು.

೩. ವಿದ್ಯುತ್ಪ್ರಭ—ದೇವಿ, ಪೂರ್ವದಲ್ಲಿ ಆದಿಸೃಷ್ಟಿಯಲ್ಲಿ ಮೊದಲನೆಯವನಾಗಿ ಉದಿಸಿದ ಬ್ರಹ್ಮಸಖನಾದ ಸುಪಾರ್ಶ್ವನೆಂಬ ವಿಭುವಿದ್ದನು. ಆ ಸುಪಾರ್ಶ್ವನಿಗೆ ಮಹಾತೇಜನೂ ಪ್ರತಾಪಶಾಲಿಯೂ ಆದ ಸಿಂಧುದ್ವೀಪನೆಂಬ ಪುತ್ರನು ಜನಿಸಿದನು.

ಸ ಹಿ ತೀವ್ರಂ ತಪಸ್ತೇಪೇ ಮಾಹಿಷ್ಮತ್ಯಾಂ ಪುರೋತ್ತಮೇ |
ಕುರ್ವತಸ್ತು ತಪೋ ಘೋರಂ ನಿರಾಹಾರಸ್ಯ ಶೋಭನೇ || ೪ ||

ಆದ್ಯಾ ತು ವಿಪ್ರಚಿತ್ತೇಸ್ಸಾ ಸುತಾ ಪರಮಶೋಭನಾ |
ಮಾಹಿಷ್ಮತೀತಿ ವಿಖ್ಯಾತಾ ರೂಪೇಣಾಸದೃಶೀ ಭುವಿ || ೫ ||

ಸಾ ಸಖೀಭಿಃ ಪರಿವೃತಾ ವಿಹರಂತೀ ಯದೃಚ್ಛಯಾ |
ಆಗತಾ ಮಂದರದ್ರೋಣೀಂ ತತ್ರಾಪಶ್ಯತ್ತಪೋವನಂ || ೬ ||

ಮುನೇರಸ್ವರಸಂಜ್ಞಸ್ಯ ವಿವಿಧದ್ರುಮಮಾಲಿತಂ |
ಲತಾಗೃಹೈಸ್ತು ವಿವಿಧೈರ್ಬಕುಲೈರ್ಲಕುಚೈಸ್ತಥಾ || ೭ ||

ಚಂದನೈಸ್ಸ್ಪಂದನೈಸ್ಸಾಲೈಃ ಸರಲೈರುಪಶೋಭಿತಂ |
ವಿಚಿತ್ರವನಖಂಡೈಶ್ಚ ಭೂಷಿತಂ ತು ಮಹಾತ್ಮನಃ || ೮ ||

---

೪. ಆತನು ಉತ್ತಮವಾದ ಮಾಹಿಷ್ಮತೀ ಪುರದಲ್ಲಿ ಉಗ್ರವಾದ ತಪಸ್ಸನ್ನು ಮಾಡಿದನು. ಮಂಗಳೇ, ನಿರಾಹಾರನಾಗಿ ಘೋರವಾದ ತಪಸ್ಸನ್ನು ಆತನು ಮಾಡುತ್ತಿದ್ದನು.

೫. ವಿಪ್ರಚಿತ್ತಿಯೆಂಬುವನಿಗೆ ಪರಮಮಂಗಳೆಯೂ, ಭೂಮಿಯಲ್ಲಿ ಅನುಪಮರೂಪವತಿಯೂ, ಮಾಹಿಷ್ಮತಿಯೆಂದು ಪ್ರಖ್ಯಾತಳೂ ಆದ ಹಿರಿಯ ಮಗಳಿದ್ದಳು.

೬. ಅವಳು ಸಖಿಯರೊಡಗೂಡಿ ವಿಹರಿಸುತ್ತಾ, ಅಕಸ್ಮಾತ್ತಾಗಿ ಮಂದರ ಪರ್ವತದ ಕಣಿವೆಗೆ ಬಂದು ತಪೋವನವೊಂದನ್ನು ಕಂಡಳು.

೭–೧೦. ಬಗೆಬಗೆಯ ಮರಗಳ ಸಾಲಿನಿಂದಲೂ, ಬಳ್ಳಿಯ ಮನೆಗಳಿಂದಲೂ, ವಕುಳ, ನಿಂಬೆ, ಚಂದನ, ಸ್ಪಂದನ, ಸಾಲ, ಸರಲ ಮೊದಲಾದ ಮರಗಳಿಂದಲೂ. ವಿಚಿತ್ರವಾದ ಉಪವನಗಳಿಂದಲೂ ಒಪ್ಪುವ, ಮಹಾತ್ಮನಾದ

ದೃಷ್ಟ್ವಾಶ್ರಮಪದಂ ರಮ್ಯಂ ಸಾಸುರೀ ಕನ್ಯಕಾ ಶುಭಂ ।
ಮಾಹಿಷ್ಮತಿ ವರಾರೋಹಾ ಚಿಂತಯಾಮಾಸ ಭಾಮಿನೀ ॥ ೯ ॥

ಭೀಷಯಿತ್ವಾಹಮೇನಂ ತು ತಾಪಸಂ ತ್ವಾಶ್ರಮೇ ಸ್ವಯಂ ।
ತಿಷ್ಠಾಮಿ ಕ್ರೀಡತೀ ಸಾರ್ಧಂ ಸಖೀಭಿಃ ಪರಮಾರ್ಚಿತಾ ॥ ೧೦ ॥

ಏವಂ ಸಂಚಿಂತ್ಯ ಸಾ ದೇವೀ ಮಹಿಷೀ ಸಂಬಭೂವ ಹ ।
ಸಖೀಭಿಃಸಹ ವಿಶ್ವೇಶಿ ತೀಕ್ಷ್ಣಶೃಂಗಾಗ್ರಧಾರಿಣೀ ॥ ೧೧ ॥

ತಮೃಷಿಂ ಭೀಷಿತುಂ ತಾಭಿಃ ಸಹ ಗತ್ವಾ ವರಾನನಾ ॥ ೧೨ ॥

ಅಸೌ ವಿಭೀಷಿತಸ್ತಾಭಿಃ ತಾಂ ಜ್ಞಾತ್ವಾ ಜ್ಞಾನಚಕ್ಷುಷಾ ।
ಆಸುರೀಂ ಕ್ರೋಧಸಂಪನ್ನಃ ಶಶಾಪ ಶುಭಲೋಚನಾಂ ॥ ೧೩ ॥

ಯಸ್ಮಾದ್ಭೀಷಯಸೇ ಮಾಂ ತ್ವಂ ಮಹಿಷೀರೂಪಧಾರಿಣೀ ।
ಅತೋ ಭವ ಮಹಿಷ್ಯೇವ ಪಾಪಧರ್ಮೇ ಶತಂ ಸಮಾಃ ॥ ೧೪ ॥

ಅಸ್ವರನೆಂಬ ಮುನಿಯ ಮನೋಹರವಾದ ಆ ಶುಭಾಶ್ರಮವನ್ನು ಕಂಡು, ವರಾರೋಹೆಯೂ, ಅಸುರಕನ್ಯೆಯೂ ಆದ ಆ ಮಾಹಿಷ್ಮತಿಯು "ನಾನು ಈ ಋಷಿಯನ್ನು ಹೆದರಿಸಿ (ಓಡಿಸಿ) ಈ ಆಶ್ರಮದಲ್ಲಿ ನಾನೇ ಸಖಿಯರೊಡನೆ ಆಡುತ್ತ, ಅವರಿಂದ ಆದರಗೊಳ್ಳುತ್ತ, ಇರುತ್ತೇನೆ." ಎಂದು ಯೋಚಿಸಿದಳು.

೧೧. ವಿಶ್ವೇಶ್ವರಿ, ಆ ದೇವಿಯು ಹೀಗೆ ಯೋಚಿಸಿ, ತನ್ನ ಸಖಿಯರೊಡನೆ ಮೊನೆಯಾದ ಕೊಂಬುಗಳನ್ನು ಪಡೆದ ಎಮ್ಮೆಯಾದಳು.

೧೨. ಸುಂದರಮುಖಿಯಾದ ಅವಳು ಆ ಋಷಿಯನ್ನು ಹೆದರಿಸಲು ತನ್ನ ಜತೆಯವರೊಡನೆ ಎಮ್ಮೆಯಾಗಿ ಹೋದಳು.

೧೩–೧೪. ಅವರು ಹೆದರಿಸಿದ ಆ ಋಷಿಯು ಜ್ಞಾನದೃಷ್ಟಿಯಿಂದ ಅವಳಾರೆಂಬುದನ್ನರಿತು ರಾಕ್ಷಸಿಯೆಂಬ ಕೋಪದಿಂದ ಶುಭಲೋಚನೆಯಾದ ಅವಳನ್ನು "ಪಾಪಧರ್ಮೇ, ನೀನು ಎಮ್ಮೆಯ ರೂಪವನ್ನು ಧರಿಸಿ ನನ್ನನ್ನು ಬೆದರಿಸುವುದರಿಂದ ನೂರುವರ್ಷಕಾಲ ಎಮ್ಮೆಯಾಗಿಯೇ ಇರು" ಎಂದು ಶಪಿಸಿದನು.

ಏವಮುಕ್ತ್ವಾ ತತಃ ಸಾ ತು ಸಖೀಭಿಃ ಸಹ ವೇಪತೀ ।
ಪಾದಯೋರ್ನ್ಯಪತತ್ತಸ್ಯ ಶಾಪಾಂತಂ ಕುರು ಜಲ್ಪತೀ ॥ ೧೫ ॥

ತಸ್ಯಾಸ್ತದ್ವಚನಂ ಶ್ರುತ್ವಾ ಸ ಮುನಿಃ ಕರುಣಾನ್ವಿತಃ ।
ಶಾಪಾಂತಮಕರೋತ್ತಸ್ಯ ವಾಕ್ಯಂ ಚೇದಮುವಾಚ ಹ ॥ ೧೬ ॥

ಅನೇನೈವ ಸ್ವರೂಪೇಣ ಪುತ್ರಮೇಕಂ ಪ್ರಸೂಯ ವೈ ।
ಶಾಪಾಂತೋ ಭವಿತಾ ಭದ್ರೇ ಮದ್ವಾಕ್ಯಂ ನ ಮೃಷಾಭವೇತ್ ॥ ೧೭ ॥

ಏವಮುಕ್ತ್ವಾ ಗತಾ ಸಾ ತು ನರ್ಮದಾತೀರಮುತ್ತಮಂ ।
ಯತ್ರ ತೇಪೇ ತಪೋ ಘೋರಂ ಸಿಂಧುದ್ವೀಪೋ ಮಹಾತಪಾಃ ॥ ೧೮ ॥

ತತ್ರ ಚೇಂದುಮತೀ ನಾಮ ದೈತ್ಯಕನ್ಯಾತಿರೂಪಿಣೀ ।
ಸಾ ದೃಷ್ಟ್ವಾ ತೇನ ಮುನಿನಾ ವಿವಸ್ತ್ರಾ ಮಜ್ಜತೀ ಜಲೇ ॥ ೧೯ ॥

---

೧೫. ಹೀಗೆ ಹೇಳಿಸಿಕೊಂಡ ಅವಳು ಬಳಿಕ ಗೆಳತಿಯರೊಡನೆ ನಡುಗುತ್ತ, 'ಶಾಪವಿಮೋಚನೆಯನ್ನು ಮಾಡು' ಎಂದು ಹೇಳುತ್ತ ಆತನ ಕಾಲಿಗೆ ಬಿದ್ದಳು.

೧೬-೧೭. ಅವಳ ಆ ಮಾತನ್ನು ಕೇಳಿ, ಕರುಣೆಯಿಂದ ಕೂಡಿದ ಆ ಮುನಿಯು ಶಾಪವಿಮೋಚನೆಯನ್ನು ಮಾಡಿದನು. 'ಈ ಎಮ್ಮೆಯ ರೂಪದಿಂದಲೇ ಒಬ್ಬ ಮಗನನ್ನು ಪಡೆದ ಬಳಿಕ ಶಾಪವು ಕೊನೆಗಾಣುವುದು. ಭದ್ರೇ, ನನ್ನ ಮಾತು ಸುಳ್ಳಾಗದು' ಎಂದನು.

೧೮. ಹೀಗೆ ಹೇಳಿಸಿಕೊಂಡ ಅವಳು ಮಹಾತಪಸ್ವಿಯಾದ ಸಿಂಧುದ್ವೀಪನು ಉಗ್ರವಾಗಿ ತಪಸ್ಸುಮಾಡುತ್ತಿದ್ದ ಉತ್ತಮವಾದ ನರ್ಮದಾನದಿಯ ತೀರಕ್ಕೆ ಹೋದಳು.

೧೯. ಅಲ್ಲಿ, ಬೆತ್ತಲೆಯಾಗಿ ನದಿಯ ನೀರಲ್ಲಿ ಮೀಯುತ್ತಿದ್ದ ಅತಿರೂಪವತಿಯಾದ ಇಂದುಮತಿಯೆಂಬ ದೈತ್ಯಕನ್ಯೆಯನ್ನು ಆ ಋಷಿಯು ನೋಡಿದನು.

ಚಸ್ಕಂದ ಸ ಮುನಿಃ ಶುಕ್ರಂ ಶಿಲಾದ್ರೋಣ್ಯಾಂ ಮಹಾತಪಾಃ ।
ತಚ್ಚ ಮಾಹಿಷ್ಮತೀ ದೃಷ್ಟ್ವಾ ದಿವ್ಯಗಂಧಿ ಸುಗಂಧಿ ಚ ।
ತತಃ ಸಖೀರುವಾಚೇದಂ ಪಿಬಾಮೀದಂ ಜಲಂ ಶುಭಂ ॥ ೨೦ ॥

ಏವಮುಕ್ತ್ವಾ ತು ಸಾ ಪೀತ್ವಾ ತಚ್ಛುಕ್ರಂ ಮುನಿಸಂಭವಂ ।
ಪ್ರಾಪ್ತಾ ಗರ್ಭಂ ಮುನೇರ್ವೀರ್ಯಾತ್ ಸುಷುವೇ ಚ ತದಾ ಸತೀ ॥ ೨೧ ॥

ತಸ್ಯಾಃ ಪುತ್ರೋಽಭವದ್ಧೀಮಾನ್ ಮಹಾಬಲಪರಾಕ್ರಮಃ ।
ಮಹಿಷೇತಿ ಸ್ಮೃತೋ ನಾಮ್ನಾ ಬ್ರಹ್ಮವಂಶವಿವರ್ಧನಃ ॥ ೨೨ ॥

ಸ ತ್ವಾಂ ವರಯತೇ ದೇವಿ ದೇವಸೈನ್ಯವಿಮರ್ದನಃ ॥ ೨೩ ॥

ಸ ಸುರಾನಪಿ ಜಿತ್ವಾಜೌ ತ್ರೈಲೋಕ್ಯಂ ಚ ತವಾನಘೇ ।
ದಾಸ್ಯತೇ ದೇವಿ ಸುಪ್ರೀತಃ ತವ ಸರ್ವಂ ಮಹಾಸುರಃ ॥
ತಸ್ಯಾತ್ಮೋಽಪಪ್ರದಾನೇನ ಕುರು ದೇವಿ ಮಹತ್ಕೃತಂ ॥ ೨೪ ॥

---

೨೦. ಅದರಿಂದ ಮಹಾತಪಸ್ವಿಯಾದ ಆ ಮುನಿಯ ರೇತಸ್ಸು ಚಲಿಸಿ ಕಲ್ಲಿನ ದೋಣಿಯೊಂದರಲ್ಲಿ ಬಿದ್ದಿತು. ಮಾಹಿಷ್ಮತಿಯು 'ದಿವ್ಯಸುಗಂಧವುಳ್ಳ ಅದನ್ನು ಕಂಡು, ಈ ಶುಭಕರವಾದ ನೀರನ್ನು ಕುಡಿಯುತ್ತೇನೆ.' ಎಂದು ಸಖಿಯರಿಗೆ ಹೇಳಿದಳು.

೨೧. ಹೀಗೆ ಹೇಳಿ ಅವಳು ಮುನಿಯ ಶುಕ್ರವನ್ನು ಕುಡಿದು, ಅದರಿಂದ ಗರ್ಭವನ್ನು ಧರಿಸಿ ಹೆತ್ತಳು.

೨೨. ಅವಳ ಆ ಮಗನು ಬುದ್ಧಿವಂತನೂ, ಮಹಾಬಲಪರಾಕ್ರಮವುಳ್ಳವನೂ ಮಹಿಷನೆಂಬ ಹೆಸರುಳ್ಳವನೂ ಆಗಿ ಬ್ರಹ್ಮನ ವಂಶವರ್ಧನನಾಗಿರುವನು.

೨೩. ದೇವಿ, ದೇವ ಸೈನ್ಯವನ್ನು ಮರ್ದನಮಾಡುವ ಆತನು ನಿನ್ನನ್ನು ವರಿಸುತ್ತಾನೆ.

೨೪. ದೇವಿ, ಅನಘಳೇ, ಮಹಾಸುರನಾದ ಆತನು ಯುದ್ಧದಲ್ಲಿ ದೇವತೆಗಳನ್ನೂ ಜಯಿಸಿ, ಮೂರುಲೋಕಗಳನ್ನೂ, ಎಲ್ಲವನ್ನೂ ನಿನಗೆ ಅತಿ ಪ್ರೀತಿಯಿಂದ ಕೊಡುವನು. ದೇವಿ, ಆತನಿಗೆ ನಿನ್ನನ್ನೇ ಒಪ್ಪಿಸುವುದರಿಂದ ಸುಕೃತವನ್ನು ಮಾಡು.

ಏವಮುಕ್ತ್ವಾ ತದಾ ದೇವೀ ತೇನ ದೂತೇನ ಶೋಭನಾ ।
ಜಹಾಸ ಪರಮಾ ದೇವೀ ವಾಕ್ಯಂ ನೋವಾಚ ಕಿಂಚನ ॥ ೨೫ ॥

ತಸ್ಯಾ ಹಸಂತ್ಯಾ ದೂತೋಽಸೌ ತ್ರೈಲೋಕ್ಯಂ ಸಚರಾಚರಂ ।
ದದರ್ಶ ಕುಕ್ಷೌ ಸಂಭ್ರಾಂತಸ್ತತ್‌ಕ್ಷಣಾತ್ಸಮಜಾಯತ ॥ ೨೬ ॥

ತತೋ ದೇವ್ಯಾಃ ಪ್ರತೀಹಾರೀ ಜಯಾಖ್ಯಾ ಅತಿತೇಜಸಾ ।
ದೇವ್ಯಾ ಹೃದಿ ಸ್ಥಿತಂ ವಾಕ್ಯಮುವಾಚ ತನುಮಧ್ಯಮಾ ॥ ೨೭ ॥

॥ ಜಯೋವಾಚ ॥

ಕನ್ಯಾರ್ಥೀ ವದತೇ ಯತ್ತು ತತ್ತ್ವಯಾ ಸಮುದೀರಿತಂ ।
ಯದಿ ನಾಮ ವ್ರತಂ ಚಾಸ್ಯಾಃ ಕೌಮಾರಂ ಸರ್ವಕಾಲಿಕಂ ॥ ೨೮ ॥

ಅಪಿ ಚಾನ್ಯಾಃ ಕುಮಾರ್ಯೋಽತ್ರ ಸಂತಿ ದೇವ್ಯಾಃ ಪದಾನುಗಾಃ ।
ತಾಸಾಮೇಕಾಪಿ ನೋ ಲಭ್ಯಾ ಕಿಮು ದೇವೀ ಸ್ವಯಂ ಶುಭಾ ॥ ೨೯ ॥

೨೫- ಆ ದೂತನಿಂದ ಹೀಗೆ ಹೇಳಿಸಿಕೊಂಡ ಮಂಗಳೆಯಾದ ಆ ಪರಮಾ ದೇವಿಯು ಏನನ್ನೂ ಮಾತನಾಡದೆ ನಕ್ಕಳು.

೨೬. ನಗುತ್ತಿದ್ದ ಆ ದೇವಿಯ ಹೊಟ್ಟೆಯಲ್ಲಿ ಚರಾಚರಸಹಿತವಾದ ಮೂರುಲೋಕವನ್ನೂ ನೋಡಿದ ಆ ದೂತನು ಒಡನೆಯೇ ಹುಚ್ಚನಂತಾದನು.

೨೭. ಬಳಿಕ ದೇವಿಯ ಬಾಗಿಲುಕಾಯುವ, ಬಹು ತೇಜಸ್ವಿನಿಯೂ ಸಣ್ಣನಡುವಿನವಳೂ ಆದ ಜಯೆಯೆಂಬುವಳು, ದೇವಿಯ ಮನಸ್ಸಿನಲ್ಲಿರುವ ಮಾತನ್ನು ಮುಂದಿನಂತೆ ಹೇಳಿದಳು.

೨೮. ಜಯೆ—ಕನ್ನೆಯನ್ನು ಬಯಸುವವನು ಯಾವುದನ್ನು ಹೇಳು ತ್ತಾನೋ ಅದನ್ನು ನೀನು ಹೇಳಿದ್ದೀಯೆ. ಈಕೆಯ ಕೌಮಾರವ್ರತವಾದರೋ ನಿರಂತರವಾದುದು.

೨೯. ಅಲ್ಲದೆ ಇಲ್ಲಿ ದೇವಿಯ ಪಾದಸೇವಕರಾಗಿ ಇತರ ಕನ್ನೆಯ ರಿರುವರಷ್ಟೆ. ಅವರಲ್ಲೊಬ್ಬಳೂ ದೊರೆಯುವಳಲ್ಲ. ಇನ್ನು ಶುಭೆಯಾದ ಸಾಕ್ಷಾ ದ್ದೇವಿಯನ್ನು ಹೇಳುವುದೇನು !

ಯಾಹಿ ದೂತ ತ್ವರನ್ಸ್ಮಾತ್ತೇ ಕಿಂಚಿದನ್ಯದ್ಭವಿಷ್ಯತಿ || ೩೦ ||

ಏವಮುಕ್ತೋ ಗತೋ ದೂತಃ ತಾವದ್ವ್ಯೋಮ್ನಿ ಮಹಾಮುನಿಃ |
ಆಯಾತೋ ನಾರದಸ್ತೂರ್ಣಂ ಗೃಹ್ಣನ್ನುಚ್ಚೈರ್ಮಹಾತಪಾಃ || ೩೧ ||

ದಿಷ್ಟ್ಯಾ ದಿಷ್ಟ್ಯೇತಿ ಚಾಗತ್ಯ ತಾಂ ಕನ್ಯಾಂ ಪ್ರಣಿಪತ್ಯ ಚ ।
ಉಪವಿಷ್ಟೋ ಜಗಾದಾಥ ಆಸನೇ ಪರಮೋರ್ಚಿತಃ ||
ಪ್ರಣಮ್ಯ ದೇವೀಃ ಸರ್ವಾಸ್ತಾ ಉವಾಚ ಚ ಮಹಾತಪಾಃ || ೩೨ ||

ದೇವಿ ದೇವೈರಹಂ ಪ್ರೀತಃ ಪ್ರೇಷಿತೋಽಸ್ಮಿ ತವಾಂತಿಕಂ ।
ಮಹಿಷಾಖ್ಯೇನ ದೈತ್ಯೇನ ಯುಧಿ ದೇವಾ ವಿನಿರ್ಜಿತಾಃ ||
ತ್ವಾಂ ಗೃಹೀತುಂ ಪ್ರಯತ್ನಂ ಸ ಕೃತವಾನ್ದೇವಿ ದೈತ್ಯರಾಟ್ || ೩೩ ||

---

೩೦. ದೂತನೇ ಬೇಗನೆ ಹೊರಡು ನಿನಗೆ ಬೇರೇನೂ ಆಗದು.

೩೧. ಜಯೆಯಿಂದ ಹೀಗೆ ಹೇಳಿಸಿಕೊಂಡ ದೂತನು ಹೊರಟುಹೋದನು. ಅಷ್ಟರಲ್ಲಿಯೇ ಮಹಾತಪಸ್ವಿಯಾದ ನಾರದಮಹರ್ಷಿಯು ಗಟ್ಟಿಯಾಗಿ ಹಾಡುತ್ತ ಆಕಾಶದಲ್ಲಿ ಬೇಗನೆ ಬಂದನು.

೩೨. 'ಅದೃಷ್ಟದಿಂದ, ಅದೃಷ್ಟದಿಂದ' ಎಂದು ಹೇಳುತ್ತ ಬಂದು, ಆ ವೈಷ್ಣವೀ ಕನ್ನೆಗೆ ನಮಸ್ಕರಿಸಿ, ಉತ್ತಮವಾದ ಪೀಠದಲ್ಲಿ ಕುಳಿತು ಪೂಜೆಗೊಂಡು ಬಳಿಕ ಆ ದೇವಿಯರೆಲ್ಲರಿಗೂ ವಂದಿಸಿ, ಆ ಮಹಾತಪಸ್ವಿಯು ಹೀಗೆ ಮಾತನಾಡಿದನು.

೩೩. ದೇವಿ, ದೇವತೆಗಳು ನನ್ನನ್ನು ಪ್ರೀತಿಯಿಂದ ನಿನ್ನ ಬಳಿಗೆ ಕಳುಹಿಸಿದ್ದಾರೆ. ಮಹಿಷನೆಂಬ ರಾಕ್ಷಸನು ಯುದ್ಧದಲ್ಲಿ ದೇವತೆಗಳನ್ನು ಪೂರ್ತಿಯಾಗಿ ಜಯಿಸಿದನು. ರಾಕ್ಷಸೇಶನಾದ ಅವನು ನಿನ್ನನ್ನು ವಶಪಡಿಸಿಕೊಳ್ಳಲು ಪ್ರಯತ್ನವನ್ನು ಮಾಡಿದ್ದಾನೆ.

ಏವಮುಕ್ತೋಽಸ್ಮಿ ದೇವೈಸ್ತ್ವಾಂ ಬೋಧಯಾಮಿ ವರಾನನೇ ।
ಸ್ಥಿರೀಭೂತಾ ಮಹಾದೇವಿ ತಂ ದೈತ್ಯಂ ಪ್ರತಿಘಾತಯ ॥ ೩೪ ॥

ಉಕ್ತ್ವೈವಾಂತರ್ಹಿತಃ ಸದ್ಯೋ ನಾರದಃ ಸ್ವೇಚ್ಛಯಾ ಯಯೌ ।
ದೇವೀ ಚ ಕನ್ಯಾಸ್ತಾಸ್ಸರ್ವಾಃ ಸನ್ನಹ್ಯಂತಾಮುವಾಚ ಹ ॥ ೩೫ ॥

ತತಃ ಕನ್ಯಾ ಮಹಾಭಾಗಾಃ ಸರ್ವಾಸ್ತಾ ದೇವಿಶಾಸನಾತ್ ।
ಬಭೂವುರ್ಘೋರರೂಪಿಣ್ಯಃ ಖಡ್ಗಚರ್ಮಧನುರ್ಧರಾಃ ॥ ೩೬ ॥

ಸಂಗ್ರಾಮಹೇತೋಃ ಸಂತಸ್ಥುರ್ದೈತ್ಯವಿಧ್ವಂಸನಾಯ ತಾಃ ॥ ೩೭ ॥

ತಾವದ್ದೈತ್ಯಬಲಂ ಸರ್ವಂ ಮುಕ್ತ್ವಾ ದೇವಚಮೂಂ ದ್ರುತಂ ।
ಆಯಯೌ ಯತ್ರ ತದ್ದೇವ್ಯಾಃ ಸನ್ನದ್ಧಂ ಸ್ತ್ರೀಬಲಂ ಮಹತ್ ॥ ೩೮ ॥

---

೩೪. ಮಹಾದೇವಿ, ವರಾನನೇ, ದೇವತೆಗಳು ನನಗೆ ಹೀಗೆ ಹೇಳಿದ್ದಾರೆ. ಅದನ್ನು ನಿನಗೆ ತಿಳಿಸುತ್ತೇನೆ. ಸ್ಥಿರಳಾಗಿ ಆ ರಾಕ್ಷಸನನ್ನು ಕೊಲ್ಲು.

೩೫. ಹೀಗೆ ಹೇಳಿ ಒಡನೆಯೆ ನಾರದನು ಕಣ್ಮರೆಯಾಗಿ ತನ್ನಿಷ್ಟದಂತೆ ಹೊರಟುಹೋದನು. ದೇವಿಯೂ ಆ ಕನ್ನೆಯರೆಲ್ಲರಿಗೂ "ಸಿದ್ಧರಾಗಿರಿ" ಎಂದು ಹೇಳಿದಳು.

೩೬. ಬಳಿಕ ಪೂಜ್ಯೆಯರಾದ ಆ ಕನ್ಯೆಯರೆಲ್ಲರೂ ದೇವಿಯ ಅಪ್ಪಣೆಯಿಂದ ಘೋರರೂಪಿಣಿಯರೂ, ಕತ್ತಿ, ಗುರಾಣಿ ಬಿಲ್ಲುಗಳನ್ನು ಹಿಡಿದವರೂ ಆದರು.

೩೭. ರಾಕ್ಷಸವಿಧ್ವಂಸನದಲ್ಲಿ ಕುತೂಹಲವುಳ್ಳವರಾಗಿ ಯುದ್ಧಕ್ಕಾಗಿ ಹೊರಟರು.

೩೮. ಅಷ್ಟರಲ್ಲಿ, ರಾಕ್ಷಸಸೇನೆಯೆಲ್ಲವೂ ದೇವತೆಗಳ ಸೇನೆಯನ್ನು ಓಡಿಸಿಬಿಟ್ಟು, ದೇವಿಯ ದೊಡ್ಡದಾದ ಸ್ತ್ರೀಸೈನ್ಯವು ಸಿದ್ಧವಾಗಿದ್ದೆಡೆಗೇ ಬಂದಿತು.

ತತಸ್ತಾ ಯುಯುಧುಃ ಕನ್ಯಾ ದಾನವೈಃ ಸಹ ದರ್ಪಿತಾಃ ।
ಕ್ಷಣೇನ ತದ್ಬಲಂ ತಾಭಿಃ ಚತುರಂಗಂ ನಿಪಾತಿತಂ ॥ ೩೯ ॥

ಶಿರಾಂಸಿ ತತ್ರ ಕೇಷಾಂಚಿತ್ ಛಿನ್ನಾನಿ ಪತಿತಾನಿ ಚ ।
ಅಪರೇಷಾಂ ವಿದಾರ್ಯೋರಃ ಕ್ರವ್ಯಾದಾಃ ಪಾಂತಿ ಶೋಣಿತಂ ॥
ಅನ್ಯೇ ಕಬಂಧಭೂತಾಸ್ತು ನನೃತುರ್ದೈತ್ಯನಾಯಕಾಃ ॥ ೪೦ ॥

ಏವಂ ಕ್ಷಣೇನ ತೇ ಸರ್ವೇ ವಿನಷ್ಟಾಃ ಪಾಪಚೇತಸಃ ।
ಅಪರೇ ವಿದ್ರುತಾಸ್ಸರ್ವೇ ಯತ್ರಾಸೌ ಮಹಿಷಾಸುರಃ ॥ ೪೧ ॥

ತತೋ ಹಾಹಾಕೃತಂ ಸರ್ವಂ ತಥಾ ದೈತ್ಯಬಲಂ ಮಹತ್ ।
ಏವಂ ತದಾಕುಲಂ ದೃಷ್ಟ್ವಾ ಮಹಿಷೋ ವಾಕ್ಯಮಬ್ರವೀತ್ ॥
ಸೇನಾಪತೇ ಕಿಮೇತದ್ಧಿ ಬಲಂ ಭಗ್ನಂ ಮಮಾಗ್ರತಃ ॥ ೪೨ ॥

---

೩೯. ಬಳಿಕ ಆ ಕನ್ಯೆಯರು ದರ್ಪದಿಂದ ರಾಕ್ಷಸರೊಡನೆ ಯುದ್ಧವನ್ನು ಮಾಡಿದರು. ಕ್ಷಣಕಾಲದಲ್ಲಿ ಅವರು ಆ ಚತುರಂಗಬಲವನ್ನೂ ಉರುಳಿಸಿದರು.

೪೦. ಆ ಯುದ್ಧದಲ್ಲಿ ಕೆಲವರು ರಾಕ್ಷಸರ ತಲೆಗಳು ಕತ್ತರಿಸಿಬಿದ್ದುವು. ಮತ್ತೆ ಕೆಲವರ ಎದೆಗಳನ್ನು ಮಾಂಸಾಹಾರಿಗಳಾದ ಪ್ರಾಣಿಗಳು ಸೀಳಿ ರಕ್ತವನ್ನು ಕುಡಿಯುತ್ತಿದ್ದುವು. ಇನ್ನೂ ಕೆಲವರು ರಾಕ್ಷಸರ ನಾಯಕರ (ತಲೆಯಿಲ್ಲದ) ಮುಂಡಗಳು ಕುಣಿಯುತ್ತಿದ್ದುವು.

೪೧. ಹೀಗೆ ಕ್ಷಣಮಾತ್ರದಲ್ಲಿ ಆ ಪಾಪಾತ್ಮರೆಲ್ಲರೂ ನಾಶವಾದರು. ಉಳಿದವರೆಲ್ಲರೂ ಮಹಿಷಾಸುರನಿದ್ದೆಡೆಗೆ ಓಡಿದರು.

೪೨. ಬಳಿಕ ದೊಡ್ಡದಾದ ರಾಕ್ಷಸಸೇನೆಯಲ್ಲಿ ಹಾಗೆ ಹಾಹಾಕಾರವಾಗಲು, ಮಹಿಷಾಸುರನು ಆ ವ್ಯಾಕುಲವನ್ನು ನೋಡಿ "ಸೇನಾಪತಿಯೇ, ಇದೇನು! ಸೇನೆಯು ನನ್ನೆದುರಿಗೆ ಭಗ್ನವಾಯಿತು" ಎಂದು ಕೇಳಿದನು.

ತತೋ ಯಜ್ಞಹನುರ್ನಾಮ ದೈತ್ಯೋ ಹಸ್ತಿಸ್ವರೂಪವಾನ್ ।
ಉವಾಚ ಭಗ್ನಮೇತದ್ಧಿ ಕುಮಾರೀಭಿಃ ಸಮಂತತಃ ॥ ೪೩ ॥

ತತೋ ದುದ್ರಾವ ಮಹಿಷಸ್ತಾಃ ಕನ್ಯಾಶ್ಶುಭಲೋಚನಾಃ ।
ಗದಾಮಾದಾಯ ತರಸಾ ಘಾತಿತುಂ ತಾಸ್ತತೋಽಸುರಃ ॥ ೪೪ ॥

ಯತ್ರ ತಿಷ್ಠತಿ ಸಾ ದೇವೀ ದೇವಗಂಧರ್ವಪೂಜಿತಾ ।
ತತ್ರೈವ ಸೋಽಸುರಃ ಪ್ರಾಯಾದ್ಯತ್ರ ದೇವೀ ವ್ಯವಸ್ಥಿತಾ ॥ ೪೫ ॥

ಸಾ ಚ ದೃಷ್ಟ್ವಾ ತಮಾಯಾಂತಂ ವಿಂಶದ್ಧಸ್ತಾ ಬಭೂವ ಹ ॥ ೪೬ ॥
ಧನುಃ ಖಡ್ಗಂ ತಥಾ ಶಕ್ತಿಂ ಶರಾನ್ ಶೂಲಂ ಗದಾಂ ತಥಾ ।

ಮುಸಲಂ ಚ ತಥಾ ಚಕ್ರಂ ಭಿಂಡಿವಾಲಂ ತಥೈವ ಚ ॥ ೪೭ ॥

ದಂಡಂ ಪಾಶಂ ಧ್ವಜಂ ಚೈವ ಪದ್ಮಂ ಚೇತಿ ಚ ವಿಂಶತಿಃ ।
ಭೂತ್ವಾ ವಿಂಶದ್ಭುಜಾ ದೇವೀ ಸಿಂಹಮಾಸ್ಥಾಯ ದಂಶಿತಾ ॥ ೪೮ ॥

---

೪೩. ಬಳಿಕ ಯಜ್ಞಹನುವೆಂಬ ಹೆಸರಿನ ಆನೆಯರೂಪದ ರಾಕ್ಷಸನು ಕುಮಾರಿಯರಿಂದ ಎಲ್ಲಾ ಕಡೆಯೂ ಈ ಸೇನೆಯು ಭಗ್ನವಾಯಿತು ಎಂದನು.

೪೪. ಆಮೇಲೆ ಮಹಿಷಾಸುರನು ಬೇಗನೆ ಗದೆಯನ್ನು ತೆಗೆದುಕೊಂಡು, ಶುಭನೇತ್ರೆಯರಾದ ಆ ಕುಮಾರಿಯರನ್ನು ಕೊಲ್ಲಲು ಓಡಿದನು.

೪೫. ದೇವಗಂಧರ್ವಪೂಜಿತಳಾದ ಆ ವೈಷ್ಣವೀದೇವಿಯು ಎಲ್ಲಿ ನಿಂತಿದ್ದಳೋ ಅಲ್ಲಿಗೇ ಅವನು ಹೋದನು.

೪೬. ಅವಳೂ, ಅವನು ಬರುತ್ತಿರುವುದನ್ನು ನೋಡಿ, ಇಪ್ಪತ್ತು ಕೈಗಳುಳ್ಳವಳಾದಳು.

೪೭-೪೮. ಬಿಲ್ಲು, ಕತ್ತಿ, ಶಕ್ತ್ಯಾಯುಧ, ಬಾಣಗಳು, ಶೂಲ, ಗದೆ, ಒನಕೆ ಚಕ್ರ, ಭಿಂಡಿವಾಲ, ದೊಣ್ಣೆ, ಪಾಶ, ಧ್ವಜ, ಪದ್ಮ ಮೊದಲಾದ ಇಪ್ಪತ್ತು ಆಯುಧಗಳನ್ನು, ಇಪ್ಪತ್ತು ತೋಳುಗಳುಳ್ಳ ಆ ದೇವಿಯು ಧರಿಸಿ ಸಿಂಹವನ್ನೇರಿ ಮಹಿಷನನ್ನು ಕಚ್ಚಿಸಿದಳು.

ಸಸ್ಮಾರ ರುದ್ರಂ ದೇವೇಶಂ ರೌದ್ರಂ ಸಂಹಾರಕಾರಣಂ ।
ತತೋ ವೃಷಧ್ವಜಸ್ಸಾಕ್ಷಾದ್ದ್ರುತಂ ತತ್ರೈವ ಆಯಯೌ ॥ ೪೯ ॥

ತಯಾ ಪ್ರಣಮ್ಯ ವಿಜ್ಞಪ್ತಃ ಸರ್ವಾನ್ದೈತ್ಯಾನ್ ಜಯಾಮ್ಯಹಂ ।
ತ್ವಯಿ ಸನ್ನಿಧಿಮಾತ್ರೇ ತು ದೇವದೇವ ಸನಾತನ ॥ ೫೦ ॥

ಏವಮುಕ್ತ್ವಾಽಸುರಾನ್ ಸರ್ವಾನ್ ಜಿಗಾಯ ಪರಮೇಶ್ವರೀ ॥ ೫೧ ॥

ಮುಕ್ತ್ವಾ ತಮೇಕಂ ಮಹಿಷಂ ಶೇಷಂ ಹತ್ವಾ ಸಮಭ್ಯಯಾತ್ ।
ಯಾವದ್ದೇವೀ ತತಃ ಸಾಪಿ ತಾಂ ದೃಷ್ಟ್ವಾ ಸೋಪಿ ದುದ್ರುವೇ ॥ ೫೨ ॥

ಕ್ವಚಿದ್ಯುಧ್ಯತಿ ದೈತ್ಯೇಂದ್ರಃ ಕ್ವಚಿಚ್ಚೈವ ಪಲಾಯತೇ ।
ಕ್ವಚಿತ್ಪುನರ್ಮೃಧಂ ಚಕ್ರೇ ಕ್ವಚಿತ್ಪುನರುಪಾರಮತ್ ॥ ೫೩ ॥

---

೪೯. ಬಳಿಕ, ಸಂಹಾರಕಾರಣನೂ, ಉಗ್ರನೂ, ದೇವೇಶನೂ ಆದ ರುದ್ರನನ್ನು ಸ್ಮರಿಸಿದಳು. ವೃಷಭಧ್ವಜನಾದ ಆ ರುದ್ರನು ತಾನೇ ಪ್ರತ್ಯಕ್ಷವಾಗಿ ಬೇಗನೆ ಅಲ್ಲಿಗೆ ಬಂದನು.

೫೦. ಅವಳು ರುದ್ರನಿಗೆ ನಮಸ್ಕರಿಸಿ, "ದೇವದೇವ, ಸನಾತನ, ನೀನು, ಹತ್ತಿರದಲ್ಲಿದ್ದ ಮಾತ್ರದಲ್ಲಿ ರಾಕ್ಷಸರನ್ನೆಲ್ಲಾ ನಾನು ಜಯಿಸುತ್ತೇನೆ" ಎಂದು ವಿಜ್ಞಾಪಿಸಿದಳು.

೫೧. ಹೀಗೆ ವಿಜ್ಞಾಪಿಸಿ, ಆ ಪರಮೇಶ್ವರಿಯು ಎಲ್ಲಾ ರಾಕ್ಷಸರನ್ನೂ ಜಯಿಸಿದಳು.

೫೨. ಆ ಮಹಿಷಾಸುರನೊಬ್ಬನನ್ನು ಬಿಟ್ಟು ಉಳಿದವರನ್ನೆಲ್ಲಾ ಕೊಂದು ಬಳಿಕ ತನಗೆದುರಾಗಿ ಬರುವಷ್ಟರಲ್ಲಿ ಆ ಮಹಿಷನೂ ಆ ದೇವಿಗೆದುರಾಗಿ ಓಡಿ ಬಂದನು.

೫೩. ಆ ರಾಕ್ಷಸೇಂದ್ರನು ಕೆಲವುಕಾಲ ಯುದ್ಧಮಾಡುವನು. ಕೆಲವುಕಾಲ ಓಡಿಹೋಗುವನು. ಮತ್ತೆ ಕೆಲವುದಿನ ಯುದ್ಧಮಾಡುವನು. ಮತ್ತೆ ನಿಲ್ಲಿಸುವನು.

ಏವಂ ವರ್ಷಸಹಸ್ರಾಣಿ ದಶ ತಸ್ಯ ತಯಾ ಸಹ ।
ದಿವ್ಯಾನಿ ವಿಗತಾನಿ ಸ್ಯುಃ ಯುಧ್ಯತಶ್ಚೈವ ಶೋಭನೇ ॥
ಬಭ್ರಾಮ ಸಕಲಂತ್ವಾಜೌ ಬ್ರಹ್ಮಾಂಡಂ ಭೀತಮಾನಸಂ ॥ ೫೪ ॥

ತತಃ ಕಾಲೇನ ಮಹತಾ ಶತಶೃಂಗೇ ಮಹಾಗಿರೌ ।
ಪದ್ಭ್ಯಾಮಾಕ್ರಮ್ಯ ಶೂಲೇನ ನಿಹತೋ ದೈತ್ಯನಾಯಕಃ ॥ ೫೫ ॥

ಶಿರಶ್ಚಿಚ್ಛೇದ ಖಡ್ಗೇನ ತತ್ರ ಚಾಂತಃಸ್ಥಿತಃ ಪುಮಾನ್ ।
ನಿರ್ಗತ್ಯ ವಿಗತಃ ಸ್ವರ್ಗಂ ದೇವ್ಯಾಃ ಶಸ್ತ್ರನಿಪಾತನಾತ್ ॥ ೫೬ ॥

ತತೋ ದೇವಗಣಾಸ್ಸರ್ವೇ ಮಹಿಷಂ ವೀಕ್ಷ್ಯ ನಿರ್ಜಿತಂ ।
ಸಬ್ರಹ್ಮಕಾಃ ಸ್ತುತಿಂ ಚಕ್ರುರ್ದೇವ್ಯಾಸ್ತುಷ್ಟೇನ ಚೇತಸಾ ॥ ೫೭ ॥

---

೫೪. ಮಂಗಳೇ, ಹೀಗೆ ಅವಳೊಡನೆ ಅವನು ಯುದ್ಧಮಾಡುತ್ತಿರಲು ದೇವತೆಗಳ ಹತ್ತುಸಾವಿರ ವರ್ಷಗಳು ಕಳೆದುಹೋದುವು. ಯುದ್ಧದಲ್ಲಿ ಹೆದರಿದ ಮನವುಳ್ಳ ಅವನನ್ನು ಹಿಂದಟ್ಟಿಕೊಂಡು ಬ್ರಹ್ಮಾಂಡವನ್ನೆಲ್ಲಾ ಸುತ್ತಿದಳು.

೫೫. ಬಳಿಕ ಬಹುಕಾಲದಮೇಲೆ ಶತಶೃಂಗಮಹಾಗಿರಿಯಲ್ಲಿ ಆ ದೈತ್ಯನಾಯಕನನ್ನು ಕಾಲಿನಿಂದ ತುಳಿದುಕೊಂಡು ಶೂಲದಿಂದ ಕೊಂದಳು.

೫೬. ಕತ್ತಿಯಿಂದ ಅವನ ತಲೆಯನ್ನು ಕತ್ತರಿಸಿದಳು. ದೇವಿಯ ಶಸ್ತ್ರದ ಏಟಿನಿಂದ ಬಿದ್ದ ಆ ಮಹಿಷದೇಹದ ಒಳಗಿದ್ದ ಪುರುಷನು ಹೊರಹೊರಟು ಸ್ವರ್ಗಕ್ಕೆ ಹೋದನು.

೫೭. ಬಳಿಕ ದೇವಿಯು ಮಹಿಷಾಸುರನನ್ನು ಜಯಿಸಿದುದನ್ನು ನೋಡಿದ ದೇವತೆಗಳ ಗುಂಪಿನವರೆಲ್ಲರೂ ಬ್ರಹ್ಮನೊಡಗೂಡಿ, ಸಂತೋಷಗೊಂಡ ಮನದಿಂದ ಆ ದೇವಿಯನ್ನು ಸ್ತುತಿಸಿದರು.

॥ ದೇವಾ ಊಚುಃ ॥

ನಮೋ ದೇವಿ ಮಹಾಭಾಗೇ ಗಂಭೀರೇ ಭೀಮದರ್ಶನೇ ।
ಜಯಸ್ಥೇ ಸ್ಥಿತಿಸಿದ್ಧಾಂತೇ ತ್ರಿನೇತ್ರೇ ವಿಶ್ವತೋಮುಖಿ ॥ ೫೮ ॥

ವಿದ್ಯಾವಿದ್ಯೇ ಜಪೇಜಾಪ್ಯೇ ಮಹಿಷಾಸುರಮರ್ದಿನಿ ।
ಸರ್ವಗೇ ಸರ್ವದೇವೇಶಿ ವಿಶ್ವರೂಪಿಣಿ ವೈಷ್ಣವಿ ॥ ೫೯ ॥

ವೀತಶೋಕೇ ಧ್ರುವೇ ದೇವಿ ಪದ್ಮಪತ್ರಶುಭೇಕ್ಷಣೇ ।
ಶುದ್ಧಸತ್ವವ್ರತಸ್ಥೇ ಚ ಚಂಡರೂಪೇ ವಿಭಾವರಿ ॥ ೬೦ ॥

ಋದ್ಧಿಸಿದ್ಧಿಪ್ರದೇ ದೇವಿ ವಿದ್ಯೇವಿದ್ಯೇಮೃತೇ ಶಿವೇ ।
ಶಾಂಕರೀ ವೈಷ್ಣವೀ ಬ್ರಾಹ್ಮೀ ಸರ್ವದೇವನಮಸ್ಕೃತೇ ॥ ೬೧ ॥

ಘಂಟಾಹಸ್ತೇ ತ್ರಿಶೂಲಾಸ್ತ್ರೇ ಮಹಾಮಹಿಷಮರ್ದಿನಿ ।
ಉಗ್ರರೂಪೇ ವಿರೂಪಾಕ್ಷೇ ಮಹಾಮಾಯೇಽಮೃತಸ್ರವೇ ॥ ೬೨ ॥

---

೫೮. ದೇವತೆಗಳು—ನಮಸ್ಕಾರಂ, ಮಹಾಭಾಗ್ಯೇ, ಗಂಭೀರೇ, ಭೀಮದರ್ಶನೇ, ಜಯಸ್ಥೇ, ಸ್ಥಿತಿಸಿದ್ಧಾಂತೇ, ತ್ರಿನೇತ್ರೇ, ಸರ್ವತೋಮುಖೀ.

೫೯. ವಿದ್ಯೇಽವಿದ್ಯೇ, ಜಪೇ, ಜಾಪ್ಯೇ, ಮಹಿಷಾಸುರ ಮರ್ದಿನೀ, ಸರ್ವಗೇ, ಸರ್ವದೇವೇಶೀ, ವಿಶ್ವರೂಪಿಣಿ, ವೈಷ್ಣವೀ.

೬೦. ನಷ್ಟಶೋಕೇ, ಸ್ಥಿರೇ, ದೇವಿ, ಪದ್ಮಪತ್ರಶುಭೇಕ್ಷಣೇ, ಶುದ್ಧ ಸತ್ವವ್ರತಸ್ಥೇ, ನೀಂ ಚಂಡರೂಪೇ ವಿಭಾವರೀ.

೬೧-೬೧. ವೃದ್ಧಿಸಿದ್ಧಿಕರೇ, ದೇವಿ, ವಿದ್ಯೇ, ವಿದ್ಯೇಽಮೃತೇ, ಶಿವೇ, ಶಾಂಕರೀ, ವೈಷ್ಣವೀ, ಬ್ರಾಹ್ಮೀ, ಸರ್ವದೇವನಮಸ್ಕೃತೇ, ಘಂಟಾಹಸ್ತೇ, ತ್ರಿಶೂಲಾಸ್ತ್ರೇ, ಮಹಾಮಹಿಷಮರ್ದಿನೀ, ಉಗ್ರರೂಪೇ, ವಿರೂಪಾಕ್ಷೇ, ಮಹಾಮಾಯೇಽಮೃತಸ್ರವೆ.

ಸರ್ವಸತ್ತ್ವಹಿತೇ ದೇವಿ ಸರ್ವಸತ್ತ್ವಮಯೇ ಧ್ರುವೇ ।
ವಿದ್ಯಾಪುರಾಣಶಿಲ್ಪಾನಾಂ ಜನನೀ ಭೂತಧಾರಿಣೀ ॥ ೬೩ ॥

ಸರ್ವವೇದರಹಸ್ಯಾನಾಂ ಸರ್ವಸತ್ತ್ವವತಾಂ ಶುಭೇ ।
ತ್ವಮೇವ ಶರಣಂ ದೇವಿ ವಿದ್ಯೇ ವಿದ್ಯೇ ನಮೋಽಂಬಿಕೇ ॥ ೬೪ ॥

ವಿರೂಪಾಕ್ಷಿ ತಥಾ ಕ್ಷಾಂತಿಃ ಕ್ಷೋಭಿತಾಂತರ್ಜಲೇಽಮಲೇ ।
ನಮೋಽಸ್ತು ತೇ ಮಹಾದೇವಿ ನಮಸ್ತೇ ಪರಮೇಶ್ವರಿ ॥ ೬೫ ॥

ಶರಣಂ ತ್ವಾಂ ಪ್ರಪದ್ಯಂತೇ ಯೇ ದೇವಿ ಪರಮೇಶ್ವರಿ ।
ನ ತೇಷಾಂ ಜಾಯತೇ ಕಿಂಚಿದಶುಭಂ ರಣಸಂಕಟೇ ॥ ೬೬ ॥

ಯಶ್ಚ ವ್ಯಾಘ್ರಭಯೇ ಘೋರೇ ಚೋರರಾಜಭಯೇ ತಥಾ ।
ಸ್ತವಮೇನಂ ಸದಾ ದೇವಿ ಪಠಿಷ್ಯತಿ ತಥಾತ್ಮವಾನ್ ॥ ೬೭ ॥

---

೬೩. ಸರ್ವಪ್ರಾಣಿಹಿತೇ, ದೇವಿ, ಸರ್ವಸತ್ತ್ವಮಯೇ, ಧ್ರುವೇ, ವಿದ್ಯಾಪುರಾಣಶಿಲ್ಪಕ್ಕೂ ಜನನೀ, ಭೂತಧಾರಿಣೀ.

೬೪. ವಿದ್ಯೆ, ವಿದ್ಯೇ, ಮಹಾದೇವಿ, ನಮಸ್ಕಾರಂ ಶುಭೇ, ಅಂಬಿಕೇ, ಸರ್ವವೇದರಹಸ್ಯಗಳಿಗೂ ಸರ್ವಸತ್ತ್ವವಂತರಿಗೂ ನೀನೇ ರಕ್ಷಕಳು.

೬೫. ವಿರೂಪಾಕ್ಷಿ, ಕ್ಷಮೇ, ದೇವಿ, ಕ್ಷೋಭಿತಾಂತರ್ಜಲೇ, ಅಮಲೆ, ವಂದನಂಗಳ್ ಮಹಾದೇವಿ, ವಂದನಂ ಪರಮೇಶ್ವರೀ.

೬೬-೬೭. ದೇವಿ, ಪರಮೇಶ್ವರಿ, ಯಾರು ನಿನ್ನನ್ನು ಮರೆ ಹೊಗುವರೋ ಅವರಿಗೆ ಸ್ವಲ್ಪವೂ ಅಮಂಗಳವುಂಟಾಗುವುದಿಲ್ಲ. ದೇವಿ, ಯಾರು ಯುದ್ಧ ಸಂಕಟದಲ್ಲಾಗಲೀ, ಹುಲಿಯ ಭಯದಲ್ಲಾಗಲೀ, ಘೋರವಾದ ಕಳ್ಳರ ಭಯದಲ್ಲಿಯಾಗಲೀ, ರಾಜಭಯದಲ್ಲಾಗಲೀ, ಮನಸ್ಸಿಟ್ಟು ಈ ಸ್ತೋತ್ರವನ್ನು ಹೇಳುವರೋ ಅವರಿಗೆ ಶುಭವುಂಟಾಗುವುದು.

ನಿಗಡಸ್ಥೋಽಪಿ ಯೋ ದೇವಿ ತೇ ಸ್ಮರಿಷ್ಯತಿ ಮಾನವಃ ।
ಸೋಽಪಿ ಬಂಧೈರ್ವಿನಿರ್ಮುಕ್ತಃ ಸಸುಖಂ ವಸತೇ ಸುಖೀ ॥ ೨೮ ॥

॥ ವರಾಹ ಉವಾಚ ॥

ಏವಂ ಸ್ತುತಾ ತದಾ ದೇವೀ ದೇವೈಃ ಪ್ರಣತಿಪೂರ್ವಕಂ ।
ಉವಾಚ ದೇವಾನ್ಸುಶ್ರೋಣಿ ವೃಣುಧ್ವಂ ವರಮುತ್ತಮಂ ॥ ೨೯ ॥

॥ ದೇವಾ ಊಚುಃ ॥

ದೇವಿ ಸ್ತೋತ್ರಮಿದಂ ಯೇ ಹಿ ಪಠಿಷ್ಯಂತಿ ತವಾನಘೇ ।
ಸರ್ವಕಾಮಸಮಾಪನ್ನಾನ್ ಕುರು ದೇವಿ ಸ ನೋ ವರಃ ॥ ೩೦ ॥

ಏವಮಸ್ತ್ವಿತಿ ತಾನ್ದೇವಾನುಕ್ತ್ವಾ ದೇವೀ ಪರಾಪರಾ ।
ವಿಸಸರ್ಜ ತತೋ ದೇವಾಸ್ ಸ್ವಯಂ ತತ್ರೈವ ಸಂಸ್ಥಿತಾ ॥ ೩೧ ॥

---

೨೮. ಕೈಕಾಲುಗಳಿಗೆ ಬೇಡಿಯನ್ನು ಹಾಕಿಸಿಕೊಂಡಿರುವ ಮನುಷ್ಯನು ಕೂಡ ನಿನ್ನನ್ನು ಸ್ಮರಿಸಿದರೆ ಸೆರೆಯಿಂದ ಬಿಡುಗಡೆಯನ್ನು ಹೊಂದಿ ಬಹು ಸುಖಿಯಾಗಿ ಜೀವಿಸುವನು.

೨೯. ವರಾಹ—ಸುಂದರಿ, ದೇವತೆಗಳು ನಮಸ್ಕಾರ ಪೂರ್ವಕವಾಗಿ ಹೀಗೆ ಸ್ತುತಿಸಲು ದೇವಿಯು ದೇವತೆಗಳಿಗೆ "ಉತ್ತಮವಾದ ವರವನ್ನು ಕೇಳಿರಿ" ಎಂದು ಹೇಳಿದಳು.

೩೦. ದೇವತೆಗಳು–ದೇವಿ, ಅನಘೇ, ನಿನ್ನ ಈ ಸ್ತೋತ್ರವನ್ನು ಹೇಳುವವರ ಸರ್ವೇಷ್ಟಾರ್ಥಗಳನ್ನೂ ಸಲ್ಲಿಸು. ಅದೇ ನಮಗೆ ವರ.

೩೧. ಆ ಪರಾಪರದೇವಿಯು "ಹಾಗೆಯೇ ಆಗಲಿ" ಎಂದು ದೇವತೆಗಳಿಗೆ ಹೇಳಿ ಅವರನ್ನು ಕಳುಹಿಸಿ, ತಾನು ಅಲ್ಲಿಯೇ ನೆಲಸಿದಳು.

ಏತದ್ದ್ವಿತೀಯಂ ಯೋ ಜನ್ಮ ವೇದ ದೇವ್ಯಾ ಧರಾಧರೇ |
ಸ ವೀತಶೋಕೋ ವಿರಜಾಃ ಪದಂ ಗಚ್ಛತ್ಯನಾಮಯಂ || ೭೨ ||

ಇತಿ ಶ್ರೀ ವರಾಹಪುರಾಣೇ ತ್ರಿಶಕ್ತಿಮಾಹಾತ್ಮ್ಯೇ ಮಹಿಷಾಸುರವಧೋ ನಾಮ ಪಂಚನವತಿತಮೋಽಧ್ಯಾಯಃ

---

೭೨. ಧರಾಧರೇ, ತ್ರಿಶಕ್ತಿದೇವಿಯ ಎರಡನೆಯ ಜನ್ಮ(ದ ಈ ವಿಚಾರ)ವನ್ನು ಕೇಳಿದವನು ದುಃಖವನ್ನು, ಪಾಪವನ್ನೂ ಕಳೆದುಕೊಂಡು ರೋಗಾದಿಗಳಿಲ್ಲದೆಡೆಯನ್ನು ಸೇರುವನು.

ಅಧ್ಯಾಯದ ಸಾರಾಂಶ ;—

ಮಹಿಷಾಸುರನು ಕಳುಹಿದ ವಿದ್ಯುತ್ಪ್ರಭನೆಂಬ ದೂತನು ವೈಷ್ಣವೀದೇವಿಯ ಬಳಿಗೆ ಹೋಗಿ, ಮಹಿಷಾಸುರನ ಜನ್ಮವೃತ್ತಾಂತವನ್ನೂ, ಅವನ ರೂಪಶೌರ್ಯೌದಾರ್ಯಾದಿ ಮಹಿಮೆಯನ್ನೂ ವಿವರವಾಗಿ ಹೇಳಿ, ಅಂತಹವನು ಅವಳನ್ನು ವರಿಸಿದ್ದಾನೆಂದೂ, ಅವನಿಗೆ ಆತ್ಮಾರ್ಪಣಮಾಡಿ ಸುಕೃತಮಾಡಬೇಕೆಂದೂ ಹೇಳಿದನು. ಕನ್ಯಾವ್ರತಧಾರಿಣಿಯಾದ ದೇವಿಯಾಗಲಿ, ಅವರ ಸೇವಕಿಯರಲ್ಲೊಬ್ಬಳಾಗಲಿ ಮಹಿಷನನ್ನು ವರಿಸಲಾರರೆಂದು ದೇವಿಯ ಬಾಗಿಲು ಕಾಯುವವಳಿಂದ ಅರಿತ ದೂತನು ಹೊರಟುಹೋದನು. ಬಳಿಕ ನಾರದಮುನಿಯು, ದೇವಿಯಿಂದ ಮಹಿಷಾಸುರವಧೆಯನ್ನು ದೇವತೆಗಳು ಪ್ರಾರ್ಥಿಸುವರೆಂದು, ದೇವಿಗೆ ವಿಜ್ಞಾಪಿಸಲು ಅವಳು ಇಪ್ಪತ್ತು ತೋಳುಗಳುಳ್ಳ ರೂಪವನ್ನು ಧರಿಸಿ ಉಗ್ರರೂಪಿಣಿಯರಾದ ಸಖಿಯರೊಡಗೂಡಿ ಮಹಿಷಾಸುರನ ಸೇನೆಯನ್ನು ಧ್ವಂಸಮಾಡಿದುದಲ್ಲದೆ ಮಹಿಷಾಸುರನನ್ನು ತಾನೇ ಸಂಹರಿಸಿದಳು. ದೇವಿಯನ್ನು ಬ್ರಹ್ಮಾದಿ ದೇವತೆಗಳು ಸ್ತುತಿಸಿದರು. ಎಂಬಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತೈದನೆಯ ಅಧ್ಯಾಯ.

॥ ಶ್ರೀಃ॥

—x—

ಷಣ್ಣವತಿತಮೋಧ್ಯಾಯಃ

ಅಥ ತ್ರಿಶಕ್ತಿರಹಸ್ಯೇ ರೌದ್ರೀವ್ರತಂ

॥ ಶ್ರೀ ವರಾಹ ಉವಾಚ ॥

ಯಾ ಸಾ ನೀಲಗಿರಿಂ ಯಾತಾ ತಪಸೇ ಧೃತಮಾನಸಾ ।
ರೌದ್ರೀ ತಮೋದ್ಭವಾ ಶಕ್ತಿಃ ತಸ್ಯಾಃ ಶೃಣು ಧರೇವ್ರತಂ ॥ ೧ ॥

ತಪಃ ಕೃತ್ವಾ ಚಿರಂ ಕಾಲಂ ಪಾಲಯಾಮ್ಯಖಿಲಂ ಜಗತ್ ।
ಏವಮುದ್ದಿಶ್ಯ ಪಂಚಾಗ್ನಿಂ ಸಾಧಯಾಮಾಸ ಭಾಮಿನೀ ॥
ತಸ್ಯಾಃ ಕಾಲಾಂತರೇ ದೇವ್ಯಾಃ ತಪಂತ್ಯಾಸ್ತಪ ಉತ್ತಮಂ ॥ ೨ ॥

ರುರುರ್ನಾಮ ಮಹಾತೇಜಾಃ ಬ್ರಹ್ಮದತ್ತವರೋಽಸುರಃ ॥ ೩ ॥

ತೊಂಬತ್ತಾರನೆಯ ಅಧ್ಯಾಯ.

ತ್ರಿಶಕ್ತಿರಹಸ್ಯದಲ್ಲಿ ರೌದ್ರೀವ್ರತ.

೧. ಶ್ರೀವರಾಹ—ಧರಾದೇವಿ, ತಪಸ್ಸಿನಲ್ಲಿ ನೆಟ್ಟ ಮನಸ್ಸುಳ್ಳವಳಾಗಿ ನೀಲಗಿರಿಗೆ ಹೋದ, ತಮೋದ್ಭವಶಕ್ತಿಯಾದ ರೌದ್ರೀದೇವಿಯ ವ್ರತವನ್ನು ಹೇಳುತ್ತೇನೆ. ಕೇಳು.

೨. ಆ ದೇವಿಯು, ಬಹುಕಾಲ ತಪಸ್ಸುಮಾಡಿ ಸಮಸ್ತಲೋಕವನ್ನೂ ಪಾಲಿಸುತ್ತೇನೆಂದು ಉದ್ದೇಶಿಸಿ, ಪಂಚಾಗ್ನಿಯನ್ನು ಸಾಧಿಸಿ, ಉತ್ತಮವಾದ ತಪಸ್ಸನ್ನು ಮಾಡುತ್ತಿದ್ದಳು.

೩–೫. ಆ ಕಾಲದಲ್ಲಿ ರುರುವೆಂಬ ಮಹಾತೇಜನೂ, ಬ್ರಹ್ಮನಿಂದ ವರವನ್ನು ಪಡೆದವನೂ ಆದ ಅಸುರನಿದ್ದನು. ಸಮುದ್ರದ ನಡುವೆ ರತ್ನಗಳಿಂದ

ಸಮುದ್ರಮಧ್ಯೇ ರತ್ನಾಢ್ಯಂ ಪುರಮಸ್ತಿ ಮಹಾವನಂ ।
ತತ್ರ ರಾಜಾ ಸ ದೈತ್ಯೇಂದ್ರಃ ಸರ್ವದೇವಭಯಂಕರಃ ॥ ೪ ॥

ಅನೇಕಶತಸಾಹಸ್ರಕೋಟಿಕೋಟ್ಯುತ್ತರೋತ್ತರೈಃ ।
ಅಸುರೈರನ್ವಿತಃ ಶ್ರೀಮಾನ್ ದ್ವಿತೀಯೋ ನಮುಚಿರ್ಯಥಾ ॥ ೫ ॥

ಕಾಲೇನ ಮಹತಾ ಚಾಸೌ ಲೋಕಪಾಲಪುರಾಣ್ಯಥ ।
ಜಿಗೀಷುಃ ಸೈನ್ಯಸಂವೀತೋ ದೇವೈರ್ಯುದ್ಧಮರೋಚಯತ್ ॥ ೬ ॥

ಉತ್ತಿಷ್ಠತಸ್ತಸ್ಯ ಮಹಾಸುರಸ್ಯ
ಸಮುದ್ರತೋಯಂ ವವೃಧೇತಿಮಾತ್ರಂ ।
ಅನೇಕನಕ್ರಗ್ರಹಮೀನಜುಷ್ಟ
ಮಾಪ್ಲಾವಯುತ್ಪರ್ವತಸಾನುದೇಶಾನ್ ॥ ೭ ॥

ತುಂಬಿ, ಮಹಾವನಗಳಿಂದ ಕೂಡಿದ ಪಟ್ಟಣದಲ್ಲಿ ಆ ರಾಕ್ಷಸೇಶನು ದೊರೆಯಾಗಿ ಅನೇಕ ಕೋಟಿ ರಾಕ್ಷಸರೊಡಗೂಡಿ, ಶ್ರೀಮಂತನಾಗಿ ಎರಡನೆಯ ನಮುಚಿಯಂತೆ ದೇವತೆಗಳೆಲ್ಲರಿಗೂ ಭಯಂಕರನಾಗಿದ್ದನು.

೬. ಬಹುಕಾಲದಮೇಲೆ ಆ ರುರುರಾಜನು ಲೋಕಪಾಲಕರ ಪುರಗಳನ್ನು ಗೆಲ್ಲಬೇಕೆಂದು, ಸೇನಾಸಮೇತನಾಗಿ ದೇವತೆಗಳೊಡನೆ ಯುದ್ಧಮಾಡಲು ಬಯಸಿದನು

೭. ಆ ಮಹಾಸುರನು ಯುದ್ಧಕ್ಕಾಗಿ ಏಳಲು ಅನೇಕ ಮೊಸಳೆ ಮೀನು ಮೊದಲಾದುವುಗಳಿಂದ ಕೂಡಿದ ಸಮುದ್ರದ ನೀರು ಅತಿಯಾಗಿ ಉಕ್ಕಿತು. ಪರ್ವತದ ತಪ್ಪಲು ಪ್ರದೇಶಗಳನ್ನು ಮುಳುಗಿಸಿತು.

ಅಂತಸ್ಥಿತಾನೇಕಸುರಾರಿಸಂಘಾ
ದ್ವಿಚಿತ್ರವರ್ಮಾಯುಧಚಿತ್ರಶೋಭಂ ।
ಭೀಮಂ ಬಲಂ ವರ್ಮಿತಚಾರುಯೋಧಂ
ವಿನಿರ್ಯಯೌ ಸಿಂಧುಜಲಾದ್ವಿಶಾಲಾತ್ ॥ ೮ ॥

ತತ್ರ ದ್ವಿಪಾ ದೈತ್ಯವರೈರುಪೇತಾಃ
ಸಮಾನಘಂಟಾಯುಯುತಕಿಂಕಿಣೀಕಾಃ ।
ವಿನಿರ್ಯಯುಃ ಸ್ವಾಕೃತಿಭೀಷಣಾಶ್ಚ
ಸಮತ್ವಮುಚ್ಚೈಃ ಖಲು ದರ್ಶಯಂತಃ ॥ ೯ ॥

ಅಶ್ವಾಸ್ತಥಾ ಕಾಂಚನಪೀತನದ್ಧಾಃ
ರೋಹೈಸ್ತು ಯುಕ್ತಾ ಸಿತಚಾಮರೈಶ್ಚ ।
ವ್ಯವಸ್ಥಿತಾ ತೇ ಸಮಮೇವ ತೂರ್ಣಂ
ವಿನಿರ್ಯಯುರ್ಲಕ್ಷಶಃ ಕೋಟಿಶಶ್ಚ ॥ ೧೦ ॥

---

೮. ಒಳಗಿದ್ದ ಅನೇಕ ರಾಕ್ಷಸಸಮೂಹದಿಂದ ವಿಚಿತ್ರವಾದ ಕವಚಗಳನ್ನೂ, ಆಯುದಗಳನ್ನೂ ಧರಿಸಿ ಸೊಗಸುವ ಯೋಧರಿಂದ ಕೂಡಿದ ಭಯಂಕರವಾದ ಸೇನೆಯು ವಿಶಾಲವಾದ ಸಮುದ್ರದ ನೀರಿನಿಂದ ಹೊರಕ್ಕೆ ಬಂದಿತು.

೯. ಆ ಸೇನೆಯಲ್ಲಿ, ತಮಗೆ ತಕ್ಕ ಘಂಟೆಗಳಿಂದಲೂ, ಕಿರುಗಂಟೆಗಳಿಂದಲೂ, ಕೂಡಿ ರಾಕ್ಷಸೋತ್ತಮರನ್ನೇರಿಸಿಕೊಂಡು, ಆನೆಗಳು ತಮ್ಮ ರೂಪದ ಭಯಂಕರತೆಯಿಂದ ಅವರಿಗೆ ಪೂರ್ಣಸಮಾನತೆಯನ್ನು ಪ್ರಕಟಿಸುತ್ತ ಹೊರಟವು.

೧೦. ಹಾಗೆಯೇ, ಚಿನ್ನದ ಜೀನುಗಳನ್ನು ಹಾಕಿ, ಸವಾರರೇರಿರುವ, ಬಿಳಿಯ ಚಾಮರಗಳಿಂದಲಂಕೃತಗಳಾದ ಕುದುರೆಗಳು ಬೇಗನೆ ಒಟ್ಟಾಗಿ ಲಕ್ಷ ಕೋಟಿಸಂಖ್ಯೆಯಲ್ಲಿ ಹೊರಟುವು.

ರಥಾ ರವಿಸ್ಯಂದನತುಲ್ಯವೇಗಾಃ
ಸುಚಕ್ರದಂಡಾಕ್ಷತ್ರಿವೇಣು ಯುಕ್ತಾಃ ।
ಸುಶಸ್ತ್ರಯಂತ್ರಾಃ ಪರಿಪೀಡಿತಾಂಗಾ
ಶ್ಚಲತ್ಯನಂತಾಸ್ತ್ವರಿತಂ ವಿಶಕ್ತಾಃ ॥ ೧೧ ॥

ತಥೈವ ಯೋಧಾಃ ಸ್ಥಗಿತೇತರೇತರಾಃ
ತಿತೀರ್ಷವೋ ಯೇ ವರತೂಣಪಾಣಯಃ ।
ಪದೇ ಪದೇ ಲಬ್ಧಜಯಾಃ ಪ್ರಹಾರಿಣೋ
ವಿರೇಜುರುಚ್ಚೈರಸುರಾನುಗಾ ಭೃಶಂ ॥ ೧೨ ॥

ದೇವೇಷು ಚೈವ ಭಗ್ನೇಷು ವಿನಿರ್ಗತ್ಯ ಜಲಾತ್ತತಃ ।
ಚತುರಂಗಬಲೋಪೇತಃ ಪ್ರಾಯಾದಿಂದ್ರಪುರಂ ಪ್ರತಿ ॥ ೧೩ ॥

ಯುಯೋಧ ಚ ಸುರೈಃ ಸಾರ್ಧಂ ರುರುರ್ದೈತ್ಯಪತಿಸ್ತಥಾ ॥ ೧೪ ॥

---

೧೧. ಒಳ್ಳೆಯ ಚಕ್ರದಂಡ, ಅಚ್ಚು, ಮೂಕಿ ಇವುಗಳುಳ್ಳವಾಗಿ ಭದ್ರವಾಗಿ, ಸೂರ್ಯನ ರಥದಂತೆ ವೇಗವುಳ್ಳವುಗಳಾದ ರಥಗಳು ಒಳ್ಳೆಯ ಶಸ್ತ್ರ ಯಂತ್ರಗಳಿಂದ ಕೂಡಿದವುಗಳಾಗಿ, ಅದಿರುತ್ತ, ಲೆಕ್ಕವಿಲ್ಲದಷ್ಟು ಹೊರಟುವು.

೧೨. ಅಲ್ಲದೆ ಜಯಿಸಲು ಕುತೂಹಲವುಳ್ಳವರೂ, ಹಿಂದೆ ಹಲವುಸಾರಿ ಜಯವನ್ನು ಪಡೆದವರೂ ಆದ ಕಾಲಾಳುಗಳೂ, ಉತ್ತಮವಾದ ಬಾಣ ಬತ್ತಳಿಕೆಗಳನ್ನು ಹಿಡಿದು ಹೊಡೆಯಲು ಒಬ್ಬರನ್ನೊಬ್ಬರು ತಳ್ಳುತ್ತ ರಾಕ್ಷಸನನ್ನನುಸರಿಸುವ ಬಹು ಜನರು ಹೆಚ್ಚಾಗಿ ಹೊಳೆಯುತ್ತಿದ್ದರು.

೧೩. ರುರುರಾಕ್ಷಸನು ನೀರಿನಿಂದ ಹೊರಕ್ಕೆ ಬಂದು ದೇವತೆಗಳು ತನ್ನಿಂದ ಭಂಗಹೊಂದಲು, ಬಳಿಕ ಚತುರಂಗಬಲದೊಡನೆ ಅಮರಾವತಿಯ ಮೇಲೆ ಹೊರಟನು.

೧೪. ಆ ರುರುರಾಕ್ಷಸೇಂದ್ರನು ದೇವತೆಗಳೊಡನೆ ಯುದ್ಧಮಾಡಿದನು.

ಮುದ್ಗರೈರ್ಮುಸಲೈರ್ಘೋರೈಃ ಶರೈರ್ದಂಡಾಯುಧೈಸ್ತಥಾ ।
ಜಘ್ನುರ್ದೈತ್ಯಾಃ ಸುರಾನ್ಸಂಖ್ಯೇ ಸುರಾಶ್ಚೈವ ತಥಾಸುರಾನ್ ॥ ೧೫ ॥

ಏವಂ ಕ್ಷಣಮಥೋ ಯುದ್ಧ್ವಾ ತದಾ ದೇವಾಸ್ಸವಾಸವಾಃ ।
ಅಸುರೈರ್ನಿರ್ಜಿತಾಸ್ಸದ್ಯೋ ದುದ್ರುವುರ್ವಿಮುಖಾ ಭೃಶಂ ॥ ೧೬ ॥

ದೇವೇಷು ಚೈವ ಭಗ್ನೇಷು ವಿದ್ರುತೇಷು ವಿಶೇಷತಃ ।
ಅಸುರಃ ಸರ್ವದೇವಾನಾಮನ್ವಧಾವತ ವೀರ್ಯವಾನ್ ॥ ೧೭ ॥

ತತೋ ದೇವಗಣಾಸ್ಸರ್ವೇ ದ್ರವಂತೋ ಭಯವಿಹ್ವಲಾಃ ।
ನೀಲಂ ಗಿರಿವರಂ ಜಗ್ಮುರ್ಯತ್ರ ದೇವೀ ವ್ಯವಸ್ಥಿತಾ ॥ ೧೮ ॥

ರೌದ್ರೀ ತಪೋರತಾ ದೇವೀ ತಾಮಸೀ ಶಕ್ತಿರುತ್ತಮಾ ।
ಸಂಹಾರಕಾರಿಣೀ ದೇವೀ ಕಾಲರಾತ್ರೀತಿ ತಾಂ ವಿದುಃ ॥ ೧೯ ॥

---

೧೫. ಯುದ್ಧದಲ್ಲಿ ಅಸುರರು ಸುರರನ್ನೂ, ಸುರರು ಅಸುರರನ್ನೂ, ಘೋರವಾದ ಮುದ್ಗರಗಳಿಂದಲೂ, ಒನಕೆಗಳಿಂದಲೂ, ಬಾಣಗಳಿಂದಲೂ, ದೊಣ್ಣೆಗಳಿಂದಲೂ ಹೊಡೆದರು.

೧೬. ಹೀಗೆ ಸ್ವಲ್ಪಕಾಲ ಯುದ್ಧಮಾಡಿ ಬಳಿಕ ಇಂದ್ರನೊಡಗೂಡಿದ ದೇವತೆಗಳು ರಾಕ್ಷಸರಿಂದ ಸೋತು, ಒಡನೆಯೇ ಹಿಮ್ಮೆಟ್ಟಿ ನಿಟ್ಟೋಟ ಓಡಿದರು.

೧೭. ದೇವತೆಗಳು ಪರಾಜಿತರಾಗಿ ವೇಗದಿಂದೋಡಲಾಗಿ ವೀರ್ಯವಂತನಾದ ರುರುರಾಕ್ಷಸನು ದೇವತೆಗಳನ್ನು ಹಿಂದಟ್ಟಿ ಓಡಿದನು.

೧೮-೧೯. ಬಳಿಕ ದೇವತೆಗಳ ಗುಂಪಿನವರೆಲ್ಲರೂ ಭಯಪರವಶರಾಗಿ ಓಡುತ್ತ, ಯಾರನ್ನು ಕಾಲರಾತ್ರಿಯೆಂದು ಹೇಳುವರೋ, ಸಂಹಾರಕಾರಿಣಿಯೂ, ತಾಮಸಶಕ್ತಿಯೂ, ಉತ್ತಮಳೂ, ಆದ ಆ ರೌದ್ರೀದೇವಿಯು ತಪಸ್ಸಿನಲ್ಲಿ ನಿರತಳಾಗಿ ನೆಲಸಿದ್ದ ಉತ್ತಮವಾದ ನೀಲಗಿರಿಗೆ ಹೋದರು.

ಸಾ ದೃಷ್ಟ್ವಾ ತಾಂಸ್ತದಾ ದೇವಾನ್ ಭಯತ್ರಸ್ತವಿಚೇತಸಃ ।
ಮಾ ಭೈಷ್ಟೇತ್ಯುಚ್ಚೈರ್ದೇವೀ ತಾನುವಾಚ ಸುರೋತ್ತಮಾನ್ ॥ ೨೦ ॥

॥ ದೇವ್ಯುವಾಚ ॥

ಕಿಮಿಯಂ ವ್ಯಾಕುಲಾ ದೇವಾ ಗತಿರ್ವ ಉಪಲಕ್ಷ್ಯತೇ ।
ಕಥಯಧ್ವಂ ದ್ರುತಂ ದೇವಾಃ ಸರ್ವಥಾ ಭಯಕಾರಣಂ ॥ ೨೧ ॥

॥ ದೇವಾ ಊಚುಃ ॥

ಅಯಮಾಯಾತಿ ದೈತ್ಯೇಂದ್ರೋ ರುರುರ್ಭೀಮಪರಾಕ್ರಮಃ ।
ಏತಸ್ಯ ಭೀತಾನ್ರಕ್ಷಸ್ವ ತ್ವಂ ದೇವಾನ್ಪರಮೇಶ್ವರೀ ॥ ೨೨ ॥

ಏವಮುಕ್ತಾ ತದಾ ದೇವೈರ್ದೇವೀ ಭೀಮಪರಾಕ್ರಮಾ ।
ಜಹಾಸ ಪರಯಾ ಪ್ರೀತ್ಯಾ ದೇವಾನಾಂ ಪುರತಃ ಶುಭಾ ॥ ೨೩ ॥

---

೨೦. ಆ ದೇವಿಯು, ಭಯದಿಂದ ನಡುಗುವ ಮನದ ಆ ದೇವತೆಗಳನ್ನು ನೋಡಿ, ಸುರೋತ್ತಮರಾದ ಅವರಿಗೆ 'ಹೆದರಬೇಡಿ' ಎಂದು ಗಟ್ಟಿಯಾಗಿ ಹೇಳಿದಳು.

೨೧. ದೇವಿ—ದೇವತೆಗಳೇ, ಇದೇನು! ನಿಮ್ಮ ಗತಿಯು ವ್ಯಾಕುಲವಾಗಿ ಕಾಣುತ್ತದೆ. ದೇವತೆಗಳೇ, ನಿಮ್ಮ ಭಯಕ್ಕೆ ಕಾರಣವನ್ನು ನಿಜವಾಗಿ ಬೇಗನೆ ಹೇಳಿರಿ.

೨೨. ದೇವತೆಗಳು—ಪರಮೇಶ್ವರಿ, ಭಯಂಕರವಾದ ಪರಾಕ್ರಮವುಳ್ಳ ರುರುವೆಂಬ ಆ ರಾಕ್ಷಸೇಂದ್ರನು ಇದೋ ಬರುತ್ತಾನೆ. ಅವನಿಂದ ಹೆದರಿದ ನಮ್ಮನ್ನು ನೀನು ರಕ್ಷಿಸು.

೨೩. ದೇವತೆಗಳಿಂದ ಹೀಗೆ ಪ್ರಾರ್ಥಿತಳಾದ ಘೋರಪರಾಕ್ರಮವುಳ್ಳ ಶುಭೆಯಾದ ದೇವಿಯು ದೇವತೆಗಳೆದುರಿಗೇ, ಹೆಚ್ಚಾದ ಸಂತೋಷದಿಂದ ನಕ್ಕಳು.

ತಸ್ಯಾ ಹಸಂತ್ಯಾ ವಕ್ತ್ರಾತ್ತು ಬಹ್ವ್ಯೋ ದೇವ್ಯೋ ವಿನಿರ್ಯಯುಃ ।
ಯಾಭಿರ್ವಿಶ್ವಮಿದಂ ವ್ಯಾಪ್ತಂ ವಿಕೃತಾಭಿರನೇಕಶಃ ॥ ೨೪ ॥

ಪಾಶಾಂಕುಶಧರಾಸ್ಸರ್ವಾಃ ಸರ್ವಾಃ ಪೀನಪಯೋಧರಾಃ ।
ಸರ್ವಾಃ ಶೂಲಧರಾ ಭೀಮಾಃ ಸರ್ವಾಶ್ಚಾಪಧರಾಶ್ಶುಭಾಃ
ತಾಃ ಸರ್ವಾಃ ಕೋಟಿಶೋ ದೇವ್ಯಸ್ತಾಂ ದೇವೀಂ ವೇಷ್ಟ್ಯ ಸಂಸ್ಥಿತಾಃ
॥ ೨೫ ॥

ಯುಯುಧುರ್ದಾನವೈಃ ಸಾರ್ಧಂ ಬದ್ಧತೂಣಾ ಮಹಾಬಲಾಃ ।
ಕ್ಷಣೇನ ದಾನವಬಲಂ ತತ್ಸರ್ವಂ ನಿಹತಂ ತು ತೈಃ. ॥ ೨೬ ॥

ದೇವಾಶ್ಚ ಸರ್ವೇ ಸಂಪನ್ನಾ ಯುಯುಧುರ್ದಾನವಂ ಬಲಂ ॥ ೨೭ ॥

---

೨೪. ನಗುತ್ತಿದ್ದ ಆ ದೇವಿಯ ಬಾಯಿಂದ,ಹಲವು ಬಗೆಯಾಗಿ ವಿಕಾರವುಳ್ಳವರಾಗಿ ಈ ಪ್ರಪಂಚವನ್ನೇ ವ್ಯಾಪಿಸಿದ ಬಹಳ ಜನ ದೇವಿಯರು ಹೊರಟರು.

೨೫. ಅವರೆಲ್ಲರೂ ಪಾಶಾಂಕುಶ ಧರರು. ದೊಡ್ಡದಾದ ಸ್ತನಗಳುಳ್ಳವರು ಶೂಲಗಳನ್ನೂ ಹಿಡಿದಿರುವರು, ಎಲ್ಲರೂ ಭಯಂಕರರು, ಬಿಲ್ಲುಗಳನ್ನೂ ಹಿಡಿದವರು, ಶುಭಕರರು, ಕೋಟಿಸಂಖ್ಯೆಯಲ್ಲಿ ಅವರೆಲ್ಲರೂ ಆ ದೇವಿಯನ್ನು ಬಳಸಿ ನಿಂತರು.

೨೬. ಮಹಾಬಲಶಾಲಿನಿಯರಾದ ಅವರು ಬಾಣಬತ್ತಳಿಕೆಗಳನ್ನು ಧರಿಸಿದವರಾಗಿ ರಾಕ್ಷಸರೊಡನೆ ಯುದ್ಧಮಾಡಿದರು. ಕ್ಷಣಕಾಲದಲ್ಲಿ ಆ ರಾಕ್ಷಸ ಸೈನ್ಯವೆಲ್ಲವೂ ಅವರಿಂದ ಹತವಾಯಿತು.

೨೭. ದೇವತೆಗಳೆಲ್ಲರೂ ಆ ದೇವಿಯರೊಡನೆ ಸೇರಿ ರಾಕ್ಷಸಸೇನೆಯಮೇಲೆ ಯುದ್ಧಮಾಡಿದರು.

ಕಾಲರಾತ್ರ್ಯಾ ಬಲಂ ಚೈವ ಯಚ್ಚ ದೇವಬಲಂ ಮಹತ್ ।
ತತ್ಸರ್ವಂ ದಾನವಬಲಂ ಅನಯದ್ಯಮಸಾದನಂ ॥
ಏಕ ಏವ ಮಹಾದೈತ್ಯೋ ರುರುಸ್ತತ್ರಾಸ್ಥಿ ಮಹಾಮೃಧೇ ॥ ೨೮ ॥

ಸ ಚ ಮಾಯಾಂ ಮಹಾರೌದ್ರೀಂ ರೌರವೀಂ ವಿಸಸರ್ಜ ಹ ।
ಸಾ ಮಾಯಾ ವವೃಧೇ ಭೀಮಾ ಸರ್ವದೇವಪ್ರಮೋಹಿನೀ ॥ ೨೯ ॥

ತಯಾ ವಿಮೋಹಿತಾ ದೇವಾಃ ಸರ್ವೇ ನಿದ್ರಾಂ ತು ಲೇಭಿರೇ ।
ದೇವೀ ಚ ತ್ರಿಶಿಖೇನಾಜೌ ತಂ ದೈತ್ಯಂ ಸಮತಾಡಯತ್ ॥ ೩೦ ॥

ತಯಾ ತು ತಾಡಿತಸ್ಯಾಸ್ಯ ದೈತ್ಯಸ್ಯ ಶುಭಲೋಚನೇ ।
ಚರ್ಮಮುಂಡೇ ಉಭೇ ಸಮ್ಯಕ್ ಪೃಥಗ್ಭೂತೇ ಬಭೂವತುಃ ॥ ೩೧ ॥

---

೨೮. ಕಾಲರಾತ್ರಿಯ ಸೈನ್ಯವೂ ದೊಡ್ಡದಾದ ದೇವಸೇನೆಯೂ ಆ ರಾಕ್ಷಸ ಸೈನ್ಯವೆಲ್ಲವನ್ನೂ ಯಮಗೃಹಕ್ಕೆ ಕಳುಹಿಸಿತು. ಆ ಮಹಾಯುದ್ಧದಲ್ಲಿ ರುರು ದೈತ್ಯನೊಬ್ಬನೇ ಉಳಿದನು.

೨೯. ಅವನು ಬಹು ಭಯಂಕರವಾದ ರೌರವಿಯೆಂಬ ಮಾಯೆಯನ್ನು ಬೀರಿದನು. ಆ ಭಯಂಕರವಾದ ಮಾಯೆಯು ದೇವತೆಗಳೆಲ್ಲರಿಗೂ ಅಜ್ಞಾನವನ್ನುಂಟುಮಾಡುತ್ತಾ ಹರಡಿತು.

೩೦. ಅದರಿಂದ ಮೋಹಿತರಾದ ದೇವತೆಗಳೆಲ್ಲರೂ ನಿದ್ದೆಗೊಳಗಾದರು. ರೌದ್ರೀದೇವಿಯು ತ್ರಿಶೂಲದಿಂದ ಯುದ್ಧದಲ್ಲಿ ಆ ರುರುದೈತ್ಯನನ್ನು ಚೆನ್ನಾಗಿ ಹೊಡೆದಳು.

೩೧. ಅವಳಿಂದೇಟು ತಿಂದ ಆ ರುರುರಾಕ್ಷಸನ ತೊಗಲೂ, ಬೋಳು ತಲೆಯೂ ಎರಡೂ ಪೂರ್ತಿಯಾಗಿ ಬೇರೆಯಾದವು.

ರುರೋಸ್ತು ದಾನವೇಂದ್ರಸ್ಯ ಚರ್ಮಮುಂಡೇ ಕ್ಷಣಾದ್ಯತಃ ।
ಅಪಹೃತ್ಯಾಹರದ್ದೇವೀ ಚಾಮುಂಡಾ ತೇನ ಸಾಭವತ್ || ೩೨ ||

ಸರ್ವಭೂತಮಹಾರೌದ್ರೀ ಯಾ ದೇವೀ ಪರಮೇಶ್ವರೀ ।
ಸಂಹಾರಿಣೀ ತು ಯಾ ಚೈವ ಕಾಲರಾತ್ರಿಃ ಪ್ರಕೀರ್ತಿತಾ ॥
ತಸ್ಯಾ ಹ್ಯನುಚರಾ ದೇವ್ಯಃ ಬಾಹ್ಯಸಂಖ್ಯಾತಕೋಟಿಯಃ || ೩೩ ||

ತಾಸ್ತಾಂ ದೇವೀಂ ಮಹಾಭಾಗಾಂ ಪರಿವಾರ್ಯ ವ್ಯವಸ್ಥಿತಾಃ || ೩೪ ||

ಯಾಚಯಾಮಾಸುರವ್ಯಗ್ರಾಸ್ತಾಸ್ತಾಂ ದೇವೀಂ ಬುಭುಕ್ಷಿತಾಃ ।
ವಯಂ ದೇವಿ ಕ್ಷುಧಾರ್ತಾಃ ಸ್ಮಃ ದೇಹಿನೋ ಭೋಜನಂ ಶುಭೇ ॥ ೩೫ ॥

ಏವಮುಕ್ತಾ ತದಾ ದೇವೀ ದಧ್ಯೌ ತಾಸಾಂ ತು ಭೋಜನಂ ।
ನ ಚಾಧ್ಯಗಚ್ಛಚ್ಚ ಯದಾ ತಾಸಾಂ ಭೋಜನಮಂತಿಕಾತ್ ॥
ತತೋ ದಧ್ಯೌ ಮಹಾದೇವಂ ರುದ್ರಂ ಪಶುಪತಿಂ ವಿಭುಂ || ೩೬ ||

---

೩೨. ರುರುರಾಕ್ಷಸೇಂದ್ರನ ಚರ್ಮ ಮುಂಡ (ಬೋಳುದಲೆ) ಗಳನ್ನು ದೇವಿಯು ಕ್ಷಣಮಾತ್ರದಲ್ಲಿ ಬೇರ್ಪಡಿಸಿ, ಹಾಳುಮಾಡಿದುದರಿಂದ ಅವಳು ಚಾಮುಂಡಾ ಎನಿಸಿಕೊಂಡಳು.

೩೩. ಸರ್ವಭೂತಮಹಾರೌದ್ರಿಯೂ, ಪರಮೇಶ್ವರಿಯೂ, ಸಂಹಾರಿಣಿಯೂ, ಕಾಲರಾತ್ರಿಯೂ, ಆದ ಆ ದೇವಿಯ ಅನುಚರಿಯರಾದ ದೇವಿಯರು ಕೋಟಿ ಲೆಕ್ಕಕ್ಕೂ ಮೀರಿದವರು.

೩೪. ಅವರು ಪೂಜ್ಯೆಯಾದ ಆ ದೇವಿಯನ್ನು ಬಳಸಿ ನಿಂತರು.

೩೫. ಎಲ್ಲರೂ ಹಸಿವುಳ್ಳವರಾಗಿ "ದೇವಿ, ನಾವು ಹಸಿವಿನಿಂದ ಪೀಡಿತರಾಗಿದ್ದೇವೆ. ಶುಭೇ, ನಮಗೆ ಊಟಕ್ಕೆ ಕೊಡು" ಎಂದು ಆ ದೇವಿಯನ್ನು ಎಚ್ಚರಿಕೆಯಿಂದ ಕೇಳಿದರು.

೩೬. ಹೀಗೆ ಕೇಳಿಸಿಕೊಂಡ ದೇವಿಯು ಅವರಿಗೆ ಊಟಕ್ಕಾಗಿ ಚಿಂತಿಸಿ, ಕೂಡಲೇ ಏನನ್ನೂ ಪಡೆಯದೆ ಬಳಿಕ ವಿಭುವೂ, ಪಶುಪತಿಯೂ, ಮಹಾದೇವನೂ ಆದ ರುದ್ರನನ್ನು ಧ್ಯಾನಿಸಿದಳು.

ಸೋಽಪಿ ಧ್ಯಾನಾತ್ಸಮುತ್ತಸ್ಥೌ ಪರಮಾತ್ಮಾ ತ್ರಿಲೋಚನಃ ॥ ೩೭ ॥

ಉವಾಚ ಚ ದ್ರುತಂ ದೇವೀಂ ಕಿಂ ತೇ ಕಾರ್ಯಂ ವಿವಕ್ಷಿತಂ ।
ಬ್ರೂಹಿ ದೇವಿ ವರಾರೋಹೇ ಯತ್ತೇ ಮನಸಿ ವರ್ತತೇ ॥ ೩೮ ॥

॥ ದೇವ್ಯುವಾಚ ॥

ಭಕ್ಷ್ಯಾರ್ಥಮಾಸಾಂ ದೇವೇಶ ಕಿಂಚಿದ್ದಾತುಮಿಹಾರ್ಹಸಿ ।
ಬಲಾತ್ಕುರ್ವಂತಿ ಮಾಮೇತಾ ಭಕ್ಷಾರ್ಥಿನ್ಯೋ ಮಹಾಬಲಾಃ ॥
ಅನ್ಯಥಾ ಮಾಮಪಿ ಬಲಾತ್ ಭಕ್ಷಯಿಷ್ಯಂತಿ ತಾಃ ಪ್ರಭೋ ॥ ೩೯ ॥

॥ ರುದ್ರ ಉವಾಚ ॥

ಏತಾಸಾಂ ಶೃಣು ದೇವೇಶಿ ಭಕ್ಷ್ಯಮೇಕಂ ಮಯೋದಿತಂ ।
ಕಥ್ಯಮಾನಂ ವರಾರೋಹೇ ಕಾಲರಾತ್ರೇ ಮಹಾಪ್ರಭೇ ॥ ೪೦ ॥

---

೩೭. ಪರಮಾತ್ಮನೂ, ತ್ರಿಲೋಚನನೂ ಆದ ರುದ್ರನು ಸ್ಮರಣೆಯಿಂದ ಪ್ರತ್ಯಕ್ಷನಾದನು.

೩೮. ಅವನು ಬೇಗನೇ ದೇವಿಯನ್ನು ಕುರಿತು "ವರಾರೋಹೇ, ದೇವಿ, ನೀನು ಹೇಳಬೇಕಾದ ಕೆಲಸವೇನು? ನಿನ್ನ ಮನಸ್ಸಿನಲ್ಲಿರುವುದನ್ನು ಹೇಳು" ಎಂದನು.

೩೯ ದೇವಿ—ಪ್ರಭುವೇ, ಭೋಜನಾರ್ಥಿಗಳಾದ ಈ ದೇವಿಯರು ನನ್ನನ್ನು ಬಲಾತ್ಕರಿಸುತ್ತಾರೆ. ಇವರಿಗೆ ಊಟಕ್ಕೆ ಏನನ್ನಾದರೂ ನೀನು ಕೊಡಬೇಕಾಗಿದೆ. ಇಲ್ಲವಾದರೆ ಮಹಾಬಲಶಾಲಿನಿಯರಾದ ಇವರು ನನ್ನನ್ನೂ ಬಲವಂತದಿಂದ ತಿಂದುಬಿಡುವರು.

೪೦. ರುದ್ರ—ದೇವೇಶಿ, ಕಾಲರಾತ್ರಿ, ವರಾರೋಹೇ, ಮಹಾಪ್ರಭೇ, ಇವರಿಗೆ ನಾನು ಹೇಳುವ ಆಹಾರವನ್ನು ಕೇಳು.

ಯಾ ಸ್ತ್ರೀ ಸಗರ್ಭಾ ದೇವೇಶಿ ತ್ವನ್ಯಸ್ತ್ರೀಪರಿಧಾನಕಂ ।
ಪರಿಧತ್ತೇ ಸ್ಪೃಶೇಚ್ಚಾಪಿ ಪುರುಷಸ್ಯ ವಿಶೇಷತಃ ॥ ೪೧ ॥

ಸ ಭಾಗೋಽಸ್ತು ಮಹಾಭಾಗೋ ಕಾಸಾಂಚಿತ್ ಪೃಥಿವೀತಲೇ ॥ ೪೨ ॥

ಅನ್ಯಾಶ್ಛಿದ್ರೇಷು ನಾಽಜ್ಞಾನಾಂ ಗೃಹೀತ್ವಾ ತತ್ರ ವೈ ಬಲಿಂ ।
ಲಬ್ಧ್ವಾ ಭವಂತು ಸುಪ್ರೀತಾ ಅಪಿ ವರ್ಷಶತಾನ್ಯಪಿ ॥ ೪೩ ॥

ಅನ್ಯಾಃ ಸೂತಿಗೃಹೇ ಛಿದ್ರಂ ಗೃಹ್ಣೀಯುಸ್ತತ್ರಪೂಜಿತಾಃ ।
ನಿವಸಿಷ್ಯಂತಿ ದೇವೇಶಿ ತಥಾನ್ಯಾ ಜಾತಹಾರಿಕಾಃ ॥ ೪೪ ॥

ಗೃಹೇ ಕ್ಷೇತ್ರೇ ತಟಾಕೇಷು ವಾಪ್ಯುದ್ಯಾನೇಷು ಚೈವ ಹಿ ।
ಅನ್ಯಚಿತ್ತಾ ರುದಂತ್ಯೋ ಯಾಃ ಸ್ತ್ರಿಯಸ್ತಿಷ್ಠಂತಿ ನಿತ್ಯಶಃ ॥ ೪೫ ॥

ತಾಸಾಂ ಶರೀರಾಣ್ಯಾವಿಶ್ಯ ಕಾಂಚಿತ್ತೃಪ್ತಿಮವಾಪ್ಸ್ಯಥ ॥ ೪೬ ॥

೪೧-೪೨. ಭೂತಲದಲ್ಲಿ ಗರ್ಭಿಣಿಯಾದ ಯಾವ ಸ್ತ್ರೀಯು ಬೇರೆ ಹೆಂಗಸು ಉಟ್ಟ ಬಟ್ಟೆಯನ್ನು ಉಡುವಳೋ, ಅನ್ಯಪುರುಷನ ಉಡುಪನ್ನು ಮುಟ್ಟುವಳೋ ಆಕೆಯ ಗರ್ಭವು ಈ ಪರಿವಾರ ದೇವಿಯರಲ್ಲಿ ಕೆಲವರಿಗೆ ಉತ್ತಮ ವಾದ ಆಹಾರಭಾಗವಾಗಲಿ.

೪೩. ಇತರರು ಕೆಲವರು ಅಜ್ಞರ ಕಲಹಗಳಲ್ಲಿ ಬಲಿಯನ್ನು ತೆಗೆದು ಕೊಂಡು ಭುಜಿಸಿ ನೂರಾರುವರ್ಷಕಾಲ ತೃಪ್ತರಾಗಿರಲಿ.

೪೪. ಮತ್ತೆ ಕೆಲವರು ಹೆರಿಗೆಯ ಮನೆಯಲ್ಲಿ ಪೂಜಿತರಾಗಿ, ಸಮಯು ವನ್ನು ಕಾಯುತ್ತಿದ್ದು ಹುಟ್ಟಿದ ಮಗುವನ್ನು ಅಪಹರಿಸುವರಾಗಲಿ.

೪೫-೪೬. ಇನ್ನೂ ಕೆಲವರು ಮನೆ, ಹೊಲ, ಗದ್ದೆ, ಕೆರೆ, ಬಾವಿ, ತೋಪುಗಳಲ್ಲಿ ನಿತ್ಯವೂ ಅನ್ಯಚಿತ್ತರಾಗಿ ಅಳುತ್ತಿರುವ ಹೆಂಗಸರ ದೇಹವನ್ನು ಪ್ರವೇಶಿಸಿ ತೃಪ್ತಿಯನ್ನು ಪಡೆಯಲಿ.

ಏವಮುಕ್ತ್ವಾ ತದಾ ದೇವೀಂ ಸ್ವಯಂ ರುದ್ರಃ ಪ್ರತಾಪವಾನ್ ।
ದೃಷ್ಟ್ವಾ ರುರುಂ ಚ ಸಬಲಮಸುರೇಂದ್ರಂ ನಿಪಾತಿತಂ ॥
ಸ್ತುತಿಂ ಚಕಾರ ಭಗವಾನ್ ಸ್ವಯಂ ದೇವಸ್ತ್ರಿಲೋಚನಃ ॥ ೪೭ ॥

॥ ರುದ್ರ ಉವಾಚ ॥

ಜಯಸ್ವ ದೇವಿ ಚಾಮುಂಡೇ ಜಯಭೂತಾಪಹಾರಿಣಿ ।
ಜಯ ಸರ್ವಗತೇ ದೇವಿ ಕಾಲರಾತ್ರೇ ನಮೋಽಸ್ತು ತೇ ॥ ೪೮ ॥

ವಿಶ್ವಮೂರ್ತೇ ಶುಭೇ ಶುದ್ಧೇ ವಿರೂಪಾಕ್ಷಿ ತ್ರಿಲೋಚನೇ ।
ಭೀಮರೂಪೇ ಶಿವೇ ವೇದ್ಯೇ ಮಹಾಮಾಯೇ ಮಹೋದಯೇ ॥ ೪೯ ॥

ಮನೋಜವೇ ಜಯೇ ಜೃಂಭೇ ಭೀಮಾಕ್ಷಿ ಕ್ಷುಭಿತಕ್ಷಯೇ ।
ಮಹಾಮಾರಿ ವಿಚಿತ್ರಾಂಗೇ ಜಯ ನೃತ್ಯಪ್ರಿಯೇ ಶುಭೇ ॥ ೫೦ ॥

---

೪೭. ಹೀಗೆಂಬುದಾಗಿ ದೇವಿಗೆ ಹೇಳಿ, ತ್ರಿನೇತ್ರನೂ, ಪ್ರತಾಪಶಾಲಿಯೂ ಭಗವಂತನೂ ಆದ ರುದ್ರದೇವನು, ಸೇನಾಸಮೇತನಾಗಿ ಅವಳಿಂದ ಹತನಾಗಿ ಬಿದ್ದಿದ್ದ ರಾಕ್ಷಸೇಂದ್ರನಾದ ರುರುವನ್ನೂ ನೋಡಿ, ದೇವಿಯನ್ನು ಸ್ತುತಿಸಿದನು.

೪೮. ರುದ್ರ—ದೇವಿ, ಚಾಮುಂಡಿ, ಭೂತಾಪಹಾರಿಣಿ, ಸರ್ವಗತೇ, ದೇವಿ, ಕಾಲರಾತ್ರೀ, ನಿನಗೆ ಜಯವಾಗಲಿ. ನಿನಗೆ ನಮಸ್ಕರಿಸುತ್ತೇನೆ.

೪೯. ವಿಶ್ವಮೂರ್ತೇ, ಶುಭೇ, ಶುದ್ಧೇ, ವಿರೂಪಾಕ್ಷಿ, ತ್ರಿಲೋಚನೇ, ಭೀಮರೂಪೇ, ಶಿವೇ, ವೇದ್ಯೇ, ಮಹಾಮಾಯೇ, ಮಹೋದಯೇ, ನಿನಗೆ ಜಯವಾಗಲಿ.

೫೦. ಮನೋವೇಗೆ, ಜಯೇ, ದೀಪ್ತೇ, ಭೀಮಾಕ್ಷಿ, ಕ್ಷಯಕಾರಿಣೀ, ಮಹಾಮಾರಿ, ವಿಚಿತ್ರಾಂಗಿ, ನರ್ತನಪ್ರಿಯೆ, ಮಂಗಳೇ ನಿನಗೆ ಜಯವಾಗಲಿ.

ವಿಕರಾಳೇ ಮಹಾಕಾಳಿ ಕಾಲಿಕೇ ಪಾಪಹಾರಿಣಿ ।
ಪಾಶಹಸ್ತೇ ದಂಡಹಸ್ತೇ ಭೀಮರೂಪೇ ಭಯಾನಕೇ ॥ ೫೧ ॥

ಚಾಮುಂಡೇ ಜ್ವಲಮಾನಾಸ್ಯೇ ತೀಕ್ಷ್ಣದಂಷ್ಟ್ರೇ ಮಹಾಬಲೇ ।
ಶತಯಾನಸ್ಥಿತೇ ದೇವಿ ಪ್ರೇತಾಸನಗತೇ ಶಿವೇ ॥ ೫೨ ॥

ಭೀಮಾಕ್ಷಿ ಭೀಷಣೇ ದೇವಿ ಸರ್ವಭೂತಭಯಂಕರೇ ।
ಕರಾಲೇ ವಿಕರಾಲೇ ಚ ಮಹಾಕಾಲೇ ಕರಾಲಿನಿ ॥ ೫೩ ॥

ಕಾಲೀ ಕರಾಲೀ ವಿಕ್ರಾಂತೇ ಕಾಲರಾತ್ರಿ ನಮೋಽಸ್ತು ತೇ ॥ ೫೪ ॥

ಇತಿ ಸ್ತುತಾ ತದಾ ದೇವೀ ರುದ್ರೇಣ ಪರಮೇಷ್ಠಿನಾ ।
ತುತೋಷ ಪರಮಾ ದೇವೀ ವಾಕ್ಯಂ ಚೇದಮುವಾಚ ಹ ॥
ವರಂ ವೃಣೀಷ್ವ ದೇವೇಶ ಯತ್ತೇ ಮನಸಿ ವರ್ತತೇ ॥ ೫೫ ॥

---

೫೧. ವಿಕರಾಳೇ, ಮಹಾಕಾಳಿ, ಕಾಳಿಕೇ, ಪಾಪಹಾರಿಣೀ, ಪಾಶಹಸ್ತೇ, ದಂಡಹಸ್ತೇ, ಘೋರರೂಪೇ, ಭಯಂಕರೇ ನಿನಗೆ ಜಯವಾಗಲಿ.

೫೨. ಚಾಮುಂಡಿ, ಕಾಂತಿಯುತಮುಖೀ, ತೀಕ್ಷ್ಣದಂಷ್ಟ್ರೇ, ಮಹಾಬಲೇ, ಶತಯಾನಸ್ಥಿತೇ, ದೇವಿ, ಪ್ರೇತಾಸನಗತೇ, ಶಿವೇ, ನಿನಗೆ ನಮಸ್ಕಾರ.

೫೩–೫೪. ಭೀಮಾಕ್ಷಿ, ಭೀಷಣೇ, ದೇವಿ, ಸರ್ವಭೂತಭಯಂಕರೇ, ಕರಾಳೀ, ವಿಕರಾಳೀ, ಮಹಾಕಾಲೇ, ಕರಾಲಿನೀ, ಕಾಳೀ, ವಿಕ್ರಾಂತೇ, ಕಾಲ ರಾತ್ರಿ, ನಿನಗೆ ನಮಸ್ಕಾರ.

೫೫. ಹೀಗೆ ಪರಮೇಷ್ಠಿಯಾದ ರುದ್ರನಿಂದ ಸ್ತುತಳಾದ ಪರಮಾದೇವಿಯು ಸಂತೋಷಪಟ್ಟು, "ದೇವೇಶ, ನಿನ್ನ ಮನಸ್ಸಿನಲ್ಲಿರುವ ವರವನ್ನು ಕೇಳು" ಎಂದು ಹೇಳಿದಳು.

|| ರುದ್ರ ಉವಾಚ ||

ಸ್ತೋತ್ರೇಣಾನೇನ ಯೇ ದೇವಿ ತ್ವಾ ಸ್ತುವಂತಿ ವರಾನನೇ ।
ತೇಷಾಂ ತ್ವಂ ವರದಾ ದೇವಿ ಭವ ಸರ್ವಗತಾ ಸತೀ || ೫೬ ||

ಯಶ್ಚೇಮಂ ತ್ರಿಃ ಪ್ರಕಾರಂ ತು ದೇವಿ ಭಕ್ತ್ಯಾ ಸಮನ್ವಿತಃ ।
ಸ ಪುತ್ರಪೌತ್ರಪಶುಮಾನ್ ಸಮೃದ್ಧಿಮುಪಗಚ್ಛತಿ || ೫೭ ||

ಯಶ್ಚೇಮಂ ಶೃಣುಯಾದ್ಭಕ್ತ್ಯಾ ತ್ರಿಶಕ್ತ್ಯಾಸ್ತು ಸಮುದ್ಭವಂ ।
ಸರ್ವಪಾಪವಿನಿರ್ಮುಕ್ತೋ ಪದಂ ಗಚ್ಛತ್ಯನಾಮಯಂ || ೫೮ ||

ಏವಂ ಸ್ತುತ್ವಾ ಭವೋ ದೇವೀಂ ಚಾಮುಂಡಾಂ ಚ ಸುರೇಶ್ವರೀಂ ।
ಕ್ಷಣಾದಂತರ್ಹಿತೋ ದೇವಸ್ತೇ ಚ ದೇವಾ ದಿವಂ ಯಯುಃ || ೫೯ ||

---

೫೬. ರುದ್ರ—ವರಾನನೇ, ದೇವಿ, ಈ ಸ್ತೋತ್ರದಿಂದ ಯಾರು ನಿನ್ನನ್ನು ಸ್ತುತಿಸುವರೋ ಅವರಿಗೆ ನೀನು ಎಲ್ಲೆಲ್ಲೂ ಇದ್ದುಕೊಂಡು ವರವನ್ನು ಕೊಡುವಳಾಗು.

೫೭. ದೇವಿ, ಯಾರು ಈ ಮೂರು ರೂಪಗಳನ್ನೂ ಭಕ್ತಿಯಿಂದ ಸ್ತುತಿಸುವನೋ ಅವನು ಪುತ್ರಪೌತ್ರರಿಂದಲೂ, ಪಶುಗಳಿಂದಲೂ ಕೂಡಿ ಐಶ್ವರ್ಯವನ್ನು ಪಡೆಯುವನು.

೫೮. ಯಾರು, ಈ ತ್ರಿಶಕ್ತಿಯ ಅವತಾರವನ್ನು ಭಕ್ತಿಯಿಂದ ಕೇಳುವರೋ ಅವರು ಎಲ್ಲಾ ಪಾಪಗಳನ್ನೂ ಕಳೆದುಕೊಂಡು, ವ್ಯಾಧಿರಹಿತವಾದ ಸ್ಥಾನವನ್ನು ಪಡೆಯುವರು.

೫೯. ರುದ್ರನು ಹೀಗೆ, ಸುರೇಶ್ವರಿಯೂ, ಚಾಮುಂಡಿಯೂ ಆದ ದೇವಿಯನ್ನು ಸ್ತುತಿಸಿ, ಕ್ಷಣಮಾತ್ರದಲ್ಲಿ ಕಣ್ಮರೆಯಾದನು. ಆ ದೇವತೆಗಳೂ ಸ್ವರ್ಗಕ್ಕೆ ಹೊರಟುಹೋದರು.

ಯ ಏತಾಂ ವೇದ ವೈ ದೇವ್ಯಾ ಉತ್ಪತ್ತಿಂ ತ್ರಿವಿಧಾಂ ವರಾಂ ।
ಸ ಕರ್ಮಪಾಶನಿರ್ಮುಕ್ತಃ ಪರಂ ನಿರ್ವಾಣಮೃಚ್ಛತಿ ॥ ೬೦ ॥

ಭ್ರಷ್ಟರಾಜ್ಯೋ ಯದಾ ರಾಜಾ ನವಮ್ಯಾಂ ನಿಯತಃ ಶುಚಿಃ ।
ಅಷ್ಟಮ್ಯಾಂ ಚ ಚತುರ್ದಶ್ಯಾಂ ಉಪವಾಸೀ ನರೋತ್ತಮಃ ॥
ಸಂವತ್ಸರೇಣ ಲಭತೇ ರಾಜ್ಯಂ ನಿಷ್ಕಂಟಕಂ ನೃಪಃ ॥ ೬೧ ॥

ಏಷಾ ತ್ರಿಶಕ್ತಿರುದ್ದಿಷ್ಟಾ ನಯಸಿದ್ಧಾಂತಗಾಮಿನೀ ॥ ೬೨ ॥

ಏಷಾ ಶ್ವೇತಾಪರಾಸೃಷ್ಟಿಃ ಸಾತ್ವಿಕೀ ಬ್ರಹ್ಮಸಂಸ್ಥಿತಾ ।
ಏಷೈವ ರಕ್ತಾ ರಜಸಿ ವೈಷ್ಣವೀ ಪರಿಕೀರ್ತಿತಾ ॥
ಏಷೈವ ಕೃಷ್ಣಾ ತಮಸಿ ರೌದ್ರೀ ದೇವೀ ಪ್ರಕೀರ್ತಿತಾ ॥ ೬೩ ॥

ಪರಮಾತ್ಮಾ ಯಥಾ ದೇವಃ ಏಕ ಏವ ತ್ರಿಧಾ ಸ್ಥಿತಃ ।
ಪ್ರಯೋಜನವಶಾಚ್ಛಕ್ತಿರೇಕೈವ ತ್ರಿವಿಧಾಭವತ್ ॥ ೬೪ ॥

---

೬೦. ಯಾರು ದೇವಿಯ ಉತ್ತಮವಾದ ಮೂರು ಅವತಾರಗಳನ್ನು ತಿಳಿಯುವನೋ ಅವನು ಕರ್ಮಪಾಶದಿಂದ ಬಿಡುಗಡೆಯನ್ನು ಹೊಂದಿ ಉತ್ತಮವಾದ ನಿರ್ವಾಣವನ್ನು ಪಡೆಯುವನು.

೬೧-೬೨. ರಾಜ್ಯವನ್ನು ಕಳೆದುಕೊಂಡ ದೊರೆಯು ಶುಚಿಯಾಗಿ ನಿಯಮದಿಂದ ನವಮಿ, ಅಷ್ಟಮಿ, ಚತುರ್ದಶಿಗಳಲ್ಲಿ ಉಪವಾಸ ಮಾಡಿದರೆ ಒಂದು ವರ್ಷದೊಳಗೆ ಯಾವ ತಡೆಯೂ ಇಲ್ಲದೆ ಮತ್ತೆ ರಾಜ್ಯವನ್ನು ಪಡೆಯುವನು ಈ ಮೂರು ವಿಧವಾದ ಶಕ್ತಿಯನ್ನೂ ನೀತಿಸಿದ್ಧಾಂತದಲ್ಲಿ ಹೇಳಿದೆ.

೬೩. ಈ ಉತ್ಕೃಷ್ಟಳಾದ, ಬಿಳಿಯಳಸೃಷ್ಟಿಯು ಬ್ರಹ್ಮನಲ್ಲಿರುವ ಸತ್ವ ಗುಣಸಂಬಂಧವಾದುದು. ಕೆಂಪಗಿರುವ ಅವತಾರವು ವಿಷ್ಣುವಿನ ರಜೋಗುಣ ಸಂಬಂಧವಾದುದೆಂದು ಹೇಳುವರು. ಕಪ್ಪಗಿರುವ ದೇವಿಯು ರುದ್ರನ ತಮೋ ಗುಣದಿಂದುದಿಸಿದವಳೆನ್ನುವರು.

೬೪. ಪರಮಾತ್ಮನಾದ ದೇವನೊಬ್ಬನೇ ಮೂರುಬಗೆಯಾಗಿರುವಂತೆ ಪ್ರಯೋಜನಕ್ಕಾಗಿ ಶಕ್ತಿಯೊಂದೇ ಮೂರು ಬಗೆಯಾಯಿತು.

ಯ ಏತಂ ಶೃಣುಯಾತ್ಸರ್ಗಂ ತ್ರಿಶಕ್ತ್ಯಾಃ ಪರಮಂ ಶಿವಂ ।
ಸರ್ವಪಾಪವಿನಿರ್ಮುಕ್ತಃ ಪರಂ ನಿರ್ವಾಣಮಾಪ್ನುಯಾತ್ ॥ ೬೫ ॥

ಯಶ್ಚೇಮಂ ಶೃಣುಯಾನ್ನಿತ್ಯಂ ನವಮ್ಯಾಂ ನಿಯತಃ ಸ್ಥಿತಃ ।
ಸ ರಾಜ್ಯಮತುಲಂ ಲಬ್ಧ್ವಾ ಭಯೇಭ್ಯಶ್ಚ ಪ್ರಮುಚ್ಯತೇ ॥ ೬೬ ॥

ಯಸ್ಯೇದಂ ಲಿಖಿತಂ ಗೇಹೇ ಸದಾ ತಿಷ್ಠತಿ ಧಾರಿತಂ ।
ನ ತಸ್ಯಾಗ್ನಿಭಯಂ ಘೋರಂ ಸರ್ಪಚೋರಾದಿಜಂ ಭವೇತ್ ॥ ೬೭ ॥

ಯಶ್ಚೇಮಂ ಪೂಜಯೇದ್ಭಕ್ತ್ಯಾ ಪುಸ್ತಕೇಪಿ ಸ್ಥಿತಂ ಬುಧಃ ।
ತೇನ ಚೇಷ್ಟಂ ಭವೇತ್ಸರ್ವಂ ತ್ರೈಲೋಕ್ಯಂ ಸ ಚರಾಚರಂ ॥ ೬೮ ॥

ಜಾಯಂತೇ ಪಶವಃ ಪುತ್ರಾ ಧನಂ ಧಾನ್ಯಂ ವರಾಃ ಸ್ತ್ರಿಯಃ ॥ ೬೯ ॥

---

೬೫. ಪರಮಮಂಗಳಕರವಾದ ತ್ರಿಶಕ್ತಿಯ ಈ ಸೃಷ್ಟಿಯನ್ನು ಕೇಳುವವನು ಸರ್ವಪಾಪಗಳನ್ನೂ ಕಳೆದುಕೊಂಡು ಪರಮನಿರ್ವಾಣವನ್ನು ಪಡೆಯುವನು.

೬೬. ಪ್ರತಿ ನವಮಿಯ ದಿನವೂ, ನಿಯಮದಿಂದಿದ್ದುಕೊಂಡು ಇದನ್ನು ಕೇಳುವವನು ಅಸದೃಶವಾದ ರಾಜ್ಯವನ್ನು ಪಡೆಯುವುದಲ್ಲದೆ ಯಾವ ಭಯವೂ ಇಲ್ಲದವನಾಗುವನು.

೬೭. ಯಾರ ಮನೆಯಲ್ಲಿ ಯಾವಾಗಲೂ ಈ ಲಿಖಿತವು ಇರುವುದೋ ಅವರಿಗೆ ಅಗ್ನಿಭಯವಾಗಲಿ, ಕ್ರೂರವಾದ ಸರ್ಪಚೋರಾದಿಗಳ ಭಯವಾಗಲಿ ಉಂಟಾಗುವುದಿಲ್ಲ.

೬೮. ಪುಸ್ತಕದಲ್ಲಿರುವ ಈ ತ್ರಿಶಕ್ತಿಯ ಮಹಿಮೆಯನ್ನು ಭಕ್ತಿಯಿಂದ ಪೂಜಿಸಿದರೆ ಚರಾಚರಸಹಿತವಾದ ತ್ರಿಲೋಕವನ್ನೂ ಪೂಜಿಸಿದಂತಾಗುವುದು.

೬೯. ಅವನಿಗೆ ಪಶುಗಳೂ, ಪುತ್ರರೂ, ಧನಧಾನ್ಯಗಳೂ, ಉತ್ತಮ ಸ್ತ್ರೀಯರೂ ಲಭಿಸುವರು.

ರತ್ನಾನಿಚ ತಥಾ ಗಾವೋ ದಾಸಾ ದಾಸ್ಯೋ ಭವಂತಿ ಹಿ |
ಯಸ್ಯೇದಂ ತಿಷ್ಠತೇ ಗೇಹೇ ತಸ್ಯ ಸಂಪದ್ಭವೇದ್ಧ್ರುವಂ || ೭೦ ||

|| ಶ್ರೀ ವರಾಹ ಉವಾಚ ||

ಏತದೇವ ರಹಸ್ಯಂ ತೇ ಕೀರ್ತಿತಂ ಭೂತಧಾರಿಣಿ |
ರುದ್ರಸ್ಯ ಖಲು ಮಹಾತ್ಮ್ಯಂ ಸಕಲಂ ಕೀರ್ತಿತಂ ಮಯಾ || ೭೧ ||

ನವಕೋಟ್ಯಸ್ತು ಚಾಮುಂಡಾ ಭೇದಭಿನ್ನಾ ವ್ಯವಸ್ಥಿತಾಃ |
ಯಾ ರೌದ್ರೀ ತಾಮಸೀ ಶಕ್ತಿಃ ಸಾ ಚಾಮುಂಡಾ ಪ್ರಕೀರ್ತಿತಾ || ೭೨ ||

ಅಷ್ಟಾದಶ ತಥಾ ಕೋಟ್ಯೋ ವೈಷ್ಣವ್ಯಾ ಭೇದ ಉಚ್ಯತೇ |
ಯಾ ವಿಷ್ಣೋ ರಾಜಸೀ ಶಕ್ತಿಃ ಪಾಲನೀ ಚೈವ ವೈಷ್ಣವೀ || ೭೩ ||

ಯಾ ಬ್ರಹ್ಮಶಕ್ತಿಃ ಸತ್ವಸ್ಥಾ ಸಾಹ್ಯನಂತಾ ಪ್ರಕೀರ್ತಿತಾ |
ಏತಸಾಂ ಸರ್ವಭೇದೇಷು ಪೃಥಗೇಕೈಕಶೋ ಧರೇ ||
ಸರ್ವಾಸಾಂ ಭಗವಾನ್ರುದ್ರಃ ಸರ್ವಗಶ್ಚ ಪತಿರ್ಭವೇತ್ || ೭೪ ||

---

೭೦. ಈ ಪುಸ್ತಕವಿರುವ ಮನೆಯವನಿಗೆ ರತ್ನಗಳೂ, ಹಸುಗಳೂ, ಕುದುರೆಗಳೂ, ದಾಸದಾಸಿಯರೂ ಲಭಿಸುವರು. ಅವನ ಸಂಪತ್ತು ಸ್ಥಿರವಾಗಿರುವುದು.

೭೧. ಶ್ರೀವರಾಹ—ಭೂದೇವಿ, ಈ ರಹಸ್ಯವನ್ನು ನಿನಗೆ ಹೇಳಿದೆನು ರುದ್ರಮಹಿಮೆಯೆಲ್ಲವನ್ನೂ ಹೇಳಿದ್ದೇನೆ.

೭೨. ರುದ್ರನ ತಾಮಸಶಕ್ತಿಯೇ ಚಾಮುಂಡಿಯೆನಿಸಿಕೊಳ್ಳುವಳು. ಚಾಮುಂಡಿಯು ಒಂಬತ್ತುಕೋಟಿ ಬಗೆಯಾಗಿರುವಳು.

೭೩. ವೈಷ್ಣವೀದೇವಿಯ ಭೇದವು ಹದಿನೆಂಟುಕೋಟಿಯೆನ್ನುವರು. ವಿಷ್ಣುವಿನ ಪಾಲನೆಯ ರಾಜಸಶಕ್ತಿಯೇ ವೈಷ್ಣವಿ.

೭೪. ಬ್ರಹ್ಮನ ಸತ್ವಶಕ್ತಿಯೇ ಬ್ರಾಹ್ಮಿಯೆನಿಸಿಕೊಳ್ಳುವಳು. ಅವಳು ಅನಂತಳು. ಭೂದೇವಿ, ಈ ದೇವಿಯರ ಸರ್ವಾವತಾರರೂಪಗಳಲ್ಲೂ ಬೇರೆ ಬೇರೆ ಒಬ್ಬೊಬ್ಬಳಿಗೂ, ಬ್ರಹ್ಮ ವಿಷ್ಣು ರುದ್ರರು ಪತಿಗಳಾಗುವರು.

ಯಾವಂತ್ಯಸ್ಯಾ ಮಹಾಶಕ್ತ್ಯಾಸ್ತಾವದ್ರೂಪಾಣಿ ಶಂಕರಃ ।
ಕೃತವಾಂಸ್ತಾಶ್ಚ ಭಜತೇ ಪತಿರೂಪೇಣ ಸರ್ವದಾ ॥ ೭೫ ॥

ಯಶ್ಚಾರಾಧಯತೇ ತಸ್ಯ ರುದ್ರಸ್ತುಷ್ಟೋ ಭವಿಷ್ಯತಿ ।
ಸಿಧ್ಯಂತಿ ತಸ್ಯ ಕಾಮಾಶ್ಚ ಮನಸಾ ಚಿಂತಿತಾ ಅಪಿ ॥ ೭೬ ॥

ಇತಿ ಶ್ರೀವರಾಹಪುರಾಣೇ ತ್ರಿಶಕ್ತಿಮಾಹಾತ್ಮ್ಯೇ ತ್ರಿಶಕ್ತಿರಹಸ್ಯಂ ನಾಮ ಷಣ್ಣವತಿತಮೋಽಧ್ಯಾಯಃ

---

೭೫. ಈ ಮಹಾಶಕ್ತಿಯ ರೂಪಗಳೆಷ್ಟೋ, ಅಷ್ಟು ರೂಪಗಳನ್ನು ತಾನೂ ಧರಿಸಿ, ಶಂಕರನು ಯಾವಾಗಲೂ ಅವರನ್ನು ಪತಿರೂಪದಿಂದ ಭಜಿಸುವನು.

೭೬. ಆರಾಧಿಸುವವರ ವಿಷಯದಲ್ಲಿ ರುದ್ರನು ಸಂತುಷ್ಟನಾಗುವನು. ಆರಾಧಿಸುವವನು ಮನಸ್ಸಿನಲ್ಲಿ ಬಯಸಿದ ಸರ್ವೇಷ್ಟಾರ್ಥಗಳೂ ಸಿದ್ಧಿಸುವುವು.

ಅಧ್ಯಾಯದ ಸಾರಾಂಶ :—

ತ್ರಿಶಕ್ತಿಯರಲ್ಲಿ ರೌದ್ರೀದೇವಿಯು ನೀಲಗಿರಿಯಲ್ಲಿ ಪಂಚಾಗ್ನಿ ಮಧ್ಯದಲ್ಲಿ ಉಗ್ರವಾದ ತಪಸ್ಸನ್ನಾಚರಿಸುತ್ತಿದ್ದುದು, ರುರುವೆಂಬ ಘೋರರಾಕ್ಷಸನು ದೇವತೆಗಳನ್ನೆಲ್ಲಾ ಜಯಿಸಿದುದು, ದೇವತೆಗಳು ದೇವಿಯನ್ನು ಮರೆಹೊಗಲು, ನಕ್ಕ ಆಕೆಯ ಬಾಯಿಂದ ಅಸಂಖ್ಯಾತರಾದ ಪರಿವಾರದೇವಿಯರು ಅವತರಿಸಿದುದು, ಅವರಿಂದಲೂ, ದೇವತೆಗಳಿಂದಲೂ ಕೂಡಿ ರೌದ್ರೀದೇವಿಯು ರುರುರಾಕ್ಷಸನೊಡನೆ ಯುದ್ಧವನ್ನು ಮಾಡಿದುದು, ರುರುವಿನ ಸೇನೆಯೆಲ್ಲವೂ ನಾಶವಾಗಲು, ದೇವಿಯೇ ತ್ರಿಶೂಲದಿಂದ ರುರುವನ್ನು ತಿವಿದು, ಅವನ ಚರ್ಮವನ್ನೂ ಮುಂಡವನ್ನೂ ಬೇರೆಬೇರೆಮಾಡಿ, ಅವನನ್ನು ಕೊಂದುದು, ಅದರಿಂದ ಅವಳಿಗೆ ಚಾಮುಂಡಾ ಎಂದು ಹೆಸರಾದುದು, ಹಸಿವಿನಿಂದ ಪೀಡಿತರಾದ ಪರಿವಾರ ದೇವಿಯರಿಗೆ ದೇವಿಯ ಪ್ರಾರ್ಥನೆಯಂತೆ ರುದ್ರನು ಆಹಾರವನ್ನು ಕಲ್ಪಿಸಿದುದು, ರುರುದೈತ್ಯನ ಸಂಹಾರದಿಂದ ತುಷ್ಟನಾದ ರುದ್ರನು ಮಾಡಿದ ರೌದ್ರೀದೇವಿಯ ಸ್ತುತಿ, ತ್ರಿಶಕ್ತಿಸೃಷ್ಟಿಯ ಮತ್ತು ರುದ್ರಕೃತಸ್ತುತಿಯ ಶ್ರವಣಾದಿಗಳ ಫಲ, ಇವುಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತಾರನೆಯ ಅಧ್ಯಾಯ

|| ಶ್ರೀಃ ||

–x–

ಸಪ್ತನವತಿತಮೋಧ್ಯಾಯಃ

ಅಥ ರುದ್ರ ಮಾಹಾತ್ಮ್ಯಂ

|| ವರಾಹ ಉವಾಚ ||

ಅಥ ರುದ್ರವ್ರತೋತ್ಪತ್ತಿಂ ಶೃಣುದೇವಿ ವರಾನನೇ ।
ಯೇನ ಜ್ಞಾತೇನ ಪಾಪೇಭ್ಯಃ ಮುಚ್ಯತೇ ನಾತ್ರಸಂಶಯಃ || ೧ ||

ಬ್ರಹ್ಮಣಾ ತು ಯದಾಸೃಷ್ಟಃ ಪೂರ್ವಂ ರುದ್ರೋ ವರಾನನೇ ।
ತೃತೀಯೇ ಜನ್ಮನಿ ವಿಭುಃ ಪಿಂಗಾಕ್ಷೋ ನೀಲಲೋಹಿತಃ ।
ತದಾ ಕೌತೂಹಲಾದ್ಬ್ರಹ್ಮಾ ಸ್ಕಂಧೇ ತಂ ಜಗೃಹೇ ಪ್ರಭುಃ || ೨ ||

ಸ್ಕಂಧಾರೂಢಸ್ತದಾ ರುದ್ರೋ ಬ್ರಹ್ಮಣೋಽವ್ಯಕ್ತಜನ್ಮನಃ || ೩ ||

ತೊಂಬತ್ತೇಳನೆಯ ಅಧ್ಯಾಯ

ರುದ್ರಮಹಿಮೆ

೧. ಶ್ರೀವರಾಹ—ದೇವಿ, ವರಾನನೇ, ಯಾವುದನ್ನರಿಯುವುದರಿಂದ ಸಂಶಯವಿಲ್ಲದೆ ಪಾಪಗಳಿಂದ ಬಿಡುಗಡೆಯನ್ನು ಪಡೆಯಬಹುದೋ ಆ ರುದ್ರವ್ರತೋತ್ಪತ್ತಿಯನ್ನು ಕೇಳು.

೨. ಸುಂದರಮುಖೀ, ಮೂರನೆಯ ಜನ್ಮದಲ್ಲಿ ಪಿಂಗಾಕ್ಷನೂ, ನೀಲಲೋಹಿತನೂ, ವಿಭುವೂ ಆದ ರುದ್ರನನ್ನು ಪ್ರಭುವಾದ ಬ್ರಹ್ಮನು ಸೃಷ್ಟಿಸಿ, ಕುತೂಹಲದಿಂದ ಹೆಗಲಮೇಲೇರಿಸಿಕೊಂಡನು.

೩. ರುದ್ರನು, ಅವ್ಯಕ್ತಜನ್ಮನಾದ ಆ ಬ್ರಹ್ಮನ ಹೆಗಲಮೇಲೇರಿಕೊಂಡಿದ್ದನು.

ಜನ್ಮತಶ್ಚ ಶಿರೋ ಯದ್ಧಿ ಪಂಚಮಂ ತಜ್ಜಗಾದ ಹ ।
ಮಂತ್ರಮಾಥರ್ವಣಂ ರುದ್ರೋ ಯೇನ ಸದ್ಯಃ ಪ್ರಮುಚ್ಯತೇ ॥ ೪ ॥

ಕಪಾಲಿನ್ ರುದ್ರ ಬಭ್ರೋಽಥ ಭವ ಕೈರಾತ ಸುವ್ರತ ।
ಪಾಹಿ ವಿಶ್ವಂ ವಿಶಾಲಾಕ್ಷ ಕುಮಾರ ವರವಿಕ್ರಮ ॥ ೫ ॥

ಏವಮುಕ್ತಸ್ತದಾ ರುದ್ರೋ ಭವಿಷ್ಯೈರ್ನಾಮಭಿರ್ಭವಃ ।
ಕಪಾಲಶಬ್ದಾತ್ಕುಪಿತಃ ತಚ್ಛಿರೋ ವಿಚಕರ್ತ ಹ ।
ವಾಮಾಂಗುಷ್ಠನಖೇನಾದ್ಯಂ ಪ್ರಾಜಾಪತ್ಯಂ ವಿಚಕ್ಷಣಃ ॥ ೬ ॥

ತಸ್ನಿಕೃತ್ತಂ ಶಿರೋ ಧಾತ್ರಿ ಹಸ್ತಲಗ್ನಂ ಬಭೂವ ಹ ॥ ೭ ॥

ತಸ್ಮಿನ್ನಿಕೃತ್ತೇ ಶಿರಸಿ ಪ್ರಾಜಾಪತ್ಯೇ ತ್ರಿಲೋಚನಃ ।
ಬ್ರಹ್ಮಾಣಂ ಪ್ರಯತೋ ಭೂತ್ವಾ ರುದ್ರೋ ವಚನಮಬ್ರವೀತ್ ॥ ೮ ॥

---

೪. ಆಗ ಬ್ರಹ್ಮನಿಗೆ ಸಹಜವಾಗಿದ್ದ ಐದನೆಯ ತಲೆಯು, ಕೇಳಿದೊಡನೆಯೇ ರುದ್ರನು ಇಳಿಯುವಂತೆ ಮಾಡುವ ಅಥರ್ವಣಮಂತ್ರವನ್ನು ಉಚ್ಚರಿಸಿತು.

೫-೬. "ಕಪಾಲಿ, ರುದ್ರ, ಬಭ್ರು, ಭವ, ಕೈರಾತ, ಸುವ್ರತ, ವಿಶಾಲಾಕ್ಷ, ವರವಿಕ್ರಮ, ಕುಮಾರ, ವಿಶ್ವವನ್ನು ಪಾಲಿಸು" ಎಂದು ಮುಂದೆ ಬರುವ ಹೆಸರುಗಳಿಂದ ಹೇಳಿಸಿಕೊಂಡ, ವಿದ್ವಾಂಸನಾದ ಆ ರುದ್ರನು 'ಕಪಾಲಿ' ಎಂಬ ಶಬ್ದದಿಂದ ರೇಗಿ, ಬ್ರಹ್ಮನ ಮೊದಲನೆಯ ಆ ತಲೆಯನ್ನು ಎಡಗೈಹೆಬ್ಬೆರಳಿನ ಉಗುರಿನಿಂದ ಕತ್ತರಿಸಿದನು.

೭. ಭೂದೇವಿ, ಕತ್ತರಿಸಿದ ಆ ತಲೆಯು ರುದ್ರನ ಕೈಗೇ ಅಂಟಿಕೊಂಡುಬಿಟ್ಟಿತು.

೮. ಬ್ರಹ್ಮನ ಆ ತಲೆಯು ಕತ್ತರಿಸಿಹೋಗಲಾಗಿ, ಮುಕ್ಕಣ್ಣನಾದ ರುದ್ರನು ವಿನೀತನಾಗಿ ಬ್ರಹ್ಮನನ್ನು ಕುರಿತು ಮುಂದಿನ ಮಾತನಾಡಿದನು.

|| ರುದ್ರ ಉವಾಚ ||

ಕಥಂ ಕಪಾಲಂ ಮೇ ದೇವ ಕರಾತ್ಪತತಿ ಸುವ್ರತ
ನಶ್ಯತೇ ಚ ಕಥಂ ಪಾಪಂ ಮಮೈತದ್ವದ ಸುವ್ರತ || ೯ ||

|| ಬ್ರಹ್ಮೋವಾಚ ||

ಇದಮೇವ ವ್ರತಂ ದೇವ ಚರ ಕಾಪಾಲಿಕಂ ವಿಭೋ ।
ಸಮಯಾಚಾರಸಂಯುಕ್ತಂ ಕೃತ್ವಾ ಸ್ವೇನೈವ ತೇಜಸಾ || ೧೦ ||

ಏವಮುಕ್ತಸ್ತದಾ ರುದ್ರೋ ಬ್ರಹ್ಮಣಾವ್ಯಕ್ತಮೂರ್ತಿನಾ ।
ಆಜಗಾಮ ಗಿರಿಂ ತುಂಗಂ ಮಾಹೇಂದ್ರಂ ಪಾಪನಾಶನಂ || ೧೧ ||

ತತ್ರ ಸ್ಥಿತ್ವಾ ಮಹಾದೇವಸ್ತಚ್ಛಿರೋ ಬಿಭಿದೇ ತ್ರಿಧಾ || ೧೨ ||

ತಸ್ಮಿನ್ಭಿನ್ನೇ ಪೃಥಕ್ಕೇಶಾನ್ ಗೃಹೀತ್ವಾ ಭಗವಾನ್ಭವಃ ।
ಯಜ್ಞೋಪವೀತಂ ಕೇಶಂ ತು ಮಹಾಸ್ಥ್ನಾಕ್ಷಮಣೀಂಸ್ತಥಾ || ೧೩ ||

---

೯. ರುದ್ರ—ಸುವ್ರತನೇ, ದೇವ, ಈ ಕಪಾಲವು ನನ್ನ ಕಯ್ಯಿಂದ ಬೀಳುವುದು ಹೇಗೆ? ನನ್ನ ಪಾಪವು ನಾಶವಾಗುವುದು ಹೇಗೆ? ಎಂಬುದನ್ನು ನನಗೆ ಹೇಳು.

೧೦. ಬ್ರಹ್ಮ—ವಿಭುವೇ, ದೇವ, ನಿನ್ನ ತೇಜಸ್ಸಿನಿಂದಲೇ ಸಮಯಾಚಾರದಿಂದ ಕೂಡಿದುದನ್ನಾಗಿ ಮಾಡಿ, ಇದೇ ಕಾಪಾಲಿಕ ವ್ರತವನ್ನೇ ಆಚರಿಸು

೧೧. ಅವ್ಯಕ್ತಮೂರ್ತಿಯಾದ ಬ್ರಹ್ಮನಿಂದ ಹೀಗೆ ಹೇಳಿಸಿಕೊಂಡ ರುದ್ರನು ಪಾಪನಾಶಕವೂ, ಉನ್ನತವೂ ಆದ ಮಹೇಂದ್ರಗಿರಿಗೆ ಬಂದನು.

೧೨. ಮಹಾದೇವನು ಅಲ್ಲಿ ನಿಂತು, ಆ ಬ್ರಹ್ಮನ ತಲೆಯನ್ನು ಮೂರು ಪಾಲಾಗಿ ಒಡೆದನು.

೧೩-೧೪. ಆ ಭಾಗಗಳಿಂದ ಕೂದಲನ್ನು ಬೇರೆಯಾಗಿ ತೆಗೆದುಕೊಂಡು ಭಗವಂತನಾದ ರುದ್ರನು ಆ ಕೂದಲಿನಿಂದ ಯಜ್ಞೋಪವೀತವನ್ನೂ, ಎಲುಬಿನಿಂದ ಜಪಮಣಿಯನ್ನೂ, ಕಯ್ಯಲ್ಲಿ ರಕ್ತದಿಂದ ತುಂಬಿದ ತಲೆಯ ಚಿಪ್ಪನ್ನೂ

ಕಪಾಲಶಕಲಂ ಚೈಕಮಸ್ಯಕ್ಪೂರ್ಣಂ ಕರೇ ಸ್ಥಿತಂ |
ಅಪರಂ ಖಂಡಶಃ ಕೃತ್ವಾ ಜಟಾಜೂಟೇ ನ್ಯವೇಶಯತ್ || ೧೪ ||

ಏವಂ ಕೃತ್ವಾ ಮಹಾದೇವೋ ಬಭ್ರಾಮೇಮಾಂ ವಸುಂಧರಾಂ |
ಸಪ್ತದ್ವೀಪವತೀಂ ಪುಣ್ಯಾಂ ಮಜ್ಜಂಸ್ತೀರ್ಥೇಷು ನಿತ್ಯಶಃ || ೧೫ ||

ಸಮುದ್ರೇ ಪ್ರಥಮಂ ಸ್ನಾತ್ವಾ ತತೋ ಗಂಗಾಂ ವ್ಯಗಾಹತ || ೧೬ ||

ಸರಸ್ವತೀಂ ತತೋ ಗತ್ವಾ ಯಮುನಾಸಂಗಮಂ ತತಃ |
ಶತದ್ರುಂ ಚ ತತೋ ಗತ್ವಾ ದೇವಿಕಾಂ ಚ ಮಹಾನದೀಂ || ೧೭ ||

ವಿತಸ್ತಾಂ ಚಂದ್ರಭಾಗಾಂ ಚ ಗೋಮತೀಂ ಸಿಂಧುಮೇವ ಚ ।
ತುಂಗಭದ್ರಾಂ ತಥಾ ಗೋದಾಮುತ್ತರೇ ಗಂಡಕೀಂ ತಥಾ || ೧೮ ||

ಧರಿಸಿ, ಕಯ್ಯಲ್ಲಿದ್ದ ಮತ್ತೊಂದು ಹೋಳನ್ನು ಚೂರುಮಾಡಿ ಜಡೆಯ ಮುಡಿಯಲ್ಲಿ ಇಟ್ಟುಕೊಂಡನು.

೧೫. ಹೀಗೆ ಮಾಡಿ, ಮಹಾದೇವನು ನಿತ್ಯವೂ ತೀರ್ಥಗಳಲ್ಲಿ ಸ್ನಾನ ಮಾಡುತ್ತಾ, ಸಪ್ತದ್ವೀಪಗಳಿಂದ ಕೂಡಿದ ಪವಿತ್ರವಾದ ಈ ಭೂಮಿಯನ್ನೆಲ್ಲಾ ಸಂಚರಿಸಿದನು.

೧೬. ಮೊದಲು ಸಮುದ್ರದಲ್ಲಿ ಸ್ನಾನಮಾಡಿ ಬಳಿಕ ಗಂಗೆಯಲ್ಲಿ ಮುಳುಗಿದನು.

೧೭-೧೮. ಬಳಿಕ ಸರಸ್ವತಿಗೂ, ಆ ಮೇಲೆ ಯಮುನಾಸಂಗಮಕ್ಕೂ, ಅನಂತರ ಶತದ್ರುವಿಗೂ, ದೇವಿಕೆಗೂ, ಮಹಾನದಿಗೂ, ವಿತಸ್ತೆಗೂ, ಚಂದ್ರಭಾಗೆ, ಗೋಮತಿ, ಸಿಂಧು, ತುಂಗಭದ್ರೆ, ಗೋದಾವರಿ, ಗಂಡಕಿಗಳಿಗೂ ಹೋಗಿ ಸ್ನಾನಮಾಡಿದನು.

ನೇಪಾಲಂ ಚ ತತೋ ಗತ್ವಾ ತತೋ ರುದ್ರಮಹಾಲಯಂ ।
ತತೋ ದಾರುವನಂ ಗತ್ವಾ ಕೇದಾರಗಮನಂ ಪುನಃ ॥
ಭದ್ರೇಶ್ವರಂ ತತೋ ಗತ್ವಾ ಗಯಾಂ ಪುಣ್ಯಾಂ ತಥಾಗಮತ್ ॥ ೧೯ ॥

ತತ್ರ ಫಲ್ಗುಕೃತಸ್ನಾನಃ ಪಿತೄನ್ ಸಂತರ್ಪ್ಯ ಯತ್ನತಃ ।
ಏವಂ ವೇಗೇನ ಸಕಲಂ ಬ್ರಹ್ಮಾಂಡಂ ಭೂತಧಾರಿಣಿ ॥ ೨೦ ॥

ಬಭ್ರಾಮ ಸರ್ವದೇವೇಶಃ ಷಷ್ಠೇಬ್ದೇ ತಸ್ಯ ಚಾಪತತ್ ।
ಪರಿಧಾನಂ ತು ಕೌಪೀನಂ ನಗ್ನಃ ಕಾಪಾಲಿಕೋಭವತ್ ॥
ಭ್ರಮತಃ ಪರಿಧಾನಂ ತು ಕೌಪೀನಂ ರಶನಾಗತಂ ॥ ೨೧ ॥

ತಸ್ಮಿಂಸ್ತು ಪತಿತೇ ದೇವಿ ನಗ್ನಃ ಕಾಪಾಲಿಕೋಭವತ್ ॥ ೨೨ ॥

ಪುನರಬ್ದದ್ವಯಂ ಭ್ರಾಂತಸ್ತೀರ್ಥೇ ತೀರ್ಥೇ ಹರಃ ಸ್ವಯಂ ।
ಕಪಾಲಂ ತ್ಯಕ್ತುಕಾಮಸ್ಸನ್ತದ್ಧಸ್ತಾತ್ತತ್ತು ನಾಪತತ್ ॥ ೨೩ ॥

---

೧೯. ಆಮೇಲೆ ನೇಪಾಳಕ್ಕೂ, ಅಲ್ಲಿಂದ ಕೈಲಾಸಕ್ಕೂ, ಬಳಿಕ ದಾರುವನಕ್ಕೂ, ಅನಂತರ ಕೇದಾರಕ್ಷೇತ್ರಕ್ಕೂ, ಭದ್ರೇಶ್ವರಕ್ಕೂ, ಹೋಗಿ ಬಳಿಕ ಪುಣ್ಯಕರವಾದ ಗಯೆಗೆ ಹೋದನು.

೨೦-೨೧. ಅಲ್ಲಿ *ಫಲ್ಗುತೀರ್ಥದಲ್ಲಿ ಮಿಂದು, ಪ್ರಯತ್ನಪೂರ್ವಕವಾಗಿ ಪಿತೃಗಳಿಗೆ ತರ್ಪಣವನ್ನು ಮಾಡಿದನು. ಭೂತಧಾರಿಣೀ, ಸರ್ವದೇವೇಶನು ಹೀಗೆ ತ್ವರೆಯಿಂದ ಬ್ರಹ್ಮಾಂಡವೆಲ್ಲವನ್ನೂ ಸುತ್ತಿದನು. ಸುತ್ತುವ ಆ ರುದ್ರನ ಉಡಿಗೆಯೂ, ಉಡಿದಾರದಲ್ಲಿದ್ದ ಕೌಪೀನವೂ ಆರನೆಯ ವರ್ಷದಲ್ಲಿ ಬಿದ್ದು ಹೋದುವು.

೨೨. ದೇವಿ, ಅವು ಬಿದ್ದುಹೋಗಲು ನಗ್ನ(ಬೆತ್ತಲೆಯಿರುವ)ಕಾಪಾಲಿಕನಾದನು.

೨೩. ಶಿವನು ತಿರಿಗಿ ಎರಡು ವರ್ಷಕಾಲ ತೀರ್ಥತೀರ್ಥದಲ್ಲೂ ಕಪಾಲವನ್ನು ಬಿಡುವುದಕ್ಕಾಗಿ ಸುತ್ತಿದನು. ಆದಾದರೋ ಕಯ್ಯಿಂದ ಬೀಳಲೇ ಇಲ್ಲ.

---

* ಫಲ್ಗು=ಗಯೆಯ ಹತ್ತಿರವಿರುವ ಒಂದು ನದಿ.

ಪುನರಬ್ದದ್ವಯಂ ಭ್ರಾಂತೋ ಬ್ರಹ್ಮಾಂಡಂ ತೀರ್ಥಕಾರಣಾತ್ ।
ತೀರ್ಥೇ ತೀರ್ಥೇ ಹರಃ ಸ್ನಾತ್ವಾ ಕಪಾಲಂ ತ್ಯಕ್ತುಮಿಚ್ಛತಿ ॥ ೨೪ ॥

ತ್ಯಜತೋಽಪಿ ನ ತದ್ಧಸ್ತಾಚ್ಚ್ಯವತೇ ಭೂತಧಾರಿಣಿ ।
ತತೋಽಬ್ದಮೇಕಂ ಬಭ್ರಾಮ ಹಿಮವತ್ಪರ್ವತೇ ಶುಭೇ ॥ ೨೫ ॥

ತತೋಽನ್ಯದ್ವರ್ಷಮೇಕಂ ತು ವರ್ತತೇ ಹಿಮವದ್ಗಿರೌ ।
ಭ್ರಮತೋ ವಿಭ್ರಮೋ ಜಾತಸ್ತ್ರಿನೇತ್ರಸ್ಯ ಮಹಾತ್ಮನಃ ॥ ೨೬ ॥

ಪುನರಬ್ದದ್ವಯಂ ಚಾನ್ಯತ್ಪರಮೋಽಷ್ಮೀ ವೃಷಾಕಪಿಃ ।
ಬಭ್ರಾಮ ರುದ್ರಸ್ತೀರ್ಥಾನಿ ಪುರಾಣಾನಿ ಸಮಂತತಃ ॥ ೨೭ ॥

ಕಸ್ಯಚಿತ್ತ್ವಥ ಕಾಲಸ್ಯ ದ್ವಾದಶಾಬ್ದೇ ಧರಾಧರೇ ।
ವಾರಾಣಸೀಂ ಗತೋ ದೇವಃ ತತ್ರ ಸ್ನಾನಮಥಾರಭತ್ ॥ ೨೮ ॥

---

೨೪. ಹರನು ಮತ್ತೆರಡು ವರ್ಷ ತೀರ್ಥಕ್ಷೇತ್ರಕ್ಕಾಗಿ ಬ್ರಹ್ಮಾಂಡವನ್ನು ಸುತ್ತಿ, ಒಂದೊಂದು ತೀರ್ಥದಲ್ಲೂ ಮುಳುಗಿ ತಲೆಯೋಡನ್ನು ಬಿಡಲು ಇಚ್ಛಿಸಿದನು.

೨೫–೨೬. ಭೂತಧಾರಿಣಿ, ತಳ್ಳಿದರೂ ಅದು ಕೈಯಿಂದ ಬೀಳಲಿಲ್ಲ. ಇನ್ನೊಂದು ವರ್ಷಕಾಲ ಶುಭಕರವಾದ ಹಿಮವತ್ಪರ್ವತದಲ್ಲಿ ಅಲೆದನು. ಹಾಗೆ ಹಿಮವದ್ಗಿರಿಯಲ್ಲಿ ವರ್ಷಕಾಲ ಸುತ್ತುತ್ತಿದ್ದ ಮಹಾತ್ಮನಾದ ತ್ರಿನೇತ್ರನಿಗೆ ವಿಭ್ರಮ*ವುಂಟಾಯಿತು.

೨೭. ತಿರುಗಿ ಮತ್ತೆರಡುವರ್ಷಕಾಲ, ಧರ್ಮಶೀಲರನ್ನು ರಕ್ಷಿಸುವವನೂ, ಉತ್ತಮಸ್ಥಾನದಲ್ಲಿರುವವನೂ ಆದ ಶಿವನು ಹಿಂದಿನ ತೀರ್ಥಗಳನ್ನು ಪೂರ್ತಿಯಾಗಿ ಸಂಚರಿಸಿದನು.

೨೮. ಭೂದೇವಿ, ಕೆಲವುಕಾಲದ ಮೇಲೆ ಹನ್ನೆರಡನೆಯ ವರ್ಷದಲ್ಲಿ ಕಾಶಿಗೆ ಹೋದ ದೇವನು ಅಲ್ಲಿ ಸ್ನಾನಕ್ಕಾರಂಭಿಸಿದನು.

---

* ವಿಭ್ರಮ= ಸಂಶಯಃ, ಭ್ರಾಂತಿ, ಶೋಕ.

ಗಂಗಾಯಾಂ ದೇವದೇವೇಶೋ ಯಾವನ್ಮಜ್ಜತಿ ಭಾಮಿನಿ |
ಭವೇತ್ಕಪಾಲಂ ಪತಿತಂ ಹಸ್ತಾಗ್ರಾದ್ಬ್ರಹ್ಮಣಃ ಪುರಾ ॥ ೨೯ ॥

ಕಪಾಲಮೋಚನಂ ನಾಮ ತತಸ್ತೀರ್ಥಮನುತ್ತಮಂ |
ಪೃಥಿವ್ಯಾಂ ಖ್ಯಾತಿಮಗಮದ್ವಾರಾಣಸ್ಯಾಂ ಧರಾಧರೇ ॥ ೩೦ ॥

ಗತ್ವಾ ಹರಿಹರಕ್ಷೇತ್ರಂ ಸ್ನಾತ್ವಾ ದೇವಾಂಗದೇ ತಥಾ ।
ಸೋಮೇಶ್ವರಂ ಸಮಭ್ಯರ್ಚ್ಯ ಗತೋಽಸೌ ಚಕ್ರತೀರ್ಥಕಂ ॥ ೩೧ ॥

ತತ್ರ ಸ್ನಾತ್ವಾ ತಥಾ ಗತ್ವಾ ತ್ರಿಜಲೇಶ್ವರಸಂಜ್ಞಿತಂ |
ಅಯೋಧ್ಯಾಯಾಂ ತಥಾ ಗತ್ವಾ ವಾರಾಣಸ್ಯಾಂ ತತೋಽಗಮತ್ ॥ ೩೨ ॥

ದ್ವಾದಶಾಬ್ದೈರ್ಗತವತಃ ಶಿವಸ್ಯಾನುಚಾರಿಗಣೈಸ್ತಥಾ |
ಬಲಾತ್ಕಾರೇಣ ತದ್ಧಸ್ತಾತ್ಕಪಾಲಂ ಪತಿತಂ ಭುವಿ ॥ ೩೩ ॥

ಕಪಾಲಮೋಚನಂ ತೀರ್ಥಂ ತತೋ ಜಾತಮಘಾಪಹಂ ॥ ೩೪ ॥

---

೨೯. ಭಾಮಿನಿ, ದೇವದೇವೇಶನು ಗಂಗೆಯಲ್ಲಿ ಮುಳುಗುತ್ತಲೂ ಹಿಂದಿನಿಂದ ಅಂಟಿಕೊಂಡಿದ್ದ ಬ್ರಹ್ಮಕಪಾಲವು ಕೈಯಿಂದ ಬಿದ್ದುಹೋಯಿತು

೩೦. ಧರಾಧರೇ, ಬಳಿಕ ಕಾಶಿಯಲ್ಲಿ ಶಿವನು ಮಿಂದ ಅತ್ಯುತ್ತಮವಾದ ಆ ತೀರ್ಥವು 'ಕಪಾಲಮೋಚನ'ವೆಂಬ ಹೆಸರಿನಿಂದ ಭೂಮಿಯಲ್ಲಿ ಪ್ರಸಿದ್ಧವಾಯಿತು.

೩೧–೩೩. ಅದಕ್ಕೆ ಮೊದಲು ಶಿವನು ಹರಿಹರ ಕ್ಷೇತ್ರಕ್ಕೆ ಹೋಗಿ, ದೇವಾಂಗದಲ್ಲಿ ಸ್ನಾನಮಾಡಿ, ಸೋಮೇಶ್ವರನನ್ನು ಚೆನ್ನಾಗಿ ಪೂಜಿಸಿ, ಒಳಿಕ ಚಕ್ರತೀರ್ಥಕ್ಕೆ ಹೋಗಿ ಸ್ನಾನಮಾಡಿ ಮುಂದೆ ತ್ರಿಜಲೇಶ್ವರವೆಂಬುದಕ್ಕೆ ಹೋಗಿ ಅಲ್ಲಿಂದ ಅಯೋಧ್ಯೆಗೆ ಹೋಗಿದ್ದನು. ಬಳಿಕ ಹನ್ನೆರಡನೆಯ ವರ್ಷದಲ್ಲಿ ಜತೆಯಲ್ಲಿ ಸಂಚರಿಸುವ ಗಣಗಳೊಡನೆ ಕಾಶಿಗೆ ಹೋದನು. ಅವನ ಕೈಯಿಂದ ಅಲ್ಲಿ ಕಪಾಲವು ತಾನಾಗಿ ಭೂಮಿಯಲ್ಲಿ ಬಿದ್ದಿತು.

೩೪. ಪಾಪಹಾರಿಯಾದ ಆ ತೀರ್ಥವು ಬಳಿಕ ಕಪಾಲಮೋಚನ ವೆಂದೆನಿಸಿಕೊಂಡಿತು.

ಗಂಗಾಂಭಸಿ ತತಃ ಸ್ನಾತ್ವಾ ವಿಶ್ವೇಶಂ ಪೂಜ್ಯಭಕ್ತಿತಃ ।
ರುದ್ರೋ ವಿಶುದ್ಧಿಮಾಪನ್ನೋ ಮುಕ್ತಃ ಸ ಬ್ರಹ್ಮಹತ್ಯಯಾ ॥ ೩೫ ॥

ಕಪಾಲಮೋಚನಂ ನಾಮ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಯತ್ರಾಪ್ಲುತೋ ನರೋ ಭಕ್ತ್ಯಾ ಬ್ರಹ್ಮಹಾ ತು ವಿಶುದ್ಧ್ಯತಿ ॥ ೩೬ ॥

ಕಪಾಲಂ ಪತಿತಂ ದೃಷ್ಟ್ವಾ ರುದ್ರಹಸ್ತಾಚ್ಚತುರ್ಮುಖಃ ।
ಆಗತೋ ದೇವಸಹಿತೋ ವಾಕ್ಯಂ ಚೇದಮುವಾಚ ಹ ॥ ೩೭ ॥

॥ ಬ್ರಹ್ಮೋವಾಚ ॥

ಭವ ರುದ್ರ ವಿರೂಪಾಕ್ಷ* ಲೋಕಮಾರ್ಗವ್ಯವಸ್ಥಿತ ।
ಕಪಾಲಂ ಗೃಹ್ಯ ಯದ್ಭ್ರಾಂತಂ ಕಪಾಲವ್ಯಗ್ರಪಾಣಿನಾ ।
ತದ್ವ್ರತಂ ನಗ್ನಕಾಪಾಲಂ ಭವಿಷ್ಯತಿ ನೃಣಾಂ ಭುವಿ ॥ ೩೮ ॥

---

೩೫. ಬಳಿಕ ಗಂಗೆಯ ನೀರಿನಲ್ಲಿ ಸ್ನಾನಮಾಡಿ(ಸಿ) ಭಕ್ತಿಯಿಂದ ವಿಶ್ವೇಶ್ವರನನ್ನು ಪೂಜಿಸಿ ಶುದ್ಧನಾದ ಆ ರುದ್ರನು ಬ್ರಹ್ಮಹತ್ಯೆಯಿಂದ ಮುಕ್ತನಾದನು.

೩೬. ಆ ತೀರ್ಥವು ಕಪಾಲಮೋಚನವೆಂದು ಮೂರುಲೋಕದಲ್ಲೂ ಪ್ರಖ್ಯಾತವಾಯಿತು. ಅಲ್ಲಿ ಭಕ್ತಿಯಿಂದ ಸ್ನಾನಮಾಡುವವರು ಬ್ರಹ್ಮಹತ್ಯೆ ಮಾಡಿದ್ದರೂ ಪರಿಶುದ್ಧರಾಗುವರು.

೩೭. ರುದ್ರನ ಕೈಯಿಂದ ಕಪಾಲವು ಬಿದ್ದುದನ್ನು ನೋಡಿ, ಚತುರ್ಮುಖ ಬ್ರಹ್ಮನು ದೇವತೆಗಳೊಡನೆ ಬಂದು, ಮುಂದಿನ ಮಾತನ್ನು ಹೇಳಿದನು.

೩೮. ಬ್ರಹ್ಮ—ಭವ, ರುದ್ರ, ವಿರೂಪಾಕ್ಷ, ಲೋಕಮಾರ್ಗವನ್ನನುಸರಿಸಿದವನೇ, ಕೈಯಲ್ಲಿ ಕಪಾಲವನ್ನು ಹಿಡಿದು ನೀನು ಸುತ್ತಿದ ಆ ವ್ರತವು ಲೋಕದಲ್ಲಿ ಜನರಿಗೆ ನಗ್ನಕಾಪಾಲವೆಂಬ ವ್ರತವಾಗುವುದು.

---

* ವಿಶಾಲಾಕ್ಷ [ಬೊಂ]

ಯಚ್ಚ ತೇ *ಬಭ್ರುತಾ ಜಾತಾ ಹಿಮವತ್ಯಚಲೋತ್ತಮೇ ।
ಭ್ರಮತಸ್ತದ್ವ್ರತಂ ದೇವ ಬಾಭ್ರವ್ಯಂ ತದ್ಭವಿಷ್ಯತಿ ॥ ೩೯ ॥

ಯಚ್ಚೇದಾನೀಂ ವಿಶುದ್ಧಸ್ಯ ತೀರ್ಥೇಽಸ್ಮಿನ್ ದೇಹಶುದ್ಧತಾ ।
ತಚ್ಛುದ್ಧಶೈವಂ ಭವತು ವ್ರತಂ ತೇ ಪಾಪನಾಶನಂ ॥ ೪೦ ॥

ಯೇ ಪುರಸ್ಕೃತ್ಯ ದೇವಾಸ್ತ್ವಾಂ ಪೂಜ್ಯಂ ಯದ್ವಿಧಿನಾನ್ವಿತಾಃ ।
ಶಾಸ್ತ್ರಾಣಿ ತಾನಿ ಸರ್ವೇಷಾಂ ಕಥಯಿಷ್ಯಾಮಿ ನಾನ್ಯಥಾ ॥ ೪೧ ॥

ವ್ರತಾನಿ ಕುರುತೇ ದೇವ ತ್ವತ್ಕೃತಾನಿಂ ಹಿ ಪುತ್ರಕ ।
ಸ ತ್ವತ್ಪ್ರಸಾದಾದ್ದೇವೇಶ ಬ್ರಹ್ಮಹಾಪಿ ವಿಶುಧ್ಯತಿ ॥ ೪೨ ॥

---

೩೯. ದೇವ, ಹಿಮವತ್ಪರ್ವತದಲ್ಲಿ ಸಂಚರಿಸುತ್ತಿದ್ದ ನಿನಗುಂಟಾದ *ಬಭ್ರುತೆಯು ಜನರಿಗೆ ಬಾಭ್ರವ್ಯವೆಂಬ ವ್ರತವಾಗುವುದು.

೪೦. ಈ ತೀರ್ಥದಲ್ಲಿ ಪರಿಶುದ್ಧನಾದ ನಿನಗೆ ಈಗ ದೇಹಶುದ್ಧಿಯುಂಟಾಯಿತಷ್ಟೆ. ಅದು ಜನರಿಗೆ ಪಾಪನಾಶಕವಾದ ಶುದ್ಧಶೈವವೆಂಬ ವ್ರತವಾಗಲಿ.

೪೧. ದೇವತೆಗಳು ಪೂಜ್ಯನಾದ ನಿನ್ನನ್ನು ಪುರಸ್ಕರಿಸಿ (ಮುಂದಿಟ್ಟುಕೊಂಡು) ಯಾವ ವಿಧಿಯನ್ನನುಸರಿಸುವರೋ ಆ ಶಾಸ್ತ್ರಗಳನ್ನು ಎಲ್ಲರಿಗೂ ಹೇಳುತ್ತೇನೆ.

೪೨. ಪುತ್ರಕ, ದೇವ, ನೀನು ಮಾಡಿದ ವ್ರತಗಳನ್ನು ಮಾಡುವವನು ಬ್ರಹ್ಮಘ್ನನಾಗಿದ್ದರೂ, ದೇವೇಶನಾದ ನಿನ್ನ ಅನುಗ್ರಹದಿಂದ ಪರಿಶುದ್ಧನಾಗುವನು.

---

* ಬಭ್ರುತಾ=ಭರಿಸಲ್ಪಡುವಿಕೆ. ಭರಿಸುವಿಕೆ.

ಯದ್ವ್ರತಂ ನಗ್ನಕಾಪಾಲಂ ಯದ್ಬಾಭ್ರವ್ಯಂ ತ್ವಯಾ ಕೃತಂ ।
ಯತ್ಕೃತಂ ಶುದ್ಧಶೈವಂ ಚ ತತ್ತನ್ನಾಮ್ನಾ ಭವಿಷ್ಯತಿ ॥ ೪೩ ॥

ಮಾಂ ಪುರಸ್ಕೃತ್ಯ ದೇವ ತ್ವಂ ಪೂಜ್ಯಸೇಯೈರ್ವಿಧಾನತಃ ।
ತೇಷಾಂ ಶಾಸ್ತ್ರಾಣಿ ಸರ್ವಾಣಿ ಶಾಸ್ತ್ರಂ ಪಾಶುಪತಂ ತಥಾ ॥
ಕಥಯಸ್ವ ಮಹಾದೇವ ಸವಿಧಾನಂ ಸಮಾಸತಃ ॥ ೪೪ ॥

ಏವಮುಕ್ತಸ್ತತೋ ರುದ್ರೋ ಬ್ರಹ್ಮಣಾವ್ಯಕ್ತಮೂರ್ತಿನಾ ।
ದೇವೈರ್ಜಯೇತಿ ಸಂತುಷ್ಟಃ ಕೈಲಾಸನಿಲಯಂ ಯಯೌ ॥ ೪೫ ॥

ಬ್ರಹ್ಮಾ ಚಾಪಿ ಸುರೈಃ ಸಾರ್ಧಂ ಗತಃ ಸ್ವರ್ಲೋಕಮುತ್ತಮಂ ॥ ೪೬ ॥

ದೇವಾ ಅಪಿ ಯಯುಃ ಖಂ ಚ ಸ್ವಸ್ಥಾನಂ ಚ ಯಥಾಗತಂ ॥ ೪೭ ॥

---

೪೩. ನೀನು ಮಾಡಿದ ನಗ್ನಕಾಪಾಲವ್ರತವೂ, ಬಾಭ್ರವ್ಯವ್ರತವೂ, ಶುದ್ಧಶೈವವ್ರತವೂ ಆಯಾ ಹೆಸರಿನಿಂದಲೇ ಪ್ರಸಿದ್ಧವಾಗುವುವು.

೪೪. ದೇವ, ಮಹಾದೇವ, ಯಾರು ನನ್ನನ್ನು ಮುಂದಿಟ್ಟುಕೊಂಡು, ನಿನ್ನನ್ನು ವಿಧಿಪೂರ್ವಕವಾಗಿ ಪೂಜಿಸುವರೋ, ಅವರಿಗೆ ಸರ್ವಶಾಸ್ತ್ರಗಳನ್ನೂ, ಪಾಶುಪತಶಾಸ್ತ್ರವನ್ನೂ, ವಿಧಿಪೂರ್ವಕವಾಗಿ ಸಂಗ್ರಹವಾಗಿ ಹೇಳು.

೪೫. ಹೀಗೆ ಅವ್ಯಕ್ತಮೂರ್ತಿಯಾದ ಬ್ರಹ್ಮನಿಂದ ಹೇಳಿಸಿಕೊಂಡ ರುದ್ರನು ಬಳಿಕ ದೇವತೆಗಳ ಜಯಘೋಷದಿಂದಲೂ ಸಂತುಷ್ಟನಾಗಿ ಕೈಲಾಸನಿಲಯಕ್ಕೆ ಹೊರಟುಹೋದನು.

೪೬. ಬ್ರಹ್ಮನೂ ದೇವತೆಗಳೊಡನೆ ಉತ್ತಮವಾದ ಸ್ವರ್ಗಲೋಕಕ್ಕೆ ಹೊರಟುಹೋದನು.

೪೭. ಉಳಿದ ದೇವರೂ, ಬಂದಂತೆಯೇ ಆಕಾಶದಲ್ಲಿ ತಮ್ಮತಮ್ಮೆಡೆಗೆ ಹೊರಟುಹೋದರು.

ಏತದ್ರುದ್ರಸ್ಯ ಮಾಹಾತ್ಮ್ಯಂ ಮಯಾ ತೇ ಪರಿಕೀರ್ತಿತಂ ।
ಚರಿತಂ ಯಚ್ಚ ದೇವಸ್ಯ ವಿತ್ತಂ ಸಮಭವದ್ಭುವಿ ॥ ೪೮ ॥

ಇತಿ ಶ್ರೀ ವರಾಹಪುರಾಣೇ ರುದ್ರಮಾಹಾತ್ಮ್ಯಂ ನಾಮ
ಸಪ್ತನವತಿತಮೋಽಧ್ಯಾಯಃ

---

೪೮. ರುದ್ರದೇವನ ಯಾವ ಚರಿತ್ರೆಯು ಲೋಕಕ್ಕೆ ತಿಳಿಯಿತೋ, ಆ ಮಹಿಮೆಯನ್ನೇ ನಾನು ನಿನಗೆ ಹೇಳಿದೆನು.

ಅಧ್ಯಾಯದ ಸಾರಾಂಶ :—

ಸೃಷ್ಟಿಕರ್ತನಾದ ಬ್ರಹ್ಮನು, ಮಗನಾದ ರುದ್ರನನ್ನು ಪ್ರೀತಿಯಿಂದ 'ಕಪಾಲಿ' ಎಂದು ಸಂಬೋಧಿಸಲು, ಅದರಿಂದ ಕೋಪಿಸಿಕೊಂಡ ರುದ್ರನು, ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ಉಗುರಿನಿಂದ ಕತ್ತರಿಸಲು, ಆ ತಲೆಯು ಅವನ ಕೈಗೆ ಅಂಟಿಕೊಳ್ಳಲಾಗಿ, ಅದರ ನಿವೃತ್ತಿಗಾಗಿ ಬ್ರಹ್ಮನು ಹೇಳಿದಂತೆ ರುದ್ರನು ಭೂಮಿಯ ಸರ್ವತೀರ್ಥಗಳಲ್ಲೂ ಮಿಂದು ನಗ್ನನಾಗಿ ಕಾಶಿಗೆ ಬಂದು, ಗಂಗೆಯಲ್ಲಿ ಸ್ನಾನಮಾಡಲಾಗಿ ಕಪಾಲವಿಮೋಚನೆಯಾದುದನ್ನೂ, ಅಲ್ಲಿಗೆ ಬಂದ ಬ್ರಹ್ಮನು ಆ ತೀರ್ಥಕ್ಕೆ ಕಪಾಲವಿಮೋಚನವೆಂಬ ಹೆಸರನ್ನು ಇಟ್ಟುದನ್ನೂ, ನಗ್ನಕಾಪಾಲಾದಿ ವ್ರತಗಳ ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತೇಳನೆಯ ಅಧ್ಯಾಯ.

॥ ಶ್ರೀಃ ॥

–X–

ಅಷ್ಟನವತಿತಮೋಧ್ಯಾಯಃ

ಅಥ ಪರ್ವಾಧ್ಯಾಯಃ

॥ ಧರಣ್ಯುವಾಚ ॥

ಯೋಸೌ ಸತ್ಯತಪಾ ನಾಮ ಲುಬ್ಧೋ ಭೂತ್ವಾ ದ್ವಿಜೋ ಬಭೌ ।
ಯೇನಾರುಣಿರ್ವ್ಯಾಘ್ರಭಯಾತ್ ರಕ್ಷಿತೋ ಯಸ್ಸ್ವಶಕ್ತಿತಃ ॥
ದುರ್ವಾಸಸಸ್ಸಂಶ್ರುತಾರ್ಥಶ್ಚ ಹಿಮವಂತಂ ನಗಂ ಯಯೌ ॥ ೧ ॥

ತಸ್ಯೋಪರಿ ಮಹಚ್ಚಿತ್ರಂ ಭವತೀತಿ ತ್ವಯೇರಿತಂ ।
ಕೀದೃಶಂ ತನ್ಮಮಾಚಕ್ಷ್ವ ಮಹತ್ಕೌತೂಹಲಂ ವಿಭೋ ॥ ೨ ॥

ತೊಂಬತ್ತೆಂಟನೆಯ ಅಧ್ಯಾಯ

ಪರ್ವಾಧ್ಯಾಯ

೧–೨. ಭೂದೇವಿ ಯಾವ ಬೇಡನು ಸತ್ಯತಪನೆಂಬ ಬ್ರಾಹ್ಮಣನಾಗಿ ಪ್ರಕಾಶಿಸಿದನೋ, ಯಾರು ತನ್ನ ಶಕ್ತಿಯಿಂದ ಆರುಣಿಯೆಂಬ ಮುನಿಯನ್ನು ಹುಲಿಯ ಭಯದಿಂದ ರಕ್ಷಿಸಿದನೋ, ದುರ್ವಾಸಮುನಿಯಿಂದ ತತ್ತ್ವೋಪದೇಶವನ್ನು ಪಡೆದು, ಹಿಮವತ್ಪರ್ವತಕ್ಕೆ, ಹೊರಟುಹೋದನೋ, 'ಅವನ ಚರಿತ್ರೆಯು ಮುಂದೆ ಬಹು ವಿಚಿತ್ರವಾಗುತ್ತದೆ' ಎಂದು ನೀನು ಹಿಂದೆ ಹೇಳಿದೆ. ವಿಭುವೇ, ನನಗೆ ಬಹು ಕುತೂಹಲವಾಗಿದೆ. ಆ ವೈಚಿತ್ರ್ಯವೇನೆಂಬುದನ್ನು ಹೇಳು.

॥ ಶ್ರೀ ವರಾಹ ಉವಾಚ ॥

ಸ ಹಿ ಸತ್ಯತಪಾಃ ಪೂರ್ವಂ ಭೃಗುವಂಶೋದ್ಭವೋ ದ್ವಿಜಃ ।
ದಸ್ಯುಸಂಸರ್ಗಸಂಭೂತೋ ದಸ್ಯುವತ್ಸಮಜಾಯತ ॥ ೩ ॥

ತತಃ ಕಾಲೇನ ಮಹತಾ ಋಷಿಸಂಗಾತ್ಪುನರ್ದ್ವಿಜಃ ।
ಬಭೌ ದುರ್ವಾಸಸಾ ಸಮ್ಯಗ್ಬೋಧಿತಶ್ಚ ವಿಶೇಷತಃ ॥ ೪ ॥

ಹಿಮಾದ್ರೇರುತ್ತರೇ ಪಾದೇ ಪುಷ್ಪಭದ್ರಾ ನದೀ ಶುಭಾ ॥ ೫ ॥

ತಸ್ಯಾಸ್ತೀರೇ ಶಿಲಾ ದಿವ್ಯಾ ನಾಮ್ನಾ ಚಿತ್ರಶಿಲಾ ಧರೇ ।
ನ್ಯಗ್ರೋಧಶ್ಚ ಮಹಾಂಸ್ತತ್ರ ನಾಮ್ನಾ ಭದ್ರೋ ಮಹಾವಟಃ ॥ ೬ ॥

ತತ್ರ ಸತ್ಯತಪಾಃ ಸ್ಥಿತ್ವಾ ತಪಃ ಕುರ್ವನ್ಮಹಾತಪಾಃ ।
ಸ ಕದಾಚಿತ್ಕುಠಾರೇಣ ಚಕರ್ತ ಸಮಿಧಃ ಕಿಲ ॥
ಚಿಚ್ಛೇದ ಚಾಂಗುಲೀಮೇಕಾಂ ವಾಮತರ್ಜನಿಕಾಂ ಮುನಿಃ ॥ ೭ ॥

---

೩. ಶ್ರೀವರಾಹ— ಆ ಸತ್ಯತಪನು ಪೂರ್ವದಲ್ಲಿ, ಭೃಗುವಂಶದಲ್ಲಿ ಹುಟ್ಟಿದ ಬ್ರಾಹ್ಮಣನು. ಬೇಡರ ಸಹವಾಸದಿಂದ ಬೇಡನಂತಾಗಿದ್ದನು.

೪: ಬಳಿಕ ಬಹುಕಾಲದಮೇಲೆ ಆರುಣಿಯೆಂಬ ಋಷಿಯ ಸಂಗದಿಂದ ಮತ್ತೆ ಬ್ರಾಹ್ಮಣನಾಗಿ ಪ್ರಕಾಶಕ್ಕೆ ಬಂದನು. ದುರ್ವಾಸಮುನಿಯಿಂದ ಚೆನ್ನಾಗಿ ವಿಶೇಷವಾದ ಉಪದೇಶವನ್ನೂ ಪಡೆದನು.

೫. ಧರೇ, ಹಿಮಾದ್ರಿಯ ಉತ್ತರದ ತಪ್ಪಲಿನಲ್ಲಿ ಶುಭಕರವಾದ ಪುಷ್ಪ ಭದ್ರಾನದಿಯಿದೆ.

೬. ಅದರ ದಡದಲ್ಲಿ ಚಿತ್ರಶಿಲೆಯೆಂಬ ಹೆಸರಿನ ದಿವ್ಯವಾದ ಶಿಲೆಯಿದೆ. ಅಲ್ಲಿ ಭದ್ರವಟವೆಂಬ ಹೆಸರಿನ ದೊಡ್ಡ ಆಲದಮರವಿದೆ.

೭. ಮಹಾತಪಸ್ವಿಯಾದ ಸತ್ಯತಪನು ಅಲ್ಲಿದ್ದು ತಪಸ್ಸನ್ನು ಮಾಡುತ್ತಿದ್ದನು. ಆ ಮುನಿಯು ಒಂದಾನೊಂದು ದಿನ ಕೊಡಲಿಯಿಂದ ಸಮಿತ್ತುಗಳನ್ನು ಕತ್ತರಿಸುತ್ತಾ, ಎಡಗೈಯ್ಯ ಹೆಬ್ಬೆರಳಿನ ಪಕ್ಕದ ಬೆರಳನ್ನು ಕತ್ತರಿಸಿಕೊಂಡನು.

ಛಿನ್ನಾಯಾಮಂಗುಲೌ ತಸ್ಯ ಭಸ್ಮಚೂರ್ಣಂ ಭವತ್ಕಿಲ ‖ ೮ ‖

ನ ಲೋಹಿತಂ ನ ಮಾಂಸಂತು ನ ಮಜ್ಜಾ ತತ್ರ ದೃಶ್ಯತೇ ।
ಅಂಗುಲೀ ಸಂಧಿತಾ ತೇನ ಪೂರ್ವವಚ್ಚಾಭವತ್ಕೃತಾ ‖ ೯ ‖

ತಸ್ಮಿನ್ಭದ್ರವಟೇ ಚೈಕಂ ಮಿಥುನಂ ಕಿನ್ನರಂ ಸ್ಥಿತಂ ।
ರಾತ್ರೌ ಸುಪ್ತಮೃಷೇಸ್ತಸ್ಯ ದೃಷ್ಟ್ವಾ ತನ್ಮಹದದ್ಭುತಂ ‖ ೧೦ ‖

ಪ್ರಭಾತೇ ವಿಮಲೇ ಪ್ರಾಪ್ತಮಿಂದ್ರಲೋಕಮಿತಿ ಸ್ಮೃತಿಃ ‖ ೧೧ ‖

ಅಥೇಂದ್ರೇಣ ಸುರಾಸ್ಸರ್ವೇ ಯಕ್ಷಗಂಧರ್ವಕಿನ್ನರೈಃ ।
ಪೃಷ್ಟಾಃ ಕಿಂಚಿದಿಹಾಶ್ಚರ್ಯಮಪೂರ್ವಂ ಕಥ್ಯತಾಮಿತಿ ‖ ೧೨ ‖

ತತ್ರ ರುದ್ರಸರಸ್ತೀರೇ ಯದೇತನ್ಮಿಥುನಂ ಶುಭಂ ।
ಸ್ಥಿತಂ ಕಿನ್ನರಯೋಸ್ತಚ್ಚ ವಾಕ್ಯಂ ಚೇದಮುವಾಚ ಹ ‖
ದೃಷ್ಟಂ ತು ಮಹದಾಶ್ಚರ್ಯಂ ಪುಷ್ಪಭದ್ರಾತಟೇ ಶುಭೇ ‖ ೧೩ ‖

೮-೯. ಕತ್ತರಿಸಿದ ಅವನ ಬೆರಳಿನಲ್ಲಿ ವಿಭೂತಿಯ ಪುಡಿಯಿದ್ದಿತು. ರಕ್ತವಾಗಲಿ, ಮಾಂಸವಾಗಲಿ, ಮಜ್ಜೆಯಾಗಲಿ, ಕಾಣಿಸಲಿಲ್ಲ. ಆ ಮುನಿಯು, ಕತ್ತರಿಸಿದ ಬೆರಳನ್ನು ಮತ್ತೆ ಕೂಡಿಸಿ, ಮೊದಲಿದ್ದಂತೆಯೇ ಮಾಡಿದನು.

೧೦-೧೧. ಆ ಭದ್ರವಟದಲ್ಲಿ, ರಾತ್ರಿಯಲ್ಲಿ ಮಲಗಿದ್ದ ಕಿನ್ನರರ ಜೋಡಿಯು ಋಷಿಯ ಆ ಅತ್ಯಾಶ್ಚರ್ಯವನ್ನು ನೋಡಿ, ಬೆಳಗಾಗುತ್ತಲೇ ಇಂದ್ರಲೋಕಕ್ಕೆ ಹೊರಟು ಹೋಯಿತೆಂದು(ಜ್ಞಾಪಕ)ಸ್ಮೃತಿ.

೧೨. ಬಳಿಕ ಇಂದ್ರನು ಯಕ್ಷಗಂಧರ್ವ ಕಿನ್ನರಸಹಿತರಾದ ದೇವತೆಗಳನ್ನು "ಅಪೂರ್ವವಾದ ಯಾವುದಾದರೂ ಆಶ್ಚರ್ಯವನ್ನು ಹೇಳಿರಿ" ಎಂದು ಕೇಳಿದನು.

೧೩. ರುದ್ರಸರೋವರದ ತೀರದಲ್ಲಿ ಶುಭಕರವಾದ ಪುಷ್ಪಭದ್ರಾನದಿಯ ದಡದಲ್ಲಿದ್ದು, ತಾನು ನೋಡಿದ ಅತ್ಯಾಶ್ಚರ್ಯವನ್ನು ಶುಭಕರವಾದ ಆ ಕಿನ್ನರರ ಜೋಡಿಯು ಹೇಳಿತು.

ಯದೇತತ್ಸತ್ಯತಪಸಃ ಸಮುವ್ರೋಚತ್ತ್ವತಃ ಶುಭೇ ।
ದೃಷ್ಟಂ ಕಿಂಚಿದಿಹಾಶ್ಚರ್ಯಂ ದೃಷ್ಟ್ವಾ* ತು ಹಿಮವದ್ಗಿರೌ ॥ ೧೪ ॥

+ಪುಷ್ಪಭದ್ರಾನದೀತಿರೇ ಮಹದಾಶ್ಚರ್ಯಮುತ್ತಮಂ ।
ಯದೇತತ್ಸತ್ಯತಪಸಃ ಸಮುವ್ರೋಚತ್ತ್ವತಃ ಶುಭೇ ॥ ೧೫ ॥

ಸ್ರವಣಂ ಭಸ್ಮನಶ್ಚೈವ ಶ್ರುತಂ ಸರ್ವಂ ಶಶಂಸ ಹ ॥ ೧೬ ॥

ತಚ್ಛ್ರುತ್ವಾ ಸಹಸಾ ಶಕ್ರೋ ವಿಸ್ಮಿತೋ ವಿಷ್ಣುಮಬ್ರವೀತ್ ।
ಆಗಚ್ಛ ವಿಷ್ಣೋ ಗಚ್ಛಾಮೋ ಹಿಮವತ್ಪಾರ್ಶ್ವಮುತ್ತಮಂ ।
ತತ್ರಾಶ್ಚರ್ಯಮಪೂರ್ವಂ ಮೇ ಕಥಿತಂ ಕಿನ್ನರೇಣ ಹ ॥ ೧೭ ॥

ಏವಮುಕ್ತಸ್ತತೋ ವಿಷ್ಣುರ್ವಾರಾಹಂ ರೂಪಮಗ್ರಹೀತ್ ।
ಮೃಗಯುಶ್ಚ ತಥೈವೇಂದ್ರೋ ಜಗ್ಮತುಸ್ತಮೃಷಿಂ ಪ್ರತಿ ॥ ೧೮ ॥

೧೪-೧೬. ಶುಭೇ, ಹಿಮವತ್ಪರ್ವತದಲ್ಲಿ ಪುಷ್ಪಭದ್ರಾನದಿಯ ತೀರದಲ್ಲಿ ತಾನು ಕಣ್ಣಿಂದ ನೋಡಿದ ಸತ್ಯತಪನ ಆತ್ಯಾಶ್ಚರ್ಯವನ್ನೂ, ಕತ್ತರಿಸಿದ ಬೆರಳಿನಿಂದ ಭಸ್ಮವು ಸುರಿದುದನ್ನೂ, ತಾನು ಕೇಳಿದುದೆಲ್ಲವನ್ನೂ ಹೇಳಿತು.

೧೭. ಅದನ್ನು ಕೇಳಿ, ಇಂದ್ರನು ತಟ್ಟನೆ ಆಶ್ಚರ್ಯಗೊಂಡು, ವಿಷ್ಣುವನ್ನು ನೋಡಿ, "ವಿಷ್ಣುವೇ, ಬಾ. ಉತ್ತಮವಾದ ಹಿಮವತ್ಪರ್ವತಪಾರ್ಶ್ವಕ್ಕೆ ಹೋಗೋಣ. ಕಿನ್ನರನು ಅಲ್ಲಿಯ ಅಪೂರ್ವವಾದ ಆಶ್ಚರ್ಯವನ್ನು ನನಗೆ ಹೇಳಿದ್ದಾನೆ." ಎಂದನು.

೧೮. ಹಾಗೆನಲು ವಿಷ್ಣುವು ವರಾಹರೂಪವನ್ನು ಧರಿಸಿದನು. ಬೇಡನಾದ ಇಂದ್ರನೂ, ಅವನೂ ಆ ಸತ್ಯತಪನ ಹತ್ತಿರಕ್ಕೆ ಹೊರಟರು.

---

* ದೃಷ್ಟಿಸ್ತು (ಬೊಂ.)

+ ಪುಷ್ಪಭದ್ರಾ

ವಿಷ್ಣುರ್ವಾರಾಹರೂಪೇಣ ಋಷಿದೃಷ್ಟಿಪಥೇ ಸ್ಥಿತಃ ।
ಭೂತ್ವಾದೃಶ್ಯೋಽಪ್ಯದೃಶ್ಯೋಽಭೂತ್ಪುನರೇವ ಚ ದೃಶ್ಯತೇ || ೧೯ ||

ತಾವದಿಂದ್ರೋ ಧನುಷ್ಪಾಣಿಸ್ತೀಕ್ಷ್ಣಸಾಯಕಧೃಗ್ವನೇ ।
ಆಗತ್ಯ ಸತ್ಯತಪಸಮೃಷಿಮೇನಮುವಾಚ ಹ || ೨೦ ||

ಭಗವನ್ನಿಹ ದೃಷ್ಟಸ್ತೇ ವರಾಹಃ ಪೃಥುಲೋ ಮಹಾನ್ ।
ಯೇನ ತಂ ಹನ್ಮಿ ಭೃತ್ಯಾನಾಂ ಪೋಷಣಾಯ ಮಹಾಮುನೇ || ೨೧ ||

ಏವಮುಕ್ತೋ ಮುನಿಸ್ತೇನ ಚಿಂತಯಾಮಾಸ ತತ್ಕ್ಷಣಾತ್ || ೨೨ ||

ಯದಿ ತಂ ದರ್ಶಯಾಮ್ಯಸ್ಮೈ ವರಾಹಂ ಹನ್ಯತೇ ತದಾ ।
ನೋ ಚೇತ್ಕುಟುಂಬಃ ಕ್ಷುಧಯಾ ಸೀದತ್ಯಸ್ಯ ನ ಸಂಶಯಃ || ೨೩ ||

---

೧೯. ವಿಷ್ಣುವು ಹಂದಿಯ ರೂಪದಿಂದ ಋಷಿಯ ಕಣ್ಣಿಗೆ ಕಾಣಿಸಿಕೊಂಡನು. ಕಾಣಿಸಿಕೊಂಡು, ಮತ್ತೆ ಕಣ್ಮರೆಯಾಗಿ, ತಿರುಗಿ ಕಾಣಿಸಿಕೊಂಡನು.

೨೦–೨೧. ಅಷ್ಟರಲ್ಲಿ ಬಿಲ್ಲನ್ನೂ, ಹರಿತವಾದ ಬಾಣಗಳನ್ನೂ ಹಿಡಿದುಕೊಂಡ, ಬೇಡನ ರೂಪದ ಇಂದ್ರನು, ಆ ಸತ್ಯತಪಮುನಿಯ ಹತ್ತಿರಕ್ಕೆ ಬಂದು, "ಪೂಜ್ಯನೇ, ಮಹಾಮುನಿಯೇ; ನೀನು ಇಲ್ಲಿ ದೊಡ್ಡದಾದ ಹಂದಿಯೊಂದನ್ನೇನಾದರೂ ಕಂಡೆಯಾ? ಸೇವಕರ ಪೋಷಣೆಗಾಗಿ ಅದನ್ನು ಕೊಲ್ಲಬೇಕಾಗಿದೆ." ಎಂದನು.

೨೨. ಅವನು ಹಾಗೆನಲು, ಮುನಿಯು ಒಡನೆಯೇ(ಹೀಗೆ) ಆಲೋಚಿಸಿದನು.

೨೩. 'ಇವನಿಗೆ ಆ ಹಂದಿಯನ್ನು ತೋರಿಸಿದರೆ ಇವನು ಅದನ್ನು ಕೊಲ್ಲುತ್ತಾನೆ, ತೋರಿಸದಿದ್ದರೆ ಇವನ ಕುಟುಂಬವು ಹಸಿವಿನಿಂದ ಸಂಕಟಪಡುವುದರಲ್ಲಿ ಸಂದೇಹವಿಲ್ಲ.'

ಜಾಯಾಪುತ್ರಸಮಾಯುಕ್ತೋ ಲುಬ್ಧಕೋಽಯಂ ಕ್ಷುಧಾನ್ವಿತಃ |
ಸಶಲ್ಯಶ್ಚ ವರಾಹೋಽಯಂ ಮಮಾಶ್ರಮಮುಪಾಗತಃ || ೨೪ ||

ಏವಂಗತೇ ತು ಕಿಂ ಕಾರ್ಯಮಥಾ ಸೌ ಚಿಂತಯನ್ಪ್ರಭುಃ |
ನಾಧ್ಯಗಚ್ಛತ ಬುದ್ಧಿಶ್ಚ ಕ್ಷಣಾತ್ತಸ್ಯ ವ್ಯಜಾಯತ || ೨೫ ||

ದ್ರಷ್ಟುಂ* ಚಕ್ಷುರ್ನಿಹಿತಂ ಜಂಗಮೇಷು
ಜಿಹ್ವಾ ವಕ್ತುಂ ವ್ಯಾಗಯೌ ತದ್ವಿಸೃಷ್ಟಂ |
ದ್ರಷ್ಟು+ಶ್ಚಕ್ಷುಷೋ ನಾಸ್ತಿ ಹೆಜ್ವೇಹ ವಕ್ತುಂ
ಜಿಹ್ವಾಯಾಸ್ತ್ವೃತ್ತತ್ತ್ವತೋಽಸ್ತೀಹ ಚಕ್ಷುಃ || ೨೬ ||

ಏವಂ ಶ್ರುತ್ವಾ ದ್ವಾವಪಿ ತಸ್ಯ ತುಷ್ಟೌ
ಇಂದ್ರಾವಿಷ್ಣೂ ದರ್ಶಯಂತೌ ಸ್ವಮೂರ್ತಿಂ |
ವಾಕ್ಯಂ ಚೇದಮೂಚತುರ್ಬ್ರೂಹಿ ನೌ ತೇ
ತುಷ್ಟೌ ಧನ್ಯಂ ವರಮೇಕಂ ವೃಣೀಷ್ವ || ೨೭ ||

---

೨೪. ಹೆಂಡತಿಮಕ್ಕಳೊಡನೆ ಈ ಬೇಡನು ಹಸಿದಿದ್ದಾನೆ. ಬಾಣವು ನಾಟಿಕೊಂಡಿರುವ ಹಂದಿಯೇನೋ ನನ್ನ ಆಶ್ರಮಕ್ಕೆ ಬಂದಿದೆ.

೨೫. ಹೀಗಿರುವಾಗ ಏನುಮಾಡಬೇಕು? ಎಂದು ಆಲೋಚಿಸಿ, ತಟ್ಟನೆ ತಿಳಿಯದಿದ್ದನು. ಸ್ವಲ್ಪಹೊತ್ತಿನಲ್ಲಿ ಆತನಿಗೆ ಬುದ್ಧಿತೋರಿತು.

೨೬. ಚರಜೀವಿಗಳಿಗೆ ನೋಡುವುದಕ್ಕೆ ಕಣ್ಣೂ, ಮಾತನಾಡುವುದಕ್ಕೆ ನಾಲಗೆಯೂ ಇವೆ. ಬೇಡನ ವಿಷಯದಲ್ಲಿ ಅದು ಇಲ್ಲವಾಗಿದೆ. ನೋಡುವ ಕಣ್ಣಿಗೆ ಹೇಳಲು ನಾಲಗೆಯಿಲ್ಲ. ನಿಜವಾಗಿ ನಾಲಗೆಗೆ ಕಣ್ಣಿದ್ದರೆ ಅದಕ್ಕೆ ನೋಡಿ, ಹೇಳುವುದಕ್ಕೆ ಆಗುತ್ತಿದ್ದಿತು. ಅದಕ್ಕೆ ಕಣ್ಣಿಲ್ಲ.

೨೭. ಹೀಗೆ ಹೇಳಿದುದನ್ನು ಕೇಳಿ, ಸಂತೋಷಗೊಂಡ ಇಂದ್ರ ವಿಷ್ಣುಗಳಿಬ್ಬರೂ ಆ ಋಷಿಗೆ ತಮ್ಮ ನಿಜರೂಪವನ್ನು ತೋರಿಸಿ, "ನಾವು ನಿನಗೆ ಒಲಿದಿದ್ದೇವೆ. ಉತ್ತಮವಾದ ವರವೊಂದನ್ನು ಕೇಳು" ಎಂದರು.

---

* ದೃಷ್ಟುಂ

+ ದ್ರಷ್ಟುಂ ಎಂದು ಮುದ್ರಿತ ಪುಸ್ತಕಗಳಲ್ಲಿದೆ. ಆದರೆ ದ್ರಷ್ಟುಶ್ಚಕ್ಷುಷಃ ಎಂದು ಸತ್ಯತಪರು ಹೇಳಿರುವರೆಂದು ಯಾಮುನಾಚಾರ್ಯರೇ ಮೊದಲಾದವರು ಹೇಳಿರುವುದರಿಂದಲೂ, ಹಾಗಿದ್ದರ ಅರ್ಥವು ಸರಿಯಾಗುವುದರಿಂದಲೂ ತಿದ್ದಿದೆ.

ತಚ್ಛ್ರುತ್ವಾಸೌ ಸತ್ಯತಪಾ ಉವಾಚ
ನ ಚಾತಿರಿಕ್ತೋಽಸ್ತಿ ವರಃ ಪೃಥಿವ್ಯಾಂ ।
ಯದ್ದೃಷ್ಟೌ ಮೇ ಪುರತೋ ದೇವದೇವೌ
ಬಲಂ ವರೇಣಾಪಿ ಕೃತಾರ್ಥತಾಸೀತ್ ॥ ೨೮ ॥

ತಥಾಪೀದಂ ಯೇ ಸದಾ ಸರ್ವಕಾಲೇ
ವಿಪ್ರಾ ವಿಪ್ರಾಂಶ್ಚಾರ್ಚಯಂತೀಹ ಭಕ್ತ್ಯಾ
ತೇಷಾಂ ಪಾಪಂ ನಶ್ಯತಾಂ ಮಾಸಮೇಕಂ ।
ಯತ್ಸಂಚಿತಂ ತ್ವೇಷ ಏಕೋ ವರೋಽಸ್ತು
ಹ್ಯಭೀಷ್ಟೋ ಮೇ ಸಾಂಪ್ರತಂ ದೇಹಿ ಮಹ್ಯಂ ॥ ೨೯ ॥

ಮುಕ್ತಿಂ ಚೇಹ ವ್ರಜಾಮೀತಿ ದ್ವಿತೀಯೋಽಸ್ತು ವರೋ ಮಮ ॥ ೩೦ ॥

ತಥೇತ್ಯುಕ್ತ್ವಾ ತು ತೌ ದೇವೌ ದತ್ವಾ ತಸ್ಯ ವರಂ ಶುಭಂ ।
ಅದರ್ಶನಂ ಗತೌ ದೇವೌ ಸೋಽಪಿ ತತ್ರ ವ್ಯವಸ್ಥಿತಃ ॥
ಲಬ್ಧ್ವಾ ವರಂ ಸತ್ಯತಪಾ ಬ್ರಹ್ಮಭೂತೋಽಭವದ್ಧೃದಿ ॥ ೩೧ ॥

೨೮–೩೦. ಅದನ್ನು ಕೇಳಿ ಸತ್ಯತಪನು "ನನ್ನ ಎದುರಿಗೆ ದೇವ ದೇವರಾದ ನಿಮ್ಮನ್ನು ಕಂಡುದಕ್ಕಿಂತಲೂ ಮೇಲಾದ ವರವು ಪೃಥ್ವಿಯಲ್ಲಾವುದೂ ಇಲ್ಲ. ನನ್ನ ಕೃತಾರ್ಥತೆಯು ವರಕ್ಕಿಂತಲೂ ಬಲವಾದುದಾಯಿತು. ಆದರೂ ಈ ವರವಾಗಲಿ. ಯಾವ ಬ್ರಾಹ್ಮಣರು ಒಂದು ತಿಂಗಳು ಇಲ್ಲಿ ಸರ್ವದಾ ಬ್ರಾಹ್ಮಣರನ್ನು ಭಕ್ತಿಯಿಂದ ಪೂಜಿಸುವರೋ ಅವರ ಸಂಚಿತಪಾಪವು ನಾಶವಾಗಲಿ. ಎಂಬುದು ನನಗೆ ಇಷ್ಟವಾದ ಒಂದು ವರ. ಈಗ ಅದನ್ನು ಕೊಡಿ. ಇಲ್ಲಿ ನಾನು ಮುಕ್ತಿಯನ್ನು ಪಡೆಯಬೇಕು. ಇದು ನನ್ನ ಎರಡನೆಯ ವರವಾಗಲಿ." ಎಂದನು.

೩೧. ಇಂದ್ರವಿಷ್ಣುಗಳು, "ಹಾಗೆಯೇ ಆಗಲಿ" ಎಂದು ಆತನಿಗೆ ಶುಭವಾದ ವರವನ್ನು ಕೊಟ್ಟು, ಅದೃಶ್ಯರಾದರು. ವರವನ್ನು ಪಡೆದು ಅಲ್ಲೇ ಇದ್ದ ಆ ಸತ್ಯತಪನೂ ಮನಸ್ಸಿನಲ್ಲಿ ಬ್ರಹ್ಮನಂತಾದನು.

ಯಾವದಾಸ್ತೇ ಶುಭೇ ದೇಶೇ ಕೃತಕೃತ್ಯೋ ಮಹಾಮುನಿಃ ।
ತಾವತ್ತಸ್ಯ ಗುರುಸ್ತತ್ರ ತ್ವಾರುಣಿಸ್ಸಮದೃಶ್ಯತ ॥
ಪೃಥ್ವೀಂ ಪ್ರದಕ್ಷಿಣೀಕೃತ್ಯ ತೀರ್ಥಹೇತೋರ್ವಿಚಕ್ಷಣಃ ॥ ೩೨ ॥

ತೇನ ಚಾಸೌ ಮಹಾಭಕ್ತ್ಯಾ ಪೂಜಿತೋ ಮುನಿಪುಂಗವಃ ।
ಪಾದ್ಯಾಚಮನಗೋದಾನೈಃ ಕೃತಾಸನಪರಿಗ್ರಹಃ ॥ ೩೩ ॥

ಜ್ಞಾತ್ವಾ ಸ ಶಿಷ್ಯಂ ಸಿದ್ಧಂ ತು ತಪಸಾ ದಗ್ಧಕಿಲ್ಬಿಷಂ ।
ಉವಾಚ ವಿನಯಾಪನ್ನಂ ಪ್ರಾಂಜಲಿಂ ಪುರತಃ ಸ್ಥಿತಂ ॥ ೩೪ ॥

॥ ಆರುಣಿರುವಾಚ ॥

ಪುತ್ರ ಸಿದ್ಧೋಽಸಿ ತಪಸಾ ಬ್ರಹ್ಮಭೂತೋಽಸಿ ಸುವ್ರತ ॥ ೩೫ ॥

ಇದಾನೀಮಾತ್ಮನಾ ಸಾರ್ಧಂ ಮುಕ್ತಿಕಾಲೋ ಮತೋಽಸ್ತಿ ತೇ ॥ ೩೬ ॥

---

೩೨. ಶುಭವಾದ ಆ ಪ್ರದೇಶದಲ್ಲೇ ಧನ್ಯನಾದ ಆ ಮಹಾಮುನಿಯು ಇರುತ್ತಿರಲು, ಆತನ ಗುರುವೂ, ವಿದ್ವಾಂಸನೂ ಆದ ಆರುಣಿಯು ಭೂಪ್ರದಕ್ಷಿಣೆಯನ್ನು ಮಾಡಿ, ತೀರ್ಥಯಾತ್ರೆಗಾಗಿ ಅಲ್ಲಿ ಬಂದು ಕಾಣಿಸಿ ಕೊಂಡನು.

೩೩–೩೪. ಸತ್ಯತಪನಿಂದ ಮಹಾಭಕ್ತಿಪೂರ್ವಕವಾಗಿ ಪಾದ್ಯಾಚಮನ ಗೋದಾನಗಳಿಂದ ಪೂಜೆಗೊಂಡು ಆರುಣಿಮುನಿವರ್ಯನು ಪೀಠದಲ್ಲಿ ಕುಳಿತು, ಶಿಷ್ಯನು ತಪಸ್ಸಿನಿಂದ ಪಾಪಗಳನ್ನು ಸುಟ್ಟು, ಸಿದ್ಧನಾಗಿರುವುದನ್ನು ಅರಿತು, ವಿನಯದಿಂದ ಕೈಮುಗಿದುಕೊಂಡು ಎದುರಿಗೆ ಕುಳಿತಿರುವ ಆತನಿಗೆ ಹೀಗೆಂದನು

೩೫. ಆರುಣಿ—ಸುವ್ರತ, ಪುತ್ರ, ತಪಸ್ಸಿನಿಂದ ಸಿದ್ಧನಾಗಿದ್ದೀಯೆ. ಬ್ರಹ್ಮನಂತಾಗಿದ್ದೀಯೆ.

೩೬. ಈಗ ನನ್ನೊಡನೆ ನೀನೂ ಮುಕ್ತಿಯನ್ನು ಪಡೆಯಲು ತಕ್ಕ ಕಾಲ ವೆಂಬುದು ನನ್ನ ಇಷ್ಟವಾಗಿದೆ.

ಉತ್ತಿಷ್ಠ ಗಮ್ಯತಾಂ ಪುತ್ರ ಮಯಾ ಸಾರ್ಧಂ ಪರಂ ಪದಂ ।
ಯದ್ಗತ್ವಾ ನಪುನರ್ಜನ್ಮ ಭವತೀತಿ ನ ಸಂಶಯಃ ॥ ೩೭ ॥

ಏವಮುಕ್ತ್ವಾ ತು ತೌ ಸಿದ್ಧೌ ಉಭೌ ಸತ್ಯತಪಾರುಣೀ ।
ಧ್ಯಾತ್ವಾ ನಾರಾಯಣಂ ದೇವಂ ದದ್ದೇಹೇ ತೌ ಲಯಂ ಗತೌ ॥ ೩೮ ॥

ಯಶ್ಚಾಪಿ ಶೃಣುಯಾತ್ಪಾದಂ ಪರ್ವಾಧ್ಯಾಯಂ ಸವಿಸ್ತರಂ ।
ಶ್ರಾವಯೇದ್ವಾಪಿ ಸ ನರೋ ಗತಿಮಿಷ್ಟಾಮವಾಪ್ನುಯಾತ್ ॥ ೩೯ ॥

ಇತಿ ಶ್ರೀ ವರಾಹಪುರಾಣೇ ಪರ್ವಾಧ್ಯಾಯೋ ನಾಮ
ಅಷ್ಟನವತಿತಮೋಽಧ್ಯಾಯಃ

---

೩೭. ಏಳು, ಮಗೂ, ಎಲ್ಲಿ ಹೋದರೆ ಪುನರ್ಜನ್ಮವಿಲ್ಲವೆಂಬುದರಲ್ಲಿ ಸಂದೇಹವಿಲ್ಲವೋ ಆ ಪರಮಪದಕ್ಕೆ ನನ್ನೊಡನೆ ಹೊರಡು.

೩೮. ಹಾಗೆ ಹೇಳಿ, ಸಿದ್ಧಿಯನ್ನು ಪಡೆದವರಾದ ಆ ಸತ್ಯತಪಾರುಣಿಗಳಿಬ್ಬರೂ ನಾರಾಯಣದೇವನನ್ನು ಧ್ಯಾನಿಸಿ, ಅವನ ದೇಹದಲ್ಲಿ ಐಕ್ಯರಾದರು.

೩೯. ವಿಸ್ತಾರವಾದ ಈ ಪರ್ವಾಧ್ಯಾಯದಲ್ಲಿ ಒಂದು ಪಾದವನ್ನಾದರೂ ಯಾರು ಕೇಳುವರೋ, ಕೇಳಿಸುವರೋ ಅವರು ಇಷ್ಟಪದವಿಯನ್ನು ಪಡೆಯುವರು.

ಅಧ್ಯಾಯದ ಸಾರಾಂಶ :—

ದುರ್ವಾಸರಿಂದ ಉಪದೇಶವನ್ನು ಪಡೆದು ತಪಸ್ಸಿಗಾಗಿ ಹಿಮವತ್ಪರ್ವತಕ್ಕೆ ಹೊರಟುಹೋದ ಸತ್ಯತಪಋಷಿಯ ಮುಂದಿನ ಚರಿತ್ರೆಯನ್ನು ಕೇಳಿದ ಭೂದೇವಿಗೆ ಶ್ರೀವರಾಹನು—ಕತ್ತರಿಸಿಹೋದ ಆ ತಪಸ್ವಿಯ ಬೆರಳಲ್ಲಿ ರಕ್ತಮಾಂಸಾದಿಗಳಾವುವೂ ಇಲ್ಲದೆ ಭಸ್ಮಮಾತ್ರ ಇದ್ದುದೇ ಮೊದಲಾದ ಚಿತ್ರಸಂಗತಿಯನ್ನರಿತ ದೇವೇಂದ್ರನು ವಿಷ್ಣುವಿನೊಡನೆ ಅವನೆಡೆಗೆ ಬಂದು ಪರೀಕ್ಷಿಸಿದುದು, ವರವನ್ನು ಕೊಟ್ಟುದು, ಸತ್ಯತಪನಿಗೆ ಗುರುವಾದ ಆರುಣಿಯ ಸಂದರ್ಶನವಾದುದು, ಸತ್ಯತಪಾರುಣಿಗಳು ನಾರಾಯಣದೇವನಲ್ಲಿ ಐಕ್ಯವಾದುದು ಮೊದಲಾದುವನ್ನು ಹೇಳುವನು ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತೆಂಟನೆಯ ಅಧ್ಯಾಯ·

॥ ಶ್ರೀಃ ॥

-x-

ನವನವತಿತಮೋಽಧ್ಯಾಯಃ

ಅಥ ತಿಲಧೇನುಮಾಹಾತ್ಮ್ಯಂ

॥ ಧರಣ್ಯುವಾಚ ॥

ಯಾ ಸಾ ಮಾಯಾ ಶರೀರಾತ್ತು ಬ್ರಹ್ಮಣೋಽವ್ಯಕ್ತಜನ್ಮನಃ ।
ಗಾಯತ್ರ್ಯಷ್ಟಭುಜಾ ಭೂತ್ವಾ ಚೈತ್ರಾಸುರಮಯೋಧಯತ್ ॥ ೧ ॥

ಸೈವ ನಂದಾಭವೇದ್ದೇವೀ ದೇವಕಾರ್ಯಚಿಕೀರ್ಷಯಾ ।
ಮಹಿಷಾಖ್ಯಾಸುರವಧಂ ಕುರ್ವತೀ ಬ್ರಹ್ಮಣೇರಿತಾ ॥
ವೈಷ್ಣವ್ಯಾಖ್ಯಾ ತತೋ ದೇವ ಕಥಮೇತದ್ಧಿ ಶಂಸ ಮೇ ॥ ೨ ॥

ತೊಂಬತ್ತೊಂಬತ್ತನೆಯ ಅಧ್ಯಾಯ.

ತಿಲಧೇನುದಾನಮಹಿಮೆ.

೧. ಭೂದೇವಿ—ದೇವ, ಅವ್ಯಕ್ತಜನ್ಮನಾದ ಬ್ರಹ್ಮನ ದೇಹದಿಂದ ಉದಿಸಿದ ಆ ಮಾಯೆಯು ಅಷ್ಟಭುಜಳಾದ ಗಾಯತ್ರೀದೇವಿಯಾಗಿ ಚೈ(ವೈ)ತ್ರಾಸುರನೊಡನೆ ಯುದ್ಧವನ್ನು ಮಾಡಿದಳು.

೨. ಆನಂದಾದೇವಿಯೇ ದೇವಕಾರ್ಯನಿರ್ವಾಹಕ್ಕಾಗಿ ಬ್ರಹ್ಮನಿಂದ ಪ್ರೇರಿತಳಾಗಿ ಮಹಿಷಾಸುರವಧೆಯನ್ನು ಮಾಡಲು, ಬಳಿಕ ವೈಷ್ಣವಿಯೆಂಬ ಹೆಸರನ್ನು ಹೇಗೆ ಪಡೆದಳು ? ಎಂಬುದನ್ನು ನನಗೆ ಹೇಳು.

|| ಶ್ರೀ ವರಾಹ ಉವಾಚ ||

ಇಯಂ ಜಗದ್ಧಿತಾ ದೇವೀ ಗಂಗಾ ಶಂಕರಸುಪ್ರಿಯಾ || ೩ ||

ಕ್ವಚಿತ್ಕಿಂಚಿದ್ಭವೇ ದತ್ತಂ ಸ್ವಪದಂ ವೇದ ಸರ್ವವಿತ್ |
ಸ್ವಾಯಂಭುವೇ ಹತೋ ದೈತ್ಯೋ ವೈಷ್ಣವ್ಯಾ ಮಂದರೇ ಗಿರೌ || ೪ ||

ಮಹಿಷಾಖ್ಯಃ ಪರಃ ಪಶ್ಚಾತ್ ಸ ವೈ ಚೈತ್ರಾಸುರೋ ಹತಃ |
ನಂದಯಾ ನಿಹತೋ ವಿಂಧ್ಯೇ ಮಹಾಬಲಪರಾಕ್ರಮಃ || ೫ ||

ಅಥವಾ ಜ್ಞಾನಶಕ್ತಿಸ್ಸಾ ಮಹಿಷೋಽಜ್ಞಾನಮೂರ್ತಿವಾನ್ |
ಅಜ್ಞಾನಂ ಜ್ಞಾನಸಾಧ್ಯಂ ತು ಭವತೀತಿ ನ ಸಂಶಯಃ || ೬ ||

ಮೂರ್ತಿಪಕ್ಷೇ ಚೇತಿಹಾಸಮಮೂರ್ತೇ ಚೈಕವದ್ಧೃದಿ |
ಖ್ಯಾಪ್ಯತೇ ವೇದವಾಕ್ಯೈಶ್ಚ ಇಹ ಸಾ ವೇದವಾದಿಭಿಃ || ೭ ||

---

೩. ಇವಳು ಲೋಕಹಿತೆಯೂ, ಶಿವನಿಗೆ ಅತಿ ಪ್ರಿಯೆಯೂ ಆದ ಗಂಗೆ. ಸರ್ವಜ್ಞನು ಇವಳಿಗೆ ತಾನು ಕೊಟ್ಟಿರುವ ಶಿರಸ್ಸ್ಥಾನವನ್ನೂ ಸ್ವಲ್ಪವಾದುದೆಂದು ಭಾವಿಸಿರುವನು.

೪–೫. ಸ್ವಾಯಂಭುವಮನ್ವಂತರದಲ್ಲಿ ವೈಷ್ಣವೀದೇವಿಯಿಂದ ಮಂದರ ಗಿರಿಯಲ್ಲಿ ಮಹಿಷಾಸುರನು ಹತನಾದನು. ಬಳಿಕ ಮಹಾಬಲಪರಾಕ್ರಮಗಳುಳ್ಳ ಆ ಚೈತ್ರಾಸುರನೆಂಬ ಮತ್ತೊಬ್ಬನು ವಿಂಧ್ಯಪರ್ವತದಲ್ಲಿ ನಂದಾದೇವಿಯಿಂದ ಹತನಾದನು.

೬. ಅಥವಾ ದೇವಿಯೆಂದರೆ ಜ್ಞಾನಶಕ್ತಿಯೆಂದೂ, ಮಹಿಷನೆಂದರೆ ಮೂರ್ತೀಭವಿಸಿದ ಅಜ್ಞಾನವೆಂದೂ ಅರಿಯಬಹುದು. ಜ್ಞಾನವು ಅಜ್ಞಾನವನ್ನು ನಾಶಮಾಡುವುದೆಂಬುದರಲ್ಲಿ ಸಂದೇಹವಿಲ್ಲ.

೭. ಜ್ಞಾನಾಜ್ಞಾನಗಳಿಗೆ ಮೂರ್ತಿಯುಂಟೆಂಬ (ಆಕಾರವುಂಟೆಂಬ) ಪಕ್ಷದಲ್ಲಿ ಇತಿಹಾಸವು ಬರುವುದು. ಮೂರ್ತಿಯಿಲ್ಲವೆಂಬ ಪಕ್ಷದಲ್ಲಿ ವೇದವಾದಿಗಳು ವೇದವಾಕ್ಯಗಳಿಂದ ಆ ಜ್ಞಾನಶಕ್ತಿಯು ಏಕರೂಪಳಾಗಿ ಹೃದಯದಲ್ಲಿರುವಳೆಂದು ಸ್ಥಾಪಿಸುವರು.

ಇದಾನೀಂ ಶೃಣು ಮೇ ದೇವಿ ಪಂಚಪಾತಕನಾಶನಂ ।
ಯಜನಂ ದೇವದೇವಸ್ಯ ವಿಷ್ಣೋಃ ಪುತ್ರವಸುಪ್ರದಂ ॥ ೮ ॥

ಇಹ ಜನ್ಮನಿ ದಾರಿದ್ರ್ಯವ್ಯಾಧಿಕುಷ್ಠಾದಿಪೀಡಿತಃ ।
ಅಲಕ್ಷ್ಮೀವಾನಪುತ್ರಸ್ತು ಯೋ ಭವೇತ್ಪುರುಷೋ ಭುವಿ ॥ ೯ ॥

ತಸ್ಯ ಸದ್ಯೋ ಭವೇಲ್ಲಕ್ಷ್ಮೀರಾಯುರ್ವಿತ್ತಂ ಸುತಃ ಸುಖಂ ।
ದೃಷ್ಟ್ವಾ ತು ಮಂಡಲಗತಂ ದೇವಂ ದೇವ್ಯಾ ಸಮನ್ವಿತಂ ॥ ೧೦ ॥

ನಾರಾಯಣಂ ಪರಂ ದೇವಂ ಯಃ ಪಶ್ಯತಿ ವಿಧಾನತಃ ।
ಆಚಾರ್ಯದರ್ಶಿತಂ ದೇವಿ ಮಂತ್ರಮೂರ್ತಿಮಯೋನಿಜಂ ॥ ೧೧ ॥

ಕಾರ್ತಿಕೇ ಮಾಸಿ ಶುಕ್ಲಾಯಾಂ ದ್ವಾದಶ್ಯಾಂ ತು ವಿಶೇಷತಃ ।
ಸರ್ವಾಸು ವಾ ಯಜೇದ್ದೇವಂ ದ್ವಾದಶೀಷು ವಿಧಾನತಃ ॥ ೧೨ ॥

ಸಂಕ್ರಾಂತ್ಯಾಂ ವಾ ಮಹಾಭಾಗೇ ಚಂದ್ರಸೂರ್ಯಗ್ರಹೇ ತಥಾ ।
ಯಃ ಪಶ್ಯತಿ ಹರಿಂ ದೇವಿ ಪೂಜಿತಂ ಗುರುಣಾ ಶುಭೇ ॥ ೧೩ ॥

---

೮. ದೇವಿ, ಈಗ ನಾನು ಹೇಳುವ, ಪಂಚಪಾತಕನಾಶಕವೂ, ಪುತ್ರಧನಪ್ರದವೂ ಆದ, ದೇವದೇವನಾದ ವಿಷ್ಣುವಿನ ಪೂಜೆಯ(ವಿಚಾರವ)ನ್ನು ಕೇಳು

೯-೧೦. ಈ ಜನ್ಮದಲ್ಲಿ ದಾರಿದ್ರ್ಯವ್ಯಾಧಿಯಿಂದಾಗಲಿ, ಕುಷ್ಠಾದಿವ್ಯಾಧಿಗಳಿಂದಾಗಲಿ ಪೀಡಿತರಾದವರೂ, ಕಾಂತಿಹೀನರೂ, ಪುತ್ರರಿಲ್ಲದವರೂ, ಶ್ರೀದೇವಿಯುಕ್ತನಾಗಿ ಮಂಡಲದಲ್ಲಿರುವ ದೇವದೇವನಾದ ನಾರಾಯಣನನ್ನು ಸಂದರ್ಶಿಸಿದಲ್ಲಿ ಅವರಿಗೆ ಒಡನೆಯೇ, ಆಯುರಾರೋಗ್ಯೈಶ್ವರ್ಯಗಳೂ, ಪುತ್ರಸುಖವೂ ಲಭಿಸುವುವು.

೧೧-೧೩. ದೇವಿ, ಶುಭೇ, ಎಲ್ಲಾ ದ್ವಾದಶಿಗಳಲ್ಲೂ ಆಗಲಿ, ಮುಖ್ಯವಾಗಿ ಕಾರ್ತಿಕ ಶುದ್ಧ(ಉತ್ಥಾನ)ದ್ವಾದಶಿಯಲ್ಲಿಯಾಗಲಿ, ಸಂಕ್ರಾಂತಿಯಲ್ಲಾಗಲಿ, ಚಂದ್ರಸೂರ್ಯಗ್ರಹಣಕಾಲದಲ್ಲಾಗಲಿ, ಗುರುವು ವಿಧಿಪೂರ್ವಕವಾಗಿ ಪೂಜಿಸಿ

ತಸ್ಯ ಸದ್ಯೋ ಭವೇತ್ತುಷ್ಟಿಃ ಪಾಪಧ್ವಂಸಶ್ಚ ಜಾಯತೇ ।
ಸಾಮಾನ್ಯದೇವತಾನಾಂ ಚ ಭವತೀತಿ ನ ಸಂಶಯಃ ॥ ೧೪ ॥

ಬ್ರಾಹ್ಮಣಕ್ಷತ್ರಿಯವಿಶಾಂ ಭಕ್ತಾನಾಂ ತು ಪರೀಕ್ಷಣಂ ।
ಸಂವತ್ಸರಂ ಗುರುಃ ಕುರ್ಯಾತ್ ಜಾತಿಶೌಚಕ್ರಿಯಾದಿಭಿಃ ॥ ೧೫ ॥

ಉಪಾಸನ್ನಂ ತತೋ ಜ್ಞಾತ್ವಾ ಹೃದಯೇನಾವಧಾರಯೇತ್ ॥ ೧೬ ॥

ತೇಽಪಿ ಭಕ್ತಿಮತೋ ಜ್ಞಾತ್ವಾ ತ್ವಾತ್ಮಾನಂ ಪರಮೇಶ್ವರಂ ।
ಸಂವತ್ಸರಂ ಗುರೋರ್ಭಕ್ತಿಂ ಕುರ್ಯುರ್ವಿಷ್ಣೋರಿವಾಚಲಾಂ ॥ ೧೭ ॥

ಸಂವತ್ಸರೇ ತತಃ ಪೂರ್ಣೇ ಗುರುಂ ಚೈವ ಪ್ರಸಾದಯೇತ್ ॥ ೧೮ ॥

ತೋರಿಸುವ ಮಂತ್ರಮೂರ್ತಿಯೂ, ಅಯೋನಿಜನೂ, ಪರದೇವನೂ, ಆದ ಹರಿನಾರಾಯಣನನ್ನು ಸಂದರ್ಶಿಸುವ ಮನುಷ್ಯನಿಗೆ ಒಡನೆಯೇ ಸಂತೋಷವುಂಟಾಗುವುದು. ಪಾಪನಾಶವೂ ಆಗುವುದು. ಸಾಮಾನ್ಯದೇವತೆಗಳಿಗೂ ಆಗುವುದರಲ್ಲಿ ಸಂದೇಹವಿಲ್ಲ.

೧೫. ಗುರುವು ಈ ವ್ರತವನ್ನು ಮಾಡುವ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಭಕ್ತರನ್ನು ಒಂದು ವರ್ಷಕಾಲ ಜಾತಿಶೌಚಕರ್ಮಾದಿಗಳಲ್ಲಿ ಪರೀಕ್ಷಿಸಬೇಕು.

೧೬. ಬಳಿಕ ತನ್ನ ಬಳಿಗೆ ಬಂದ ಅವರನ್ನು ಮನಃಪೂರ್ವಕವಾಗಿ ಭಕ್ತರೆಂದು ಪರಿಗ್ರಹಿಸಬೇಕು.

೧೭. ಶಿಷ್ಯರೂ, ಭಕ್ತಿವಂತನಾದ ಗುರುವಿನಿಂದ ಪರಮಾತ್ಮನ ಸ್ವರೂಪವನ್ನರಿತು, ವಿಷ್ಣುವಿನಲ್ಲಿ ಹೇಗೋ ಹಾಗೆಯೇ ಗುರುವಿನಲ್ಲೂ ವರ್ಷಕಾಲ ಸ್ಥಿರವಾದ ಭಕ್ತಿಯನ್ನಿಡಬೇಕು.

೧೮. ವರ್ಷವು ಪೂರ್ತಿಯಾದ ಬಳಿಕ ಗುರುವಿಗೆ ಸಂತೋಷವನ್ನುಂಟು ಮಾಡಬೇಕು

ಭಗವಂಸ್ತ್ವತ್ಪ್ರಸಾದೇನ ಸಂಸಾರಾರ್ಣವತಾರಣಂ ।
ಇಚ್ಛಾಮಸ್ತ್ವೈಹಿಕೀಂ ಲಕ್ಷ್ಮೀಂ ವಿಶೇಷೇಣ ತಪೋಧನ ॥
ಏವಮಭ್ಯರ್ಚ್ಯ ಮೇಧಾವೀ ಗುರುಂ ವಿಷ್ಣುಮಿವಾಗ್ರತಃ ॥ ೧೯ ॥

ಅಭ್ಯರ್ಚಿತಸ್ತ್ರೈಃ ಸೋಽಪ್ಯಾಶು ದಶಮ್ಯಾಂ ಕಾರ್ತಿಕಸ್ಯ ತು ।
ಕ್ಷೀರವೃಕ್ಷಸಮುದ್ಭೂತಂ ದಂತಕಾಷ್ಠಂ ಸಮಂತ್ರಕಂ ॥
ಭಕ್ಷಯಿತ್ವಾ ಸ್ವಪೇಯುರ್ಹಿ ದೇವದೇವಸ್ಯ ಸನ್ನಿಧೌ ॥ ೨೦ ॥

ಸ್ವಪ್ನಾನ್ ದೃಷ್ಟ್ವಾ ಗುರೋರಗ್ರೇ ಶ್ರಾವಯೀತ ವಿಚಕ್ಷಣಃ ।
ತತಃ ಶುಭಾಶುಭಂ ತತ್ರ ಲಕ್ಷಯೇತ್ಪರಮೋ ಗುರುಃ ॥ ೨೧ ॥

ಏಕಾದಶ್ಯಾಮುಪೋಷ್ಯೈವಂ ಸ್ನಾತ್ವಾ ದೇವಾಲಯಂ ವ್ರಜೇತ್ ।
ಗುರುಶ್ಚ ಮಂಡಲಂ ಭೂಮೌ ಕಲ್ಪಿತಾಯಾಂ ತು ವರ್ತಯೇತ್ ॥ ೨೨ ॥

೧೯-೨೦ "ಪೂಜ್ಯನೇ, ತಪೋಧನನೇ, ನಿನ್ನ ಅನುಗ್ರಹದಿಂದ ವಿಶೇಷವಾಗಿ ಐಹಿಕಲಕ್ಷ್ಮಿಯನ್ನೂ, ಬಳಿಕ ಸಂಸಾರಸಾಗರೋತ್ತಾರಣವನ್ನೂ ಬಯಸುತ್ತೇವೆ" ಎಂದು ಮುಂದಿರುವ ಗುರುವನ್ನು ವಿಷ್ಣುವಿನಂತೆಯೇ ಪೂಜಿಸಬೇಕು. ಪೂಜಿತನಾದ ಗುರುವಿನೊಡನೆ ಕಾರ್ತಿಕಶುದ್ಧದಶಮಿಯ ದಿನ ಕ್ಷೀರವೃಕ್ಷದ ದಂತಕಾಷ್ಠವನ್ನು ಸಮಂತ್ರವಾಗಿ ಅಗಿದು ಹಲ್ಲನ್ನುಜ್ಜಿ, ದೇವದೇವನ ಸನ್ನಿಧಿಯಲ್ಲಿ ಮಲಗಬೇಕು.

೨೧. ತಿಳಿವಳಿಕೆಯುಳ್ಳ ಶಿಷ್ಯನು ಕಂಡ ಕನಸನ್ನು ಗುರುವಿಗೆ ತಿಳಿಸಬೇಕು. ಕೇಳಿದ ಪರಮಗುರುವು ಅದರ ಶುಭಾಶುಭಗಳನ್ನು ಗಮನಿಸಬೇಕು.

೨೨. ಏಕಾದಶಿಯದಿನ ಸ್ನಾನಮಾಡಿ, ಉಪವಾಸದಿಂದ ದೇವಾಲಯಕ್ಕೆ ಹೋಗಬೇಕು. ಗುರುವೂ ಭೂಮಿಯಮೇಲೆ ಮಾಡಿರುವ ಮಂಡಲದಲ್ಲಿ ವರ್ತಿಸಬೇಕು.

ಲಕ್ಷಣೈರ್ವಿವಿಧೈರ್ಭೂಮಿಂ ಲಕ್ಷಯಿತ್ವಾ ವಿಧಾನತಃ ।
ಷೋಡಶಾರಂ ಲಿಖೇಚ್ಚಕ್ರಂ ಸರ್ವತೋ ಭದ್ರಮೇವ ಚ ॥
ಅಥವಾ ಅಷ್ಟಪತ್ರಂ ಚ ಲಿಖಿತ್ವಾ ದರ್ಶಯೇದ್ಬುಧಃ ॥ ೨೩ ॥

ನೇತ್ರಬಂಧಂ ತು ಕುರ್ವೀತ ಸಿತವಸ್ತ್ರೇಣ ಯತ್ನತಃ ।
ವರ್ಣಾನುಕ್ರಮತಃ ಶಿಷ್ಯಾನ್ಪುಷ್ಪಹಸ್ತಾನ್ಪ್ರವೇಶಯೇತ್ ॥ ೨೪ ॥

ಅಷ್ಟಪತ್ರಂ ಯದಾ ಕುರ್ಯಾನ್ಮಂಡಲಂ ವರ್ಣಕೈರ್ಬುಧಃ ।
ತದಾನೀಂ ಪೂರ್ವತೋ ದೇವಮಿಂದ್ರಂ ಪೂರ್ವಂ ತು ಪೂಜಯೇತ್ ॥ ೨೫॥

ಲೋಕಪಾಲೈಃ ಸಮಂ ಪೂಜ್ಯ ಅಗ್ನಿಂ ಸಂಪೂಜಯೇಚ್ಛುಭೇ ॥೨೬॥

ಸ್ವದಿಕ್ಷು ತದ್ವದ್ಯಾಮ್ಯಾಯಾಂ ನೈಋತ್ಯಾನ್ನಿಋತಿಂ ನ್ಯಸೇತ್ ।
ವರುಣಂ ವಾರುಣಾಯಾಂ ಚ ವಾಯುಂ ವಾಯವ್ಯತೋನ್ಯಸೇತ್ ॥ ೨೭ ॥

---

೨೩. ಪಂಡಿತನಾದ ಗುರುವು ಭೂಮಿಯನ್ನು ಬಗೆ ಬಗೆಯ ಲಕ್ಷಣಗಳಿಂದ ಸರಿಯಾಗಿರುವುದನ್ನು ನೋಡಿ, ವಿಧಿಪೂರ್ವಕವಾಗಿ ಹದಿನಾರು ಅರೆಗಳುಳ್ಳ ಚಕ್ರವನ್ನೂ, ಸರ್ವತೋ ಭದ್ರವನ್ನೂ(ನಾಲ್ಕುಕಡೆಯೂ ಬಾಗಿಲುಳ್ಳ ಮನೆಯನ್ನೂ)ಅಥವಾ ಅಷ್ಟಪತ್ರ ಪದ್ಮವನ್ನೂ ಕಾಣುವಂತೆ ಬರೆಯಬೇಕು.

೨೪. ಶಿಷ್ಯರಿಗೆ ಪ್ರಯತ್ನಪೂರ್ವಕವಾಗಿ ಬಿಳಿಯ ಬಟ್ಟೆಯಿಂದ ಕಣ್ಣನ್ನು ಕಟ್ಟಬೇಕು. ಬ್ರಹ್ಮಕ್ಷತ್ರಿಯ ವೈಶ್ಯವರ್ಣಾನುಕ್ರಮವಾಗಿ ಬೊಗಸೆಯಲ್ಲಿ ಹೂವುಳ್ಳ ಅವರನ್ನು ಮಂಡಲದ ಹತ್ತಿರಕ್ಕೆ ಬರಮಾಡಬೇಕು.

೨೫. ಪಂಡಿತನಾದ ಗುರುವು, ಗಂಧವನ್ನು ಬಳಿಯುವುದರಿಂದ ಅಷ್ಟಪತ್ರಮಂಡಲವನ್ನು ಮಾಡಿದ್ದರೆ ಮೊದಲು ಪೂರ್ವದ ಪತ್ರದಲ್ಲಿ ದೇವನಾದ ಇಂದ್ರನನ್ನು ಪೂಜಿಸಬೇಕು.

೨೬. ಬಳಿಕ ಶುಭಕರವಾದ ಆಗ್ನೇಯದಲ್ಲಿ ಅಗ್ನಿಯನ್ನು ಪೂಜಿಸಬೇಕು.

೨೭. ಹಾಗೆಯೇ ದಕ್ಷಿಣದಿಕ್ಕಿನಲ್ಲಿ ಯಮನನ್ನೂ, ನೈಋತ್ಯದಲ್ಲಿ ನಿಋತಿಯನ್ನೂ, ಪಶ್ಚಿಮದಲ್ಲಿ ವರುಣನನ್ನೂ, ವಾಯುವ್ಯದಲ್ಲಿ ವಾಯುವನ್ನೂ ಆವಾಹಿಸಬೇಕು.

ಧನದಂ ಚೋತ್ತರೇ ನ್ಯಸ್ಯ ರುದ್ರಮೀಶಾನಗೋಚರೇ ।
ಪೂಜ್ಯೈವ ತು ವಿಧಾನೇನ ದಿಕ್‌ಕ್ಷೇತ್ರೇಷು ವ್ಯವಸ್ಥಿತಾನ್ ॥
ಪದ್ಮಮಧ್ಯೇ ತಥಾ ವಿಷ್ಣುಮರ್ಚಯೇತ್ಪರಮೇಶ್ವರಂ ॥ ೨೮ ॥

ಪೂರ್ವಪತ್ರೇ ಬಲಂ ಪೂಜ್ಯ ಪ್ರದ್ಯುಮ್ನಂ ದಕ್ಷಿಣೇ ತಥಾ ॥ ೨೯ ॥

ಅನಿರುದ್ಧಂ ತಥಾ ಪೂಜ್ಯ ಪಶ್ಚಿಮೇ ಚೋತ್ತರೇ ತಥಾ ।
ಪೂಜಯೇದ್ವಾಸುದೇವಂ ತು ಸರ್ವಪಾತಕಶಾಂತಿದಂ ॥ ೩೦ ॥

ಐಶಾನ್ಯಾಂ ವಿನ್ಯಸೇಚ್ಛಂಖಂ ಆಗ್ನೇಯ್ಯಾಂ ಚಕ್ರಮೇವ ತು ।
ಯಾಮ್ಯಾಯಾಂತು ಗದಾಂ ಪೂಜ್ಯ ವಾಯವ್ಯಾಂ ಪದ್ಮಮೇವ ಚ ॥
ಐಶಾನ್ಯಾಂ ಮುಸಲಂ ಪೂಜ್ಯ ದಕ್ಷಿಣೇ ಗರುಡಂ ನ್ಯಸೇತ್ ॥ ೩೧ ॥

ವಾಮತೋ ವಿನ್ಯಸೇಲ್ಲಕ್ಷ್ಮೀಂ ದೇವದೇವಸ್ಯ ಬುದ್ಧಿಮಾನ್ ॥ ೩೨ ॥

---

೨೮. ಕುಬೇರನನ್ನು ಉತ್ತರದಲ್ಲೂ, ರುದ್ರನನ್ನು ಈಶಾನ್ಯದಲ್ಲೂ ಆವಾಹನೆಮಾಡಿ, ದಿಕ್‌ಕ್ಷೇತ್ರಗಳಲ್ಲಿರುವ ಅವರನ್ನೆಲ್ಲಾ ವಿಧಿಪೂರ್ವಕವಾಗಿ ಪೂಜಿಸಿ, ಪದ್ಮಮಧ್ಯದಲ್ಲಿ ಪರಮೇಶ್ವರನಾದ ವಿಷ್ಣುವನ್ನು ಪೂಜಿಸಬೇಕು.

೨೯-೩೦. ಪೂರ್ವದಲದಲ್ಲಿ ಬಲರಾಮನನ್ನೂ, ದಕ್ಷಿಣದಳದಲ್ಲಿ ಪ್ರದ್ಯುಮ್ನನನ್ನೂ, ಪಶ್ಚಿಮದಳದಲ್ಲಿ ಅನಿರುದ್ಧನನ್ನೂ, ಉತ್ತರದಳದಲ್ಲಿ ಸರ್ವಪಾತಕನಾಶಕನಾದ ವಾಸುದೇವನನ್ನೂ ಪೂಜಿಸಬೇಕು.

೩೧. ಈಶಾನ್ಯದಲ್ಲಿ ಶಂಖವನ್ನೂ, ಆಗ್ನೇಯದಲ್ಲಿ ಚಕ್ರವನ್ನೂ, ದಕ್ಷಿಣದಲ್ಲಿ ಗದೆಯನ್ನೂ, ವಾಯವ್ಯದಲ್ಲಿ ಪದ್ಮವನ್ನೂ, ಈಶಾನ್ಯದಲ್ಲಿ ಒನಕೆಯನ್ನೂ, ದಕ್ಷಿಣದಲ್ಲಿ ಗರುಡನನ್ನೂ ಇಟ್ಟು ಪೂಜಿಸಬೇಕು.

೩೨. ಬುದ್ಧಿವಂತನಾದವನು ಲಕ್ಷ್ಮಿಯನ್ನು ದೇವದೇವನ ಎಡಗಡೆಯಲ್ಲಿ ಸ್ಥಾಪಿಸಬೇಕು.

ಧನುಶ್ಚೈವ ತು ಖಡ್ಗಂ ತು ದೇವಸ್ಯ ಪುರತೋ ನ್ಯಸೇತ್ ॥ ೩೩ ॥

ಶ್ರೀವತ್ಸಂ ಕೌಸ್ತುಭಂ ಚೈವ ನವಮಂ ತತ್ರ ಕಲ್ಪಯೇತ್ ॥ ೩೪ ॥

ಏವಂ ಪೂಜ್ಯ ಯಥಾನ್ಯಾಯಂ ದೇವದೇವಂ ಜನಾರ್ದನಂ ।
ದಲೇಷು ದಿಕ್ಷು ವಿನ್ಯಸ್ಯ ಅಷ್ಟೌ ಕುಂಭಾನ್ವಿಧಾನತಃ ॥
ವೈಷ್ಣವಂ ಕಲಶಂ ಚೈವ ನವಮಂ ತತ್ರ ಕಲ್ಪಯೇತ್ ॥ ೩೫ ॥

ಸ್ನಾಪಯೇನ್ಮುಕ್ತಿಕಾಮಂ ತು ವೈಷ್ಣವೇನ ಘಟೇನ ಹ ।
ಶ್ರೀಕಾಮಂ ಸ್ನಾಪಯೇತ್ತದ್ವತ್ ಐಂದ್ರೇಣ ತು ಘಟೇನ ಹ ॥
ಪ್ರಾಜ್ಯಪ್ರತಾಪಕಾಮಂ ಚ ಆಗ್ನೇಯೇನ ತು ಸ್ನಾಪಯೇತ್ ॥ ೩೬ ॥

ದುಷ್ಟಪ್ರಧ್ವಂಸನಾಯಾಲಂ ನಿಋತೇನ ವಿಧೀಯತೇ ॥ ೩೭ ॥

---

೩೩. ಧನುಸ್ಸನ್ನೂ, ಖಡ್ಗವನ್ನೂ, ದೇವದೇವನ ಮುಂದಿರಿಸಬೇಕು.

೩೪. ಶ್ರೀವತ್ಸವನ್ನೂ, ಒಂಬತ್ತನೆಯದಾದ ಕೌಸ್ತುಭವನ್ನೂ ಕಲ್ಪಿಸಬೇಕು.

೩೫. ದೇವ ದೇವನಾದ ಜನಾರ್ದನನನ್ನು ಹೀಗೆ ಕ್ರಮವಾಗಿ ಪೂಜಿಸಿ, ಎಂಟುದಿಕ್ಕಿನ ದಳಗಳಲ್ಲೂ ಎಂಟು ಕಲಶಗಳನ್ನು ವಿಧಿಯಂತೆ ಇಟ್ಟು ಒಂಬತ್ತನೆಯದಾದ ವೈಷ್ಣವ ಕಲಶವೊಂದನ್ನೂ ಅಲ್ಲಿಡಬೇಕು.

೩೬. ಮುಕ್ತಿಯನ್ನು ಬಯಸುವ ಭಕ್ತನಿಗೆ ವೈಷ್ಣವ ಕಲಶದಿಂದ ಸ್ನಾನಮಾಡಿಸಬೇಕು. ಸಿರಿಯನ್ನು ಬಯಸುವವನಿಗೆ ಪೂರ್ವದಿಕ್ಕಿನ ಐಂದ್ರ ಕಲಶದಿಂದಲೂ, ಹೆಚ್ಚಾದ ಪ್ರತಾಪವನ್ನು ಬಯಸುವವನಿಗೆ ಆಗ್ನೇಯ ಕಲಶದಿಂದಲೂ ಸ್ನಾನಮಾಡಿಸಬೇಕು.

೩೭. ಹೀಗೆಯೇ ಮರಣವನ್ನು ಜಯಿಸಬೇಕೆನ್ನುವ ಭಕ್ತನಿಗೆ ದಕ್ಷಿಣ ದಿಕ್ಕಿನ ಕಲಶದಿಂದಲೂ, ದುಷ್ಟರನ್ನು ಧ್ವಂಸಮಾಡಬೇಕೆನ್ನುವವನಿಗೆ ನೈಋತ್ಯದ ಕಲಶದಿಂದಲೂ ಸ್ನಾನವು ಉಚಿತವಾದುದು.

ಶಾಂತಯೇ ವಾರುಣೇನಾಶು ಪಾಪನಾಶಾಯ ವಾಯುನಾ ।
ದ್ರವ್ಯಸಂಪತ್ತಿಕಾಮಸ್ಯ ಕೌಬೇರೇಣ ವಿಧೀಯತೇ ॥ ೩೮ ॥

ರೌದ್ರೇಣ ಜ್ಞಾನಹೇತೋಶ್ಚ ಲೋಕಪಾಲಪದಾಪ್ತಯೇ ॥ ೩೯ ॥

ಏಕೈಕೇನ ನರಃಸ್ನಾತಃ ಸರ್ವಪಾಪವಿವರ್ಜಿತಃ ।
ಭವೇದವ್ಯಾಹತಂ ಜ್ಞಾನಂ ಶ್ರೀಮಾನ್ವಿಪ್ರೋ ವಿಚಕ್ಷಣಃ ॥ ೪೦ ॥

ಕಿಂ ಪುನರ್ನವಭಿಃ ಸ್ನಾತೋ ನರಃ ಪಾತಕವರ್ಜಿತಃ ।
ಜಾಯತೇ ವಿಷ್ಣುಸದೃಶಸ್ಸದ್ಯೋ ರಾಜಾಥವಾ ಭವೇತ್ ॥ ೪೧ ॥

ಅಥವಾ ದಿಕ್ಷು ಸರ್ವಾಸು ಯಥಾಸಂಖ್ಯೇನ ಲೋಕಪಾನ್ ।
ಪೂಜಯೀತ ಸ್ವಶಾಸ್ತ್ರೋಕ್ತವಿಧಾನೇನ ವಿಧಾನವಿತ್ ॥ ೪೨ ॥

---

೩೮. ಶಾಂತಿಗೆ ಪಶ್ಚಿಮದ ಕಲಶದಿಂದಲೂ, ಪಾಪನಾಶಕ್ಕೆ ವ್ಯಾಯುವ್ಯದ ಕಲಶದಿಂದಲೂ, ಐಶ್ವರ್ಯಕ್ಕೆ ಉತ್ತರದ(ಕೌಬೇರ)ಕಲಶದಿಂದಲೂ ಸ್ನಾನವು ವಿಹಿತವಾಗಿದೆ.

೩೯. ಜ್ಞಾನಲಾಭಕ್ಕೂ, ಲೋಕಪಾಲಕಪದವಿಗೂ ರೌದ್ರಕುಂಭದಿಂದ ಸ್ನಾನವು ಅಗತ್ಯವಾದುದು.

೪೦–೪೧. ಒಂದೊಂದು ಕಲಶೋದಕದಿಂದ ಸ್ನಾನಮಾಡಿದವನೇ ಸರ್ವ ಪಾಪಗಳನ್ನೂ ಕಳೆದುಕೊಳ್ಳುವನು. ಅವನಿಗೆ ಪೂರ್ಣಜ್ಞಾನವುಂಟಾಗುವುದು. ಶ್ರೀಮಂತನಾಗುವನು. ವಿದ್ವಾಂಸನಾಗಿ ಒಂಬತ್ತು ಕಲಶೋದಕದಿಂಗಲೂ ಸ್ನಾನಮಾಡುವ ಬ್ರಾಹ್ಮಣನ ವಿಚಾರವನ್ನು ಹೇಳಬೇಕಾದುದೇನು! ಅವನು ಪಾಪರಹಿತನಾಗಿ ಒಡನೆಯೇ ವಿಷ್ಣುಸಮಾನನಾಗುವನು. ಅಥವಾ ರಾಜನಾಗುವನು.

೪೨. ಅಥವಾ ಎಲ್ಲಾ ದಿಕ್ಕುಗಳಲ್ಲೂ ಲೋಕಪಾಲರನ್ನು ಅನುಕ್ರಮವಾಗಿ ಶಾಸ್ತ್ರವನ್ನರಿತವನು ಸ್ವಶಾಸ್ತ್ರೋಕ್ತಕ್ರಮದಿಂದ ಪೂಜಿಸಬೇಕು.

ಏವಂ ಸಂಪೂಜ್ಯ ದೇವಾಂಶ್ಚ ಲೋಕಪಾಲಾನ್ ಪ್ರಸನ್ನಧೀಃ ।
ಪಶ್ಚಾತ್ಪ್ರದಕ್ಷಿಣಾಂ ಶಿಷ್ಯಾನ್ ಬದ್ಧನೇತ್ರಾನ್ ಪ್ರವೇಶಯೇತ್ ॥ ೪೩ ॥

ಆಗ್ನೇಯೀ ವಾರುಣೀ ದಗ್ಧ್ವಾ ವಾಯುನಾ ವಿಧಿನಾ ತತಃ ।
ಸೌಮೇನಾಪ್ಯಾಯಿತಾ ಪಶ್ಚಾಚ್ಛ್ರಾವಯೇತ್ಸಮಯಾನ್ಪೃಥಃ ॥ ೪೪ ॥

ಅನಿಂದ್ಯಾನ್ಬ್ರಾಹ್ಮಣಾನ್ವೇದಾನ್ ವಿಷ್ಣುಂ ಬ್ರಹ್ಮಾಣಮೇವ ಚ ।
ರುದ್ರಮಾದಿತ್ಯಮಗ್ನಿಂ ಚ ಲೋಕಪಾಲಾನ್ಗ್ರಹಾಂಸ್ತತಃ ॥
ಗುರೂಂಶ್ಚ ವೈಷ್ಣವಾಂಶ್ಚಾಪಿ ಪುರುಷಃ ಪೂರ್ವದೀಕ್ಷಿತಃ ॥ ೪೫ ॥

ಏವಂ ತು ಸಮಯಂ ಖ್ಯಾಪ್ಯ ಪಶ್ಚಾದ್ಧೋಮಂ ತು ಕಾರಯೇತ್ ॥ ೪೬ ॥

ಓಂ ನಮೋ ಭಗವತೇ ಸರ್ವರೂಪಿಣೇ ಹುಂ ಫಟ್ ಸ್ವಾಹಾ ।
ಷೋಡಶಾಕ್ಷರಮಂತ್ರೇಣ ಹೋಮಯೇಜ್ಜ್ವಲಿತಾಗ್ನಯೇ ॥ ೪೭ ॥

---

೪೩. ಪ್ರಸನ್ನವಾದ ಬುದ್ಧಿಯುಳ್ಳವನಾಗಿ ಹೀಗೆ ಲೋಕಪಾಲರಾದ ದೇವತೆಗಳನ್ನೂ ಚೆನ್ನಾಗಿ ಪೂಜಿಸಿ, ಅನಂತರ ಕಣ್ಣುಕಟ್ಟಿಸಿಕೊಂಡಿರುವ ಶಿಷ್ಯರನ್ನು ಪ್ರದಕ್ಷಿಣವಾಗಿ ಅಲ್ಲಿಗೆ ಬರಮಾಡಬೇಕು.

೪೪. ಅವರನ್ನು ಅಗ್ನಿವರುಣವಾಯುಚಂದ್ರಮಂತ್ರಗಳಿಂದ ಅಭಿಮಂತ್ರಿಸಿ ಪ್ರೋಕ್ಷಿಸಿ, ಬಳಿಕ ಸಿದ್ಧಾಂತಗಳನ್ನುಪದೇಶಿಸಬೇಕು.

೪೫–೪೬. ಅನಿಂದ್ಯರಾದ ಬ್ರಾಹ್ಮಣರನ್ನೂ, ವೇದಗಳನ್ನೂ, ವಿಷ್ಣುವನ್ನೂ, ಬ್ರಹ್ಮನನ್ನೂ, ರುದ್ರನನ್ನೂ, ಆದಿತ್ಯನನ್ನೂ, ಅಗ್ನಿಯನ್ನೂ, ಲೋಕಪಾಲಕರನ್ನೂ, ಬಳಿಕ ಗ್ರಹಗಳನ್ನೂ, ಗುರುಗಳನ್ನೂ, ವೈಷ್ಣವರನ್ನೂ, ಮೊದಲು ದೀಕ್ಷಿತನಾದ (ಪುರುಷನು)ಮನುಷ್ಯನು ಸಿದ್ಧಾಂತ ಅಥವಾ ಆಚಾರದಂತೆ ಉಪದೇಶಿಸಿ, ಬಳಿಕ ಹೋಮವನ್ನು ಮಾಡಿಸಬೇಕು.

೪೭. "ಓಂ ನಮೋ ಭಗವತೇ ಸರ್ವರೂಪಿಣೇ ಹುಂ ಫಟ್ ಸ್ವಾಹಾ" ಎಂಬ ಹದಿನಾರು ಅಕ್ಷರವುಳ್ಳ ಮಂತ್ರದಿಂದ ಉರಿಯುತ್ತಿರುವ ಅಗ್ನಿಯಲ್ಲಿ ಹೋಮಮಾಡಬೇಕು.

ಗರ್ಭಾಧಾನಾದಿಕಾಂಶ್ಚೈವ ಕ್ರಿಯಾಸ್ಸಮವಧಾರಯೇತ್ ।
ತ್ರಿಭಿರಾಹುತಿಭಿಶ್ಚಾಪಿ ದೇವದೇವಸ್ಯ ಸನ್ನಿಧೌ ॥ ೪೮ ॥

ಹೋಮಾಂತೇ ದೀಕ್ಷಿತಃ ಪಶ್ಚಾತ್ ದದ್ಯಾಚ್ಚ ಗುರುದಕ್ಷಿಣಾಂ ।
ಹಸ್ತ್ಯಶ್ವಕಟಿಕಾದೀನಿ ಹೇಮಗ್ರಾಮಾದಿಕಂ ನೃಪಃ ॥
ದದ್ಯಾಚ್ಚ ಗುರವೇ ಪ್ರಾಜ್ಞೋ ಮಧ್ಯಮೋ ಮಧ್ಯಮಂ ತಥಾ ॥ ೪೯ ॥

ಏವಂ ಕೃತೇ ತು ಯತ್ಪುಣ್ಯಂ ಮಾಹಾತ್ಮ್ಯಂ ಜಾಯತೇ ಧರೇ ।
ತನ್ನ ಶಕ್ಯಂ ತು ಗದಿತುಮಪಿ ವರ್ಷ ಶತೈರಪಿ ॥ ೫೦ ॥

ದೀಕ್ಷಿತಾತ್ಮಾ ಪುನರ್ಭೂತ್ವಾ ವಾರಾಹಂ ಶೃಣುಯಾದ್ಯದಿ ।
ತೇನ ವೇದಪುರಾಣಾನಿ ಸರ್ವೇ ಮಂತ್ರಾಸ್ಸಸಂಗ್ರಹಾಃ ॥
ಜಪ್ತಾಃ ಸ್ಯುಃ ಪುಷ್ಕರೇ ತೀರ್ಥೇ ಪ್ರಯಾಗೇ ಸಿಂಧು ಸಂಗಮೇ ॥ ೫೧ ॥

---

೪೮. ದೇವದೇವನ ಸನ್ನಿಧಿಯಲ್ಲಿ ಮೂರು ಆಹುತಿಗಳಿಂದ ಗರ್ಭಾದಾನಾದಿ ಕರ್ಮಗಳನ್ನೂ ಸರಿಯಾಗಿ ಮಾಡಬೇಕು.

೪೯. ಹೋಮವಾದ ಬಳಿಕ ವ್ರತಿಯಾದವನು ಗುರುದಕ್ಷಿಣೆಯನ್ನು ಕೊಡಬೇಕು. ಆನೆ, ಕುದುರೆ, ಕಡಗ ಮೊದಲಾದುವನ್ನೂ, ಸುವರ್ಣಗ್ರಾಮ ಮೊದಲಾದುವುಗಳನ್ನೂ ಪ್ರಾಜ್ಞನಾದ ದೊರೆಯು ಗುರುವಿಗೆ ಕೊಡಬೇಕು. ಮಧ್ಯಮಸ್ಥಿತಿಯವರು ಅವರ ಅನುಕೂಲವಿದ್ದಷ್ಟನ್ನು ಕೊಡಬಹುದು.

೫೦. ಭೂದೇವಿ, ಹಾಗೆ ಮಾಡುವುದರಿಂದುಂಟಾಗುವ ಪುಣ್ಯವನ್ನೂ, ಮಹಿಮೆಯನ್ನೂ ನೂರುವರ್ಷಗಳಲ್ಲೂ ಹೇಳಲು ಸಾಧ್ಯವಿಲ್ಲ.

೫೧–೫೨. ವ್ರತಿಯಾದವನು ವರಾಹಪುರಾಣವನ್ನು ಕೇಳಿದರೆ, ಅವನು ಎಲ್ಲಾ ವೇದಪುರಾಣಗಳನ್ನೂ ಕೇಳಿದಂತಾಗುವುದು. ಸಸಂಗ್ರಹವಾದ ಸರ್ವ ಮಂತ್ರಗಳನ್ನೂ ಜಪಿಸಿದಂತಾಗುವುದು. ಪುಷ್ಕರತೀರ್ಥದಲ್ಲೂ, ಪ್ರಯಾಗದಲ್ಲಿ

ದೇವಾಗಾರೇ ಕುರುಕ್ಷೇತ್ರೇ ವಾರಾಣಸ್ಯಾಂ ವಿಶೇಷತಃ ।
ಗ್ರಹಣೇ ವಿಷುವೇ ಚೈವ ಯತ್ಫಲಂ ಜಪತಾಂ ಭವೇತ್ ॥
ತತ್ಫಲಂ ದ್ವಿಗುಣಂ ತಸ್ಯ ದೀಕ್ಷಿತೋ ಯಃ ಶೃಣೋತಿ ಚ ॥ ೫೨ ॥

ದೇವಾ ಅಪಿ ತಪಃ ಕೃತ್ವಾ ಧ್ಯಾಯಂತಿ ಚ ವದಂತಿ ಚ ।
ಕದಾ ನೋ ಭಾರತೇ ವರ್ಷೇ ಜನ್ಮ ಸ್ಯಾದ್ಭೂತಧಾರಿಣಿ ॥
ದೀಕ್ಷಿತಾಶ್ಚ ಭವಿಷ್ಯಾಮೋ ವರಾಹಂ ಶೃಣುಮಃ ಕಥಂ ॥ ೫೩ ॥

ವರಾಹಂ ಷೋಡಶಾತ್ಮಾನಂ ತ್ಯಕ್ತ್ವಾ ದೇಹಂ ಕದಾ ವಯಂ ।
ಯಾಸ್ಯಾಮಃ ಪರಮಂ ಸ್ಥಾನಂ ಯದ್ಗತ್ವಾ ನ ಪುನರ್ಭವೇತ್ ॥ ೫೪ ॥

ಏವಂ ಜಲ್ಪಂತಿ ವಿಬುಧಾ ಮನಸಾ ಚಿಂತಯಂತಿ ಚ ॥ ೫೫ ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಂ ।
ವಸಿಷ್ಠಸ್ಯ ಚ ಸಂವಾದಂ ಶ್ವೇತಸ್ಯ ಚ ಮಹಾತ್ಮನಃ ॥ ೫೬ ॥

ತ್ರಿವೇಣೀಸಂಗಮದಲ್ಲೂ, ದೇವಾಲಯದಲ್ಲೂ, ಕುರುಕ್ಷೇತ್ರದಲ್ಲೂ, ಕಾಶಿಯಲ್ಲೂ ಗ್ರಹಣಕಾಲದಲ್ಲೂ ವಿಷುವತ್ಪುಣ್ಯಕಾಲದಲ್ಲೂ ಜಪಮಾಡುವವರಿಗೆ ಲಭಿಸುವುದಕ್ಕೆ ಎರಡರಷ್ಟು ಫಲವು ವರಾಹಪುರಾಣವನ್ನು ಕೇಳುವ ಆ ದೀಕ್ಷಿತನಿಗೆ ಲಭಿಸುವುದು.

೫೩. ಭೂತಧಾರಿಣಿ, ದೇವತೆಗಳೂ ಕೂಡ ತಪಸ್ಸನ್ನು ಮಾಡಿ, ನಮಗೆ ಯಾವಾಗ ಭಾರತವರ್ಷದಲ್ಲಿ ಜನ್ಮವುಂಟಾದೀತು ! ದೀಕ್ಷಿತರಾಗಿ ವರಾಹ ಪುರಾಣವನ್ನು ಎಂದಿಗೆ ಕೇಳುವೆವು !

೫೪-೫೫. ಎಲ್ಲಿಗೆ ಹೋಗಿ ತಿರುಗಿ ಹುಟ್ಟುವುದಿಲ್ಲವೋ ಅಂತಹ ಪರಮ ಸ್ಥಾನವನ್ನು ನಾವು ಎಂದು ಸೇರುವೆವೋ ! ಎಂದು ಚಿಂತಿಸುತ್ತಲೂ, ಮಾತನಾಡುತ್ತಲೂ ಇರುವರು.

೫೬. ಈ ವಿಚಾರಕ್ಕೆ ಮಹಾತ್ಮರಾದ ವಸಿಷ್ಠರ ಮತ್ತು ಶ್ವೇತನೆಂಬುವನ ಸಂವಾದರೂಪವಾದ ಪ್ರಾಚೀನೇತಿಹಾಸವನ್ನು ಉದಾಹರಣೆಯಾಗಿ ಹೇಳುವರು.

(ಸ್ವರ್ಗವಾಸೇ ಸ್ಥಿತೋಹ್ಯಾಸೀತ್ ಶ್ವೇತೋ ರಾಜಾ ಮಹಾಯಶಾಃ)।
ಆಸೀದಿಲಾವೃತೇ ವರ್ಷೇ ಶ್ವೇತೋ ರಾಜಾ ಬೃಹತ್ತಪಾಃ ॥ ೫೭ ॥

ಸ ಮಹೀಂ ಸಕಲಾಂ ದೇವಿ ಸಪಲ್ಲವವನದ್ರುಮಾಂ ।
ದಾತುಮಿಚ್ಛನ್ಸ ಚೋವಾಚ ವಸಿಷ್ಠಂ ತಪಸಾಂ ನಿಧಿಂ ॥ ೫೮ ॥

ಭಗವನ್ ದಾತುಮಿಚ್ಛಾಮಿ ಬ್ರಾಹ್ಮಣೇಭ್ಯೋ ವಸುಂಧರಾಂ ।
ದೇಹ್ಯನುಜ್ಞಾಂ ಸ ಚೋವಾಚ ವಸಿಷ್ಠೋ ರಾಜಸತ್ತಮಂ ॥ ೫೯ ॥

ಅನ್ನಂ ದೇಹಿ ಸದಾ ರಾಜನ್ ಸರ್ವಕಾಲಸುಖಾವಹಂ ।
ಅನ್ನೇನ ಚೈವ ದತ್ತೇನ ಕಿಂ ನ ದತ್ತಂ ಮಹೀತಲೇ ॥ ೬೦ ॥

ಸರ್ವೇಷಾಮೇವ ದಾನಾನಾಮನ್ನದಾನಂ ವಿಶಿಷ್ಯತೇ ।
ಅನ್ನಾದ್ಭವಂತಿ ಭೂತಾನಿ ಅನ್ನೇನೈವ ಚ ವರ್ಧತೇ ॥
ತಸ್ಮಾತ್ಸರ್ವಪ್ರಯತ್ನೇನ ಅನ್ನದಾನಂ ದದಸ್ವ ಭೋಃ ॥ ೬೧ ॥

---

೫೭. ಇಳಾವೃತವರ್ಷದಲ್ಲಿ ಮಹಾಯಶನೂ, ತಪಸ್ವಿಯೂ, ಆದ ಶ್ವೇತನೆಂಬ ರಾಜನಿದ್ದನು.

೫೮–೫೯. ದೇವಿ, ಆತನು, ಚಿಗುರಿನ ಮರಗಳ ವನಗಳಿಂದ ಕೂಡಿದ ಭೂಮಿಯನ್ನೆಲ್ಲಾ ದಾನಮಾಡಲಿಚ್ಛಿಸಿ, ತಪೋನಿಧಿಯಾದ ವಸಿಷ್ಠನನ್ನು ಕುರಿತು, "ಪೂಜ್ಯನೇ ಭೂಮಿಯನ್ನು ದಾನಕೊಡಲು ಬಯಸುತ್ತೇನೆ. ನನಗೆ ಅಪ್ಪಣೆಯನ್ನು ಕೊಡು" ಎಂದನು. ಆ ವಸಿಷ್ಠನು ರಾಜೋತ್ತಮನನ್ನು ಕುರಿತು ಹೀಗೆ ಹೇಳಿದನು.

೬೦. ದೊರೆಯೇ, ಸರ್ವಕಾಲದಲ್ಲೂ ಸುಖವನ್ನುಂಟುಮಾಡುವ ಅನ್ನವನ್ನು ಕೊಡು, ಭೂಲೋಕದಲ್ಲಿ ಅನ್ನವನ್ನು ದಾನಮಾಡಿದರೆ ಯಾವುದನ್ನು ತಾನೆ ದಾನಮಾಡಿದಂತಾಗುವುದಿಲ್ಲ !

೬೧. ಎಲ್ಲಾ ದಾನಗಳಿಗಿಂತಲೂ ಅನ್ನದಾನವೇ ಉತ್ತಮವಾದುದು. ಅನ್ನದಿಂದಲೇ ಪ್ರಾಣಿಗಳು ಹುಟ್ಟುವುವು. ಬೆಳೆಯುವುವು. ಆದುದರಿಂದ ಎಲೈ ದೊರೆಯೇ, ಸರ್ವಪ್ರಯತ್ನದಿಂದಲೂ ಅನ್ನದಾನಮಾಡು.

ವಸಿಷ್ಠಸ್ಯ ವಚಃ ಶ್ರುತ್ವಾ ಸ ರಾಜಾ ನ ತಥಾ ಕರೋತ್ ॥ ೬೨ ॥

ರತ್ನವಸ್ತ್ರಮಲಂಕಾರಾನ್ ಶ್ರೀಮಂತಿ ನಗರಾಣಿ ಚ ।
ಯತ್ಕಿಂಚಿತ್ಕೋಶಜಾತಂ ಸ ದ್ವಿಜಾನಾಹೂಯ ತದ್ದದೌ ॥

ಪ್ರದತ್ತಾ ಬ್ರಾಹ್ಮಣಾಯಾಥ ಕುಂಜರಾ ಅಜಿನಾನಿ ಚ ॥ ೬೩ ॥

ಸ ಕದಾಚಿನ್ನೃಪಃ ಪೃಥ್ವೀಂ ಜಿತ್ವಾ ಪರಮಧರ್ಮವಿತ್ ।
ಪುರೋಹಿತಮುವಾಚೇದಂ ವಸಿಷ್ಠಂ ಜಪತಾಂ ವರಂ ॥
ಭಗವನ್ನಶ್ವಮೇಧಾನಾಂ ಸಹಸ್ರಂ ಕರ್ತುಮುತ್ಸಹೇ ॥ ೬೪ ॥

ಸುವರ್ಣರೌಪ್ಯತಾಮ್ರಾಣಿ ಯಾಗಂ ಕೃತ್ವಾ ದ್ವಿಜಾತಿಷು ।
ದತ್ತಾನಿ ತೇನ ರಾಜ್ಞಾ ವೈ ನಾನ್ನಂ ದತ್ತಂ ತಥಾ ಜಲಂ ॥ ೬೫ ॥

ವಸ್ತು ಸ್ವಲ್ಪಮಿತಿ ಜ್ಞಾತ್ವಾ ಪ್ರಭುಃ ಸೋನ್ನಂ ತು ನಾದದತ್ ॥ ೬೬ ॥

---

೬೨. ವಸಿಷ್ಠನ ಮಾತನ್ನು ಕೇಳಿಯೂ ಆ ದೊರೆಯು ಹಾಗೆ ಅನ್ನದಾನ ಮಾಡಲಿಲ್ಲ.

೬೩. ಆತನು ಬ್ರಾಹ್ಮಣರನ್ನು ಕರೆದು, ರತ್ನವಸ್ತ್ರಗಳನ್ನೂ, ಆಭರಣಗಳನ್ನೂ, ಐಶ್ವರ್ಯದಿಂದ ಕೂಡಿದ ನಗರಗಳನ್ನೂ, ಕೆಲವು ಭಂಡಾರಗಳನ್ನೂ ಅವರಿಗೆ ಕೊಟ್ಟನು. ಅಲ್ಲದೆ ಆನೆಗಳನ್ನೂ, ಅಜಿನಗಳನ್ನೂ ಬ್ರಾಹ್ಮಣರಿಗೆ ದಾನಮಾಡಿದನು.

೬೪. ಆ ರಾಜನು ಒಂದಾನೊಂದು ಕಾಲದಲ್ಲಿ ಪೃಥ್ವಿಯನ್ನೇ ಜಯಿಸಿ, ತಪಸ್ವಿಗಳಲ್ಲಿ ಉತ್ತಮನೂ, ಪುರೋಹಿತನೂ ಆದ ವಸಿಷ್ಠನನ್ನು ನೋಡಿ, "ಭಗವಂತನೇ, ಸಾವಿರ ಅಶ್ವಮೇಧಗಳನ್ನು ಮಾಡಲು ಕುತೂಹಲಪಡುತ್ತೇನೆ" ಎಂದು ಹೇಳಿದನು.

೬೫. ಆ ದೊರೆಯು ಯಾಗವನ್ನು ಮಾಡಿ, ಚಿನ್ನ, ಬೆಳ್ಳಿ, ತಾಮ್ರಗಳನ್ನು ಬ್ರಾಹ್ಮಣರಿಗೆ ದಾನಮಾಡಿದನು. ಅನ್ನವನ್ನೂ, ನೀರನ್ನೂ ಕೊಡಲಿಲ್ಲ.

೬೬. ಆ ಪ್ರಭುವು, ಅನ್ನವು ಅಲ್ಪವಸ್ತುವೆಂದು ಭಾವಿಸಿದ್ದುದರಿಂದ ಅದನ್ನು ದಾನಮಾಡಲಿಲ್ಲ.

ಏವಂ ವಿಭವಯುಕ್ತಸ್ಯ ತಸ್ಯ ರಾಜ್ಞೋ ಮಹಾತ್ಮನಃ ।
ಕಾಲಧರ್ಮವಶಾದ್ದೇವಿ ಮೃತ್ಯುಸ್ಸಮಭವತ್ತದಾ ॥ ೬೭ ॥

ಪರಲೋಕೇ ವರ್ತಮಾನಃ ಸ ಚ ರಾಜಾ ಮಹಾಮನಾಃ ।
ಕ್ಷುಧಯಾ ಪೀಡಿತೋ ಹ್ಯಾಸೀತ್ತೃಷಯಾ ಚ ವಿಶೇಷತಃ ॥ ೬೮ ॥

ಆನಿನಾಯಾಪ್ಸರೋಭಾಗಂ ಗತ್ವಾ ಶ್ವೇತಾಖ್ಯಪರ್ವತಂ ॥ ೬೯ ॥

ತತ್ರ ಪ್ರಾಗ್ಜನ್ಮಮೂರ್ತಿಶ್ಚ ಪುರಾ ದಗ್ಧಾ ಮಹಾತ್ಮನಃ ।
ತತ್ರಾಸ್ಥೀನಿ ಚ ಸಂಗೃಹ್ಯ ಲಿಹನ್ನಾಸ್ತೇ ಸ ಪಾರ್ಥಿವಃ ॥ ೭೦ ॥

ಪುನರ್ವಿಮಾನಮಾರುಹ್ಯ ದಿವಮಾಚಕ್ರಮೇ ನೃಪಃ ॥ ೭೧ ॥

ಅಥ ಕಾಲೇನ ಮಹತಾ ಸ ರಾಜಾ ಶಂಸಿತವ್ರತಃ ।
ತಾನ್ಯಸ್ಥೀನಿ ಅಹನ್ದೃಷ್ಟ್ವಾ ವಸಿಷ್ಠೇನ ಮಹಾತ್ಮನಾ ।
ಉಕ್ತಶ್ಚ ತೇನ ಕಿಂಚ ತ್ವಂ ಸ್ವಾಸ್ಥಿ ಭುಂಕ್ಷೇ ನರಾಧಿಪಃ ॥ ೭೨ ॥

---

೬೭. ಹಾಗೆ ವೈಭವದಿಂದಿದ್ದ ಮಹಾತ್ಮನಾದ ಆ ದೊರೆಗೆ ಕಾಲಧರ್ಮ ವಶದಿಂದ ಮರಣವುಂಟಾಯಿತು.

೬೮. ಉದಾರಮನಸ್ಕನಾದ ಆ ದೊರೆಯು ಸ್ವರ್ಗಲೋಕದಲ್ಲಿದ್ದುಕೊಂಡೂ ಹೆಚ್ಚಾದ ಹಸಿವಿನಿಂದಲೂ, ಬಾಯಾರಿಕೆಯಿಂದಲೂ ಪೀಡಿತನಾದನು.

೬೯. ಶ್ವೇತವೆಂಬ ಪರ್ವತಕ್ಕೆ ಹೋಗಿ ನೀರಿನ ಸರೋವರದ ಹತ್ತಿರ ಸೇರಿದನು.

೭೦-೭೧. ಅಲ್ಲಿ ಆ ಮಹಾತ್ಮನ ಹಿಂದಿನ ದೇಹವನ್ನು ಸುಟ್ಟಿದ್ದಿತು. ಅಲ್ಲಿ ಎಲುಬುಗಳನ್ನು ಆರಿಸಿ, ಅವನ್ನು ಆ ರಾಜನು ನೆಕ್ಕುವನು. ಬಳಿಕ ವಿಮಾನ ವನ್ನೇರಿ ಮತ್ತೆ ಸ್ವರ್ಗಕ್ಕೆಹೋಗುವನು.

೭೨. ಬಹುಕಾಲದಮೇಲೆ ಆ ಅಸ್ಥಿಗಳನ್ನು ನೆಕ್ಕುತ್ತಿದ್ದ, ಉತ್ತಮ ವ್ರತಿಯಾದ ಆ ರಾಜನನ್ನು ಮಹಾತ್ಮನಾದ ವಸಿಷ್ಠನು ನೋಡಿ, "ದೊರೆಯೇ ಇದೇನು ! ನಿನ್ನ ಎಲುಬುಗಳನ್ನೇ ನೀನು ತಿನ್ನುತ್ತೀಯೆ ?" ಎಂದು ಕೇಳಿದನು.

ಏವಮುಕ್ತಸ್ತದಾ ರಾಜಾ ವಸಿಷ್ಠೇನ ಮಹಾತ್ಮನಾ ।
ಉವಾಚ ವಚನಂ ಚೇದಂ ಶ್ವೇತೋ ರಾಜಾ ಮುನಿಂ ತದಾ ॥ ೭೩ ॥

ಭಗವನ್ ಕ್ಷುಧಿತಶ್ಚಾಸ್ಮಿ ಅನ್ನಪಾನಂ ಪುರಾ ಮಯಾ ।
ನದತ್ತಂ ಮುನಿಶಾರ್ದೂಲ ತೇನ ಮಾಂ ಬಾಧತೇ ಕ್ಷುಧಾ ॥ ೭೪ ॥

ಏವಮುಕ್ತಸ್ತತೋ ರಾಜ್ಞಾ ವಸಿಷ್ಠೋ ಮುನಿಪುಂಗವಃ ।
ಉವಾಚ ಚ ಮುನಿರ್ಭೂಯಃ ಶ್ವೇತಂ ವಾಕ್ಯಂ ಮಹಾನೃಪಂ ॥ ೭೫ ॥

ಕಿಂ ತೇ ಕರೋಮಿ ರಾಜೇಂದ್ರ ಕ್ಷುಧಿತಸ್ಯ ವಿಶೇಷತಃ ।
ಅದತ್ತಂ ನೋಪತಿಷ್ಠೇತ ಕಸ್ಯಚಿತ್ಕಿಂಚಿದುತ್ತಮಂ ॥ ೭೬ ॥

ರತ್ನಹೇಮಪ್ರದಾನೇನ ಭೋಗವಾನ್ಜಾಯತೇ ನರಃ ।
ಅನ್ನಪಾನಪ್ರದಾನೇನ ಸರ್ವಕಾಮೈಸ್ತು ತರ್ಪಿತಃ ॥
ತನ್ನ ದತ್ತಂ ತ್ವಯಾ ರಾಜನ್ ಸ್ತೋಕಂ ಮತ್ವಾ ನರಾಧಿಪ ॥ ೭೭ ॥

೭೩–೭೪. ಮಹಾತ್ಮನಾದ ವಸಿಷ್ಠನು ಹಾಗೆ ಕೇಳಲು, ಶ್ವೇತರಾಜನು ಮುನಿಯನ್ನು ಕುರಿತು, ಭಗವಂತನೇ, ಹಸಿದಿದ್ದೇನೆ. ಪೂರ್ವದಲ್ಲಿ ಅನ್ನವನ್ನೂ ನೀರನ್ನೂ ನಾನು ದಾನಮಾಡಲಿಲ್ಲ. ಮುನಿವರ್ಯನೇ, ಅದರಿಂದ ಹಸಿವು ನನ್ನನ್ನು ಪೀಡಿಸುತ್ತದೆ" ಎಂದನು.

೭೫. ರಾಜನು ಹೀಗೆನಲು, ಮುನಿವರ್ಯನಾದ ವಸಿಷ್ಠನು ಮಹಾರಾಜನಾದ ಶ್ವೇತನನ್ನು ಕುರಿತು ಹೀಗೆ ಹೇಳಿದನು.—

೭೬. ರಾಜನೇ, ವಿಶೇಷವಾಗಿ ಹಸಿದಿರುವ ನಿನಗೆ ನಾನು ಏನನ್ನು ತಾನೆ ಮಾಡಲಿ! ತಾನು ಹಿಂದೆ ಕೊಡದಿರುವ ಉತ್ತಮಪದಾರ್ಥವು ಯಾರಿಗೂ ಲಭಿಸುವುದಿಲ್ಲ.

೭೭. ರತ್ನಸುವರ್ಣದಾನದಿಂದ ಮನುಷ್ಯನು ಭೋಗಿಯಾಗಿ ಮಾತ್ರ ಜನಿಸುವನು. ಅನ್ನಪಾನದಾನದಿಂದಾದರೆ ಸರ್ವೇಷ್ಟಾರ್ಥಗಳಿಂದ ತೃಪ್ತಿಪಡುವವನಾಗಿ ಉದಿಸುವನು. ದೊರೆಯೇ, ಅಲ್ಪವಾದುದೆಂದು ನೀನು ಅನ್ನದಾನವನ್ನು ಮಾಡದೆಹೋದೆ.

॥ ಶ್ವೇತ ಉವಾಚ ॥

ಅದತ್ತಸ್ಯ ಚ ಸಂಪ್ರಾಪ್ತಿಂ ತನ್ಮಮಾಚಕ್ಷ್ವ ಪೃಚ್ಛತಃ ।
ಶಿರಸಾ ಭಕ್ತಿಯುಕ್ತೇನ ಯಾಚಿತೋಽಸಿ ಮಹಾಮುನೇ ॥ ೭೮ ॥

॥ ವಸಿಷ್ಠ ಉವಾಚ ॥

ಅಸ್ತ್ಯೇಕಂ ಕಾರಣಂ ಯೇನ ಜಾಯತೇ ತನ್ನಸಂಶಯಃ ।
ತಚ್ಛೃಣುಷ್ವ ನರವ್ಯಾಘ್ರ ಕಥ್ಯಮಾನಂ ಮಯಾನಘ ॥ ೭೯ ॥

ಆಸೀದ್ರಾಜಾ ಪುರಾಕಲ್ಪೇ ವಿನೀತಾಶ್ವೇತಿ ವಿಶ್ರುತಃ ।
ಸ ಸರ್ವಮೇಧಮಾರೇಭೇ ಸ್ವಯಂ ಕ್ರತುವರಂ ನೃಪಃ ॥ ೮೦ ॥

ಯಜತಾನೇನ ವಿಪ್ರೇಭ್ಯೋ ದತ್ತಾಗಾವೋ ದ್ವಿಪಾ ವಸು ।
ನಾನ್ನಂ ತೇನ ತದಾ ದತ್ತಂ ಸ್ವಲ್ಪಂ ಮತ್ವಾ ಯಥಾತ್ವಯಾ ॥ ೮೧ ॥

---

೭೮. ಶ್ವೇತ—ಮಹಾಮುನಿಯೇ, ದಾನಮಾಡದಿರುವುದನ್ನೂ ಹೇಗೆ ಪಡೆಯಬೇಕೋ, ಅದನ್ನು ನನಗೆ ಹೇಳು. ಭಕ್ತಿಯಿಂದ ತಲೆಬಾಗಿ ನಮಿಸಿ ಬೇಡುತ್ತೇನೆ.

೭೯. ವಸಿಷ್ಠ—ನರೋತ್ತಮನೇ, ಪಾಪರಹಿತನೇ, ಹಿಂದೆ ದಾನಮಾಡ ದಿರುವುದನ್ನೂ ಪಡೆಯಬಹುದಾದ ಕಾರಣವೊಂದಿದೆ.

೮೦. ಪೂರ್ವಕಲ್ಪದಲ್ಲಿ ವಿನೀತಾಶ್ವನೆಂಬ ಪ್ರಸಿದ್ಧನಾದ ದೊರೆಯಿದ್ದನು. ಆತನು ತಾನಾಗಿಯೇ ಸರ್ವಮೇಧವೆಂಬ ಉತ್ತಮಯಜ್ಞವನ್ನಾರಂಭಿಸಿದನು

೮೧. ಯಜ್ಞಮಾಡುತ್ತಿದ್ದ ಆತನು ಬ್ರಾಹ್ಮಣರಿಗೆ ಗೋವುಗಳನ್ನೂ, ಆನೆಗಳನ್ನೂ, ಧನವನ್ನೂ ದಾನಮಾಡಿದನು. ನಿನ್ನಂತೆಯೇ ಆತನೂ ಅನ್ನವು ಅಲ್ಪವಾದುದೆಂದು ತಿಳಿದು, ಅದನ್ನು ದಾನಮಾಡಲಿಲ್ಲ.

ತತಃ ಕಾಲೇನ ಮಹತಾ ಮೃತೋಽಸೌ ಜಾಹ್ನವೀಜಲೇ ।
ಕೃತ್ವಾ ಪುಣ್ಯಂ ವಿನೀತಾಶ್ವಃ ಸಾರ್ವಭೌಮೋ ನೃಪೋತ್ತಮಃ ॥
ಸ್ವರ್ಗಂ ಚ ಗತವಾನ್ಸೋಽಪಿ ಯಥಾ ರಾಜನ್ಭವಾನ್ಪ್ರಭೋ ॥ ೮೨ ॥

ಅಸಾವಪಿ ಕ್ಷುಧಾವಿಷ್ಟಃ ಏವಮೇವ ಗತೋ ನೃಪಃ ॥ ೮೩ ॥

ಮರ್ತ್ಯಲೋಕಂ ನದೀತೀರೇ ಗಂಗಾಯಾಂ ನೀಲಪರ್ವತಂ ।
ವಿಮಾನೇನಾರ್ಕವರ್ಣೇನ ಭಾಸ್ವತಾ ದೇವವನ್ನೃಪಃ ॥
ದದರ್ಶ ಚ ತದಾ ರಾಜಾ ಕ್ಷುಧಿತಃ ಸ್ವಂ ಕಲೇವರಂ ॥ ೮೪ ॥

ಪುರೋಹಿತಂ ದದರ್ಶಾಥ ಹೋತಾರಂ ಜಾಹ್ನವೀತಟೇ ॥ ೮೫ ॥

ತಂ ದೃಷ್ಟ್ವಾಸಾವಪಿ ನೃಪಃ ಪಪ್ರಚ್ಛ ಮುನಿಸತ್ತಮಂ ।
ಕ್ಷುಧಾಯಾಃ ಕಾರಣಂ ಕಿಂ ಮೇ ಸ ಹೋತಾ ತಮುವಾಚ ಹ ॥ ೮೬ ॥

---

೮೨. ಪ್ರಭೂ, ಸಾರ್ವಭೌಮನಾದ ಆ ದೊರೆಯು ಬಳಿಕ ಬಹುಕಾಲದ ಮೇಲೆ ಪುಣ್ಯವನ್ನು ಮಾಡಿ, ಗಂಗೆಯ ನೀರಿನಲ್ಲಿ ಮೃತನಾಗಿ, ನಿನ್ನಂತೆಯೇ ಸ್ವರ್ಗವನ್ನೇರಿದನು.

೮೩–೮೪. ಅವನೂ ಹೀಗೆಯೇ ಹಸಿವಿನಿಂದ ಪೀಡಿತನಾಗಿ ಸೂರ್ಯವರ್ಣದ ಹೊಳೆಯುವ ವಿಮಾನದಲ್ಲಿ ದೇವನಂತೆ ಮನುಷ್ಯಲೋಕದಲ್ಲಿ ಗಂಗೆಯ ತೀರದ ನೀಲಪರ್ವತಕ್ಕೆ ಹೋಗಿ, ಅಲ್ಲಿ ಗಂಗೆಯಲ್ಲಿ ತನ್ನ ಹಿಂದಿನ ದೇಹವನ್ನು ಕಂಡನು.

೮೫. ಬಳಿಕ ಗಂಗಾನದಿಯ ದಡದಲ್ಲಿ ಹೋತೃವಾಗಿದ್ದ ತನ್ನ ಪುರೋಹಿತನನ್ನೂ ಕಂಡನು.

೮೬. ಕಂಡ ಆ ರಾಜನೂ ಆ ಋಷಿವರ್ಯನನ್ನು "ನನ್ನ ಹಸಿವಿಗೆ ಕಾರಣವೇನು?" ಎಂದು ಕೇಳಿದನು. ಆ ಹೋತೃವು ದೊರೆಯನ್ನು ಕುರಿತು ಹೀಗೆ ಹೇಳಿದನು.

ತಿಲಧೇನುಂ ಭವಾನ್ರಾಜನ್ ಜಲಧೇನುಂ ಚ ಸತ್ತಮ ।
ಘೃತಧೇನುಂ ಚ ಧೇನುಂ ಚ ರಸಧೇನುಂ ಚ ಪಾರ್ಥಿವ ॥ ೮೭ ॥

ದೇಹಿ ಶೀಘ್ರಂ ಯೇನ ಭವಾನ್ ಕ್ಷುಧಯಾ ವರ್ಜಿತೋ ಭವೇಃ ।
ತಪತೇ ಯಾವದಾದಿತ್ಯಸ್ತಪತೇ ವಾಪಿ ಚಂದ್ರಮಾಃ ॥ ೮೮ ॥

ಏವಮುಕ್ತಸ್ತತೋ ರಾಜಾ ತಂ ಪುನಃ ಪೃಷ್ಟವಾನಿದಂ ॥ ೮೯ ॥

॥ ವಿನೀತಾಶ್ವ ಉವಾಚ ॥

ಕಥಂ ಸಾ ದೀಯತೇ ಬ್ರಹ್ಮನ್ ತಿಲಧೇನುರ್ಜಿಗೀಷುಭಿಃ ।
ಭುಂಕ್ತೇ ಸ್ವರ್ಗಂ ಚ ವಿಪ್ರೇಂದ್ರ ತನ್ಮಮಾಚಕ್ಷ್ವ ಪೃಚ್ಛತಃ ॥ ೯೦ ॥

೮೭–೮೮. "ದೊರೆಯೇ, ಸತ್ಪುರುಷೋತ್ತಮನೇ, ನೀನು *ತಿಲಧೇನುವನ್ನೂ, +ಜಲಧೇನುವನ್ನೂ, ‡ಘೃತಧೇನುವನ್ನೂ, ರಸಧೇನುವನ್ನೂ ಬೇಗನೆ ದಾನಮಾಡು, ಅದರಿಂದ ನೀನು ಲೋಕದಲ್ಲಿ ಸೂರ್ಯಚಂದ್ರರು ಪ್ರಕಾಶಿಸುತ್ತಿರುವವರೆಗೂ ಹಸಿವಿಲ್ಲದವನಾಗುವೆ.

೮೯. ಹೀಗೆ ಹೇಳಿಸಿಕೊಂಡ ವಿನೀತಾಶ್ವರಾಜನು ಅವನನ್ನು ಪುನಃ ಹೀಗೆ ಕೇಳಿದನು.

೯೦. ವಿನೀತಾಶ್ವ—ಬ್ರಹ್ಮನೇ, ಸ್ವರ್ಗವನ್ನು ಪಡೆಯಬೇಕೆನ್ನುವರು ಆ ತಿಲಧೇನುವೆಂಬುದನ್ನು ಹೇಗೆ ದಾನಮಾಡಬೇಕು ? ಅವರು ಹೇಗೆ ಸ್ವರ್ಗವನ್ನು ಅನುಭವಿಸುವರು ? ಬ್ರಾಹ್ಮಣೋತ್ತಮನೇ, ಅದನ್ನು ನನಗೆ ಹೇಳು.

---

* ತಿಲಧೇನು= ಎಳ್ಳಿನಿಂದ ಶಾಸ್ತ್ರೋಕ್ತವಾಗಿ ಮಾಡಿದ ಹಸುವಿನ ಆಕೃತಿ
+ ಜಲಧೇನು= ನೀರಿನಿಂದ ,, ,, ,, ,,
‡ ಘೃತಧೇನು= ತುಪ್ಪದಿಂದ ,, ,, ,, ,,

|| ಹೋತೋವಾಚ ||

ವಿಧಾನಂ ತಿಲಧೇನೋಶ್ಚ ತ್ವಂ ಶೃಣುಷ್ವ ನರಾಧಿಪ || ೯೧ ||

ಚತುರ್ಭಿಃ ಕುಡಪೈಶ್ಚೈವ ಪ್ರಸ್ಥ ಏಕಃ ಪ್ರಕೀರ್ತಿತಃ ।
ಸಾತು ಷೋಡಶಭಿಃ ಕಾರ್ಯಾ ಚತುರ್ಭಿರ್ವತ್ಸಕೋ ಭವೇತ್ || ೯೨ ||

ನಾಸಾಗಂಧಮಯೀ ತಸ್ಯಾ ಜಿಹ್ವಾ ಗುಡಮಯೀ ಶುಭಾ ।
ಪುಚ್ಛೇ ಪ್ರಕಲ್ಪನೀಯಾ ಸಾ ಘಂಟಾಭರಣಭೂಷಿತಾ ॥
ಈದೃಶೀಂ ಕಲ್ಪಯಿತ್ವಾ ತು ಸ್ವರ್ಣಶೃಂಗೀಂ ತು ಕಾರಯೇತ್ || ೯೩ ||

ಕಾಂಸ್ಯದೇಹಾಂ ರೌಪ್ಯಖುರಾಂ ಪೂರ್ವಧೇನುವಿಧಾನತಃ ।
ಕೃತ್ವಾ ತಾಂ ಬ್ರಾಹ್ಮಣಾಯಾಶು ದದ್ಯಾಚ್ಚೈವ ನರಾಧಿಪ || ೯೪ ||

---

೯೧. ಹೋತಾರ—ದೊರೆಯೇ, ತಿಲಧೇನುವಿನ ವಿಧಾನವನ್ನು ಹೇಳುತ್ತೇನೆ. ಕೇಳು.

೯೨. ನಾಲ್ಕು ಸೊಲಿಗೆ(ಕುಡಪ)ಗಳನ್ನು ಹಾಕಿದರೆ ಒಂದು ಬಳ್ಳ(ಪ್ರಸ್ಥ) ವಾಗುವುದು. ಹಸುವನ್ನು ಹದಿನಾರು ಬಳ್ಳ ಎಳ್ಳಿನಿಂದಲೂ, ಕರುವನ್ನು ನಾಲ್ಕು ಬಳ್ಳದಿಂದಲೂ ರಚಿಸಬೇಕು.

೯೩. ಶುಭೆಯಾದ ಆ ಹಸುವಿನ ಮೂಗನ್ನು ಗಂಧದಿಂದಲೂ, ನಾಲಗೆಯನ್ನು ಬೆಲ್ಲದಿಂದಲೂ ರಚಿಸಬೇಕು. ಆ ಹಸುವಿನ ಬಾಲವನ್ನು ಘಂಟೆಯಿಂದಲೂ ಆಭರಣದಿಂದಲೂ ಅಲಂಕರಿಸಬೇಕು. ಚಿನ್ನದ ಕೊಂಬುಳ್ಳದನ್ನಾಗಿಯೂ ಮಾಡಬೇಕು.

೯೪. ದೊರೆಯೇ, ಎಳ್ಳಿನ ಹಸುವಿನಂತೆಯೇ ಕಂಚಿನ ದೇಹವೂ, ಬೆಳ್ಳಿಯ ಗೊರಸೂ ಉಳ್ಳ ಹಸುವನ್ನು ಮಾಡಿ ಅದನ್ನು ಬ್ರಾಹ್ಮಣನಿಗೆ ಬೇಗನೆ ದಾನಮಾಡಬೇಕು.

ಕೃಷ್ಣಾಜಿನಂ ಧೇನುವಾಸೋ ನಂದಿತಾಂ ಕಲ್ಪಿತಾಂ ಶುಭಾಂ |
ಸೂತ್ರೇಣ ಸಂಶ್ರಿತಾಂ ಕೃತ್ವಾ ಸರ್ವರತ್ನಸಮನ್ವಿತಾಂ |
ಸರ್ವೌಷಧಿಸಮಾಯುಕ್ತಾಂ ಮಂತ್ರಪೂತಾಂ ತು ದಾಪಯೇತ್ || ೯೫ ||

ಅನ್ನಂ ಮೇ ಜಾಯತಾಮನ್ನಪಾನಂ ಸರ್ವರಸಾಸ್ತಥಾ |
ಸರ್ವಂ ಸಂಪಾದಯಾಸ್ಮಾಕಂ ತಿಲಧೇನೋ ದ್ವಿಜಾರ್ಪಿತಾ || ೯೬ ||

ಗೃಹ್ಣಾಮಿ ದೇವಿ ತ್ವಾಂ ಭಕ್ತ್ಯಾ ಕುಟುಂಬಾರ್ಥಂ ವಿಶೇಷತಃ |
ಭಜಸ್ವ ಕಾಮಾನ್ಮಾಂ ದೇವಿ ತಿಲಧೇನೋ ನಮೋಽಸ್ತು ತೇ || ೯೭ ||

ಏವಂ ವಿಧಾಂ ತತೋ ದದ್ಯಾತ್ ತಿಲಧೇನುಂ ನೃಪೋತ್ತಮ || ೯೮ ||

ಸರ್ವಕಾಮಸಮಾವಾಪ್ತಿಂ ಕುರುತೇ ನಾತ್ರ ಸಂಶಯಃ || ೯೯ ||

---

೯೫. ಆ ಹಸುವಿಗೆ ಕೃಷ್ಣಾಜಿನವನ್ನು ಹೊದಿಸಿ, ಸಂತಸಗೊಳಿಸಿ, ಸೂತ್ರವನ್ನು ಧರಿಸಿ, ಸರ್ವರತ್ನಗಳಿಂದಲೂ ಸರ್ವೌಷಧಿಗಳಿಂದಲೂ ಅಲಂಕೃತವಾಗಿ ಮಂತ್ರದಿಂದ ಪರಿಶುದ್ಧವಾದ ಅದನ್ನು ದಾನಮಾಡಬೇಕು.

೯೬. "ಬ್ರಾಹ್ಮಣಾರ್ಪಿತವಾದ ತಿಲಧೇನುವೇ, ನನಗೆ ಅನ್ನವೂ, ನೀರೂ, ಸರ್ವರಸಗಳೂ ದೊರೆಯಲಿ, ನಮಗೆ ಎಲ್ಲವನ್ನೂ ದೊರಕಿಸು" ಎಂದು ದಾನ ಮಾಡುವವನು ಹೇಳಬೇಕು.

೯೭. "ದೇವಿ, ಮುಖ್ಯವಾಗಿ ಕುಟುಂಬರಕ್ಷಣೆಗಾಗಿ ನಿನ್ನನ್ನು ಭಕ್ತಿಯಿಂದ ಆಶ್ರಯಿಸುತ್ತೇನೆ. ತಿಲಧೇನುವೇ, ನಿನಗೆ ನಮಸ್ಕಾರ" ಎಂದು ದಾನವನ್ನು ತೆಗೆದುಕೊಳ್ಳುವವನು ಹೇಳಬೇಕು.

೯೮–೯೯. ಮೇಲಿನಂತೆ ಹೇಳಿ, ಬಳಿಕ ತಿಲಧೇನುವನ್ನು ಕೊಡಬೇಕು. ರಾಜೋತ್ತಮನೇ, ಅದು ಸರ್ವೇಷ್ಟಲಾಭವನ್ನೂ ಮಾಡುವುದರಲ್ಲಿ ಸಂಶಯವಿಲ್ಲ.

ಯಶ್ಚೇದಂ ಶೃಣುಯಾದ್ಭಕ್ತ್ಯಾ ಕುರ್ಯಾತ್ಕಾರಯತೇಽಪಿ ವಾ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಚ ಗಚ್ಛತಿ ॥ ೧೦೦ ॥

(ಗೋಮಯೇ ಮಂಡಲೇ ಕೃತ್ವಾ ಗೋಚರ್ಮತದನಂತರಂ ।)*

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ತಿಲಧೇನು
ದಾನಮಾಹಾತ್ಮ್ಯಂ ನಾಮ ನವನವತಿತಮೋಽಧ್ಯಾಯಃ

---

೧೦೦. ಇದನ್ನು ಕೇಳುವವರೂ, ಭಕ್ತಿಯಿಂದ ಈ ದಾನವ್ರತವನ್ನು ಮಾಡುವವರೂ, ಮಾಡಿಸುವವರೂ ಸರ್ವಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಸೇರುವರು. *ಗೋಮಯದಿಂದ ಮಂಡಲವನ್ನು ಮಾಡಿ, ಬಳಿಕ ಅದರಮೇಲೆ ಹಸುವಿನ ಆಕಾರವನ್ನು ರಚಿಸಬೇಕು.

ಅಧ್ಯಾಯದ ಸಾರಾಂಶ:—

ಗಾಯತ್ರೀದೇವಿಯ ಅವತಾರಕಾರ್ಯವಿಚಾರಗಳನ್ನು ಕೇಳಿದ ಭೂದೇವಿಗೆ ಶ್ರೀವರಾಹನು, ' ಜ್ಞಾನಶಕ್ತಿಯೇ ದೇವಿ, ಅಜ್ಞಾನವೇ ಮಹಿಷಾದಿ ನಾಮವುಳ್ಳ ರಾಕ್ಷಸ, ಜ್ಞಾನದಿಂದ ಅಜ್ಞಾನನಾಶ ' ಎಂಬ ರಹಸ್ಯವನ್ನು ತಿಳಿಸಿ, ಪಂಚಪಾತಕನಾಶಕವೂ, ಪುತ್ರಧನಾದಿಪ್ರದವೂ ಆದ ನಾರಾಯಣವ್ರತ ವಿಚಾರ ವನ್ನೂ, ವಸಿಷ್ಠರಿಗೂ ಶ್ವೇತರಾಜನಿಗೂ ಆದ ಸಂವಾದವನ್ನೂ ಅನ್ನದಾನ ಮಹಿಮೆಯನ್ನೂ, ತಿಲಧೇನುದಾನ ವಿಧಾನವನ್ನೂ, ಫಲವನ್ನೂ ಹೇಳುವನು ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯ.

---

* ಪೂರ್ಣವಾದ ಅರ್ಥವಿಲ್ಲದ ಈ ಶ್ಲೋಕವು ೯೦ನೆಯ ಶ್ಲೋಕಕ್ಕೆ ಹಿಂದೆ ಇರಬೇಕಾಗಿತ್ತು.

॥ ಶ್ರೀಃ ॥

-x-

ಶತತಮೋಧ್ಯಾಯಃ

ಅಥ ಜಲಧೇನುದಾನವಿಧಿಃ

॥ ಹೋತೋವಾಚ ॥

ಜಲಧೇನುಂ ಪ್ರವಕ್ಷ್ಯಾಮಿ ಪುಣ್ಯೇಹ್ನಿ ವಿಧಿಪೂರ್ವಕಂ ।
ಗೋಚರ್ಮಮಾತ್ರಂ ಭೂಭಾಗಂ ಗೋಮಯೇನೋಪಕಲ್ಪಯೇತ್ ॥
ತತ್ರ ಮಧ್ಯೇ ತು ರಾಜೇಂದ್ರ ಪೂರ್ಣಂ ಕುಂಭಂ ಚ ವಿನ್ಯಸೇತ್ ॥ ೧ ॥

ಜಲಪೂರ್ಣಂ ಸುಗಂಧಾಢ್ಯಂ ಕರ್ಪೂರಾಗುರುಚಂದನೈಃ ।
ವಾಸಿತಂ ಗಂಧತೋಯೇನ ತಾಂ ಧೇನುಂ ಪರಿಕಲ್ಪಯೇತ್ ॥ ೨ ॥

ವತ್ಸಂ ತಥಾಪರಂ ಕಲ್ಪ್ಯ ಜಲೇನ ಪರಿಪೂರಿತಂ ॥ ೩ ॥

ನೂರನೆಯ ಅಧ್ಯಾಯ.

ಜಲಧೇನುದಾನವಿಧಿ.

೧. ಹೋತೃ—ದೊರೆಯೇ, ಇನ್ನು ಜಲಧೇನುದಾನ ವಿಚಾರವನ್ನು ಹೇಳುವೆನು. ಪುಣ್ಯದಿನದಲ್ಲಿ ವಿಧಿಪೂರ್ವಕವಾಗಿ ಗೋಚರ್ಮದಳತೆಯ ಪ್ರದೇಶವನ್ನು ಗೋಮಯದಿಂದ ಸಾರಿಸಿ ಸಿದ್ಧಪಡಿಸಬೇಕು. ಆ ಸ್ಥಳದಲ್ಲಿ ನಡುವೆ ಪೂರ್ಣಕಲಶವನ್ನು ಇಡಬೇಕು.

೨-೩. ಕರ್ಪೂರಾಗುರುಚಂದನಗಳ ಸುವಾಸನೆಯುಳ್ಳದಾಗಿ ಸುಗಂಧೋದಕದಿಂದ ಪೂರ್ಣವಾಗಿರುವ ಆ ಕಲಶವನ್ನೇ ಗೋವನ್ನಾಗಿ ಕಲ್ಪಿಸಿಕೊಳ್ಳಬೇಕು. ನೀರಿನಿಂದ ತುಂಬಿದ ಮತ್ತೊಂದು ಚಿಕ್ಕ ಕಲಶವನ್ನು ಕರುವನ್ನಾಗಿ ಭಾವಿಸಿಕೊಳ್ಳಬೇಕು.

ವರ್ಧನೀಕಂ ಮಹಾರಾಜ ಮಂತ್ರಪುಷ್ಪೈಃ ಸಮನ್ವಿತಂ ।
ದೂರ್ವಾಂಕುರೈರುಪಸ್ತೀರ್ಯ ಸ್ರಗ್ಭಿಶ್ಚೈವ ವಿಭೂಷಿತಂ ॥ ೪ ॥

ಪಂಚರತ್ನಾನಿ ನಿಕ್ಷಿಪ್ಯ ತಸ್ಮಿನ್ಕುಂಭೇ ನರಾಧಿಪ ।
ಮಾಂಸೀಮುಶೀರಂ ಕುಷ್ಠಂ ಚ ತಥಾ ಶೈಲೇಯಬಾಲುಕಂ ॥ ೫ ॥

ಧಾತ್ರೀಫಲಂ ಸರ್ಷಪಾಶ್ಚ ಸರ್ವಧಾನ್ಯಾನಿ ಪಾರ್ಥಿವ ।
ಚತುರ್ದಿಕ್ಷ್ವಪಿ ಪಾತ್ರಾಣಿ ಚತ್ವಾರ್ಯೇವ ಪ್ರಕಲ್ಪಯೇತ್ ॥ ೬ ॥

ಏಕಂ ಘೃತಮಯಂ ಪಾತ್ರಂ ದ್ವಿತೀಯಂ ದಧಿಪೂರಿತಂ ।
ತೃತೀಯಂ ಮಧುನಶ್ಚೈವ ಚತುರ್ಥಂ ಶರ್ಕರಾಧೃತಂ ॥ ೭ ॥

ಸುವರ್ಣಮುಖಚಕ್ಷೂಂಷಿ ಶೃಂಗಂ ಕೃಷ್ಣಾಂಗರೇಷು ಚ ।
ಪ್ರಶಸ್ತಪತ್ರಶ್ರವಣಾಂ ಮುಕ್ತಾಫಲಮಯೇಕ್ಷಣಾಂ ॥ ೮ ॥

೪–೬. ಮಹಾರಾಜ, ಮಂತ್ರಪುಷ್ಪಗಳಿಂದ ಪೂಜಿತವಾಗಿ, ಮಾಲೆಗಳಿಂದಲೂ ಅಲಂಕೃತವಾಗಿ ವೃದ್ಧಿಪ್ರದವಾದ ಆ ಕಲಶವನ್ನು ಎಳೆಯ ಗರಿಕೆಯ ಹುಲ್ಲುಗಳಿಂದ ಅಲಂಕರಿಸಿ, ಅದರೊಳಗೆ ಪಂಚರತ್ನಗಳನ್ನು ಹಾಕಿ, ಜಟಾಮಾಂಸಿ, ಲಾಮಂಚ, *ಕುಷ್ಠ, ಕಲ್ಲುಹೂ, ಸುರಸುರಕಿ, ನೆಲ್ಲಿಕಾಯಿ, ಸಾಸವೆ ಇವುಗಳನ್ನೂ, ಸರ್ವಧಾನ್ಯಗಳನ್ನೂ, ಕಲಶದ ಸುತ್ತಲೂ ಹರಡಿ, ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಪಾತ್ರೆಗಳನ್ನು ಇಡಬೇಕು.

೭. ಆ ನಾಲ್ಕರಲ್ಲಿ ಮೊದಲನೆಯ ಪಾತ್ರೆಯು ತುಪ್ಪದಿಂದಲೂ, ಎರಡನೆಯದು ಮೊಸರಿನಿಂದಲೂ, ಮೂರನೆಯದು ಜೇನುತುಪ್ಪದಿಂದಲೂ, ನಾಲ್ಕನೆಯದು ಸಕ್ಕರೆಯಿಂದಲೂ ತುಂಬಿದುದಾಗಿರಬೇಕು.

೮–೧೨. ಸುವರ್ಣದಿಂದ ಮುಖವನ್ನೂ, ಕೃಷ್ಣಾಗರುವಿನಿಂದ ಕೊಂಬನ್ನೂ ಪ್ರಶಸ್ತವಾದ ಪತ್ರಗಳಿಂದ ಕಿವಿಗಳನ್ನೂ, ಮುತ್ತುಗಳಿಂದ ಕಣ್ಣುಗಳನ್ನೂ,

---

* ಕುಷ್ಠ=ಒಂದು ಬಗೆಯ ಮೂಲಿಕೆ.

ತಾಮ್ರಪೃಷ್ಠಾಂ ಕಾಂಸ್ಯದೇಹಾಂ ದರ್ಭರೋಮಸಮನ್ವಿತಾಂ ।
ಪುಚ್ಛಂ ಸೂತ್ರಮಯಂ ಕೃತ್ವಾ ಕೃಷ್ಣಾಭರಣಘಂಟಿಕಾಂ ॥ ೯ ॥

ಕಂಬಲೇ ಪುಷ್ಪಮಾಲಾಂ ಚ ಗುಡಾಸ್ಯಾಂ ಶುಕ್ತಿದಂತಿಕಾಂ ।
ಜಿಹ್ವಾಂ ಶರ್ಕರಯಾ ಕೃತ್ವಾ ನವನೀತೇನ ಚ ಸ್ತನಾನ್ ॥ ೧೦ ॥

ಇಕ್ಷುಪಾದಾಂ ತು ರಾಜೇಂದ್ರ ಗಂಧಪುಷ್ಪೋಪಶೋಭಿತಾಂ ।
ಕೃಷ್ಣಾಜಿನೋಪರಿ ಸ್ಥಾಪ್ಯ ವಸ್ತ್ರೇಣಾಚ್ಛಾದಿತಾಂ ತು ತಾಂ ॥ ೧೧ ॥

ಗಂಧಪುಷ್ಪೈಸ್ಸಮಭ್ಯರ್ಚ್ಯ ವಿಪ್ರಾಯ ವಿನಿವೇದಯೇತ್ ॥ ೧೨ ॥

ಏವಂ ಧೇನುಂ ತದಾ ದತ್ವಾ ಬ್ರಾಹ್ಮಣೇ ವೇದಪಾರಗೇ ।
ಸಾಧುವಿಪ್ರಾಯ ರಾಜೇಂದ್ರ ಶ್ರೋತ್ರಿಯಾಯಾಹಿತಾಗ್ನಯೇ ॥
ತಪೋವೃದ್ಧಾಯ ಪಾತ್ರಾಯ ದಾತವ್ಯಾ ಚ ಕುಟುಂಬಿನೇ ॥ ೧೩ ॥

ಯೋ ದದಾತಿ ನರೋ ರಾಜನ್ ಯಃ ಪಶ್ಯತಿ ಶೃಣೋತಿ ಚ ।
ಪ್ರತಿಗೃಹ್ಣಾತಿ ಯೋ ವಿಪ್ರಃ ಸರ್ವೇ ಮುಚ್ಯಂತಿ ಪಾತಕಾತ್ ॥ ೧೪ ॥

ತಾಮ್ರದಿಂದ ಪೃಷ್ಠಭಾಗವನ್ನೂ, ಕಂಚಿನಿಂದ ಮೈಯ್ಯನ್ನೂ, ದರ್ಭೆಗಳಿಂದ ರೋಮಗಳನ್ನೂ, ಸೂತ್ರದಿಂದ ಬಾಲವನ್ನೂ, ಕರಿಯ ಒಡವೆಯಿಂದ ಘಂಟಿಯನ್ನೂ, ಕಂಬಳಿಯ ದಾರದಿಂದ ಹೂಮಾಲೆಯನ್ನೂ, ಬೆಲ್ಲದಿಂದ ಬಾಯನ್ನೂ, ಮುತ್ತಿನ ಚಿಪ್ಪಿನಿಂದ ಹಲ್ಲುಗಳನ್ನೂ, ಸಕ್ಕರೆಯಿಂದ ನಾಲಗೆಯನ್ನೂ, ಹೊಸ ಬೆಣ್ಣೆಯಿಂದ ಮೊಲೆಗಳನ್ನೂ, ಕಬ್ಬಿನಿಂದ ಕಾಲುಗಳನ್ನೂ, ಆ ಕಲಶಧೇನುವಿಗೆ ಕಲ್ಪಿಸಿ, ಅದನ್ನು ಕೃಷ್ಣಾಜಿನದಮೇಲೆ ಸ್ಥಾಪಿಸಿ, ಗಂಧಪುಷ್ಪಾದಿಗಳಿಂದ ಪೂಜಿಸಿ, ಬ್ರಾಹ್ಮಣನಿಗೆ ಅರ್ಪಿಸಬೇಕು.

೧೩–೧೪. ರಾಜೇಂದ್ರನೇ, ವೇದಪಾರಂಗತನೂ, ಸಾಧುವೂ, ಶ್ರೋತ್ರಿಯನೂ, ಆಹಿತಾಗ್ನಿಯೂ, ತಪೋವೃದ್ಧನೂ, ಕುಟುಂಬಿಯೂ ಆಗಿ, ಸತ್ಪಾತ್ರನಾಗಿರುವ ಬ್ರಾಹ್ಮಣನಿಗೆ ಆ ಜಲಧೇನುವನ್ನು ದಾನಮಾಡುವವನೂ, ಆ ದಾನವನ್ನು ನೋಡುವವನೂ, ಕೇಳುವವನೂ, ದಾನವನ್ನು ತೆಗೆದುಕೊಳ್ಳುವ ಬ್ರಾಹ್ಮಣನೂ ಪಾಪವನ್ನು ಕಳೆದುಕೊಳ್ಳುವರು.

ಬ್ರಹ್ಮಹಾ ಪಿತೃಹಾ ಗೋಘ್ನಃ ಸುರಾಪೋ ಗುರುತಲ್ಪಗಃ ।
ವಿಮುಕ್ತಾಸ್ಸರ್ವಪಾಪೈಸ್ತು ಗಂತಾರೋ ವಿಷ್ಣುಮಂದಿರೇ ॥ ೧೫ ॥

(ವಿಮುಕ್ತಸ್ಸರ್ವಪಾಪೈಸ್ತು ವಿಷ್ಣುಲೋಕಂ ಸ ಗಚ್ಛತಿ) ॥ ೧೬ ॥

ಯೋಽಶ್ವಮೇಧೇನ ಯಜತೇ ಸಮಾಪ್ತವರದಕ್ಷಿಣಃ ।
ಜಲಧೇನುಂ ಚ ಯೋ ದದ್ಯಾತ್ಸಮಮೇತನ್ನರಾಧಿಪ ॥ ೧೭ ॥

ಜಲಾಹಾರಸ್ತ್ವೇಕದಿನಂ ತಿಷ್ಠೇಚ್ಚ ಜಲಧೇನುದಃ ।
ಗ್ರಾಹಕೋಽಪಿ ತ್ರಿರಾತ್ರಂ ವೈ ತಿಷ್ಠೇದೇವಂ ನ ಸಂಶಯಃ ॥ ೧೮ ॥

ಯತ್ರ ಕ್ಷೀರವಹಾ ನದ್ಯಃ ಮಧುಪಾಯಸಕರ್ದಮಃ ।
ಯತ್ರ ಚಾಪ್ಸರಸಾಂ ಗೀತಂ ತತ್ರ ಯಾಂತಿ ಜಲಪ್ರದಾಃ ॥ ೧೯ ॥

೧೫-೧೬. ಬ್ರಾಹ್ಮಣನನ್ನು ಕೊಂದವನೂ, ತಂದೆಯನ್ನು ಕೊಂದವನೂ ಗೋವನ್ನು ಕೊಂದವನೂ, ಸುರಾಪಾನಮಾಡಿದವನೂ, ಗುರುಪತ್ನೀಸಂಗ ಮಾಡಿದವನೂ ಕೂಡ ಜಲಧೇನುದಾನದಿಂದ ಪಾಪಗಳನ್ನೆಲ್ಲಾ ಕಳೆದುಕೊಂಡು ವಿಷ್ಣುಪದವನ್ನೈದುವನು.

೧೭. ದೊರೆಯೇ, ಉತ್ತಮವಾದ ದಕ್ಷಿಣೆಯನ್ನು ಪೂರ್ತಿಯಾಗಿ ಕೊಟ್ಟು ಅಶ್ವಮೇಧಯಾಗವನ್ನು ಮಾಡುವವನೂ, ಜಲಧೇನು ದಾನಮಾಡುವವನೂ ಇಬ್ಬರೂ ಸಮಾನರು.

೧೮. ಜಲಧೇನುದಾನಿಯು ಜಲಾಹಾರನಾಗಿ ಒಂದು ದಿನವೂ, ದಾನವನ್ನು ತೆಗೆದುಕೊಂಡವನು ಜಲಾಹಾರನಾಗಿ ಮೂರುರಾತ್ರಿಯೂ ಇರಬೇಕೆಂಬುದರಲ್ಲಿ ಸಂಶಯವಿಲ್ಲ.

೧೯. ನೀರನ್ನು(ಜಲಧೇನುವನ್ನು)ದಾನಮಾಡುವವರು, ಎಲ್ಲಿ ಹಾಲು ಹರಿಯುವ ನದಿಗಳೋ, ಜೇನುತುಪ್ಪದ ಪಾಯಸದ ಕೆಸರೋ, ಅಪ್ಸರರ ಗಾನವೋ, ಆಯೆಡೆಗೆ ಹೋಗುವರು.

ದಾತಾ ಚ ದಾಪಕಶ್ಚೈವ ಪ್ರತಿಗ್ರಾಹೀ ಚ ಯೋ ದ್ವಿಜಃ ।
ಸರ್ವಪಾಪವಿನಿರ್ಮುಕ್ತಾ ವಿಷ್ಣುಸಾಯುಜ್ಯಮಾಪ್ನುಯುಃ ॥ ೨೦ ॥

ಜಲಧೇನುವಿಧಾನಂ ಯಃ ಶೃಣುಯಾತ್ಕೀರ್ತಯೇದಪಿ ।
ಸರ್ವಪಾಪವಿನಿರ್ಮುಕ್ತಃ ಸ್ವರ್ಗಮೇತಿ ಜಿತೇಂದ್ರಿಯಃ ॥ ೨೧ ॥

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಜಲಧೇನುವಿಧಿರ್ನಾಮ ಶತತಮೋಽಧ್ಯಾಯಃ

---

೨೦. ದಾನವನ್ನು, ಮಾಡುವವನೂ, ಮಾಡಿಸುವವನೂ, ತೆಗೆದುಕೊಳ್ಳುವ ಬ್ರಾಹ್ಮಣನೂ ಮೂವರೂ, ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ ವಿಷ್ಣುಸಾಯುಜ್ಯವನ್ನು ಪಡೆಯುವರು.

೨೧. ಜಲಧೇನುದಾನ ವಿಧಾನವನ್ನು ಕೇಳುವವರೂ, ಹೇಳುವವರೂ, ಜಿತೇಂದ್ರಿಯರೂ ಸರ್ವಪಾಪವಿಮುಕ್ತರೂ ಆಗಿ ಸ್ವರ್ಗವನ್ನು ಸೇರುವರು.

ಅಧ್ಯಾಯದ ಸಾರಾಂಶ :—

ಶ್ವೇತವಿನೀತಾಶ್ವೋಪಾಖ್ಯಾನದಲ್ಲಿ, ಹೋತೃವು ವಿನೀತಾಶ್ವನಿಗೆ ಹೇಳಿದ ಜಲಧೇನು ದಾನವಿಧಿಯನ್ನೂ, ಅದರ ಫಲವನ್ನೂ ವಿವರಿಸುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರನೆಯ ಅಧ್ಯಾಯ.

॥ ಶ್ರೀಃ ॥

-X-

ಏಕಾಧಿಕಶತತಮೋಽಧ್ಯಾಯಃ

ಅಥ ರಸಧೇನುದಾನಮಾಹಾತ್ಮ್ಯಂ

॥ ಹೋತೋವಾಚ ॥

ರಸಧೇನುವಿಧಾನಂ ತೇ ಕಥಯಾಮಿ ಸಮಾಸತಃ ।
ಅನುಲಿಪ್ತೇ ಮಹೀಪೃಷ್ಠೇ ಕೃಷ್ಣಾಜಿನಕುಶಾಸ್ತರೇ ॥ ೧ ॥

ರಸಸ್ಯ ತು ಘಟಂ ರಾಜನ್ ಸಂಪೂರ್ಣಂ ತ್ವೈಕ್ಷವಸ್ಯ ತು ।
ತದ್ವತ್ಸಂಕಲ್ಪಯೇತ್ಪ್ರಾಜ್ಞಃ ಚತುರ್ಥಾಂಶೇನ ವತ್ಸಕಂ ॥ ೨ ॥

ತುರಿಯಾಂಶೇನ ವತ್ಸಂ ತು ತತ್ಪಾರ್ಶ್ವೇ ಸ್ಥಾಪಯೇತ್ಸುಧೀಃ ॥ ೩ ॥

ನೂರೊಂದನೆಯ ಅಧ್ಯಾಯ

ರಸಧೇನುದಾನಮಹಿಮೆ

೧-೩. ಹೋತೃ—ದೊರೆಯೇ, ರಸಧೇನುದಾನ ವಿಧಾನವನ್ನು ಸಂಗ್ರಹವಾಗಿ ನಿನಗೆ ಹೇಳುತ್ತೇನೆ. ಸಾರಿಸಿದ ನೆಲದಮೇಲೆ ಕೃಷ್ಣಾಜಿನ ದರ್ಭೆಗಳನ್ನು ಹರಡಿ ಅದರಮೇಲೆ ಕಬ್ಬಿನಹಾಲಿನಿಂದ ತುಂಬಿದ ಕೊಡವನ್ನು ಇರಿಸಿ, ಅದನ್ನು ಹಸುವನ್ನಾಗಿಯೂ, ಆ ಕೊಡದ ನಾಲ್ಕರಲ್ಲೊಂದುಭಾಗ ಹಿಡಿಯುವ ಮತ್ತೊಂದು ಕಬ್ಬಿನಹಾಲಿಂದ ತುಂಬಿದ ಕಲಶವನ್ನು ಕರುವನ್ನಾಗಿಯೂ ಕಲ್ಪಿಸಿಕೊಂಡು, ಹಸುವಿನ ಪಕ್ಕದಲ್ಲಿ ಕರುವಿರುವಂತೆ ಮಾಡಬೇಕು.

ಇಕ್ಷುದಂಡಮಯಾಃ ಪಾದಾ ರಜತಸ್ಯ ಖುರೈರ್ಯುತಾಃ ।
ಏವಂ ಕಾರ್ಯಾ ರಸೈರ್ಧೇನುರಿಕ್ಷುಪಾದಸಮನ್ವಿತಾ ॥ ೪ ॥

ಸುವರ್ಣಶೃಂಗಾಭರಣಾ ವಸ್ತ್ರಪುಚ್ಛಾ ಘೃತಸ್ತನೀ ।
ಪುಷ್ಪಕಂಬಲಸಂಯುಕ್ತಾ ಶರ್ಕರಾಮುಖಜಿಹ್ವಕಾ ॥
ದಂತಾಃ ಫಲಮಯಾಸ್ತಸ್ಯಾಃ ಪೃಷ್ಠಂ ತಾಮ್ರಮಯಂ ಶುಭಂ ॥ ೫ ॥

ಪುಷ್ಪರೋಮಾಂ ತು ರಾಜೇಂದ್ರ ಮುಕ್ತಾಫಲಕೃತೇಕ್ಷಣಾಂ ।
ಸಪ್ತವ್ರೀಹಿಸಮಾಯುಕ್ತಾಂ ಚತುರ್ದಿಕ್ಷು ಚ ದೀಪಿಕಾಂ ॥
ಸರ್ವೋಪಸ್ಕರಸಂಯುಕ್ತಾಂ ಸರ್ವಗಂಧಾದಿವಾಸಿತಾಂ ॥ ೬ ॥

ಚತ್ವಾರಿ ತಿಲಪಾತ್ರಾಣಿ ಚತುರ್ದಿಕ್ಷು ನಿವೇಶಯೇತ್ ॥ ೭ ॥

ಸರ್ವಲಕ್ಷಣಯುಕ್ತಾಯ ಶ್ರೋತ್ರಿಯಾಯ ಕುಟುಂಬಿನೇ ।
ರಸಧೇನುಃ ಪ್ರದಾತವ್ಯಾ ಸ್ವರ್ಗಕಾಮೇನ ನಿತ್ಯದಾ ॥ ೮ ॥

೪–೬. ಆ ಧೇನುವಿಗೆ ಕಬ್ಬಿನ ಕಾಲುಗಳೂ, ಬೆಳ್ಳಿಯ ಗೊರಸುಗಳೂ, ಚಿನ್ನದ ಕೊಂಬುಗಳೂ, ವಸ್ತ್ರದ ಬಾಲವೂ, ತುಪ್ಪದ ಮೊಲೆಗಳೂ, ಹೂವಿನ ಗಂಗೆ(ಜೋಲು)ದೊಗಲೂ, ಸಕ್ಕರೆಯ ಬಾಯಿನಾಲಗೆಯೂ, ಫಲಗಳ ಹಲ್ಲುಗಳೂ, ತಾಮ್ರದ ಪೃಷ್ಠಭಾಗವೂ, ಹೂಗಳ ರೋಮಗಳೂ, ಮುತ್ತಿನ ಕಣ್ಣುಗಳೂ ಇರುವಂತೆಯೂ ಮಾಡಿ, ಅದನ್ನು ಏಳುಬತ್ತಗಳಿಂದ ಕೂಡಿ, ನಾಲ್ಕು ದಿಕ್ಕುಗಳಲ್ಲೂ ದೀಪವುಳ್ಳದಾಗಿ ಗಂಧವೇ ಮೊದಲಾದ ಸರ್ವೋಪಸ್ಕರದಿಂದ ಕೂಡಿದುದನ್ನಾಗಿಯೂ ಮಾಡಬೇಕು.

೭. ಹಸುವಿನ ನಾಲ್ಕು ದಿಕ್ಕುಗಳಲ್ಲಿಯೂ ಎಳ್ಳಿನಿಂದ ತುಂಬಿದ ಒಂದೊಂದು ಪಾತ್ರೆಯನ್ನು ಇಡಬೇಕು.

೮. ಹಿಂದೆ ಹೇಳಿರುವ ಸರ್ವಲಕ್ಷಣಗಳಿಂದ ಯುಕ್ತನಾದ ಕುಟುಂಬಿಯಾದ ಶ್ರೋತ್ರಿಯನಿಗೆ ಸ್ವರ್ಗಕಾಮನಾದವನು, ನಿತ್ಯತೆಯನ್ನುಂಟುಮಾಡುವ ರಸಧೇನುವನ್ನು ದಾನಮಾಡಬೇಕು.

ದಾತಾ ಸ್ವರ್ಗಮವಾಪ್ನೋತಿ ಸರ್ವಪಾಪವಿವರ್ಜಿತಃ ॥ ೯ ॥

ದಾತಾ ಚ ಗ್ರಾಹಕಶ್ಚೈವ ಏಕಕಾಲಮಭೋಜನಃ ।
ಸೋಮಪಾನಫಲಂ ತಸ್ಯ ಸರ್ವತ್ರ ತು ಫಲಂ ಭವೇತ್ ॥ ೧೦ ॥

ದೀಯಮಾನಾಂ ತು ಪಶ್ಯಂತಿ ತೇ ಚ ಯಾಂತಿ ಪರಾಂ ಗತಿಂ ॥ ೧೧ ॥

ಧೇನುಂ ಚ ಪೂಜಯಿತ್ವಾಗ್ರೇ ಗಂಧಧೂಪಸ್ರಗಾದಿಭಿಃ ।
ಪೂರ್ವೋಕ್ತೈರೇವ ಮಂತ್ರೈಸ್ತು ತತಸ್ತಾಂ ಪ್ರಾರ್ಥಯೇತ್ಸುಧೀಃ ॥
ಪ್ರಾರ್ಥನಾಪೂರ್ವಕಂ ಭಕ್ತ್ಯಾ ದ್ವಿಜಾಗ್ರ್ಯಾಯ ನಿವೇದಯೇತ್ ॥ ೧೨ ॥

ದಶ ಪೂರ್ವಾನ್ಪರಾಂಶ್ಚೈವ ಆತ್ಮಾನಂ ಚೈಕವಿಂಶಕಂ ।
ಪ್ರಾಪಯೇತ್ಪರಮಂ ಸ್ಥಾನಂ ಸ್ವರ್ಗಾನ್ನಾವರ್ತತೇ ಪುನಃ ॥ ೧೩ ॥

---

೯. ದಾನಿಯು ಸಕಲಪಾಪಗಳನ್ನೂ ಕಳೆದುಕೊಂಡು ಸ್ವರ್ಗವನ್ನು ಪಡೆಯುವನು.

೧೦. ರಸಧೇನುವನ್ನು ದಾನಮಾಡುವವನೂ, ತೆಗೆದುಕೊಳ್ಳುವವನೂ ಒಂದುಹೊತ್ತು ಉಪವಾಸಮಾಡಬೇಕು. ಇಬ್ಬರಿಗೂ ಸೋಮಪಾನಮಾಡಿದ ಫಲವುಂಟಾಗುವುದು.

೧೧. ರಸಧೇನುದಾನವನ್ನು ನೋಡುವವರೂ ಉತ್ತಮಗತಿಯನ್ನು ಪಡೆಯುವರು.

೧೨. ಎದುರಿಗಿರುವ ಆ ಧೇನುವನ್ನು ಗಂಧಧೂಪಮಾಲೆ ಮೊದಲಾದುವುಗಳಿಂದ ಪೂಜಿಸಿ, ಜ್ಞಾನಿಯಾದ ದಾನಿಯು ಹಿಂದೆ ಹೇಳಿರುವ ಮಂತ್ರಗಳಿಂದ ಪ್ರಾರ್ಥಿಸಬೇಕು. ಪ್ರಾರ್ಥನಾಪೂರ್ವಕವಾಗಿಯೇ ಅದನ್ನು ಭಕ್ತಿಯಿಂದ ಬ್ರಾಹ್ಮಣೋತ್ತಮನಿಗೆ ಅರ್ಪಿಸಬೇಕು.

೧೩. ರಸಧೇನು ದಾನಮಾಡುವವನು ತನ್ನ ಹಿಂದಿನ ಹತ್ತುತಲೆಯವರನ್ನೂ ಮುಂದಿನ ಹತ್ತುತಲೆಯವರನ್ನೂ, ತನ್ನನ್ನೂ ಎಂದರೆ ಇಪ್ಪತ್ತೊಂದು ಜನರನ್ನು ಪರಮಪದಕ್ಕೇರಿಸುವನು. ಮತ್ತೆ ಸ್ವರ್ಗದಿಂದ ಹಿಂದಕ್ಕೆ ಬರುವುದಿಲ್ಲ.

ಏಷಾ ತೇ ಕಥಿತಾ ರಾಜನ್ರಸಧೇನುರನುತ್ತಮಾ
ದದಸ್ವ ಚ ಮಹಾರಾಜ ಪರಂ ಸ್ಥಾನಮವಾಪ್ನು ಹಿ || ೧೪ ||

ಯ ಇದಂ ಪಠತೇ ನಿತ್ಯಂ ಶೃಣುಯಾದಥ ಭಕ್ತಿತಃ |
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ || ೧೫ ||

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ರಸಧೇನು ದಾನಮಾಹಾತ್ಮ್ಯಂ ನಾಮ ಏಕಾಧಿಕಶತತಮೋಽಧ್ಯಾಯಃ

---

೧೪. ವಿನೀತಾಶ್ವರಾಜನೇ, ಅತ್ಯುತ್ತಮವಾದ ಈ ರಸಧೇನುದಾನ ವಿಧಾನವನ್ನು ನಿನಗೆ ಹೇಳಿದ್ದೇನೆ. ಮಹಾರಾಜ, ದಾನಮಾಡಿ ಪರಮಪದವನ್ನು ಪಡೆ.

೧೫. ಇದನ್ನು ನಿತ್ಯವೂ ಭಕ್ತಿಯಿಂದ ಹೇಳುವವರೂ, ಕೇಳುವವರೂ ಪಾಪಗಳನ್ನೆಲ್ಲಾ ಕಳೆದುಕೊಂಡು, ವಿಷ್ಣುಲೋಕದಲ್ಲಿ ಮಹಿಮೆಯನ್ನು ಪಡೆಯುವರು.

ಅಧ್ಯಾಯದ ಸಾರಾಂಶ :—

ಪುರೋಹಿತನಾದ ಹೋತೃವು ವಿನೀತಾಶ್ವರಾಜನಿಗೆ ರಸಧೇನುದಾನ ವಿಧಾನವನ್ನೂ, ದಾನದ ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೊಂದನೆಯ ಅಧ್ಯಾಯ.

|| ಶ್ರೀಃ ||

-X-

ದ್ವ್ಯಧಿಕಶತತಮೋಽಧ್ಯಾಯಃ

ಅಥ ಗುಡಧೇನುದಾನಮಾಹಾತ್ಮ್ಯಂ

|| ಹೋತೋವಾಚ ||

ಗುಡಧೇನುಂ ಪ್ರವಕ್ಷ್ಯಾಮಿ ಸರ್ವಕಾಮಾರ್ಥಸಾಧಿನೀಂ || ೧ ||

ಅನುಲಿಪ್ತೇ ಮಹೀಪೃಷ್ಠೇ ಕೃಷ್ಣಾಜಿನಕುಶಾಸ್ತೃತೇ |
ತಸ್ಯೋಪರಿ ಕೃತಂ ವಸ್ತ್ರಂ ಗುಡಮಾನೀಯ ಪುಷ್ಕಲಂ || ೨ ||

ಕೃತ್ವಾ ಗುಡಮಯೀಂ ಧೇನುಂ ಸವತ್ಸಾಂ ಕಾಂಸ್ಯದೇಹಿನೀಂ |
ಸೌವರ್ಣೇ *ಮುಖನೇತ್ರೇ ಚ ದಂತಾಶ್ಚ ಮಣಿಮೌಕ್ತಿಕೈಃ || ೩ ||

ನೂರೆರಡನೆಯ ಅಧ್ಯಾಯ.

ಗುಡಧೇನುದಾನಮಹಿಮೆ.

೧. ಹೋತೃ—ದೊರೆಯೇ, ಸರ್ವೇಷ್ಟಾರ್ಥಗಳಿಗೂ ಸಾಧಕವಾದ ಗುಡಧೇನು(ಬೆಲ್ಲದ ಹಸು)ದಾನವನ್ನು ಹೇಳುತ್ತೇನೆ.

೨-೬. ಸಾರಿಸಿದ ನೆಲದಲ್ಲಿ ಕೃಷ್ಣಾಜಿನದರ್ಭೆಗಳನ್ನು ಹಾಸಿ, ಅದರ ಮೇಲೆ ಬಟ್ಟೆಯಲ್ಲಿ ಕಟ್ಟಿ ಪುಷ್ಕಲವಾಗಿ ತಂದ ಬೆಲ್ಲದಿಂದ ಕರುವಿನೊಡಗೂಡಿದ ಹಸುವನ್ನು ಮಾಡಿ, ದೇಹವು ಕಂಚಿನದೂ, ಮುಖವೂ ಕಣ್ಣೂ ಚಿನ್ನದ್ದೂ,

---

* ಮುಖಶೃಂಗೇ ಚ ಎಂದಿದೆ. ಮುಂದೆ ಪುನಃ ಶೃಂಗೇ ಚ ಎಂದು ಇದ್ದು ಪುನರುಕ್ತಿಯಾಗುವುದರಿಂದ ತಿದ್ದಿದೆ.

ಗ್ರೀವಾ ರತ್ನಮಯೀ ತ್ವಸ್ಯಾ ಘ್ರಾಣಂ ಗಂಧಮಯಂ ತಥಾ ।
ಶೃಂಗೇ ತ್ವಗುರುಕಾಷ್ಠೇನ ಪೃಷ್ಠಂ ತಾಮ್ರಮಯಂ ತಥಾ ॥ ೪ ॥

ಪುಚ್ಛಂ ಕ್ಷೌಮಮಯಂ ತಸ್ಯಾಃ ಸರ್ವಾಭರಣಭೂಷಿತಾಂ ।
ಇಕ್ಷುಪಾದಾಂ ರೌಪ್ಯಖುರಾಂ ಕಂಬಲಂ ಪಟ್ಟಸೂತ್ರಕಂ ॥
ಆಚ್ಛಾದ್ಯ ಪಟ್ಟವಸ್ತ್ರೇಣ ಘಂಟಾಚಾಮರಶೋಭಿತಾಂ ॥ ೫ ॥

ಪ್ರಶಸ್ತಪತ್ರಶ್ರವಣಾಂ ನವನೀತಸ್ತನೀಂ ಬುಧಃ ।
ಫಲೈರ್ನಾನಾವಿಧೈಸ್ತಸ್ಯಾ ಉಪಶೋಭಾಂ ಪ್ರಕಲ್ಪಯೇತ್ ॥ ೬ ॥

ಉತ್ತಮಾ ಗುಡಧೇನುಸ್ಸ್ಯಾತ್ಸದಾ *ಭಾರಚತುಷ್ಟಯಾ ॥ ೭ ॥

ಭಾಗಾರ್ಧೇನ ತು ತೌಲ್ಯೇನ ಚತುರ್ಥಾಂಶೇನ ವತ್ಸಕಂ ।
ಮಧ್ಯಮಾ ಚ ತದರ್ಧೇನ ಭಾರೇಣೈಕೇನ ಚಾಧಮಾ ॥ ೮ ॥

ಹಲ್ಲುಗಳು ಮುತ್ತಿನವೂ, ಕೊರಳು ರತ್ನಮಯವಾದುದೂ, ಮೂಗು ಗಂಧದ್ದೂ, ಕೊಂಬುಗಳು ಅಗುರುಕಡ್ಡಿಯವೂ, ಪೃಷ್ಠಭಾಗವು ತಾಮ್ರದ್ದೂ, ಬಾಲವು ರೇಷ್ಮೆಯದೂ, ಕಾಲುಗಳು ಕಬ್ಬಿನವೂ, ಗೊರಸುಗಳು ಬೆಳ್ಳಿಯವೂ, ಕಿವಿಗಳು ಎಲೆಯವೂ, ಮೊಲೆಗಳು ಬೆಣ್ಣೆಯವೂ ಆಗುವಂತೆ ಮಾಡಿ ಪಟ್ಟೆಯಕಂಬಳಿ ದೊಗಲನ್ನೂ, ಘಂಟೆಯನ್ನೂ ಕೊರಳಿಗೆ ಕಟ್ಟಿ, ರೇಷ್ಮೆಯ ವಸ್ತ್ರವನ್ನು ಹೊದಿಸಿ, ಬಗೆಬಗೆಯ ಹಣ್ಣುಕಾಯಿಗಳಿಂದ ಅಲಂಕರಿಸಬೇಕು.

೭–೮. ನಾಲ್ಕು *ಭಾರತೂಕದ ಗುಡಧೇನುವು ಉತ್ತಮವಾದುದು. ಅದರಲ್ಲಿ ಅರ್ಧದಷ್ಟು ತೂಕವುಳ್ಳದು ಮಧ್ಯಮವಾದುದು. ಅದರಲ್ಲೂ ಅರ್ಧ ಎಂದರೆ ಒಂದೇ ಭಾರ ತೂಕದ ಬೆಲ್ಲದಿಂದ ಮಾಡಿದುದು ಅಧಮವಾದುದು. ಕರುವನ್ನು ಹಸುವಿನ ತೂಕದ ನಾಲ್ಕರಲ್ಲೊಂದು ಪ್ರಮಾಣದಲ್ಲಿ ರಚಿಸಬೇಕು.

---

* ಧಾರ (ಬೊಂ.)

ಭಾರ=ಎರಡುಸಾವಿರ ಪಲಂಗಳ ತೂಕ. ೨೦ ತೊಲೆ [ರೂ.] ಗಳ ತೂಕ.

ವಿತ್ತಹೀನೋ ಯಥಾಶಕ್ತಿ ಶತೈರಷ್ಟಾಭಿರೇವ ಚ ।
ಅತ ಊರ್ಧ್ವಂ ತು ಕರ್ತವ್ಯಾ ಗೃಹವಿತ್ತಾನುಸಾರತಃ ॥ ೯ ॥

ಗಂಧಪುಷ್ಪಾದಿಭಿಃ ಪೂಜ್ಯ ಬ್ರಾಹ್ಮಣಾಯ ನಿವೇದಯೇತ್ ।
ಗಂಧಪುಷ್ಪಾದಿಭಿಃ ಕೃತ್ವಾ ಘೃತನೈವೇದ್ಯದೀಪಕಾನ್ ॥
ಏವಂ ಕೃತ್ವಾ ದ್ವಿಜೇಂದ್ರಾಯ ಆಹಿತಾಗ್ನೇರ್ವಿಶೇಷತಃ ॥ ೧೦ ॥

ಶ್ರೋತ್ರಿಯಾಯ ಪ್ರದಾತವ್ಯಾ ಸಹಸ್ರೇಣ ಕನಕೇನ ತು ।
ತದರ್ಧೇನ ಮಹಾರಾಜ ತಸ್ಯಾಪ್ಯರ್ಧೇನ ವಾ ಪುನಃ ॥
ಶತೇನ ವಾ ಶತಾರ್ಧೇನ ಯಥಾಶಕ್ತಿ ನಿವೇದಯೇತ್ ॥ ೧೧ ॥

ಗಂಧಪುಷ್ಪಾದಿಭಿಃ ಪೂಜ್ಯ ಮುದ್ರಿಕಾಕರ್ಣಭೂಷಣೈಃ ।
ಛತ್ರಿಕಾಪಾದುಕೇ ದತ್ವಾ ಇಮಂ ಮಂತ್ರಮುದೀರಯೇತ್ ॥ ೧೨ ॥

---

೯. ಹಣವಿಲ್ಲದವನು ತನ್ನ ಶಕ್ತಿಗನುಸಾರವಾಗಿ ಎಂಟುನೂರು ಪಲಂಗಳ ತೂಕದಿಂದಲೂ, ಹಣವಿರುವವನು ತನ್ನ ಮನೆಯ ಐಶ್ವರ್ಯಕ್ಕೆ ತಕ್ಕಂತೆ ಅದಕ್ಕಿಂತ ಹೆಚ್ಚಿನಿಂದಲೂ ಗುಡಧೇನುವನ್ನು ಮಾಡಬೇಕು.

೧೦–೧೧. ಆ ಧೇನುವನ್ನು ಗಂಧಪುಷ್ಪಘೃತದೀಪನೈವೇದ್ಯಾದಿಗಳಿಂದ ಪೂಜಿಸಿ, ಬ್ರಾಹ್ಮಣನಿಗೆ ಮುಖ್ಯವಾಗಿ ಆಹಿತಾಗ್ನಿಯಾದ ಶ್ರೋತ್ರಿಯ ಬ್ರಾಹ್ಮಣನಿಗೆ ಅರ್ಪಿಸಬೇಕು. ಧೇನುವಿನ ಜತೆಯಲ್ಲಿ ಸಾವಿರ ಚಿನ್ನದ ನಾಣ್ಯಗಳನ್ನಾಗಲಿ, ಅದರಲ್ಲರ್ಧವನ್ನಾಗಲಿ, ನೂರನ್ನಾಗಲಿ, ಕಡೆಗೆ ಐವತ್ತನ್ನಾಗಲಿ ತನ್ನ ಶಕ್ತಿಗನುಸಾರವಾಗಿ ದಕ್ಷಿಣೆಯನ್ನು ಒಪ್ಪಿಸಬೇಕು.

೧೨. ದಾನತೆಗೆದುಕೊಳ್ಳುವವನನ್ನು ಗಂಧಪುಷ್ಪಾದಿಗಳಿಂದ ಪೂಜಿಸಿ, ಛತ್ರಿ ಪಾದರಕ್ಷೆ ಉಂಗುರ ಕಡುಕುಗಳನ್ನು ಕೊಟ್ಟು, ಮುಂದೆ ಹೇಳಿರುವಂತೆ ಅರ್ಥವುಳ್ಳ, ಮೇಲೆ ಶ್ಲೋಕರೂಪವಾಗಿರುವ ಮಂತ್ರವನ್ನು ಹೇಳಬೇಕು.

ಗುಡಧೇನೋ ಮಹಾವೀರ್ಯೇ ಸರ್ವಸಂಪತ್ಪ್ರದೇ ಶುಭೇ ।
ದಾನಾದಸ್ಮಾಚ್ಚ ಭೋ ದೇವಿ ಭಕ್ಷ್ಯಭೋಜ್ಯಂ ಪ್ರಯಚ್ಛ ಮೇ ॥ ೧೩ ॥

ಪ್ರಾಙ್ಮುಖೋ ವಾಪಿ ದಾತಾ ಚ ಬ್ರಾಹ್ಮಣಾಯ ನಿವೇದಯೇತ್ ।
ವಾಚಾಕೃತಂ ಕರ್ಮಕೃತಂ ಮನಸಾ ಯದ್ವಿಚಿಂತಿತಂ ॥ ೧೪ ॥

ಮಾನಕೂಟಂ ತುಲಾಕೂಟಂ ಕನ್ಯಾಗೋರ್ಥೇ ಉದಾಹೃತಂ ।
ಅನೃತಂ ನಾಶಮಾಯಾತು ಗುಡಧೇನೋ ದ್ವಿಜಾರ್ಪಿತೇ ॥ ೧೫ ॥

ದೀಯಮಾನಾಂ ಪ್ರಪಶ್ಯಂತಿ ತೇ ಯಾಂತಿ ಪರಮಾಂ ಗತಿಂ ॥ ೧೬ ॥

ಯತ್ರ ಕ್ಷೀರವಹಾ ನದ್ಯಃ ಘೃತಪಾಯಸಕರ್ದಮಾಃ ।
ಋಷಯೋ ಮುನಯಸ್ಸಿದ್ಧಾಸ್ತತ್ರ ಗಚ್ಛಂತಿ ಧೇನುದಾಃ ॥ ೧೭ ॥

---

೧೩. "ಮಹಾವೀರ್ಯೆಯೂ, ಶುಭೆಯೂ, ಸರ್ವಸಂಪತ್ಪ್ರದೆಯೂ ಆದ ಬೆಲ್ಲದ ಹಸುವೇ, ದೇವಿ, ಈ ದಾನದಿಂದ ನನಗೆ ಭಕ್ಷ್ಯಭೋಜ್ಯಗಳನ್ನು ಕೊಡು."

೧೪–೧೫. ದಾನಕೊಡುವವನು ಪೂರ್ವಾಭಿಮುಖನಾಗಿ ನಿಂತು, "ಬ್ರಾಹಣಾರ್ಪಿತವಾದ ಗುಡಧೇನುವೇ, ಮಾತಿನಿಂದಲೂ, ಕಾರ್ಯದಿಂದಲೂ, ಮನಸ್ಸಿನಿಂದಲೂ ಮಾಡಿದ ಪಾಪವೂ. ಅಳತೆಯಲ್ಲಿಯೂ, ತೂಕದಲ್ಲಿಯೂ ಮಾಡಿದ ಮೋಸವೂ, ಕನ್ಯೆಗಾಗಿಯೂ, ಗೋವಿಗಾಗಿಯೂ ಹೇಳಿರುವ ಸುಳ್ಳೂ ನಾಶವಾಗಲಿ" ಎಂದೂ ಹೇಳಿ ಬ್ರಾಹ್ಮಣನಿಗೆ ಅರ್ಪಿಸಬೇಕು.

೧೬. ಗುಡಧೇನುದಾನವನ್ನು ನೋಡುವವರೂ ಪರಮಗತಿಯನ್ನೈದುವರು.

೧೭. ಗೋದಾನ ಮಾಡುವವರು, ಎಲ್ಲಿ ಹಾಲು ಹರಿಯುವ ನದಿಗಳೋ ತುಪ್ಪದಪಾಯಸದ ಕೆಸರೋ, ಋಷಿಗಳೂ ಮುನಿಗಳೂ ಸಿದ್ಧರೋ, ಆಯೆಡೆಗೈದುವರು.

ದಶ ಪೂರ್ವಾನ್ದಶಪರಾನ್ ಆತ್ಮಾನಂ ಚೈಕವಿಂಶತಿಂ ।
ವಿಷ್ಣುಲೋಕಂ ನಯತ್ಯಾಶು ಗುಡಧೇನೋಃ ಪ್ರಸಾದತಃ ॥ ೧೮ ॥

ಆಯನೇ ವಿಷುವೇ ಪುಣ್ಯೇ ವ್ಯತೀಪಾತೇ ದಿನಕ್ಷಯೇ ।
ಏತದೇವ ವಿಧಾನಂ ಸ್ಯಾದೇತೇ ಚೋಪಸ್ಕರಾಸ್ಮೃತಾಃ ॥
ಮಂತ್ರಾವಾಹನಸಂಯೋಗಃ ಸದಾ ಪರ್ವಣಿ ಪರ್ವಣಿ ॥ ೧೯ ॥

ಸರ್ವದೈವ ಪ್ರದಾತವ್ಯಾ ಪಾತ್ರಂ ದೃಷ್ಟ್ವಾ ಮಹಾಮತೇ ॥ ೨೦ ॥

ಶ್ರದ್ಧಾನ್ವಿತೇನ ದಾತವ್ಯಾ ಭುಕ್ತಿಮುಕ್ತಿಫಲಪ್ರದಾ ।
ಸರ್ವಕಾಮಪ್ರದಾ ನಿತ್ಯಂ ಸರ್ವಪಾಪಹರಾ ಸ್ಮೃತಾ ॥ ೨೧ ॥

---

೧೮. ಅಲ್ಲದೆ ದಾನಿಯು ಗುಡಧೇನುವಿನ ಅನುಗ್ರಹದಿಂದ ತನ್ನ ಹಿಂದಿನ ಹತ್ತುತಲೆಯವರನ್ನೂ, ಮುಂದಿನ ಹತ್ತು ತಲೆಯುವರನ್ನೂ, ತನ್ನನ್ನೂ ಎಂದರೆ ಇಪ್ಪತ್ತೊಂದು ಜನರನ್ನೂ ಬೇಗನೆ ವಿಷ್ಣುಲೋಕಕ್ಕೆ ಒಯ್ಯುವನು.

೧೯. ಉತ್ತರಾಯಣ ದಕ್ಷಿಣಾಯನ ಪುಣ್ಯಕಾಲಗಳೂ, ವಿಷುವತ್ಪುಣ್ಯ ಕಾಲಗಳೂ, ವ್ಯತೀಪಾತಕಾಲವೂ, ಮೂರುತಿಥಿಗಳು ಸೇರಿರುವ ಅವಮದಿನವೂ, ಪಂಚಪರ್ವಗಳೂ, ಗುಡಧೇನು ದಾನಕ್ಕೆ ಉತ್ತಮವಾದುವು, ಈ ಕಾಲಗಳಲ್ಲಿ ಮಾಡುವ ಗುಡಧೇನುದಾನದಲ್ಲೂ ಮಂತ್ರಾವಾಹನಾದಿ ವಿಧಾನಗಳೂ, ಸಾಮಗ್ರಿಗಳೂ ಈ ಮೇಲೆ ಹೇಳಿರುವವೇ ವಿಹಿತವಾಗಿವೆ.

೨೦. ಮಹಾಮತಿಯಾದ ದೊರೆಯೇ, ಯಾವಾಗಲೂ ಉತ್ತಮನಾದ ಪಾತ್ರನನ್ನು ನೋಡಿ, ದಾನಮಾಡಬೇಕು.

೨೧. ಭೋಜನಾದಿಯಾದ ಇಹಲೋಕ ಸುಖವನ್ನೂ, ಮುಕ್ತಿಯನ್ನೂ, ಸರ್ವಕಾಮಗಳನ್ನೂ ಫಲವಾಗಿ ಕೊಡುವುದೂ ಸರ್ವಪಾಪಹರವೂ ಆದ ಗುಡಧೇನು ದಾನವನ್ನು ಆಸಕ್ತಿಯಿಂದ ಮಾಡಬೇಕು.

ಗುಡಧೇನೋಃ ಪ್ರಸಾದಾತ್ತು ಸೌಭಾಗ್ಯಮಖಿಲಂ ಲಭೇತ್ ।
ಇಹ ಸೌಭಾಗ್ಯಮತುಲಂ ಆಯುರಾರೋಗ್ಯಸಂಪದಃ ॥ ೨೨ ॥

ವೈಷ್ಣವಂ ಪದಮಾಪ್ನೋತಿ ದೌರ್ಗತ್ಯಂ ತಸ್ಯ ನಶ್ಯತಿ ॥ ೨೩ ॥

ದಶದ್ವಾದಶಸಾಹಸ್ರಾ ದಶ ಚಾಷ್ಟೌ ಚ ಜನ್ಮನಿ ।
ನ ಶೋಕದುಃಖದೌರ್ಗತ್ಯಂ ತಸ್ಯ ಸಂಜಾಯತೇ ಕ್ವಚಿತ್ ॥ ೨೪ ॥

ಇತಿ ಪಠತಿ ಶೃಣೋತಿ ಚೇಹ ಸಮ್ಯಕ್
ಮತಿಮಪಿ ಚೈವ ದದಾತಿ ಯೋ ಜನಾನಾಂ ।
ಸ ಇಹ ಚ ವಿಭವೈಶ್ಚಿರಂ ವಸಿತ್ವಾ
ವಸತಿ ಚಿರಂ ದಿವಿ ದೇವತಾದಿಪೂಜ್ಯಃ ॥ ೨೫ ॥

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಗುಡಧೇನು ದಾನಮಾಹಾತ್ಮ್ಯಂ ನಾಮ ದ್ವ್ಯಧಿಕಶತತಮೋಽಧ್ಯಾಯಃ

---

೨೨. ಗುಡಧೇನುವಿನ ಅನುಗ್ರಹದಿಂದ ಆಯುರಾರೋಗ್ಯ ಸಂಪತ್ತನ್ನೂ ಇಹಲೋಕದ ಅತುಲೈಶ್ವರ್ಯವನ್ನೂ, ಸಕಲಸೌಭಾಗ್ಯಗಳನ್ನೂ ಪಡೆಯಬಹುದು.

೨೩. ದಾನಿಯು ವಿಷ್ಣುಪದವನ್ನು ಪಡೆಯುವನು. ಆವನ ದುರ್ಗತಿಯು ನಾಶವಾಗುವುದು.

೨೪. ದಾನಿಗೆ ಲಕ್ಷಾಂತರ ಜನ್ಮಗಳಲ್ಲಾವುದರಲ್ಲೂ ಎಂದಿಗೂ ದುಃಖವಾಗಲಿ, ದುರ್ಗತಿಯಾಗಲಿ ಉಂಟಾಗುವುದಿಲ್ಲ.

೨೫. ಇದನ್ನು ಯಾರು ಚೆನ್ನಾಗಿ ಹೇಳುವರೋ, ಕೇಳುವರೋ, ಜನರಿಗೆ ಈ ದಾನದ ವಿಚಾರದ ತಿಳಿವನ್ನುಂಟುಮಾಡುವರೋ ಅವರು ಇಹಲೋಕದಲ್ಲಿ ವೈಭವದಿಂದ ಬಹುಕಾಲ ಜೀವಿಸಿದ್ದು, ಸ್ವರ್ಗದಲ್ಲೂ ದೇವಾದಿಗಳಿಂದ ಪೂಜಿತರಾಗಿ ಚಿರಕಾಲವಿರುವರು.

ಅಧ್ಯಾಯದ ಸಾರಾಂಶ :—

ಹೋತೃವು ವಿನೀತಾಶ್ವರಾಜನಿಗೆ ಗುಡಧೇನು ದಾನವಿಧಾನವನ್ನೂ, ಫಲವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆರಡನೆಯ ಅಧ್ಯಾಯ.

|| ಶ್ರೀಃ ||

–X–

ತ್ರ್ಯಧಿಕಶತತಮೋಧ್ಯಾಯಃ

ಅಥ ಶರ್ಕರಾಧೇನುದಾನಮಾಹಾತ್ಮ್ಯಂ

|| ಹೋತೋವಾಚ ||

ತದ್ವಚ್ಚ ಶರ್ಕರಾಧೇನುಂ ಶೃಣು ರಾಜನ್ಯಥಾರ್ಥತಃ || ೧ ||

ಅನುಲಿಪ್ತೇ ಮಹೀಪೃಷ್ಠೇ ಕೃಷ್ಣಾಜಿನಕುಶಾಸ್ತರೇ |
ಧೇನುಂ ಶರ್ಕರಯಾ ರಾಜನ್ ಕೃತ್ವಾ ಭಾರಚತುಷ್ಟಯಂ ||
ಉತ್ತಮಾ ಕಥ್ಯತೇ ಸದ್ಭಿಃ ಚತುರ್ಥಾಂಶೇನ ವತ್ಸಕಂ || ೨ ||

ನೂರಮೂರನೆಯ ಅಧ್ಯಾಯ

ಸಕ್ಕರೆಯ ಹಸುವಿನ ದಾನದ ಮಹಿಮೆ

೧. ಹೋತೃ—ದೊರೆಯೇ, ನಿಜವಾಗಿ ಬೆಲ್ಲದ ಹಸುವಿನಂತೆಯೇ ಸಕ್ಕರೆಯ ಹಸುವಿನ ವಿಚಾರವನ್ನೂ ಹೇಳುತ್ತೇನೆ. ಕೇಳು.

೨. ಸಾರಿಸಿದ ನೆಲದಲ್ಲಿ ಜಿಂಕೆಯ ಚರ್ಮವನ್ನೂ, ದರ್ಭೆಯನ್ನೂ ಹಾಸಿ, ಅದರಮೇಲೆ ಸಕ್ಕರೆಯಿಂದ ಹಸುವನ್ನು ರಚಿಸಬೇಕು. ನಾಲ್ಕುಭಾರ ತೂಕದ ಸಕ್ಕರೆಯಿಂದಾದ ಹಸುವು ಉತ್ತಮವೆನಿಸಿಕೊಳ್ಳುವುದು. ಹಸುವಿನ ಪರಿಮಾಣದ ನಾಲ್ಕರಲ್ಲೊಂದು ಭಾಗದಿಂದ ಕರುವನ್ನು ರಚಿಸಬೇಕು.

ತದರ್ಧಂ ಮಧ್ಯಮಾ ಪ್ರೋಕ್ತಾ ಕನಿಷ್ಠಾ ಭಾರಕೇಣತು ।
ತದ್ವದ್ವತ್ಸಂ ಪ್ರಕುರ್ವೀತ ಚತುರ್ಥಾಂಶೇನ ತತ್ವತಃ ॥ ೩ ॥

ಅಥ ಕುರ್ಯಾದಷ್ಟಶತೈರೂರ್ಧ್ವಂ ನೃಪತಿಸತ್ತಮ ।
ಸ್ವಶಕ್ತ್ಯಾ ಕಾರಯೇದ್ಧೇನುಂ ತಥಾತ್ಮಾನಂ ನ ಪೀಡಯೇತ್ ॥ ೪ ॥

ಸರ್ವಬೀಜಾನಿ ಸಂಸ್ಥಾಪ್ಯ ಚತುರ್ದಿಕ್ಷು ಸಮಂತತಃ ।
ಸುವರ್ಣಸ್ಯ ಮುಖಂ ಶೃಂಗೇ ಮೌಕ್ತಿಕೈರ್ನಯನೇ ತಥಾ ॥ ೫ ॥

ಗುಡೇನ ತು ಮುಖಂ ಕಾರ್ಯಂ ಜಿಹ್ವಾ ಪಿಷ್ಟಮಯೀ ತಥಾ ।
ಕಂಬಲೈಃ ಪಟ್ಟಸೂತ್ರೇಣ ಕಂಠಭೂಷೈಶ್ಚ ಭೂಷಿತಾಂ ॥ ೬ ॥

ಇಕ್ಷುಪಾದಾಂ ರೌಪ್ಯಖುರಾಂ ನವನೀತಸ್ತನೀಂ ತಥಾ ।
ಪ್ರಶಸ್ತಪತ್ರಶ್ರವಣಾಂ ಸಿತಚಾಮರಭೂಷಿತಾಂ ॥ ೭ ॥

---

೩. ಎರಡುಭಾರ ತೂಕದ ಸಕ್ಕರೆಯಿಂದ ರಚಿಸುವ ಹಸುವು ಮಧ್ಯಮ ವೆನಿಸಿಕೊಳ್ಳುವುದು. ಒಂದೇ ಭಾರದಿಂದ ರಚಿತವಾದುದು ಕನಿಷ್ಠವೆನಿಸಿ ಕೊಳ್ಳುವುದು. ಹಸುವಿನ ಪರಿಮಾಣದ ನಾಲ್ಕರಲ್ಲೊಂದು ಭಾಗದಿಂದ ಕರುವನ್ನು ರಚಿಸಬೇಕು.

೪. ರಾಜೋತ್ತಮನೇ, ಸ್ವಶಕ್ತಿಗನುಸಾರವಾಗಿ ಎಂಟುನೂರು ಪಲಂಗಳಿಗಿಂತ ಹೆಚ್ಚಾದ ಸಕ್ಕರೆಯಿಂದ ಹಸುವನ್ನು ಮಾಡಿಸಬೇಕು. ಆದರೆ ಅದಕ್ಕಾಗಿ ತನಗೆ ತೊಂದರೆಮಾಡಿಕೊಳ್ಳಬಾರದು.

೫-೬. ನಾಲ್ಕುದಿಕ್ಕುಗಳಲ್ಲೂ ಸರ್ವಬೀಜಗಳನ್ನೂ ಹರಡಿ, ಹಸುವಿಗೆ ಚಿನ್ನದಿಂದ ಮುಖವನ್ನೂ ಕೊಂಬುಗಳನ್ನೂ, ಮುತ್ತಗಳಿಂದ ಕಣ್ಣುಗಳನ್ನೂ, ಬೆಲ್ಲದಿಂದ ಬಾಯನ್ನೂ, ಹಿಟ್ಟಿನಿಂದ ನಾಲಗೆಯನ್ನೂ ರಚಿಸಿ, ಕಂಬಳಿಯ ದಾರದ ಪಟ್ಟಿಯಿಂದ ಕೊರಳನ್ನು ಅಲಂಕರಿಸಬೇಕು.

೭-೮. ಕಬ್ಬಿನ ಕಾಲುಗಳೂ, ಬೆಳ್ಳಿಯ ಗೊರಸುಗಳೂ, ಬೆಣ್ಣೆಯ ಮೊಲೆಗಳೂ, ಉತ್ತಮವಾದ ಎಲೆಯ ಕಿವಿಗಳೂ ಉಳ್ಳ ಆ ಹಸುವನ್ನು

ಪಂಚರತ್ನಸಮಾಯುಕ್ತಾಂ ವಸ್ತ್ರೇಣಾಚ್ಛಾದಿತಾಂ ತಥಾ ।
ಗಂಧಪುಷ್ಪೈರಲಂಕೃತ್ಯ ಬ್ರಾಹ್ಮಣಾಯ ನಿವೇದಯೇತ್ ॥ ೮ ॥

ಶ್ರೋತ್ರಿಯಾಯ ದರಿದ್ರಾಯ ಸಾಧುವೃತ್ತಾಯ ಧೀಮತೇ ।
ವೇದವೇದಾಂಗವಿದುಷೇ ಸಾಗ್ನಿಕಾಯ ಕುಟುಂಬಿನೇ ॥ ೯ ॥

ಅದುಷ್ಟಾಯ ಪ್ರದಾತವ್ಯಂ ನ ತು ಮತ್ಸರಿಣೇ ದ್ವಿಜ ॥ ೧೦ ॥

ಅಯನೇ ವಿಷುವೇ ಪುಣ್ಯೇ ವ್ಯತೀಪಾತೇ ದಿನಕ್ಷಯೇ ।
ಏಷು ಪುಣ್ಯೇಷು ಕಾಲೇಷು ಯಥಾವಿಭವಶಕ್ತಿತಃ ॥
ಸತ್ಪಾತ್ರಂ ಚ ದ್ವಿಜಂ ದೃಷ್ಟ್ವಾ ಸ್ವಾಗತಂ ಶ್ರೋತ್ರಿಯಂ ಗೃಹೇ ॥ ೧೧ ॥

ಆಗತಾಯ ಪ್ರದಾತವ್ಯಾ ಪುಣ್ಯದೇಶೇ ವಿಮೃಶ್ಯ ಚ ।
ಪೂರ್ವಾಭಿಮುಖಮಾಸ್ಥಾಯ ಅಥವಾ ಸ ಉದಙ್ಮುಖಃ ॥
ಗಾಂ ಪೂರ್ವಾಭಿಮುಖೀಂ ಕೃತ್ವಾ ವತ್ಸಮುತ್ತರತೋ ನ್ಯಸೇತ್ ॥ ೧೨ ॥

ಪಂಚರತ್ನಗಳಿಂದಲೂ, ಗಂಧಪುಷ್ಪಗಳಿಂದಲೂ ಅಲಂಕರಿಸಿ ವಸ್ತ್ರವನ್ನು ಹೊದಿಸಿ ಬ್ರಾಹ್ಮಣನಿಗೆ ಅರ್ಪಿಸಬೇಕು.

೯-೧೦. ಶ್ರೋತ್ರಿಯನೂ, ಬಡವನೂ, ಸಾಧುವೃತ್ತಿಯವನೂ, ವಿದ್ಯಾವಂತನೂ, ವೇದವೇದಾಂಗಳನ್ನರಿತವನೂ, ಆಹಿತಾಗ್ನಿಯೂ, ಕುಟುಂಬಿಯೂ, ಅದುಷ್ಟನೂ ಆದವನಿಗೆ ಕೊಡಬೇಕು. ಮಾತ್ಸರ್ಯವುಳ್ಳವನಿಗೆ ಕೊಡಲೇಬಾರದು.

೧೧-೧೩. ಅಯನ ವಿಷುವತ್ಪುಣ್ಯಕಾಲಗಳಲ್ಲೂ, ವ್ಯತೀಪಾತದಲ್ಲೂ ಅಮಾವಾಸ್ಯೆದಿನದಲ್ಲೂ, ತನ್ನ ಅನುಕೂಲ ಶಕ್ತಿಗನುಸಾರವಾಗಿ, ಸುಖದಿಂದ ತನ್ನ ಮನೆಗೆ ಬಂದ ಶ್ರೋತ್ರಿಯನಾದ ಸತ್ಪಾತ್ರನಿಗೆ ದಾನಿಯು ತಾನು ಪೂರ್ವಾಭಿಮುಖನಾಗಿ ಅಥವಾ ಉತ್ತರಾಭಿಮುಖನಾಗಿ ಇದ್ದು, ಹಸುವನ್ನು ಪೂರ್ವಾಭಿಮುಖವಾಗಿರುವಂತೆಯೂ, ಕರುವು ಅದರ ಎಡಭಾಗದಲ್ಲಿರುವಂತೆಯೂ

ದಾನಕಾಲೇ ತು ಯೋ ಮಂತ್ರಾಸ್ತಾನ್ಪಠಿತ್ವಾ ಸಮರ್ಪಯೇತ್ ।
ಸಂಪೂಜ್ಯ ವಿಧಿವದ್ವಿಪ್ರಂ ಮುದ್ರಿಕಾಕರ್ಣಭೂಷಣೈಃ ॥ ೧೩ ॥

ಸ್ವಶಕ್ತ್ಯಾ ದಕ್ಷಿಣಾ ದೇಯಾ ವಿತ್ತಶಾಠ್ಯವಿವರ್ಜಿತಃ ॥ ೧೪ ॥

ಹಸ್ತೇ ತು ದಕ್ಷಿಣಾಂ ದತ್ವಾ ಗಂಧಪುಷ್ಪಾಧ್ಯಚಂದನಾಂ ।
ಧೇನುಂ ಸಮರ್ಪಯೇತ್ತಸ್ಯ ಮುಖಂ ಚ ನ ವಿಲೋಕಯೇತ್ ॥ ೧೫ ॥

ಏಕಾಹಂ ಶರ್ಕರಾಹಾರೋ ಬ್ರಾಹ್ಮಣಸ್ತ್ರಿದಿನಂ ವಸೇತ್ ॥ ೧೬ ॥

ಸರ್ವಪಾಪಹರಾ ಧೇನುಃ ಸರ್ವಕಾಮಪ್ರದಾಯಿನೀ ।
ಸರ್ವಕಾಮಸಮೃದ್ಧಸ್ತು ಜಾಯತೇ ನಾತ್ರ ಸಂಶಯಃ ॥ ೧೭ ॥

ದೀಯಮಾನಂ ಪ್ರಪಶ್ಯಂತಿ ತೇ ಯಾಂತಿ ಪರಮಾಂ ಗತಿಂ ॥ ೧೮ ॥

ಮಾಡಿ, ಬಾಲದೆಡೆಯನ್ನು ಸರಿಯಾಗಿ ನೋಡಿ, ಬ್ರಾಹ್ಮಣನನ್ನು ಉಂಗುರ ಕಡಕುಗಳಿಂದ ವಿಧಿಪೂರ್ವಕವಾಗಿ ಪೂಜಿಸಿ, ದಾನಕಾಲದಲ್ಲಿ ಹೇಳಬೇಕಾದ ಹಿಂದಿನ ಮಂತ್ರಗಳನ್ನು ಹೇಳಿ, ಅವನಿಗೆ ಅರ್ಪಿಸಬೇಕು.

೧೪. ಹಣದ ವಿಚಾರದಲ್ಲಿ ಕಪಟವಿಲ್ಲದೆ ತನ್ನ ಶಕ್ತಿಯಿದ್ದಷ್ಟು ದಕ್ಷಿಣೆಯನ್ನು ಕೊಡಬೇಕು.

೧೫. ಕಯ್ಯಲ್ಲಿ ದಕ್ಷಿಣೆಯನ್ನು ಕೊಟ್ಟು, ಗಂಧಪುಷ್ಪಾದಿಗಳಿಂದ ಲಂಕೃತವಾಗಿರುವ ಹಸುವನ್ನು ಅರ್ಪಿಸಬೇಕು. ಅವನ(ತೆಗೆದುಕೊಳ್ಳುವವನ) ಮುಖವನ್ನು ನೋಡಬಾರದು.

೧೬. ದಾನಿಯು ಒಂದುದಿನವೂ, ದಾನವನ್ನು ತೆಗೆದುಕೊಂಡ ಬ್ರಾಹ್ಮಣನು ಮೂರುದಿನವೂ ಸಕ್ಕರೆಯನ್ನು ತಿಂದು, ಅದರಿಂದಲೇ ಇರಬೇಕು.

೧೭. ಸಕ್ಕರೆಯ ಹಸುವು ಪಾಪಹರವೂ, ಸರ್ವೇಷ್ಟದಾಯಕವೂ ಆದುದು. ಆದುದರಿಂದ ಆತನು ಸರ್ವಕಾಮಸಮೃದ್ಧನಾಗುವುದರಲ್ಲಿ ಸಂಶಯವಿಲ್ಲ.

೧೮. ಈ ದಾನವನ್ನು ನೋಡುವವರೂ ಉತ್ತಮಗತಿಯನ್ನು ಪಡೆಯುವರು.

ಯ ಇದಂ ಶೃಣುಯಾದ್ಭಕ್ತ್ಯಾ ಪಠತೇ ವಾಪಿ ಮಾನವಃ ।
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥ ೧೯ ॥

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಶರ್ಕರಾ ಧೇನುಮಾಹಾತ್ಮ್ಯಂ ನಾಮ ತ್ರ್ಯಧಿಕಶತತಮೋಽಧ್ಯಾಯಃ

---

೧೯. ಇದನ್ನು ಭಕ್ತಿಯಿಂದ ಕೇಳುವವರು ಅಥವಾ ಹೇಳುವವರು ಸರ್ವಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ :—

ಹೋತೃವು ವಿನೀತಾಶ್ವರಾಜನಿಗೆ ಸಕ್ಕರೆಯ ಹಸುವಿನ ದಾನದ ಕ್ರಮವನ್ನೂ, ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಮೂರನೆಯ ಅಧ್ಯಾಯ.

॥ ಶ್ರೀಃ ॥

–x–

ಚತುರಧಿಕಶತತಮೋಧ್ಯಾಯಃ

ಅಥ ಮಧುಧೇನುದಾನಮಾಹಾತ್ಮ್ಯಂ

॥ ಹೋತೋವಾಚ ॥

ಮಧುಧೇನುಂ ಪ್ರವಕ್ಷ್ಯಾಮಿ ಸರ್ವಪಾತಕನಾಶಿನೀಂ ॥ ೧ ॥

ಅನುಲಿಪ್ತೇ ಮಹೀಪೃಷ್ಠೇ ಕೃಷ್ಣಾಜಿನಕುಶೋತ್ತರೇ ।
ಧೇನುಂ ಮಧುಮಯೀಂ ಕೃತ್ವಾ ಸಂಪೂರ್ಣಘಟಷೋಡಶಾಂ ॥
ಚತುರ್ಥೇನ ತಥಾಂಶೇನ ವತ್ಸಕಂ ಪರಿಕಲ್ಪಯೇತ್ ॥ ೨ ॥

ನೂರನಾಲ್ಕನೆಯ ಅಧ್ಯಾಯ

ಜೇನುತುಪ್ಪದ ಹಸುವಿನ ದಾನದ ಮಹಿಮೆ

೧. ಹೋತೃ—ಸರ್ವಪಾಪನಾಶಕವಾದ ಜೇನುತುಪ್ಪದ ಹಸುವಿನ ವಿಚಾರವನ್ನು ಹೇಳುತ್ತೇನೆ.

೨. ಸಾರಿಸಿದ ನೆಲದಮೇಲೆ ಕೃಷ್ಣಾಜಿನ ದರ್ಭೆಗಳನ್ನು ಹಾಸಿ, ಅದರಮೇಲೆ ಜೇನುತುಪ್ಪದಿಂದ ತುಂಬಿದ ಹದಿನಾರು ಕೊಡಗಳಿಂದ ಹಸುವಿನ ಆಕೃತಿಯನ್ನು ರಚಿಸಬೇಕು. ಅದರಲ್ಲಿ ನಾಲ್ಕನೆಯ ಒಂದುಭಾಗದಿಂದ ಕರುವನ್ನು ರಚಿಸಬೇಕು.

ಸೌವರ್ಣಂ ತು ಮುಖಂ ಕೃತ್ವಾ ಶೃಂಗಾಣ್ಯಗುರುಚಂದನೈಃ |
ಪೃಷ್ಠಂ ತಾಮ್ರಮಯಂ ಕೃತ್ವಾ ಸಾಸ್ನಾಂ ಪಟ್ಟಮಯೀಂ ತಥಾ ||
ಪಾದಾನಿಕ್ಷುಮಯಾನ್ಕೃತ್ವಾ ಸಿತಕಂಬಲಸಂವೃತಾನ್ || ೩ ||

ಮುಖಂ ಗುಡಮಯಂ ಕೃತ್ವಾ ಜಿಹ್ವಾಂ ಶರ್ಕರಯಾ ತಥಾ |
ಓಷ್ಠೌ ಪುಷ್ಪಮಯೌ ತಸ್ಯಾ ದಂತಾ ಫಲಮಯಾಃ ಸ್ಮೃತಾಃ |
ದರ್ಭರೋಮಮಯೀ ದೇವೀ ಖುರೈ ರೌಪ್ಯೈಶ್ಚ ಭೂಷಿತಾ || ೪ ||

ಪ್ರಶಸ್ತಪತ್ರಶ್ರವಣಾ ಪ್ರಮಾಣಾತ್ಪರಿತಸ್ತಥಾ |
ಸರ್ವಲಕ್ಷಣಸಂಯುಕ್ತಾ ಸರ್ವಧಾನ್ಯಾನ್ವಿತಾ ತಥಾ || ೫ ||

ಚತ್ವಾರಿ ತಿಲಪಾತ್ರಾಣಿ ಚತುರ್ದಿಕ್ಷು ಪ್ರಕಲ್ಪಯೇತ್ || ೬ ||

ಛಾದಿತಾಂ ವಸ್ತ್ರಯುಗ್ಮೇನ ಕಂಠಾಭರಣಭೂಷಿತಾಂ |
ಕಾಂಸ್ಯೋಪದೋಹಿನೀಂ ಕೃತ್ವಾ ಗಂಧಪುಷ್ಪೈಸ್ತು ಪೂಜಿತಾಂ || ೭ ||

೩-೫. ಹಸುವಿನ ಮುಖವನ್ನು ಚಿನ್ನದಿಂದಲೂ, ಕೊಂಬುಗಳನ್ನು ಅಗುರುಗಂಧಗಳಿಂದಲೂ, ಪೃಷ್ಠಭಾಗವನ್ನು ತಾಮ್ರದಿಂದಲೂ, ಗಂಗೆದೊಗಲನ್ನು ಬಟ್ಟೆಯಿಂದಲೂ, ಕಾಲುಗಳನ್ನು ಬಿಳಿಯಕಂಬಳಿಯಿಂದ ಸುತ್ತಿದ ಕಬ್ಬಿನಿಂದಲೂ ಬಾಯನ್ನು ಬೆಲ್ಲದಿಂದಲೂ, ನಾಲಗೆಯನ್ನು ಸಕ್ಕರೆಯಿಂದಲೂ, ತುಟಿಗಳನ್ನು ಹೂಗಳಿಂದಲೂ, ಹಲ್ಲುಗಳನ್ನು ಫಲಗಳಿಂದಲೂ, ಕೂದಲುಗಳನ್ನು ದರ್ಭೆಗಳಿಂದಲೂ, ಗೊರಸುಗಳನ್ನು ಬೆಳ್ಳಿಯಿಂದಲೂ, ಕಿವಿಗಳನ್ನು ಉತ್ತಮವಾದ ಎಲೆಗಳಿಂದಲೂ ಪ್ರಮಾಣಕ್ಕೆ ತಕ್ಕಂತೆ ಮಾಡಿ, ಸರ್ವಲಕ್ಷಣದಿಂದಲೂ, ಸುತ್ತಲೂ ಸರ್ವಧಾನ್ಯಗಳಿಂದಲೂ ಕೂಡಿರುವಂತೆಯೂ ಮಾಡಬೇಕು.

೬. ಆ ಗೋದೇವಿಯ ನಾಲ್ಕುಕಡೆಯೂ ನಾಲ್ಕು ಎಳ್ಳಿನ ಪಾತ್ರೆಗಳನ್ನು ಇರಿಸಬೇಕು.

೭-೯. ಕಂಚಿನ ಮೊಲೆಗಳುಳ್ಳದನ್ನಾಗಿಯೂ, ಕಂಠಾಭರಣದಿಂದಲಂಕೃತವಾದುದನ್ನಾಗಿಯೂ ಮಾಡಿ, ಗಂಧಪುಷ್ಪಾದಿಗಳಿಂದ ಪೂಜಿಸಿ(ಆಹಸುವನ್ನು)

ಅಯನೇ ವಿಷುವೇ ಪುಣ್ಯೇ ವ್ಯತೀಪಾತೇ ದಿನಕ್ಷಯೇ ॥
ಸಂಕ್ರಾಂತ್ಯಾಮುಪರಾಗೇ ಚ ಸರ್ವಕಾಲೇ ಯದೃಚ್ಛಯಾ ॥ ೮ ॥
ದ್ರವ್ಯಬ್ರಾಹ್ಮಣಸಂಪತ್ತಿಂ ದೃಷ್ಟ್ವಾ ತಾಂ ಪ್ರತಿಪಾದಯೇತ್ ॥ ೯ ॥
ಬ್ರಾಹ್ಮಣಾಯ ದರಿದ್ರಾಯ ಶ್ರೋತ್ರಿಯಾಯಾಹಿತಾಗ್ನಯೇ ।
ಆರ್ಯಾವರ್ತೇ ಸಮುತ್ಪನ್ನೇ ವೇದವೇದಾಂಗಪಾರಗೇ ।
ತಾದೃಶಾಯ ಪ್ರದಾತವ್ಯಾ ಮಧುಧೇನುರ್ನರೋತ್ತಮೇ ॥ ೧೦ ॥
ಪುಚ್ಛದೇಶೇ ವಿಮೃಶ್ಯಾಥ ಜಲಪೂರ್ಣಾಂ ಸದಕ್ಷಿಣಾಂ ।
ದದ್ಯಾದ್ವಿಪ್ರಾಯ ಧೇನುಂ ತಾಂ ಮಂತ್ರಪೂರ್ವಾಂ ವಿಚಕ್ಷಣಃ ॥ ೧೧ ॥
ರಸಜ್ಞಾ ಸರ್ವದೇವಾನಾಂ ಸರ್ವಭೂತಹಿತೇ ರತಾ ।
ಪ್ರೀಯಂತಾಂ ಪಿತರೋ ದೇವಾ ಮಧುಧೇನೋ ನಮೋಽಸ್ತುತೇ ॥ ೧೨ ॥
ಏವಮುಚ್ಚಾರ್ಯ ತಾಂ ಧೇನುಂ ಬ್ರಾಹ್ಮಣಾಯ ನಿವೇದಯೇತ್ ॥ ೧೩ ॥

ಅಯನ ವಿಷುವತ್ಪುಣ್ಯಕಾಲದಲ್ಲೂ, ವ್ಯತೀಪಾತಅವಮದಿನಗಳಲ್ಲೂ, ಸಂಕ್ರಾಂತಿಯಲ್ಲೂ, ಗ್ರಹಣಕಾಲದಲ್ಲೂ ಅಕಸ್ಮಾತ್ತಾಗಿ ಯಾವಾಗಲಾದರೂ ಸರಿಯೆ ತನ್ನ ದ್ರವ್ಯಾನುಕೂಲ ಬ್ರಾಹ್ಮಣಾನುಕೂಲಗಳನ್ನು ನೋಡಿಕೊಂಡು ದಾನಕೊಡಬೇಕು.

೧೦. ದರಿದ್ರನೂ, ಶ್ರೋತ್ರಿಯನೂ, ಆಹಿತಾಗ್ನಿಯೂ, ಆರ್ಯಾವರ್ತದಲ್ಲಿ ಹುಟ್ಟಿದವನೂ, ವೇದವೇದಾಂಗಪಾರಂಗತನೂ, ಉತ್ತಮನೂ ಆದ ಬ್ರಾಹ್ಮಣನಿಗೆ ಮಧುಧೇನು ದಾನವನ್ನು ಮಾಡಬೇಕು.

೧೧. ತಿಳಿದವನು ಬಾಲದ ಪ್ರದೇಶವನ್ನು ಮುಟ್ಟಿ, ದಕ್ಷಿಣೆಯೊಡನೆ, ಮಂತ್ರಪೂರ್ವಕವಾಗಿಯೂ, ಜಲಧಾರಾಪೂರ್ವಕವಾಗಿಯೂ, ಧೇನುದಾನ ಮಾಡಬೇಕು.

೧೨. "ಎಲ್ಲಾ ದೇವತೆಗಳ ಸಾರವನ್ನೂ ತಿಳಿದಿರುವವಳೇ, ಸರ್ವಪ್ರಾಣಿಹಿತದಲ್ಲೂ ಆಸಕ್ತಳೇ, ಮಧುಧೇನುವೇ, ಪಿತೃಗಳೂ, ದೇವತೆಗಳೂ ತೃಪ್ತರಾಗಲಿ. ನಿನಗೆ ನಮಸ್ಕಾರ."

೧೩. ಎಂಬ ಈ ಅರ್ಥವುಳ್ಳ ಮೇಲೆ ಶ್ಲೋಕರೂಪದಲ್ಲಿರುವ ಮಂತ್ರವನ್ನು ಹೇಳಿ, ಆ ಹಸುವನ್ನು ಬ್ರಾಹ್ಮಣನಿಗೆ ಅರ್ಪಿಸಬೇಕು.

ಅಹಂ ಗೃಹ್ಣಾಮಿ ತ್ವಾಂ ದೇವಿ ಕುಟುಂಬಾರ್ಥೇ ವಿಶೇಷತಃ ।
ಕಾಮಂ ಕಾಮದುಘೇ ಕಾಮಾನ್ಮಧುಧೇನೋ ನಮೋಽಸ್ತು ತೇ ॥ ೧೪ ॥

ಮಧುವಾತೇತಿ ಮಂತ್ರೇಣ ದದ್ಯಾದಾಶುಚಿಕೇನ ತು ।
ವತ್ಸಾಧೇನುಂ ಮಹಾರಾಜ ಛತ್ರಿಕೋಪಾನಹೌ ತಥಾ ॥ ೧೫ ॥

ಏವಂ ಯಃ ಕುರುತೇ ಭಕ್ತ್ಯಾ ಮಧುಧೇನುಂ ನರಾಧಿಪ ।
ದತ್ವಾ ದಾನಂ ಪಾಯಸೇನ ಮಧುನಾ ಚ ದಿನಂ ನಯೇತ್ ॥ ೧೬ ॥

ಬ್ರಾಹ್ಮಣಶ್ಚ ತ್ರಿರಾತ್ರಂ ತು ಮಧುಪಾಯಸಸಂಯುತಂ ।
ಏವಂ ಕೃತೇ ತು ಯತ್ಪುಣ್ಯಂ ತನ್ನಿಬೋಧ ನರಾಧಿಪ ॥ ೧೭ ॥

ಯತ್ರ ನದ್ಯೋ ದುಗ್ಧವಹಾ ಯತ್ರ ಪಾಯಸಕರ್ದಮಾಃ ।
ಋಷಯೋ ಮುನಯಸ್ಸಿದ್ಧಾಃ ತತ್ರ ಗಚ್ಛಂತಿ ಧೇನುದಾಃ ॥ ೧೮ ॥

---

೧೪. "ದೇವಿ, ಇಷ್ಟಾರ್ಥವನ್ನು ಬೇಕಾದಹಾಗೆ ಕೊಡುವವಳೇ, ಕುಟುಂಬಾರ್ಥವಾಗಿ ನಿನ್ನನ್ನು ನಾನು ಮುಖ್ಯವಾಗಿ ತೆಗೆದುಕೊಳ್ಳುತ್ತೇನೆ. ಮಧುಧೇನುವೇ ನಿನಗೆ ನಮಸ್ಕಾರ" ಎಂದು ಅರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಿ, ಬ್ರಾಹ್ಮಣನು ದಾನವನ್ನು ತೆಗೆದುಕೊಳ್ಳಬೇಕು.

೧೫. ದೊರೆಯೇ, 'ಮಧುವಾತಾ ಋತಾಯತೇ' ಎಂಬ ಮಂತ್ರವನ್ನು ಹೇಳಿ, ಶುಚಿರ್ಭೂತನಾಗಿ ಮಧುಧೇನು ದಾನವನ್ನು ಕೊಟ್ಟು, ಬ್ರಾಹ್ಮಣನಿಗೆ ಛತ್ರಿಪಾದರಕ್ಷೆಗಳನ್ನೂ ಕೊಡಬೇಕು.

೧೬. ರಾಜನೇ, ಹೇಗೆ ಭಕ್ತಿಯಿಂದ ಮಧುಧೇನುದಾನವನ್ನು ಮಾಡಿದವನು ಪಾಯಸವನ್ನೂ, ಜೇನುತುಪ್ಪವನ್ನೂ ಮಾತ್ರ ಸೇವಿಸಿ, ಒಂದುದಿನ ಇರಬೇಕು.

೧೭. ದಾನವನ್ನು ಪಡೆದ ಬ್ರಾಹ್ಮಣನು ಜೇನುತುಪ್ಪವನ್ನೂ, ಪಾಯಸವನ್ನೂ ಮಾತ್ರ ಆಹಾರವಾಗಿ ಸೇವಿಸಿ, ಮೂರು ರಾತ್ರೆಗಳನ್ನು ಕಳೆಯಬೇಕು. ಹೀಗೆ ಮಾಡಿದರೆ ಯಾವ ಪುಣ್ಯವೆಂಬುದನ್ನು ಹೇಳುತ್ತೇನೆ. ಕೇಳು.

೧೮. ಎಲ್ಲಿ ಹಾಲಿನ ನದಿಗಳೂ, ಪಾಯಸದ ಕೆಸರೂ ಇರುವವೋ ಸಿದ್ಧಿಯನ್ನು ಪಡೆದ ಋಷಿಗಳೂ, ಮುನಿಗಳೂ ಇರುವರೋ ಆಯೆಡೆಗೆ ಈ ಗೋದಾನಮಾಡಿದವರು ಹೋಗುವರು.

ತತ್ರ ಭೋಗಾನಥೋ ಭುಂಕ್ತೇ ಬ್ರಹ್ಮಲೋಕಂ ಸ ಗಚ್ಛತಿ |
ಕ್ರೀಡಿತ್ವಾ ಸುಚಿರಂ ಕಾಲಂ ಪುನರ್ಮರ್ತ್ಯಮುಪಾಗತಃ |
ಸ ಭುಕ್ತ್ವಾ ವಿಪುಲಾನ್ಭೋಗಾನ್ ವಿಷ್ಣುಲೋಕಂ ಚ ಗಚ್ಛತಿ || ೧೯ ||

ದಶ ಪೂರ್ವಾನ್ ದಶಪರಾನ್ ಆತ್ಮಾನಂ ಚೈಕವಿಂಶಕಂ |
ನಯತೇ ವಿಷ್ಣುಸಾಯುಜ್ಯಂ ಮಧುಧೇನುಪ್ರದಾನತಃ || ೨೦ ||

ಯ ಇದಂ ಶೃಣುಯಾದ್ಭಕ್ತ್ಯಾ ಶ್ರಾವಯೇದ್ವಾಪಿ ಮಾನವಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ || ೨೧ ||

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಮಧುಧೇನು ಮಾಹಾತ್ಮ್ಯಂ ನಾಮ ಚತುರಧಿಕಶತತಮೋಽಧ್ಯಾಯಃ

---

೧೯. ಅಲ್ಲಿ ಸುಖಗಳನ್ನನುಭವಿಸಿ, ಬಳಿಕ ಬ್ರಹ್ಮಲೋಕಕ್ಕೆ ಹೋಗಿ, ಬಹುಕಾಲ ಅಲ್ಲಿ ವಿಹರಿಸಿ, ತಿರುಗಿ ಭೂಮಿಗೆ ಬಂದು, ಬೇಕಾದ ಹಾಗೆ ಸುಖವನ್ನು ಅನುಭವಿಸಿ, ವಿಷ್ಣುಲೋಕವನ್ನೈದುವರು.

೨೦. ಮಧುಧೇನು ದಾನಮಾಡುವುದರಿಂದ ದಾನಿಯು ತನ್ನ ಹಿಂದಿನ ಹತ್ತುಮಂದಿಯನ್ನೂ, ಮುಂದಿನ ಹತ್ತುಮಂದಿಯನ್ನೂ, ತನ್ನನ್ನೂ ಸೇರಿಸಿ, ಇಪ್ಪತ್ತೊಂದುಮಂದಿಯನ್ನೂ ವಿಷ್ಣುಸಾಯುಜ್ಯಕ್ಕೊಯ್ಯುವನು.

೨೧. ಈ ವಿಚಾರವನ್ನು ಭಕ್ತಿಯಿಂದ ಕೇಳುವವರೂ, ಹೇಳುವವರೂ, ಎಲ್ಲಾ ಪಾಪಗಳನ್ನೂ ಕಳೆದುಕೊಂಡು, ವಿಷ್ಣುಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ—

ಹೋತೃವು ವಿನೀತಾಶ್ವರಾಜನಿಗೆ ಮಧುಧೇನು ದಾನವಿಧಾನವನ್ನೂ, ಅದರ ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

-x-

ಪಂಚಾಧಿಕಶತತಮೋಧ್ಯಾಯಃ

ಅಥ ಕ್ಷೀರಧೇನುದಾನವಿಧಿಃ

॥ ಹೋತೋವಾಚ ॥

ಕ್ಷೀರಧೇನುಂ ಪ್ರವಕ್ಷ್ಯಾಮಿ ತಾಂ ನಿಬೋಧ ನೃಪೋತ್ತಮ ॥ ೧ ॥

ಅನುಲಿಪ್ತೇ ಮಹೀಪೃಷ್ಠೇ ಗೋಮಯೇನ ನರಾಧಿಪ ।
ಗೋಚರ್ಮಮಾತ್ರಮಾನೇನ ಕುಶಾನಾಸ್ತೀರ್ಯ ಸರ್ವತಃ ।
ತಸ್ಯೋಪರಿ ಮಹಾರಾಜ ನ್ಯಸೇತ್ಕೃಷ್ಣಾಜಿನಂ ಬುಧಃ ॥ ೨ ॥

ತತ್ರ ಕೃತ್ವಾ ಕುಂಡಲಿಕಾಂ ಗೋಮಯೇನ ಸುವಿಸ್ತೃತಾಂ ।
ಕ್ಷೀರಕುಂಭಂ ತತಃ ಸ್ಥಾಪ್ಯ ಚತುರ್ಥಾಂಶೇನ ವತ್ಸಕಂ ॥ ೩ ॥

ನೂರೈದನೆಯ ಅಧ್ಯಾಯ

ಕ್ಷೀರಧೇನು ದಾನವಿಧಿ

೧. ಹೋತೃ-ರಾಜೋತ್ತಮನೇ, ಇನ್ನು ಕ್ಷೀರಧೇನುವನ್ನು ಹೇಳುತ್ತೇನೆ. ಕೇಳು.

೨. ದೊರೆಯೇ, ತಿಳಿದವನು ಹಸುವಿನ ಸಗಣಿಯಿಂದ ಸಾರಿಸಿದ ನೆಲದಲ್ಲಿ ಹಸುವಿನ ಚರ್ಮದಷ್ಟಳತೆಗೆ ಪೂರ್ತಿಯಾಗಿ ದರ್ಭೆಯನ್ನು ಹಾಸಿ, ಅದರಮೇಲೆ ಕೃಷ್ಣಾಜಿನವನ್ನು ಹಾಸಬೇಕು.

೩. ಮಹಾರಾಜ, ಅಲ್ಲಿ ಗೋಮಯದಿಂದ ದೊಡ್ಡದಾಗಿ ಸಿಂಬಿಯಂತೆ (ಬಳೆಯನ್ನು)ಮಾಡಿ, ಹಾಲಿನ ಕಲಶವನ್ನು ಹಸುವಿನಂತೆ ಇರಿಸಿ, ಆ ಕಲಶದ ನಾಲ್ಕರಲ್ಲೊಂದು ಭಾಗವಿರುವ ಚಿಕ್ಕಕಲಶವನ್ನು ಕರುವನ್ನಾಗಿರಿಸಬೇಕು.

ಸುವರ್ಣಮುಖಶೃಂಗಾಣಿ ಚಂದನಾಗುರುಕಾಣಿ ಚ ।
ಪ್ರಶಸ್ತಪತ್ರಶ್ರವಣಾಂ ತಿಲಪತ್ರೋಪರಿ ನ್ಯಸೇತ್ ॥ ೪ ॥

ಮುಖಂ ಗುಡಮಯಂ ತಸ್ಯಾ ಜಿಹ್ವಾಂ ಶರ್ಕರಯಾ ತಥಾ ।
ಫಲಪ್ರಶಸ್ತದಶನಾಂ ಮುಕ್ತಾಫಲಮಯೇಕ್ಷಣಾಂ ॥ ೫ ॥

ಇಕ್ಷುಪಾದಾಂ ದರ್ಭರೋಮಾಂ ಸಿತಕಂಬಲಸಂವೃತಾಂ ।
ತಾಮ್ರಪೃಷ್ಠಾಂ ಕಾಂಸ್ಯದೇಹಾಂ ಪಟ್ಟಸೂತ್ರಮಯೀಂ ಶುಭಾಂ ॥ ೬ ॥

ಪುಚ್ಛಂ ಚ ನೃಪಶಾರ್ದೂಲ ನವನೀತಮಯಸ್ತನೀಂ ।
ಸ್ವರ್ಣಶೃಂಗೀಂ ರೌಪ್ಯಖುರಾಂ ಪಂಚರತ್ನಸಮನ್ವಿತಾಂ ॥ ೭ ॥

ಚತ್ವಾರಿ ತಿಲಪಾತ್ರಾಣಿ ಚತುರ್ದಿಕ್ಷ್ವಪಿ ವಿನ್ಯಸೇತ್ ।
ಸಪ್ತಧಾನ್ಯಯುತಂ ಪಾತ್ರಂ ದಿಕ್ಷು ದಿಕ್ಷು ಚ ವಿನ್ಯಸೇತ್ ॥ ೮ ॥

೪-೭. ಹಸುವಿಗೆ ಚಿನ್ನದ ಮುಖವೂ, ಗಂಧಾಗುರುಗಳ ಕೊಂಬುಗಳೂ, ಉತ್ತಮವಾದ ಎಲೆಗಳ ಕಿವಿಗಳೂ, ಬೆಲ್ಲದ ಬಾಯೂ, ಸಕ್ಕರೆಯ ನಾಲಗೆಯೂ ಹಣ್ಣುಕಾಯಿಗಳ ಹಲ್ಲುಗಳೂ, ಮುತ್ತಿನ ಕಣ್ಣುಗಳೂ, ಕಬ್ಬಿನ ಕಾಲುಗಳೂ, ದರ್ಭೆಯ ಕೂದಲುಗಳೂ, ಬಿಳಿಯ ಕಂಬಳಿಯ ಹೊದಿಕೆಯೂ, ತಾಮ್ರದ ಪೃಷ್ಠಭಾಗವೂ, ಕಂಚಿನ ಮೈಯೂ, ಪಟ್ಟೆಯ ದಾರದ ಶುಭಕರವಾದ ಬಾಲವೂ, ಬೆಣ್ಣೆಯ ಮೊಲೆಗಳೂ, ಪಂಚರತ್ನಮಯವಾದ ಚಿನ್ನದ ಅಣಸೂ(ಶೃಂಗಾಭರಣವೂ)ಬೆಳ್ಳಿಯ ಗೊರಸುಗಳೂ ಇರುವಂತೆ ಮಾಡಬೇಕು.

೮. ಹಸುವಿನ ನಾಲ್ಕುಕಡೆಯಲ್ಲೂ ಒಂದೊಂದು ಎಳ್ಳಿನ ಪಾತ್ರೆಯನ್ನಿರಿಸಬೇಕು. ಪ್ರತಿದಿಕ್ಕಿನಲ್ಲೂ ಏಳುಬಗೆಯ ಧಾನ್ಯದಿಂದ ತುಂಬಿದ ಪಾತ್ರೆಯನ್ನು ಇಡಬೇಕು.

ಏವಂ ಲಕ್ಷಣಸಂಯುಕ್ತಾಂ ಕ್ಷೀರಧೇನುಂ ಪ್ರಕಲ್ಪಯೇತ್ ।
ಆಚ್ಛಾದ್ಯ ವಸ್ತ್ರಯುಗ್ಮೇನ ಗಂಧಪುಷ್ಪೈಃ ಸಮರ್ಚಯೇತ್ ।
ಧೂಪದೀಪಾದಿಕಂ ಕೃತ್ವಾ ಬ್ರಾಹ್ಮಣಾಯ ನಿವೇದಯೇತ್ ॥ ೯ ॥

ವಸ್ತ್ರಾದಿಭಿರಲಂಕೃತ್ಯ ಮುದ್ರಿಕಾಕರ್ಣಕುಂಡಲೈಃ ।
ಪಾದುಕೋಪಾನಹೌ ಛತ್ರಂ ದತ್ವಾ ದಾನಂ ಸಮರ್ಪಯೇತ್ ॥ ೧೦ ॥

ದದ್ಯಾದನೇನ ಮಂತ್ರೇಣ ಕ್ಷೀರಧೇನುಂ ಪ್ರಯತ್ನತಃ ।
ಆಪ್ಯಾಯಸ್ವೇತಿ ಮಂತ್ರೇಣ ವೇದೋಕ್ತೇನ ವಿಧಾನತಃ ॥ ೧೧ ॥

*[ಆಶ್ರಯಸ್ಸರ್ವಭೂತಾನಾಮಿತ್ಯಾದಿ ನರಪುಂಗವ ।
ಆಪ್ಯಾಯಸ್ವೇತಿ ಮಂತ್ರೇಣ ಕ್ಷೀರಧೇನುಂ ಪ್ರಸಾದಯೇತ್] ॥ ೧೨ ॥

ಪ್ರತಿಗ್ರಾಹೀ ಪಠೇನ್ಮಂತ್ರಂ ಏಷ ದಾನವಿಧಿಃ ಸ್ಮೃತಃ ॥ ೧೩ ॥

---

೯. ಕ್ಷೀರಧೇನುವನ್ನು ಈ ಲಕ್ಷಣಗಳಿಂದ ಕೂಡಿದುದನ್ನಾಗಿ ಮಾಡಿ, ಒಂದು ಜತೆವಸ್ತ್ರಗಳನ್ನು ಹೊದಿಸಿ, ಗಂಧಪುಷ್ಪ ದೀಪಧೂಪಾದಿಗಳಿಂದ ಪೂಜಿಸಿ ಬ್ರಾಹ್ಮಣನಿಗೆ ಅರ್ಪಿಸಬೇಕು.

೧೦. ಬ್ರಾಹ್ಮಣನನ್ನು ವಸ್ತ್ರ ಉಂಗುರ ಕಡಕುಗಳಿಂದಲಂಕರಿಸಿ, ಪಾದರಕ್ಷೆ ಕೊಡೆಗಳನ್ನೂ ಕೊಟ್ಟು, ದಾನವನ್ನು ಸಮರ್ಪಿಸಬೇಕು.

೧೧. ಆಪ್ಯಾಯಸ್ವ ಸಮೇತುತೇ ಎಂಬ ಮಂತ್ರದಿಂದ ವೇದೋಕ್ತವಾಗಿ ಕ್ಷೀರಧೇನುವನ್ನು ದಾನವಾಗಿ ಕೊಡಬೇಕು

೧೨. ದೊರೆಯೇ, ಆಶ್ರಯಸ್ಸರ್ವಭೂತಾನಾಂ, ಎಂಬುದೇ ಮೊದಲಾದ ಮಂತ್ರದಿಂದಲೂ, ಆಪ್ಯಾಯಸ್ವ ಸಮೇತುತೇ, ಎಂಬ ಮಂತ್ರದಿಂದಲೂ, ಕ್ಷೀರಧೇನುವನ್ನು ಪ್ರಸನ್ನಳನ್ನಾಗಿ ಮಾಡಿಕೊಳ್ಳಬೇಕು.

೧೩. ದಾನವನ್ನು ತೆಗೆದುಕೊಳ್ಳುವವನೂ ಮಂತ್ರವನ್ನು ಹೇಳಬೇಕು. ಇದು ದಾನದ ವಿಧಿ.

---

* ಆವರಣ ಚಿಹ್ನೆಯೊಳಗಿರುವ ಅಧಿಕ ಭಾಗವು ಕ. [ಕಲ್ಕತ್ತಾದ] ಪುಸ್ತಕದಲ್ಲಿಲ್ಲ.

ದೀಯಮಾನಾಂ ಪ್ರಪಶ್ಯಂತಿ ತೇ ಯಾಂತಿ ಪರಮಾಂ ಗತಿಂ || ೧೪ ||

ಏತಾಂ ಹೇಮಸಹಸ್ರೇಣ ಶತೇನಾಥ ಸ್ವಶಕ್ತಿತಃ |
ದತ್ವಾ ಧೇನುಂ ಮಹಾರಾಜ ಶೃಣು ತಸ್ಯಾಪಿ ಯತ್ಫಲಂ || ೧೫ ||

ಷಷ್ಟಿರ್ವರ್ಷಸಹಸ್ರಂ ತು ಇಂದ್ರಲೋಕೇ ಮಹೀಯತೇ |
ಪಿತ್ರಾದಿಭಿಶ್ಚ ಸಹಿತೋ ಬ್ರಹ್ಮಣೋ ಭವನಂ ವ್ರಜೇತ್ || ೧೬ ||

ದಿವ್ಯಂ ವಿಮಾನಮಾರೂಢಃ ದಿವ್ಯಸ್ರಗನುಲೇಪನಃ ।
ಕ್ರೀಡಿತ್ವಾ ಸುಚಿರಂ ಕಾಲಂ ವಿಷ್ಣುಲೋಕಂ ಸ ಗಚ್ಛತಿ ||
ದ್ವಾದಶಾದಿತ್ಯಸಂಕಾಶವಿಮಾನವರಮಂಡಿತಃ || ೧೭ ||

ಗೀತವಾದಿತ್ರನಿರ್ಘೋಷೈರಪ್ಸರೋಭಿಶ್ಚ ಸೇವ್ಯತೇ !
ತತ್ರೋಷ್ಯ ವಿಷ್ಣೋರ್ಭವನೇ ವಿಷ್ಣುಸಾಯುಜ್ಯಮಾಪ್ನುಯಾತ್ || ೧೮ ||

---

೧೪. ಕ್ಷೀರಧೇನು ದಾನವನ್ನು ನೋಡುವವರೂ ಪರಮಗತಿಯನ್ನು ಪಡೆಯುವರು.

೧೫. ಮಹಾರಾಜನೇ, ಸಾವಿರ, ನೂರು ಅಥವಾ ತನ್ನ ಶಕ್ತಿಯಿದ್ದಷ್ಟು ಸುವರ್ಣನಾಣ್ಯದಕ್ಷಿಣೆಯೊಡನೆ ಕ್ಷೀರಧೇನುವನ್ನು ದಾನಮಾಡುವುದರ ಫಲವನ್ನು ಹೇಳುತ್ತೇನೆ. ಕೇಳು.

೧೬-೧೭. ಹೀಗೆ ಕ್ಷೀರಧೇನುವನ್ನು ದಾನಮಾಡುವವನು ಅರವತ್ತು ಸಾವಿರವರ್ಷಕಾಲ ಇಂದ್ರಲೋಕದಲ್ಲಿ ಮಹಿಮೆಯನ್ನು ಪಡೆಯುವನು. ಪಿತೃಗಳೇ ಮೊದಲಾದವರೊಡನೆ ಬ್ರಹ್ಮಲೋಕಕ್ಕೆ ಹೋಗಿ, ದಿವ್ಯವಿಮಾನವನ್ನೇರಿ ದಿವ್ಯಮಾಲಾಗಂಧಗಳಿಂದ ಭೂಷಿತನಾಗಿ, ಬಹುಕಾಲ ವಿಹರಿಸಿ, ಬಳಿಕ ದ್ವಾದಶಾದಿತ್ಯರಂತೆ ಹೊಳೆಯುವ ವಿಮಾನದಿಂದ ವಿಷ್ಣುಲೋಕವನ್ನು ಸೇರುವನು

೧೮. ಗೀತವಾದ್ಯಧ್ವನಿಗಳಿಂದ ಅಪ್ಸರರು ಅವನನ್ನು ಸೇವಿಸುವರು ಅಲ್ಲಿ ವಿಷ್ಣುಗೃಹದಲ್ಲಿ ಇದ್ದು, ವಿಷ್ಣುವಿನ ಲ್ಲೈಕ್ಯನಾಗುವನು.

ಯ ಇಮಂ ಶೃಣುಯಾದ್ರಾಜನ್ ಪಠೇದ್ವಾ ಭಕ್ತಿಭಾವತಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೧೯ ॥

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಕ್ಷೀರಧೇನು ದಾನವಿಧಿರ್ನಾಮ ಪಂಚಾಧಿಕಶತತಮೋಽಧ್ಯಾಯಃ

---

೧೯. ದೊರೆಯೇ, ಭಕ್ತಿಯಿಂದ ಇದನ್ನು ಕೇಳುವವರೂ, ಹೇಳುವವರೂ ಸಕಲಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ :—

ಹೋತೃವು ವಿನೀತಾಶ್ವರಾಜನಿಗೆ ಕ್ಷೀರಧೇನು ದಾನವಿಧಾನವನ್ನೂ ಅದರ ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೈದನೆಯ ಅಧ್ಯಾಯ.

|| ಶ್ರೀಃ ||

-X-

ಷಡಧಿಕಶತತಮೋಧ್ಯಾಯಃ

ಅಥ ದಧಿಧೇನುದಾನಮಾಹಾತ್ಮ್ಯಂ

|| ಹೋತೋವಾಚ ||

ದಧಿಧೇನೋರ್ಮಹಾರಾಜ ವಿಧಾನಂ ಶೃಣು ಸಾಂಪ್ರತಂ || ೧ ||

ಅನುಲಿಪ್ತೇ ಮಹೀಭಾಗೇ ಗೋಮಯೇನ ನರಾಧಿಪ ।
ಗೋಚರ್ಮಮಾತ್ರಂ ತು ಪುನಃ ಪುಷ್ಪಪ್ರಕರಶೋಭಿತೇ ॥
ಕುಶೈರಾಸ್ತೀರ್ಯ ವಸುಧಾಂ ಕೃಷ್ಣಾಜಿನಕುಶೋತ್ತರೀಂ || ೨ ||

ದಧಿಕುಂಭಂ ತು ಸುಸ್ಥಾಪ್ಯ ಸಪ್ತಧಾನ್ಯಚಯೋಪರಿ ।
ಚತುರ್ಥಾಂಶೇನ ವತ್ಸಂ ಕು ಸೌವರ್ಣಮುಖಮಂಡಿತಂ || ೩ ||

ನೂರಾರನೆಯ ಅಧ್ಯಾಯ

ಮೊಸರಿನ ಹಸುವಿನ ದಾನದ ಮಹಿಮೆ

೧. ಹೋತೃ–ಮಹಾರಾಜ, ಈಗ ಮೊಸರಿನ ಹಸುವನ್ನು ದಾನಮಾಡುವ ಕ್ರಮವನ್ನು ಹೇಳುತ್ತೇನೆ. ಕೇಳು.

೨–೪. ದೊರೆಯೇ, ಹಸುವಿನ ಸಗಣಿಯಿಂದ ಸಾರಿಸಿದ ನೆಲದಲ್ಲಿ ಹಸುವಿನ ಚರ್ಮದಷ್ಟಗಲದಷ್ಟು ಸ್ಥಳದಲ್ಲಿ ಹೂಗಳನ್ನೂ, ದರ್ಭೆಯನ್ನೂ ಹರಡಿ, ಅದರಮೇಲೆ ಕೃಷ್ಣಾಜಿನವನ್ನು ಹಾಸಿ, ಅದರಮೇಲೆ ಹರಡಿದ ಏಳುವಿಧವಾದ ಧಾನ್ಯಗಳಮೇಲೆ ಮೊಸರಿನ ಪೂರ್ಣಕುಂಭವನ್ನು ಹಸುವನ್ನಾಗಿ ಭಾವಿಸಿಟ್ಟು ಆ ಕುಂಭದ ನಾಲ್ಕನೆಯ ಒಂದುಭಾಗ ಅಳತೆಯ ಮತ್ತೊಂದು ಚಿಕ್ಕದಾದ ಕಲಶವನ್ನು ಕರುವನ್ನಾಗಿ ಇರಿಸಿ, ಸುವರ್ಣದ ಮುಖದಿಂದೊಪ್ಪುವ ಆ ಹಸುವಿಗೆ

ಆಚ್ಛಾದ್ಯ ವಸ್ತ್ರಯುಗ್ಮೇನ ಪುಷ್ಪಗಂಧೈಶ್ಚ ಪೂಜಿತಾಂ ।
ಬ್ರಾಹ್ಮಣಾಯ ಕುಲೀನಾಯ ಸಾಧುವೃತ್ತಾಯ ಧೀಮತೇ ॥
ಕ್ಷಮಾದಿಗುಣಯುಕ್ತಾಯ ದದ್ಯಾತ್ತಾಂ ದಧಿಧೇನುಕಾಂ ॥ ೪ ॥

ಪುಚ್ಛದೇಶೋಪವಿಷ್ಟಸ್ತು ಮುದ್ರಿಕಾಕರ್ಣಭೂಷಣೈಃ ।
ಪಾದುಕೋಪಾನಹೌ ಛತ್ರಂ ದತ್ವಾ ಮಂತ್ರಮಿಮಂ ಪಠೇತ್ ॥
ದಧಿಕ್ರಾವ್ಣೇತಿ ಮಂತ್ರೇಣ ದದ್ಯಾದ್ಧೇನುಂ ಸುಪೂಜಿತಾಂ ॥ ೫ ॥

ಏವಂ ದಧಿಮಯೀಂ ಧೇನುಂ ದತ್ವಾ ರಾಜರ್ಷಿಸತ್ತಮ ।
ಏಕಾಹಾರೀ ದಿನಂ ತಿಷ್ಠೇದ್ದಧ್ನಾ ಚ ನೃಪನಂದನ ॥ ೬ ॥

ಯಜಮಾನೋ ವಸೇದ್ರಾಜಂಸ್ತ್ರಿರಾತ್ರಂ ಚ ದ್ವಿಜೋತ್ತಮಃ ॥ ೭ ॥

ದೀಯಮಾನಾಂ ಪ್ರಪಶ್ಯಂತಿ ತೇ ಯಾಂತಿ ಪರಮಂ ಪದಂ ॥ ೮ ॥

ಒಂದುಜತೆ ಬಟ್ಟೆಯನ್ನು ಹೊದಿಸಿ, ಗಂಧಪುಷ್ಪಗಳಿಂದ ಪೂಜಿಸಿ, ಸಾಧುವೃತ್ತಿಯವನೂ, ಕುಲೀನನೂ, ವಿದ್ಯಾವಂತನೂ, ಕ್ಷಮಾದಿಗುಣವುಳ್ಳವನೂ ಆದ ಬ್ರಾಹ್ಮಣನಿಗೆ ಕೊಡಬೇಕು.

೫. ಉಂಗುರ, ಕಡಕು, ಪಾದರಕ್ಷೆಗಳನ್ನೂ ಬ್ರಾಹ್ಮಣನಿಗೆ ಕೊಟ್ಟು, ದಧಿಧೇನುವಿನ ಬಾಲದಕಡೆ ಕುಳಿತು, 'ದಧಿಕ್ರಾವಿಣ್ಣೋ ಅಕಾರಿಷಂ' ಎಂಬ ಮಂತ್ರವನ್ನು ಹೇಳಿ, ಚೆನ್ನಾಗಿ ಪೂಜೆಮಾಡಿ, ಅದನ್ನು ದಾನಮಾಡಬೇಕು.

೬-೭. ರಾಜರ್ಷಿವರ್ಯನೇ, ಹೀಗೆ ಮೊಸರಿನ ಹಸುವನ್ನು ದಾನಮಾಡಿ, ಯಜಮಾನನು, ಮೊಸರನ್ನು ಒಂದುಹೊತ್ತು ಮಾತ್ರ ಸೇವಿಸಿ, ಒಂದುದಿನ ಇರಬೇಕು. ದಾನತೆಗೆದುಕೊಳ್ಳುವ ಬ್ರಾಹ್ಮಣನು ಮೂರುರಾತ್ರಿಗಳು ಹಾಗಿರಬೇಕು.

೮. ಈ ದಧಿಧೇನುವನ್ನು ದಾನಕೊಡುವುದನ್ನು ನೋಡಿದವರೂ ಪರಮ ಪದವನ್ನು ಪಡೆಯುವರು.

ಯ ಇದಂ ಶೃಣುಯಾದ್ಭಕ್ತ್ಯಾ ಶ್ರಾವಯೇದ್ವಾಪಿ ಮಾನವಃ ।
ಸೋಽಶ್ವಮೇಧಫಲಂ ಪ್ರಾಪ್ಯ ವಿಷ್ಣುಲೋಕಂ ಚ ಗಚ್ಛತಿ ॥ ೯ ॥

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ದಧಿಧೇನು ದಾನಮಾಹಾತ್ಮ್ಯಂ ನಾಮ ಷಡಧಿಕಶತತಮೋಽಧ್ಯಾಯಃ

---

೯. ಇದನ್ನು ಭಕ್ತಿಯಿಂದ ಕೇಳುವವರೂ, ಹೇಳುವವರೂ, ಅಶ್ವಮೇಧ ಫಲವನ್ನು ಪಡೆದು ವಿಷ್ಣುಲೋಕವನ್ನೈದುವರು.

ಅಧ್ಯಾಯದ ಸಾರಾಂಶ:—

ಹೋತೃವು ವಿನಿತಾಶ್ವರಾಜನಿಗೆ ಮೊಸರಿನ ಹಸುವನ್ನು ದಾನಮಾಡುವ ಕ್ರಮವನ್ನೂ, ಅದರ ಫಲವನ್ನೂ ಹೇಳುವಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರಾರನೆಯ ಅಧ್ಯಾಯ.

॥ ಶ್ರೀಃ ॥

-X-

ಸಪ್ತಾಧಿಕಶತತಮೋಧ್ಯಾಯಃ

ಅಥ ನವನೀತಧೇನುದಾನಮಾಹಾತ್ಮ್ಯಂ

॥ ಹೋತೋವಾಚ ॥

ನವನೀತಮಯೀಂ ಧೇನುಂ ಶೃಣು ರಾಜನ್ಪ್ರಯತ್ನತಃ ।
ಯಾಂ ಶ್ರುತ್ವಾ ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ೧ ॥

ಗೋಮಯೇನಾನುಲಿಪ್ತಾಯಾಂ ಭೂಮೌ ಗೋಚರ್ಮಮಾನತಃ ।
ಚರ್ಮ ಕೃಷ್ಣಮೃಗಸ್ಯೈವ ತಸ್ಯೋಪರಿ ಚ ಧಾರಯೇತ್ ॥ ೨ ॥

ಕುಂಭಂ ತು ನವನೀತಸ್ಯ ಪ್ರಸ್ಥಮಾತ್ರಸ್ಯ ಧಾರಯೇತ್ ।
ವತ್ಸಂ ಚತುರ್ಥಭಾಗಸ್ಯ ತಸ್ಯಾಮುತ್ತರತೋ ನ್ಯಸೇತ್ ॥ ೩ ॥

ನೂರೇಳನೆಯ ಅಧ್ಯಾಯ

ಬೆಣ್ಣೆಯ ಹಸುವಿನ ದಾನಮಹಿಮೆ.

೧. ಹೋತೃ— ದೊರೆಯೇ, ಯಾವುದನ್ನು ಕೇಳಿ, ಮನುಷ್ಯನು ಸಕಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುವುದರಲ್ಲಿ ಸಂದೇಹವಿಲ್ಲವೋ ಆ ಬೆಣ್ಣೆಯ ಹಸುವಿನ ದಾನದ ವಿಚಾರವನ್ನು ಗಮನವಿಟ್ಟು ಕೇಳು.

೨-೩. ಹಸುವಿನ ಸಗಣಿಯಿಂದ ಸಾರಿಸಿದ ನೆಲದಲ್ಲಿ ಹಸುವಿನ ಚರ್ಮದಷ್ಟಳತೆಯ ಕೃಷ್ಣಾಜಿನವನ್ನು ಹಾಸಿ, ಅದರ ಮೇಲೆ ಒಂದು ಬಳ್ಳದಷ್ಟು ಹಿಡಿಸುವ, ಹೊಸಬೆಣ್ಣೆಯಿಂದ ತುಂಬಿದ ಕಲಶವನ್ನು ಹಸುವನ್ನಾಗಿ ಇಟ್ಟು, ಅದರ ನಾಲ್ಕನೆಯ ಒಂದು ಭಾಗವಿರುವ, ಬೆಣ್ಣೆಯ ಚಿಕ್ಕ ಕಲಶವನ್ನು ಹಸುವಿನ ಉತ್ತರಭಾಗದಲ್ಲಿ ಕರುವನ್ನಾಗಿರಿಸಬೇಕು.

ಕೃತ್ವಾ ವಿಧಾನೇನ ಚ ರಾಜಸಿಂಹ
ಸುವರ್ಣಶೃಂಗೀ ಸುಮುಖಾ ಚ ಕಾರ್ಯಾ ।
ನೇತ್ರೇ ಚ ತಸ್ಯಾ ಮಣಿಮೌಕ್ತಿಕೈಸ್ತು ॥
ಕೃತ್ವಾ ತಥಾನ್ಯಚ್ಚ ಗುಡೇನ ಜಿಹ್ವಾಂ ॥ ೪ ॥

ಓಷ್ಠೌ ಚ ಪುಷ್ಪೈಶ್ಚ ಫಲೈಶ್ಚ ದಂತಾಃ
ಪ್ರಕಲ್ಪ್ಯ ಸಾಸ್ನಾಂ ಚ ಸಿತೈಶ್ಚ ಸೂತ್ರೈಃ ।
ಜಿಹ್ವಾಂ ತಥಾ ಶರ್ಕರಯಾ ಪ್ರಕಲ್ಪ್ಯ
ಫಲಾನಿ ದಂತಾಃ ಕಂಬಲಂ ಪಟ್ಟಸೂತ್ರಂ ॥ ೫ ॥

ನವನೀತಸ್ತನೀಂ ರಾಜನ್ ಇಕ್ಷುಪಾದಾಂ ಪ್ರಕಲ್ಪಯೇತ್ ।
ತಾಮ್ರಪೃಷ್ಠಾಂ ರೌಪ್ಯಖುರಾಂ ದಭ ರೋಮಕೃತಚ್ಛವಿಂ ॥
ಸ್ವರ್ಣಶೃಂಗಾಂ ರೌಪ್ಯಖುರಾಂ ಪಂಚರತ್ನಸಮನ್ವಿತಾಂ ॥ ೬ ॥

ಚತುರ್ಭಿಸ್ತಿಲಪಾತ್ರೈಶ್ಚ ಸಂವೃತಾಂ ಸರ್ವತೋ ದಿಶಿ ।
ಆಚ್ಛಾದ್ಯ ವಸ್ತ್ರಯುಗ್ಮೇನ ಗಂಧಪುಷ್ಪೈರಲಂಕೃತಾಂ ॥ ೭ ॥

೪-೬. ರಾಜಸಿಂಹನೇ ವಿಧಿಪೂರ್ವಕವಾಗಿ ಹಸುವಿಗೆ ಚಿನ್ನದ ಕೊಂಬನ್ನೂ ಮುಖವನ್ನೂ, ಮುತ್ತಿನ ಮಣಿಗಳಿಂದ ಕಣ್ಣುಗಳನ್ನೂ, ಬೆಲ್ಲದಿಂದ ನಾಲಗೆಯನ್ನೂ, ಹೂಗಳಿಂದ ತುಟಿಗಳನ್ನೂ, ಹಣ್ಣುಕಾಯಿಗಳಿಂದ ಹಲ್ಲುಗಳನ್ನೂ, ಬಿಳಿಯ ನೂಲುಗಳಿಂದ ಗಂಗೆದೊಗಲನ್ನೂ, ಸಕ್ಕರೆಯಿಂದ ನಾಲಗೆಯನ್ನೂ, ಕಂಬಳಿಯಿಂದ ಪಟ್ಟಸೂತ್ರವನ್ನೂ, ಬೆಣ್ಣೆಯಿಂದ ಮೊಲೆಗಳನ್ನೂ, ಕಬ್ಬಿನ ಕಾಲುಗಳನ್ನೂ, ತಾಮ್ರದ ಪೃಷ್ಠವನ್ನೂ, ಬೆಳ್ಳಿಯಗೊರಸುಗಳನ್ನೂ, ದರ್ಭೆಯಿಂದ ಕೂದಲುಗಳನ್ನೂ ಕಲ್ಪಿಸಿ, ಪಂಚರತ್ನಗಳಿಂದ ಅಲಂಕರಿಸಬೇಕು.

೭-೮. ಹಸುವಿನ ನಾಲ್ಕುದಿಕ್ಕುಗಳಲ್ಲೂ ಒಂದೊಂದು ಎಳ್ಳುತುಂಬಿದ ಪಾತ್ರೆಯನ್ನು ಇಟ್ಟು ಒಂದು ಜತೆ ವಸ್ತ್ರವನ್ನು ಹೊದಿಸಿ, ಗಂಧಪುಷ್ಪಾದಿಗಳಿಂದ

ದೀಪಾಂಶ್ಚ ದಿಕ್ಷು ಪ್ರಜ್ವಾಲ್ಯ ಬ್ರಾಹ್ಮಣಾಯ ನಿವೇದಯೇತ್ ॥ ೮ ॥

ಮಂತ್ರಾಸ್ತ ಏವ ಜಪ್ತವ್ಯಾಃ ಸರ್ವಧೇನುಷು ಯೇ ಸ್ಮೃತಾಃ ॥ ೯ ॥

ಪುರಾ ದೇವಾಸುರೈಸ್ಸರ್ವೈಃ ಸಾಗರಸ್ಯ ತು ಮಂಥನೇ ।
ಉತ್ಪನ್ನಂ ದಿವ್ಯಮಮೃತಂ ನವನೀತಮಿದಂ ಶುಭಂ ॥
ಆಪ್ಯಾಯನಂ ತು ಭೂತಾನಾಂ ನವನೀತ ನಮೋಽಸ್ತು ತೇ ॥ ೧೦ ॥

ಏವಮುಚ್ಚಾರ್ಯ ತಾಂ ದದ್ಯಾದ್ಬ್ರಾಹ್ಮಣಾಯ ಕುಟುಂಬಿನೇ ।
ಧೇನುಂ ಚ ದತ್ವಾ ಸುದುಘಾಂ ಸೋಪಧಾನಾಂ ನಯೇದ್ಗೃಹಂ ॥ ೧೧ ॥

ಹವಿರೇವಂ ರಸಂ ಚೈವ ವಿಪ್ರವರ್ಯಸ್ಸ ಭೂಪತೇ ।
ಭುಕ್ತ್ವಾ ತಿಷ್ಠೇದ್ದಿನಂ ರಾಜನ್ ಧೇನುದಸ್ತ್ರೀಣಿ ವೈ ದ್ವಿಜಃ ॥ ೧೨ ॥

ಅಲಂಕರಿಸಿ, ಎಲ್ಲಾ ಡಿಕ್ಕುಗಳಲ್ಲೂ, ದೀಪಗಳನ್ನು ಹತ್ತಿಸಿ, ಬಳಿಕ ಅದನ್ನು ಬ್ರಾಹ್ಮಣನಿಗೆ ಅರ್ಪಿಸಬೇಕು.

೯. ಹಿಂದಿನ ಎಲ್ಲಾ ಹಸುಗಳ ದಾನದಲ್ಲಿ ಹೇಳಿರುವ ಮಂತ್ರಗಳನ್ನೇ ಹೇಳಬೇಕು.

೧೦-೧೧. ಅಲ್ಲದೆ "ಹಿಂದೆ ದೇವಾಸುರರು ಕ್ಷೀರಸಾಗರವನ್ನು ಕಡೆದಾಗ ಉದಿಸಿದ ಶುಭವಾದ ದಿವ್ಯಾಮೃತವೇ ಈ ಬೆಣ್ಣೆ. ಪ್ರಾಣಿಗಳಿಗೆ ಹಿತಕರವಾದುದು. ಬೆಣ್ಣೆಯೇ, (ನವನೀತವೇ)ನಿನಗೆ ನಮಸ್ಕಾರ." ಎಂಬ ಅರ್ಥದ ಮೇಲಿನ ಮಂತ್ರವನ್ನೂ ಹೇಳಿ, ಕುಟುಂಬಿಯಾದ ಬ್ರಾಹ್ಮಣನಿಗೆ ಆ ಹಸುವನ್ನು ಕೊಡಬೇಕು. ಹೆಚ್ಚಾಗಿ ಹಾಲುಕರೆಯುವ ಹಸುವನ್ನು ಹಾಸಿಗೆಯೊಡನೆ ಬ್ರಾಹ್ಮಣನಿಗೆ ಕೊಟ್ಟು ಅವನ ಮನೆಗೆ ಕಳುಹಿಸಬೇಕು.

೧೨. ದೊರೆಯೇ, ಧೇನುದಾನ ಮಾಡುವವನು ಹವಿಸ್ಸನ್ನೂ, ರಸವನ್ನೂ ಮಾತ್ರ ಭುಜಿಸಿ ಒಂದು ದಿನವೂ, ದಾನವನ್ನು ತೆಗೆದುಕೊಳ್ಳುವ ಬ್ರಾಹ್ಮಣನು ಮೂರು ದಿನವೂ ಬೇರೆ ಆಹಾರವಿಲ್ಲದೆ ಇರಬೇಕು.

ಯಃ ಪ್ರಪಶ್ಯತಿ ತಾಂ ಧೇನುಂ ದೀಯಮಾನಾಂ ನರೋತ್ತಮ ।
ಸರ್ವಪಾಪವಿನಿರ್ಮುಕ್ತಃ ಶಿವಸಾಯುಜ್ಯತಾಂ ವ್ರಜೇತ್ ॥ ೧೩ ॥

ಪಿತೃಭಿಃ ಪೂರ್ವಜೈಸ್ಸಾರ್ಧಂ ಭವಿಷ್ಯದ್ಭಿಶ್ಚ ಮಾನವಃ
ವಿಷ್ಣುಲೋಕಂ ವ್ರಜತ್ಯಾಶು ಯಾವದಾಭೂತಸಂಪ್ಲವಃ ॥ ೧೪ ॥

ಯ ಇದಂ ಶೃಣುಯಾದ್ಭಕ್ತ್ಯಾ ಶ್ರಾವಯೇದ್ವಾಪಿ ಮಾನವಃ ।
ಸರ್ವಪಾಪವಿಶುದ್ಧಾತ್ಮಾ ವಿಷ್ಣುಲೋಕೇ ಮಹೀಯತೇ ॥ ೧೫ ॥

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ನವನೀತ
ಧೇನುಮಾಹಾತ್ಮ್ಯಂ ನಾಮ ಸಪ್ತಾಧಿಕಶತತಮೋಧ್ಯಾಯಃ

---

೧೩. ರಾಜೋತ್ತಮನೇ, ದಾನಕೊಡುವ ಆ ಹಸುವನ್ನು ನೋಡುವವನೂ ಸರ್ವಪಾಪಗಳನ್ನೂ ಕಳೆದುಕೊಂಡು, ಶಿವಸಾಯುಜ್ಯವನ್ನು ಪಡೆಯುವನು.

೧೪. ದಾನಿಯು, ಪೂರ್ವಜರಾದ ಪಿತೃಗಳೊಡನೆಯೂ, ತನ್ನ ಮುಂದಿನವರೊಡನೆಯೂ ಬೇಗನೆ ವಿಷ್ಣುಲೋಕವನ್ನು ಸೇರಿ, ಪ್ರಳಯದವರೆಗೂ ಅಲ್ಲಿರುವನು.

೧೫. ಇದನ್ನು ಭಕ್ತಿಯಿಂದ ಹೇಳುವವರೂ, ಕೇಳುವವರೂ, ಪಾಪಗಳನ್ನೆಲ್ಲಾ ಕಳೆದುಕೊಂಡು ಶುದ್ಧರಾಗಿ, ವಿಷ್ಣುಲೋಕದಲ್ಲಿ ಮಹಿಮೆಯನ್ನು ಪಡೆಯುವರು.

ಅಧ್ಯಾಯದ ಸಾರಾಂಶ:—

ಹೋತೃವು ವಿನೀತಾಶ್ವರಾಜನಿಗೆ ನವನೀತಧೇನುದಾನದ ವಿಧಿಮಹಿಮೆಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೇಳನೆಯ ಅಧ್ಯಾಯ

॥ ಶ್ರೀಃ ॥

—x—

ಅಷ್ಟೋತ್ತರಶತತಮೋಧ್ಯಾಯಃ

ಅಥ ಲವಣಧೇನುದಾನಮಾಹಾತ್ಮ್ಯಂ

॥ ಹೋತೋವಾಚ ॥

ಲವಣಧೇನುಂ ಪ್ರವಕ್ಷ್ಯಾಮಿ ತಾಂ ನಿಬೋಧ ನೃಪೋತ್ತಮ ॥ ೧ ॥

ಷೋಡಶಪ್ರಸ್ಥಸಂಯುಕ್ತಾಂ ಧೇನುಂ ಕೃತ್ವಾ ತು ಮಾನವಃ ।
ಅನುಲಿಪ್ತೇ ಮಹೀಪೃಷ್ಠೇ ಕೃಷ್ಣಾಜಿನಕುಶೋತ್ತರೇ ॥
ಧೇನುಂ ಲವಣಮಯೀಂ ಕೃತ್ವಾ ಷೋಡಶಪ್ರಸ್ಥಸಂಯುತಾಂ ॥ ೨ ॥

ವತ್ಸಂ ಚತುರ್ಭೀ ರಾಜೇಂದ್ರ ಇಕ್ಷುಪಾದಾಂಶ್ಚ ಕಾರಯೇತ್ ।
ಸುವರ್ಣಮುಖಶೃಂಗಾಣಿ ಖುರಾ ರೌಪ್ಯಮಯಾಸ್ತಥಾ ॥ ೩ ॥

ನೂರೆಂಟನೆಯ ಅಧ್ಯಾಯ.

ಉಪ್ಪಿನ ಹಸುವಿನ ದಾನದ ಮಹಿಮೆ.

೧. ಹೋತೃ—ರಾಜೋತ್ತಮನೇ, ಉಪ್ಪಿನಿಂದ ಮಾಡಿದ ಹಸುವಿನ ದಾನದ ವಿಧಾನವನ್ನು ಹೇಳುತ್ತೇನೆ. ಕೇಳು.

೨. ದಾನಿಯು, ಹದಿನಾರು ಬಳ್ಳ ಉಪ್ಪಿನಿಂದ, ಹಸುವಿನ ಸಗಣಿಯಲ್ಲಿ ಸಾರಿಸಿದ ನೆಲದಲ್ಲಿಹಾಸಿದ ದರ್ಭೆಕೃಷ್ಣಾಜಿನಗಳ ಮೇಲೆ ಹಸುವನ್ನು ರಚಿಸಬೇಕು.

೩–೭. ರಾಜೇಂದ್ರನೇ, ನಾಲ್ಕು ಬಳ್ಳ ಉಪ್ಪಿನಿಂದ ಕರುವನ್ನು ಮಾಡಬೇಕು. ಹಸುವಿಗೆ ಕಬ್ಬಿನ ಕಾಲನ್ನೂ, ಚಿನ್ನದ ಮುಖವನ್ನೂ, ಕೊಂಬು

ಮುಖಂ ಗುಡಮಯಂ ತಸ್ಯಾ ದಂತಾಃ ಫಲಮಯಾ ನೃಪ |
ಜಿಹ್ವಾಂ ಶರ್ಕರಯಾ ರಾಜನ್ ಘ್ರಾಣಂ ಗಂಧಮಯಂ ತಥಾ ॥ ೪ ॥

ನೇತ್ರೇ ರತ್ನಮಯೇ ಕುರ್ಯಾತ್ಕರ್ಣೌ ಪತ್ರಮಯೌ ತಥಾ |
ಶ್ರೀಖಂಡಮಯಕೋಷ್ಠೌ ಚ ನವನೀತಮಯಾಃ ಸ್ತನಾಃ ॥ ೫ ॥

ಸೂತ್ರಪುಚ್ಛಾಂ ತಾಮ್ರಪೃಷ್ಠಾಂ ದರ್ಭರೋಮಾಂ ಪಯಸ್ವಿನೀಂ |
ಕಾಂಸ್ಯೋಪದೋಹಾಂ ರಾಜೇಂದ್ರ ಘಂಟಾಭರಣಭೂಷಿತಾಂ ॥ ೬ ॥

ಸುಗಂಧಪುಷ್ಪಧೂಪೈಶ್ಚ ಪೂಜಯಿತ್ವಾ ವಿಧಾನತಃ |
ಆಚ್ಛಾದ್ಯ ವಸ್ತ್ರಯುಗ್ಮೇನ ಬ್ರಾಹ್ಮಣಾಯ ನಿವೇದಯೇತ್ ॥ ೭ ॥

ಗ್ರಹಣೇ ವಾಥ ಸಂಕ್ರಾಂತೌ ವ್ಯತೀಪಾತೇ ತಥಾಯನೇ |
ದ್ವಿಜಾಯ ಸಾಧುವೃತ್ತಾಯ ವೇದವೇದಾಂಗವೇದಿನೇ ॥
ಬ್ರಾಹ್ಮಣಂ ಪೂಜ್ಯ ವಿಧಿವತ್ಪೂರ್ವೋಕ್ತವಿಧಿನಾ ನೃಪ ॥ ೮ ॥

ಗಳನ್ನೂ, ಬೆಳ್ಳಿಯ ಗೊರಸುಗಳನ್ನೂ, ಬೆಲ್ಲದ ಬಾಯನ್ನೂ, ಹಣ್ಣುಕಾಯಿಗಳಿಂದ ಹಲ್ಲುಗಳನ್ನೂ, ಸಕ್ಕರೆಯಿಂದ ನಾಲಗೆಯನ್ನೂ, ಗಂಧದಿಂದ ಮೂಗನ್ನೂ, ರತ್ನಗಳಿಂದ ಕಣ್ಣುಗಳನ್ನೂ, ಎಲೆಗಳಿಂದ ಕಿವಿಗಳನ್ನೂ, ಶ್ರೀಗಂಧದಿಂದ ಒಳಹೊಟ್ಟೆಯನ್ನೂ, ಬೆಣ್ಣೆಯಿಂದ ಮೊಲೆಗಳನ್ನೂ, ನೂಲಿನಿಂದ ಬಾಲವನ್ನೂ, ತಾಮ್ರದಿಂದ ಪೃಷ್ಠಭಾಗವನ್ನೂ, ದರ್ಭೆಯಿಂದ ಕೂದಲುಗಳನ್ನೂ, ಕಂಚಿನಿಂದ ಕೆಚ್ಚಲನ್ನೂ, ಮಾಡಿ, ಘಂಟಾಭರಣಗಳಿಂದಲಂಕರಿಸಿ, ಸುಗಂಧಪುಷ್ಪಧೂಪಾದಿಗಳಿಂದ ವಿಧಿಪೂರ್ವಕವಾಗಿ ಪೂಜಿಸಿ, ಜತೆಯವಸ್ತ್ರವನ್ನು ಹೊದಿಸಿ, ಬ್ರಾಹ್ಮಣನಿಗೆ ಒಪ್ಪಿಸಬೇಕು.

೮–೯. ಗ್ರಹಣ, ಸಂಕ್ರಾಂತಿ, ವ್ಯತೀಪಾತ, ಅಥವಾ ಅಯನದಲ್ಲಿ, ಸಾಧುವಾದ ನಡತೆಯುಳ್ಳವನೂ, ವೇದವೇದಾಂಗಗಳನ್ನರಿತವನೂ ಆದ ಬ್ರಾಹ್ಮಣನನ್ನು ಪೂರ್ವೋಕ್ತವಿಧಿಯಿಂದ ಪೂಜಿಸಿ, ದಕ್ಷಿಣೆಯೊಡನೆ ಹಸುವಿನ

ಸದಕ್ಷಿಣಂ ಚ ಗೋಪುಚ್ಛಂ ದತ್ವಾ ಬ್ರಾಹ್ಮಣಹಸ್ತಕೇ ।
ಇಮಂ ಮಂತ್ರಂ ಸಮುಚ್ಚಾರ್ಯ ತತಸ್ತಾಂ ಪ್ರತಿಪಾದಯೇತ್ ॥ ೯ ॥

ಇಮಾಂ ಗೃಹಾಣ ಭೋವಿಪ್ರ ರುದ್ರರೂಪಾಂ ನಮೋಽಸ್ತು ತೇ ॥ ೧೦ ॥

ರಸಜ್ಞಾ ಸರ್ವಭೂತಾನಾಂ ಸರ್ವದೇವನಮಸ್ಕೃತಾ ।
ಕಾಮಂ ಪೂರಯ ಮೇ ದೇವಿ ರುದ್ರರೂಪೇ ನಮೋಽಸ್ತು ತೇ ॥ ೧೧ ॥

ದತ್ವಾ ಧೇನುಂ ತು ಲವಣೇನೈಕಾಹಂ ಚೈವ ತಿಷ್ಠತಿ ।
ಸ್ವಯಂ ತ್ರಿರಾತ್ರಂ ವಿಪ್ರೇಣ ತಥೈವ ಲವಣಾಶಿನಾ ॥ ೧೨ ॥

ಸಹಸ್ರೇಣ ಶತೇನಾಥ ಸ್ವಶಕ್ತ್ಯಾ ಕನಕೇನ ತು ।
ದತ್ವೇಮಾಂ ಸ್ವರ್ಗಮಾಪ್ನೋತಿ ಯತ್ರದೇವೋ ವೃಷಧ್ವಜಃ ॥ ೧೩ ॥

ಬಾಲವನ್ನು ಆವನ ಕೈಗೆ ಕೊಟ್ಟು, ಮುಂದೆ ಹೇಳುವಂತೆ ಅರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಿ, ಬಳಿಕ ದಾನಮಾಡಬೇಕು

೧೦–೧೧. "ಎಲೈ ಬ್ರಾಹ್ಮಣನೇ, ರುದ್ರರೂಪವಾದ ಈ ಹಸುವನ್ನು ತೆಗೆದುಕೊ, ನಿನಗೆ ನಮಸ್ಕಾರ." ಮತ್ತು "ಸರ್ವಭೂತಗಳ ಸಾರವನ್ನು ಅರಿತಿರುವ ಸರ್ವದೇವನಮಸ್ಕೃತಳಾದ ದೇವಿ, ರುದ್ರರೂಪೇ, ನನ್ನ ಇಷ್ಟಾರ್ಥವನ್ನು ಪೂರ್ತಿಮಾಡು. ನಿನಗೆ ನಮಸ್ಕಾರ."

೧೨. ಲವಣಧೇನುದಾನಮಾಡಿದವನು ಉಪ್ಪನ್ನು ಮಾತ್ರವೇ ತಿಂದು ಒಂದು ದಿನವೂ, ದಾನವನ್ನು ಪಡೆದ ಬ್ರಾಹ್ಮಣನು ಉಪ್ಪನ್ನು ಮಾತ್ರವೇ ತಿಂದು ಮೂರು ರಾತ್ರಿಯೂ ಇರಬೇಕು.

೧೩. ಸಾವಿರ, ನೂರು ಅಥವಾ ತನ್ನ ಶಕ್ತಿಯಿದ್ದಷ್ಟು ಸುವರ್ಣನಾಣ್ಯ ದಕ್ಷಿಣೆಯೊಡನೆ ಲವಣಧೇನುವನ್ನು ದಾನಮಾಡಿದವನು ವೃಷಧ್ವಜನಾದ ದೇವನಿರುವ ಸ್ವರ್ಗವನ್ನೈದುವನು.

ಯ ಇದಂ ಶೃಣುಯಾದ್ಭಕ್ತ್ಯಾ ಶ್ರಾವಯೇದ್ವಾಪಿ ಮಾನವಃ |
ಮುಚ್ಯತೇ ಸರ್ವಪಾಪೇಭ್ಯೋ ರುದ್ರಲೋಕಂ ಚ ಗಚ್ಛತಿ || ೧೪ ||

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಲವಣಧೇನು ದಾನಮಾಹಾತ್ಮ್ಯಂ ನಾಮ ಅಷ್ಟೋತ್ತರಶತತಮೋಧ್ಯಾಯಃ

---

೧೪ ಇದನ್ನು ಭಕ್ತಿಯಿಂದ ಕೇಳುವವರೂ, ಹೇಳುವವರೂ ಎಲ್ಲಾ ಪಾಪಗಳನ್ನೂ ಕಳೆದುಕೊಂಡು, ರುದ್ರಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ:—

ಹೋತೃವು ವಿನೀತಾಶ್ವರಾಜನಿಗೆ ಲವಣಧೇನುದಾನವಿಧಾನ ಮಹಿಮೆಗಳನ್ನು ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಟನೆಯ ಅಧ್ಯಾಯ.

॥ ಶ್ರೀಃ ॥

-X-

ನವಾಧಿಕಶತತಮೋಧ್ಯಾಯಃ

ಅಥ ಕಾರ್ಪಾಸಧೇನುದಾನಮಾಹಾತ್ಮ್ಯಂ

॥ ಹೋತೋವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಧೇನುಂ ಕಾರ್ಪಾಸಕೀಂ ನೃಪ ।
ಯತ್ಪ್ರದಾನಾನ್ನರೋ ಯಾತಿ ಐಂದ್ರಲೋಕಮನುತ್ತಮಂ ॥ ೧ ॥

ವಿಷುವೇ ತ್ವಯನೇ ಪುಣ್ಯೇ ಯುಗಾದಿಗ್ರಹಣೇ ತಥಾ ।
ಗ್ರಹಪೀಡಾಸು ಚೋಗ್ರಾಸು ದುಃಸ್ವಪ್ನೇಽರಿಷ್ಟದರ್ಶನೇ ॥ ೨ ॥

ಪುಣ್ಯೇಷ್ವಾಯತನೇ ರಾಜನ್ ಶುಚಿದೇಶೇ ಗವಾಂಗಣೇ ।
ಗೋಮಯೇನೋಪಲಿಪ್ತಾಯಾಂ ದರ್ಭಾನಾಸ್ತೀರ್ಯ ವೈ ತಿಲಾನ್ ॥ ೩ ॥

ನೂರೊಂಬತ್ತನೆಯ ಅಧ್ಯಾಯ.

ಹತ್ತಿಯ ಹಸುವಿನ ದಾನದ ಮಹಿಮೆ.

೧. ಹೋತೃ—ದೊರೆಯೇ, ಇನ್ನು ಯಾವುದನ್ನು ದಾನಮಾಡುವುದರಿಂದ ಮನುಷ್ಯರು ಉತ್ತಮವಾದ ಇಂದ್ರಲೋಕವನ್ನು ಸೇರಬಹುದೋ ಆ ಹತ್ತಿಯ ಹಸುವಿನ ವಿಚಾರವನ್ನು ಹೇಳುತ್ತೇನೆ.

೨–೪. ಅಯನ ಮತ್ತು ವಿಷುವತ್ ಪುಣ್ಯಕಾಲದಲ್ಲೂ, ಯುಗಾದಿಯಲ್ಲೂ, ಗ್ರಹಣದಲ್ಲೂ, ಕ್ರೂರವಾದ ಗ್ರಹಪೀಡೆಯಲ್ಲಿಯೂ, ದುಃಸ್ವಪ್ನವನ್ನಾಗಲಿ, ಅರಿಷ್ಟವನ್ನಾಗಲಿ ಕಂಡಾಗಲೂ, ಇತರ ಪುಣ್ಯಕಾಲಗಳಲ್ಲೂ, ಮನೆಯಲ್ಲಿ ಶುಚಿಯಾದ ಹಸುವಿನ ಕೊಟ್ಟಿಗೆಯಲ್ಲಾಗಲಿ, ಬೇರೆಕಡೆಯಲ್ಲಾಗಲಿ ಹಸುವಿನ ಸಗಣಿಯಿಂದ ಸಾರಿಸಿದ ನೆಲದಲ್ಲಿ ದರ್ಭೆಯನ್ನೂ, ಅದರ ಮೇಲೆ ಎಳ್ಳನ್ನೂ

ತನ್ಮಧ್ಯೇ ಸ್ಥಾಪಯೇದ್ಧೇನುಂ ವಸ್ತ್ರಮಾಲ್ಯಾನುಲೇಪನಾಂ ॥ ೪ ॥

ಧೂಪದೀಪಾದಿನೈವೇದ್ಯೈಃ ಪೂಜಯೇಚ್ಚ ವಿಮತ್ಸರಃ ॥ ೫ ॥

ಉತ್ತಮಾ ಚ ಚತುರ್ಭಾರೈರರ್ಧೇನೈವ ತು ಮಧ್ಯಮಾ ।
ಭಾರೇಣ ಚಾಧಮಾ ಪ್ರೋಕ್ತಾ ವಿತ್ತಶಾಠ್ಯಂ ವಿವರ್ಜಯೇತ್ ॥ ೬ ॥

ಚತುರ್ಥಾಂಶೇನ ವತ್ಸಂ ತು ಕಲ್ಪಯಿತ್ವಾ ವಿಧಾನತಃ ।
ಕರ್ತವ್ಯಾ ರುಕ್ಮಶೃಂಗೀ ತು ರಜತಸ್ಯ ಖುರಾನ್ವಿತಾ ॥ ೭ ॥

ನಾನಾಫಲಮಯಾ ದಂತಾ ರತ್ನಗರ್ಭಸಮನ್ವಿತಾಃ ।
ಇತ್ಯೇವಂ ಸರ್ವಸಂಪೂರ್ಣಾಂ ಕೃತ್ವಾ ಶ್ರದ್ಧಾಸಮನ್ವಿತಃ ॥ ೮ ॥

ಹರಡಿ, ಅದರ ನಡುವೆ ವಸ್ತ್ರಮಾಲಾಗಂಧಾಲಂಕೃತವಾದ ಹತ್ತಿಯ ಹಸುವನ್ನು ಇಡಬೇಕು.

೫. ಧೂಪ ದೀಪ ನೈವೇದ್ಯಾದಿಗಳಿಂದ ಆಸಕ್ತಿಯೊಡನೆ ಪೂಜಿಸಬೇಕು.

೬. ನಾಲ್ಕುಭಾರ ತೂಕದ ಹತ್ತಿಯಿಂದ ಮಾಡಿದುದು ಉತ್ತಮ, ಎರಡು ಭಾರದಿಂದಾದುದು ಮಧ್ಯಮ, ಒಂದೇಭಾರದಿಂದಾದುದು ಅಧಮ ಎನಿಸಿಕೊಳ್ಳುವುದು. ಹಣದ ವಿಚಾರದಲ್ಲಿ ವಂಚನೆಯನ್ನು ತ್ಯಜಿಸಬೇಕು.

೭. ಹಸುವಿನ ನಾಲ್ಕನೆಯ ಒಂದು ಭಾಗದಷ್ಟಿರುವಂತೆ ಕರುವನ್ನು ರಚಿಸಬೇಕು. ಹಸುವಿಗೆ ಚಿನ್ನದ ಕೊಂಬೂ, ಬೆಳ್ಳಿಯ ಗೊರಸೂ ಇರುವಂತೆ ಮಾಡಬೇಕು.

೮–೯. ಹಸುವಿಗೆ, ಒಳಗೆ ರತ್ನಗಳು ಹುದುಗಿರುವ ಬಗೆ ಬಗೆಯ ಹಣ್ಣುಕಾಯಿಗಳಿಂದ ಹಲ್ಲುಗಳನ್ನು ರಚಿಸಬೇಕು. ಆಸಕ್ತಿಯಿಂದ ಹೀಗೆ ಸರ್ವಸಂಪೂರ್ಣವಾದುದನ್ನಾಗಿ ಮಾಡಿ, ಮಂತ್ರಗಳಿಂದ ಆವಾಹಿಸಿ,

ಆವಾಹಯೇತ್ತಾಂ ಕಾರ್ಪಾಸಧೇನುಂ ಮಂತ್ರೈರ್ದ್ವಿಜಾತಯೇ |
ದದ್ಯಾದ್ಧೇನುಂ ಚರ್ಮಪಾಣಿಃ ಪ್ರಯತಃ ಶ್ರದ್ಧಯಾನ್ವಿತಃ ॥
ಪೂರ್ವೋಕ್ತಸ್ತು ವಿಧಿಃ ಕಾರ್ಯೋ ದಾನಮಂತ್ರಪುರಸ್ಸರಃ ॥ ೯ ॥

ಯಥಾ ದೇವಗಣಸ್ಸರ್ವಸ್ತ್ವಯಾ ಹೀನೋ ನ ವರ್ತತೇ ।
ತಥಾ ಉದ್ಧರ ಮಾಂ ದೇವಿ ಪಾಹಿ ಸಂಸಾರಸಾಗರಾತ್ ॥ ೧೦ ॥

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಕಾರ್ಪಾಸಧೇನುದಾನಮಾಹಾತ್ಮ್ಯಂ ನಾಮ ನವಾಧಿಕಶತತಮೋಽಧ್ಯಾಯಃ

ಪರಿಶುದ್ಧನಾಗಿ ಭಕ್ತಿಯಿಂದ ಬ್ರಾಹ್ಮಣನಿಗೆ ಆ ಹತ್ತಿಯ ಹಸುವನ್ನು ಕೊಡಬೇಕು. ಹಿಂದೆ ಹೇಳಿರುವ ಮಂತ್ರಗಳನ್ನೂ, ವಿಧಿಗಳನ್ನೂ ಈ ದಾನದಲ್ಲಿಯೂ ಉಪಯೋಗಿಸಬೇಕು.

೧೦. ಅಲ್ಲದೆ, "ದೇವಗಣವು ಹೇಗೆ ನಿನ್ನನ್ನು ಬಿಟ್ಟಿರುವುದಿಲ್ಲವೋ ಹಾಗೆಯೇ ನಾನೂ ಬಿಟ್ಟಿರದಂತೆ ನನ್ನನ್ನು ಸಂಸಾರಸಾಗರದಿಂದ ಉದ್ಧರಿಸಿ ರಕ್ಷಿಸು." ಎಂದೂ ಹೇಳಬೇಕು.

ಅಧ್ಯಾಯದ ಸಾರಾಂಶ :—

ಹೋತೃವು ವಿನೀತಾಶ್ವರಾಜನಿಗೆ ಹತ್ತಿಯ ಹಸುವಿನ ದಾನವಿಧಾನವನ್ನೂ ಮಹಿಮೆಯನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

-X-

ದಶಾಧಿಕಶತತಮೋಽಧ್ಯಾಯಃ

ಅಥ ಧಾನ್ಯಧೇನುದಾನಮಾಹಾತ್ಮ್ಯಂ

॥ ಹೋತೋವಾಚ ॥

ಶೃಣು ರಾಜನ್ಪ್ರವಕ್ಷ್ಯಾಮಿ ಧಾನ್ಯಧೇನುಮನುತ್ತಮಾಂ ।
ಯಸ್ಯಾಃ ಸಂಕೀರ್ತನಾದೇವ ಸಾತುಷ್ಯೇತ್ಪಾರ್ವತೀ ಸ್ವಯಂ ॥ ೧ ॥

ವಿಷುವೇ ಚಾಯನೇ ವಾಪಿ ಕಾರ್ತಿಕ್ಯಾಂ ತು ವಿಶೇಷತಃ ।
ಯಾಂ ದತ್ವಾ ಮುಚ್ಯತೇ ಪಾಪಾತ್ ಶಶಾಂಕ ಇವ ರಾಹುಣಾ ॥ ೨ ॥

ದಶಧೇನುಪ್ರಧಾನೇನ ಯತ್ಫಲಂ ರಾಜಸತ್ತಮ ।
ತತ್ಸರ್ವಮೇವ ಪ್ರಾಪ್ನೋತಿ ವ್ರೀಹಿಧೇನುಪ್ರದಾನತಃ ॥ ೩ ॥

ನೂರಹತ್ತನೆಯ ಅಧ್ಯಾಯ

ಧಾನ್ಯದ ಹಸುವಿನ ದಾನದ ಮಹಿಮೆ

೧. ಹೋತೃ—ದೊರೆಯೇ, ಯಾವುದನ್ನು ಚೆನ್ನಾಗಿ ಹೇಳುವುದರಿಂದಲೇ ಆ ಪಾರ್ವತಿಯು(ತಾನೇ)ಒಲಿಯುವಳೋ ಆ ಅತ್ಯುತ್ತಮವಾದ ಧಾನ್ಯಧೇನುವಿನ ವಿಚಾರವನ್ನು ಹೇಳುತ್ತೇನೆ. ಕೇಳು.

೨. ವಿಷುವತ್ಪುಣ್ಯಕಾಲದಲ್ಲಾಗಲಿ, ಅಯನದಲ್ಲಾಗಲಿ, ಕಾರ್ತಿಕ ಮಾಸದ ಹುಣ್ಣಿಮೆಯಲ್ಲಾಗಲಿ, ವ್ರೀಹಿ(ಧಾನ್ಯ)ಧೇನು ದಾನಮಾಡುವುದರಿಂದ ಚಂದ್ರನು ರಾಹುವಿನಿಂದ ಬಿಡುಗಡೆಯನ್ನು ಹೊಂದುವಂತೆ ದಾನಿಯು ಪಾಪದಿಂದ ಬಿಡುಗಡೆಯನ್ನು ಹೊಂದುವನು.

೩. ರಾಜೋತ್ತಮನೇ, ಹತ್ತು ಹಸುಗಳನ್ನು ದಾನಮಾಡು ವುದರಿಂದುಂಟಾಗುವ ಫಲವು ಒರದು ಬತ್ತದ ಹಸುವನ್ನು ದಾನ ಮಾಡುವುದರಿಂದ ಉಂಟಾಗುವುದು.

ಕೃಷ್ಣಾಜಿನಂ ತತಃ ಕೃತ್ವಾ ಪ್ರಾಗ್ಗ್ರತ್ನಂಸ್ಥಾಪಯೇದ್ಬುಧಃ ।
ಗೋಮಯೇನಾನುಲಿಪ್ತಾಯಾಂ ಭೂಮೌ ತಾಂ ಪರಿಪೂಜಯೇತ್ ॥ ೪ ॥

ಉತ್ತಮಾ ತು ಭವೇದ್ಧೇನುಃ ದ್ರೋಣೈಶ್ಚಾಪಿ ಚತುಷ್ಪಯೈಃ ।
ಮಧ್ಯಮಾ ಚ ತದರ್ಧೇನ ವಿತ್ತಶಾಠ್ಯಂ ನ ಕಾರಯೇತ್ ॥ ೫ ॥

ಚತುರ್ಥಾಂಶೇನ ವತ್ಸಂ ತು ಕಲ್ಪಯಿತ್ವಾ ವಿಧಾನತಃ ।
ಅಂಗಂ ತು ಪೂರ್ವವತ್ಕಾರ್ಯಂ ಮುಖಂ ಕ್ಷೌದ್ರಮಯಂ ಶುಭಂ ॥ ೬ ॥

ಪೂರ್ವವಚ್ಚಾರ್ಚಯಿತ್ವಾ ತಾಂ ಕೃತ್ವಾ ದೀಪಾರ್ಚನಾದಿಕಂ ।
ಪುಣ್ಯಕಾಲಂ ಚ ಸಂಪ್ರಾಪ್ಯ ಸ್ನಾತಃ ಶುಕ್ಲಾಂಬರೋ ಗೃಹೀ ॥ ೭ ॥

ತ್ರಿಃ ಪ್ರದಕ್ಷಿಣಮಾವೃತ್ಯ ದಂಡವತ್ಪ್ರಣಮೇಚ್ಚ ತಾಂ ॥ ೮ ॥

---

೪. ಹಸುವಿನ ಸಗಣಿಯಿಂದ ಸಾರಿಸಿದ ನೆಲದಲ್ಲಿ ಹಿಂದಿನಂತೆ ಕೃಷ್ಣಾಜಿನವನ್ನು ಹಾಸಿ, ಅದರಮೇಲೆ ಧಾನ್ಯಧೇನುವನ್ನು ಇಟ್ಟು ಅದನ್ನು ಪೂಜಿಸಬೇಕು.

೫. ನಾಲ್ಕು ದ್ರೋಣಧಾನ್ಯದಿಂದ ರಚಿಸುವ ಧೇನುವು ಉತ್ತಮ ಅದರ ಅರ್ಧದಿಂದ ರಚಿಸುವುದು ಮಧ್ಯಮ ಆ ವಿಚಾರದಲ್ಲಿ ದ್ರವ್ಯಲೋಭವಿರಬಾರದು.

೬. ಹಸುವನ್ನು ರಚಿಸುವುದರಲ್ಲಿ ನಾಲ್ಕನೆಯ ಒಂದಂಶಧಾನ್ಯದಿಂದ ಕರುವನ್ನು ವಿಧಿಪೂರ್ವಕವಾಗಿ ರಚಿಸಿ, ಅವುಗಳ ಇತರ ಅಂಗಗಳನ್ನು ಹಿಂದೆ ಹೇಳಿರುವಂತೆಯೇ ಮಾಡಿ, ಬಾಯನ್ನು ಮಾತ್ರ ಜೇನುತುಪ್ಪದಿಂದ ಶುಭಕರವಾಗಿ ಮಾಡಬೇಕು.

೭-೮. ಪುಣ್ಯಕಾಲವನ್ನು ನೋಡಿ, ಸ್ನಾನಮಾಡಿ, ಶುದ್ಧವಾದ ಬಿಳಿಯ ಬಟ್ಟೆಯನ್ನು ಧರಿಸಿ, ದಾನಿಯಾದ ಗೃಹಸ್ಥನು ಆ ಧಾನ್ಯಧೇನುವನ್ನು ಹಿಂದಿನಂತೆಯೇ ದೀಪಾದಿಗಳಿಂದ ಪೂಜಿಸಿ, ಮೂರುಸಾರಿ ಪ್ರದಕ್ಷಿಣಮಾಡಿ, ದಂಡಪ್ರಣಾಮವನ್ನು ಮಾಡಬೇಕು.

ತ್ವಂ ಹಿ ವಿಪ್ರ ಮಹಾಭಾಗೆ ವೇದವೇದಾಂಗಪಾರಗ ।
ಮಯಾ ದತ್ತಾಂ ಚ ಗೃಹ್ಣೀಷ್ವ ಪ್ರಸೀದ ತ್ವಂ ದ್ವಿಜೋತ್ತಮ ॥
ಪ್ರೀಯತಾಂ ಮಮ ದೇವೇಶೋ ಭಗವಾನ್ಮಧುಸೂದನಃ ॥ ೯ ॥

ಯಾ ಚ ಲಕ್ಷ್ಮೀಸ್ತು ಗೋವಿಂದೇ ಸ್ವಾಹಾ ಯಾ ಚ ವಿಭಾವಸೌ ।
ಶಕ್ರೇ ಶಚೀತಿ ವಿಖ್ಯಾತಾ ಶಿವೇ ಗೌರೀತಿ ಸುಸ್ಥಿತಾ ॥ ೧೦ ॥

ಗಾಯತ್ರೀ ಬ್ರಹ್ಮಣಃ ಪ್ರೋಕ್ತಾ ಜ್ಯೋತ್ಸ್ನಾ ಚಂದ್ರೇ ರವೇಃ ಪ್ರಭಾ ।
ಬುದ್ಧಿರ್ಬೃಹಸ್ಪತೇಃ ಖ್ಯಾತಾ ಮೇಧಾ ಮುನಿಷು ಸತ್ತಮಾ ॥ ೧೧ ॥

ತಸ್ಮಾತ್ಸರ್ವಮಯೀ ದೇವೀ ಧಾನ್ಯರೂಪೇಣ ಸಂಸ್ಥಿತಾ ।
ಏವಮುಚ್ಚಾರ್ಯ ತಾಂ ಧೇನುಂ ಬ್ರಾಹ್ಮಣಾಯ ನಿವೇದಯೇತ್ ॥೧೨ ॥

---

೯. "ವೇದ ವೇದಾಂಗ ಪಾರಂಗತನೇ, ಪೂಜ್ಯನಾದ ಬ್ರಾಹ್ಮಣನೇ, ನಾನು ಕೊಡುವ ಧೇನುವನ್ನು ನೀನು ತೆಗೆದುಕೋ. ದ್ವಿಜೋತ್ತಮನೇ, ಭಗವಂತನೂ, ದೇವೇಶನೂ ಆದ ವಿಷ್ಣುವು ನನಗೊಲಿಯಲಿ.

೧೦–೧೨. ವಿಷ್ಣುವಿನಲ್ಲಿ ಲಕ್ಷ್ಮಿಯಾಗಿಯೂ, ಸೂರ್ಯನಲ್ಲಿ ಸ್ವಾಹಾ ದೇವಿಯಾಗಿಯೂ, ಇಂದ್ರನಲ್ಲಿ ಶಚಿಯೆಂದು ಪ್ರಸಿದ್ಧಳಾಗಿಯೂ, ಶಿವನಲ್ಲಿ ಗೌರಿಯೆಂಬ ಹೆಸರಿನಿಂದಲೂ, ಬ್ರಹ್ಮನಲ್ಲಿ ಗಾಯತ್ರಿ(ಸರಸ್ವತಿ)ಯಾಗಿಯೂ, ಚಂದ್ರನಲ್ಲಿ ಜ್ಯೋತ್ಸ್ನೆಯಾಗಿಯೂ, ರವಿಯಲ್ಲಿ ಪ್ರಭೆಯಾಗಿಯೂ, ಬೃಹಸ್ಪತಿಯಲ್ಲಿ ಬುದ್ಧಿಯಾಗಿಯೂ, ಮುನಿಗಳಲ್ಲಿ ಮೇಧೆಯಾಗಿಯೂ ಇದ್ದು, ಹೀಗೆ ಸರ್ವಮಯಿಯಾಗಿರುವ ದೇವಿಯು ಇಲ್ಲಿ ಧಾನ್ಯರೂಪದಿಂದಿರುವಳು" ಎಂಬರ್ಥವುಳ್ಳ ಮೇಲಿನ ಶ್ಲೋಕವನ್ನು ಹೇಳಿ ಆ ಧೇನುವನ್ನು ಬ್ರಾಹ್ಮಣನಿಗೆ ಒಪ್ಪಿಸಬೇಕು.

ದತ್ವಾ ಪ್ರದಕ್ಷಿಣಂ ಕೃತ್ವಾ ತಂ ಕ್ಷಮಾಪ್ಯ ದ್ವಿಜೋತ್ತಮಂ ।
ಯಾವಚ್ಚ ಪೃಥಿವೀ ಸರ್ವಾ ವಸುರತ್ನಾನಿ ಭೂಪತೇ ॥
ತಾವತ್ಪುಣ್ಯಂ ಸಮಧಿಕಂ ವ್ರೀಹಿಧೇನೋಶ್ಚ ತತ್ಫಲಂ ॥ ೧೩ ॥

ತಸ್ಮಾನ್ನರೇಂದ್ರ ದಾತವ್ಯಾ ಭುಕ್ತಿಮುಕ್ತಿಫಲಪ್ರದಾ ॥ ೧೪ ॥

ಇಹ ಲೋಕೇ ಚ ಸೌಭಾಗ್ಯಮಾಯುರಾರೋಗ್ಯವರ್ಧನಂ ॥ ೧೫ ॥

ವಿಮಾನೇನಾರ್ಕವರ್ಣೇನ ಕಿಂಕಿಣೀಜಾಲಮಾಲಿನಾ ।
ಸ್ತೂಯಮಾನೋಽಪ್ಸರೋಭಿಶ್ಚ ಸ ಯಾತಿ ಶಿವಮಂದಿರಂ ॥ ೧೬ ॥

ಯಾವಚ್ಚ ಸ್ಮರತೇ ಜನ್ಮ ತಾವತ್ಸ್ವರ್ಗೇ ಮಹೀಯತೇ ।
ತತಃ ಸ್ವರ್ಗಾತ್ಪರಿಭ್ರಷ್ಟೋ ಜಂಬೂದ್ವೀಪಪತಿರ್ಭವೇತ್ ॥ ೧೭ ॥

---

೧೩. ದೊರೆಯೇ, ದಾನವನ್ನು ಕೊಟ್ಟು, ಆ ಬ್ರಾಹ್ಮಣೋತ್ತಮನನ್ನು ಪ್ರದಕ್ಷಿಣಮಾಡಿ ನಮಸ್ಕರಿಸಿ, ಕ್ಷಮಾಪಣೆಯನ್ನು ಬೇಡಬೇಕು. ಈ ಪೃಥ್ವಿಯೆಲ್ಲವೂ ಸ್ವರ್ಣರತ್ನಗಳೂ ಇರುವವರೆಗೂ ಧಾನ್ಯಧೇನುದಾನದ ಪುಣ್ಯವಿರುವುದು.

೧೪. ರಾಜನೇ, ಆದುದರಿಂದ ಭುಕ್ತಿಮುಕ್ತಿಫಲವನ್ನು ಕೊಡುವ ಧಾನ್ಯಧೇನುವನ್ನು ದಾನಮಾಡಬೇಕು.

೧೫. "ಬತ್ತದ ಹಸುವಿನ ದಾನವು ಈ ಲೋಕದಲ್ಲಿ ಸೌಭಾಗ್ಯಾಯುರಾರೋಗ್ಯ ವರ್ಧಕವಾದುದು.

೧೬. ದಾನಮಾಡುವವನು, ಸೂರ್ಯನಂತೆ ಹೊಳೆಯುತ್ತ ಕಿರುಗಂಟೆಗಳ ಮಾಲೆಯಿಂದೊಪ್ಪುವ ವಿಮಾನದಲ್ಲಿ ಅಪ್ಸರರಿಂದ ಹೊಗಳಿಸಿಕೊಳ್ಳುತ್ತ ಕೈಲಾಸಕ್ಕೆ ಹೋಗುವನು.

೧೭. ಮತ್ತೆ ಜನ್ಮವು ಬೇಕೆಂದುಕೊಳ್ಳುವವರೆಗೂ ಸ್ವರ್ಗದಲ್ಲಿ ಮಹಿಮೆಯನ್ನು ಪಡೆಯುವನು. ಬಳಿಕ ಸ್ವರ್ಗದಿಂದ ಹೊರಟು ಜಂಬೂದ್ವೀಪಕ್ಕೆ ಒಡೆಯನಾಗುವನು."

ಏವಂ ಹರೇಣ ಚೋದ್ಗೀರ್ಣಂ ಶ್ರುತ್ವಾವಾಕ್ಯಂ ನರೋತ್ತಮಃ ।
ಸರ್ವಪಾಪವಿಶುದ್ಧಾತ್ಮಾ ರುದ್ರಲೋಕೇ ಮಹೀಯತೇ ॥ ೧೮ ॥

ಇತಿ ಶ್ರೀ ವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಧಾನ್ಯ ಧೇನುದಾನಮಾಹಾತ್ಮ್ಯಂ ನಾಮ ದಶಾಧಿಕಶತತಮೋಽಧ್ಯಾಯಃ

---

೧೮. ಹೀಗೆಂಬುದಾಗಿ ಶಿವನೂ ಹೇಳಿರುವುದನ್ನು ಕೇಳುವ ಉತ್ತಮ ಮನುಷ್ಯನು ಸರ್ವಪಾಪಗಳನ್ನೂ ಕಳೆದುಕೊಂಡು, ಪರಿಶುದ್ಧನಾಗಿ ರುದ್ರಲೋಕದಲ್ಲಿ ಗೌರವವನ್ನು ಪಡೆಯುವನು.

ಅಧ್ಯಾಯದ ಸಾರಾಂಶ :—

ಹೋತೃವು ವಿನೀತಾಶ್ವರಾಜನಿಗೆ ಧಾನ್ಯಧೇನು ದಾನದ ಕ್ರಮವನ್ನೂ, ಮಹಿಮೆಯನ್ನೂ, ಅದರ ಫಲವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಹತ್ತನೆಯ ಅಧ್ಯಾಯ.

|| ಶ್ರೀಃ ||

-X-

ಏಕಾದಶಾಧಿಕಶತತಮೋಽಧ್ಯಾಯಃ

ಅಥ ಕಪಿಲಾಧೇನುದಾನಮಾಹಾತ್ಮ್ಯಂ

|| ಹೋತೋವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಕಪಿಲಾಂ ಧೇನುಮುತ್ತಮಾಂ ।
ಯತ್ಪ್ರದಾನಾನ್ನರೋ ಯಾತಿ ವಿಷ್ಣುಲೋಕಮನುತ್ತಮಂ || ೧ ||

ಪೂರ್ವೋಕ್ತೇನ ವಿಧಾನೇನ ದದ್ಯಾದ್ಧೇನುಂ ಸವತ್ಸಕಾಂ ।
ಸರ್ವಾಲಂಕಾರಸಂಯುಕ್ತಾಂ ಸರ್ವರತ್ನಸಮನ್ವಿತಾಂ || ೨ ||

ಕಪಿಲಾಯಾಃ ಶಿರೋ ಗ್ರೀವಾ ಸರ್ವತೀರ್ಥಾನಿ ಭಾಮಿನಿ ।
ಪಿತಾಮಹನಿಯೋಗಾಚ್ಚ ನಿವಸಂತಿ ಹಿ ನಿಶ್ಚಯಃ || ೩ ||

ನೂರಹನ್ನೊಂದನೆಯ ಅಧ್ಯಾಯ

ಕಪಿಲವರ್ಣದ ಹಸುವಿನ ದಾನದಮಹಿಮೆ

೧. ಹೋತೃ—ಇನ್ನು ಉತ್ತಮವಾದ ಕಪಿಲವರ್ಣದ ಹಸುವಿನ ದಾನವನ್ನು ಹೇಳುತ್ತೇನೆ. ಆ ದಾನದಿಂದ ಮನುಷ್ಯನು ಅತ್ಯುತ್ತಮವಾದ ವಿಷ್ಣುಲೋಕವನ್ನು ಸೇರುವನು.

೨. ಸರ್ವರತ್ನಾಲಂಕಾರವುಳ್ಳದಾಗಿ ಕರುವಿನಿಂದೊಡಗೂಡಿದ ಹಸುವನ್ನು ಪೂರ್ವದಲ್ಲಿ ಹೇಳಿದ ವಿಧಿಯಿಂದ ದಾನಮಾಡಬೇಕು.

೩. ಕಪಿಲವರ್ಣದ ಹಸುವಿನ ತಲೆಕೊರಳುಗಳಲ್ಲಿ ಬ್ರಹ್ಮನ ಆಜ್ಞೆಯಿಂದ ನಿಜವಾಗಿಯೂ ಸರ್ವತೀರ್ಥಗಳೂ ಇವೆ.

ಪ್ರಾತರುತ್ಥಾಯ ಯೋ ಮರ್ತ್ಯಃ ಕಪಿಲಾಗಲಮಸ್ತಕಾತ್ ।
ಚ್ಯುತಂ ತು ಭಕ್ತ್ಯಾ ಪಾನೀಯಂ ಶಿರಸಾ ವಂದತೇ ಶುಚಿಃ ॥
ಸ ತೇನ ಪುಣ್ಯತೋಯೇನ ತತ್ಕ್ಷಣಾದ್ದಗ್ಧಕಿಲ್ಬಿಷಃ ॥ ೪ ॥

ತ್ರಿಂಶದ್ವರ್ಷಕೃತಂ ಪಾಪಂ ದಹತ್ಯಗ್ನಿರಿವೇಂಧನಂ ॥ ೫ ॥

ಕಲ್ಯಮುತ್ಥಾಯ ಯೋ ಮರ್ತ್ಯಃ ಕುರ್ಯಾತ್ತಾಸಾಂ ಪ್ರದಕ್ಷಿಣಂ ।
ಪ್ರದಕ್ಷಿಣೀಕೃತಾ ತೇನ ಪೃಥಿವೀ ಸ್ಯಾದ್ವಸುಂಧರೇ ॥ ೬ ॥

ಪ್ರದಕ್ಷಿಣೇನ ಚೈಕೇನ ಶ್ರದ್ಧಾಯುಕ್ತೇನ ತತ್ಕ್ಷಣಾತ್ ।
ದಶಜನ್ಮಕೃತಂ ಪಾಪಂ ತಸ್ಯ ನಶ್ಯತ್ಯಸಂಶಯಂ ॥ ೭ ॥

ಕಪಿಲಾಯಾಸ್ತು ಮೂತ್ರೇಣ ಸ್ನಾಯೋಚ್ಚೈವ ಶುಚಿವ್ರತಃ ।
ಸ ಗಂಗಾದಿಷು ತೀರ್ಥೇಷು ಸ್ನಾತೋ ಭವತಿ ಮಾನವಃ ॥ ೮ ॥

---

೪. ಬೆಳಗ್ಗೆ ಎದ್ದು ಶುಚಿಯಾಗಿ ಕಪಿಲವರ್ಣದ ಹಸುವಿನ ಕೊರಳುತಲೆಗಳಿಂದ ತೊಟ್ಟಿಕ್ಕುವ ನೀರನ್ನು ತಲೆಯಲ್ಲಿ ಧರಿಸುವವನು ಆ ಪವಿತ್ರವಾದ ನೀರಿನಿಂದ ಒಡನೆಯೇ ಪಾಪಗಳನ್ನು ಕಳೆದುಕೊಳ್ಳುವನು.

೫. ಆ ನೀರು ಮೂವತ್ತುವರ್ಷಗಳ ಪಾಪವನ್ನೂ, ಬೆಂಕಿಯು ಸೌದೆಯನ್ನು ಸುಡುವಂತೆ ಸುಟ್ಟುಬಿಡುವುದು.

೬. ಬೆಳಗ್ಗೆ ಎದ್ದು ಗೋಪ್ರದಕ್ಷಿಣೆ ಮಾಡಿದರೆ ಭೂಪ್ರದಕ್ಷಿಣ ಮಾಡಿದಂತಾಗುವುದು.

೭. ಆಸಕ್ತಿಯಿಂದ ಒಂದುಸಾರಿ ಗೋಪ್ರದಕ್ಷಿಣ ಮಾಡಿದವನ ಹತ್ತುಜನ್ಮಗಳ ಪಾಪವೂ ಕ್ಷಣಮಾತ್ರದಲ್ಲಿ ಸಂಶಯವಿಲ್ಲದೆ ನಾಶವಾಗುವುದು.

೮. ಶುಚಿರ್ಭೂತನಾಗಿ ನಿಯಮದಿಂದ ಕಪಿಲವರ್ಣದ ಹಸುವಿನ ಗಂಜಲದಿಂದ ಸ್ನಾನಮಾಡಿದರೆ ಗಂಗಾದಿತೀರ್ಥಗಳಲ್ಲಿ ಸ್ನಾನಮಾಡಿದಂತಾಗುವುದು.

ತೇನ ಸ್ನಾನೇನ ಚೈಕೇನ ಭಾವಯುಕ್ತೇನ ವೈ ನರಃ ।
ಯಾವಜ್ಜೀವಕೃತಾತ್ಪಾಪಾತ್ ಮುಚ್ಯತೇ ನಾತ್ರಸಂಶಯಃ ॥ ೯ ॥

*ಗವಾಮಾಸ್ಥಿತಿತೋಪ್ಯೇತನ್ಮೂತ್ರಗಂಧಂನ ದೂಷಯೇತ್ ।
ಯಾವಜ್ಜಿಘ್ರತಿ ತಂ ಗಂಧಂ ತಾವತ್ಪುಣ್ಯೈಸ್ತು ಪೂರ್ಯತೇ ॥ ೧೦ ॥

ಗೋಸಹಸ್ರಂ ಚ ಯೋ ದದ್ಯಾದೇಕಾಂ ವಾ ಕಪಿಲಾಂ ನರಃ ।
ಸಮಮೇತತ್ಪುರಾ ಪ್ರಾಹ ಬ್ರಹ್ಮಾ ಲೋಕಪಿತಾಮಹಃ ॥ ೧೧ ॥

ಗವಾಂ ಕಂಡೂಯನಂ ಶ್ರೇಷ್ಠಂ ತಥಾ ಚ ಪರಿಪಾಲನಂ ।
ತುಲ್ಯಂ ಗೋಶತದಾನಸ್ಯ ಭಯರೋಗಾದಿಪಾಲನೇ ॥ ೧೨ ॥

ತೃಣೋದಕಾನಿ ಯೋ ದದ್ಯಾತ್ ಕ್ಷುಧಿತೇನ ಗವಾಹ್ನಿಕಂ ।
ಗೋಮೇಧಸ್ಯ ಫಲಂ ದಿವ್ಯಂ ಲಭತೇ ಮಾನವೋತ್ತಮಃ ॥ ೧೩ ॥

---

೯. ಮನಃ ಪೂರ್ವಕವಾಗಿ ಈ ಗಂಜಲದಿಂದ ಒಂದುಸಾರಿ ಸ್ನಾನ ಮಾಡುವವನು ತನ್ನ ಜೀವಿತಕಾಲದಲ್ಲಿ ಮಾಡಿದ ಪಾಪವನ್ನೆಲ್ಲಾ ಕಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

೧೦. ಹಸುಗಳಿರುವುದರಿಂದುಂಟಾಗುವ ಅವುಗಳ ಗಂಜಲದ ವಾಸನೆಯನ್ನು ದೂಷಿಸಬಾರದು. ಆ ವಾಸನೆಯನ್ನು ಸೇವಿಸುತ್ತಿರುವವರೆಗೂ ಮನುಷ್ಯನು ಪುಣ್ಯಪೂರ್ಣನಾಗುವನು.

೧೧. "ಕಪಿಲವರ್ಣದ ಒಂದು ಹಸುವನ್ನು ದಾನಮಾಡುವುದೂ ಬೇರೆಯ ಬಣ್ಣದ ಸಾವಿರ ಹಸುಗಳನ್ನು ದಾನಮಾಡುವುದೂ, ಒಂದೇ" ಎಂದು ಲೋಕಪಿತಾಮಹನಾದ ಬ್ರಹ್ಮನು ಹಿಂದೆಯೇ ಹೇಳಿದ್ದಾನೆ.

೧೨. ಹಸುಗಳನ್ನು ತುರಿಸುವುದೂ, ಭಯರೋಗಾದಿಗಳಲ್ಲಿ ಅವನು ಪರಿಪಾಲಿಸುವುದೂ ಉತ್ತಮವಾದುದು. ನೂರು ಗೋದಾನಕ್ಕೆ ಸಮವಾದುದು.

೧೩. ಹಸಿದ ಹಸುವಿಗೆ ಹುಲ್ಲು ನೀರನ್ನು ಒಂದುದಿನ ಕೊಡುವ ಉತ್ತಮನು ಗೋಮೇಧದ ದಿವ್ಯಫಲವನ್ನು ಪಡೆಯುವನು.

---

* ಗವಾಮುಸ್ಥಿತತೋಪ್ಯೇತನ್ಮೃತಗಂಧೇ.

ವಿಮಾನೈರ್ವಿವಿಧೈರ್ದಿವ್ಯೈಃ ಕನ್ಯಾಭಿರಭಿತೋರ್ಪಿತೈಃ ।
ಸೇವ್ಯಮಾನಸ್ಸುಗಂಧೈರ್ವಾ ದೀಪ್ಯಮಾನ ಇವಾಗ್ನಯಃ ॥ ೧೪ ॥

ಸುವರ್ಣಕಪಿಲಾ ಪೂರ್ವಂ ದ್ವಿತೀಯಾ ಗೌರಪಿಂಗಲಾ ।
ತೃತೀಯಾ ಚೈವ ರಕ್ತಾಕ್ಷೀ ಚತುರ್ಥೀ ಗುಡಪಿಂಗಲಾ ॥ ೧೫ ॥

ಪಂಚಮೀ ಬಹುವರ್ಣಾಸ್ಯಾತ್ ಷಷ್ಠೀ ಚ ಶ್ವೇತಪಿಂಗಲಾ ।
ಸಪ್ತಮೀ ಶ್ವೇತಪೀಗಾಕ್ಷೀ ತ್ವಷ್ಟಮೀ ಕೃಷ್ಣಪಿಂಗಲಾ ॥ ೧೬ ॥

ನವಮೀ ಪಾಟಲಾ ಜ್ಞೇಯಾ ದಶಮೀ ಪುಚ್ಛಪಿಂಗಲಾ ।
ಏಕಾದಶೀ ಖುರಶ್ವೇತಾ ಶ್ವೇತಾಸಾಂ ಸರ್ವಲಕ್ಷಣಾಃ ॥ ೧೭ ॥

---

೧೪. ಗೋಪಾಲನಮಾಡಿದವನು ಸುಗಂಧವುಳ್ಳ ಬಗೆ ಬಗೆಯಾದ ದಿವ್ಯವಿಮಾನಗಳಲ್ಲಿ ಕನ್ನೆಯರಿಂದ ಸುತ್ತಲೂ ಸೇವಿಸಲ್ಪಡುವನಾಗಿ ಅಗ್ನಿಯಂತೆ ಹೊಳೆಯುವನು.

೧೫. ಸುವರ್ಣದಂತೆ, ಕಪಿಲವರ್ಣದ ಹಸುವು ದಾನಕ್ಕೆ ಉತ್ತಮವಾದುದು. ಪಿಂಗಳ(ಗೋರೋಚನ)ವರ್ಣವಿಲ್ಲದ ಹಸುವು ಎರಡನೆಯದು. ಕೆಂಪುಕಣ್ಣುಳ್ಳ ಹಸುವು ಮೂರನೆಯದು. ಬೆಲ್ಲದಂತೆ ಸ್ವಲ್ಪಪಿಂಗಳವರ್ಣದ್ದು ನಾಲ್ಕನೆಯದು.

೧೬. ಹಲವು ಬಣ್ಣಗಳುಳ್ಳದು ಐದನೆಯದು. ಬೆಳ್ಳಗೂ, ಗೋರೋಚನ ವರ್ಣದಿಂದಲೂ ಇರುವುದು ಆರನೆಯದು. ಬಿಳುಪು ಮತ್ತು ಪಿಂಗಳವರ್ಣಗಳ ಕಣ್ಣುಳ್ಳದು ಏಳನೆಯದು. ಕಪ್ಪು ಮತ್ತು ಗೋರೋಚನ ಬಣ್ಣದ ಕಣ್ಣಿನದು ಎಂಟನೆಯದು.

೧೭. ಪಾದರಿಹೂವಿನ ಬಣ್ಣದ ಹಸುವು ದಾನಕ್ಕೆ ಒಂಬತ್ತನೆಯದು. ಗೋರೋಚನ ವರ್ಣದ ಬಾಲವುಳ್ಳದು ಹತ್ತನೆಯದು. ಬಿಳಿಯ ಗೊರಸಿನದು ಹನ್ನೊಂದನೆಯದು. ದಾನಯೋಗ್ಯವಾದ ಹಸುಗಳ ಸರ್ವಲಕ್ಷಣಗಳು ಇವು.

ಸರ್ವಲಕ್ಷಣಸಂಯುಕ್ತಾ ಸರ್ವಾಲಂಕೃತಸುಂದರೀ ।
ಬ್ರಾಹ್ಮಣಾಯ ಪ್ರದಾತವ್ಯಾ ಭುಕ್ತಿಮುಕ್ತಿಪ್ರದಾಯಿನೀ ॥ ೧೮ ॥

ಭುಕ್ತಿಮುಕ್ತಿಪ್ರದಾ ತೇಷಾಂ ವಿಷ್ಣುಮಾರ್ಗಪ್ರದಾಯಿನೀ ॥ ೧೯ ॥

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಕಪಿಲಾದಾನ ಮಾಹಾತ್ಮ್ಯಂ ನಾಮ ಏಕಾದಶಾಧಿಕಶತತಮೋಽಧ್ಯಾಯಃ

೧೮–೧೯. ಇವುಗಳಲ್ಲಿ ಸರ್ವಲಕ್ಷಣ ಸಂಯುಕ್ತವಾಗಿ, ಸುಂದರವಾಗಿ, ಅಲಂಕೃತವಾಗಿ, ಭುಕ್ತಿಮುಕ್ತಿ ಪ್ರದಾಯಕವಾಗಿರುವ ಹಸುವನ್ನು ಬ್ರಾಹ್ಮಣನಿಗೆ ಕೊಡಬೇಕು. ಅದೇ, ದಾನಿಗಳಿಗೆ ವಿಷ್ಣುಮಾರ್ಗವನ್ನು ತೋರಿಸುವುದು.

ಅಧ್ಯಾಯದ ಸಾರಾಂಶ :—

ಹೋತೃವು ವಿನೀತಾಶ್ವನಿಗೆ ಹೇಳಿದ ಕಪಿಲವರ್ಣದ ಗೋದಾನದ ಮಹಿಮೆಯನ್ನು ಶ್ರೀವರಾಹನು, ಭೂದೇವಿಗೆ ತಿಳಿಸುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರ ಹನ್ನೊಂದನೆಯ ಅಧ್ಯಾಯ.

॥ ಶ್ರೀಃ ॥

-X-

ದ್ವಾದಶಾಧಿಕಶತತಮೋಽಧ್ಯಾಯಃ

ಅಥೋಭಯತೋಮುಖೀ ಗೋದಾನ ಹೇಮಕುಂಭದಾನ ಪುರಾಣ ಪ್ರಶಂಸಾ

॥ ಹೋತೋವಾಚ ॥

ಅತಃ ಪರಂ ಮಹಾರಾಜ ಶೃಣೂಭಯಮುಖೀಂ ತತಃ ।
ವಿಧಾನಂ ತದ್ವರಾಹೇಣ ಧರಣ್ಯಾಃ ಕಥಿತಂ ಪುರಾ ॥ ೧ ॥
ತದಹಂ ಸಂಪ್ರವಕ್ಷ್ಯಾಮಿ ತವ ಪುಣ್ಯಫಲಂ ಮಹತ್ ॥ ೨ ॥

॥ ಧರಣ್ಯುವಾಚ ॥

ಯಾ ತ್ವಯಾ ಕಪಿಲಾ ಪ್ರೋಕ್ತಾ ಪೂರ್ವಮುತ್ಪಾದಿತಾ ಪ್ರಭೋ ।
ಹೋಮಧೇನುಃ ಸದಾ ಪುಣ್ಯಾ ಸಾಜ್ಞೇಯಾ ಕತಿಲಕ್ಷಣಾ ॥
ಕಿಯತ್ಯಃ ಕಪಿಲಾಃಪ್ರೋಕ್ತಾ ಸ್ವಯಮೇವ ಸ್ವಯಂಭುವಾ ॥ ೩ ॥

ನೂರಹನ್ನೆರಡನೆಯ ಅಧ್ಯಾಯ

ಎರಡುಕಡೆ ಮುಖವುಳ್ಳ ಗೋದಾನ ಸುವರ್ಣ ಕುಂಭದಾನ ಪುರಾಣಗಳ ಪ್ರಶಂಸೆ

೧-೨. ಹೋತೃ—ಮಹಾರಾಜ (ವಿನೀತಾಶ್ವ), ಇನ್ನು ಶ್ರೀವರಾಹನು ಹಿಂದೆ ಭೂದೇವಿಗೆ ಹೇಳಿದ ಮಹಾಪುಣ್ಯಫಲಪ್ರದವಾದ, ಎರಡುಕಡೆಯೂ ಮುಖವುಳ್ಳ ಗೋದಾನದ ವಿಧಾನವನ್ನು ನಿನಗೆ ಹೇಳುತ್ತೇನೆ.

೩-೪. ಭೂದೇವಿ—ಪ್ರಭುವೇ, ಜಗದ್ಗುರುವೇ, ಬ್ರಹ್ಮನು ತಾನೇ ಸೃಷ್ಟಿಸಿದ ಸದಾ ಪವಿತ್ರವಾದ ಕಪಿಲೆಯೆನಿಸಿಕೊಳ್ಳುವ ಆ ಹೋಮಧೇನುವಿನ ಲಕ್ಷಣಗಳೆಷ್ಟು ? ಎಷ್ಟು ಹಸುಗಳು ಕಪಿಲೆಯೆನಿಸಿಕೊಳ್ಳುವುವು ? ಮಾಧವಾ,

ಪ್ರಸೂಯಮಾನಾದಾನೇನ ಕಿಂ ಪುಣ್ಯಂ ಸ್ಯಾಚ್ಚ ಮಾಧವ ।
ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ಜಗದ್ಗುರೋ ॥ ೪ ॥

॥ ಶ್ರೀ ವರಾಹ ಉವಾಚ ॥

ಶೃಣುಷ್ವ ದೇವಿ ತತ್ತ್ವೇನ ಪವಿತ್ರಂ ಪಾಪನಾಶನಂ ।
ಯಚ್ಛ್ರುತ್ವಾ ಸರ್ವಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ೫ ॥

ಕಪಿಲಾ ಹ್ಯಗ್ನಿಹೋತ್ರಾರ್ಥೇ ಯಜ್ಞಾರ್ಥೇ ಚ ವರಾನನೇ ।
ಉದ್ಧೃತ್ಯ ಸರ್ವತೇಜೋಭಿಃ ಬ್ರಹ್ಮಣಾ ನಿರ್ಮಿತಾ ಪುರಾ ॥ ೬ ॥

ಪವಿತ್ರಾಣಾಂ ಪವಿತ್ರಂ ಚ ಮಂಗಳಾನಾಂ ಚ ಮಂಗಳಂ ।
ಪುಣ್ಯಾನಾಂ ಪರಮಂ ಪುಣ್ಯಂ ಕಪಿಲಾ ಚ ವಸುಂಧರೇ ॥ ೭ ॥

ತಪಸಸ್ತಪ ಏವಾಗ್ರ್ಯಂ ವ್ರತಾನಾಂ ವ್ರತಮುತ್ತಮಂ ।
ದಾನಾನಾಮುತ್ತಮಂ ದಾನಂ ನಿಧೀನಾಂ ಹ್ಯೇತದಕ್ಷಯಂ ॥ ೮ ॥

ಕರುವನ್ನು ಹಾಕುತ್ತಿರುವಾಗ ಹಸುವನ್ನು ದಾನಮಾಡುವುದರಿಂದ ಯಾವ ಪುಣ್ಯವು ಲಭಿಸುವುದು ? ಇದನ್ನೆಲ್ಲಾ ವಿವರವಾಗಿ ಕೇಳಲು ಬಯಸುತ್ತೇನೆ.

೫. ಶ್ರೀವರಾಹ—ದೇವಿ, ಯಾವುದನ್ನು ಕೇಳಿ ಪಾಪಗಳನ್ನೆಲ್ಲಾ ನಿಜವಾಗಿ ಕಳೆದುಕೊಳ್ಳಬಹುದೋ ಅಂತಹ ಪವಿತ್ರವಾದ ತತ್ತ್ವವಿಚಾರವನ್ನು ಕೇಳು.

೬. ವರಾನನೆ, ಯಜ್ಞಾಗ್ನಿ ಹೋತ್ರಗಳಿಗಾಗಿ ಬ್ರಹ್ಮನು ಸರ್ವತೇಜಸ್ಸುಗಳನ್ನೂ ಸೇರಿಸಿ, ಕಪಿಲೆಯನ್ನು ಪೂರ್ವದಲ್ಲಿ ನಿರ್ಮಿಸಿದನು.

೭–೯. ಸುಂದರಿ, ಕಪಿಲೆಯು ಪವಿತ್ರದಲ್ಲೆಲ್ಲಾ ಪವಿತ್ರವೂ, ಮಂಗಳಗಳಿಗೆಲ್ಲಾ ಅತಿಮಂಗಳವೂ, ಪುಣ್ಯಗಳಲ್ಲೆಲ್ಲಾ ಪರಮಪುಣ್ಯವೂ, ತಪಗಳಲ್ಲೆಲ್ಲಾ ಉತ್ತಮತಪವೂ, ವ್ರತಗಳಲ್ಲೆಲ್ಲಾ ಉತ್ತಮವ್ರತವೂ, ದಾನಗಳಲ್ಲೆಲ್ಲಾ ಉತ್ತಮದಾನವೂ, ನಿಧಿಗಳಲ್ಲೆಲ್ಲಾ ಅಕ್ಷಯನಿಧಿಯೂ, ಪೃಥಿವಿಯಲ್ಲಿಯೂ, ಸರ್ವಲೋಕ

ಪೃಥಿವ್ಯಾಂ ಯಾನಿ ತೀರ್ಥಾನಿ ಗುಹ್ಯಾನ್ಯಾಯತನಾನಿ ಚ ।
ಪವಿತ್ರಾಣಿ ಚ ಪುಣ್ಯಾನಿ ಸರ್ವಲೋಕೇಷು ಸುಂದರಿ ॥ ೯ ॥

ಹೋತವ್ಯಾನ್ಯಗ್ನಿಹೋತ್ರಾಣಿ ಸಾಯಂಪ್ರಾತರ್ದ್ವಿಜಾತಿಭಿಃ ।
ಕಪಿಲಾಯಾ ಘೃತೇನೇಹ ದಧ್ನಾ ಕ್ಷೀರೇಣ ವಾ ಪುನಃ ॥ ೧೦ ॥

ಜುಹ್ವತೇ ಹ್ಯಗ್ನಿಹೋತ್ರಾಣಿ ಮಂತ್ರೈಶ್ಚ ವಿವಿಧೈಸ್ಸದಾ ।
ಪೂಜಯನ್ನತಿಥೀಂಶ್ಚೈವ ಪರಾಂ ಭಕ್ತಿಮುಪಾಗತಾಃ ॥ ೧೧ ॥

ತೇ ಯಾಂತ್ಯಾದಿತ್ಯವರ್ಣೈಶ್ಚ ವಿಮಾನೈರ್ದ್ವಿಜಸತ್ತಮಾಃ ।
ಸೂರ್ಯಮಂಡಲಮಧ್ಯಾತ್ತು ಬ್ರಹ್ಮಣಾ ನಿರ್ಮಿತಾ ಪುರಾ ॥ ೧೨ ॥

ಕಪಿಲಾ ಯಾ ಪಿಂಗಲಾಕ್ಷೀ ಸರ್ವಸೌಖ್ಯಪ್ರದಾಯಿನೀ ।
ಸಿದ್ಧಿಬುದ್ಧಿಪ್ರದಾ ಧೇನುಃ ಕಪಿಲಾನಂತರೂಪಿಣೀ ॥ ೧೩ ॥

ಗಳಲ್ಲಿಯೂ, ಇರುವ ಪವಿತ್ರತೀರ್ಥಗಳೂ, ಗೂಢವೂ, ಪುಣ್ಯಪ್ರದವೂ ಆದ ಗೃಹಗಳೂ ಆಗಿದೆ.

೧೦. ಬ್ರಾಹ್ಮಣರು ಪ್ರಾತಃಕಾಲವೂ, ಸಾಯಂಕಾಲವೂ, ಅಗ್ನಿಹೋತ್ರಗಳನ್ನು ಕಪಿಲೆಯ ತುಪ್ಪದಿಂದಾಗಲಿ, ಹಾಲಿನಿಂದಾಗಲಿ, ಮೊಸರಿನಿಂದಾಗಲಿ ಮಾಡಬೇಕು.

೧೧–೧೨. ಕಪಿಲೆಯ ತುಪ್ಪದಿಂದಲೂ, ಮೊಸರಿಂದಲೂ, ಹಾಲಿನಿಂದಲೂ ಬಗೆಬಗೆಯ ಮಂತ್ರಗಳ ಮೂಲಕ ಅತಿಭಕ್ತಿಯಿಂದ ಅಗ್ನಿಹೋತ್ರಮಾಡುವವರೂ ಅತಿಥಿಗಳನ್ನು ಪೂಜಿಸುವವರೂ ಆದ ದ್ವಿಜವರ್ಯರು ಸೂರ್ಯನಬಣ್ಣದ ವಿಮಾನಗಳ ಮೂಲಕ ಸೂರ್ಯಮಂಡಲಮಧ್ಯದಿಂದ ಬ್ರಹ್ಮಲೋಕವನ್ನೈದುವರು.

೧೩. ಗೋರೋಚನಬಣ್ಣದ ಕಣ್ಣುಳ್ಳ ಕಪಿಲೆಯು ಸರ್ವಸೌಖ್ಯಸಿದ್ಧಿಬುದ್ಧಿಪ್ರದಾಯಕವಾದುದು. ಕಪಿಲಧೇನುವು ಅನಂತರೂಪವುಳ್ಳದು.

ಪೂರ್ವೋಕ್ತಾ ಯಾಸ್ತು ಕಪಿಲಾಸ್ಸರ್ವಲಕ್ಷಣಲಕ್ಷಿತಾಃ ।
ಸರ್ವಾ ಹ್ಯೇತಾ ಮಹಾಭಾಗಾಸ್ತಾರಯಂತಿ ನ ಸಂಶಯಃ ॥ ೧೪ ॥

ಸಂಗವೇಷು ಪ್ರಶಸ್ತಾಶ್ಚ ಸರ್ವಪಾಪವಿನಾಶನಾಃ ।
ಅಗ್ನಿಪುಚ್ಛಾ ಅಗ್ನಿಮುಖೀ ಅಗ್ನಿಲೋಮಾನಲಪ್ರಭಾ ॥
ತಥಾಗ್ನಾಯೀ ತಥಾ ದೇವೀ ಸುವರ್ಣಾಖ್ಯಾ ಪ್ರವರ್ತತೇ ॥ ೧೫ ॥

ಗೃಹೀತ್ವಾ ಕಪಿಲಾಂ ಶೂದ್ರಾತ್ ಕಾಮತಃ ಸದ್ವಿಜಃ ಪಿಬೇತ್ ।
ಪತಿತಃ ಸ ಹಿ ವಿಜ್ಞೇಯಃ ಚಂಡಾಲಸದೃಶೋಧಮಃ ॥ ೧೬ ॥

ತಸ್ಮಾನ್ನ ಪ್ರತಿಗೃಹ್ಣೀಯಾತ್ ಶೂದ್ರಾದ್ವಿಪ್ರಃ ಪ್ರತಿಗ್ರಹಂ ॥ ೧೭ ॥

ದೂರಾತ್ತೇ ಪರಿಹರ್ತವ್ಯಾಃ ಶ್ವಭಿಸ್ತುಲ್ಯಾ ಇವಾಧ್ವರೇ ।
ಪರ್ವಕಾಲೇ ಹಿ ಸರ್ವೇ ವೈ ವರ್ಜಿತಾಃ ಪಿತೃದೈವತೈಃ ॥ ೧೮ ॥

---

೧೪. ಹಿಂದೆ ಹೇಳಿದ ಸರ್ವಲಕ್ಷಣಗಳಿಂದ ಕೂಡಿದ ಮಹಾಭಾಗ್ಯಶಾಲಿಗಳಾದ ಎಲ್ಲಾ ಕಪಿಲೆಗಳೂ ಉತ್ತಾರಣಮಾಡುವುದರಲ್ಲಿ ಸಂದೇಹವಿಲ್ಲ.

೧೫. ಅಗ್ನಿವರ್ಣದ ಬಾಲ ಮುಖ ರೋಮ ಅಥವಾ ಕಾಂತಿಯುಳ್ಳ ಗೋದೇವಿಯು ಸುವರ್ಣೆಯೆನಿಸಿಕೊಳ್ಳುವುದು. ಅವೆಲ್ಲವೂ ದ್ವಿಜರು ಇಟ್ಟುಕೊಳ್ಳುವುದಕ್ಕೆ ಪ್ರಶಸ್ತವಾದುವು. ಸಕಲಪಾಪಗಳನ್ನೂ ನಾಶಮಾಡುವುವು.

೧೬. ಬ್ರಾಹ್ಮಣನು ಆಸೆಪಟ್ಟು, ಶೂದ್ರರಿಂದ ಕಪಿಲೆಯನ್ನು ದಾನತೆಗೆದುಕೊಂಡು ಅದರ ಹಾಲನ್ನು ಕುಡಿದನಾದರೆ ಆ ಅಧಮನನ್ನು ಚಂಡಾಲ ಸಮಾನನಾದ ಪತಿತನನ್ನಾಗಿ ತಿಳಿಯಬೇಕು.

೧೭. ಆದುದರಿಂದ ಬ್ರಾಹ್ಮಣನು ಶೂದ್ರನಿಂದ ದಾನವನ್ನು ತೆಗೆದುಕೊಳ್ಳಬಾರದು.

೧೮. ನಾಯಿಗಳಿಗೆ ಸಮಾನರಂತೆ ಅವರನ್ನು ಯಜ್ಞದಲ್ಲೂ, ಪರ್ವಕಾಲಗಳಲ್ಲಿ ಪಿತೃಗಳನ್ನು ಪೂಜಿಸುವಾಗಲೂ ದೂರದಲ್ಲಿರಿಸಬೇಕು.

ಅಸಂಭಾಷ್ಯಾ ಪ್ರತಿಗ್ರಾಹ್ಯಾಃ ಶೂದ್ರಾಸ್ತೇ ಪಾಪಕರ್ಮಣಃ ।
ಪಿಬಂತಿ ಯಾವತ್ಕಪಿಲಾಂ ತಾವತ್ತೇಷಾಂ ಪಿತಾಮಹಾಃ ॥
ಭೂಮೇರ್ಮಲಂ ಸಮಶ್ನಂತಿ ಜಾಯಂತೇ ವಿಡ್ಭುಜಶ್ಚಿರಂ ॥ ೧೯ ॥

ತಾಸಾಂ ಕ್ಷೀರಂ ಘೃತಂ ವಾಪಿ ನವನೀತಮಥಾಪಿ ವಾ ।
ಉಪಜೀವಂತಿ ಯೇ ಶೂದ್ರಾಸ್ತೇಷಾಂ ಗತಿಮತಃ ಶೃಣು ॥ ೨೦ ॥

ಕಪಿಲಾ ಜೀವಿನಃ ಶೂದ್ರಾಃ ಕ್ರೂರಾ ಗಚ್ಛಂತಿ ರೌರವಂ ॥ ೨೧ ॥

ರೌರವೇ ತು ಮಹಾರೌದ್ರೇ ವರ್ಷಕೋಟಿಶತಂ ಧರೇ ।
ತತೋ ವಿಮುಕ್ತಾಃ ಕಾಲೇನ ಶುನೋ ಯೋನಿಂ ವ್ರಜಂತಿ ಹಿ ॥ ೨೨ ॥

ಶುನೋ ಯೋನ್ಯಾಪಿ ಮುಕ್ತಾಸ್ತು ವಿಷ್ಠಾಭುಕ್ಕ್ರಿಮಯಸ್ತತಃ ।
ವಿಷ್ಠಾಸ್ಥಾನೇಷು ಪಾಪಿಷ್ಠಾಃ ಸುದುರ್ಗಂಧಿಷು ನಿತ್ಯಶಃ ॥
ಭೂಯೋ ಭೂಯೋ ಜಾಯಮಾನಃ ತಥೋತ್ತಾರಂ ನ ವಿಂದತಿ ॥ ೨೩ ॥

---

೧೯. ಅವರನ್ನು ಸಂಭಾಷಣೆಗೆ ಅನರ್ಹರೆಂದು ತಿಳಿಯಬೇಕು. ಪಾಪ ಕರ್ಮಿಗಳಾದ ಶೂದ್ರರು ಕಪಿಲೆಯ ಕರಾವನ್ನು ಎಲ್ಲಿಯವರೆಗೆ ಕುಡಿಯುವರೋ ಅಲ್ಲಿಯವರೆಗೆ ಅವರ ಅಜ್ಜಂದಿರು ಭೂಮಿಯಮಲವನ್ನು ತಿನ್ನುವರು. ಬಹು ಕಾಲ ಅಮೇಧ್ಯಭಕ್ಷಕರಾಗಿ ಆಗುವರು.

೨೦ ಕಪಿಲೆಗಳ ಹಾಲನ್ನಾಗಲಿ, ತುಪ್ಪವನ್ನಾಗಲಿ, ಬೆಣ್ಣೆಯನ್ನಾಗಲಿ ಸೇವಿಸುವ ಶೂದ್ರರ ಗತಿಯನ್ನು ಕೇಳು.

೨೧. ಕಪಿಲೆಯಿಂದ ಜೀವಿಸುವ ಕ್ರೂರಿಗಳಾದ ಶೂದ್ರರು ರೌರವವೆಂಬ ನರಕಕ್ಕೆ ಹೋಗುವರು.

೨೨. ಅತಿಭಯಂಕರವಾದ ಆ ರೌರವದಲ್ಲಿ ನೂರುಕೋಟಿವರ್ಷಗಳಿದ್ದು ಬಳಿಕ ಅಲ್ಲಿಂದ ಬಿಡುಗಡೆಯನ್ನು ಹೊಂದಿ, ಕಾಲಾಂತರದಲ್ಲಿ ನಾಯಿಯ ಜನ್ಮವನ್ನು ಪಡೆಯುವರು.

೨೩. ಆ ನಾಯಿಯ ಜನ್ಮವು ಕಳೆದ ಬಳಿಕ ಅಮೇಧ್ಯವನ್ನು ತಿನ್ನುವ ಕ್ರಿಮಿಗಳಾಗಿ, ಅತಿದುರ್ಗಂಧವುಳ್ಳ ಅಮೇಧ್ಯವಿರುವೆಡೆಯಲ್ಲಿ ಮತ್ತೆ ಮತ್ತೆ ಹುಟ್ಟುತ್ತ ಆ ಜನ್ಮದಿಂದ ಪಾರಾಗುವರು.

ಬ್ರಾಹ್ಮಣಶ್ಚೈವ ಯೋ ವಿದ್ವಾನ್ಕುರ್ಯಾತ್ತೇಷಾಂ ಪ್ರತಿಗ್ರಹಂ |
ತತಃ ಪ್ರಭೃತ್ಯಮೇಧ್ಯಾಂತಃ ಪಿತರಸ್ತಸ್ಯ ಶೇರತೇ || ೨೪ ||

ನ ತಂ ವಿಪ್ರಂ ತು ಸಂಭಾಷೇತ್ ನ ಚೈವೈಕಾಸನಂ ವಿಶೇತ್ || ೨೫ ||

ಸ ನಿತ್ಯಂ ವರ್ಜನೀಯೋ ಹಿ ದೂರಾತ್ತು ಬ್ರಾಹ್ಮಣೈರ್ಧರೇ || ೨೬ ||

ಯಸ್ತೇನ ಸಹ ಸಂಭಾಷೇತ್ ತಥಾ ಚೈಕಾಸನಂ ವ್ರಜೇತ್ |
ಪ್ರಾಜಾಪತ್ಯಂ ಚರೇತ್ಕೃಚ್ಛ್ರಂ ತೇನ ಶುಧ್ಯತಿ ಸ ದ್ವಿಜಃ ||
ಏಕಸ್ಯ ಗೋಪ್ರದಾನಸ್ಯ ಸಹಸ್ರಾಂಶೇನ ಪೂರ್ಯತೇ || ೨೭ ||

ಕಿಮನ್ಯೈರ್ಬಹುಭಿರ್ದಾನೈಃ ಕೋಟಿಸಂಖ್ಯಾನವಿಸ್ತರೈಃ |
ಶ್ರೋತ್ರಿಯಾಯ ದರಿದ್ರಾಯ ಸುವೃತ್ತಾಯಾಹಿತಾಗ್ನಯೇ || ೨೮ ||

---

೨೪. ವಿದ್ವಾಂಸನಾದರೂ ಬ್ರಾಹ್ಮಣನು ಶೂದ್ರರಿಂದ ಕಪಿಲೆಯನ್ನು ದಾನತೆಗೆದುಕೊಂಡನಾದರೆ ಅದುಮೊದಲುಗೊಂಡು ಅವನ ಪಿತೃಗಳು ಅಮೇಧ್ಯದೊಳಗೆ ಮಲಗುವರು.

೨೫. ದಾನತೆಗೆದುಕೊಂಡ ಆ ಬ್ರಾಹ್ಮಣನೊಡನೆ ಬ್ರಾಹ್ಮಣರು ಮಾತನಾಡಬಾರದು. ಅವನೊಡನೆ ಒಂದೇ ಪೀಠದಲ್ಲಿ ಕುಳಿತುಕೊಳ್ಳಬಾರದು.

೨೬. ಧರೇ, ಬ್ರಾಹ್ಮಣರು ಅವನನ್ನು ದೂರದಲ್ಲಿ ತ್ಯಜಿಸಬೇಕು.

೨೭. ಯಾರು ಅವನೊಡನೆ ಮಾತನಾಡುವನೋ ಅಥವಾ ಏಕಾಸನದಲ್ಲಿ ಕುಳಿತುಕೊಳ್ಳುವನೋ ಆ ಬ್ರಾಹ್ಮಣನು ಪ್ರಾಜಾಪತ್ಯವೆಂಬ ಕೃಚ್ಛ್ರವನ್ನು ಮಾಡಿದಲ್ಲಿ ಶುದ್ಧನಾಗುವನು. ಅಥವಾ ಮುಂದೆ ಹೇಳುವ ಒಂದು ಗೋದಾನ ಫಲದ ಸಾವಿರದಲ್ಲಿ ಒಂದಂಶದಿಂದ ಶುದ್ಧನಾಗುವನು.

೨೮–೨೯. ಕೋಟಿಲೆಕ್ಕದ ಬೇರೆಯ ಹಲವುದಾನಗಳಿಂದೇನು ! ಕರುವನ್ನು ಹಾಕುವುದಕ್ಕೆ ಸಿದ್ಧವಾಗಿರುವ ಕಪಿಲೆಯನ್ನು ನಿರೀಕ್ಷಿಸಿಕೊಂಡಿದ್ದು

ಆಸನ್ನಪ್ರಸವಾಂ ಧೇನುಂ ದಾನಾರ್ಥಂ ಪ್ರತಿಪಾಲಯೇತ್ ।
ಕಪಿಲಾರ್ಧಪ್ರಸೂತಾ ವೈ ದಾತವ್ಯಾ ಚ ದ್ವಿಜನ್ಮನೇ ॥ ೨೯ ॥

ಜಾಯಮಾನಸ್ಯ ವತ್ಸಸ್ಯ ಮುಖಂ ಯೋನ್ಯಾಂ ಪ್ರದೃಶ್ಯತೇ ।
ತಾವತ್ಸಾ ಪೃಥಿವೀ ಜ್ಞೇಯಾ ಯಾವದ್ಗರ್ಭಂ ನ ಮುಂಚತಿ ॥ ೩೦ ॥

ಧೇನ್ವಾ ಯಾವಂತಿ ರೋಮಾಣಿ ಸವತ್ಸಾಯಾ ವಸುಂಧರೇ ।
ತಾವತ್ಕೋ ವರ್ಷಕೋಟ್ಯಸ್ತು ಬ್ರಹ್ಮವಾದಿಭಿರರ್ಚಿತಾಃ ॥
ವಸಂತಿ ಬ್ರಹ್ಮಲೋಕೇ ವೈ ಯೇ ನಿತ್ಯಂ ಕಪಿಲಾಪ್ರದಾಃ ॥ ೩೧ ॥

ಸುವರ್ಣಶೃಂಗೀಂ ಯಃ ಕೃತ್ವಾ ರೌಪ್ಯಯುಕ್ತಖುರಾಂ ತಥಾ ।
ಬ್ರಾಹ್ಮಣಸ್ಯ ಕರೇ ದತ್ವಾ ಸುವರ್ಣಂ ರೌಪ್ಯಮೇವ ಚ ॥
ಕಪಿಲಾಯಾಸ್ತದಾ ಪುಚ್ಛಂ ಬ್ರಾಹ್ಮಣಸ್ಯ ಕರೇ ನ್ಯಸೇತ್ ॥ ೩೨ ॥

ಕರುವು ಅರ್ಧಭಾಗ ಹೊರಗೆ ಬಂದಿರುವಾಗ ಆ ಹಸುವನ್ನು ಶ್ರೋತ್ರಿಯನೂ, ದರಿದ್ರನೂ, ಒಳ್ಳೆಯ ನಡತೆಯುಳ್ಳವನೂ, ಆಹಿತಾಗ್ನಿಯೂ ಆದ ಬ್ರಾಹ್ಮಣನಿಗೆ ದಾನಮಾಡಬೇಕು.

೩೦. ಹುಟ್ಟುವ ಕರುವಿನ ಮುಖವು ಯೋನಿಯಲ್ಲಿ ಕಾಣಿಸುತ್ತಿರುವವರೆಗೂ ಅಥವಾ ಕರುವು ಪೂರ್ತಿಯಾಗಿ ಹೊರಗೆ ಬರುವವರೆಗೂ ತಾಯಿ ಹಸುವನ್ನು ಭೂಮಿಯೆಂದು ಭಾವಿಸಬೇಕು.

೩೧ ವಸುಂಧರೇ, ಕಪಿಲಾದಾನಿಗಳು ಕರುವಿನಿಂದ ಕೂಡಿರುವ ಹಸುವಿನ ರೋಮಗಳು ಎಷ್ಟಿರುತ್ತವೆಯೋ ಅಷ್ಟುಕೋಟಿವರ್ಷಗಳವರೆಗೆ ಬ್ರಹ್ಮವಾದಿಗಳಿಂದ ಪೂಜಿತರಾಗಿ ಬ್ರಹ್ಮಲೋಕದಲ್ಲಿ ಯಾವಾಗಲೂ ವಾಸಮಾಡುವರು.

೩೨. ಬ್ರಾಹ್ಮಣನ ಕೈಗೆ ಸುವರ್ಣದ ಅಥವಾ ಬೆಳ್ಳಿಯ ದಕ್ಷಿಣೆಯನ್ನು ಕೊಟ್ಟು, ಕಪಿಲೆಯ ಕೊಂಬನ್ನು ಚಿನ್ನದ ಅಣಸಿನಿಂದಲೂ, ಗೊರಸನ್ನು ಬೆಳ್ಳಿಯ ಗೌಸಿನಿಂದಲೂ ಅಲಂಕರಿಸಿ, ಅದರ ಬಾಲವನ್ನು ಹಿಡಿದುಕೊಂಡು ಬ್ರಾಹ್ಮಣನ ಕೈಯಲ್ಲಿಡಬೇಕು.

ಉದಕಂ ಚ ಕರೇ ದತ್ವಾ ವಾಚಯೇಚ್ಛುದ್ಧಯಾ ಗಿರಾ || ೩೩ ||

ಸಸಮುದ್ರವನಾ ತೇನ ಸಶೈಲವನಕಾನನಾ |
ರತ್ನಪೂರ್ಣಾ ಭವೇದ್ದತ್ವಾ ಪೃಥಿವೀ ನಾತ್ರ ಸಂಶಯಃ || ೩೪ ||

ಪೃಥಿವೀದಾನತುಲ್ಯೇನ ದಾನೇನೈತೇನ ವೈ ನರಃ |
ನಂದಿತೋ ಯಾತಿ ಪಿತೃಭಿಃ ವಿಷ್ಣ್ವಾಖ್ಯಂ ಪರಮಂ ಪದಂ || ೩೫ ||

ಬ್ರಹ್ಮಸ್ವಹಾರೀ ಗೋಘ್ನೋ ವಾ ಭ್ರೂಣಹಾ ಪಾಪದೇಹಕಃ |
ಮಹಾಪಾತಕಯುಕ್ತೋಽಪಿ ವಂಚಕೋ ಬ್ರಹ್ಮದೂಷಕಃ || ೩೬ ||

ನಿಂದಕೋ ಬ್ರಾಹ್ಮಣಾನಾಂ ಚ ತಥಾ ಕರ್ಮಾವದೂಷಕಃ |
ಮಹಾಪಾತಕಯುಕ್ತೋಽಪಿ ಗವಾಂ ದಾನೇನ ಶುಧ್ಯತಿ || ೩೭ ||

---

೩೩. ಬ್ರಾಹ್ಮಣನ ಕೈಗೆ ದಾನೋದಕವನ್ನು ಕೊಟ್ಟು, ಶುದ್ಧವಾದ ವಾಣಿಯಿಂದ ಹಿಂದೆ ಹೇಳಿರುವ ಮಂತ್ರವನ್ನು ದಾನಿಯು ಹೇಳಿ, ತೆಗೆದುಕೊಳ್ಳುವವನಿಂದಲೂ ಹೇಳಿಸಬೇಕು.

೩೪. ಹೀಗೆ ಮಾಡಿದಲ್ಲಿ, ಸಮುದ್ರವನಗಳಿಂದೊಡಗೂಡಿ, ರತ್ನಪೂರ್ಣವಾದ ಭೂಮಿಯನ್ನೇ ದಾನಮಾಡಿದಂತಾಗುವುದರಲ್ಲಿ ಸಂಶಯವಿಲ್ಲ.

೩೫. ಪೃಥ್ವೀದಾನಕ್ಕೆ ಸಮಾನವಾದ ಈ ಕಪಿಲೆಯ ದಾನದಿಂದ ದಾನಿಯು ಪಿತೃಗಳೊಡನೆ ಸಂತೋಷದಿಂದ ವಿಷ್ಣುವಿನ ಪರಮಪದವನ್ನು ಸೇರುವನು.

೩೬–೩೭. ಬ್ರಾಹ್ಮಣಸ್ವತ್ತನ್ನು ಅಪಹರಿಸಿದವನಾಗಲಿ, ಗೋಹತ್ಯೆ ಮಾಡಿದವನಾಗಲಿ, ಭ್ರೂಣಹತ್ಯೆಮಾಡಿದ ಪಾಪಿಯಾಗಲಿ, ವಂಚಕನಾಗಲಿ ಬ್ರಹ್ಮ(ಬ್ರಾಹ್ಮಣ)ದೂಷಕನಾಗಲಿ, ಮತ್ತಾವ ಮಹಾಪಾತಕವನ್ನು ಮಾಡಿದವನೇ ಆಗಲಿ ಉಭಯಮುಖೀ ಗೋವುಗಳ ದಾನದಿಂದ ಶುದ್ಧನಾಗುವನು.

ಯಶ್ಚೋಭಯಮುಖೀಂ ದದ್ಯಾತ್ಪ್ರಭೂತಕನಕಾನ್ವಿತಾಂ ।
ತದ್ದಿನಂ ಪಾಯಸಾಹಾರಂ ಪಯಸಾ ವಾಪಿ ವಾ ಭವೇತ್ ॥ ೩೮ ॥

ಸುವರ್ಣಸ್ಯ ಸಹಸ್ರೇಣ ತದರ್ಧೇನಾಪಿ ಭಾಮಿನಿ ।
ತಸ್ಯಾಪ್ಯರ್ಧಶತೇನಾಥ ಪಂಚಾಶಚ್ಚ ತತೋರ್ಧಕಂ ॥ ೩೯ ॥

ಯಥಾಶಕ್ತ್ಯಾ ಪ್ರದಾತವ್ಯಾ ವಿತ್ತಶಾಠ್ಯಂ ವಿವರ್ಜಯೇತ್ ॥ ೪೦ ॥

ಇಮಾಂ ಗೃಹ್ಣೋಭಯಮುಖೀಂ ಉಭಯತ್ರ ಶಮೋಸ್ತು ವೈ ।
ದದೇ ವಂಶವಿವೃದ್ಧ್ಯರ್ಥಂ ಸದಾ ಸ್ವಸ್ತಿಕರೀ ಭವ ॥ ೪೧ ॥

ಪ್ರತಿಗೃಹ್ಣಾಮಿ ತ್ವಾಂ ಧೇನೋ ಕುಟುಂಬಾರ್ಥೇ ವಿಶೇಷತಃ ।
ಶುಭಂ ಭವತು ಮೇ ನಿತ್ಯಂ ದೇವಧಾತ್ರಿ ನಮೋಸ್ತು ತೇ ॥ ೪೨ ॥

---

೩೮. ಹೆಚ್ಚಾದ ಸುವರ್ಣದಿಂದ ಕೂಡಿದ ಉಭಯಮುಖೀ ಗೋವನ್ನು ದಾನಮಾಡಿದವನು, ದಾನಮಾಡಿದ ದಿನ ಪಾಯಸವನ್ನಾಗಲಿ, ಹಾಲನ್ನಾಗಲಿ ಮಾತ್ರವೇ ಸೇವಿಸಿ ಬೇರೆ ಆಹಾರವಿಲ್ಲದವನಾಗಿರಬೇಕು.

೩೯–೪೦. ಭಾಮಿನಿ, ಗೋವಿನೊಡನೆ ಸಾವಿರ, ಐನೂರು, ಎರಡು ನೂರೈವತ್ತು, ನೂರು, ಐವತ್ತು ಅಥವಾ ಇಪ್ಪತ್ತೈದು ಸುವರ್ಣನಾಣ್ಯಗಳನ್ನು ತನ್ನ ಶಕ್ತಿಯಿರುವಷ್ಟು ದಕ್ಷಿಣೆಕೊಡಬೇಕು. ಹಣದ ವಿಚಾರದಲ್ಲಿ ಕಾಪಟ್ಯವಿರಬಾರದು.

೪೧. "ಬ್ರಾಹ್ಮಣ, ಈ ಉಭಯಮುಖೀ ಗೋವನ್ನು ಸ್ವೀಕರಿಸು. ಉಭಯತ್ರ ಶಾಂತಿಯಾಗಲಿ. ಗೋವೆ, ವಂಶಾಭಿವೃದ್ಧಿಗಾಗಿ ನಿನ್ನನ್ನು ದಾನಮಾಡುತ್ತೇನೆ. ಯಾವಾಗಲೂ ಮಂಗಳವನ್ನುಂಟುಮಾಡುವಳಾಗು."

೪೨. "ಧೇನುವೇ, ಮುಖ್ಯವಾಗಿ ಕುಟುಂಬಾರ್ಥವಾಗಿ ನಿನ್ನನ್ನು ಪ್ರತಿಗ್ರಹಿಸುತ್ತೇನೆ. ನನಗೆ ಸದಾ ಶುಭವಾಗಲಿ. ದೇವಧಾತ್ರೀ, ನಿನಗೆ ನಮಸ್ಕಾರ."

ಮೋ ನಿತ್ಯಂ ಸ್ವಸ್ತಿ ಭವತು ರುದ್ರಾಂಗೇತಿ ನಮೋನಮಃ ॥ ೪೩ ॥

ಓಂ ದ್ಯೌಸ್ತ್ವಾ ದದಾತು ಪೃಥಿವೀ ತ್ವಾಪ್ರತಿಗೃಹ್ಣಾತು ।
ಕ ಇದಂ ಕಸ್ಮಾ ಅದಾದಿತಿ ಜಪಿತ್ವಾ ನ್ಯೈ ವಸುಂಧರೇ ॥
ವಿಸೃಜ್ಯ ಬ್ರಾಹ್ಮಣಂ ದೇವಿ ತಾಂ ಧೇನುಂ ತದ್ಗೃಹಂ ನಯೇತ್ ॥ ೪೪ ॥

ಏವಂ ಪ್ರಸೂಯಮಾನಾಂ ಯೋ ಗಾಂ ದದಾತಿ ವಸುಂಧರೇ ।
ಪೃಥಿವೀ ತೇನ ದತ್ತಾ ಸ್ಯಾತ್ಸಪ್ತದ್ವೀಪಾ ನ ಸಂಶಯಃ ॥ ೪೫ ॥

ವದಂತಿ ತಾಂ ಚಂದ್ರಸಮಾನವಕ್ತ್ರಾಂ
ಪ್ರತಪ್ತಜಾಂಬೂನದತುಲ್ಯವರ್ಣಾಂ ।
ಮಹಾಸಿತತ್ವಾಂ ತನುವೃತ್ತಮಧ್ಯಾಂ
ಸೇವಂತ್ಯಜಸ್ರಂ ಕುಲಿತಾ ಹಿ ದೇವಾಃ ॥ ೪೬ ॥

೪೩-೪೪. ರುದ್ರಾಂಗಿ, ನನಗೆ ಯಾವಾಗಲೂ ಮಂಗಳವಾಗಲಿ. ನಿನಗೆ ಹಲವು ನಮಸ್ಕಾರಗಳು. ಓಂ ಆಕಾಶವು ನಿನ್ನನ್ನು ಕೊಡಲಿ. ಭೂಮಿಯು ಪರಿಗ್ರಹಿಸಲಿ. ಯಾರು ಯಾರಿಗೆ ಇದನ್ನು ಕೊಟ್ಟರು." ಎಂದು ಅರ್ಥವುಳ್ಳ ಮೇಲಿನ ಶ್ಲೋಕವನ್ನು ಹೇಳಿ, ಬ್ರಾಹ್ಮಣನನ್ನು ಕಳುಹಿಸಿ, ದಾನಕೊಟ್ಟ ಆ ಹಸುವನ್ನೂ ಬ್ರಾಹ್ಮಣನ ಮನೆಗೆ ಕಳುಹಿಸಬೇಕು.

೪೫. ದೇವಿ, ವಸುಂಧರೇ, ಹೀಗೆ ಯಾರು ಈನುತ್ತಿರುವ ಹಸುವನ್ನು ದಾನಮಾಡುವರೋ, ಅವನು ಸಪ್ತದ್ವೀಪಗಳಿಂದ ಕೂಡಿದ ಭೂಮಿಯನ್ನೇ ದಾನಮಾಡಿದಂತಾಗುವುದರಲ್ಲಿ ಸಂಶಯವಿಲ್ಲ.

೪೬. ಚಂದ್ರನಿಗೆ ಸಮಾನವಾದ ಮುಖವೂ, ಕುಲುಮೆಯಲ್ಲಿ ಕಾವೇರಿದ ಚಿನ್ನಕ್ಕೆ ಸಮಾನವಾದ ಬಣ್ಣವೂ, ಉತ್ತಮವಾದ ಕತ್ತಿಯಂತಿರುವ ಕೊಂಬೂ, ಕೃಶವಾಗಿ ದುಂಡಗಿರುವ ನಡುವೂ ಉಳ್ಳ ಉಭಯಮುಖೀ ಗೋವನ್ನು ದೇವತೆಗಳು ಯಾವಾಗಲೂ ಗುಂಪಾಗಿ ಸ್ತೋತ್ರಮಾಡಿ ಸೇವಿಸುವರು.

ಪ್ರಾತರುತ್ಥಾಯ ಯೋ ಮರ್ತ್ಯಃ ಕಲ್ಪಂ ಚೇದಂ ಸಮಾಹಿತಃ |
ಜಿತೇಂದ್ರಿಯಃ ಶುಚಿರ್ಭೂತ್ವಾ ಪಠೇದ್ಭಕ್ತ್ಯಾ ಸಮನ್ವಿತಃ || ೪೭ ||

ತ್ರಿಃ ಸದಾವರ್ತನಂ ಕೃತ್ವಾ ಪಾಪಂ ವರ್ಷಕೃತಂ ಚ ಯತ್ |
ನಶ್ಯತೇ ತತ್ಕ್ಷಣಾದೇವ ವಾಯುನಾ ಪಾಂಸವೋ ಯಥಾ || ೪೮ ||

ಶ್ರಾದ್ಧಕಾಲೇ ಪಠೇದ್ಯಸ್ತು ಇದಂ ಪಾವನಮುತ್ತಮಂ |
ತಸ್ಯಾನ್ನಂ ಸಂಸ್ಕೃತಂ ತದ್ಧಿ ಪಿತರೋಽಶ್ನಂತಿ ಧೀಮತಃ || ೪೯ ||

ಅಮಾಯಾಂ ವಾಥ ಯಃ ಕಶ್ಚಿದ್ದ್ವಿಜಾನಾಮಗ್ರತಃ ಪಠೇತ್ |
ಪಿತರಸ್ತಸ್ಯ ತುಷ್ಯಂತಿ ವರ್ಷಾಣಾಂ ಶತಮೇವ ಚ || ೫೦ ||

ಯಶ್ಚೈತಚ್ಛೃಣುಯಾನ್ನಿತ್ಯಂ ತದ್ಗತೇನಾಂತರಾತ್ಮನಾ |
ಸಂವತ್ಸರಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ || ೫೧ ||

೪೭–೪೮. ಯಾರು ಬೆಳಗ್ಗೆ ಎದ್ದು, ಶಾಂತನೂ, ಶುಚಿಯೂ, ಜಿತೇಂದ್ರಿಯನೂ ಆಗಿ ಭಕ್ತಿಯಿಂದ ಈ ಗೋದಾನ ಕಲ್ಪವನ್ನು ಮೂರುಸಾರಿ ಹೇಳುವರೋ ಅವರು ವರ್ಷಕಾಲ ಮಾಡಿದ ಪಾಪವೆಲ್ಲವೂ, ವಾಯುವಿನಿಂದ ಧೂಳು ನಾಶವಾಗುವಂತೆ ಒಡನೆಯೇ ನಾಶವಾಗುವುದು.

೪೯. ಶ್ರಾದ್ಧಕಾಲದಲ್ಲಿ ಪರಿಶುದ್ಧವೂ, ಉತ್ತಮವೂ ಆದ ಇದನ್ನು ಪಠಿಸಿದರೆ, ಬುದ್ಧಿವಂತನಾದ ಅವನು ಕೊಡುವ ಪರಿಶುದ್ಧವಾದ ಅನ್ನವನ್ನು ಪಿತೃಗಳು ಭುಜಿಸುವರು.

೫೦. ಅಲ್ಲದೆ ಅಮಾವಾಸ್ಯೆಯಲ್ಲಿ ಯಾರಾದರೂ ಬ್ರಾಹ್ಮಣರೆದುರಿಗೆ ಇದನ್ನು ಹೇಳಿದರೆ ಹೇಳಿದವನ ಪಿತೃಗಳು ನೂರುವರ್ಷಗಳವರೆಗೂ ತೃಪ್ತರಾಗುವರು.

೫೧. ಯಾರು ಮನಸ್ಸಿಟ್ಟು ಇದನ್ನು ದಿನವೂ ಕೇಳುವರೋ ಅವರು ಒಂದುವರ್ಷ ಮಾಡಿದ ಪಾಪವು ಆ ಕೂಡಲೆ ನಾಶಹೊಂದುವುದು.

|| ಹೋತೋವಾಚ ||

ಇದಂ ರಹಸ್ಯಂ ರಾಜೇಂದ್ರ ವರಾಹೇಣ ಪುರಾತನಂ ।
ಧರಣ್ಯೈ ಕಥಿತಂ ರಾಜನ್ ಧೇನುಮಾಹಾತ್ಮ್ಯಮುತ್ತಮಂ ॥
ಮಯಾ ತೇ ಕಥಿತಂ ಸರ್ವಂ ಸರ್ವಪಾಪಪ್ರಣಾಶನಂ || ೫೨ ||

ದ್ವಾದಶ್ಯಾಂ ಮಾಘಮಾಸಸ್ಯ ಶುಕ್ಲಾಯಾಂ ತಿಲಧೇನುದಃ ।
ಸರ್ವಕಾಮಸಮೃದ್ಧಾರ್ಥೋ ವೈಷ್ಣವಂ ಪದಮಾಪ್ನುಯಾತ್ || ೫೩ ||

ದ್ವಾದಶ್ಯಾಂ ಶ್ರಾವಣೇ ಮಾಸಿ ಶುಕ್ಲಾಯಾಂ ರಾಜಸತ್ತಮ ।
ಪ್ರತ್ಯಕ್ಷಧೇನುರ್ದಾತವ್ಯಾ ಸಹಿರಣ್ಯಾ ನೃಪೋತ್ತಮ || ೫೪ ||

ಸರ್ವದಾ ಸರ್ವಧೇನೂನಾಂ ಪ್ರದಾನಂ ರಾಜಸತ್ತಮ ।
ಸರ್ವಪಾಪಪ್ರಶಮನಂ ಭುಕ್ತಿಮುಕ್ತಿಪ್ರದಾಯಕಂ || ೫೫ ||

ಏತತ್ತೇ ಸರ್ವಮಾಖ್ಯಾತಂ ಸಮಾಸಾದ್ಬಹುವಿಸ್ತರಂ || ೫೬ ||

---

೫೨. ಹೋತೃ—ರಾಜೇಂದ್ರ, ಶ್ರೀವರಾಹನು ಭೂದೇವಿಗೆ ಹೇಳಿದ ಪುರಾತನವೂ, ರಹಸ್ಯವೂ, ಉತ್ತಮವೂ, ಸರ್ವಪಾಪನಾಶಕವೂ ಆದ ಈಧೇನು ಮಹಿಮೆಯನ್ನು ನಾನು ನಿನಗೆ ಹೇಳಿದ್ದೇನೆ.

೫೩. ಮಾಘಶುದ್ಧ ದ್ವಾದಶಿಯಲ್ಲಿ ತಿಲಧೇನು ದಾನವನ್ನು ಮಾಡುವವನು ಸರ್ವೇಷ್ಟಾರ್ಥಗಳನ್ನೂ ಪೂರ್ತಿಯಾಗಿ ಪಡೆದು ವಿಷ್ಣುಪದವನ್ನು ಸೇರುವನು.

೫೪. ರಾಜೋತ್ತಮನೇ, ಶ್ರಾವಣಶುಕ್ಲ ದ್ವಾದಶಿಯ ದಿನ ಸುವರ್ಣ ದಕ್ಷಿಣೆಯೊಡನೆ ನಿಜವಾದ ಹಸುವನ್ನೇ ದಾನಮಾಡಬೇಕು.

೫೫. ಸರ್ವದಾ ಸರ್ವಧೇನುಗಳನ್ನೂ ದಾನಮಾಡುವುದು ಸರ್ವ ಪಾಪನಾಶಕರವೂ, ಭುಕ್ತಿಮುಕ್ತಿಗಳನ್ನು ಕೊಡುವುದೂ ಆಗುವುದು.

೫೬. ಬಹು ವಿಸ್ತಾರವಾದ ಇದನ್ನು ಸಂಕ್ಷೇಪವಾಗಿ ನಿನಗೆ ಹೇಳಿದ್ದೇನೆ.

ಧೇನೂನಾಂ ಫಲಮುದ್ದಿಶ್ಯ ಸರ್ವಕಾಮಪ್ರದಂ ನೃಣಾಂ ।
ಅಥವಾ ಪೀಡ್ಯಸೇತ್ಯಂತಂ ಕ್ಷುಧಯಾ ಪಾರ್ಥಿವೋತ್ತಮ ॥ ೫೭ ॥

ಇದಾನೀಂ ಕಾರ್ತಿಕೀ ಚೇಯಂ ವರ್ತತೇ ಚ ನರಾಧಿಪ ।
ಬ್ರಹ್ಮಾಂಡಂ ಸರ್ವಸಂಪನ್ನಂ ಭೂತರತ್ನೌಷಧೈರ್ಯುತಂ ॥ ೫೮ ॥

ದೇವದಾನವಯಕ್ಷೈಸ್ತು ಯುಕ್ತಮೇತತ್ಸದಾ ವಿಭೋ ।
ಏತದ್ಧೇಮ ಮಯಂ ಕೃತ್ವಾ ಸರ್ವಬೀಜರಸಾನ್ವಿತಂ ॥ ೫೯ ॥

ಸರತ್ನಂ ಪುರುಷಃ ಕೃತ್ವಾ ಕಾರ್ತಿಕ್ಯಾಂ ದ್ವಾದಶೀದಿನೇ ।
ಅಥವಾ ಪಂಚದಶ್ಯಾಂ ಚ ಕಾರ್ತಿಕಸ್ಯ ವಿಶೇಷತಃ ॥
ಪುರೋಹಿತಾಯ ಗುರವೇ ದದ್ಯಾದ್ಭಕ್ತಿಸಮನ್ವಿತಃ ॥ ೬೦ ॥

ಬ್ರಹ್ಮಾಂಡೋದರವರ್ತೀನಿ ಯಾನಿ ಭೂತಾನಿ ಪಾರ್ಥಿವ ।
ತಾನಿ ದತ್ತಾನಿ ತೇನ ಸ್ಯುಃ ಸಮಾಸಾತ್ಕಥಿತಂ ತವ ॥ ೬೧ ॥

೫೭–೫೮. ರಾಜೋತ್ತಮನೇ, ಮನುಷ್ಯರಿಗೆ ಸರ್ವೇಷ್ಟಾರ್ಥಗಳನ್ನೂ ಕೊಡುವ ಗೋದಾನಫಲೋದ್ದೇಶದಿಂದಲೂ, ಹಸಿವಿನಿಂದಲೂ ಬಹಳವಾಗಿ ಪೀಡಿತನಾಗಿದ್ದೀಯೆ. ಈಗ ಕಾರ್ತಿಕಮಾಸವೂ ಆಗಿದೆ. ಭೂತರತ್ನೌಷಧಿಗಳಿಂದ ಕೂಡಿದ ಈ ಬ್ರಹ್ಮಾಂಡವು ಸರ್ವಸಂಪನ್ನವಾಗಿದೆ.

೫೯-೬೦. ದೇವದಾನವಯಕ್ಷರು ಸದಾ ನೆಲಸಿರುವ, ಸರ್ವಬೀಜರಸಗಳಿಂದ ಕೂಡಿರುವ ಈ ಬ್ರಹ್ಮಾಂಡವನ್ನು ರತ್ನಖಚಿತವಾಗಿ ಚಿನ್ನದಿಂದ ಮಾಡಿಸಿ, ಈ ಕಾರ್ತಿಕ ಶುಕ್ಲ ದ್ವಾದಶಿಯದಿನವೋ, ಹುಣ್ಣಿಮೆಯ ದಿನವೋ, ಪುರೋಹಿತನಾದ ಗುರುವಿಗೆ ಭಕ್ತಿಯಿಂದ ದಾನವಾಗಿ ಕೊಡಬೇಕು.

೬೧. ದೊರೆಯೇ, ಹಾಗೆ ಬ್ರಹ್ಮಾಂಡದ ಮಾದರಿಯನ್ನು ದಾನಮಾಡುವುದರಿಂದ ಬ್ರಹ್ಮಾಂಡದೊಳಗಿರುವ ಭೂತಗಳನ್ನೆಲ್ಲಾ ದಾನಮಾಡಿದಂತಾಗುವುದು. ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ.

ಯೋ ಯಜ್ಞೈರ್ಯಜತೇ ರಾಜನ್ ಸಹಸ್ರಶತದಕ್ಷಿಣೈಃ ।
ಸೈಕದೇಶೋ ಯಜೇತ್ತಸ್ಯ ಬ್ರಹ್ಮಾಂಡಸ್ಯ ವಿಶೇಷತಃ ॥ ೬೨ ॥

ಯಃ ಪುನಸ್ಸಕಲಂ ಚೇದಂ ಬ್ರಹ್ಮಾಂಡಂ ಯಜತೇ ನರಃ ।
ತೇನ ಚೇಷ್ಟಂ ಹುತಂ ದತ್ತಂ ಪಠಿತಂ ಕೀರ್ತಿತಂ ಭವೇತ್ ॥ ೬೩ ॥

ಏವಂ ಶ್ರುತ್ವಾ ತತೋ ರಾಜಾ ಹೇಮಕುಂಭಪ್ರಕಲ್ಪಿತಂ ।
ಬ್ರಹ್ಮಾಂಡಂ ಋಷಯೇ ಪ್ರಾದಾತ್ಸವಿಧಾನಂ ಚ ತತ್ಕ್ಷಣಾತ್ ॥ ೬೪ ॥

ಸರ್ವಕಾಮೈಃ ಸಸಂವೀತೋ ಯಯೌ ಸ್ವರ್ಗಂ ನರಾಧಿಪಃ ॥ ೬೫ ॥

ತಸ್ಮಾತ್ತ್ವಮಪಿ ರಾಜೇಂದ್ರ ತದ್ದತ್ವಾ ತು ಸುಖೀ ಭವ ।
ಏವಮುಕ್ತೋ ವಸಿಷ್ಠೇನ ಸೋಽಪ್ಯೇವಮಕರೋನ್ನೃಪಃ ॥
ಜಗಾಮ ಪರಮಾಂ ಸಿದ್ಧಿಂ ಯತ್ರ ಗತ್ವಾ ನ ಶೋಚತಿ ॥ ೬೬ ॥

---

೬೨. ದೊರೆಯೇ, ಲಕ್ಷದಕ್ಷಿಣೆಯುಳ್ಳ ಬೇರೆ ಯಜ್ಞಗಳನ್ನು ಮಾಡುವವನು ಬ್ರಹ್ಮಾಂಡದಲ್ಲಿ ಯಾವುದೋ ಒಂದುಭಾಗವನ್ನು ಮಾತ್ರವೇ ಕೊಟ್ಟಂತಾಗುವುದು.

೬೩. ಪೂರ್ತಿಯಾದ ಈ ಬ್ರಹ್ಮಾಂಡವನ್ನೇ ದಾನಮಾಡುವವನು ಸರ್ವಯಜ್ಞಗಳನ್ನೂ ಮಾಡಿದಂತಾಗುವುದು. ಸರ್ವವನ್ನೂ ಕೊಟ್ಟಂತೆಯೂ, ಸರ್ವವನ್ನೂ ಓದಿ ಕೀರ್ತಿಸಿದಂತೆಯೂ ಆಗುವುದು.

೬೪–೬೫. ಹೀಗೆಂಬುದನ್ನು ಕೇಳಿ, ವಿನೀತಾಶ್ವರಾಜನು ಒಡನೆಯೇ ಸುವರ್ಣಕುಂಭದಲ್ಲಿ ಕಲ್ಪಿಸಿದ ಬ್ರಹ್ಮಾಂಡವನ್ನು ವಿಧಿಪೂರ್ವಕವಾಗಿ ಋಷಿಗೆ ದಾನಮಾಡಿ, ಸರ್ವಕಾಮಸಮೃದ್ಧನಾಗಿ ಸ್ವರ್ಗಕ್ಕೆ ಹೊರಟುಹೋದನು.

೬೬. "ಆದುದರಿಂದ, ಶ್ವೇತರಾಜನೇ, ನೀನೂ ಅದನ್ನು ದಾನಮಾಡಿ, ಸುಖಿಯಾಗು." ಎಂದು ವಸಿಷ್ಠನು ಹೇಳಲು, ಅವನೂ ಹಾಗೆಯೇ ಮಾಡಿ, ಶೋಕರಹಿತವಾದ ಪರಮಸಿದ್ಧಿಯನ್ನು ಪಡೆದನು.

|| ಶ್ರೀ ವರಾಹ ಉವಾಚ ||

ಇಯಂ ತೇ ಕಥಿತಾ ದೇವಿ ಸಂಹಿತಾ ಸರ್ವಕಾಮಿಕಾ ।
ವರಾಹಾಖ್ಯಾ ವರಾರೋಹೇ ಸರ್ವಪಾಪಕನಾಶಿನೀ || ೬೭ ||

ಸರ್ವಜ್ಞಾದುತ್ಥಿತಾ ಚೇಯಂ ತತೋ ಬ್ರಹ್ಮಾ ಬುಬೋಧಹ ।
ಬ್ರಹ್ಮಾ ಸ್ವಸೂನವೇ ಪ್ರಾದಾತ್ಪುಲಸ್ತ್ಯಾಯ ಮಹಾತ್ಮನೇ || ೬೮ ||

ಸೋಽಪಿ ರಾಮಾಯ ಜಪ್ರಾದಾತ್ ಭಾರ್ಗವಾಯ ಮಹಾತ್ಮನೇ ।
ಅಸಾವಪಿ ಸ್ವಶಿಷ್ಯಾಯ ಪ್ರಾದಾದುಗ್ರಾಯ ಧಾರಿಣೆ ।
ಉಗ್ರೋಽಪಿ ಮನವೇ ಪ್ರಾದಾದೇಷ ವಃ ಕೀರ್ತಿತೋಽಮಯಾ || ೬೯ ||

ಸಂಬಂಧಃ ಪೂರ್ವಕಲ್ಪೀಯೋ ದ್ವಿತೀಯಂ ಶೃಣು ಸಾಂಪ್ರತಂ || ೭೦ ||

---

೬೭. ಶ್ರೀವರಾಹ—ಭೂದೇವಿ, ಸರ್ವಕಾಮಪ್ರದಾಯಕವೂ, ಅಥವಾ ಸರ್ವರೂ ಆಶಿಸುವುದೂ, ಸರ್ವಪಾಪನಾಶಕರವೂ ಆದ ಈ ವರಾಹಸಂಹಿತೆಯನ್ನು ನಿನಗೆ ಹೇಳಿದೆನು.

೬೮. ಇದು ಸರ್ವಜ್ಞ(ಪರಮಾತ್ಮ)ನಿಂದುದಿಸಿತು. ಬಳಿಕ ಬ್ರಹ್ಮನು ಅರಿತನು. ಬ್ರಹ್ಮನು ತನ್ನ ಮಗನಾದ ಪುಲಸ್ತ್ಯನಿಗೆ ಹೇಳಿದನು. (ಬೋಧಿಸಿದನು)

೬೯. ಮಹಾತ್ಮನಾದ ಆ ಪುಲಸ್ತ್ಯನು ಮಹಾತ್ಮನಾದ ಪರಶುರಾಮನಿಗೆ ತಿಳಿಸಿಕೊಟ್ಟನು. ಪರಶುರಾಮನು ತನ್ನ ಶಿಷ್ಯನಾದ ಉಗ್ರನಿಗೆ ತಿಳಿಸಿದನು ಉಗ್ರನು ಮನುವಿಗೆ ಬೋಧಿಸಿದನು.

೭೦. ಭೂದೇವಿ, ಈ ಮೊದಲಿನದು (ಹಿಂದಿನದು) ಪೂರ್ವಕಲ್ಪದ ಉಪದೇಶ ಕ್ರಮಸಂಬಂಧವಾಗಿದೆ. ಈಗ ಎರಡನೆಯ ಉಪದೇಶಕ್ರಮವನ್ನು ಕೇಳು.

ಸರ್ವಜ್ಞಾಲ್ಲಬ್ಧವಾನಸ್ಮಿ ತ್ವಂ ಚ ಮತ್ತೋ ಧರಾಧರೇ ।
ತ್ವತ್ತಶ್ಚ ತಪಸಾಸಿದ್ಧಾ ವೇತ್ಸ್ಯಂತೇ ಕಪಿಲಾದಯಃ ॥ ೭೦ ॥

ಕ್ರಮೇಣ ಯಾವದ್ವ್ಯಾಸೇನ ಜ್ಞಾತಮೇತದ್ಭವಿಷ್ಯತಿ ।
ತಸ್ಯಾಪಿ ಶಿಷ್ಯೋ ಭವಿತಾ ನಾಮ್ನಾ ವೈ ರೋಮಹರ್ಷಣಿಃ ॥ ೭೨ ॥

ಅಸೌ ಶುನಕಪುತ್ರಾಯ ಕಥಯಿಷ್ಯತಿ ನಾನ್ಯಥಾ ॥ ೭೩ ॥

ಅಷ್ಟಾದಶಪುರಾಣಾನಿ ವೇದ ದ್ವೈಪಾಯನೋ ಗುರುಃ ॥ ೭೪ ॥

ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ಶೈವಂ ಭಾಗವತಂ ತಥಾ ॥ ೭೫ ॥

ತಥಾನ್ಯಂ ನಾರದೀಯಂ ಚ ಮಾರ್ಕಂಡೇಯಂ ಚ ಸಪ್ತಮಂ ।
ಆಗ್ನೇಯಮಷ್ಟಮಂ ಪ್ರೋಕ್ತಂ ಭವಿಷ್ಯಂ ನವಮಂ ತಥಾ ।
ದಶಮಂ ಬ್ರಹ್ಮವೈವರ್ತಂ ಲೈಂಗಮೇಕಾದಶಂ ಸ್ಮೃತಂ ॥ ೭೬ ॥

---

೭೧. ಸರ್ವಜ್ಞನಿಂದ(ಪರಮಾತ್ಮನಿಂದ) ನಾನು ತಿಳಿದುಕೊಂಡಿದ್ದೇನೆ. ನನ್ನಿಂದ ನೀನು ತಿಳಿದಿದ್ದೀಯೆ. ನಿನ್ನಿಂದ ತಪಸ್ಸಿದ್ಧರಾದ ಕಪಿಲರೇ ಮೊದಲಾದವರು ಅರಿಯುವರು.

೭೨. ಕ್ರಮವಾಗಿ ವ್ಯಾಸರು ಇದನ್ನರಿಯುವರು. ಅವರಿಂದ ಅವರ ಶಿಷ್ಯನಾದ ರೋಮಹರ್ಷಣಿಯು ಅರಿಯುವನು.

೭೩. ರೋಮಹರ್ಷಣಿಯು ಶುನಕನೆಂಬ ಋಷಿಯ ಪುತ್ರರಾದ ಶೌನಕರಿಗೆ ಹೇಳುವನು.

೭೪. ಗುರುವಾದ ವ್ಯಾಸನು ಹದಿದೆಂಟು ಪುರಾಣಗಳನ್ನೂ ಅರಿಯುವನು.

೭೫–೭೬. ೧. ಬ್ರಾಹ್ಮ, ೨. ಪಾದ್ಮ, ೩. ವೈಷ್ಣವ, ೪. ಶೈವ, ೫. ಭಾಗವತ, ೬. ನಾರದೀಯ, ೭. ಮಾರ್ಕಂಡೇಯ, ೮. ಆಗ್ನೇಯ, ೯. ಭವಿಷ್ಯ, ೧೦. ಬ್ರಹ್ಮವೈವರ್ತ, ೧೧. ಲೈಂಗ, ೧೨. ವಾರಾಹ, ೧೩. ಸ್ಕಾಂದ,

ವಾರಾಹಂ ದ್ವಾದಶಂ ಪ್ರೋಕ್ತಂ ಸ್ಕಾಂದಂ ಚಾಪಿತ್ರಯೋದಶಂ ।
ಚತುರ್ದಶಂ ವಾಮನಕಂ ಕೌರ್ಮಂ ಪಂಚದಶಂ ಸ್ಮೃತಂ ।
ಮಾತ್ಸ್ಯಂ ಚಗಾರುಡಂ ಚೈವ ಬ್ರಹ್ಮಾಂಡಂ ಚ ತತಃ ಪರಂ || ೭೭ ||

ಯಏತತ್ಪಾಠಯೇದ್ಭಕ್ತ್ಯಾ ಕಾರ್ತಿಕ್ಯಾಂ ದ್ವಾದಶೀದಿನೇ ।
ತಸ್ಯ ನೂನಂ ಭವೇತ್ಪುತ್ರೋ ಹ್ಯಪುತ್ರಸ್ಯಾಪಿ ಧಾರಿಣಿ || ೭೮ ||

ಯಸ್ಯೇದಂ ತಿಷ್ಠತೇ ಗೇಹೇ ಲಿಖಿತಂ ಪೂಜ್ಯತೇ ಸದಾ ।
ತಸ್ಯ ನಾರಾಯಣೋ ದೇವಃ ಸ್ವಯಂ ತಿಷ್ಠತಿ ಧಾರಿಣಿ || ೭೯ ||

ಯಶ್ಚೈತಚ್ಛೃಣುಯಾದ್ಭಕ್ತ್ಯಾ ನೈರಂತರ್ಯೇಣ ಮಾನವಃ ।
ಶ್ರುತ್ವಾತು ಪೂಜಯೇದ್ಯಸ್ತು ಶಾಸ್ತ್ರಂ ವಾರಾಹಸಂಜ್ಞಿತಂ || ೮೦ ||

ಶ್ರುತ್ವಾ ತು ಪೂಜಯೇಚ್ಛಾಸ್ತ್ರಂ ತಥಾ ವಿಷ್ಣುಂ ಸನಾತನಂ ।
ಗಂಧೈಃ ಪುಷ್ಪೈಸ್ತಥಾ ವಸ್ತ್ರೈರ್ಬ್ರಾಹ್ಮಣಾನಾಂ ಚ ತರ್ಪಣೈಃ || ೮೧ ||

---

೧೪. ವಾಮನ, ೧೫. ಕೌರ್ಮ, ೧೬. ಮಾತ್ಸ್ಯ, ೧೭. ಗಾರುಡ, ೧೮. ಬ್ರಹ್ಮಾಂಡ, ಎಂಬಿವೇ ಹದಿನೆಂಟು ಪುರಾಣಗಳು.

೭೮. ಧಾರಿಣಿ, ಯಾರು ಇದನ್ನು ಭಕ್ತಿಯಿಂದ ಕಾರ್ತೀಕಶುದ್ಧ ದ್ವಾದಶಿಯದಿನ ಓದುವರೋ ಅಥವಾ ಓದಿಸುವರೋ ಅವರು ಅಪುತ್ರವಂತರಾಗಿದ್ದರೂ ನಿಜವಾಗಿಯೂ ಪುತ್ರನನ್ನು ಪಡೆಯುವರು.

೭೯. ಯಾರ ಮನೆಯಲ್ಲಿ ಇದನ್ನು ಬರೆದ ಪುಸ್ತಕವನ್ನು ಸರ್ವದಾ ಪೂಜಿಸುವರೋ, ಅವರ ಮನೆಯಲ್ಲಿ ದೇವನಾದ ನಾರಾಯಣನು ತಾನೇ ಸಾಕ್ಷಾತ್ತಾಗಿ ಇರುವನು.

೮೦–೮೨. ಧರೇ, ಯಾರು ಭಕ್ತಿಯಿಂದ ಇದನ್ನು ಒಂದುವರ್ಷ ನಿರಂತರವಾಗಿ ಕೇಳುವರೋ, ಕೇಳಿ ವಾರಾಹವೆಂಬಹೆಸರಿನ ಶಾಸ್ತ್ರವನ್ನೂ, ಸನಾತನನಾದ ವಿಷ್ಣುವನ್ನೂ ಯಥಾಶಕ್ತಿಯಾಗಿ ಗಂಧಪುಷ್ಪವಸ್ತ್ರಬ್ರಾಹ್ಮಣಸಂತರ್ಪಣೆಗಳಿಂದ

ಯಥಾಶಕ್ತ್ಯಾ ನೃಪೋಗ್ರಾಮ್ಯೈಃ ಪೂಜಯೇದ್ವತ್ಸರಂ ಧರೇ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೮೨ ॥

ಇತಿ ಶ್ರೀವರಾಹಪುರಾಣೇ ಶ್ವೇತವಿನೀತಾಶ್ವೋಪಾಖ್ಯಾನೇ ಉಭಯತೋ ಮುಖೀಗೋದಾನ ಹೇಮಕುಂಭದಾನ ಪುರಾಣಪ್ರಶಂಸನಂ ನಾಮ ದ್ವಾದಶಾಧಿಕಶತತಮೋಽಧ್ಯಾಯಃ

ಪೂಜಿಸುವರೋ ಅವರೂ, ಗ್ರಾಮದಾನಾದಿಗಳಿಂದ ಪೂಜಿಸುವ ರಾಜನೂ, ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿ, ವಿಷ್ಣುಸಾಯುಜ್ಯವನ್ನು ಪಡೆಯುವರು.

ಅಧ್ಯಾಯದ ಸಾರಾಂಶ :—

ಶ್ರೀವರಾಹನು, ಭೂದೇವಿಗೆ ಕಪಿಲೆಯ ಮಹಿಮೆ, ಶೂದ್ರರು ಕಪಿಲೆಯನ್ನು ದಾನಮಾಡಬಾರದು, ಬ್ರಾಹ್ಮಣರು ಅವರಿಂದ ತೆಗೆದುಕೊಳ್ಳಬಾರದು ಎಂಬ ವಿಚಾರ, ಈನುತ್ತಿರುವ ಸಮಯದಲ್ಲಿ ಹಸುವನ್ನು ದಾನಮಾಡುವುದರ ಮಹಿಮೆ, ಕಪಿಲೆಯ ದಾನಕ್ರಮ, ಅದರ ಫಲ, ಬ್ರಹ್ಮಾಂಡರೂಪದ ಹೇಮಕುಂಭದಾನದ ಮಹಿಮೆ, ಶ್ವೇತರಾಜನ ಮುಕ್ತಿ, ವಾರಾಹಸಂಹಿತೆಯು ಲೋಕದಲ್ಲಿ ಪ್ರಚಾರಕ್ಕೆ ಬಂದ ಬಗೆ, ಪುರಾಣಗಳ ಗಣನೆ, ಪುರಾಣ ಅಥವಾ ಸಂಹಿತೆಯ ಶ್ರವಣಾದಿಫಲ ಇವುಗಳನ್ನು ತಿಳಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಹನ್ನೆರಡನೆಯ ಅಧ್ಯಾಯ.

॥ ಶ್ರೀಃ ॥

-X-

ತ್ರಯೋದಶಾಧಿಕಶತತಮೋಽಧ್ಯಾಯಃ

ಅಥ ಭಗವತ್ಸ್ತುತಿಃ

*ಓಂ ನಮೋ ವರಾಹಾಯ ನಮೋ ಬ್ರಹ್ಮಪುತ್ರಾಯ ಸನತ್ಕುಮಾರಾಯ ನಮಃ ॥ ೧ ॥

ಸ ತೇನ ಸಾಂತ್ವಿತಾಯಾಂ ವೈ ಪೃಥಿವ್ಯಾಂ ಯಸ್ಸಮಾಗತಃ ।
ಸನತ್ಕುಮಾರಸ್ತತ್ಕ್ಷೇತ್ರೇ ದೃಷ್ಟ್ವಾ ತಾಂ ಸಂಸ್ಥಿತಾಂ ಮಹೀಂ ॥ ೨ ॥

ಸ್ವಸ್ತಿವಾಚ್ಯಾಹ ಪುಣ್ಯಾಗ್ರೇ ಪ್ರತ್ಯುವಾಚ ವಸುಂಧರಾಂ ॥ ೩ ॥

ನೂರ ಹದಿಮೂರನೆಯ ಅಧ್ಯಾಯ

ಭಗವಂತನ ಸ್ತುತಿ.

೧. *ಓಂ ಶ್ರೀ ವರಾಹನಿಗೆ ನಮಸ್ಕಾರ. ಬ್ರಹ್ಮಪುತ್ರನಾದ ಸನತ್ಕುಮಾರನಿಗೆ ನಮಸ್ಕಾರ.

೨-೩. ಶ್ರೀ ವರಾಹರೂಪಧರನಾದ ವಿಷ್ಣುವು ಭೂದೇವಿಯನ್ನು ಉದ್ಧರಿಸಿ ಸಂತೈಸಿದಾಗ ಆ ಕ್ಷೇತ್ರಕ್ಕೆ ಬಂದ ಸನತ್ಕುಮಾರಮುನಿಯು ಅಲ್ಲಿದ್ದ ಭೂದೇವಿಯನ್ನು ಕಂಡು, ಪುಣ್ಯಪ್ರದಳಾದ ಅವಳ ಮುಂದುಗಡೆಯಲ್ಲಿ ಜಯವನ್ನು ನುಡಿದು, ಅವಳೊಡನೆ ಮುಂದಿನಂತೆ ಮಾತನಾಡಿದನು.

---

* ಈ ವಾಕ್ಯವೂ ಬಳಿಕ ಈ ಪುರಾಣದ ಮೊದಲನೆಯ ಅಧ್ಯಾಯದ ಆದಿಯ ನಾಲ್ಕು ಶ್ಲೋಕಗಳೂ ಸ್ವಲ್ಪಭಾಗದಲ್ಲಿ ಅಶುದ್ಧವಾಗಿ ಬೊಂಬಾಯಿ ಪ್ರತಿಯಲ್ಲಿ ಮಾತ್ರ ಇವೆ.

॥ ಸನತ್ಕುಮಾರ ಉವಾಚ ॥

ಯಂ ದೃಷ್ಟ್ವಾ ವರ್ಧಸೇ ದೇವಿ ತ್ವಂ ಚ ಯಸ್ಯಾಸಿ ಮಾಧವಿ ।
ವಿಷ್ಣುನಾ ಧಾರ್ಯಮಾಣಾ ಚ ಕಿಂ ತ್ವಯಾ ದೃಷ್ಟಮದ್ಭುತಂ ॥
ಏತದಾಚಕ್ಷ್ವ ತತ್ತ್ವೇನ ಯತ್ತೇ ಹರಿಮುಖಾಚ್ಛ್ರುತಂ ॥ ೪ ॥

ಬ್ರಹ್ಮಪುತ್ರವಚಃ ಶ್ರುತ್ವಾ ಪೃಥಿವೀ ವಾಕ್ಯಮಬ್ರವೀತ್ ॥ ೫ ॥

॥ ಧರಣ್ಯುವಾಚ ॥

ಯದ್ಗುಹ್ಯಂ ಸ ಮಯಾ ಪೃಷ್ಟೋ ಯಚ್ಚ ಮೇ ಸಂಪ್ರಭಾಷಿತಂ ।
ಶೃಣು ತತ್ತ್ವೇನ ವಿಪ್ರೇಂದ್ರ ಗುಹ್ಯಂ ಧರ್ಮಂ ಮಹೌಜಸಂ ॥ ೬ ॥

ಭಗವತ್ಪ್ರೋಕ್ತಧರ್ಮೇಷು ಯದ್ಗುಹ್ಯಂ ಕಥಯಾಮ್ಯಹಂ ॥ ೭ ॥

ತೇನ ಮೇ ಕಥಿತಂ ಹ್ಯೇತತ್ಸಂಸಾರಾತ್ತು ವಿಮೋಕ್ಷಣಂ ।
ವಿಷ್ಣುಭಕ್ತೇನ ಯತ್ಕಾರ್ಯಂ ಯತ್ಕ್ರಿಯಾಪರಿತಿಷ್ಠತಾ ॥ ೮ ॥

---

೪. ಸನತ್ಕುಮಾರ—ಮಾಧವಿ, ನೀನು ಯಾರವಳೋ, ಯಾರನ್ನು ನೋಡಿ ಬೆಳೆಯುವೆಯೋ, ಆ ವಿಷ್ಣುವು ನಿನ್ನನ್ನು ಧರಿಸಿದಾಗ ನೀನು ಕಂಡ ಆಶ್ಚರ್ಯವನ್ನೂ ಆ ಹರಿಯ ಬಾಯಿಂದ ನೀನು ಕೇಳಿದುದನ್ನೂ ನಿಜವಾಗಿ ನನಗೆ ಹೇಳು.

೫. ಬ್ರಹ್ಮಪುತ್ರನ ಆ ಮಾತನ್ನು ಕೇಳಿ ಭೂದೇವಿಯು ಮುಂದಿನ ಮಾತ ನಾಡಿದಳು.

೬–೭. ಭೂದೇವಿ—ಬ್ರಾಹ್ಮಣೋತ್ತಮಾ, ಗ್ರಹಿಸಬೇಕಾದ ಯಾವುದನ್ನು ನಾನು ಶ್ರೀ ವರಾಹನನ್ನು ಕೇಳಿದೆನೋ, ನಾನು ಏನು ಮಾತನಾಡಿದೆನೋ, ಆ ಅತ್ಯುಜ್ವಲವೂ, ರಹಸ್ಯವೂ ಆದ ಧರ್ಮವನ್ನೂ, ಭಗವಂತನು ಹೇಳಿದ ಧರ್ಮ ಗಳಲ್ಲಿ ಯಾವುದನ್ನು ಗ್ರಹಿಸಿ ಆಚರಿಸಬೇಕೆಂಬುದನ್ನೂ ನಾನು ಹೇಳುತ್ತೇನೆ.

೮. ಕರ್ಮಾಸಕ್ತನಾದ ವಿಷ್ಣುಭಕ್ತನು ಮಾಡಬೇಕಾದ ಸಂಸಾರವಿಮೋ ಚಕವಾದ ಆ ಕಾರ್ಯವನ್ನು ಆ ದೇವನು ನನಗೆ ಹೇಳಿದ್ದಾನೆ.

ಉವಾಚ ಪರಮಂ ಗುಹ್ಯಂ ಧರ್ಮಾಣಾಂ ವ್ಯಾಪ್ತನಿಶ್ಚಯಂ ।
ಅಯಂ ಧರ್ಮೋ ಮಯಾ ಹ್ಯೇತತ್ ಶ್ರುತೋ ಧರ್ಮೇ ಸನಾತನೇ॥ ೯ ॥

ತತೋ ಮಹೀವಚಃ ಶ್ರುತ್ವಾ ಬ್ರಹ್ಮಪುತ್ರೋ ಮಹಾತಪಾಃ ।
ಕೋಕಾಮುಖೇ ಮಮ ಕ್ಷೇತ್ರೇ ಜಪಂತೋ ಬ್ರಹ್ಮವಾದಿನಃ ॥ ೧೦ ॥

ತಾನ್ಸರ್ವಾನಾನಯಾಮಾಸ ಯತ್ರ ದೇವೀ ವ್ಯವಸ್ಥಿತಾ ।
ಸನತ್ಕುಮಾರಃ ಪೂತಾತ್ಮಾ ಪ್ರತ್ಯುವಾಚ ಮಹೀಂ ಪ್ರತಿ ॥ ೧೧ ॥

ಯನ್ಮಯಾ ಪೂರ್ವಮುಕ್ತಾಸಿ ಕಥಯಸ್ವ ವರಾನನೇ ।
ಅಪ್ರಮೇಯಗತಿಂ ಚೈವ ಧರ್ಮಮಾಚಕ್ಷ್ವ ತತ್ವತಃ ॥ ೧೨ ॥

ತತಸ್ತಸ್ಯ ವಚಃ ಶ್ರುತ್ವಾ ಪ್ರಣಮ್ಯ ಋಷಿಪುಂಗವಂ ।
ಉವಾಚ ಪರಮಪ್ರೀತಾ ಧಾತ್ರೀ ಮಧುರಯಾ ಗಿರಾ ॥ ೧೩ ॥

---

೯. ಆ ದೇವನು ಧರ್ಮಗಳ ನಿಜವಾದ ಸಾರವೂ, ಅತಿರಹಸ್ಯವೂ ಆದುದನ್ನು ಹೇಳಿದನು. ಸನಾತನಧರ್ಮದಲ್ಲಿ ಈ ಧರ್ಮವನ್ನು ನಾನು ಕೇಳಿದೆನು.

೧೦–೧೧. ಬಳಿಕ ಭೂದೇವಿಯ ಮಾತನ್ನು ಕೇಳಿ ಮಹಾತಪಸ್ವಿಯೂ, ಪವಿತ್ರಾತ್ಮನೂ, ಬ್ರಹ್ಮಪುತ್ರನೂ ಆದ ಸನತ್ಕುಮಾರನು ನನ್ನ ಕ್ಷೇತ್ರವಾದ ಕೋಕಾಮುಖದಲ್ಲಿದ್ದ ಬ್ರಹ್ಮವಾದಿಗಳಾದ ತಪಸ್ವಿಗಳೆಲ್ಲರನ್ನೂ ಆ ದೇವಿಯಿದ್ದೆಡೆಗೆ ಕರೆದುಕೊಂಡು ಬಂದು, ದೇವಿಯನ್ನು ಕುರಿತು ಇಂತೆಂದನು.

೧೨. ಸುಂದರಮುಖೀ, ನಾನು ಹಿಂದೆ ಕೇಳಿದ ಅಮಿತಗತಿಯನ್ನೂ, ಧರ್ಮವನ್ನೂ ತಾತ್ವಿಕವಾಗಿ(ನಿಜವಾಗಿ) ಹೇಳು."

೧೩. ಬಳಿಕ ಋಷಿವರ್ಯನಾದ ಆತನ ಮಾತನ್ನು ಕೇಳಿ, ಭೂದೇವಿಯು ಆತನಿಗೆ ನಮಿಸಿ, ಪರಮಪ್ರೀತಳಾಗಿ ಇನಿದಾದ ಮಾತಿನಿಂದ ಹೇಳಿದಳು.

॥ ಧರಣ್ಯುವಾಚ ॥

ಶೃಣ್ವಂತು ಋಷಯಸ್ಸರ್ವೇ ಯತ್ತದ್ವಿಷ್ಣುಮುಖಾಚ್ಛ್ರುತಂ ।
ಬಾಢಮಿತ್ಯೇವ ತಾಂ ದೇವಿ ಸ್ವಸ್ತಿ ಬ್ರೂಹೀತಿ ಸೋಽಬ್ರವೀತ್ ॥ ೧೪ ॥

ನಷ್ಟಚಂದ್ರಾನಿಲೇ ಲೋಕೇ ನಷ್ಟಭಾಸ್ಕರತಾರಕೇ ।
ಸ್ತಂಭಿತಾಶ್ಚ ದಿಶಸ್ಸರ್ವಾಃ ನ ಪ್ರಾಜ್ಞಾಯತ ಕಿಂಚನ ॥ ೧೫ ॥

ನ ವಾತಿ ಪವನಸ್ತತ್ರ ನೈವ ಚಾಗ್ನಿರ್ನ ವಿದ್ಯುತಃ ।
ನ ಕಿಂಚಿತ್ತತ್ರ ವಿದ್ಯೇತ ನ ತಾರಾ ನ ಚ ರಾಶಯಃ ॥ ೧೬ ॥

* ನ ಚೈವಾಂಗಾರಕಸ್ತತ್ರ ನ ಶುಕ್ರೋ ನ ಬೃಹಸ್ಪತಿಃ ।
ಶನೈಶ್ಚರೋ ಬುಧೋ ನಾತ್ರ ನ ಚೇಂದ್ರೋ ಧನದೋ ಯಮಃ ॥ ೧೭ ॥

---

೧೪. ಧರಣಿದೇವಿ—"ವಿಷ್ಣುವಿನ ಬಾಯಿಂದ ನಾನು ಕೇಳಿದುದನ್ನು ಋಷಿಗಳೆಲ್ಲರೂ ಕೇಳಿರಿ." ಎನಲು, "ಸಿದ್ಧರಾಗಿದ್ದೇವೆ. ದೇವಿ, ಮಂಗಳವಾಗಲಿ, ಹೇಳು" ಎಂದು ಆಕೆಗೆ ಸನತ್ಕುಮಾರನು ಹೇಳಿದನು.

೧೫–೧೬. ಚಂದ್ರಸೂರ್ಯವಾಯುಗಳಾಗಲಿ, ನಕ್ಷತ್ರಗಳಾಗಲಿ ಇಲ್ಲದ ಅಲ್ಲಿ ಲೋಕ ದಿಕ್ಕುಗಳೆಲ್ಲವೂ ಸ್ತಬ್ಧವಾಗಿವೆ. ಅಲ್ಲೇನೂ ತಿಳಿಯುವುದಿಲ್ಲ. ಅಲ್ಲಿ ಗಾಳಿ ಬೀಸದು. ಬೆಂಕಿಯಿಲ್ಲ. ಮಿಂಚಿಲ್ಲ. ನಕ್ಷತ್ರಗಳಾಗಲಿ, ರಾಶಿಗಳಾಗಲಿ ಅಲ್ಲೇನೂ ಇಲ್ಲ.

೧೭. * ಅಲ್ಲಿ ಕುಜನಾಗಲಿ, ಶುಕ್ರನಾಗಲಿ, ಬೃಹಸ್ಪತಿಯಾಗಲಿ, ಬುಧನಾಗಲಿ, ಶನಿಯಾಗಲಿ, ಇಂದ್ರನಾಗಲಿ, ಕುಬೇರನಾಗಲಿ, ಯಮನಾಗಲಿ ಇಲ್ಲ.

---

* ೧೬ ನೆಯ ಶ್ಲೋಕವಾದ ಬಳಿಕ ಈ ಸಂದರ್ಭಕ್ಕೆ ಹೊಂದದ ಭೂದೇವಿಯು ಮಾಡಿದ ವರಾಹಸ್ತುತಿಯ, ಮೊದಲನೆಯ ಅಧ್ಯಾಯದಲ್ಲಿರುವ ೫ ರಿಂದ ೧೧ ಶ್ಲೋಕಗಳೂ,

"ಸೃಷ್ಟ್ವಾ ಕಿಮಾದಿಶಃ ಸರ್ವಾ ನ ಪ್ರಾಜ್ಞಾಯತ ಕಿಂಚನ" ಎಂಬ ಶ್ಲೋಕಾರ್ಧವೂ,

"ನ ವಾತಿ ಪವನಸ್ತತ್ರ ನ ಚೈವಾಗ್ನಿರ್ನ ವಾತಿ ಚ ।
ಅಂಶವಶ್ಚ ನ ವಿಂದ್ಯಂತೇ ನ ನಕ್ಷತ್ರಾ ನ ವಾ ಗ್ರಹಾಃ ॥"

ಎಂಬ ಪುನರುಕ್ತ ಶ್ಲೋಕವೂ ಬೊಂಬಾಯಿನ ಮುದ್ರಿತ ಪುಸ್ತಕದಲ್ಲಿದೆ.

ವರುಣೋಪಿ ನ ವಿದ್ಯೇತ ನಾನ್ಯೇ ಕೇಚಿದ್ದಿವೌಕಸಃ ।
ವರ್ಜಯಿತ್ವಾತ್ರ ತ್ರೀನ್ದೇವಾನ್ಬ್ರಹ್ಮವಿಷ್ಣುಮಹೇಶ್ವರಾನ್ ॥ ೧೮ ॥

ಪೃಥಿವೀ ಭಾರಸಂತಪ್ತಾ ಬ್ರಹ್ಮಾಣಂ ಶರಣಂ ಗತಾ ।
ಗತ್ವಾ ಚ ಶರಣಂ ದೇವಿ ದೈನ್ಯಂ ವದತಿ ಮಾಧವೀ ॥ ೧೯ ॥

ಪ್ರಸೀದ ಮಮ ದೇವೇಂದ್ರ ಮಗ್ನಾಹಂ ಭಾರಪೀಡಿತಾ ।
ಸಪರ್ವತವನೈಸ್ಸಾರ್ಧಂ ಮಾಂ ತಾರಯ ಪಿತಾಮಹ ॥ ೨೦ ॥

ಪೃಥಿವ್ಯಾ ವಚನಂ ಶ್ರುತ್ವಾ ಬ್ರಹ್ಮಾ ಲೋಕಪಿತಾಮಹಃ ।
ಮುಹೂರ್ತಂ ಧ್ಯಾನಮಾಸ್ಥಾಯ ಪೃಥಿವೀಂತಾಮುವಾಚ ಹ ॥ ೨೧ ॥

ನಾಹಂ ತಾರಯಿತುಂ ಶಕ್ತೋ ವಿಷಮಸ್ಥಾಂ ವಸುಂಧರೇ ।
ಲೋಕನಾಥಂ ಸುರಶ್ರೇಷ್ಠಮಾದಿಕರ್ತಾರಮಂಜಸಾ ॥ ೨೨ ॥

ಲೋಕೇಶಂ ಧನ್ವಿನಂ ಶ್ರೇಷ್ಠಂ ಯಾಹಿ ಮಾಯಾಕರಂಡಕಂ ॥ ೨೩ ॥

---

೧೮. ಅಲ್ಲಿ ವರುಣನೂ ಇಲ್ಲ. ಬ್ರಹ್ಮವಿಷ್ಣುಮಹೇಶ್ವರರೆಂಬ ಮೂವರು ದೇವರು ಹೊರತು ಮತ್ತಾವ ದೇವತೆಗಳೂ ಅಲ್ಲಿಲ್ಲ.

೧೯-೨೦. ಭಾರಪೀಡಿತಳಾದ ಪೃಥ್ವೀದೇವಿಯು ಬ್ರಹ್ಮನನ್ನು ಮರೆಹೊಕ್ಕು, ದೈನ್ಯದಿಂದ, " ದೇವೇಂದ್ರ, ನನಗೆ ಪ್ರಸನ್ನನಾಗು ಭಾರಪೀಡಿತಳಾಗಿ ನಾನು ಮುಳುಗಿದ್ದೇನೆ ಲೋಕಕ್ಕೇ ಅಜ್ಜ, ಪರ್ವತವನಗಳೊಡನೆ ನನ್ನನ್ನು ಕಾಪಾಡು " ಎಂದಳು.

೨೧. ಪೃಥಿವೀದೇವಿಯ ಮಾತನ್ನು ಕೇಳಿ, ಲೋಕಕ್ಕೇ ಅಜ್ಜನಾದ ಬ್ರಹ್ಮನು ಮುಹೂರ್ತಕಾಲ(ಧ್ಯಾನಾಸಕ್ತನಾಗಿ) ಯೋಚಿಸಿ, ಅವಳನ್ನು ಕುರಿತು ಹೇಳಿದನು.

೨೨-೨೩. " ವಸುಂಧರೆ, ಕಷ್ಟದಲ್ಲಿ ಸಿಕ್ಕಿರುವ ನಿನ್ನನ್ನು ಕಾಪಾಡಲು ನಾನು ಶಕ್ತನಲ್ಲ. ಲೋಕಕ್ಕೊಡೆಯನೂ, ದೇವೋತ್ತಮನೂ, ಆದಿಕರ್ತೃವೂ, ಧನುರ್ಧಾರಿಯೂ, ಶ್ರೇಷ್ಠನೂ, ಮಾಯಾಕರಂಡಕನೂ ಆದ ವಿಷ್ಣುವಿನ ಹತ್ತಿರ ಬೇಗನೆ ಹೋಗು.

ಸರ್ವೇಷಾಮೇವ ನಃ ಕಾರ್ಯಂ ಯಚ್ಚ ಕಿಂಚಿತ್ಪ್ರವರ್ತತೇ ।
ಸರ್ವಾಂಸ್ತಾರಯಿತುಂ ಶಕ್ತಃ ಕಿಂ ಪುನಸ್ತ್ವಾಂ ವಸುಂಧರೇ ॥ ೨೪ ॥

ಅನಂತಶಯನೇ ದೇವಂ ಶಯಾನಂ ಯೋಗಶಾಯಿನಂ ।
ತತಃ ಕಮಲಪತ್ರಾಕ್ಷೀ ನಾನಾಭರಣಭೂಷಿತಾ ।
ಕೃತಾಂಜಲಿಪುಟಾ ದೇವೀ ಪ್ರಸಾದಯತಿ ಮಾಧವಂ ॥ ೨೫ ॥

॥ ಧರಣ್ಯುವಾಚ ॥

ಅಹಂ ಭಾರಸಮಾಯುಕ್ತಾ ಬ್ರಹ್ಮಾಣಂ ಶರಣಂ ಗತಾ ॥ ೨೬ ॥

ಪ್ರತ್ಯಾಖ್ಯಾತಾ ಭಗವತಾ ತೇನಾಪ್ಯುಕ್ತಮಿದಂ ವಚಃ ।
ನಾಹಂ ತಾರಯಿತುಂ ಶಕ್ತಃ ಸುಶ್ರೋಣಿ ವ್ರಜ ಮಾಧವಂ ॥ ೨೭ ॥

ಸ ತ್ವಾಂ ತಾರಯಿತುಂ ಶಕ್ತೋ ಮಗ್ನಾಸಿ ಯದಿ ಸಾಗರೇ ।
ಪ್ರಸೀದ ಮಮ ದೇವೇಶ ಲೋಕನಾಥ ಜಗತ್ಪ್ರಭೋ ॥ ೨೮ ॥

---

೨೪. ವಸುಂಧರೇ, ನಮ್ಮೆಲ್ಲರ ಯಾವುದೊಂದು ಕೆಲಸವಾದರೂ ಅದನ್ನು ನೆರವೇರಿಸಿ, ಎಲ್ಲರನ್ನೂ ಉತ್ತೀರ್ಣರನ್ನಾಗಿ ಮಾಡಿ ರಕ್ಷಿಸಲು ಆತನು ಶಕ್ತನಾಗಿರುವಲ್ಲಿ ನಿನ್ನನ್ನು ರಕ್ಷಿಸುವನೆಂಬುದನ್ನು ಹೇಳಬೇಕಾದುದೇನು !" ಎಂದನು.

೨೫. ಬಳಿಕ ಕಮಲದಳನೇತ್ರೆಯೂ, ನಾನಾಭರಣಾಲಂಕೃತೆಯೂ ಆದ ದೇವಿಯು ಕೈಮುಗಿದುಕೊಂಡು, ಆದಿಶೇಷಪರ್ಯಂಕದಲ್ಲಿ ಯೋಗನಿದ್ರೆಯಲ್ಲಿ ಮಲಗಿರುವ ಮಾಧವದೇವನನ್ನು ಒಲಿಸುವಳು.

೨೬–೨೮. ಭೂದೇವಿ—ಲೋಕನಾಥ, ದೇವೇಶ, ನಾನು ಭಾರದಿಂದ ಕೂಡಿದವಳಾಗಿ ಬ್ರಹ್ಮನನ್ನು ಮರೆಹೊಕ್ಕೆನು. ಪೂಜ್ಯನಾದ ಆತನು ನನ್ನನ್ನು ನಿರಾಕರಿಸಿ, 'ಸುಂದರಿ, ನಾನು ನಿನ್ನನ್ನು ರಕ್ಷಿಸಲು ಶಕ್ತನಲ್ಲ. ಲಕ್ಷ್ಮೀನಾಥನಾದ ವಿಷ್ಣುವಿನ ಹತ್ತಿರ ಹೋಗು. ಸಾಗರದಲ್ಲಿ ಮುಳುಗಿರುವೆಯಾದರೆ ಆತನೇ ನಿನ್ನನ್ನು ಉದ್ಧಾರಮಾಡಲು ಶಕ್ತನು.' ಎಂದು ಹೇಳಿದನು. ಜಗತ್ಪ್ರಭೂ, ನನಗೆ ಪ್ರಸನ್ನನಾಗು.

ಭಕ್ತ್ಯಾ ತ್ವಾಂ ಶರಣಂ ಯಾಮಿ ಪ್ರಸೀದ ಮಮ ಮಾಧವ ।
ತ್ವಮಾದಿತ್ಯಶ್ಚ ಚಂದ್ರಶ್ಚ ತ್ವಂ ಯಮೋ ಧನದಸ್ತ್ವಥ ॥ ೨೯ ॥

ವಾಸವೋ ವರುಣಶ್ಚಾಸಿ ಹ್ಯಗ್ನಿರ್ಮಾರುತ ಏವ ಚ ।
*ಅಕ್ಷರಶ್ಚ ಕ್ಷರಶ್ಚಾಸಿ ತ್ವಂ ದಿಶೋ ವಿದಿಶೋ ಭವಾನ್ ॥ ೩೦ ॥

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹೋಽಸಿ ವಾಮನಃ ।
ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀ ಮಹಾತ್ಮವಾನ್ ॥ ೩೧ ॥

ಏವಂ ಪಶ್ಯಸಿ ಯೋಗೇನ ಶ್ರೂಯತೇ ತ್ವಂ ಮಹಾಯಶಾಃ ।
ಯುಗಾಯುತಸಹಸ್ರಾಣಿ ವ್ಯತೀತಾನ್ಯಸಿ ಸಂಸ್ಥಿತಃ ॥ ೩೨ ॥

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಂ ।
ಶಬ್ದಸ್ಪರ್ಶಸ್ವರೂಪೋಽಸಿ ರಸೋ ಗಂಧೋಽಸಿ ನೋ ಭವಾನ್ ॥ ೩೩ ॥

೨೯–೩೦. ಮಾಧವಾ, ಭಕ್ತಿಯಿಂದ ನಿನ್ನನ್ನು ಮರೆಹೊಗುತ್ತೇನೆ. ನನಗೆ ಕರುಣಿಸು. ನೀನೇ ಸೂರ್ಯ, ನೀನೇ ಚಂದ್ರ, ಯಮನೂ, ಕುಬೇರನೂ ನೀನೇ. ಇಂದ್ರನೂ, ವರುಣನೂ, ಅಗ್ನಿಯೂ, ವಾಯುವೂ ನೀನೇ. ನೀನು ಅಕ್ಷರನೂ, ಕ್ಷರನೂ ಆಗಿದ್ದೀಯೆ, ದಿಕ್ಕುಗಳೂ, ವಿದಿಕ್ಕುಗಳೂ ನೀನೇ.

೩೧–೩೨. ಮಹಾಯಶನೂ, ಮಹಾತ್ಮನೂ ಆದ ನೀನೇ ಯೋಗದಿಂದ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ ರೂಪಗಳಿಂದ ಅವತರಿಸಿದೆಯೆಂದು ಕೇಳಿದ್ದೇವೆ. ಕೋಟಿಯುಗಗಳು ಕಳೆದುಹೋದುವು, ನೀನು(ಮಾತ್ರ)ಇದ್ದೇ ಇದ್ದೀಯೆ.

೩೩–೩೬. ಭೂಮಿ, ಜಲ, ತೇಜಸ್ಸು, ವಾಯು, ಆಕಾಶಗಳೆಂಬ ಪಂಚ ಭೂತಗಳೂ, ಶಬ್ದಸ್ಪರ್ಶರೂಪರಸಗಂಧ ವಿಷಯಗಳೂ ನೀನೇ. ಗ್ರಹಗಳೊಡ

---

* ಅಕ್ಷರ = ನಾಶರಹಿತ, ಕುಂದದವನು.

ಸಗ್ರಹಾಣಿ ಚ ಋಕ್ಷಾಣಿ ಕಲಾಕಾಷ್ಠಾಮುಹೂರ್ತಕಾಃ ।
*[ಸಗ್ರಹಾ ಯೇ ಚ ನಕ್ಷತ್ರಾ ಕಲಾಕಾಲಮುಹೂರ್ತಕಾಃ] ॥ ೩೪ ॥

ಜ್ಯೋತಿಶ್ಚಕ್ರಂ ಧ್ರುವಶ್ಚಾಪಿ ಸರ್ವೇಷು ದ್ಯೋತತೇ ಭವಾನ್ ।
ಮಾಸಃ ಪಕ್ಷಮಹೋರಾತ್ರಮೃತುಃ ಸಂವತ್ಸರಾಣ್ಯಪಿ ॥ ೩೫ ॥

ಕಲಾಕಾಷ್ಠಾಪಿ ಷಣ್ಮಾಸಾಃ ಷಡ್ರಸಾಶ್ಚಾಪಿ ಸಂಯುಮಃ ।
ಸರಿತಃ ಸಾಗರಾಶ್ಚ ತ್ವಂ ಪರ್ವತಾಶ್ಚ ಮಹೋರಗಾಃ ॥ ೩೬ ॥

ತ್ವಂ ಮೇರುರ್ಮಂದರೋ ವಿಂಧ್ಯೋ ಮಲಯೋ ದರ್ದುರೋ ಭವಾನ್ ।
ಹಿಮವಾನ್ನಿಷಧಶ್ಚಾಪಿ ಸಚಕ್ರೋಸಿ ವರಾಯುಧಃ ॥ ೩೭ ॥

ಧನುಷಾಂ ಚ ಪಿನಾಕೋಽಸಿ ಸಾಂಖ್ಯಯೋಗೋಽಸಿ ಚೋತ್ತಮಃ ।
ಪರಂಪರೋಽಸಿ ಲೋಕಾನಾಂ ನಾರಾಯಣಃ ಪರಾಯಣಃ ॥ ೩೮ ॥

ಗೂಡಿದ ನಕ್ಷತ್ರಗಳೂ, ಕಲಾಕಾಷ್ಠಾಮುಹೂರ್ತಾದಿಕಾಲವೂ ನೀನೇ. ಜ್ಯೋತಿರ್ಮಂಡಲವೂ, ಧ್ರುವನೂ ನೀನೇ, ಎಲ್ಲದರಲ್ಲಿಯೂ ನೀನೇ ಪ್ರಕಾಶಿಸುವೆ. ಅಹೋರಾತ್ರಿಗಳೂ, ಪಕ್ಷಮಾಸ ಋತುಸಂವತ್ಸರಗಳೂ, ಷಣ್ಮಾಸಷಡ್ರಸಗಳೂ, ನದಿಸಾಗರ ಪರ್ವತ ಮಹೋರಗಗಳೂ ನೀನೇ ಆಗಿರುವೆ.

೩೭. ಮೇರುವೂ, ಮಂದರವೂ, ವಿಂಧ್ಯವೂ, ಮಲಯವೂ, ದರ್ದುರವೂ, ಹಿಮಾಲಯವೂ, ನಿಷಧವೂ, ನೀನೇ. ನೀನು ಶ್ರೇಷ್ಠವಾದ ಚಕ್ರಾಯುಧವುಳ್ಳವನಾಗಿದ್ದೀಯೆ.

೩೮–೩೯. ಧನಸ್ಸುಗಳಲ್ಲಿ ಪಿನಾಕವೂ, ಷಡ್ದರ್ಶನಗಳಲ್ಲಿ ಉತ್ತಮವಾದ ಸಾಂಖ್ಯಯೋಗವೂ, ಲೋಕಗಳಲ್ಲಿ ಪರಾತ್ಪರಲೋಕವೂ, ನಾರಾಯಣನೂ,

---

* ಪುನರುಕ್ತಿ.

ಸಂಕ್ಷಿಪ್ತಶ್ಚೈವ ವಿಸ್ತಾರೋ ಗೋಪ್ತಾ ಯಜ್ಞಶ್ಚ ಶಾಶ್ವತಃ ।
ಯಜ್ಞಾನಾಂ ಚ ಮಹಾಯಜ್ಞೋ ಯೂಪಾನಾಮಪಿ ಸಂಸ್ಥಿತಃ ॥ ೩೯ ॥

ವೇದಾನಾಂ ಸಾಮವೇದೋಽಸಿ ಸಾಂಗೋಪಾಂಗೋ ಮಹಾವ್ರತಃ ।
ಗರ್ಜನಂ ವರ್ಷಣಂ ಚಾಸಿ ತ್ವಂ ವೇಧಾ ಸ್ತ್ವಂ ಋತಾತೇ ॥ ೪೦ ॥

ಅಮೃತಂ ಸೃಜಸೇ ವಿಷ್ಣೋ ಯಚ್ಚ ಲೋಕಾನಧಾರಯತ್ ।
ತ್ವಂ ಪ್ರೀತಿಸ್ತ್ವಂ ಪರಾ ಪ್ರೀತಿಃ ಪುರಾಣಃ ಪುರುಷೋ ಭವಾನ್ ॥ ೪೧ ॥

ಧೇಯಾಧೇಯಂ ಜಗತ್ಸರ್ವಂ ಯಚ್ಚ ಕಿಂಚಿತ್ಪ್ರವರ್ತತೇ ।
ಸಪ್ತಾನಾಮಪಿ ಲೋಕಾನಾಂ ತ್ವಂ ನಾಥಸ್ತ್ವಮಸಂಗ್ರಹಃ ॥ ೪೨ ॥

ತ್ವಂ ಚ ಕಾಲಶ್ಚ ಮೃತ್ಯುಶ್ಚ ತ್ವಂ ಭೂತೋ ಭೂತಭಾವನಃ ।
ಆದಿಮಧ್ಯಾಂತರೂಪೋಽಸಿ ಮೇಧಾ ಬುದ್ಧಿಃ ಸ್ಮೃತಿರ್ಭವಾನ್ ॥ ೪೩ ॥

ಪರಾಯಣನೂ, ಸೂಕ್ಷ್ಮನೂ, ವಿಶಾಲನೂ, ರಕ್ಷಕನೂ, ಯಜ್ಞವೂ, ಶಾಶ್ವತನೂ, ನೀನೆ. ಯಜ್ಞಗಳಲ್ಲಿ ಮಹಾಯಜ್ಞನೂ, ನೀನೇ, ಯೂಪಗಳಲ್ಲಿಯೂ ನೀನಿರುವೆ.

೪೦. ವೇದಗಳಲ್ಲಿ ಸಾಮವೇದವೂ, ಸಾಂಗೋಪಾಂಗವಾದ ಮಹಾ ವ್ರತವೂ, ಗುಡುಗೂ, ಮಳೆಯೂ, ನೀನೇ. ನೀನೇ ಬ್ರಹ್ಮನು. ಸತ್ಯಾನೃತಗಳೂ ನೀನೇ.

೪೧. ವಿಷ್ಣುವೇ, ಲೋಕವನ್ನುದ್ಧರಿಸಿದ ಅಮೃತವನ್ನು ನೀನೇ ಸೃಜಿಸಿದೆ. ಪ್ರೀತಿಪರಮ ಪ್ರೀತಿಯೂ, ಪುರಾಣಪುರುಷನೂ ನೀನೇ.

೪೨. ಆಧೇಯವಾಗಿಯಾಗಲಿ, ಆಧಾರವಾಗಿಯಾಗಲಿ ಇರುವ ಎಲ್ಲವೂ ಎಂದರೆ ಜಗತ್ತೆಲ್ಲವೂ ನೀನೇ. ಸಪ್ತಲೋಕಗಳಿಗೂ ನೀನು ಒಡೆಯನು, ದೊಡ್ಡವನು.

೪೩. ಕಾಲವೂ, ಮೃತ್ಯುವೂ, ಭೂತ(ಪ್ರಾಣಿ)ಸಮೂಹವೂ, ಅದನ್ನು ಧಾರಣಪೋಷಣಗಳಿಂದ ರಕ್ಷಿಸುವವನೂ ನೀನೇ. ಆದಿಮಧ್ಯಾಂತರೂಪನೂ, ಮೇಧೆಯೂ, ಬುದ್ಧಿಯೂ, ಸ್ಮೃತಿಯೂ ನೀನೇ.

ಆದಿತ್ಯಸ್ತ್ವಂ ಯುಗಾವರ್ತಸ್ತ್ವಂ ತಪಸ್ವೀ ಮಹಾತಪಾಃ
ಅಪ್ರಮಾಣಃ ಪ್ರಮೇಯೋಽಸಿ ಋಷೀಣಾಂ ಚ ಮಹಾನೃಷಿಃ || ೪೪ ||

ಅನಂತಶ್ಚಾಸಿ ನಾಗಾನಾಂ ಸರ್ಪಾಣಾಮಪಿ ತಕ್ಷಕಃ |
ಉದ್ವಹಃ ಪ್ರವಹಶ್ಚಾಸಿ ವರುಣೋ ವಾರುಣೋ ಭವಾನ್ || ೪೫ ||

ಕ್ರೀಡಾವಿಕ್ಷೇಪಣಶ್ಚಾಸಿ ಗೃಹೇಷು ಗೃಹದೇವತಾಃ |
ಸರ್ವಾತ್ಮಕಸ್ಸರ್ವಗತೋ ವರ್ಧನೋ ಮನ ಏವ ಚ || ೪೬ ||

ಸಾಙ್ಗಸ್ತ್ವಂ ವಿದ್ಯುತೀನಾಂ ಚ ವೈದ್ಯುತಾನಾಂ ಮಹಾದ್ಯುತಿಃ |
ಯುಗಮನ್ವಂತರೇ ಚಾಪಿ ವೃಕ್ಷಾಣಾಂ ಚ ವನಸ್ಪತಿಃ || ೪೭ ||

ಶ್ರದ್ಧಾಸಿ ತ್ವಂ ಚ ದೇವೇಶ ದೋಷಹಂತಾಸಿ ಮಾಧವ |
ಅಂಡಜೋದ್ಭಿಜ್ಜಸ್ವೇದಾನಾಂ ಜರಾಯೂನಾಂ ಚ ಮಾಧವ || ೪೮ ||

---

೪೪. ಸೂರ್ಯನೂ ನೀನೇ. (ಯುಗಾವರ್ತ) ಸೃಷ್ಟಿಪ್ರಳಯಗಳೂ, ತಪಸ್ವಿಗಳಲ್ಲಿ ಮಹಾತಪಸ್ವಿಯೂ, ಪ್ರಮಾಣಾತೀತನಾದರೂ(ಅವತಾರಗಳಲ್ಲಿ) ಪ್ರಮೇಯನೂ, ಋಷಿಗಳಲ್ಲಿ ಮಹರ್ಷಿಯೂ ನೀನೇ.

೪೫. ನಾಗರಲ್ಲಿ ಅನಂತನೂ, ಸರ್ಪಗಳಲ್ಲಿ ತಕ್ಷಕನೂ, ನೀನೇ ಆಗಿದ್ದೀಯೆ, ಉದ್ವಹ ಪ್ರವಹಗಳೆಂಬ ವಾಯುವೂ, ವರುಣನೂ, ವರುಣ ಸಂಬಂಧವಾದ ನದೀಸಮುದ್ರಗಳೂ ನೀನೇ.

೪೬. ಆಟದ ಸಾಮಗ್ರಿಯೂ ನೀನೇ, ಗೃಹಗಳಲ್ಲಿ ಗೃಹದೇವತೆಯೂ ನೀನೆ. ಸರ್ವಾತ್ಮಕನೂ, ಸರ್ವಗತನೂ, ವೃದ್ಧಿಹೊಂದುವವನೂ, ಮನವೂ ನೀನೇ.

೪೭. ಕಾಂತಿವಂತರಲ್ಲೆಲ್ಲಾ ಪೂರ್ಣಕಾಂತಿವಂತನೂ, ಕಾಂತಿಗಳಲ್ಲಿ ಮಹಾಕಾಂತಿಯೂ ನೀನೇ ಆಗಿದ್ದೀಯೆ. ಯುಗಮನ್ವಂತರಗಳೂ ನೀನೇ ವೃಕ್ಷಗಳಲ್ಲಿ ವನಸ್ಪತಿಯೂ ನೀನೇ.

೪೮. ದೇವೇಶ, ಶ್ರದ್ಧೆಯೂ ನೀನೇ, ಮಾಧವಾ, ಅಂಡಜ ಉದ್ಭಿಜ್ಜ ಸ್ವೇದಜಜರಾಯುಜಗಳ ಪಾಪವನ್ನು ನಾಶಮಾಡುವವನೂ ನೀನೇ.

ಗರುಡೋಽಸಿ ಮಹಾತ್ಮಾನಂ ವಹಸಿ ತ್ವಂ ಪರಾಯಣಃ ।
ದುಂದುಭಿರ್ನೇಮಿಘೋಷಶ್ಚ ಆಕಾಶಮಮಲೋ ಭವಾನ್ ॥ ೬೯ ॥

ಜಯಶ್ಚ ವಿಜಯಶ್ಚಾಸಿ ಗೃಹೇಷು ಗೃಹದೇವತಾಃ ।
ಸರ್ವಾತ್ಮಕಸ್ಸರ್ವಗತಃ ಚೇತನೋ ಮನ ಏವ ಚ ॥ ೫೦ ॥

ಭಗಸ್ತ್ವಂ ವೃಷಲಿಂಗಶ್ಚ ಪರಸ್ತ್ವಂ ಪರಮಾತ್ಮಕಃ ।
ಸರ್ವಭೂತನಮಸ್ಕಾರ್ಯೋ ನಮೋ ದೇವ ನಮೋನಮಃ ॥ ೫೧ ॥

ಮಾಂ ತ್ವಂ ಮಗ್ನಾಮಸಿ ತ್ರಾತುಂ ಲೋಕನಾಥ ಇಹಾರ್ಹಸಿ ।
ಆದಿಕಾಲಾತ್ಮಕಃ ಕೃಷ್ಣಸ್ಸರ್ವಲೋಕಾತ್ಮಕೋ ವಿಭುಃ ॥ ೫೨ ॥

ಯ ಇದಂ ಪಠತೇ ಸ್ತೋತ್ರಂ ಕೇಶವಸ್ಯ ದೃಢವ್ರತಃ ।
ವ್ಯಾಧಿತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ॥ ೫೩ ॥

---

೪೯. ನೀನೇ ಗರುಡನಾಗಿ ಆಸಕ್ತಿಯಿಂದ ಪರಮಾತ್ಮನಾದ ವಿಷ್ಣುವನ್ನು ವಹಿಸುತ್ತೀಯೆ. ಭೇರೀವಾದ್ಯವೂ, ಚಕ್ರದ ಪಟ್ಟಿಯ ಧ್ವನಿಯೂ ನೀನೇ, ನಿರ್ಮಲವಾದ ಆಕಾಶವೂ ನೀನೇ.

೫೦. ಜಯವಿಜಯರೂ, ಗೃಹಗಳಲ್ಲಿ ಗೃಹದೇವತೆಗಳೂ ನೀನೇ, ಸರ್ವಜಂತುಗಳಿಗೂ ಆತ್ಮಸ್ವರೂಪನೂ, ಸರ್ವವ್ಯಾಪಕನೂ, ಚೇತನನೂ, ಮನಸ್ಸೂ ನೀನೆ.

೫೧–೫೨. ಉತ್ಪತ್ತಿಸ್ಥಾನವೂ, ಉತ್ಪಾದಕನೂ ಎಂದರೆ ಪ್ರಪಂಚಕ್ಕೆ ಮಾತೃವೂ, ಪಿತೃವೂ ನೀನೇ. ಸರ್ವಭೂತಗಳಿಗೂ ವಂದ್ಯನೂ, ಜ್ಯೇಷ್ಠನೂ, ಶ್ರೇಷ್ಠನೂ ಆದ ಪರಮಾತ್ಮನೇ, ದೇವ, ನಿನಗೆ ನಮಸ್ಕಾರ. ಅನಂತನಮಸ್ಕಾರ. ಆದಿಕಾರಣನೂ, ಕಾಲಾತ್ಮಕನೂ, ಸರ್ವಲೋಕಾತ್ಮನೂ, ವಿಭುವೂ, ಕೃಷ್ಣನೂ ಆದ ಲೋಕನಾಥನೇ, ಸಾಗರದಲ್ಲಿ ಮುಳುಗಿರುವ ನನ್ನನ್ನು ನೀನೇ ಕಾಪಾಡಬೇಕು.

೫೩–೫೪. ದೃಢವಾದ ನಿಯಮದಿಂದ ಈ ಕೇಶವಸ್ತೋತ್ರವನ್ನು ಹೇಳುವವರು ರೋಗಿಗಳಾಗಿದ್ದರೆ ಆರೋಗ್ಯವುಳ್ಳವರಾಗುವರು. ಬಂಧನದಲ್ಲಿದ್ದರೆ

ಅಪುತ್ರೋ ಲಭತೇ ಪುತ್ರಂ ದರಿದ್ರೋ ಧನಮಾಪ್ನುಯಾತ್ |
ಅಭಾರ್ಯೋ ಲಭತೇ ಭಾರ್ಯಾಮಪತಿಃ ಪತಿಮಾಪ್ನುಯಾತ್ ॥ ೫೪ ॥

ಉಭೇ ಸಂಧ್ಯೇ ಪಠೇತ್‌ಸ್ತೋತ್ರಂ ಮಾಧವಸ್ಯ ಮಹಾತ್ಮನಃ |
ಸಗಚ್ಛೇದ್ವಿಷ್ಣುಲೋಕಂ ಚ ನಾತ್ರ ಕಾರ್ಯಾವಿಚಾರಣಾ ॥ ೫೫ ॥

ಏವಂ ತು ಅಕ್ಷರೋಕ್ತೋಽಪಿ ಭವೇತ್ತು ಪರಿಕಲ್ಪನಾ ।
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥ ೫೬ ॥

ಇತಿ ಶ್ರೀವರಾಹಪುರಾಣೇ ವಿಷ್ಣುಸ್ತವನಂ ನಾಮ
ತ್ರಯೋದಶಾಧಿಕಶತತಮೋಽಧ್ಯಾಯಃ

ಅದರಿಂದ ಬಿಡುಗಡೆಯನ್ನು ಹೊಂದುವರು, ಅಪುತ್ರವಂತರಾಗಿದ್ದರೆ ಪುತ್ರವಂತರಾಗುವರು. ದರಿದ್ರರಾಗಿದ್ದರೆ ಐಶ್ವರ್ಯವನ್ನು ಪಡೆಯುವರು. ಅಪತ್ನೀಕರು ಸಪತ್ನೀಕರಾಗುವರು, ಅವಿವಾಹಿತೆಯರಾದವರು ಪತಿಯನ್ನು ಪಡೆಯುವರು.

೫೫. ಮಹಾತ್ಮನಾದ ಮಾಧವನ ಈ ಸ್ತೋತ್ರವನ್ನು ಪ್ರಾತಃಕಾಲ ಸಾಯಂಕಾಲಗಳಲ್ಲಿ ಹೇಳುವವರು ವಿಷ್ಣುಲೋಕವನ್ನೈದುವರು. ಈ ವಿಚಾರದಲ್ಲಿ ಚರ್ಚೆಯನ್ನು ಮಾಡಬೇಕಾದುದೇ ಇಲ್ಲ.

೫೬. ಹೀಗೆ ಹೇಳಿರುವ ಸ್ತೋತ್ರವನ್ನು ಮನಸ್ಸಿನಲ್ಲಿ ಪರಿಕಲ್ಪಿಸಿಕೊಂಡರೂ ಸ್ತೋತ್ರದಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಸಾವಿರವರ್ಷಗಳ ಕಾಲ ಸ್ವರ್ಗಲೋಕದಲ್ಲಿ ಗೌರವನ್ನು ಪಡೆಯುವರು.

ಅಧ್ಯಾಯದ ಸಾರಾಂಶ :—

ಸನತ್ಕುಮಾರನಿಗೆ ಭೂದೇವಿಯು, ಪಾತಾಳದಲ್ಲಿ ಮುಳುಗಿದ್ದ ತನ್ನನ್ನು ಉದ್ಧರಿಸಲು ಬ್ರಹ್ಮನ ಮಾತಿನಂತೆ ವಿಷ್ಣುವನ್ನು ಪ್ರಾರ್ಥಿಸಿ ಮಾಡಿದ ಸ್ತುತಿಯನ್ನೂ, ಆ ಸುತ್ತಿಯ ಶ್ರವಣಪಠನಾದಿಗಳ ಫಲವನ್ನೂ ತಿಳಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಹದಿಮೂರನೆಯ ಅಧ್ಯಾಯ.

|| ಶ್ರೀಃ ||

-X-

ಚತುರ್ದಶಾಧಿಕಶತತಮೋಽಧ್ಯಾಯಃ

ಅಥ ಶ್ರೀ ವರಾಹಾವತಾರಃ

|| ಶ್ರೀ ವರಾಹ ಉವಾಚ ||

ಸಂಸ್ತೂಯಮಾನೋ ಭಗವಾನ್ಮುನಿಭಿರ್ಮಂತ್ರವಾದಿಭಿಃ |
ತುಷ್ಟೋ ನಾರಾಯಣೋ ದೇವಃ ಕೇಶವಃ ಪರಮೋ ವಿಭುಃ || ೧ ||

ತತೋ ಧ್ಯಾನಂ ಸಮಾಸ್ಥಾಯ ದಿವ್ಯಂ ಯೋಗಂ ಚ ಮಾಧವಃ |
ಮಧುರಂ ಸ್ವರಮಾಸ್ಥಾಯ ಪ್ರತ್ಯುವಾಚ ವಸುಂಧರಾಂ || ೨ ||

ತವ ದೇವಿ ಪ್ರಿಯಾರ್ಥಾಯ ಭಕ್ತ್ಯಾ ಯಂ ತ್ವಂ ವ್ಯವಸ್ಥಿತಾ |
ಕಾರಯಿಷ್ಯಾಮಿ ತೇ ಸರ್ವಂ ಯತ್ತೇ ಹೃದಿ ವ್ಯವಸ್ಥಿತಂ || ೩ ||

ನೂರಹದಿನಾಲ್ಕನೆಯ ಅಧ್ಯಾಯ

ಶ್ರೀವರಾಹಾವತಾರ

೧-೨. ಶ್ರೀವರಾಹ—ಮಂತ್ರವಾದಿಗಳಾದ ಮುನಿಗಳಿಂದ ಸ್ತೋತ್ರ ಮಾಡಿಸಿಕೊಳ್ಳುತ್ತಿರುವ ಭಗವಂತನೂ, ಪರಮವಿಭುವೂ, ಕೇಶವನೂ, ಲಕ್ಷ್ಮೀಕಾಂತನೂ, ಆದ ನಾರಾಯಣದೇವನು, ಸಂತುಷ್ಟನಾಗಿ ಬಳಿಕ ದಿವ್ಯ ಯೋಗಧ್ಯಾನವನ್ನವಲಂಬಿಸಿ, ಇಂಪಾದ ದನಿಯಿಂದ ಭೂದೇವಿಯೊಡನೆ ಮಾತನಾಡಿದನು.

೩. "ದೇವಿ, ಭಕ್ತಿಯಿಂದ ಕೂಡಿದ ನೀನು ಯಾವುದನ್ನು ಬಯಸು ವೆಯೋ, ಯಾವುದು ನಿನ್ನ ಮನಸ್ಸಿನಲ್ಲಿದೆಯೋ ಅದೆಲ್ಲವನ್ನೂ ನಿನ್ನ ಹಿತಕ್ಕಾಗಿ ಮಾಡುವೆನು.

ಅಹಂ ತ್ವಾಂ ಧಾರಯಿಷ್ಯಾಮಿ ಸಶೈಲವನಕಾನನಾಂ ।
ಸಸಾಗರಾಂ ಸಸರಿತಾಂ ಸಪ್ತದ್ವೀಪಸಮನ್ವಿತಾಂ ॥ ೪ ॥

ಏವಮಾಶ್ವಾಸಯಿತ್ವಾ ತು ವಸುಧಾಂ ಸ ಚ ಮಾಧವಃ ।
ರೂಪಂ ಸಂಕಲ್ಪಯಾಮಾಸ ವಾರಾಹಂ ಸುಮಹೌಜಸಂ ॥ ೫ ॥

ಷಟ್ಸಹಸ್ರಾಣಿ ಚೋಚ್ಛ್ರಾಯೋ ವಿಸ್ತಾರೇಣ ಪುನಸ್ತ್ರಯಃ ।
ಏವಂ ನವಸಹಸ್ರಾಣಿ ಯೋಜನಾನಾಂ ವಿಧಾಯ ಚ ॥ ೬ ॥

ವಾಮಯಾ ದಂಷ್ಟ್ರಯಾ ಗೃಹ್ಯ ಉಜ್ಜಹಾರ ಚ ಮೇದಿನೀಂ ।
ಸಪರ್ವತವನಾಕಾರಾಂ ಸ್ತಪ್ತದ್ವೀಪಾಂ ಸಪತ್ತನಾಂ ॥ ೭ ॥

ನಗಾ ವಿಲಗ್ನಾಃ ಪತಿತಾಃ ಕೇಚಿದ್ವಿಜ್ಞಾನಸಂಶ್ರಿತಾಃ ।
ಶೋಭಂತೇ ಚ ವಿಚಿತ್ರಾಂಗಮೇಘಾಃ ಸಂಧ್ಯಾಗಮೇ ಯಥಾ ॥ ೮ ॥

---

೪. ಪರ್ವತವನನದನದಿಸಾಗರಸಹಿತಳಾಗಿ ಸಪ್ತದ್ವೀಪಗಳಿಂದೊಡಗೂಡಿದ ನಿನ್ನನ್ನು ನಾನು ಧರಿಸುವೆನು."

೫. ಹೀಗೆಂದು ಭೂದೇವಿಯನ್ನು ಸಂತೈಸಿ, ಆ ಮಾಧವನು ಅತಿತೇಜೋ ಬಲಗರ್ವಯುತವಾದ ವರಾಹರೂಪವನ್ನು ಪಡೆಯಲು ಉದ್ದೇಶಿಸಿದನು.

೬-೭. ಆರುಸಾವಿರಯೋಜನ ಎತ್ತರವೂ, ಮೂರುಸಾವಿರಯೋಜನ ವಿಸ್ತಾರವೂ, ಒಂಬತ್ತುಸಾವಿರಯೋಜನ ಉದ್ದವೂ ಉಳ್ಳ ಅದ್ಭುತವರಾಹ ರೂಪವನ್ನು ಧರಿಸಿ, ಪರ್ವತವನಪಟ್ಟಣಸಪ್ತದ್ವೀಪಗಳಿಂದ ಕೂಡಿದ ಭೂಮಿ ಯನ್ನು ತನ್ನ ಎಡದ ಕೋರೆಹಲ್ಲಿನಿಂದ ಹಿಡಿದು ಮೇಲೆತ್ತಿದನು.

೮. ಭೂಮಿಯ ಮೇಲಿದ್ದು, ಬಿದ್ದ ಕೆಲವು ಪರ್ವತಗಳು ಸಂಧ್ಯಾಕಾಲದ ವಿಚಿತ್ರಾಕಾರದ ಮೋಡಗಳಂತೆ ನೋಡುವುದಕ್ಕೆ ಚೆನ್ನಾಗಿ ಕಾಣುತ್ತಿದ್ದುವು.

ಚಂದ್ರನಿರ್ಮಲಸಂಕಾಶಾಃ ವಾರಾಹಮುಖಸಂಸ್ಥಿತಾಃ ।
ಶೋಭಂತೇ ಚಕ್ರಪಾಣೇಶ್ಚ ಮೃಣಾಲಂ ಕರ್ದಮೇ ಯಥಾ ॥ ೯ ॥

ಏವಂ ಹಿ ಧಾರ್ಯಮಾಣಾಸಾ ಪೃಥಿವೀ ಸಾಗರಾನ್ವಿತಾ ।
ವರ್ಷಾಣಾಂ ಚ ಸಹಸ್ರಂ ಹಿ ವಜ್ರದಂಷ್ಟ್ರೇಣ ಸಾಧುನಾ ॥ ೧೦ ॥

ತಸ್ಯಾಮೇವ ತು ಕಾಲಸ್ಯ ಪರಿಮಾಣಂ ಯುಗೇಷು ಚ ।
ಏಕಸಪ್ತತಿಕೇ ಕಲ್ಪೇ ಕರ್ದಮೋಯಂ ಪ್ರಜಾಪತಿಃ ॥ ೧೧ ॥

ತತಃ ಪೃಥಿವ್ಯಾ ದೇವಶ್ಚ ಭಗವಾನ್ವಿಷ್ಣುರವ್ಯಯಃ ।
ಅನ್ಯೋನ್ಯಾಭಿಮತಾಶ್ಚೈವ ವಾರಾಹೇ ಕಲ್ಪ ಉತ್ತಮೇ ॥ ೧೨ ॥

ಸಾ ಗೌಃ ಸ್ತುವತಿ ತಂ ಚೈವ ಪುರಾಣಂ ಪರಮವ್ಯಯಂ ।
ಯೋಗೇನ ಪರಮೇಣೈವ ಶರಣಂ ಚೈವ ಗಚ್ಛತಿ ॥ ೧೩ ॥

---

೯. ಚಕ್ರಪಾಣಿಯಾದ ಶ್ರೀವರಾಹನ ಬಾಯಲ್ಲಿರುವ, ಚಂದ್ರನಂತೆ ನಿರ್ಮಲವಾದ ಕೆಲವು ಪರ್ವತಗಳು, ಕೆಸರಿನಲ್ಲಿರುವ ಕಮಲದ ದಂಟಿನಂತೆ ಕಾಣುತ್ತಿದ್ದುವು.

೧೦. ಆ ಸಾಧುವು ತನ್ನ ವಜ್ರದಂಷ್ಟ್ರದಿಂದ ಹೀಗೆ ಸಾಗರಸಹಿತಳಾದ ಪೃಥ್ವಿಯನ್ನು ಸಾವಿರವರ್ಷ ಧರಿಸಿದ್ದನು.

೧೧-೧೨. ಯುಗಗಳಲ್ಲಿ ಎಪ್ಪತ್ತೊಂದನೆಯದಾದ ಅದೇ ಕಾಲದಲ್ಲಿ ಕರ್ದಮಪ್ರಜಾಪತಿಯಿದ್ದನು. ಉತ್ತಮವಾದ ಆ ವಾರಾಹಕಲ್ಪದಲ್ಲಿ ಭಗವಂತನೂ, ನಾಶರಹಿತನೂ, ಪೃಥ್ವೀಪತಿಯೂ ಆದ ವಿಷ್ಣುವೂ ಪೃಥ್ವಿಯೂ ಅನ್ಯೋನ್ಯ ಪ್ರೀತಿಯುಳ್ಳವರಾಗಿದ್ದರು.

೧೩. ಆ ಭೂದೇವಿಯು, ನಾಶರಹಿತನೂ, ಪುರಾಣಪುರುಷನೂ ಆದ ಆ ಪರಮಾತ್ಮನನ್ನು ಸ್ತುತಿಸಿ, ಪರಮಯೋಗದಿಂದ ಶರಣಾಗತಳೂ ಆದಳು.

ಆಧಾರಃ ಕೀದೃಶೋ ದೇವ ಉಪಯೋಗಶ್ಚ ಕೀದೃಶಃ ।
ಕಾಲೇ ಕಾಲೇ ಚ ದೇವೇಶ ಕರ್ಮಣಶ್ಚಾಪಿ ಕೀದೃಶಃ ॥ ೧೪ ॥

ಕೀದೃಶೀ ಪಶ್ಚಿಮಾ ಸಂಧ್ಯಾ ಕೀದೃಶೀ ಹ್ಯರ್ಘಬಾಹ್ಯತಃ ।
ಶೇಷಾಃ ಸಮಾನಾಸ್ತ್ವಾಂ ದೇವ ಯೇ ತು ಕರ್ಮಾಣಿ ಕುರ್ವತೇ ॥ ೧೫ ॥

ಕಿಂ ನು ಸಂಸ್ಥಾಪನೇ ದೇವ ಆವಾಹನವಿಸರ್ಜನೇ
ಅಗುರುಂ ಗಂಧಧೂಪಂ ಚ ಪ್ರಮಾಣಂ ಗೃಹ್ಯಸೇ ಕಥಂ ॥ ೧೬ ॥

ಕಥಂ ಪಾದ್ಯಂ ಚ ಗೃಹ್ಣಾಸಿ ಸ್ಥಾಪನಾಲೇಪನಾನಿ ಚ ।
ಕಥಂ ದೀಪಶ್ಚ ದಾತವ್ಯಃ ಕಂದಮೂಲಫಲಾನಿ ಚ ॥ ೧೭ ॥

ಆಸನಂ ಶಯನಂ ಚೈವ ಕಿಂ ಕರ್ಮಾಪಿ ವಿಧೀಯತೇ ।
ಕಥಂ ಪೂಜಾದಿಕರ್ತವ್ಯಂ ಪ್ರಾಣಾಸ್ತತ್ರ ಚ ವೈ ಕತಿ ॥ ೧೮ ॥

೧೪-೧೬. ದೇವ, ದೇವೇಶ, ಬೇರೆ ಬೇರೆ ಕಾಲದಲ್ಲಿ ಎಂತಹ ಕರ್ಮಕ್ಕೆ ಎಂತಹ ಉಪಯೋಗ ? ಅದಕ್ಕೇನು ಆಧಾರ ? ಪಶ್ಚಿಮ ಸಂಧ್ಯೆಯೆಂಬುದು ಎಂತಹುದು ? ದೇವ ನಿನ್ನನ್ನು ಯಾರು ಪೂಜಿಸುವರೋ ಅವರಿಗೆ ಪ್ರತಿಷ್ಠೆ ಮಾಡುವುದಕ್ಕೂ, ಆವಾಹನೆ ವಿಸರ್ಜನೆಗಳಿಗೂ ಕ್ರಮವೇನು ? ಅಗುರುಗಂಧಗಳನ್ನೂ, ಅವುಗಳ ಧೂಪವನ್ನೂ ಯಾವ ಪ್ರಮಾಣದಲ್ಲಿ ಅಥವಾ ಮಂತ್ರದಿಂದ ಪರಿಗ್ರಹಿಸುವೆ ?

೧೭-೧೮. ಪಾದ್ಯವನ್ನೂ, ಸ್ಥಾಪನಾಲೇಪನಗಳನ್ನೂ ಹೇಗೆ ಸ್ವೀಕರಿಸುವೆ ? ದೀಪವನ್ನೂ, ಕಂದಮೂಲಫಲಗಳನ್ನೂ, ಪೀಠಶಯನಗಳನ್ನೂ ಹೇಗೆ ಅರ್ಪಿಸಬೇಕು. ಅದಕ್ಕೆ ಯಾವ ಕರ್ಮವು ವಿಧಿಸಲ್ಪಟ್ಟಿದೆ ? ಪೂಜೆಯೇ ಮೊದಲಾದುವುಗಳನ್ನು ಹೇಗೆ ಮಾಡಬೇಕು. ಪ್ರತಿಷ್ಠೆಯಲ್ಲಿ ಪ್ರಾಣಗಳೆಷ್ಟು ?

ಪಶ್ಚಿಮಾಪೂರ್ವಸಂಧ್ಯಾಯಾಂ ಕಿಂ ಪುಣ್ಯಂ ಚಾಪಿ ತತ್ರವೈ ॥ ೧೯ ॥

ಶರದಿ ಕೀದೃಶಂ ಕರ್ಮ ಶಿಶಿರೇ ಕರ್ಮ ಕೀದೃಶಂ ।
ವಸಂತೇ ಕೀದೃಶಂ ಕರ್ಮ ಗ್ರೀಷ್ಮೇ ಕಿಂ ಕರ್ಮ ಕಾರಯೇತ್ ।
ಪ್ರಾವೃಟ್ಕಾಲೇ ಚ ಕಿಂ ಕರ್ಮ ವರ್ಷಾಂತೇ ಕಿಂ ಚ ಕಾರಯೇತ್ ॥ ೨೦ ॥

ಯಾನಿ ತತ್ರೋಪಭೋಗ್ಯಾನಿ ಪುಷ್ಪಾಣಿ ಚ ಫಲಾನಿ ಚ ।
ಕರ್ಮಣ್ಯಾಸ್ತೇ ಅಕರ್ಮಣ್ಯಾ ಯೇ ಚ ಶಾಸ್ತ್ರಬಹಿಷ್ಕೃತಾಃ ॥ ೨೧ ॥

ಕಿಂ ಕರ್ಮಣಾ ಭೋಗವತಾ ತಾವದ್ಗಚ್ಛಂತಿ ಮಾಧವಂ ।
ಕಥಂ ಕರ್ಮ ನ ಚಾನ್ನೇಷು ಅತಿಗಚ್ಛತಿ ಕೀದೃಶಂ ॥ ೨೨ ॥

ಅರ್ಚಾಯಾಃ ಕಿಂ ಪ್ರಮಾಣಂ ತು ಸ್ಥಾಪನಂ ಚಾಪಿ ಕೀದೃಶಂ ।
ಪರಿಮಾಣಂ ಕಥಂ ದೇವ ಉಪವಾಸಶ್ಚ ಕೀದೃಶಃ ॥ ೨೩ ॥

೧೯-೨೦. ಪ್ರಾತಸ್ಸಂಧ್ಯೆ ಸಾಯಂಸಂಧ್ಯೆಗಳಲ್ಲಿ ಪುಣ್ಯವಾವುದು ? ಶರತ್ಕಾಲದಲ್ಲಿ ಮಾಡಬೇಕಾದ ಕರ್ಮವೇನು ? ಶಿಶಿರ, ವಸಂತ, ಗ್ರೀಷ್ಮ, ವರ್ಷ ಋತುಗಳಲ್ಲಿಯೂ, ವರ್ಷದ ಕಡೆಯಲ್ಲಿಯೂ ಯಾವ ಕರ್ಮವನ್ನು ಮಾಡಬೇಕು ?

೨೧. ಆಯಾ ಋತುಗಳಲ್ಲಿ ಉಪಭೋಗ್ಯವಾದ ಹೂಗಳೂ, ಹಣ್ಣು ಕಾಯಿಗಳೂ ಯಾವುವು ? ಯಾರು ಕರ್ಮಾರ್ಹರು ? ಯಾರು ಕರ್ಮಾನರ್ಹರಾಗಿ ಶಾಸ್ತ್ರಬಹಿಷ್ಕೃತರು ? ಅಥವಾ ಯಾವ ವಸ್ತುಗಳು ಕರ್ಮಾರ್ಹವಾದುವು ? ಯಾವುವು ಶಾಸ್ತ್ರಬಹಿಷ್ಕೃತವಾಗಿ ಅನರ್ಹವಾದುವು ?

೨೨. ಸುಖಕರವಾದ ಕರ್ಮದಿಂದ ವಿಷ್ಣುವನ್ನು ಪಡೆಯುವರೊ ? ಅನ್ನಗಳ ವಿಚಾರದಲ್ಲಿ ಕರ್ಮವು ಹೇಗೆ ? ಅದನ್ನು ಮೀರದಿರುವುದು ಹೇಗೆ ?

೨೩. ದೇವ, ಅರ್ಚಾಮೂರ್ತಿಯ ಪ್ರಮಾಣವೇನು(ಅಳತೆಯೇನು)? ಪ್ರತಿಷ್ಠೆಯು ಹೇಗೆ ? ಪರಿಮಾಣವು ಎಷ್ಟು ? ಉಪವಾಸವೆಂಬುದು ಹೇಗೆ ?

ಪೀತಕಂ ಶುಕ್ಲರಕ್ತಂ ವಾ ಕಥಂ ಗೃಹ್ಣಾತಿ ವಾಸಸಾಂ ।
ತೇಷಾಂ ತು ಕಾನಿ ವಸ್ತ್ರಾಣಿ ಯೈರ್ಹಿತಂ ಪ್ರತಿಪದ್ಯತೇ ॥ ೨೪ ॥

ಕೇಷು ದ್ರವ್ಯೇಷು ಸಯುಕ್ತಂ ಮಧುಪರ್ಕಂ ಪ್ರದೀಯತೇ ।
ಕೇ ತು ಕರ್ಮಗುಣಾಸ್ತಸ್ಯ ಮಧುಪರ್ಕಸ್ಯ ಮಾಧವ ॥ ೨೫ ॥

ಕೇಷು ಲೋಕೇಷು ಗಚ್ಛಂತಿ ಮಧುಪರ್ಕಸ್ಯ ಭಕ್ಷಣಾತ್ ।
ಸ್ತವೇ ಪರಮಕಾಲೇಽಪಿ ತವ ಭಕ್ತಸ್ಯ ಮಾಧವ ॥ ೨೬ ॥

ಕಿಂ ಪ್ರಮಾಣಂ ತು ದಾತವ್ಯಂ ಮಧುಪರ್ಕಸಮನ್ವಿತಂ ।
ಕಾನಿ ಮಾಂಸಾನಿ ತೇ ದೇವ ಫಲಂ ಶಾಕಂ ಚ ಕೀದೃಶಂ ॥ ೨೭ ॥

ಪ್ರಮಾಣೇಷ್ವಪಿ ಯುಜ್ಯೇತ ಕರ್ಮಶಾಸ್ತ್ರಸಮಾಯುತಂ ॥ ೨೮ ॥

ಆಹೂತಸ್ಯ ಚ ಮಂತ್ರೇಣ ಆಗತೇ ಧರ್ಮವತ್ಸಲ ।
ಕೇನ ಮಂತ್ರವಿಧಾನೇನ ಪ್ರಾಶನಂ ತೇ ಪ್ರದೀಯತೇ ॥
ವ್ರತಸ್ಯ ಚೋಪಚಾರೇಷು ಅರ್ಚಯಿತ್ವಾ ಯಥಾವಿಧಿ ॥ ೨೯ ॥

---

೨೪. ಹಳದಿ, ಬಿಳುಪು, ಕೆಂಪುಬಟ್ಟೆಗಳಲ್ಲಿ ನೀನು ಯಾವುದನ್ನು ಪರಿಗ್ರಹಿಸುವೆ ? ಅವುಗಳಲ್ಲಿ ಯಾವುಗಳಿಂದ ಹಿತವಾಗುವುದು ?

೨೫. ಯಾವ ಪದಾರ್ಥಗಳಿಂದ ಮಾಡಿದ ಮಧುಪರ್ಕವನ್ನು ಕೊಡಬೇಕು. ಮಾಧವನೇ, ಆ ಮಧುಪರ್ಕಕ್ಕೆ ಕರ್ಮಗುಣಗಳು ಯಾವುವು ?

೨೬-೨೮. ಮಧುಪರ್ಕಸೇವನೆಯಿಂದ ಯಾವ ಲೋಕಗಳಿಗೆ ಹೋಗುವರು ? ನಿನ್ನನ್ನು ಸ್ತುತಿಸುವ ಉತ್ತಮಕಾಲದಲ್ಲಿ ನಿನ್ನ ಭಕ್ತ(ನಿಗೆ)ನು ಮಧುಪರ್ಕವನ್ನು ಎಷ್ಟು ಕೊಡಬೇಕು ? ಮಧುಪರ್ಕದೊಡನೆ ಕೊಡಬೇಕಾದ ಮಾಂಸಫಲಶಾಕಗಳು ಎಂತಹವು ? ಕರ್ಮಶಾಸ್ತ್ರಗಳಲ್ಲಿ ಹೇಳಿರುವ ಉಚಿತವಾದ ಪ್ರಮಾಣಗಳೆಷ್ಟು.

೨೯-೩೦. ಧರ್ಮವತ್ಸಲನೇ, ನೀನು ಬಿಜಮಾಡಿಸಲಾಗಿ ಮಂತ್ರದಿಂದ ಆವಾಹಿತನಾದ ನಿನ್ನನ್ನು ಉಪಚಾರಗಳಿಂದ ಶಾಸ್ತ್ರೋಕ್ತವಾಗಿ ಪೂಜಿಸಿ, ಯಾವ ಮಂತ್ರವಿಧಾನದಿಂದ ಭೋಜನವನ್ನು ನಿವೇದಿಸಬೇಕು ? ನಿನ್ನ ಭಕ್ತ(ನಿಗೆ)ನು

ಕಾನಿ ಕರ್ಮಾಣಿ ಕುರ್ವೀತ ತವ ಭಕ್ತಸ್ತು ಭೋಜನೇ ।
ಯಸ್ತು ತಂ ಪ್ರಾಪಣಂ ದೇವ ನ ಚ ದೋಷಪ್ರಸಾದಿಕಂ ॥ ೩೦ ॥

ಕೋऽತ್ರ ಭುಂಜತಿ ತದ್ದೇವ ಸರ್ವಶುದ್ಧಿಕರಂ ಪರಂ ।
ಯೇ ತು ಏಕಾಶಿನೋ ದೇವಮುಪಸರ್ಪಂತಿ ಮಾಧವಂ ।
ತೇಷಾಂ ತು ಕಾ ಗತಿರ್ದೇ - ತವ ಮಾರ್ಗಾನುಸಾರಿಣಾಂ ॥ ೩೧ ॥

ವ್ರತಂ ಕೃತ್ವಾ ಯಥೋಕ್ತೇನ ಯೇಽಭಿಗಚ್ಛಂತಿ ಮಾಧವಂ ।
ತೇಷಾಂ ತು ಕಾ ಗತಿರ್ದೇವ ತವ ಭಕ್ತಿಂ ಪ್ರಕುರ್ವತಾಂ ॥ ೩೨ ॥

ಕೃಚ್ಛ್ರಸಾಂತಪನೇ* ಕೃತ್ವಾ ಯೇಽಭಿಗಚ್ಛಂತಿ ಮಾಧವಂ ।
ತೇಽಕಾಂ ಗತಿಂ ಪ್ರಪದ್ಯಂತೇ ತವ ಕರ್ಮಪರಾಯಣಾಃ ॥ ೩೩ ॥

ಭೋಜನದಲ್ಲಿ ಮಾಡಬೇಕಾದ ಕರ್ಮಗಳಾವುವು ? ದೇವ, ಯಾವುದು ದೋಷವಿಲ್ಲದಂತೆ ಅದನ್ನು ಸಲ್ಲಿಸುವುದು ?

೩೧. ದೇವ, ಸರ್ವಶುದ್ಧಿಕರವೂ, ಉತ್ಕೃಷ್ಟವೂ ಆದ, ನಿನಗೆ ಅರ್ಪಿತವಾದ ಅನ್ನವನ್ನು ಯಾರು ದಿನಕ್ಕೊಂದು ಹೊತ್ತು ಮಾತ್ರವೇ ಉಂಡು ನಿನ್ನ ಮಾರ್ಗವನ್ನನುಸರಿಸಿ, ಮಾಧವನಾದ ನಿನ್ನನ್ನು ಸೇವಿಸುವರೋ (ಆಶ್ರಯಿಸುವರೋ) ಅವರಿಗೆ ಯಾವ ಗತಿಯುಂಟಾಗುವುದು.

೩೨-೩೩. ಶಾಸ್ತ್ರದಲ್ಲಿ ಹೇಳಿರುವಂತೆ ವ್ರತವನ್ನು ಮಾಡಿ, ಮಾಧವನಾದ ನಿನ್ನನ್ನು ಆಶ್ರಯಿಸುವ ಆ ನಿನ್ನ ಪರಮಭಕ್ತರಿಗೆ ಯಾವ ಗತಿಯಾಗುವುದು ? *ಸಾಂತಪನ ಚಾಂದ್ರಾಯಣಾದಿ ಪಾಪನಾಶಕವಾದ ವ್ರತಗಳನ್ನು ಮಾಡಿ, ನಿನ್ನನ್ನು ಆಶ್ರಯಿಸುವ ನಿನ್ನ ಕರ್ಮಾಸಕ್ತರು ಯಾವ ಗತಿಯನ್ನು ಪಡೆಯುವರು?

---

* ಮೂರುದಿನ ಹಗಲು ಮಾತ್ರವೂ, ಬಳಿಕ ಮೂರುದಿನ ರಾತ್ರಿ ಮಾತ್ರವೂ, ಆಮೇಲೆ ಮೂರು ದಿನ ಯಾರನ್ನೂ ಬೇಡದೆ ದೊರೆತುದನ್ನು ಮಾತ್ರವೂ ಭುಜಿಸಿ, ಆಮೇಲೆ ಮೂರು ದಿನ ಉಪವಾಸ ಮಾಡುವುದು ಸಾಂತಪನವ್ರತವೆನಿಸುವುದು.

ವಾಯ್ವಾಹಾರಂ ತತಃ ಕೃತ್ವಾ ಕೃಷ್ಣಂ ಸಮಧಿಗಚ್ಛತಿ ।
ತೇಷಾಂ ತು ಕಾ ಗತಿಃ ಕೃಷ್ಣ ತವ ಭಕ್ತ್ಯಾ ವ್ಯವಸ್ಥಿತಾಃ ॥ ೩೪ ॥

ಅಕ್ಷಾರಲವಣಂ ಕೃತ್ವಾ ಯೇಽಭಿಗಚ್ಛಂತಿ ಚಾಚ್ಯುತಂ ।
ಕಾಂ ಗತಿಂ ತೇ ಪ್ರಪದ್ಯಂತೇ ತವ ಕರ್ಮಾನುಸಾರಿಣಃ ॥ ೩೫ ॥

ಕೃತ್ವಾ ಪಯೋವ್ರತಂ ಚೈವ ಯೇಽಭಿಗಚ್ಛಂತಿ ಚಾಚ್ಯುತಂ ।
ತೇ ಕಾಂ ಗತಿಂ ಪ್ರಪದ್ಯಂತೇ ತವ ಕರ್ಮಾನುಸಾರಿಣಃ ॥ ೩೬ ॥

ದತ್ವಾ ಗವಾಹ್ನಿಕಂ ಚೈವ ಯೇ ಪ್ರಪದ್ಯಂತಿ ಮಾಧವಂ ।
ಕಾಂ ಗತಿಂ ತೇ ಪ್ರಪದ್ಯಂತೇ ತವ ಭಕ್ತ್ಯಾ ವ್ಯವಸ್ಥಿತಾಃ ॥ ೩೭ ॥

ಉಂಛವೃತ್ತಿಂ ಸಮಾಸ್ಥಾಯ ಯೇಽಭಿಗಚ್ಛಂತಿ ಮಾಧವಂ ।
ಕಾಂ ಗತಿಂ ತೇ ಪ್ರಪದ್ಯಂತೇ ನರಾ ಭಿಕ್ಷೋಪಜೀವಿನಃ ।
ಗೃಹಸ್ಥಧರ್ಮಂ ಕೃತ್ವಾ ವೈ ಯೇಽಭಿಗಚ್ಛಂತಿ ಮಾಧವಂ ॥ ೩೮ ॥

ತವ ಕ್ಷೇತ್ರೇಷು ವೈಕುಂಠ ಯೇ ತು ಪ್ರಾಣಾನ್ವಿಮುಂಚತೇ ।
ಕಾಂಲ್ಲೋಕಾಂಸ್ತೇ ಪ್ರಪದ್ಯಂತೇ ತವಕ್ಷೇತ್ರೇಷು ಯೇ ಮೃತಾಃ ॥ ೪೦ ॥

೩೪-೩೯. ಕೃಷ್ಣಾ, ವಾಯುವನ್ನು ಆಹಾರವಾಗಿ ಸೇವಿಸುವ, ಉಪ್ಪು ಕಾರಗಳನ್ನು ಬಿಡುವ, ಹಾಲನ್ನು ಮಾತ್ರವೇ ಸೇವಿಸುವ, ಗೋವುಗಳಿಗೆ ಆಹಾರವನ್ನು ಕೊಡುವ, ಉಂಛವೃತ್ತಿಯನ್ನು ಮಾಡುವ, ಭಿಕ್ಷಾವೃತ್ತಿಯಿಂದ ಜೀವಿಸುವ, ಮತ್ತು ಗೃಹಸ್ಥಧರ್ಮದಲ್ಲಿರುವ ಕರ್ಮಾಸಕ್ತರೂ, ಭಕ್ತರೂ ಆದ ನಿನ್ನ ಆಶ್ರಿತರು ಯಾವ ಗತಿಯನ್ನು ಪಡೆಯುವರು ?

೪೦ ವಿಷ್ಣುವೇ, ನಿನ್ನ ಕ್ಷೇತ್ರಗಳಲ್ಲಿ ಪ್ರಾಣಗಳನ್ನು ಬಿಡುವ ಭಕ್ತರು ಯಾವ ಲೋಕಗಳನ್ನು ಸೇರುವರು ?

ಕೃತ್ವಾ ಪಂಚಾತಪಂ ಚೈವ ಮಾಧವಾಯ ಪ್ರಯಚ್ಛತಿ ।
ಕಾಂ ಗತಿಂ ವೈ ಪರಾ ಯಾಂತಿ ಯೇ ತು ಪಂಚಾತಪೇ ವ್ರತಾಃ ॥ ೪೧ ॥

ಕಂಟಿಶಯ್ಯಾಂ ಸಮಾಸಾದ್ಯ ಯೇ ಪ್ರಪಶ್ಯಂತಿ ಚಾಚ್ಯುತಂ ।
ತೇಷಾಂ ತು ಕಾ ಗತಿರ್ದೇವ ಕಂಟಿಶಯ್ಯಾಂ ಸಮಾಶ್ರಿತಾಃ ॥ ೪೨ ॥

ಆಕಾಶಶಯನಂ ಕೃತ್ವಾ ಯೇ ಪ್ರಪದ್ಯಂತಿ ಚಾಚ್ಯುತಂ ।
ತೇಷಾಂ ತು ಕಾ ಗತಿಃ ಕೃಷ್ಣ ತವ ಭಕ್ತಿಪರಾಯಣಾಃ ॥ ೪೩ ॥

ಗೋವ್ರಜೇ ಶಯನಂ ಕೃತ್ವಾ ಯೇ ಪ್ರಪದ್ಯಂತಿ ಕೇಶವಂ ।
ತೇಷಾಂ ತು ಕಾ ಗತಿರ್ಬ್ರಹ್ಮನ್ ತವ ಭಕ್ತಿಪಥೇ ಸ್ಥಿತಾಃ ॥ ೪೪ ॥

ಶಾಕಾಹಾರಂ ತತಃ ಕೃತ್ವಾ ಯೇಽಭಿಗಚ್ಛಂತಿ ಚಾಚ್ಯುತಂ ।
ತೇಷಾಂ ತು ಕಾ ಗತಿರ್ದೇವ ‡ಕಣಭಕ್ಷಾಸ್ತು ಯೇ ನರಾಃ ॥ ೪೫ ॥

ಪಂಚಗವ್ಯಂ ತತಃ ಪೀತ್ವಾ ಯೇಽಭಿಗಚ್ಛಂತಿ ಚಾಚ್ಯುತಂ ।
ತೇಷಾಂ ತು ಕಾ ಗತಿರ್ದೇವ ಯೇ ನರಾ ಯಾವಕಾಶಿನಃ ॥ ೪೬ ॥

೪೧-೪೨. ದೇವ, ನಾರಾಯಣ, ಪಂಚಾಗ್ನಿಮಧ್ಯದಲ್ಲಿ ತಪಸ್ಸನ್ನು ಮಾಡಿಯೂ, ಮುಳ್ಳಿನ ಹಾಸಿಗೆಯಲ್ಲಿ ಮಲಗಿಯೂ, ಅಚ್ಯುತನಾದ ನಿನ್ನನ್ನು ಆಶ್ರಯಿಸುವ ಭಕ್ತರು ಯಾವ ಯಾವ ಗತಿಯನ್ನು ಪಡೆಯುವರು ?

೪೩-೪೪. 'ಕೃಷ್ಣಾ, ಆಕಾಶಶಯನವನ್ನು ಮಾಡಿಯೂ(ಆಕಾಶದಲ್ಲಿ ಮಲಗಿಯೂ), ಗೋವುಗಳ ಕೊಟ್ಟಿಗೆಯಲ್ಲಿ ಮಲಗಿಯೂ, ನಿನ್ನ ಭಕ್ತರಾಗಿ ನಿನ್ನನ್ನು ಆಶ್ರಯಿಸುವವರಿಗೆ ಯಾವ ಗತಿಯುಂಟಾಗುವುದು ?

೪೫-೪೬. ದೇವ, ಶಾಕಾಹಾರಿಗಳಾಗಿಯೂ, ಕಣಭಕ್ಷಕರಾಗಿಯೂ, ಪಂಚಗವ್ಯವನ್ನು ಸೇವಿಸಿಯೂ, ಅಲಂಸಂದೆಯನ್ನು ತಿಂದೂ ನಿನ್ನ ಭಕ್ತರಾಗಿ, ಅಚ್ಯುತನೂ, ಕೇಶವನೂ ಆದ ನಿನ್ನನ್ನು ಆಶ್ರಯಿಸುವವರು ಯಾವ ಯಾವ ಗತಿಯನ್ನು ಪಡೆಯುವರು ?

---

‡ ಕಣ = ಬಹಳ ಕೊಂಚ, ನುಚ್ಚು.

ಆಹಾರಂ ಗೋಮಯಂ ಕೃತ್ವಾ ಯೇಽಭಿಗಚ್ಛಂತಿ ಕೇಶವಂ ।
ನಾರಾಯಣ ಗತಿಸ್ತೇಷಾಂ ಕೀದೃಶೋಽತ್ರ ವಿಧಿಃ ಸ್ಮೃತಃ ॥ ೪೭ ॥

ಸಕ್ತುಂ ವೈ ಭಕ್ಷಯಿತ್ವಾ ತು ಯೇ ಪ್ರಪದ್ಯಂತಿ ಚಾಚ್ಯುತಂ ।
ತೇಷಾಂ ತು ಕಾ ಗತಿರ್ದೇವ ತವ ಕರ್ಮಪರಾಯಣಾಃ ॥ ೪೮ ॥

ಶಿರಸಾ ದೀಪಕಂ ಕೃತ್ವಾ ಯೇಽಭಿಗಚ್ಛಂತಿ ಕೇಶವಂ ।
ತೇಷಾಂ ತು ಕಾ ಗತಿರ್ದೇವ ಶಿರಸಾ ದೀಪಧಾರಣಾತ್ ॥ ೪೯ ॥

*ಯೇ ಹಿ ನಿತ್ಯಂ ಪಯಃ ಪೀತ್ವಾ ತವ ಚಿಂತಾವ್ಯವಸ್ಥಿತಾಃ ।
ತೇ ಗತಿಂ ಕಾಂ ಪ್ರಪದ್ಯಂತೇ ತವ ಚಿಂತಾಪರಾಯಣಾಃ ॥ ೫೦ ॥

ಅಶ್ಮಾಶನಂ ವ್ರತಂ ಕೃತ್ವಾ ಯೇ ಪ್ರಪದ್ಯಂತಿ ನಿತ್ಯಶಃ ।
ತೇಷಾಂ ತು ಕಾ ಗತಿರ್ದೇವ ತವಭಕ್ತಿಪರಾಯಣಾಃ ॥ ೫೧ ॥

ಭಕ್ಷಯಿತ್ವಾ ತು ದೂರ್ವಾಂ ಯೇ ಪ್ರಪದ್ಯಂತೇ ಮನೀಷಿಣಃ ।
ತೇಷಾಂ ತು ಕಾ ಗತಿರ್ದೇವ ಸ್ವಧರ್ಮಗುಣಚಾರಿಣಃ ॥ ೫೨ ॥

೪೭-೪೮. ದೇವ, ನಾರಾಯಣ, ಗೋಮಯವನ್ನು ತಿಂದೂ, ಹುರಿಹಿಟ್ಟನ್ನು ತಿಂದೂ, ನಿನ್ನ ಕರ್ಮದಲ್ಲಿ ಆಸಕ್ತರಾಗಿ ನಿನ್ನನ್ನು ಆಶ್ರಯಿಸುವ ಭಕ್ತರು ಯಾವ ಯಾವ ಗತಿಯನ್ನು ಪಡೆಯುವರು? ಈ ವಿಷಯದಲ್ಲಿ ವಿಧಿಯೇನು ?

೪೯-೫೪. ದೇವ, ಸ್ವಧರ್ಮನಿಷ್ಠರಾಗಿ ಭಕ್ತರಾಗಿ ನಿನ್ನನ್ನು ಧ್ಯಾನಿಸುತ್ತ ತಲೆಯಮೇಲೆ ದೀಪವನ್ನು ಹೊತ್ತುಕೊಂಡು ನಿನ್ನೆದುರಿಗೆ ಸೇವೆಮಾಡುವವರೂ, ಕಲ್ಲನ್ನು ತಿನ್ನುವ ವ್ರತವನ್ನು ಮಾಡುವವರೂ, ಗರಿಕೆಯ ಹುಲ್ಲನ್ನು ತಿಂದು ನಿಯಮದಿಂದಿರುವ ವಿದ್ವಾಂಸರೂ, ನಿನ್ನಲ್ಲಿ ಪ್ರೀತಿಯಿಂದ ಮೊಳಕಾಲೂರಿ

---

* ಪುನರುಕ್ತಿ.

ಜಾನುಭ್ಯಾಂ ಪ್ರತಿಪದ್ಯಂತೇ ತವ ಪ್ರೀತ್ಯಾ ಚ ಮಾಧವ ।
ತೇಷಾಂ ತು ಕಾ ಗತಿರ್ದೇವ ತನ್ಮಮಾಚಕ್ಷ್ವ ಕೇಶವ ॥ ೫೩ ॥

ಉತ್ತಾನಶಯನಂ ಕೃತ್ವಾ ಧಾರಯಂತಿ ಹಿ ದೀಪಿಕಾಂ ।
ತೇ ಯಾಂತಿ ಕಾಂ ಗತಿಂ ದೇವ ಕಥ್ಯತೇ ಯಾ ಚ ಶಾಶ್ವತೀ । ॥ ೫೪ ॥

ಜಾನುಭ್ಯಾಂ ದೀಪಕಂ ಕೃತ್ವಾ ಕೇಶವಾಯ ಪ್ರಪದ್ಯತೇ ।
ತೇಷಾಂ ತು ಕಾ ಗತಿರ್ದೇವ ಕಥ್ಯತೇ ಚೈವ ಶಾಶ್ವತೀ ॥ ೫೫ ॥

ಅವಾಙ್ಮುಖಸ್ತು ಭೂತ್ವಾ ವೈ ಯಃ ಪ್ರಪದ್ಯೇಜ್ಜನಾರ್ದನಂ ।
ಭಗವನ್ ಕಾ ಗತಿಸ್ತಸ್ಯ ಅವಾಕ್ ಶಿರಸಿ ಶಾಯಿನಃ ॥ ೫೬ ॥

ಪುತ್ರದಾರಗೃಹಂ ಚೈವ ಮುಕ್ತ್ವಾ ಯೋಽನುಪ್ರಪದ್ಯತೇ ।
ಕಾ ಗತಿಸ್ತಸ್ಯ ಸಿದ್ಧಾ ತು ಕಥಯಸ್ವ ಸುರೋತ್ತಮ ॥ ೫೭ ॥

ಭಾಷಿತೋಽಸಿ ಮಯಾ ಹ್ಯೇವಂ ಸರ್ವಲೋಕಸುಖಾವಹಂ ।
ಗಮನಾಗಮನಂ ಚೈವ ತ್ವತ್ಪ್ರಸನ್ನೇನ ಮಾಧವ ॥ ೫೮ ॥

ನಡೆದು ಸೇವಿಸುವವರೂ, ಮೇಲ್ಮುಖರಾಗಿ ಮಲಗಿ ದೀಪವನ್ನು ಧರಿಸಿ, ಸೇವಿಸುವವರೂ ಯಾವ ಯಾವ ಗತಿಗಳನ್ನು ಪಡೆಯುವರು? ಯಾವುದು ಶಾಶ್ವತವಾದುದು? ಎಂಬುದನ್ನು ಮಾಧವಾ, ಕೇಶವನೇ, ದೇವ, ನನಗೆ ಹೇಳು.

೫೫–೫೭. ದೇವ, ಸುರೋತ್ತಮ, ಮೊಳಕಾಲುಗಳಮೇಲೆ ದೀಪಗಳನ್ನಿಟ್ಟು ನಿನ್ನ ಸೇವೆಗೆಯ್ಯುವ, ಅಡ್ಡಬಿದ್ದು ಮಲಗಿ ಸೇವೆಗೆಯ್ಯುವ, ಮನೆ, ಹೆಂಡತಿ, ಮಕ್ಕಳುಗಳನ್ನು ತೊರೆದು ನಿನ್ನನ್ನು ಮರೆಹೋಗುವ ಭಕ್ತರು ಯಾವ ಯಾವ ಗತಿಯನ್ನು ಪಡೆಯುವರು? ಯಾವುದು ಸ್ಥಿರವಾದುದು.

೫೮. ಮಾಧವ, ನೀನು ಪ್ರಸನ್ನನಾಗಿರುವುದರಿಂದ ಸರ್ವಲೋಕಕ್ಕೂ ಸುಖವನ್ನುಂಟುಮಾಡುವ ಹೋಗಿ ಬರುವಿಕೆಗಳನ್ನು ಕೇಳಿದ್ದೇನೆ.

ತ್ವಂ ಜ್ಞಾತಾ ತ್ವಂ ಪಿತಾ ಚೈವ ಸರ್ವಧರ್ಮವಿನಿಶ್ಚಯಃ ।
ಅತಸ್ತ್ವಯ್ಯೈವ ವಕ್ತವ್ಯೋ ಯೋಗಸಾಂಖ್ಯವಿನಿಶ್ಚಯಃ ॥ ೫೯ ॥

ತ್ವಾಂ ಭಜಂಶ್ಚ ಗತೇ ಜೀವೇ ಮಧುಪರ್ಕಸಮನ್ವಿತಂ ।
ಭಸ್ಮಾಕುಲೇಷು ನಿಕ್ಷಿಪ್ಯ ಕಥಂ ಚಾಗ್ನೌ ಪ್ರಪದ್ಯತೇ ॥ ೬೦ ॥

ಕಾಂ ಗತಿಂ ಪ್ರತಿಪದ್ಯಂತೇ ತ್ವದ್ಭಕ್ತಾ ಜಲಮಾಸ್ಥಿತಾಃ ।
ತ್ವತ್ಕ್ಷೇತ್ರಸಂಸ್ಥಿತೋ ವಾಪಿ ತನ್ಮಮಾಚಕ್ಷ್ವ ಮಾಧವ ॥ ೬೧ ॥

ಸ್ಮರಣಂ ಪುತ್ರ ತೇ ಕೃಷ್ಣ ಯೈಸ್ತು ನಾಮ ಪ್ರಕೀರ್ತ್ಯತೇ ।
ನಮೋ ನಾರಾಯಣೇತ್ಯುಕ್ತ್ವಾ ತೇಷಾಂ ವೈ ಕಾ ಗತಿರ್ಭವೇತ್ ॥ ೬೨ ॥

ಉದ್ಯತೇಷ್ವಪಿ ಶಸ್ತ್ರೇಷು ಹನ್ಯಮಾನಾ ರಣೇ ನರಾಃ ।
ನಾಮಸ್ಪ್ರಕೀರ್ತನಾತ್ತೇಷಾಂ ಕೀದೃಶೀ ತು ಗತಿರ್ಭವೇತ್ ॥ ೬೩ ॥

---

೫೯. ನೀನು ಜ್ಞಾನಿಯೂ, ತಂದೆಯೂ ಆಗಿದ್ದೀಯೆ. ಆದುದರಿಂದ ಸಾಂಖ್ಯಯೋಗಗಳ ನಿಜವನ್ನೂ, ಸರ್ವಧರ್ಮ ನಿರ್ಣಯವನ್ನೂ ನೀನೇ ಹೇಳಬೇಕು.

೬೦–೬೧. ನಿನಗೆ ಮಧುಪರ್ಕವನ್ನು ಅರ್ಪಿಸಿ, ನಿನ್ನನ್ನು ಭಜಿಸುತ್ತ, ಇರುವಾಗ ಪ್ರಾಣಬಿಡುವ ಅಥವಾ ಅಗ್ನಿಯಲ್ಲಿ ದೇಹವನ್ನರ್ಪಿಸಿ ಭಸ್ಮಮಾಡಿ, ಅಥವಾ ನೀರಲ್ಲಿ ಮುಳುಗಿ ಪ್ರಾಣಬಿಡುವ ಅಥವಾ ನಿನ್ನ ಕ್ಷೇತ್ರದಲ್ಲಿ ಮೃತರಾಗುವ ನಿನ್ನ ಭಕ್ತರು ಯಾವ ಗತಿಯನ್ನು ಪಡೆಯುವರೋ ಅದನ್ನು ನನಗೆ ನಿಜವಾಗಿ ಹೇಳು.

೬೨–೬೩. ಅಪ್ಪ, ಕೃಷ್ಣ, ಯಾರು ಸಿದ್ಧವಾದ ಶಸ್ತ್ರಗಳಿಂದ ಕೊಲ್ಲಲ್ಪಡು ವಾಗಲೂ ' ನಮೋ ನಾರಾಯಣಾಯ ' ಎಂದು ಹೇಳುವರೋ, ಅಥವಾ ನಿನ್ನ ನಾಮಸ್ಮರಣೆಯನ್ನು ಮಾಡುವರೋ ಅವರಿಗೆ ಅದರಿಂದ ಎಂತಹ ಗತಿ ಯಾಗುವುದು ?

ಅಹಂ ಶಿಷ್ಯಾ ಚ ದಾಸೀ ಚ ತವ ಭಕ್ತ್ಯಾ ವ್ಯವಸ್ಥಿತಾ ।
ರಹಸ್ಯಂ ಧರ್ಮಸಂಯುಕ್ತಂ ತನ್ಮಮಾಚಕ್ಷ್ವ ಮಾಧವ ॥ ೬೪ ॥

ಏವಂ ತತ್ಪರಮಂ ಗುಹ್ಯಂ ಮಮ ಪ್ರೀತ್ಯಾ ಜಗದ್ಗುರೋ ।
ಸಂಚಿಂತ್ಯ ಲೋಕಧರ್ಮಾರ್ಥಂ ತದ್ಭವಾನ್ಕರ್ತುಮರ್ಹತಿ ॥ ೬೫ ॥

ಇತಿ ಶ್ರೀವರಾಹಪುರಾಣೇ ಪೃಥಿವ್ಯಾಃ ಪ್ರಶ್ನೋ ನಾಮ
ಚತುರ್ದಶಾಧಿಕಶತತಮೋಽಧ್ಯಾಯಃ

---

೬೪ ಮಾಧವ, ನಾನು ನಿನ್ನಲ್ಲಿ ಭಕ್ತಿಯುಳ್ಳ ಶಿಷ್ಯಳೂ, ಸೇವಕಳೂ ಆಗಿದ್ದೇನೆ. ಆದುದರಿಂದ ಧರ್ಮಯುತವಾದ ರಹಸ್ಯವನ್ನು ನನಗೆ ಹೇಳು.

೬೫. ಜಗದ್ಗುರುವೇ, ನೀನು ನನ್ನಲ್ಲಿ ಪ್ರೀತಿಯಿಂದ ಲೋಕ ಧರ್ಮಾರ್ಥವಾಗಿ ಅತಿರಹಸ್ಯವಾದ ಇದನ್ನು ಚೆನ್ನಾಗಿ ಆಲೋಚಿಸಿ ಮಾಡ ಬೇಕಾಗಿದೆ.

ಅಧ್ಯಾಯದ ಸಾರಾಂಶ :—

ಋಷಿಗಳಿಂದಲೂ, ಭೂದೇವಿಯಿಂದಲೂ ಸ್ತುತನಾಗಿ, ಒಲಿದ ನಾರಾಯಣನು ವರಾಹಾವತಾರವನ್ನು ವಹಿಸಿ, ತನ್ನ ಕೋರೆಯ ಹಲ್ಲಿನಿಂದ, ಪಾತಾಳದಲ್ಲಿ ಮುಳುಗಿದ್ದ ಭೂದೇವಿಯನ್ನು ಎತ್ತಿ ಧರಿಸಲು, ಆ ದೇವನಿಗೆ ಶರಣಾಗತಳಾದ ಭೂದೇವಿಯು, ದೇವಪೂಜಾವಿಧಾನವನ್ನೂ, ಬಗೆಬಗೆಯ ಕರ್ಮಗಳನ್ನು ಆಚರಿಸುವ ಭಕ್ತರಿಗೆ ಉಂಟಾಗುವ ಗತಿಗಳನ್ನೂ, ಧರ್ಮಸ್ವರೂಪವನ್ನೂ, ಕೇಳಿದಳು. ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಹದಿನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

–x–

ಪಂಚದಶಾಧಿಕಶತತಮೋಽಧ್ಯಾಯಃ

ಅಥ ವಿವಿಧಧರ್ಮೋತ್ಪತ್ತಿಃ

ತತೋ ಮಹೀವಚಃ ಶ್ರುತ್ವಾ ದೇವೋ ನಾರಾಯಣೋಽಬ್ರವೀತ್ ।
ಕಥಯಿಷ್ಯಾಮಿ ತೇ ದೇವಿ ಕರ್ಮ ಸ್ವರ್ಗಸುಖಾವಹಂ ॥ ೧ ॥

ಯತ್ತ್ವಯಾ ಪೃಚ್ಛ್ಯತೇ ದೇವಿ ತಚ್ಛೃಣುಷ್ವ ವಸುಂಧರೇ ।
ಸ್ಥಿತಿಂ ಸತ್ಯಾಂ ತು ಮರ್ತ್ಯಾನಾಂ ಭಕ್ತ್ಯಾ ಯೇ ಚ ವ್ಯವಸ್ಥಿತಾಃ ॥ ೨ ॥

ನಾಹಂ ದಾನಸಹಸ್ರೇಣ ನಾಹಂ ಯಜ್ಞಶತೈರಪಿ ।
ತುಷ್ಯಾಮಿ ನ ತು ವಿತ್ತೇನ ಯೇ ನರಾಃ ಸ್ವಲ್ಪಚೇತಸಃ ॥ ೩ ॥

ನೂರಹದಿನೈದನೆಯ ಅಧ್ಯಾಯ.

ವಿವಿಧ ಧರ್ಮೋತ್ಪತ್ತಿ.

೧–೨. ದೇವನಾದ ನಾರಾಯಣನು ಭೂದೇವಿಯ ಮಾತನ್ನು ಕೇಳಿದ ಬಳಿಕ ಮುಂದಿನಂತೆ ಹೇಳಿದನು. " ದೇವಿ, ಸ್ವರ್ಗಸುಖವನ್ನುಂಟುಮಾಡುವ ಕರ್ಮವನ್ನು ನಿನಗೆ ಹೇಳುತ್ತೇನೆ. ವಸುಂಧರೇ, ಭಕ್ತಿನಿರತರಾದ ಮನುಷ್ಯರ ಯಾವ ಸ್ಥಿತಿಗತಿಗಳನ್ನು ಪ್ರಶ್ನಿಸಿದೆಯೋ ಅದನ್ನು ಕೇಳು.

೩. ಅಲ್ಪಮನಸ್ಸಿನ ಮನುಷ್ಯರು ಮಾಡುವ ಸಾವಿರಾರು ದಾನಗಳಿಂದಲೂ, ನೂರಾರು ಯಜ್ಞಗಳಿಂದಲೂ, ಧನದಾನದಿಂದಲೂ, ನಾನು ಸಂತುಷ್ಟನಾಗುವುದಿಲ್ಲ.

ಏಕಚಿತ್ತಂ ಸಮಾಧಾಯ ಯೋ ಮಾಂ ಜಾನಾತಿ ಮಾಧವಿ ।
ನಿತ್ಯಂ ತುಷ್ಯಾಮಿ ತಸ್ಯಾಹಂ ಪುರುಷಂ ಬಹುದೋಷಕಂ ॥ ೪ ॥

ಯಚ್ಚ ಪೃಚ್ಛಸಿ ಮಾಂ ಭದ್ರೇ ಕರ್ಮ ಸ್ವರ್ಗಸುಖಾವಹಂ ।
ತಚ್ಛೃಣುಷ್ವ ವರಾರೋಹೇ ಗದತೋ ಮೇ ಶುಚಿಸ್ಮಿತೇ ॥ ೫ ॥

ಯೇ ನಮಸ್ಯಂತಿ ಮಾಂ ನಿತ್ಯಂ ಪುರುಷಾ ಬಹುಚೇತಸಃ ।
ಅರ್ಧರಾತ್ರೇಂಧಕಾರೇ ಚ ಮಧ್ಯಾಹ್ನೇ ವಾಪರಾಹ್ಣಕೇ ॥ ೬ ॥

ಯಸ್ಯ ಚಿತ್ತಂ ನ ನಶ್ಯೇತ ಮಮಭಕ್ತ್ಯಾವ್ಯವಸ್ಥಿತಂ ।
ದ್ವಾದಶ್ಯಾಮುಪವಾಸಂ ತು ಯಃ ಕುರ್ಯಾನ್ಮಮ ತತ್ಪರಃ ॥ ೭ ॥

ತೇ ಮಾಮೇವ ಪ್ರಪಶ್ಯಂತಿ ಮಯಿ ಭಕ್ತಿಪರಾಯಣಾಃ ॥ ೮ ॥

---

೪. ಮಾಧವಿ, ಒಂದೇ ಮನಸ್ಸಿನಿಂದ ನನ್ನನ್ನು ನಿತ್ಯವೂ ಅರಿಯುವ (ಧ್ಯಾನಿಸುವ)ಬಹು ದೋಷವುಳ್ಳ ಮನುಷ್ಯನಿಗೂ ತುಷ್ಟನಾಗಿ ಒಲಿಯುವೆನು.

೫. ಭದ್ರೇ, ವರಾರೋಹೇ, ಮಂದಹಾಸೇ, ಸ್ವರ್ಗಸುಖಕರವಾದ ಕರ್ಮವನ್ನು ಕೇಳಿದೆಯಷ್ಟೆ. ಅದನ್ನು ನಾನು ಹೇಳುತ್ತೇನೆ. ಕೇಳು.

೬–೮. ದೊಡ್ಡ ಮನಸ್ಸುಳ್ಳ ಯಾರು ನನ್ನನ್ನು ಅರ್ಧರಾತ್ರಿಯಲ್ಲಿ ಕತ್ತಲೆಯಲ್ಲಾಗಲಿ, ಮಧ್ಯಾಹ್ನದಲ್ಲಾಗಲಿ, ಅಪರಾಹ್ಣದಲ್ಲಾಗಲಿ, ನಿತ್ಯವೂ ನಮಸ್ಕರಿಸುವರೋ, ನನ್ನ ಭಕ್ತಿಯಲ್ಲಿ ನೆಲಸಿದ ಯಾರ ಮನವು ಕದಲುವುದಿಲ್ಲವೋ, ನನ್ನಲ್ಲಿ ಆಸಕ್ತನಾಗಿ ದ್ವಾದಶಿಯಲ್ಲಿ ಯಾರು ಉಪವಾಸ ಮಾಡುವರೋ, ಆ ನನ್ನ ಭಕ್ತಿಪರಾಯಣರು ನನ್ನನ್ನೇ ಕಾಣುವರು

ಲಬ್ಧಚೇತೋ ಗುಣಜ್ಞಶ್ಚ ನರೋ ಭಕ್ತಿವ್ಯವಸ್ಥಿತಃ ।
ಇಚ್ಛಯಾಪಿ ಭವೇದ್ಭದ್ರೇ ಸ್ವರ್ಗೇ ವಸತಿ ಸುಂದರಿ ॥
ಸ್ವಲ್ಪಕೇನ ನ ಗಮ್ಯಂತೇ ದುಷ್ಪ್ರಾಪ್ಯೋಽಹಂ ವರಾನನೇ ॥ ೯ ॥

ಯಾನಿ ಕರ್ಮಾಣಿ ಕುರ್ವಂತೋ ಮಾಂ ಪ್ರಪಶ್ಯಂತಿ ಮಾಧವಿ ।
ತಾನಿ ತೇ ಕಥಯಿಷ್ಯಾಮಿ ಯೇ ಮೇ ಭಕ್ತ್ಯಾ ವ್ಯವಸ್ಥಿತಾಃ ॥ ೧೦ ॥

ದ್ವಾದಶ್ಯಾಮುಪವಾಸಂ ತು ಯೇ ಚ ಕುರ್ವಂತಿ ತೇ ನರಾಃ ।
ತೇ ಮಾಮೇವ ಪ್ರಪಶ್ಯಂತಿ ಮಮ ಭಕ್ತಿಪರಾಯಣಾಃ ॥ ೧೧ ॥

ಕೃತ್ವಾ ಚೈವೋಪವಾಸಂ ತು ಗೃಹೀತ್ವಾ ಚ ಜಲಾಂಜಲಿಂ ।
ನಮೋ ನಾರಾಯಣೇತ್ಯುಕ್ತ್ವಾ ಆದಿತ್ಯಂ ಚಾವಲೋಕಯೇತ್ ॥ ೧೨ ॥

ಯಾವಂತೋ ಬಿಂದವಃ ಕಿಂಚಿತ್ ಪತಂತ್ಯೇವಾಂಜಲೇರ್ಜಲಾತ್ ।
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥ ೧೩ ॥

---

೯. ಸುಂದರಿ, ಭದ್ರೇ, ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡು, ಗುಣಜ್ಞನಾಗಿ ಭಕ್ತಿಪರಾಯಣನಾಗಿರುವವನು, ಇಷ್ಟಪಟ್ಟರೂ ಸ್ವರ್ಗದಲ್ಲಿ ವಾಸಿಸುವನು. ಅಲ್ಪರು ನನ್ನೆಡೆಗೆ ಬರಲಾರರು. ನಾನು ದೊರೆಯುವುದು ಕಷ್ಟ.

೧೦. ಮಾಧವಿ, ನನ್ನ ಭಕ್ತರು ಯಾವ ಕರ್ಮಗಳನ್ನು ಮಾಡಿ ನನ್ನನ್ನು ಕಾಣುವರೋ ಅವುಗಳನ್ನು ನಿನಗೆ ಹೇಳುವೆನು.

೧೧. ನನ್ನ ಭಕ್ತಿಯಲ್ಲಿ ಆಸಕ್ತರಾದ ಯಾರು ದ್ವಾದಶಿಯಲ್ಲಿ ಉಪವಾಸವನ್ನು ಮಾಡುವರೋ ಅವರು ನನ್ನನ್ನೇ ಕಾಣುವರು.

೧೨. ಉಪವಾಸವನ್ನು ಮಾಡಿ, ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು 'ನಮೋ ನಾರಾಯಣಾಯ' ಎಂದು ಹೇಳಿ, ಸೂರ್ಯನನ್ನು ನೋಡಬೇಕು.

೧೩. ಬೊಗಸೆಯ ನೀರಿನಿಂದ ಎಷ್ಟು ಬಿಂದುಗಳು ಬೀಳುವುವೋ ಅಷ್ಟು ಸಹಸ್ರವರ್ಷಕಾಲ ಸ್ವರ್ಗಲೋಕದಲ್ಲಿ ಗೌರವವನ್ನು ಪಡೆಯುವನು.

ಅಥ ಚೈವ ತು ದ್ವಾದಶ್ಯಾಂ ಪುರುಷಾ ಧರ್ಮವಾದಕಾಃ ।
ವಿಧಿನಾ ಚ ಪ್ರಯತ್ನೇನ ಯೇ ಮಾಂ ಕುರ್ವಂತಿ ಮಾನುಷಾಃ ॥ ೧೪ ॥

ಪಾಂಡುರೈಶ್ಚೈವ ಪುಷ್ಪೈಶ್ಚ ಸೃಷ್ಟೈರ್ಧೂಪೈಸ್ತು ಧೂಪಯೇತ್ ।
ಯೋ ಮೇ ಧಾರಯತೇ ಭೂಮೌ ತಸ್ಯಾಪಿ ಶೃಣು ಯಾ ಗತಿಃ ॥ ೧೫ ॥

ದತ್ವಾ ಶಿರಸಿ ಪುಷ್ಪಾಣಿ ಇಮಂ ಮಂತ್ರಮುದೀರಯೇತ್ ॥ ೧೬ ॥

ಹೃದಿ ಕೃತ್ವಾ ತು ಮಂತ್ರಾಶ್ಚ ಶುಕ್ಲಾಂಬರಧರೋ ಧರೇ ।
ಸುಮಾನಿ ಸುಮನಾ ಗೃಹ್ಯ ಪ್ರೀಯತಾಂ ಭಗವಾನ್ ಹರಿಃ ॥ ೧೭ ॥

ನಮೋಽಸ್ತು ವಿಷ್ಣವೇ ವ್ಯಕ್ತಾವ್ಯಕ್ತಗಂಧಿಗಂಧಾನ್ಸುಗಂಧಾನ್ವಾ ಗೃಹ್ಣ ಗೃಹ್ಣ ನಮೋ ಭಗವತೇ ವಿಷ್ಣವೇ. ಅನೇನ ಮಂತ್ರೇಣ ಗಂಧಂ ದದ್ಯಾತ್. ಶ್ರುತ್ವಾ ಪ್ರತ್ಯಾಗತಮಾಧಾರಸವನಂ ಪತಯೇ ಭವಂ ಪ್ರವಿಷ್ಟಂ ಮೇ ಧೂಪನಂ ಗೃಹ್ಣಾತು ಮೇ ಭಗವಾನಚ್ಯುತಃ ಅನೇನ ಮಂತ್ರೇಣ ಧೂಪಂ ದದ್ಯಾತ್. ॥ ೧೮ ॥

೧೪–೧೫. ಅಲ್ಲದೆ ಧರ್ಮವಾದಿಗಳಾದ ಯಾರು ದ್ವಾದಶಿಯದಿನ ವಿಧಿ ಪೂರ್ವಕವಾಗಿ ಪ್ರಯತ್ನದಿಂದ ಬಿಳಿಯ ಹೂಗಳಿಂದ ಪೂಜಿಸಿ, ಇರುವ ಧೂಪ ವಸ್ತುಗಳಿಂದ ಧೂಪವನ್ನು ಹಾಕಿ ನನಗೆ ಅರ್ಪಿಸುವರೋ ಅವರಿಗೆ ಲಭಿಸುವ ಗತಿಯನ್ನು ಕೇಳು.

೧೬–೧೭. ನನ್ನ ಶಿರದಲ್ಲಿ ಹೂಗಳನ್ನು ಅರ್ಪಿಸಿ, " ಬಿಳಿಯದಾದ ವಸ್ತ್ರ ಗಳನ್ನು ಧರಿಸಿರುವ ಭಗವಂತನಾದ ಹರಿಯು ಈ ಮಂತ್ರಗಳನ್ನು ಮನಸ್ಸಿಗೆ ತಂದುಕೊಂಡು ಪ್ರಸನ್ನನಾಗಿ ಈ ಹೂಗಳನ್ನು ಪರಿಗ್ರಹಿಸಿ ತೃಪ್ತನಾಗಲಿ" ಎಂಬ ಅರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಬೇಕು

೧೮. " ವಿಷ್ಣುವೇ, ನಿನಗೆ ನಮಸ್ಕಾರ ವ್ಯಕ್ತವಾಗಿಯೂ ಇರುವ ಗಂಧ ಸುಗಂಧಗಳನ್ನು ಸ್ವೀಕರಿಸು. ಸ್ವೀಕರಿಸು. ಭಗವಂತನಾದ ವಿಷ್ಣುವೇ ನಿನಗೆ ನಮಸ್ಕಾರ." ಎಂಬ ಅರ್ಥವುಳ್ಳ ಮೇಲಿನ ನಮೋಽಸ್ತು....ವಿಷ್ಣುವೇ ಎಂಬ ಮಂತ್ರದಿಂದ ಗಂಧವನ್ನು ಅರ್ಪಿಸಬೇಕು. " ಶ್ರುತ್ವಾಪ್ರತ್ಯಾಗತಮಾಧಾ ರಸವನಂ ಪತಯೇ ಭವಂಪ್ರವಿಷ್ಟಂ ಮೇಧೂಪನಂ ಗೃಹ್ಣಾತು " ಎಂಬ ಈ ಮಂತ್ರದಿಂದ ಧೂಪವನ್ನರ್ಪಿಸಬೇಕು.

ಶ್ರುತ್ವಾ ಚೈವಂ ಚ ಶಾಸ್ತ್ರಾಣಿ ಯೋ ಮಾಮೇವ ತು ಕಾರಯೇತ್ ।
ಮಮ ಲೋಕಂ ಚ ಗಚ್ಛೇತ ಜಾಯೇತ್ಶೈವ ಚತುರ್ಭುಜಃ ॥ ೧೯ ॥

ಏತತ್ತೇ ಕಥಿತಂ ದೇವಿ ಶ್ರೇಷ್ಠಂ ಚೈವ ಮಮ ಪ್ರಿಯಂ ।
ತವ ಚೈವಂ ಪ್ರಿಯಾರ್ಥಾಯ ಮಂತ್ರಪೂಜಾಂ ಸುಖಾವಹಾಂ ॥ ೨೦ ॥

ಶ್ಯಾಮಾಕಂ ಸ್ವಸ್ತಿಕಂ ಚೈವ ಗೋಧೂಮಂ ಮುದ್ಗಕಂ ತಥಾ ।
ಶಾಲಯಸ್ತು ಯವಾಶ್ಚೈವ ತಥಾ ನೀವಾರಕಾಂಗುಕಾಃ ॥ ೨೧ ॥

ಏತಾನಿ ಯಸ್ತು ಭುಂಜೀತ ಮಮಕರ್ಮಪರಾಯಣಃ ।
ಶಂಖಂ ಚಕ್ರಂ ಲಾಂಗಲಂ ಚ ಮುಸಲಂ ಚ ಸ ಪಶ್ಯತಿ ॥ ೨೨ ॥

ಬ್ರಾಹ್ಮಣಸ್ಯ ತು ವಕ್ಷ್ಯಾಮಿ ಶೃಣು ಕರ್ಮ ವಸುಂಧರೇ ॥ ೨೩ ॥

ಯಾನಿ ಕರ್ಮಾಣಿ ಕುರ್ವೀತ ಮಮಭಕ್ತಿಪರಾಯಣಃ ।
ಷಟ್ಕರ್ಮನಿರತೋ ಭೂತ್ವಾ ಅಹಂಕಾರವಿವರ್ಜಿತಃ ॥ ೨೪ ॥

---

೧೯. ಹೀಗೆ ಶಾಸ್ತ್ರಗಳನ್ನು ಕೇಳಿ. ನನ್ನನ್ನೇ ಪೂಜಿಸುವವನು ನನ್ನ ಲೋಕವನ್ನು ಸೇರಿ, ಚತುರ್ಭುಜಗಳುಳ್ಳವನಾಗುವನು.

೨೦. ದೇವಿ, ನನ್ನ ಹಿತಪ್ರಯೋಜನಕ್ಕಾಗಿ, ಶ್ರೇಷ್ಠವೂ, ನನಗೆ ಪ್ರಿಯವೂ, ಸುಖಕರವೂ ಆದ ಈ ಮಂತ್ರಪೂಜಾವಿಧಾನವನ್ನು ಹೇಳಿದೆನು.

೨೧–೨೨. ಸಾಸವೆ, ಸ್ವಸ್ತಿಕ, ಗೋದುವೆ, ಹೆಸರು, ಬತ್ತ(ಅಕ್ಕಿ), ಜವೆ, ಯಾರೂ ಬಿತ್ತದೆ ಬೆಳೆಯುವ ನವಣೆ ಮೊದಲಾದ ತೃಣಧಾನ್ಯ ಇವುಗಳನ್ನು ಭುಜಿಸುವ ನನ್ನ ಕರ್ಮಾಸಕ್ತನು ಶಂಖಚಕ್ರಹಲಮುಸಲಗಳನ್ನು ನೋಡುವನು. ಎಂದರೆ ನನ್ನನ್ನು ಕಾಣುವನು. ಅಥವಾ ಚತುರ್ಭುಜನಾಗುವನು.

೨೩. ವಸುಂಧರೇ, ಬ್ರಾಹ್ಮಣನ ಕರ್ಮವನ್ನು ಹೇಳುತ್ತೇನೆ. ಕೇಳು.

೨೪–೨೬. ಯಾವ ಕರ್ಮಗಳನ್ನೇ ಮಾಡಲಿ, ಬ್ರಾಹ್ಮಣನು ನನ್ನ ಭಕ್ತಿಯಲ್ಲಿ ಆಸಕ್ತನಾಗಿ ಷಟ್ಕರ್ಮನಿರತನೂ, ಅಹಂಕಾರವಿಲ್ಲದವನೂ, ಲಾಭಾ

ಲಾಭಾಲಾಭಂ ಪರಿತ್ಯಜ್ಯ ಭಿಕ್ಷಾಹಾರೋ ಜಿತೇಂದ್ರಿಯಃ ।
ಮಮ ಕರ್ಮಸಮಾಯುಕ್ತಃ ಪೈಶುನ್ಯೇನ ವಿವರ್ಜಿತಃ ।
ಶಾಸ್ತ್ರಾನುಸಾರೀ ಮಧ್ಯಸ್ಥೋ ನವೃದ್ಧಶಿಶುಚೇತನಃ ॥ ೨೫ ॥

ಏತದ್ವೈ ಬ್ರಹ್ಮಣಃಕರ್ಮ ಏಕಚಿತ್ತೋ ಜಿತೇಂದ್ರಿಯಃ ।
ಇಷ್ಟಾಪೂರ್ತಂ ಚ ಕುರುತೇ ಸ ಮಾಮೇತಿ ವಸುಂಧರೇ ॥ ೨೬ ॥

ಕ್ಷತ್ರಿಯಾಣಾಂ ಪ್ರವಕ್ಷ್ಯಾಮಿ ಮಮ ಕರ್ಮಸು ತಿಷ್ಠತಾಂ ।
ಯಾನಿ ಕರ್ಮಾಣಿ ಕುರ್ವೀತ ಕ್ಷತ್ರಿಯೋ ಮಧ್ಯಸಂಸ್ಥಿತಃ ॥
ದಾನಶೂರಶ್ಚ ಕರ್ಮಜ್ಞೋ ಯಜ್ಞೇಷು ಕುಶಲಃ ಶುಚಿಃ ॥ ೨೭ ॥

ಮಮ ಕರ್ಮಸು ಮೇಧಾವೀ ಅಹಂಕಾರವಿವರ್ಜಿತಃ ।
ಅಲ್ಪಭಾಷೀ ಗುಣಜ್ಞಶ್ಚ ನಿತ್ಯಂ ಭಾಗವತಪ್ರಿಯಃ ॥ ೨೮ ॥

ಲಾಭಗಳಲ್ಲಿ ಉದಾಸೀನನೂ, ಭಿಕ್ಷಾಹಾರಿಯೂ, ಜಿತೇಂದ್ರಿಯನೂ, ನನ್ನ ಕರ್ಮಗಳಲ್ಲಿಯೇ ನಿರತನೂ, ಪೈಶುನ್ಯವಿಲ್ಲದವನೂ, ಶಾಸ್ತ್ರವನ್ನನುಸರಿಸುವವನೂ, ವೃದ್ಧನಂತೆಯೂ, ಶಿಶುವಿನಂತೆಯೂ ಇರದೆ ಮಧ್ಯಮಸ್ಥಿತಿಯಲ್ಲಿರುವವನೂ, ಏಕಚಿತ್ತನೂ ಆಗಿರಬೇಕು. ಇದೇ ಬ್ರಹ್ಮಕರ್ಮವು. ಯಜ್ಞಕರ್ಮವನ್ನು ಮಾಡಿ, ಧರ್ಮಾರ್ಥವಾಗಿ ಕೆರೆ ಕೊಳ ಮೊದಲಾದುವುಗಳನ್ನು ಮಾಡಿಸುವ ಇಂತಹ ಬ್ರಾಹ್ಮಣನು ನನ್ನನ್ನು ಸೇರುವನು.

೨೭–೨೯. ನನ್ನ ಕರ್ಮಗಳಲ್ಲಿರುವ ಕ್ಷತ್ರಿಯರು ಮಾಡಬೇಕಾದುದನ್ನು ಇನ್ನು ಹೇಳುತ್ತೇನೆ. ಕ್ಷತ್ರಿಯನು ಮಧ್ಯಸ್ಥನಾಗಿ ದಾನಶೂರನೂ, ಕರ್ಮಜ್ಞನೂ, ಯಜ್ಞಗಳಲ್ಲಿ ಕುಶಲನೂ, ಪರಿಶುದ್ಧನೂ, ನನ್ನ ಕರ್ಮಗಳಲ್ಲಿ ಮೇಧಾವಿಯೂ, ಅಹಂಕಾರವಿಲ್ಲದವನೂ, ಮಿತಭಾಷಿಯೂ, ಗುಣಜ್ಞನೂ, ಯಾವಾಗಲೂ ಭಗವದ್ಭಕ್ತರಲ್ಲಿ ಪ್ರೀತಿಯುಳ್ಳವನೂ, ಹೆಚ್ಚಾದ ವಿದ್ಯೆಯುಳ್ಳವನೂ

ಗುರುವಿದ್ಯೋಽನಸೂಯಶ್ಚ ನಿಂದ್ಯಕರ್ಮವಿವರ್ಜಿತಃ |
ಅಭ್ಯುತ್ಥಾನಾದಿಕುಶಲಃ ಪೈಶುನ್ಯೇನ ವಿವರ್ಜಿತಃ || ೨೯ ||

ಏತೈರ್ಗುಣೈಸ್ಸಮಾಯುಕ್ತೋ ಯೋ ಮಾಂ ವ್ರಜತಿ ಕ್ಷತ್ರಿಯಃ |
ಭಜತೇ ಮಮ ಯೋ ನಿತ್ಯಂ ಮಮ ಲೋಕಾಯ ಗಚ್ಛತಿ || ೩೦ ||

ವೈಶ್ಯಾನಾಂ ತು ಪ್ರವಕ್ಷ್ಯಾಮಿ ಮಮ ಕರ್ಮಸು ತಿಷ್ಠತಾಂ || ೩೧ ||

ಯಾನಿ ಕರ್ಮಾಣಿ ಕುರುತೇ ಮಮ ಭಕ್ತಿಪಥೇ ಸ್ಥಿತಃ || ೩೨ ||

ಏತೈರ್ಗುಣೈಃ ಸ್ವಧರ್ಮೇಣ ಲಾಭಾಲಾಭವಿವರ್ಜಿತಃ |
ಋತುಕಾಲಾಭಿಗಾಮೀ ಚ ಶಾಂತಾತ್ಮಾ ಮೋಹವರ್ಜಿತಃ ||
ಶುಚಿರ್ದಕ್ಷೋ ನಿರಾಹಾರೋ ಮಮಕರ್ಮರತಸ್ಸದಾ || ೩೩ ||

ಅಸೂಯೆಯಿಲ್ಲದವನೂ, ನಿಂದ್ಯವಾದ ಕೆಲಸಗಳನ್ನು ಮಾಡದಿರುವವನೂ, ಎಳಿಗೆಗೆಬರುವುದೇಮೊದಲಾದುದರಲ್ಲಿ ಚತುರನೂ, ಚಾಡಿಕೋರತನವೂ, ಕ್ರೌರ್ಯವೂ ಇಲ್ಲದವನೂ ಆಗಿರಬೇಕು.

೩೦. ಈ ಗುಣಗಳುಳ್ಳವನಾಗಿ ನಿತ್ಯವೂ ನನ್ನನ್ನು ಭಜಿಸುತ್ತ ಆಶ್ರಯಿಸುವ ಕ್ಷತ್ರಿಯನು ನನ್ನ ಲೋಕವನ್ನು ಸೇರುವನು.

೩೧. ಇನ್ನು ನನ್ನ ಕರ್ಮದಲ್ಲಿರುವ ವೈಶ್ಯರ ವಿಚಾರವನ್ನು ಹೇಳುತ್ತೇನೆ.

೩೨-೩೪. ನನ್ನ ಭಕ್ತಿಮಾರ್ಗದಲ್ಲಿದ್ದುಕೊಂಡು ತನ್ನ ಧರ್ಮದಲ್ಲಿ ಲಾಭನಷ್ಟಗಳಲ್ಲಿ ಸಮಬುದ್ಧಿಯುಳ್ಳವನೂ, ಋತುಕಾಲಾಭಿಗಾಮಿಯೂ, ಶಾಂತಾತ್ಮನೂ, ಮೋಹವಿಲ್ಲದವನೂ, ಪರಿಶುದ್ಧನೂ, ದಕ್ಷನೂ, ಆಹಾರವನ್ನು ತೆಗೆದುಕೊಳ್ಳದೆ ನನ್ನ ಕರ್ಮಗಳನ್ನು ಆಸಕ್ತಿಯಿಂದ ಮಾಡುವವನೂ, ಗುರುಪೂಜಕನೂ,

ಗುರುಸಂಪೂಜಕೋ ನಿತ್ಯಂ ಯುಕ್ತೋ ಭಕ್ತಾನುವತ್ಸಲಃ ।
ವೈಶ್ಯೋಽಪ್ಯೇವಂ ಸುಸಂಯುಕ್ತೋ ಯಸ್ತು ಕರ್ಮಾಣಿ ಕಾರಯೇತ್ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ || ೩೪ ||

ಅಥ ಶೂದ್ರಸ್ಯ ವಕ್ಷ್ಯಾಮಿ ಕರ್ಮಾಣಿ ಶೃಣು ಮಾಧವಿ || ೩೫ ||

ಕರ್ಮಾಣಿ ಯಾನಿ ಕೃತ್ವಾ ಹ ಶೂದ್ರೋ ಮುಹ್ಯಂ ವ್ಯವಸ್ಥಿತಃ || ೩೬ ||

ದಂಪತೀ ಮಮ ಭಕ್ತೌ ಯೌ ಮಮ ಕರ್ಮಪರಾಯಣೌ ।
ಉಭೌ ಭಾಗವತೇ ಭಕ್ತೌ ಮದ್ಭಕ್ತೌ ಕರ್ಮನಿಷ್ಠಿತೌ ||
ದೇಶಕಾಲೌ ಚ ಜಾನಾತಿ ರಜಸಾ ತಮಸೋಜ್ಝಿತೌ || ೩೭ ||

ನಿರಹಂಕಾರಶುದ್ಧಾತ್ಮಾ ಅತಿಥೇಯೋ ವಿನೀತವಾನ್ ।
ಶ್ರದ್ಧಧಾನೋಽತಿಪೂತಾತ್ಮಾ ಲೋಭಮೋಹವಿವರ್ಜಿತಃ ।
ನಮಸ್ಕಾರಪ್ರಿಯೋ ನಿತ್ಯಂ ಮಮ ಚಿಂತಾವ್ಯವಸ್ಥಿತಃ || ೩೮ ||

ಶೂದ್ರಃ ಕರ್ಮಾಣಿ ಮೇ ದೇವಿ ಯ ಏವಂ ಸಮಾಚರೇತ್ ।
ತ್ಯಕ್ತ್ವಾ ಋಷಿಸಹಸ್ರಾಣಿ ಶೂದ್ರಮೇವ ಭಜಾಮ್ಯಹಂ || ೩೯ ||

ಯಾವಾಗಲೂ ಭಕ್ತವಾತ್ಸಲ್ಯವುಳ್ಳವನೂ, ಆದ ಯಾವ ವೈಶ್ಯನು ನನ್ನ ಪೂಜಾ ಕರ್ಮಗಳನ್ನು ಮಾಡುವನೋ ಅವನಿಗೆ ನಾನೂ, ನನಗೆ ಅವನೂ ಇಲ್ಲದಿರುವುದಿಲ್ಲ.

೩೫. ಮಾಧವಿ, ಇನ್ನು ಶೂದ್ರನ ಕರ್ಮಗಳನ್ನು ಹೇಳುತ್ತೇನೆ ಕೇಳು.

೩೬-೩೯. ನನ್ನ ಭಕ್ತರಾದ ಶೂದ್ರದಂಪತಿಗಳು ಯಾರು ಯಾವಾಗಲೂ ನನ್ನ ಕರ್ಮಾಸಕ್ತರೂ, ಭಾಗವತಭಕ್ತರೂ, ದೇಶಕಾಲಗಳನ್ನರಿತವರೂ, ರಜೋಗುಣ ತಮೋಗುಣಗಳನ್ನು ಬಿಟ್ಟವರೂ, ನಿರಹಂಕಾರರೂ, ಶುದ್ಧಾತ್ಮರೂ, ಅತಿಥಿಸತ್ಕಾರಾಸಕ್ತರೂ, ವಿನಯವುಳ್ಳವರೂ, ನಂಬಿಕೆಯುಳ್ಳವರೂ, ಅತಿ ಪರಿಶುದ್ಧಾತ್ಮರೂ, ಅತ್ಯಾಸೆಮೋಹಗಳಿಲ್ಲದವರೂ, ಯಾವಾಗಲೂ ನನ್ನನ್ನೇ ಧ್ಯಾನಿಸುತ್ತ ನಮಸ್ಕಾರಮಾಡುವುದರಲ್ಲಿ ಪ್ರೀತಿಯುಳ್ಳವರೂ, ಆಗಿರುವರೋ ಅಂತಹವರನ್ನು, ಸಾವಿರಾರು ಜನ ಋಷಿಗಳನ್ನಾದರೂ ಬಿಟ್ಟು ಪರಿಗ್ರಹಿಸುವೆನು.

ಚಾತುರ್ವರ್ಣ್ಯಸ್ಯ ಕರ್ಮಾಣಿ ಯತ್ತ್ವಯಾ ಪರಿಪೃಚ್ಛಿತಂ ।
ಏವಂ ಕರ್ಮಗುಣಾಶ್ಚೈವ ಯೇ ತು ಭಕ್ತ್ಯಾ ವ್ಯವಸ್ಥಿತಾಃ ॥ ೪೦ ॥

ಸರ್ವವರ್ಣಾಶ್ಚ ಮಾಂ ದೇವಿ ಅಪರಂ ಕ್ಷತ್ರಿಯೇ ಶೃಣು ।
ಯೇನ ತತ್ಪ್ರಾಪ್ಯತೇ ಯೋಗಂ ತಚ್ಛೃಣುಷ್ವ ವಸುಂಧರೇ ॥ ೪೧ ॥

ತ್ಯಕ್ತ್ವಾ ಲಾಭಮಲಾಭಂ ಚ ಮೋಹಂ ಕಾಮಂ ಚ ವರ್ಜಯೇತ್ ।
ನ ಶೀತೇ ಚ ನ ಚೋಷ್ಣೇ ಚ ಲಬ್ಧಾಲಬ್ಧಂ ವಿಚಿಂತಯೇತ್ ॥ ೪೨ ॥

ನ ತಿಕ್ತೇನಾತಿಕಟುನಾ ಮಧುರಾಮ್ಲೈರ್ನ ಲಾವಣೈಃ ।
ನ ಕಷಾಯೈಃ ಸ್ಪೃಹಾ ಯಸ್ಯ ಪ್ರಾಪ್ನುಯಾತ್ಸಿದ್ಧಿಮುತ್ತಮಾಂ ॥ ೪೩ ॥

ಭಾರ್ಯಾ ಪುತ್ರಃ ಪಿತಾ ಮಾತಾ ಉಪಭೋಗೋರ್ಥಸಂಯುತಂ ।
ಯ ಏತಾನ್ ಹಿ ಪರಿತ್ಯಜ್ಯ ಮಮ ಕರ್ಮರತಸ್ಸದಾ ॥ ೪೪ ॥

---

೪೦. ಭಕ್ತಿಯಿಂದಿರುವ ನಾಲ್ಕು ವರ್ಣದವರ ಕರ್ಮಗಳನ್ನು ನೀನು ಕೇಳಿದೆಯಷ್ಟೆ. ಈಗ ನಾನು ಹೇಳಿರುವವೇ ಅವರ ಕರ್ಮಗುಣಗಳು.

೪೧. ದೇವಿ, ವಸುಂಧರೇ, ಸರ್ವವರ್ಣದವರೂ ಯಾವುದರಿಂದ ನನ್ನನ್ನು ಪಡೆಯುವರೋ ಆ ಬೇರೊಂದು ಯೋಗವನ್ನು ಕೇಳು.

೪೨–೪೩. ಲಾಭಾಲಾಭಗಳನ್ನು ಗಣಿಸದೆ, ಮೋಹಕಾಮಗಳನ್ನು ತ್ಯಜಿಸಿ, ಶೀತೋಷ್ಣಗಳ ಕಷ್ಟಸುಖಗಳನ್ನು ಚಿಂತಿಸದೆ, ಸಿಹಿ, ಕಹಿ, ಅತಿಕಾರ, ಹುಳಿ, ಉಪ್ಪು, ಒಗರು ಎಂಬ ಷಡ್ರಸಗಳಲ್ಲಿ ಆಸೆಯನ್ನು ಬಿಟ್ಟವನು ಉತ್ತಮವಾದ ಸಿದ್ಧಿಯನ್ನು ಪಡೆಯುವನು.

೪೪-೫೩. ಹೆಂಡತಿ, ಮಗ, ತಂದೆ, ತಾಯಿ, ಉಪಭೋಗ, ಐಶ್ವರ್ಯ ಇವುಗಳನ್ನು ಪರಿತ್ಯಜಿಸಿ, ಯಾವಾಗಲೂ ನನ್ನ(ಪೂಜಾ)ಕರ್ಮದಲ್ಲಿ ಆಸಕ್ತನಾಗಿ

ಧೃತಿಜ್ಞಃ ಕುಶಲಶ್ಚೈವ ಶ್ರದ್ಧಧಾನೋ ಧೃತವ್ರತಃ ।
ತತ್ಪರೋ ನಿತ್ಯಮುದ್ಯುಕ್ತಃ ಅನ್ಯಕಾರ್ಯಜುಗುಪ್ಸಕಃ ॥ ೪೫ ॥

ಬಾಲೇ ವಯಸಿ ಕಲ್ಪಶ್ಚ ಅಲ್ಪಭೋಗೀ ಕುಲಾನ್ವಿತಃ ।
ಕಾರುಣ್ಯಸ್ಸರ್ವಸತ್ವಾನಾಂ ಪ್ರತ್ಯುತ್ಥಾಯೀ ಮಹಾತ್ಮನಃ ॥ ೪೬ ॥

ಕಾಲೇ ಮೌನಕ್ರಿಯಾಂ ಕುರ್ಯಾದ್ಯಾವತ್ತತ್ಕರ್ಮ ಕಾರಯೇತ್ ।
ತ್ರಿಕಾಲಂ ಚ ದಿಶೋಭಾಗಂ ಸದಾ ಕರ್ಮಪಥಿ ಸ್ಥಿತಃ ॥ ೪೭ ॥

ಉಪಪನ್ನಾನು ಭುಂಜಾನಃ ಕರ್ಮಣ್ಯಂ+ ಭೋಜನಾನಿ ಚ ॥ ೪೮ ॥

ಅನುಷ್ಠಾನಪರಶ್ಚೈವ ಮಮ ಪಾರ್ಶ್ವೇ ಮನಶ್ಚರಃ ।
ಕಾಲೇ ಮೂತ್ರಪುರೀಷಾಣಿ ವಿಸೃಜ್ಯ ಸ್ನಾನವತ್ಸಲಃ ॥ ೪೯ ॥

ಪುಷ್ಪೇ ಗಂಧೇ ಚ ಧೂಪೇ ಚ ಮತ್ಕರ್ಮಣಿ ಸದಾ ರತಃ ।
ಕದಾಚಿತ್ಕಂದಮೂಲಾನಿ ಫಲಾನಿ ಚ ಕದಾಚನ ॥ ೫೦ ॥

ಧೀರನೂ, ಕುಶಲನೂ, ನಂಬಿಕೆಯುಳ್ಳವನೂ, ವ್ರತಸ್ಥನೂ, ನಿತ್ಯವೂ ನನ್ನಲ್ಲಿ ಅಪೇಕ್ಷೆಯೂ ಉದ್ಯೋಗವೂ ಉಳ್ಳವನಾಗಿ ಬೇರೆಯ ಕಾರ್ಯದಲ್ಲಿ ಜುಗುಪ್ಸೆಯುಳ್ಳವನೂ, ಅಲ್ಪಸುಖಿಯೂ, ಕುಲೀನನೂ, ಸರ್ವಪ್ರಾಣಿಗಳಲ್ಲೂ ದಯೆಯುಳ್ಳವನೂ, ಮಹಾತ್ಮರು ಬಂದರೆ ಎದಿರುಗೊಂಡೇಳುವವನೂ, ಹೆಜ್ಜಾದ ಸೈರಣೆಯುಳ್ಳವನೂ, ತ್ರಿಕಾಲದಲ್ಲೂ ಕರ್ಮವನ್ನು ಆಚರಿಸುತ್ತಿರುವಾಗ ಮೌನವಾಗಿರುವವನೂ, ಕರ್ಮಾನುಸಾರವಾಗಿ ಒದಗಿದ ಫಲವನ್ನೂ, ಭೋಜನವನ್ನೂ ಅನುಭವಿಸುವವನೂ, ಧರ್ಮಾನುಷ್ಠಾನನಿರತನೂ, ನನ್ನಲ್ಲೇ (ಬರುವ) ಮನವುಳ್ಳವನೂ, ಉಚಿತವಾದ ಕಾಲದಲ್ಲಿ ಮಲಮೂತ್ರಗಳನ್ನು ವಿಸರ್ಜಿಸಿ, ಸ್ನಾನಮಾಡುವುದರಲ್ಲಿ ಇಷ್ಟವುಳ್ಳವನೂ, ಗಂಧಪುಷ್ಪಧೂಪಾದಿಗಳಿಂದ ನನ್ನ ಪೂಜೆಯಲ್ಲಿ ನಿರತನೂ, ಕೆಲವುವೇಳೆ ಗೆಡ್ಡೆಗೆಣಸುಗಳನ್ನೂ, ಕೆಲವುವೇಳೆ ಹಣ್ಣುಕಾಯಿಗಳನ್ನೂ

+ ಕರ್ಮಣ್ಯ = ಕರ್ಮಾರ್ಹವಾದುದು.

ಪಯಸಾ ಯಾವಕೇನಾಪಿ ಕದಾಚಿದ್ವಾಯು ಭಕ್ಷಣಃ ।
ಕದಾಚಿತ್ ಷಷ್ಠಕಾಲೇನ ಕ್ವಚಿದ್ದ್ವ್ಯಷ್ಟಮಹಾಫಲಃ ॥ ೫೧ ॥

ಕದಾಚಿತ್ತು ಚತುರ್ಥೇನ ಕದಾಚಿತ್ಫಲಮೇವ ಚ ।
ಕದಾಚಿದ್ದಶಮೇ ಭುಂಜೇತ್ಪಕ್ಷೇ ಮಾಸೇ ವಸುಂಧರೇ ॥ ೫೨ ॥

ಯ ಏತತ್ಸಪ್ತಜನ್ಮಾನಿ ಮಮ ಕರ್ಮಾಣಿ ಕುರ್ವತೇ ।
ಯೋಗಿನಸ್ತಾನ್ಪ್ರಪಶ್ಯಂತಿ ಪೂರ್ವೋಕ್ತಾನ್ ಕರ್ಮಸಂಸ್ಥಿತಾನ್ ॥ ೫೩ ॥

ಇತಿ ಶ್ರೀ ವರಾಹಪುರಾಣೇ ವಿವಿಧಕರ್ಮೋತ್ಪತ್ತಿ
ಪಂಚದಶಾಧಿಕಶತತಮೋಧ್ಯಾಯಃ

ಮತ್ತೆ ಕೆಲವುವೇಳೆ ಹಾಲನ್ನೂ, ಅಲಸಂದೆಯನ್ನೂ, ಇನ್ನೂ ಕೆಲವುವೇಳೆ ವಾಯು ವನ್ನೂ ಭುಜಿಸುವವನೂ, ಕೆಲವುವೇಳೆ ನಾಲ್ಕನೆಯದಿನವೋ, ಆರನೆಯ ದಿನವೋ ಇನ್ನು ಕೆಲವುವೇಳೆ ಹತ್ತುದಿನಗಳಿಗೊಂದುಸಾರಿಯೋ, ಪಕ್ಷಕ್ಕೊಂದುಸಾರಿಯೋ, ತಿಂಗಳಿಗೊಂದುಸಾರಿಯೋ ಫಲವನ್ನುಮಾತ್ರ ಆಹಾರವಾಗಿ ತೆಗೆದುಕೊಳ್ಳುವವನೂ ಆಗಿ, ಏಳು ಜನ್ಮಗಳಲ್ಲಿ ನನ್ನನ್ನು ಆರಾಧಿಸುವವನನ್ನೂ ಹಿಂದೆ ಹೇಳಿದ ಕರ್ಮನಿಷ್ಠರನ್ನೂ ಯೋಗಿಗಳು ಸಂದರ್ಶಿಸುವರು. ಎಂದರೆ ಅವರು ಮುಕ್ತರಾಗಿ ನನ್ನಂತೆ ಯೋಗಿಗೋಚರರಾಗುವರು.

ಅಧ್ಯಾಯದ ಸಾರಾಂಶ:—

ಭೂದೇವಿಯ ಪ್ರಶ್ನೆಗಳನ್ನು ಲಾಲಿಸಿದ ಶ್ರೀವರಾಹದೇವನು—ಭಕ್ತರ ಸಾಮಾನ್ಯಧರ್ಮಗಳನ್ನೂ, ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಣದವರಿಗೂ ಅವಶ್ಯವಾದ ವಿಶೇಷನಿಯಮಗಳನ್ನೂ, ಸರ್ವೋಪಯುಕ್ತವಾದ ಯೋಗ ವಿಧಾನವನ್ನೂ ಫಲವನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಹದಿನೈದನೆಯ ಅಧ್ಯಾಯ.

|| ಶ್ರೀಃ ||

-x-

ಷೋಡಶಾಧಿಕಶತತಮೋಧ್ಯಾಯಃ

ಅಥ ಸುಖದುಃಖನಿರೂಪಣಂ

|| ಶ್ರೀವರಾಹ ಉವಾಚ ||

ಮಯಾ ಪ್ರೋಕ್ತವಿಧಾನೇನ ಯಸ್ತು ಕರ್ಮಾಣಿ ಕಾರಯೇತ್ ।
ತಚ್ಛೃಣುಷ್ವ ಮಹಾಭಾಗೇ ಯೇನ ಸಾಫಲ್ಯಮಾಪ್ನುಯಾತ್ || ೧ ||

ಏಕಚಿತ್ತಸ್ಸಮಾಸ್ಥಾಯ ಅಹಂಕಾರವಿವರ್ಜಿತಃ |
ಮಚ್ಚಿತ್ತಸಂಹತೋ ನಿತ್ಯಂ ಕ್ಷಾಂತೋ ದಾಂತೋ ಜಿತೇಂದ್ರಿಯಃ || ೨ ||

ಫಲಮೂಲಾನಿ ಶಾಕಾನಿ ದ್ವಾದಶ್ಯಾಂ ವಾ ಕದಾಚನ ।
ಪಯೋವ್ರತಂ ಚ ತತ್ಕಾಲೇ ಪುನರೇವ ನಿರಾಮಿಷಃ ॥
ಷಷ್ಠ್ಯಷ್ಟಮೀ ಹ್ಯಮಾವಾಸ್ಯಾ ತೂಭಯತ್ರ ಚತುರ್ದಶೀ || ೩ ||

ನೂರಹದಿನಾರನೆಯ ಅಧ್ಯಾಯ

ಸುಖದುಃಖನಿರೂಪಣೆ

೧. ಶ್ರೀವರಾಹ—ಮಹಾಭಾಗ್ಯೇ, ನಾನು ಹೇಳಿದ ರೀತಿಯಿಂದ ಕರ್ಮಗಳನ್ನು ಮಾಡುವವನು ಹೇಗೆ ಫಲವನ್ನು ಪಡೆಯುವನೆಂಬುದನ್ನು ಕೇಳು.

೩-೫. ಪ್ರಿಯೇ, ಏಕಚಿತ್ತನಾಗಿ ಮನಸ್ಸನ್ನು ಸಮಾಧಾನದಲ್ಲಿಟ್ಟು ಕೊಂಡು, ಅಹಂಕಾರವಿಲ್ಲದವನೂ, ಜಿತೇಂದ್ರಿಯನೂ, ಸಹನಶೀಲನೂ ಆಗಿ ಯಾವಾಗಲೂ ನನ್ನಲ್ಲೇ ಮನಸ್ಸನ್ನಿಟ್ಟು, ಮಾಂಸವನ್ನು ತ್ಯಜಿಸಿ, ದ್ವಾದಶಿಯ ದಿನವಾಗಲೀ, ಬೇರೆದಿನವಾಗಲಿ ಹಣ್ಣುಕಾಯಿಗೆಡ್ಡೆಗೆಣಸುಕಾಯಿಪಲ್ಯಗಳನ್ನೂ, ಹಾಲನ್ನೂ, ಆಹಾರವಾಗಿ ತೆಗೆದುಕೊಳ್ಳುತ್ತ ಷಷ್ಠಿ, ಅಷ್ಟಮಿ, ದ್ವಾದಶಿ,

ನ್ಮೈಥುನಂ ನಾಭಿಸೇವೇತ ದ್ವಾದಶ್ಯಾಂ ಚ ತಥಾ ಪ್ರಿಯೇ ॥ ೪ ॥

ಏವಂ ಯೋಗವಿಧಾನೇನ ಕರ್ಮ ಕುರ್ಯಾದ್ದೃಢವ್ರತಃ ।
ಪೂತಾತ್ಮಾ ಧರ್ಮಸಂಯುಕ್ತೋ ವಿಷ್ಣುಲೋಕಂ ತು ಗಚ್ಛತಿ ॥ ೫ ॥

ನ ಗ್ಲಾನಿರ್ನ ಜರಾ ಯಸ್ಯ ನ ಮೋಹೋ ರೋಗ ಏವ ಚ ।
*ಭುಜಾಷ್ಟಾರ್ಥಂಚ ಜಾಯಂತೇ ಧನ್ವೀ ಖಡ್ಗೀ ಶರೀ ಗದೀ ॥ ೬ ॥

ತೇಷಾಂ ವ್ಯುಷ್ಟಿಂ ಪ್ರವಕ್ಷ್ಯಾಮಿ ಮಮ ಕರ್ಮಸಮುತ್ಥಿತಾಂ ॥ ೭ ॥

ಷಷ್ಟಿವರ್ಷಸಹಸ್ರಾಣಿ ಷಷ್ಟಿವರ್ಷಶತಾನಿ ಚ ।
ಮಮಾರ್ಚನವಿಧಿಂ ಕೃತ್ವಾ ಮಮ ಲೋಕೇ ಮಹೀಯತೇ ॥ ೮ ॥

ದುಃಖಮೇವಂ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಉಚಿತೇನೋಪಚಾರೇಣ ‡ದುಃಖಂಮೋಕ್ಷವಿನಾಶನಂ ॥ ೯ ॥

ಚತುರ್ದಶಿ, ಅಮಾವಾಸ್ಯೆ ಇವುಗಳಲ್ಲಿ ಸ್ತ್ರೀಸಂಗಮಾಡದೆ ದೃಢವ್ರತನಾಗಿ ಹೀಗೆ ಯೋಗವಿಧಾನದಿಂದ ಕರ್ಮವನ್ನು ಮಾಡುವ ಧರ್ಮಯುತನಾದ ಪವಿತ್ರಾತ್ಮನು ವಿಷ್ಣುಲೋಕವನ್ನು ಸೇರುವನು.

೬. ವಿಷ್ಣುಲೋಕದಲ್ಲಿ ಗ್ಲಾನಿಯಾಗಲಿ, ಮುಪ್ಪಾಗಲಿ, ಮೋಹವಾಗಲಿ, ರೋಗವಾಗಲಿ ಇರುವುದಿಲ್ಲ. ನಾಲ್ಕು ತೋಳುಗಳುಂಟಾಗುವುವು. ಬಿಲ್ಲು ಬಾಣ ಕತ್ತಿಗದೆಗಳನ್ನು ಧರಿಸುವನು.

೭. ಅವರಿಗೆ ನನ್ನ ಪೂಜಾದಿಕರ್ಮಗಳಿಂದುಂಟಾಗುವ ಫಲಸಮೃದ್ಧಿಯನ್ನು ಹೇಳುವೆನು.

೮. ಅರವತ್ತಾರುಸಾವಿರವರ್ಷಕಾಲ ನನ್ನ ಪೂಜೆಯನ್ನು ಮಾಡಿ, ನನ್ನ ಲೋಕದಲ್ಲಿ ಮಹಿಮೆಯುಳ್ಳವರಾಗುವರು.

೯. ವಸುಂಧರೆ, ಉಚಿತವಾದ ನಿನ್ನ ಉಪಚಾರಗಳಿಂದ ಸಂತುಷ್ಟನಾದ ನಾನು ಹೀಗೆಯೇ ಮೋಕ್ಷವನ್ನು ತಪ್ಪಿಸುವ ಇಹಲೋಕದುಃಖವನ್ನು ಇನ್ನೂ ಹೇಳುತ್ತೇನೆ ಕೇಳು.

---

* ಭುಜಾಷ್ಟಾದಶ. ‡ ದುಃಖಮೋಕ್ಷ.

ಅಹಂಕಾರಾವೃತೋ ನಿತ್ಯಂ ನರೋ ಮೋಹೇನ ಚಾವೃತಃ ।
ಯೋ ಮಾಂ ನೈವ ಪ್ರಪದ್ಯೇತ ತತೋ ದುಃಖತರಂ ನು ಕಿಂ ॥ ೧೦ ॥

ಸರ್ವಾಶೀ ಸರ್ವವಿಕ್ರೇತಾ ನಮಸ್ಕಾರವಿವರ್ಜಿತಃ ।
ಯೋ ನ ಮಾಂ ಪ್ರತಿಪದ್ಯೇತ ತತೋ ದುಃಖತರಂ ನು ಕಿಂ ॥ ೧೧ ॥

ಪ್ರಾಪ್ತಕಾಲೇ ವೈಶ್ವದೇವೇ ದೃಷ್ಟ್ವಾ ಚಾತಿಥಿಮಾಗತಂ ।
ಅದತ್ವಾ ತಸ್ಯ ಯೋ ಭುಂಕ್ತೇ ತತೋ ದುಖತರಂ ನು ಕಿಂ ॥ ೧೨ ॥

ಸರ್ವಾನ್ನಾನಿ ತು ಸಿದ್ಧಾನಿ ಪಾಕಭೇದಂ ಕರೋತಿ ಯಃ ।
ತಸ್ಯ ದೇವಾನ ಚಾಶ್ನಂತಿ ತತೋ ದುಃಖತರಂ ನು ಕಿಂ ॥ ೧೩ ॥

ಅಸಂತುಷ್ಟಸ್ತು ವೈಷಮ್ಯೇ ಪರದಾರಾಭಿಮರ್ಶಕಃ ।
ಪರೋಪತಾಪೀ ಮಂದಾತ್ಮಾ ತತೋ ದುಃಖತರಂ ನು ಕಿಂ ॥ ೧೪ ॥

---

೧೦. ಮನುಷ್ಯರು ಯಾವಾಗಲೂ ಮೋಹಾಹಂಕಾರಗಳಿಂದಾವೃತರಾಗಿ ನನ್ನನ್ನು ಸೇರದೆಯೇ ಇದ್ದರೆ ಅವರಿಗೆ ಅದಕ್ಕಿಂತ ಹೆಚ್ಚಾದ ದುಃಖವಾವುದು !

೧೧-೧೩. ಎಲ್ಲವನ್ನೂ ತಿನ್ನುವವನೂ, ಎಲ್ಲವನ್ನೂ ಮಾರುವವನೂ ಆಗಿ, ನನಗೆ ನಮಸ್ಕಾರವನ್ನೂ ಮಾಡದೆಯೂ, ವೈಶ್ವದೇವಕಾಲದಲ್ಲಿ ಬಂದ ಅತಿಥಿಯನ್ನು ನೋಡಿಯೂ ಅವನಿಗೆ ಭೋಜನಮಾಡಿಸದೆ ತಾನು ಊಟ ಮಾಡಿಯೂ, ಅನ್ನವೇ ಮೊದಲಾದ ಯಾವ ಆಹಾರಪದಾರ್ಥವನ್ನೇ ಆಗಲಿ ತನಗೂ ಇತರರಿಗೂ ಬೇರೆಬೇರೆಯಾಗಿ ಅಡಿಗೆಮಾಡಿಸಿ ದೇವತೆಗಳು ಭುಜಿಸದಂತೆ ಮಾಡಿಯೂ ನನ್ನನ್ನು ಸೇರದಿದ್ದರೆ ಅದಕ್ಕಿಂತ ಮಿಗಿಲಾದ ದುಃಖವಾವುದಿದೆ !

೧೪. ತನ್ನ ಹೆಂಡತಿಯು ಬೇರೆಯವರಷ್ಟು ಚೆನ್ನಾಗಿಲ್ಲವೆಂದು ಅತೃಪ್ತಿಯಿಂದ ಪರಸ್ತ್ರೀಸಂಗಮಾಡಿ, ಪರರನ್ನು ಸಂತಾಪಗೊಳಿಸುತ್ತ ಮಂದಾತ್ಮನಾಗಿರುವುದಕ್ಕಿಂತ ದುಃಖತರವಾದುದಾವುದು !

ಅಕೃತ್ವಾ ಪುಷ್ಕಲಂ ಕರ್ಮ ಗೃಹೇ ಸಂವಸತೇ ನರಃ ।
ಮೃತ್ಯುಕಾಲವಶಂ ಪ್ರಾಪ್ತಃ ತತೋ ದುಃಖತರಂ ನು ಕಿಂ ॥ ೧೫ ॥

ಹಸ್ತ್ಯಶ್ವರಥಯಾನಾನಿ ಗಮ್ಯಮಾನಾನಿ ಪಶ್ಯತಿ ।
ಧಾವತ್ಯಸ್ಯಾಗ್ರತಃ ಪೃಷ್ಠೇ ತತೋ ದುಃಖತರಂ ನು ಕಿಂ ॥ ೧೬ ॥

ಅಶ್ನಂತಿ ಪಿಶಿತಂ ಕೇಚಿತ್ ಕೇಚಿಚ್ಛಾಲಿಸಮನ್ವಿತಂ ।
ಶುಷ್ಕಾನ್ನಂ ಕೇಚಿದಶ್ನಂತಿ ತತೋ ದುಃಖತರಂ ನು ಕಿಂ ॥ ೧೭ ॥

ವರವಸ್ತ್ರಾವೃತಾಂ ಶಯ್ಯಾಂ ಸಮಾಸೇವತಿ ಭೂಷಿತಾಂ ।
ಕೇಚಿತ್ತೃಣೇಷು ಶೇರಂತೇ ತತೋ ದುಃಖತರಂ ನು ಕಿಂ ॥ ೧೮ ॥

ಸುರೂಪೋ ದೃಶ್ಯತೇ ಕಶ್ಚಿತ್ ಪುರುಷಶ್ಚಾತ್ಮಕರ್ಮಭಿಃ ।
ಕೇಚಿದ್ವಿರೂಪಾ ದೃಶ್ಯಂತೇ ತತೋ ದುಃಖತರಂ ನು ಕಿಂ ॥ ೧೯ ॥

---

೧೫. ಬೇಕಾದಷ್ಟು ಸತ್ಕರ್ಮಗಳನ್ನು ಮಾಡದೆ ಮನೆಯಲ್ಲೇ ಇದ್ದು ಮೃತ್ಯುಕಾಲವಶನಾಗುವುದಕ್ಕಿಂತ ದುಃಖತರವಾದುದಾವುದು !

೧೬. ಆನೆ, ಕುದುರೆ, ಬಂಡಿ, ಪಲ್ಲಕ್ಕಿ ಮೊದಲಾದ ಹೋಗುತ್ತಿರುವ ಯಾನಗಳನ್ನು ನೋಡುತ್ತ (ಅವುಗಳಲ್ಲಿ ಕುಳಿತುಕೊಳ್ಳುವ ಯೋಗ್ಯತೆಯಿಲ್ಲದೆ) ಅವುಗಳ ಮುಂದೆಯೋ ಹಿಂದೆಯೋ ಓಡುವುದಕ್ಕಿಂತ ಹೆಚ್ಚಾದ ದುಃಖವಾವುದು !

೧೭. ಕೆಲವರು ಶಾಲ್ಯನ್ನದೊಡನೆ ಮಾಂಸವನ್ನು ತಿನ್ನುವರು. ಮತ್ತೆ ಕೆಲವರು ಶುಷ್ಕಾನ್ನವನ್ನು ತಿನ್ನುವರು. ಅದಕ್ಕಿಂತ ದುಃಖತರವಾವುದು !

೧೮. ಉತ್ತಮವಾದ ವಸ್ತ್ರಗಳಿಂದ ಕೂಡಿ ಅಲಂಕೃತವಾದ ಹಾಸಿಗೆಯಲ್ಲಿ ಕೆಲವರು ಮಲಗುವರು. ಮತ್ತೆಕೆಲವರು ಹುಲ್ಲಿನಮೇಲೆ ಮಲಗುವರು. ಅದಕ್ಕಿಂತ ದುಃಖತರವಾವುದು !

೧೯. ತಮ್ಮ ಕರ್ಮಗಳಿಂದ ಕೆಲವರು ಸುರೂಪಿಗಳಾಗಿಯೂ, ಕೆಲವರು ಕುರೂಪಿಗಳಾಗಿಯೂ ಆಗಿ ಕಾಣುವರು. ಅದಕ್ಕಿಂತ ದುಃಖತರವಾವುದು !

ವಿದ್ವಾಂಸ್ಕೃತೀ ಗುಣಜ್ಞಾಶ್ಚ ಸರ್ವಶಾಸ್ತ್ರವಿಶಾರದಃ ।
ಕೇಚಿನ್ಮೂಕಾಶ್ಚ ದೃಶ್ಯಂತೇ ತತೋ ದುಃಖತರಂ ನು ಕಿಂ ॥ ೨೦ ॥

ವಿದ್ಯಮಾನೇ ಧನೇ ಕೇಚಿತ್ಕೃಪಣಾ ಭೋಗವರ್ಜಿತಾಃ ।
ದರಿದ್ರೋ ಜಾಯತೇ ದಾತಾ ತತೋ ದುಃಖತರಂ ನು ಕಿಂ ॥ ೨೧ ॥

ದ್ವಿಭಾರ್ಯಃ ಪುರುಷೋ ಯಸ್ತು ತಯೋರೇಕಾಂ ಪ್ರಶಂಸತಿ ।
ಏಕಾ ತು ದುರ್ಭಗಾ ತತ್ರ ತತೋ ದುಃಖತರಂ ನು ಕಿಂ ॥ ೨೨ ॥

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ತ್ರಯೋ ವರ್ಣಾಃ ಸುಮಧ್ಯಮೇ ।
ಪಾಪಕರ್ಮರತಾ ಹ್ಯಾಸನ್ ತತೋ ದುಃಖತರಂ ನು ಕಿಂ ॥ ೨೩ ॥

ಲಬ್ಧ್ವಾ ತು ಮಾನುಷೀಂ ಸಂಜ್ಞಾಂ ಪಂಚಭೂತಸಮನ್ವಿತಾಂ ।
ಮಾಮೇವ ನ ಪ್ರಪದ್ಯಂತೇ ತತೋ ದುಃಖತರಂ ನು ಕಿಂ ॥ ೨೪ ॥

---

೨೦. ಕೆಲವರು ವಿದ್ವಾಂಸರೂ, ಕುಶಲರೂ, ಗುಣಜ್ಞರೂ, ಸರ್ವಶಾಸ್ತ್ರ ವಿಶಾರದರೂ ಆಗಿರುವರು. ಮತ್ತೆ ಕೆಲವರು ಮೂಗರಾಗಿರುವರು. ಅದಕ್ಕಿಂತ ದುಃಖತರವಾವುದು!

೨೧. ಐಶ್ವರ್ಯವಿದ್ದರೂ ಕೆಲವರು ಲೋಭಿಗಳೂ, ಸುಖಪಡದವರೂ ಆಗಿರುವರು. ದಾತೃವು ದರಿದ್ರನಾಗಿರುವನು. ಅದಕ್ಕಿಂತ ದುಃಖತರವಾವುದು!

೨೨. ಇಬ್ಬರು ಹೆಂಡಿರುಳ್ಳವನು ಅವರಲ್ಲೊಬ್ಬಳನ್ನು ಪ್ರೀತಿಸಿ ಹೊಗಳುವನು. ಮತ್ತೊಬ್ಬಳು ದೌರ್ಭಾಗ್ಯವುಳ್ಳವಳಾಗಿರುವಳು. ಅದಕ್ಕಿಂತಲೂ ದುಃಖತರವಾವುದು!

೨೩. ಸುಮಧ್ಯಮೇ, ಬ್ರಾಹ್ಮಣಕ್ಷತ್ರಿಯ ವೈಶ್ಯರೆಂಬ ಮೂರು ವರ್ಣದವರೂ ಪಾಪಕರ್ಮದಲ್ಲಿ ಆಸಕ್ತರಾಗಿದ್ದರೆ ಅದಕ್ಕಿಂತ ದುಃಖತರವಾವುದು!

೨೪. ಪಂಚಭೂತಾತ್ಮಕವಾದ ಮನುಷ್ಯಜನ್ಮವನ್ನು ಪಡೆದೂ ನನ್ನನ್ನೇ ಆಶ್ರಯಿಸದಿರುವುದಕ್ಕಿಂತ ದುಃಖತರವಾವುದು!

ಏತತ್ತೇ ಕಥಿತಂ ಭದ್ರೇ ದುಃಖಕರ್ಮವಿನಿಶ್ಚಯಂ ।
ಸರ್ವಭೂತಾಹಿತಂ ಪಾಪಂ ಯತ್ತ್ವಯಾ ಪರಿಪೃಚ್ಛಿತಂ ॥ ೨೫ ॥

ಯಚ್ಚ ಮಾಂ ಪೃಚ್ಛಸೇ ಭದ್ರೇ ಶುಭಂ ಕೀದೃಶಮುಚ್ಯತೇ ।
ತಚ್ಛೃಣುಷ್ವಾನವದ್ಯಾಂಗಿ ಮಮ ಕರ್ಮವಿನಿಶ್ಚಯಂ ॥ ೨೬ ॥

ಕೃತ್ವಾ ತು ವಿಪುಲಂ ಕರ್ಮ ಮದ್ಭಕ್ತ್ಯಾ ತು ನಿವೇದಯೇತ್ ।
ಯಸ್ಯ ಬುದ್ಧಿರ್ನಜಾಯೇತ ಸ ದುಃಖಾಯೋಪಜಾಯತೇ ॥ ೨೭ ॥

ಮಾಂ ಪೂಜಯಿತ್ವಾ ನೈವೇದ್ಯಂ ವಿಶಿಷ್ಟಂ ಪರಿಕಲ್ಪ್ಯ ಚ ।
ಶೇಷಮನ್ನಂ ಸಮಶ್ನಾತಿ ತತಃ ಸೌಖ್ಯತರಂ ನು ಕಿಂ ॥ ೨೮ ॥

ತ್ರಿಕಾಲಂ ಯೇ ಪ್ರಪದ್ಯಂತೇ ಮಯೋಕ್ತೇನ ವಸುಂಧರೇ ।
ಕೃತ್ವಾ ಸಾಯಾಹ್ನಿಕಂ ಕರ್ಮ ತತಸ್ಸೌಖ್ಯತರಂ ನು ಕಿಂ ॥ ೨೯ ॥

---

೨೫. ಮಂಗಳೇ, ಸರ್ವಪ್ರಾಣಿಗಳಿಗೂ ಅಹಿತವಾದ ಪಾಪವಿಚಾರವನ್ನು ಕೇಳಿದೆಯಷ್ಟೆ. ದುಃಖಕರ್ಮನಿರ್ಣಯವಾದ ಇದನ್ನು ನಿನಗೆ ಹೇಳಿದ್ದೇನೆ.

೨೬. ಮಂಗಳೇ, ಶೋಭನಾಂಗೀ, ಶುಭಸ್ವರೂಪವೆಂತಹುದೆಂದು ಪ್ರಶ್ನಿಸಿದೆಯಲ್ಲವೆ! ನಾನು ಹೇಳುವ ಆ ಶುಭಕರ್ಮನಿರ್ಣಯವನ್ನು ಕೇಳು.

೨೭. ಹೆಚ್ಚಾಗಿ ಕರ್ಮಗಳನ್ನು ಮಾಡಿ, ನನಗೆ ಭಕ್ತಿಯಿಂದ ಅರ್ಪಿಸಬೇಕು. ಹಾಗೆ ಅರ್ಪಿಸಲು ಯಾರಿಗೆ ಬುದ್ಧಿಯುಂಟಾಗುವುದಿಲ್ಲವೋ ಅವನು ದುಃಖಕ್ಕೆ ಗುರಿಯಾಗುವನು

೨೮. ನನ್ನನ್ನು ಪೂಜಿಸಿ, ಸಿದ್ಧವಾಗಿರುವ ಅನ್ನ ಮೊದಲಾದುದನ್ನೆಲ್ಲಾ ನನಗೆ ಅರ್ಪಿಸಿ, ಶೇಷವನ್ನು ಭುಜಿಸುವುದಕ್ಕಿಂತಲೂ ಸುಖತರವಾವುದು !

೨೯. ವಸುಂಧರೇ, ತ್ರಿಸಂಧ್ಯಾಕಾಲಗಳಲ್ಲಿಯೂ ನಾನು ಹೇಳಿರುವಂತೆ ಆಹ್ನಿಕಕರ್ಮವನ್ನು ಮಾಡಿ, ನನ್ನನ್ನು ಆಶ್ರಯಿಸುವುದಕ್ಕಿಂತ ಸೌಖ್ಯತರವಾದುದಾವುದು !

ದೇವತಾತಿಥಿಮರ್ತ್ಯಾನಾಂ ತ್ಯಕ್ತ್ವಾ ಚಾನ್ನಂ ವಸುಂಧರೇ ।
ಯಶ್ಚಾತ್ಮಾ ವೈ ಸಮಶ್ನಾತಿ ತತಃ ಸೌಖ್ಯತರಂ ನು ಕಿಂ ॥ ೩೦ ॥

ಪ್ರವಿಷ್ಟಸ್ತ್ವತಿಥಿರ್ಯಸ್ಯ ನಿರಾಶೋ ಯನ್ನ ಗಚ್ಛತಿ ।
ಯೇನ ಕೇನಚಿದ್ದತ್ತೇನ ತತಃ ಸೌಖ್ಯತರಂ ನು ಕಿಂ ॥ ೩೧ ॥

ಮಾಸಿ ಮಾಸ್ಯೇಕದಿವಸಸ್ತ್ವಮಾವಾಸ್ಯೇತಿ ಯೋಚ್ಯತೇ ।
ಪಿತರೋ ಯಸ್ಯ ತೃಪ್ಯಂತಿ ತತಃ ಸೌಖ್ಯತರಂ ನು ಕಿಂ ॥ ೩೨ ॥

ಭೋಜನೇಷು ಪ್ರಪನ್ನೇಷು ಯಮಾನ್ನಂ ಯಃ ಪ್ರಯಚ್ಛತಿ ।
ಅಭಿನ್ನಮುಖರಾಗೇಣ ತತಃ ಸೌಖ್ಯತರಂ ನು ಕಿಂ ॥ ೩೩ ॥

ಉಭಯೋರಪಿ ಭಾರ್ಯಾಸು ಯಸ್ಯ ಬುದ್ಧಿರ್ನ ನಶ್ಯತಿ ।
ಸಮಂ ಪಶ್ಯತಿ ಯೋ ದೇವಿ ತತಃ ಸೌಖ್ಯತರಂ ನು ಕಿಂ ॥ ೩೪ ॥

---

೩೦. ವಸುಂಧರೇ, ದೇವತೆಗಳಿಗೂ, ಅತಿಥಿಗಳಿಗೂ ಅನ್ನವನ್ನು ಅರ್ಪಿಸಿ ಬಳಿಕ ಊಟಮಾಡುವುದಕ್ಕಿಂತ ಸುಖತರವಾವುದಿದೆ !

೩೧. ಮನೆಗೆ ಬಂದ ಅತಿಥಿಯನ್ನು, ಏನನ್ನಾದರೂ ಕೊಟ್ಟು, ನಿರಾಶನಾಗಿ ಹೋಗದಂತೆ ಮಾಡುವುದಕ್ಕಿಂತ ಹೆಚ್ಚಾದ ಸೌಖ್ಯಕರವಾದುದಾವುದು !

೩೨. ಪ್ರತಿ ತಿಂಗಳಲ್ಲಿಯೂ ಅಮಾವಾಸ್ಯೆಯದಿನ ತನ್ನ ಪಿತೃಗಳನ್ನು ತೃಪ್ತಿಪಡಿಸುವುದಕ್ಕಿಂತ ಸುಖತರವಾವುದು !

೩೩. ಮಾಡಿಸುವ ಭೋಜನಗಳಲ್ಲಿ ಸಂತೋಷದಿಂದ ಯಮಾನ್ನವನ್ನು ಯಾರು ಭೋಜನಮಾಡಿಸುವನೋ ಅವನಿಗಿಂತ ಹೆಚ್ಚು ಸುಖಿಯಾರು !

೩೪. ಇಬ್ಬರೂ ಹೆಂಡಿರಿದ್ದರೆ, ಭೇದವಿಲ್ಲದೆ ಅವರಿಬ್ಬರನ್ನೂ ಸಮವಾದ ಪ್ರೀತಿಯಿಂದ ನೋಡುವುದಕ್ಕಿಂತಲೂ ಸುಖಕರವಾವುದು !

ಅಹಿಂಸನಂ ತು ಕುರ್ವೀತ ವಿಶುದ್ಧೇನಾಂತರಾತ್ಮನಾ ।
ಯೋಽಹಿಂಸೋಽಪರತಃ ಶುದ್ಧಃ ಸ ಸುಖಾಯೋಪಜಾಯತೇ ॥ ೩೫ ॥

ಪರಭಾರ್ಯಾಂ ಸುರೂಪಾಂ ತು ದೃಷ್ಟ್ವಾ ದೃಷ್ಟಿರ್ನಚಾಲ್ಯತೇ ।
ಯಸ್ಯ ಚಿತ್ತಂ ನ ಗಚ್ಛೇತ್ತು ತತಃ ಸೌಖ್ಯತರಂ ನು ಕಿಂ ॥ ೩೬ ॥

ಮೌಕ್ತಿಕಾದೀನಿ ರತ್ನಾನಿ ತಥೈವ ಕನಕಾನಿ ಚ ।
ಲೋಷ್ಟವತ್ಪಶ್ಯತೇ ಯಸ್ತು ತತಃ ಸೌಖ್ಯತರಂ ನು ಕಿಂ ॥ ೩೭ ॥

ಮುದಿತೇವಾಶ್ವನಾಗೇಂದ್ರೇ ಉಭೇ ಸೈನ್ಯೇ ಪಥಿ ಸ್ಥಿತೇ ।
ಯಸ್ತು ಪ್ರಾಣಾನ್ಪ್ರಮುಚ್ಯೇತ ತತಃ ಸೌಖ್ಯತರಂ ನು ಕಿಂ ॥ ೩೮ ॥

ಲಬ್ಧೇನ ಚಾಪ್ಯಲಬ್ಧೇನ ಕುತ್ಸಿತಂ ಕರ್ಮ ಗರ್ಹಯನ್ ।
ಯಸ್ತು ಜೀವತಿ ಸಂತುಷ್ಟಃ ಸ ಸುಖಾಯೋಪಪದ್ಯತೇ ॥ ೩೯ ॥

---

೩೫. ಪರಿಶುದ್ಧಾಂತರಾತ್ಮನಾಗಿ, ಹಿಂಸಾಕಾರ್ಯಗಳನ್ನು ಮಾಡದಿರುವವನು ಸುಖಕ್ಕೆ ಪಾತ್ರನಾಗುವನು.

೩೬. ಸುಂದರಿಯಾದ ಪರವನಿತೆಯನ್ನು ನೋಡಿದರೂ ದೃಷ್ಟಿ ಚಾಂಚಲ್ಯವಿಲ್ಲದೆಯೂ, ಮನಸ್ಸು ಅವಳಲ್ಲಿ ಹೋಗದೆಯೂ ಇರುವುದಕ್ಕಿಂತ ಸುಖತರವಾವುದು !

೩೭. ಮುತ್ತೇ ಮೊದಲಾದ ರತ್ನಗಳನ್ನೂ, ಚಿನ್ನವನ್ನೂ ಮಣ್ಣು ಹೆಂಟೆಯಂತೆ ಭಾವಿಸುವುದಕ್ಕಿಂತ ಸುಖತರವಾವುದು !

೩೮. ಆನೆಕುದುರೆಗಳು ಸಂತೋಷದಿಂದಿದ್ದು ಎರಡು ಸೈನ್ಯಗಳೂ ಯುದ್ಧ ರಂಗದಲ್ಲಿ ಕಾದುತ್ತಿರಲು, ವೀರವೃತ್ತಿಯಿಂದ ಪ್ರಾಬಿಡುವುದಕ್ಕಿಂತ ಸೌಖ್ಯತರ ವಾವುದು !

೩೯. ಲಾಭವಾಗಲಿ, ಆಗದಿರಲಿ, ದುಷ್ಕಾರ್ಯಗಳನ್ನು ದ್ವೇಷಿಸುತ್ತ ಸಂತುಷ್ಟನಾಗಿ ಜೀವಿಸುವವನು ಸುಖಕ್ಕೆ ಭಾಗಿಯಾಗುವನು.

ಭರ್ತುರ್ಯಸ್ತು ವೈ ವ್ರತಂ ಸ್ತ್ರೀಣಾಮೇವಮೇವ ವಸುಂಧರೇ ।
ಯಾ ತೋಷಯಿತಿ ಭರ್ತಾರಂ ತತಃ ಸೌಖ್ಯತರಂ ನು ಕಿಂ ॥ ೪೦ ॥

ವಿದ್ಯತೇ ವಿಭವೇನಾಪಿ ಪುರುಷೋ ಯಸ್ತು ಪಂಡಿತಃ ।
ನಿಗೃಹೀತೇಂದ್ರಿಯಃ ಪಂಚ ತತಃ ಸೌಖ್ಯತರಂ ನು ಕಿಂ ॥ ೪೧ ॥

ಸಹತೇ ಚಾವಮಾನಂ ತು ವ್ಯಸನೇ ನ ತು ದುರ್ಮನಾಃ ।
ಯಸ್ಯೇದಂ ವಿದಿತಂ ಸರ್ವಂ ತತಃ ಸೌಖ್ಯತರಂ ನು ಕಿಂ ॥ ೪೨ ॥

ಅಕಾಮೋ ವಾ ಸಕಾಮೋ ವಾ ಮಮ ಕ್ಷೇತ್ರೇ ವಸುಂಧರೇ ।
ಯಸ್ತು ಪ್ರಾಣಾನ್ಪ್ರಮುಚ್ಯೇತ ತತಃ ಸೌಖ್ಯತರಂ ನು ಕಿಂ ॥ ೪೩ ॥

ಮಾತರಂ ಪಿತರಂ ಚೈವ ಯಃ ಸದಾ ಪೂಜಯನ್ನರಃ ।
ದೇವತೇವ ಸದಾ ಪಶ್ಯೇತ್ ತತಃ ಸೌಖ್ಯತರಂ ನು ಕಿಂ ॥ ೪೪ ॥

---

೪೦. ವಸುಂಧರೇ, ಹೀಗೆಯೇ ಸ್ತ್ರೀಯರಿಗೆ ಪತಿಯ ವ್ರತವೇ ವಿಹಿತ ವಾದುದು. ಪತಿಯನ್ನು ಸಂತೋಷಪಡಿಸುವುದಕ್ಕಿಂತ ಸುಖತರವಾವುದು !

೪೧. ಐಶ್ವರ್ಯವಂತನಾಗಿಯೂ, ಪಂಡಿತನಾಗಿಯೂ ಇದ್ದೂ ಪಂಚೇಂದ್ರಿಯಗಳನ್ನೂ ಜಯಿಸುವುದಕ್ಕಿಂತ ಸುಖತರವಾವುದು !

೪೨. ಅವಮಾನವನ್ನು ಸಹಿಸುವುದಕ್ಕೂ, ವ್ಯಸನದಲ್ಲಿ ಮನಸ್ಸನ್ನು ಕೆಡಿಸಿಕೊಳ್ಳದೆ ಇರುವುದಕ್ಕೂ ತಿಳಿದವನಾಗಿರುವುದಕ್ಕಿಂತ ಸುಖತರ ವಾದುದಾವುದು !

೪೩. ಉದ್ದೇಶಪೂರ್ವಕವಾಗಿಯೋ, ಉದ್ದೇಶವಿಲ್ಲದೆಯೋ ನನ್ನ ಕ್ಷೇತ್ರದಲ್ಲಿ ಪ್ರಾಣಬಿಡುವುದಕ್ಕಿಂತ ಸುಖತರವಾವುದು !

೪೪. ತಾಯಿತಂದೆಗಳನ್ನು ಸದಾ ಪೂಜಿಸುತ್ತ ದೇವತೆಗಳಂತೆ ಕಾಣುವುದಕ್ಕಿಂತ ಸೌಖ್ಯತರವಾವುದು !

ಋತುಕಾಲೇ ತು ಯೋ ಗಚ್ಛೇತ್ ಮಾಸೇ ಮಾಸೇ ಚ ಮೈಥುನಂ ।
ಅನನ್ಯಮಾನಸೋ ಭೂತ್ವಾ ತತಃ ಸೌಖ್ಯತರಂ ನು ಕಿಂ ॥ ೪೫ ॥

ಪ್ರಯುಕ್ತಃ ಸರ್ವದೇವಾನಾಂ ಯೋ ಮಾಮೇವಂ ಪ್ರಪೂಜಯೇತ್ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥ ೪೬ ॥

ಏತತ್ತೇ ಕಥಿತಂ ಭದ್ರೇ ಶುಭನಿರ್ದೇಶನಿಶ್ಚಯಃ ।
ಸರ್ವಲೋಕಹಿತಾರ್ಥಾಯ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೪೭ ॥

ಇತಿ ಶ್ರೀವರಾಹಪುರಾಣೇ ಸುಖದುಃಖನಿರೂಪಣಂ ನಾಮ
ಷೋಡಶಾಧಿಕಶತತಮೋಽಧ್ಯಾಯಃ

---

೪೫ ಪ್ರತಿತಿಂಗಳಲ್ಲೂ ಋತುಕಾಲದಲ್ಲಿಮಾತ್ರವೇ ಅನನ್ಯಮನಸ್ಕನಾಗಿ ಪತ್ನಿಯೊಡನೆ ಸೇರುವುದಕ್ಕಿಂತ ಸುಖತರವಾವುದು !

೪೬. ಸರ್ವದೇವತೆಗಳಿಗೂ ಉಪಯುಕ್ತನಾಗಿ ಯಾರು ನನ್ನನ್ನು ಹೀಗೆ ಪೂಜಿಸುವನೋ ಅವನನ್ನು ನಾನೂ, ನನ್ನನ್ನು ಅವನೂ ಅಗಲುವುದಿಲ್ಲ.

೪೭. ಭದ್ರೇ, ಸರ್ವಲೋಕಹಿತಕ್ಕಾಗಿ ನೀನು ನನ್ನನ್ನು ಕೇಳಿದುದರಿಂದ ಈ ಶುಭವಿಧಿನಿರ್ಣಯವನ್ನು ನಿನಗೆ ಹೇಳಿದ್ದೇನೆ.

ಅಧ್ಯಾಯದ ಸಾರಾಂಶ:—

ಶ್ರೀವರಾಹನು ಭೂದೇವಿಗೆ ಸುಖದುಃಖಗಳ ಸ್ವರೂಪವನ್ನೂ, ದುಃಖರೂಪ ಕರ್ಮಗಳನ್ನೂ, ಸುಖರೂಪವಾದ ಕರ್ಮಗಳನ್ನೂ ನಿರ್ಣಯಿಸಿ ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರಹದಿನಾರನೆಯ ಅಧ್ಯಾಯ.

|| ಶ್ರೀಃ ||

–x–

ಸಪ್ತದಶಾಧಿಕಶತತಮೋಽಧ್ಯಾಯಃ

ಅಥ ದ್ವಾತ್ರಿಂಶದಪರಾಧಾಃ

|| ಶ್ರೀವರಾಹ ಉವಾಚ ||

ಶೃಣು ಭದ್ರೇ ಮಹಾಶ್ಚರ್ಯಮಾಹಾರವಿಧಿನಿಶ್ಚಯಂ ।
ಆಹಾರಂ ಚಾಪ್ಯನಾಹಾರಂ ತಚ್ಛೃಣುಷ್ವ ವಸುಂಧರೇ || ೧ ||

ಭುಂಜಾನೋ ಯಾತಿ ಚಾಶ್ನಾತಿ ಮಮ ಯೋಗಾಯ ಮಾಧವಿ ।
ಅಶುಭಂ ಕರ್ಮ ಕೃತ್ವಾಪಿ ಪುರುಷೋ ಧರ್ಮಮಾಶ್ರಿತಃ || ೨ ||

ಆಹಾರಂ ಚೈವ ಧರ್ಮಜ್ಞ ಉಪಭುಂಜೀತ ನಿತ್ಯಶಃ ।
ಸರ್ವೇ ಚಾತ್ರೈವ ಕರ್ಮಣ್ಯಾ ವ್ರೀಹಯಃ ಶಾಲಯಸ್ತಥಾ || ೩ ||

ನೂರಹದಿನೇಳನೆಯ ಅಧ್ಯಾಯ

ಮೂವತ್ತೆರಡು ಅಪರಾಧಗಳು

೧. ಶ್ರೀವರಾಹ—ಭದ್ರೇ, ವಸುಂಧರೇ, ಮಹಾಶ್ಚರ್ಯವಾದ ಆಹಾರ ವಿಧಿನಿರ್ಣಯವನ್ನು ಎಂದರೆ ಭುಜಿಸಬಹುದಾದುದನ್ನೂ, ಭುಜಿಸಬಾರದುದನ್ನೂ ಕೇಳು.

೨-೩. ಮಾಧವಿ, ಧರ್ಮವನ್ನು ಆಶ್ರಯಿಸಿದವನೂ ಧರ್ಮಜ್ಞನೂ ಆದವನು, ಅಶುಭಕರ್ಮವನ್ನು ಮಾಡಿದರೂ ನಿತ್ಯವೂ ಧರ್ಮಶಾಸ್ತ್ರವಿಹಿತ ವಾದ ಆಹಾರವನ್ನು ಮಾತ್ರ ಭುಜಿಸಿ ನನ್ನನ್ನು ಸೇರುವನು. ಕರ್ಮಾಹವಾದ ಎಲ್ಲಾ ವಿಧವಾದ ಬತ್ತವೂ, ಇತರ ಧಾನ್ಯಗಳೂ ಆಹಾರಯೋಗ್ಯವಾದುವು.

ಅಕರ್ಮಣ್ಯಾನಿ ವಕ್ಷ್ಯಾಮಿ ಯೇನ ಭೋಜ್ಯಂತಿ ಮಾಂ ಪ್ರತಿ ।
ತೇನ ವೈ ಭುಕ್ತಮಾರ್ಗೇಣ ಅಪರಾಧೋ ಮಹೌಜಸಃ ॥
ಪ್ರಥಮಂ ಚಾಪರಾಧಾನ್ನಂ ನ ರೋಚೇತ ಮಮ ಪ್ರಿಯೇ ॥ ೪ ॥

ಭುಕ್ತ್ವಾ ತು ಪರಕೀಯಾನ್ನಂ ತತ್ಪರಸ್ತನ್ನಿವರ್ತನಃ ।
ದ್ವಿತೀಯಸ್ತ್ವಪರಾಧೋಽಯಂ ಧರ್ಮವಿಘ್ನಾಯ ವೈ ಭವೇತ್ ॥ ೫ ॥

ಗತ್ವಾ ಮೈಥುನಸಂಯೋಗಂ ಯೋ ನು ಮಾಂ ಸ್ಪೃಶತೇ ನರಃ ।
ತೃತೀಯಮಪರಾಧಂ ತು ಕಲ್ಪಯಾಮಿ ವಸುಂಧರೇ ॥ ೬ ॥

ದೃಷ್ಟ್ವಾ ರಜಸ್ವಲಾಂ ನಾರೀಮಸ್ಮಾಕಂ ಯಃ ಪ್ರಪದ್ಯತೇ ।
ಚತುರ್ಥಮಪರಾಧಂ ತು ದೃಷ್ಟಂ ನೈವ ಕ್ಷಮಾಮ್ಯಹಂ ॥ ೭ ॥

---

೪. ಪ್ರಿಯೇ ಯಾವುವು ನನಗೆ ರುಚಿಸುವುದಿಲ್ಲವೋ ಅಂತಹವನ್ನು ಕರ್ಮಾರ್ಹವಲ್ಲದವುಗಳೆಂದು ಹೇಳುತ್ತೇನೆ. ಮಹಾತೇಜಸ್ಸುಳ್ಳವನು ಅವುಗಳನ್ನು ತಿಂದಮಾತ್ರದಲ್ಲಿ ಮೊದಲನೆಯ ಅಪರಾಧವಾಗುವುದು. ಅಪರಾಧಾನ್ನವು ನನಗೆ ರುಚಿಸುವುದಿಲ್ಲ.

೫. ಪರಕೀಯಾನ್ನವನ್ನು ಆಸಕ್ತಿಯಿಂದ ತಿಂದು ಜೀವಿಸುವುದು ಎರಡನೆಯ ಅಪರಾಧ. ಇದು ಧರ್ಮಕ್ಕೆ ವಿಘ್ನವನ್ನುಂಟುಮಾಡುವುದು.

೬. ವಸುಂಧರೇ, ಸ್ತ್ರೀಸಂಗವನ್ನು ಮಾಡಿ ಸ್ನಾನಾದಿಗಳಿಲ್ಲದೆ ನನ್ನನ್ನು ಮುಟ್ಟುವದು ಮೂರನೆಯ ತಪ್ಪೆಂದೆಣಿಸುತ್ತೇನೆ.

೭. ರಜಸ್ವಲೆಯನ್ನು ನೋಡಿ, ಸ್ನಾನವಿಲ್ಲದೆ ನಮ್ಮನ್ನು ಸೇವಿಸುವುದು ನಾಲ್ಕನೆಯ ತಪ್ಪು. ಅದನ್ನು ಕಂಡರೆ ನನಗೆ ಸಹಿಸುವುದಿಲ್ಲ.

ಸ್ಪೃಷ್ಟ್ವಾ ತು ಮೃತಕಂ ಚೈವ ಅಸಂಸ್ಕಾರಕೃತಂ ತು ವೈ ।
ಪಂಚಮಂ ಚಾಪರಾಧಂ ಚ ನ ಕ್ಷಮಾಮಿ ವಸುಂಧರೇ ॥ ೮ ॥

ದೃಷ್ಟ್ವಾ ತು ಮೃತಕಂ ಯಸ್ತು ನಾಚಮ್ಯ ಸ್ಪೃಶತೇ ತು ಮಾಂ ।
ಷಷ್ಠಂ ತಂ ಚಾಪರಾಧಂ ವೈ ನ ಕ್ಷಮಾಮಿ ವಸುಂಧರೇ ॥ ೯ ॥

ಮಮಾರ್ಚನಸ್ಯ ಕಾಲೇ ತು ಪುರೀಷಂ ಯಸ್ತು ಗಚ್ಛತಿ ।
ಸಪ್ತಮಂ ಚಾಪರಾಧಂ ತು ಕಲ್ಪಯಾಮಿ ವಸುಂಧರೇ ॥ ೧೦ ॥

ಯಸ್ತು ನೀಲೇನ ವಸ್ತ್ರೇಣ ಪ್ರಾವೃತೋ ಮಾಂ ಪ್ರಪದ್ಯತೇ ।
ಅಷ್ಟಮಂ ಚಾಪರಾಧಂ ಚ ಕಲ್ಪಯಾಮಿ ವಸುಂಧರೇ ॥ ೧೧ ॥

ಮಮೈವಾರ್ಚನಕಾಲೇ ತು ಯಸ್ತ್ವಸಮಂ ಪ್ರಭಾಷತೇ ।
ನವಮಂ ಚಾಪರಾಧಂ ತಂ ನ ರೋಚಾಮಿ ವಸುಂಧರೇ ॥ ೧೨ ॥

೮-೯. ಸಂಸ್ಕಾರವಿಲ್ಲದ ಶವವನ್ನು ಮುಟ್ಟಿ ಸ್ನಾನಾದಿಗಳಿಲ್ಲದೆ ನನ್ನನ್ನು ಮುಟ್ಟುವ ಐದನೆಯ ತಪ್ಪನ್ನೂ, ಶವವನ್ನು ನೋಡಿ ಆಚಮನವನ್ನು ಮಾಡದೆ ನನ್ನನ್ನು ಮುಟ್ಟುವ ಆರನೆಯ ತಪ್ಪನ್ನೂ ನಾನು ಸಹಿಸೆನು.

೧೦. ನನ್ನ ಪೂಜೆಯ ಕಾಲದಲ್ಲಿ ಮಲವಿಸರ್ಜನೆ ಮಾಡುವುದನ್ನು ಏಳನೆಯ ತಪ್ಪೆಂದೆಣಿಸುತ್ತೇನೆ.

೧೧. ವಸುಂಧರೇ, ನೀಲವರ್ಣದ ವಸ್ತ್ರವನ್ನು ಧರಿಸಿ, ನನ್ನನ್ನು ಸೇವಿಸುವುದು ಎಂಟನೆಯದಾದ ಅಪರಾಧ.

೧೨. ನನ್ನನ್ನು ಪೂಜಿಸುವಾಗ ಅನುಚಿತವಾಗಿ ಮಾತನಾಡುವುದು ಒಂಭತ್ತನೆಯ ತಪ್ಪು. ಅದು ನನಗಾಗದು.

ಅವಿಧಾನಂ ತು ಯಃ ಸ್ಪೃಶ್ಯ ಮಾಮೇವ ಪ್ರತಿಪದ್ಯತೇ ।
ದಶಮಶ್ಚಾಪರಾಧೋಽಯಂ ಮಮ ಚಾಪ್ರಿಯಕಾರಕಃ ॥ ೧೩ ॥

ಕ್ರೋಧಸ್ತು ಯಾನಿ ಕರ್ಮಾಣಿ ಕುರುತೇ ಕರ್ಮಕಾರಕಃ ।
ಏಕಾದಶಾಪರಾಧಂ ತು ಕಲ್ಪಯಾಮಿ ವಸುಂಧರೇ ॥ ೧೪ ॥

ಅಕರ್ಮಣ್ಯಾನಿ ಪುಷ್ಪಾಣಿ ಯಸ್ತು ಮಾಮುಪಕಲ್ಪಯೇತ್ ।
ದ್ವಾದಶಂ ಚಾಪರಾಧಂ ತಂ ಕಲ್ಪಯಾಮಿ ವಸುಂಧರೇ ॥ ೧೫ ॥

ಯಸ್ತು ರಕ್ತೇನ ವಸ್ತ್ರೇಣ ಕೌಸುಂಭೇನೋಪಗಚ್ಛತಿ ।
ತ್ರಯೋದಶಂ ಚಾಪರಾಧಂ ಕಲ್ಪಯಾಮಿ ವಸುಂಧರೇ ॥ ೧೬ ॥

ಅಂಧಕಾರೇ ಚ ಮಾಂ ದೇವಿ ಯಃ ಸ್ಪೃಶೇತ ಕದಾಚನ ।
ಚತುರ್ದಶಾಪರಾಧಂ ತು ಕಲ್ಪಯಾಮಿ ವಸುಂಧರೇ ॥ ೧೭ ॥

---

೧೩. ರಜಸ್ವಲೆಯ ಬಟ್ಟೆ, ಪಾತ್ರೆ ಮೊದಲಾದುವುಗಳನ್ನು ಮುಟ್ಟಿ ನನ್ನನ್ನು ಸೇವಿಸುವುದು ನನಗೆ ಅಪ್ರಿಯವಾದ ಹತ್ತನೆಯ ಅಪರಾಧ.

೧೪-೧೫. ಕರ್ತೃವು ಕೋಪಗೊಂಡು ಕರ್ಮವನ್ನಾಚರಿಸುವುದು ಹನ್ನೊಂದನೆಯ ತಪ್ಪು. ಕರ್ಮಾನರ್ಹವಾದ ಹೂಗಳಿಂದ ನನ್ನನ್ನು ಪೂಜಿಸುವುದು ಹನ್ನೆರಡನೆಯ ತಪ್ಪು.

೧೬. ವಸುಂಧರೇ, ಕೆಂಪಾದ ಅಥವಾ ಕುಸುಬೆಯ ಬಣ್ಣದ ವಸ್ತ್ರದಿಂದ ನನ್ನ ಸೇವೆಗೆಯ್ಯುವುದು ಹದಿಮೂರನೆಯ ತಪ್ಪೆಂದೆಣಿಸುತ್ತೇನೆ,

೧೭. ದೇವಿ, ವಸುಂಧರೇ, ಯಾವಾಗಲಾದರೂ ಕತ್ತಲೆಯಲ್ಲಿ ನನ್ನನ್ನು ಮುಟ್ಟುವುದು ಹದಿನಾಲ್ಕನೆಯ ತಪ್ಪು.

ಯಸ್ತು ಕೃಷ್ಣೇನ ವಸ್ತ್ರೇಣ ಮಮ ಕರ್ಮಾಣಿಕಾರಯೇತ್ ।
ಅಪರಾಧಂ ಪಂಚದಶಂ ಕಲ್ಪಯಾಮಿ ವಸುಂಧರೇ ॥ ೧೮ ॥

ಅಧೌತೇನ ತು ವಸ್ತ್ರೇಣ ಯಸ್ತು ಮಾಮುಪಕಲ್ಪಯೇತ್ ।
ಷೋಡಶಂ ತ್ವಪರಾಧಾನಾಂ ಕಲ್ಪಯಾಮಿ ವರಾನನೇ ॥ ೧೯ ॥

ಸ್ವಯಮನ್ನಂ ತು ಯೋ ಹ್ಯದ್ಯಾತ್ ಅಜ್ಞಾನಾದಪಿ ಮಾಧವಿ ।
ಅಪರಾಧಂ ಸಪ್ತದಶಂ ಕಲ್ಪಯಾಮಿ ವಸುಂಧರೇ ॥ ೨೦ ॥

ಯಸ್ತು ಮಾತ್ಸ್ಯಾನಿ ಮಾಂಸಾನಿ ಭಕ್ಷಯಿತ್ವಾ ಪ್ರಪದ್ಯತೇ ।
ಅಷ್ಟಾದಶಾಪರಾಧಂ ಚ ಕಲ್ಪಯಾಮಿ ವಸುಂಧರೇ ॥ ೨೧ ॥

ಜಾಲಪಾದಂ ಭಕ್ಷಯಿತ್ವಾ ಯಸ್ತು ಮಾಮುಪಸರ್ಪತಿ ।
ಏಕೋನ ವಿಂಶಾಪರಾಧಂ ಕಲ್ಪಯಾಮಿ ವಸುಂಧರೇ ॥ ೨೨ ॥

---

೧೮. ವಸುಂಧರೇ, ಕಪ್ಪುಬಟ್ಟೆಯಿಂದ ನನ್ನ ಕರ್ಮಗಳನ್ನು ಮಾಡುವುದು ಹದಿನೈದನೆಯ ತಪ್ಪಿತವಾಗುವುದು.

೧೯. ವರಾನನೇ, ಮೈಲಿಗೆಯ ಬಟ್ಟೆಯನ್ನುಟ್ಟು ನನ್ನನ್ನು ಪೂಜಿಸುವುದನ್ನು ಅಥವಾ ಅಶುದ್ಧವಸ್ತ್ರಗಳನ್ನು ನನಗೆ ಧರಿಸುವುದನ್ನು ಹದಿನಾರನೆಯ ತಪ್ಪೆಂದು ಪರಿಗಣಿಸುತ್ತೇನೆ.

೨೦. ಮಾಧವಿ, ವಸುಂಧರೇ,. ಸಿದ್ಧವಾಗಿರುವ ಅನ್ನವನ್ನು ನನಗೆ ಅರ್ಪಿಸದೆ ಅಜ್ಞಾನದಿಂದಲೇಆದರೂ ತಾನೇ ತಿನ್ನುವುದನ್ನು ಹದಿನೇಳನೆಯ ತಪ್ಪೆಂದೆಣಿಸುತ್ತೇನೆ.

೨೧-೨೨. ಮೀನಿನ ಮಾಂಸವನ್ನು ತಿಂದು ನನ್ನ ಸೇವೆಗೆಯ್ಯುವುದನ್ನು ಹದಿನೆಂಟನೆಯ ತಪ್ಪೆಂದೂ, ಜಾಲಪಾದದ ಪ್ರಾಣಿಯ ಮಾಂಸವನ್ನು ತಿಂದು ನನ್ನನ್ನು ಆಶ್ರಯಿಸುವುದನ್ನು ಹತ್ತೊಂಬತ್ತನೆಯ ತಪ್ಪೆಂದೂ ಎಣಿಸುತ್ತೇನೆ.

ಯಸ್ತು ಮೇ ದೀಪಕಂ ಸ್ಪೃಷ್ಟ್ವಾ ಮಾಮೇವ ಪ್ರತಿಪದ್ಯತೇ ।
ವಿಂಶಕಂ ಚಾಪರಾಧಂ ತಂ ಕಲ್ಪಯಾಮಿ ವರಾನನೇ ॥ ೨೩ ॥

ಶ್ಮಶಾನಂ ಯಸ್ತು ವೈ ಗತ್ವಾ ಮಾಮೇವ ಪ್ರತಿಪದ್ಯತೇ ।
ಏಕವಿಂಶಾಪರಾಧಂ ತಂ ಕಲ್ಪಯಾಮಿ ವಸುಂಧರೇ ॥ ೨೪ ॥

ಪಿಣ್ಯಾಕಂ ಭಕ್ಷಯಿತ್ವಾ ತು ಯೋ ಮಾಮೇವಾಭಿಗಚ್ಛತಿ ।
ದ್ವಾವಿಂಶಂ ಚಾಪರಾಧಂ ತಂ ಕಲ್ಪಯಾಮಿ ಪ್ರಿಯೇ ಸದಾ ॥ ೨೫ ॥

ಯಸ್ತು ವಾರಾಹಮಾಂಸಾನಿ ಪ್ರಾಪಣೇನೋಪಪಾದಯೇತ್ ।
ಅಪರಾಧಂ ತ್ರಯೋವಿಂಶಂ ಕಲ್ಪಯಾಮಿ ವಸುಂಧರೇ ॥ ೨೬ ॥

ಸುರಾಂ ಪೀತ್ವಾ ತು ಯೋ ಮರ್ತ್ಯಃ ಕದಾಚಿದುಪಸರ್ಪತಿ ।
ಅಪರಾಧಂ ಚತುರ್ವಿಂಶಂ ಕಲ್ಪಯಾಮಿ ವಸುಂಧರೇ ॥ ೨೭ ॥

---

೨೩. ವರಾನನೇ, ನನ್ನ ದೀಪವನ್ನು ಮುಟ್ಟಿ ಕೈತೊಳೆದುಕೊಳ್ಳದೆ ನನ್ನ ಸೇವೆಗೆಯ್ಯುವುದನ್ನು ಇಪ್ಪತ್ತನೆಯ ತಪ್ಪೆಂದೆಣಿಸುತ್ತೇನೆ.

೨೪. ವಸುಂಧರೇ, ಶ್ಮಶಾನಕ್ಕೆ ಹೋಗಿ ಬಂದು, ಶುದ್ಧನಾಗದೆ ನನ್ನ ಹತ್ತಿರ ಬರುವುದನ್ನು ಇಪ್ಪತ್ತೊಂದನೆಯ ತಪ್ಪೆಂದೆಣಿಸುತ್ತೇನೆ.

೨೫. ಪ್ರಿಯೇ, ಹಿಂಡಿಯನ್ನು ತಿಂದು, ನನ್ನ ಹತ್ತಿರ ಬರುವುದು ಇಪ್ಪತ್ತೆರಡನೆಯ ತಪ್ಪಿತವಾಗುವುದು.

೨೬. ವಸುಂಧರೇ, ಹಂದಿಯ ಮಾಂಸವನ್ನು ನನಗೆ ನಿವೇದಿಸುವುದು ಇಪ್ಪತ್ತಮೂರನೆಯ ತಪ್ಪೆಂದೆಣಿಸುತ್ತೇನೆ.

೨೭. ವಸುಂಧರೇ, ಮದ್ಯಪಾನಮಾಡಿ ನನ್ನ ಸಮೀಪಕ್ಕೆ ಬರುವುದನ್ನು ಇಪ್ಪತ್ತನಾಲ್ಕನೆಯ ತಪ್ಪೆಂದು ಪರಿಗಣಿಸುತ್ತೇನೆ.

ಯಃ ಕುಸುಂಭಂ ಚ ಮೇ ಶಾಕಂ ಭಕ್ಷಯಿತ್ವೋಪಚಕ್ರಮೇ ।
ಅಪರಾಧಂ ಪಂಚವಿಂಶಂ ಕಲ್ಪಯಾಮಿ ವಸುಂಧರೇ ॥ ೨೮ ॥

ಪರಪ್ರಾವರಣೇನೈವ ಯಸ್ತು ಮಾಮುಪಸರ್ಪತಿ ।
ಅಪರಾಧೇಷು ಷಡ್ವಿಂಶಂ ಕಲ್ಪಯಾಮಿ ವಸುಂಧರೇ ॥ ೨೯ ॥

ನವಾನ್ನಂ ಯಸ್ತು ಭಕ್ಷೇತ ನ ದೇವಾನ್ನ ಪಿತೄನ್ಯಜೇತ್ ।
ಸಪ್ತವಿಂಶಂ ಚಾಪರಾಧಂ ಕಲ್ಪಯಾಮಿ ಗುಣಾನ್ವಿತೇ ॥ ೩೦ ॥

ಉಪಾನಹೌ ಚ ಪ್ರಪದೇ ತಥಾ ವಾಪೀಂ ಚ ಗಚ್ಛತಿ ।
ಅಪರಾಧಂ ತ್ವಷ್ಟವಿಂಶಂ ಕಲ್ಪಯಾಮಿ ಗುಣಾನ್ವಿತೇ ॥ ೩೧ ॥

ಶರೀರಂ ಮರ್ದಯಿತ್ವಾ ತು ಯೋ ಮಾಮಾಪ್ನೋತಿ ಮಾಧವಿ ।
ಏಕೋನತ್ರಿಂಶಾಪರಾಧೋ ನ ಸ ಸ್ವರ್ಗೇಷು ಗಚ್ಛತಿ ॥ ೩೨ ॥

---

೨೮. ವಸುಂಧರೇ, ಕುಸುಬೆಯ ಶಾಕವನ್ನು ತಿಂದು, ನನ್ನನ್ನು ಪೂಜಿಸುವುದು ಇಪ್ಪತ್ತೈದನೆಯ ತಪ್ಪು.

೨೯. ವಸುಂಧರೇ, ಬೇರೆಯವರ ಬಟ್ಟೆಯನ್ನುಟ್ಟು, ನನ್ನ ಸೇವೆಗೆಯ್ಯುವುದನ್ನು ತಪ್ಪುಗಳಲ್ಲಿ ಇಪ್ಪತ್ತಾರನೆಯದೆಂದು ಎಣಿಸುತ್ತೇನೆ.

೩೦. ಗುಣಯುತೇ, ಹೊಸ ಧಾನ್ಯವು ಬಂದಾಗ ದೇವತೆಗಳನ್ನೂ, ಪಿತೃಗಳನ್ನೂ, ಪೂಜಿಸದೆ ಅದನ್ನು ಭುಜಿಸುವುದನ್ನು ಇಪ್ಪತ್ತೇಳನೆಯ ತಪ್ಪೆಂದೆಣಿಸುತ್ತೇನೆ.

೩೧. ಗುಣಾನ್ವಿತೇ, ಪಾದರಕ್ಷೆಯನ್ನು ಹಾಕಿಕೊಂಡು ಕೊಳಕ್ಕೆ ಹೋಗುವುದು ಇಪ್ಪತ್ತೆಂಟನೆಯ ತಪ್ಪು.

೩೨. ಮಾಧವಿ, ಇತರರ ಅಥವಾ ತನ್ನ ದೇಹವನ್ನು ಒತ್ತಿ (ಹಿಸುಕಿ), ಕೈತೊಳೆದುಕೊಳ್ಳದೆ (ಹಾಗೆಯೇ) ನನ್ನನ್ನು ಸಮೀಪಿಸುವುದು ಇಪ್ಪತ್ತೊಂಬತ್ತನೆಯ ತಪ್ಪು. ಆ ತಪ್ಪನ್ನು ಮಾಡುವವನು ಸ್ವರ್ಗಕ್ಕೆ ಹೋಗನು.

ಅಜೀರ್ಣೇನ ಸಮಾವಿಷ್ಟೋ ಯಸ್ತು ಮಾಮುಪಗಚ್ಛತಿ ।
ತ್ರಿಂಶಕಂ ಚಾಪರಾಧಂ ತಂ ಕಲ್ಪಯಾಮಿ ಯಶಸ್ವಿನಿ ॥ ೩೩ ॥

ಗಂಧಪುಷ್ಪಾಣ್ಯದತ್ವಾ ತು ಯಸ್ತು ಧೂಪಂ ಪ್ರಯಚ್ಛತಿ ।
ಏಕತ್ರಿಂಶಂ ಚಾಪರಾಧಂ ಕಲ್ಪಯಾಮಿ ಮನಸ್ವಿನಿ ॥ ೩೪ ॥

ವಿನಾ ಭೇರ್ಯಾದಿಶಬ್ದೇನ ದ್ವಾರಸ್ಯೋದ್ಘಾಟನಂ ಮಮ ।
ಮಹಾಪರಾಧಂ ಜಾನೀಯಾತ್ ದ್ವಾತ್ರಿಂಶಂಕಂ ಮಮ ಪ್ರಿಯೇ ॥ ೩೫ ॥

ಅನ್ಯಚ್ಚ ಶೃಣು ವಕ್ಷ್ಯಾಮಿ ದೃಢವ್ರತಮನುತ್ತಮಂ ।
ಕೃತ್ವಾ ಚಾವಶ್ಯಕಂ ಕರ್ಮ ಮಮ ಲೋಕಂ ಚ ಗಚ್ಛತಿ ॥ ೩೬ ॥

ನಿತ್ಯಯುಕ್ತಶ್ಚ ಶಾಸ್ತ್ರಜ್ಞೋ ಮಮ ಕರ್ಮಪರಾಯಣಃ ।
ಅಹಿಂಸಾಪರಮಶ್ಚೈವ ಸರ್ವಭೂತದಯಾಪರಃ ॥ ೩೭ ॥

---

೩೩. ಕೀರ್ತಿವಂತೆ, ಅಜೀರ್ಣದಿಂದ ಕೂಡಿದವನು ತನ್ನ ಪೂಜೆಗೆಯ್ಯುವುದು ಮೂವತ್ತನೆಯ ತಪ್ಪು.

೩೪. ಮನಸ್ವಿನೀ, ನನಗೆ ಗಂಧಪುಷ್ಪಗಳನ್ನು ಅರ್ಪಿಸದೆ ಧೂಪವನ್ನು ಅರ್ಪಿಸುವುದು ಮೂವತ್ತೊಂದನೆಯ ತಪ್ಪೆಂದೆಣಿಸುವೆನು.

೩೫. ಪ್ರಿಯೇ, ನಗಾರಿ ಮೊದಲಾದ ವಾದ್ಯಗಳನ್ನು ಬಾರಿಸಿ ಶಬ್ದಮಾಡದೆ ನನ್ನ ಗೃಹದ ಬಾಗಿಲನ್ನು ತೆಗೆಯುವುದನ್ನು ಮೂವತ್ತೆರಡನೆಯದಾದ ಮಹಾಪರಾಧವೆಂದರಿಯಬೇಕು.

೩೬. ಪ್ರಿಯೇ, ಅತ್ಯುತ್ತಮವಾದ ಬೇರೆಯ ದೃಢವ್ರತವನ್ನು ಹೇಳುವೆನು. ಕೇಳು. ಮನುಷ್ಯನು ಆವಶ್ಯಕವಾದ ಆ ಕರ್ಮವನ್ನು ಮಾಡಿ, ನನ್ನ ಲೋಕವನ್ನು ಸೇರುವರು.

೩೭–೪೦. ಭದ್ರೇ, ನಿತ್ಯನಿಯಮಯುಕ್ತನೂ, ಶಾಸ್ತ್ರಜ್ಞನೂ, ನನ್ನ ಪೂಜಾದಿಕರ್ಮಗಳಲ್ಲಿ ಆಸಕ್ತನೂ, ಅಹಿಂಸಾಪರನೂ, ಸರ್ವಪ್ರಾಣಿಗಳಲ್ಲಿಯೂ

ಸಾಮಾನ್ಯಶ್ಚ ಶುಚಿರ್ದಕ್ಷೋ ಮಮ ನಿತ್ಯಂ ಪಥಿ ಸ್ಥಿತಃ ।
ನಿಗೃಹ್ಯ ಚೇಂದ್ರಿಯಗ್ರಾಮಮಪರಾಧವಿವರ್ಜಿತಃ ॥ ೩೮ ॥

ಉದಾರೋ ಧಾರ್ಮಿಕಶ್ಚೈವ ಸ್ವದಾರೇಷು ಸುನಿಶ್ಚಿತಃ ॥ ೩೯ ॥

ಶಾಸ್ತ್ರಜ್ಞಃ ಕುಶಲಶ್ಚೈವ ಮಮ ಕರ್ಮಪರಾಯಣಃ ।
ಚಾತುರ್ವರ್ಣ್ಯಸ್ಯ ಮೇ ಭದ್ರೇ ಸನ್ಮಾರ್ಗೇಷು ವ್ಯವಸ್ಥಿತಃ ॥ ೪೦ ॥

ಆಚಾರ್ಯಭಕ್ತಾ ದೇವೇಷು ಭಕ್ತಾ ಭರ್ತರಿ ವತ್ಸಲಾ ।
ಸಂಸಾರೇಷ್ವಪಿ ವರ್ತಂತೀ ಗಚ್ಛಂತೀ ತ್ವಗ್ರತೋ ಯದಿ ॥
ಮಮಲೋಕಸ್ಥಿತಾ ಸಾ ವೈ ಭರ್ತಾರಂ ಪ್ರಸಮೀಕ್ಷತೇ ॥ ೪೧ ॥

ಪುರುಷೋ ಯದಿ ಮದ್ಭಕ್ತಃ ಸ್ತ್ರಿಯಂ ತ್ಯಕ್ತ್ವಾ ಚ ಗಚ್ಛತಿ ।
ಸ ತತೋತ್ರ ಪ್ರತೀಕ್ಷೇತ ಭಾರ್ಯಾಂ ಭರ್ತರಿ ವತ್ಸಲಾಂ ॥ ೪೨ ॥

ದಯೆಯುಳ್ಳವನೂ, ಸುಲಭನೂ, ಶುಚಿಯೂ, ಸಮರ್ಥನೂ, ಯಾವಾಗಲೂ ನನ್ನ ಮಾರ್ಗವನ್ನನುಸರಿಸುವವನೂ, ಜಿತೇಂದ್ರಿಯನಾಗಿ ಅಪರಾಧಗಳೇ ಇಲ್ಲದವನೂ, ಉದಾರನೂ, ಧಾರ್ಮಿಕನೂ, ಸ್ವಪತ್ನೀನಿಯಮವುಳ್ಳವನೂ, ನಾನು ಕಲ್ಪಿಸಿರುವ ಚಾತುರ್ವರ್ಣ್ಯದ ಸನ್ಮಾರ್ಗಗಳಲ್ಲಿ ನಿರತನೂ ಆಗಿರುವುದೇ ದೃಢ ವ್ರತವು.

೪೧. ದೇವಗುರುಭಕ್ತಳೂ, ಪತಿವಾತ್ಸಲ್ಯವುಳ್ಳವಳೂ ಆದ ವನಿತೆಯು ಗೃಹಿಣಿಯಾಗಿ ಸಂಸಾರದಲ್ಲಿದ್ದರೂ ತನ್ನ ಪತಿಗಿಂತಲೂ ಮೊದಲು ದೇಹವನ್ನು ತ್ಯಜಿಸಿದರೆ ಅವಳು ನನ್ನ ಲೋಕದಲ್ಲಿದ್ದು ಪತಿಯನ್ನು ನಿರೀಕ್ಷಿಸುವಳು.

೪೨. ನನ್ನ ಭಕ್ತನಾದ ಪುರುಷನು ಪತ್ನಿಗಿಂತ ಮೊದಲು ದೇಹವನ್ನು ಬಿಟ್ಟರೆ ಅವನು ನನ್ನ ಲೋಕದಲ್ಲಿದ್ದು ಪತಿಭಕ್ತಳಾದ ತನ್ನ ಪತ್ನಿಯನ್ನು ನಿರೀಕ್ಷಿಸುವನು.

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಕರ್ಮಣಾಂ ಕರ್ಮಚೋತ್ತಮಂ ।
ಋಷಯೋ ಮಾಂ ನ ಪಶ್ಯಂತಿ ಮಮ ಕರ್ಮಪಥೇ ಸ್ಥಿತಾಃ ॥ ೪೩ ॥

ದೃಷ್ಟವ್ಯಾ ಮಮ ಲೋಕೇಷು ಋಷಯೋಽಪಿ ವರಾನನೇ ।
ಕಿಂ ಪುನರ್ಮಾನುಷಾ ಯೇ ಚ ಮಮ ಕರ್ಮವ್ಯವಸ್ಥಿತಾಃ ॥ ೪೪ ॥

ಅನ್ಯದೇವೇಷು ಯೇ ಭಕ್ತಾ ಮೂಢಾ ವೈ ಪಾಪಚೇತಸಃ ।
ಮಮ ಮಾಯಾ ವಿಮೂಢಾಸ್ತೇ ನ ಪ್ರಪದ್ಯಂತಿ ಮಾಧವಿ ॥ ೪೫ ॥

ಮಾಂ ತು ಯೇ ವೈ ಪ್ರಪದ್ಯಂತೇ ಮೋಕ್ಷಕಾಮಾ ವಸುಂಧರೇ ।
ತಾನಹಂ ಭಾವಸಂಸಿದ್ಧಾನ್ಬುಧ್ವಾ ಸಂವಿಭಜಾಮಿ ವೈ ॥ ೪೬ ॥

ಯೇನ ತ್ವಂ ಪರಯಾ ಶಕ್ತ್ಯಾ ಧಾರಿತಾಸಿ ಮಯಾ ಧರೇ ।
ತೇನೇದಂ ಕಥಿತಂ ದೇವಿ ಆಖ್ಯಾನಂ ಧರ್ಮಸಂಯುತಂ ॥ ೪೭ ॥

೪೩-೪೫. ಸುಂದರಮುಖೀ, ಕರ್ಮಗಳಲ್ಲಿ ಉತ್ತಮವಾದ ಬೇರೊಂದು ಕರ್ಮವನ್ನು ನಿನಗೆ ಹೇಳುತ್ತೇನೆ. ನನ್ನ ಕರ್ಮಮಾರ್ಗವನ್ನನುಸರಿಸಿದರೂ ಅನ್ಯ ದೇವತೆಗಳಲ್ಲಿ ಭಕ್ತರಾದ ಋಷಿಗಳೂ ಕೂಡ ನನ್ನನ್ನು ಕಾಣಲಾರರು. ನನ್ನ ಲೋಕದಲ್ಲಿ ಅಂತಹ ಋಷಿಗಳನ್ನು ಹುಡುಕಬೇಕಾಗಿರುವುದು. ಹೀಗಿರುವಾಗ ನನ್ನ ಕರ್ಮಗಳಲ್ಲಿ ನಿರತರಾದರೂ ಅನ್ಯ ದೇವಭಕ್ತರಾದ ಮನುಷ್ಯರ ವಿಚಾರವನ್ನು ಹೇಳುವುದೇನಿದೆ? ಯಾರು ಅನ್ಯದೇವತೆಗಳಲ್ಲಿ ಭಕ್ತರೂ, ಮೂಢರೂ, ಪಾಪ ಚಿತ್ತರೂ ಆಗಿರುವರೋ ಅವರು ನನ್ನ ಮಾಯೆಯಿಂದ ಮತ್ತಷ್ಟು ಮೂಢರಾಗಿ ನನ್ನನ್ನು ಸೇರದಿರುವರು.

೪೬. ಮೋಕ್ಷಕಾಮರಾಗಿ ಯಾರು ನನ್ನನ್ನು ಆಶ್ರಯಿಸುವರೋ ಅಂತಹ ಭಾವಸಂಸಿದ್ಧರನ್ನು ನಾನು ಬುದ್ಧಿಯಿಂದ ನಿರ್ಣಯಿಸುವೆನು.

೪೭. ಧರೇ, ದೇವಿ, ನಾನು ಪರಶಕ್ತಿಯಿಂದ ನಿನ್ನನ್ನು ಧರಿಸಿರುವುದರಿಂದ ಧರ್ಮಯುತವಾದ ಈ ಮಾತನ್ನು ಹೇಳಿದ್ದೇನೆ.

ಪಿಶುನಾಯ* ನ ದಾತವ್ಯಂ ನ ಚ ಮೂರ್ಖಾಯ ಮಾಧವಿ ।
ತತೋ ನ ಚೋಪದಿಷ್ಟಾಯ ನ ಶಠಾಯ ಪ್ರದಾಪಯೇತ್ ॥ ೪೮ ॥

ನಾ ದೀಕ್ಷಿತಾಯ ದಾತವ್ಯಂ ನೋಪಸಸ್ಪಾಯ ಯತ್ನತಃ ।
ಶಠಾಯ ಚ ನ ದಾತವ್ಯಂ ನಾಸ್ತಿಕಾಯ ನ ಮಾಧವಿ ॥ ೪೯ ॥

ವರ್ಜಯಿತ್ವಾ ಭಾಗವತಂ ಮಮ ಕರ್ಮಪರಾಯಣಂ ॥ ೫೦ ॥

ಏತತ್ತೇ ಕಥಿತಂ ದೇವಿ ಮಮ ಧರ್ಮಂ ಮಹೌಜಸಂ ।
ಸರ್ವಲೋಕಹಿತಾರ್ಥಾಯ ಕಿಮನ್ಯತ್ಪರಿಪೃಚ್ಛಸಿ ॥ ೫೧ ॥

ಇತಿ ಶ್ರೀವರಾಹಪುರಾಣೇ ದ್ವಾತ್ರಿಂಶದಪರಾಧಕಥನಂ ನಾಮ ಸಪ್ತದಶಾಧಿಕಶತತಮೋಽಧ್ಯಾಯಃ

೪೮-೫೦. ಮಾಧವಿ, ನನ್ನ ಪೂಜಾದಿಕರ್ಮಗಳಲ್ಲಿ ನಿರತನಾದವನಿಗೆ ಹೊರತು ಪಿಶುನ*ನಿಗೂ, ಮೂರ್ಖನಿಗೂ, ಕುತ್ಸಿತನಿಗೂ, ದೀಕ್ಷಿತನಲ್ಲದವನಿಗೂ, ಪ್ರಯತ್ನಪೂರ್ವಕವಾಗಿ ನಾಸ್ತಿಕನಿಗೂ ಈ ವಿಚಾರವನ್ನು ಹೇಳಕೂಡದು.

೫೧. ದೇವಿ, ಅತಿಬಲತೇಜಗಳುಳ್ಳ ನನ್ನ ಈ ಧರ್ಮವನ್ನು ಲೋಕಹಿತಕ್ಕಾಗಿ ನಿನಗೆ ಹೇಳಿದ್ದೇನೆ. ಬೇರಾವುದನ್ನು ಕೇಳುವೆ?

ಅಧ್ಯಾಯದ ಸಾರಾಂಶ :—

ಶ್ರೀ ವರಾಹನು ಭೂದೇವಿಗೆ ಅಭೋಜ್ಯಾದಿಯಾದ ಮೂವತ್ತೆರಡು ಅಪರಾಧಗಳ ಸ್ವರೂಪವನ್ನೂ, ದೃಢವ್ರತೋತ್ತಮ ಕರ್ಮಗಳನ್ನೂ ಹೇಳುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಹದಿನೇಳನೆಯ ಅಧ್ಯಾಯ.

---

* ಪಿಶುನ=ಚಾಡಿ ಹೇಳುವವನು, ಕ್ರೂರಿ, ದುಷ್ಟ.

॥ ಶ್ರೀಃ ॥

-X-

ಅಷ್ಟಾದಶಾಧಿಕಶತತಮೋಽಧ್ಯಾಯಃ

ಅಥ ದೇವೋಪಚಾರವಿಧಿಃ

॥ ಶ್ರೀ ವರಾಹ ಉವಾಚ ॥

ಶೃಣು ತತ್ತ್ವೇನ ಮೇ ಭದ್ರೇ ಪ್ರಾಯಶ್ಚಿತ್ತಂ ಯಥಾವಿಧಿ ।
ಯಥಾವತ್ಸ ಚ ದಾತವ್ಯೋ ಮಮ ಭಕ್ತೇನ ವಿದ್ಯಯಾ ॥ ೧ ॥

ವಕ್ಷ್ಯಮಾಣೇನ ಮಂತ್ರೇಣ ಉದ್ಧೃತ್ಯ ದಂತಕಾಷ್ಠಕಂ ।
ದೀಪಂ ನ ಜ್ವಾಲಯೇತ್ತಾವದ್ಯಾವನ್ನ ಸ್ಪೃಶ್ಯತೇ ಧರಾ ॥ ೨ ॥

ದೀಪೇ ಪ್ರಜ್ವಾಲಿತೇ ತತ್ರ ಹಸ್ತಶೌಚಂ ತು ಕಾರಯೇತ್ ।
ತತಃ ಪ್ರಕ್ಷಾಲ್ಯ ಹಸ್ತೌ ತು ಪುನರೇವಮುಪಾಗತಃ ॥ ೩ ॥

ನೂರಹದಿನೆಂಟನೆಯ ಅಧ್ಯಾಯ

ದೇವರ ಉಪಚಾರವಿಧಿ.

೧. ಶ್ರೀವರಾಹ—ಭದ್ರೇ, ನಿಜವಾಗಿಯೂ ಶಾಸ್ತ್ರೋಕ್ತವಾಗಿ ನಾನು ಹೇಳುವ ಪ್ರಾಯಶ್ಚಿತ್ತವನ್ನೂ, ನನ್ನ ಭಕ್ತನು ಜ್ಞಾನದಿಂದ ನನಗೆ ಹೇಗೆ ಉಪಚಾರವನ್ನು ಮಾಡಬೇಕೆಂಬುದನ್ನೂ ಕೇಳು.

೨. ಮುಂದೆ ಹೇಳುವ ಮಂತ್ರದಿಂದ ಹಲ್ಲುಜ್ಜುವ ಕಡ್ಡಿಯನ್ನು ತೆಗೆದುಕೊಳ್ಳಬೇಕು. ಭೂಮಿಯನ್ನು ಮುಟ್ಟುವವರೆಗೂ ದೀಪವನ್ನು ಹತ್ತಿಸಕೂಡದು.

೩–೫. ದೀಪವನ್ನು ಹತ್ತಿಸಿದ ಬಳಿಕ ಕೈತೊಳೆದುಕೊಂಡು, ಮತ್ತೆ ದೇವರಸಮೀಪಕ್ಕೆ ಹೋಗಿ, ಪಾದಗಳಿಗೆ ವಂದಿಸಿ, ದಂತಶುದ್ಧಿಯನ್ನು ಮಾಡಿಸ

ವಂದಯಿತ್ವಾಸ್ಯ ಚರಣೌ ದಂತಧಾವನಮಾನಯೇತ್ ।
ಅನೇನೈವ ತು ಮಂತ್ರೇಣ ದದ್ಯಾದ್ವೈ ದಂತಕಾಷ್ಠಕಂ ॥ ೪ ॥

ಮಂತ್ರಶ್ಚ :— ಭುವನಭವನ ರವಿಸಂಹರಣ ಅನಂತೋ
ಮಧ್ಯಶ್ಚೇತಿ ಗೃಹ್ಣೇಮಂ ಭುವನಂ ದಂತಧಾವನಂ ॥ ೫ ॥

ಯತ್ತ್ವಯಾ ಭಾಷಿತಂ ಸರ್ವಮೇವಂ ಧರ್ಮವಿನಿಶ್ಚಯಂ ।
ದಂತಧಾವನಂ ದಂತೇ ದದ್ಯಾದ್ಯಾವತ್ಕರ್ಮ ವಸುಂಧರೇ ॥ ೬ ॥

ನಿರ್ಮಾಲ್ಯಂ ಶಿರಸೋತ್ತಾರ್ಯ ಧೃತ್ವಾ ಶಿರಸಿ ಚಾತ್ಮನಃ ।
ಪಶ್ಚಾತ್ತು ಜಲಪೂತೇನ ತತೋ ಹಸ್ತೇನ ಸುಂದರಿ ॥ ೭ ॥

ಕಾರ್ಯಾಣಿ ಮುಖಕರ್ಮಾಣಿ ಸ್ವಲ್ಪೇನ ಸಲಿಲೇನ ಚ ॥ ೮ ॥

ಮುಖಪ್ರಕ್ಷಾಲನೇ ಚೇಮಂ ಶೃಣು ಮಂತ್ರಂ ಚ ಸುಂದರಿ ।
ಇಷ್ಟ್ವೇವ ಮುಕ್ತಮಂತ್ರೇಣ ಸಂಸಾರಾತ್ತು ಪ್ರಮುಚ್ಯತೇ ॥ ॥ ೯ ॥

ಬೇಕು. "ಭುವನಭವನ ರವಿಸಂಹರಣ ಅನಂತೋ ಮಧ್ಯಶ್ಚೇತಿ ಗೃಹ್ಣೇಮಂ ಭುವನಂ ದಂತಧಾವನಂ" ಎಂಬ ಮಂತ್ರದಿಂದ ಹಲ್ಲುಜ್ಜುವ ಕಡ್ಡಿಯನ್ನರ್ಪಿಸಬೇಕು.

೬. ವಸುಂಧರೇ, ನೀನು ಹೇಳಿದ ಎಲ್ಲಾ ಧರ್ಮನಿರ್ಣಯವೂ ಹೀಗೆಯೇ. ಕರ್ಮವು ನಡೆಯುವವರೆಗೂ ದಂತಶುದ್ಧಿಯ ವಸ್ತುಗಳನ್ನು ದೇವರ ದಂತದಲ್ಲೇ ಅರ್ಪಿಸಬೇಕು.

೭-೮. ಸುಂದರಿ, ನಿರ್ಮಾಲ್ಯವನ್ನು ದೇವರ ಶಿರಸ್ಸಿನಿಂದ ತೆಗೆದು ಪೂಜಕನು ತನ್ನ ತಲೆಯಮೇಲೆ ಧರಿಸಿಕೊಂಡು, ಬಳಿಕ ನೀರಿನಿಂದ ಕೈತೊಳೆದುಕೊಂಡು, ಸ್ವಲ್ಪನೀರಿನಿಂದ ದೇವರ ಮುಖಮಾರ್ಜನ ಕಾರ್ಯಗಳನ್ನು ಮಾಡಬೇಕು.

೯-೧೦. ಮುಖಶುದ್ಧಿಯಲ್ಲಿ ಹೇಳಬೇಕಾದ ಮಂತ್ರವನ್ನು ಹೇಳುತ್ತೇನೆ. ಈ ಮಂತ್ರದಿಂದ ಪೂಜಿಸುವವನು ಸಂಸಾರದಿಂದ ಮುಕ್ತನಾಗುವನು.

ಮಂತ್ರಶ್ಚ—ತದ್ಭಗವನ್ತ್ವಂ ಗುಣಶ್ಚ ಆತ್ಮನಶ್ಚಾಪಿ ಗೃಹ್ಣ
ವಾರಿಣಃ ಸರ್ವದೇವತಾನಾಂ ಮುಖಮೇವಂ ಪ್ರಕ್ಷಾಲಯೇತ್ ॥ ॥ ೧೦ ॥

ಏತೇನ ಮಂತ್ರೇಣ ಸುಗಂಧಧೂಪದೀಪನೈವೇದ್ಯಂ ಪುನರೇವಂ
ಸಮರ್ಪಯೇತ್ ॥ ॥ ೧೧ ॥

ತತಃ ಪುಷ್ಪಾಂಜಲಿಂ ದತ್ವಾ ಭಗವನ್ಭಕ್ತವತ್ಸಲ ।
ನಮೋ ನಾರಾಯಣೇತ್ಯುಕ್ತ್ವಾ ಇಮಂ ಮಂತ್ರಮುದೀರಯೇತ್ ॥ ೧೨ ॥

ಮಂತ್ರಜ್ಞಾನಾಂ ಯಜ್ಞಯಷ್ಟಾರಂ ಭೂತಸ್ರಷ್ಟಾರಮೇವ ಚ ।
ಅಸ್ಯ ಪುಷ್ಪಾಣಿ ಸಂಗೃಹ್ಯ ಕಲ್ಯಮುತ್ಥಾಯ ಮಾಧವಿ ॥ ೧೩ ॥

ಪೂಜಯೇದ್ದೇವದೇವೇಶಂ ಜ್ಞಾನೀ ಭಾಗವತಃ ಶುಚಿಃ ।
ನಿಪತೇದ್ದಂಡವದ್ಭೂಮೌ ಸರ್ವಕರ್ಮಸಮನ್ವಿತಃ ॥ ೧೪ ॥

"ತದ್ಭಗವನ್ತ್ವಂ ಗುಣಶ್ಚ ಆತ್ಮನಶ್ಚಾಪಿ ಗೃಹ್ಣವಾರಿಣಃ ಸರ್ವದೇವತಾನಾಂ ಮುಖಮೇವಂ ಪ್ರಕ್ಷಾಲಯೇತ್'' ಎಂಬ ಈ ಮಂತ್ರದಿಂದ ಮುಖಶುದ್ಧಿಯನು ಮಾಡಿಸಬೇಕು.

೧೧. ಸುಗಂಧಧೂಪದೀಪನೈವೇದ್ಯಗಳನ್ನೂ ಹೀಗೆಯೇ ಮಂತ್ರಪೂರ್ವಕ ವಾಗಿಯೇ ಸಮರ್ಪಿಸಬೇಕು.

೧೨. ಬಳಿಕ ಪುಷ್ಪಾಂಜಲಿಯನ್ನರ್ಪಿಸಿ, "ಭಗವನ್ ಭಕ್ತವತ್ಸಲ ನಮೋ ನಾರಾಯಣಾಯ" ಎಂಬ ಮಂತ್ರವನ್ನು ಹೇಳಬೇಕು.

೧೩–೧೪. ಮಾಧವಿ, ಭಗವದ್ಭಕ್ತನೂ, ಜ್ಞಾನಿಯೂ, ಪರಿಶುದ್ಧನೂ ಆದವನು ಬೆಳಗ್ಗೆ ಎದ್ದು, ಹೂಗಳನ್ನು ಸಂಗ್ರಹಿಸಿ, ಮಂತ್ರಜ್ಞರು ಯಜ್ಞಗಳಿಂದ ಪೂಜಿಸುವ, ಭೂತಗಳನ್ನು ಸೃಜಿಸುವ ದೇವದೇವೇಶನನ್ನು ಅರ್ಚಿಸಬೇಕು ಅರ್ಚಿಸಿ, ನೆಲದಮೇಲೆ ಅವನಿಗೆ ದಂಡಪ್ರಣಾಮವನ್ನು ಮಾಡಬೇಕು.

ಕಾಯಂ ನಿಪತಿತಂ ಕೃತ್ವಾ ಪ್ರಸೀದೇತಿ ಜನಾರ್ದನಂ ।
ಶಿರಸಾ ಚಾಂಜಲಿಂ ಕೃತ್ವಾ ಇಮಂ ಮಂತ್ರಮುದಾಹರೇತ್ ॥ ೧೫ ॥

ಮಂತ್ರೈರ್ಲಬ್ಧ್ವಾ ಸಂಜ್ಞಾಂ ತ್ವಯಿ ನಾಥ ಪ್ರಸನ್ನೇ
ತ್ವದಿಚ್ಛಾತೋ ಹ್ಯಪಿ ಯೋಗಿನಾಂ ಚೈವ ಮುಕ್ತಿಃ ।
ಯತಸ್ತ್ವದೀಯಃ ಕರ್ಮಕರೋಽಹಮಸ್ಮಿ
ತ್ವಯೋಕ್ತಂ ಯತ್ತೇನ ದೇವಃ ಪ್ರಸೀದತು ॥ ೧೬ ॥

ಏವಂ ಮಂತ್ರವಿಧಿಂ ಕೃತ್ವಾ ಮಮ ಭಕ್ತಿವ್ಯವಸ್ಥಿತಃ ।
ಪೃಷ್ಠತೋಽನುಪದಂ ಗತ್ವಾ ಶೀಘ್ರಂ ಯಾವನ್ನ ಹೀಯತೇ ॥ ೧೭ ॥

ಏವಂ ಸರ್ವಂ ಸಮಾದಾಯ ಮಮ ಕರ್ಮದೃಢವ್ರತಃ ।
ಶೀಘ್ರಂ ಮೇಽಭ್ಯಂಜನಂ ದದ್ಯಾತ್ತೈಲೇನಾಥ ಘೃತೇನ ವಾ ॥ ೧೮ ॥

ತತಃ ಸ್ನೇಹಂ ಸಮುದ್ದಿಶ್ಯ ಮಂತ್ರಜ್ಞಃ ಕರ್ಮಕಾರಕಃ ।
ಏವಂ ಚಿತ್ತಂ ಸಮಾಧಾಯ ಇಮಂ ಮಂತ್ರಮುದೀರಯೇತ್ ॥ ೧೯ ॥

೧೫–೧೬. ದಂಡಪ್ರಣಾಮಮಾಡಿ, ಬಳಿಕ ತಲೆಯಮೇಲೆ ಕೈಮುಗಿದು ಕೊಂಡು, ಜನಾರ್ದನ, ಪ್ರಸನ್ನನಾಗು, ಎಂದು, "ನಾಥ, ನಿನ್ನ ಇಚ್ಛೆಯಿಂದ ನೀನು ಒಲಿಯಲು ಯೋಗಿಗಳೂ ಮಂತ್ರಗಳಿಂದ ಜ್ಞಾನವನ್ನು ಪಡೆದು, ಮುಕ್ತರಾಗುವರು. ಆದುದರಿಂದ ನೀನು ಹೇಳಿದ ನಿನ್ನ ಕರ್ಮಗಳನ್ನು ನಾನು ಮಾಡುವವನಾಗಿದ್ದೇನೆ. ಪ್ರಸನ್ನನಾಗು" ಎಂಬ ಅರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಬೇಕು.

೧೭–೧೮. ನನ್ನ ಭಕ್ತಿಯಲ್ಲಿ ನಿರತನಾದವನು ಹೀಗೆ ಮಂತ್ರವಿಧಿಯನ್ನು ನೆರವೇರಿಸಿ ನನಗೆ ಅವನ ಹಿಂಭಾಗವು ಕಾಣಿಸದಂತೆ ಹಿಮ್ಮುಖವಾಗಿ ಬೇಗನೆ ನಡೆದು, ಬೇಕಾದುದೆಲ್ಲವನ್ನೂ ತೆಗೆದುಕೊಂಡು ಬಂದು, ಬೇಗನೆ ನನಗೆ ತುಪ್ಪದಿಂದಲಾಗಲಿ, ಎಣ್ಣೆಯಿಂದಲಾಗಲಿ ಅಭ್ಯಂಜನವನ್ನು ಮಾಡಿಸಬೇಕು.

೧೯–೨೦. ಎಣ್ಣೆತುಪ್ಪಗಳನ್ನು ಲೇಪಿಸುವ ಮಂತ್ರಜ್ಞನು, ಮನಸ್ಸನ್ನು ಸಮಾಧಾನಮಾಡಿಕೊಂಡು, ಲೋಕನಾಥ, ಸರ್ವಲೋಕಸಿದ್ಧಾತ್ಮ, ತುಪ್ಪವನ್ನು

ಮಂತ್ರಾಃ —

ಸ್ನೇಹಂ ಸ್ನೇಹೇನ ಸಂಗೃಹ್ಯ ಲೋಕನಾಥ ಮಯಾ ಕೃತಂ ।
ಸರ್ವಲೋಕೇಷು ಸಿದ್ಧಾತ್ಮಾ ದದಾಮ್ಯಾತ್ಮಕರೇಣ ಚ ॥
ಮಯಾ ಪ್ರೋಕ್ತಃ ಕ್ಷಮಸ್ವೇತಿ ತುಭ್ಯಂ ಚೈವ ನಮೋನಮಃ ॥ ೨೦ ॥

ಏವಂ ಮಂತ್ರಃ ಸಮಾಖ್ಯಾತಃ ತೇನಾಭ್ಯಜ್ಯಾತ್ಪ್ರಥಮಂ ಶಿರಃ ॥ ೨೧ ॥

ದಕ್ಷಿಣಾಂಗಂ ತತೋಽಭ್ಯಜ್ಯಾದ್ವಾಮಾಂಗಂ ತು ತತೋನ ಚ ।
ಪಶ್ಚಾತ್ಪೃಷ್ಠಂ ಸಮಭ್ಯಜ್ಯ ತತೋಽಭ್ಯಜ್ಯಾತ್ಕಟಿಂ ತಥಾ ॥ ೨೨ ॥

ಪಶ್ಚಾಲ್ಲಿಂಪೇತ್ತತೋ ಭೂಮಿಂ ಗೋಮಯೇನ ದೃಢವ್ರತಃ ॥ ೨೩ ॥

ತಸ್ಯ ದೃಷ್ಟ್ವಾ ಶ್ರುತಂ ಭದ್ರೇ ಗೋಮಯೇನ ಸುನಿಶ್ಚಿತಂ ।
ಯಾನಿ ಪುಣ್ಯಾನ್ಯವಾಪ್ನೋತಿ ತಾನಿ ಮೇಗದತಃ ಶೃಣು ॥ ೨೪ ॥

(ಅಥವಾ ಎಣ್ಣೆಯನ್ನು)ಪ್ರೀತಿಯಿಂದ ಸಂಪಾದಿಸಿ. ನನ್ನ ಕಯ್ಯಿಂದಲೇ ನಿನಗೆ ಲೇಪಿಸುತ್ತೇನೆ. ಕ್ಷಮಿಸೆಂದು ಬೇಡುತ್ತೇನೆ. ನಿನಗೆ ನಮಸ್ಕಾರ ನಮಸ್ಕಾರ." ಎಂದು ಅರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಬೇಕು.

೨೧–೨೨. ಹೀಗೆ ಮಂತ್ರವನ್ನು ಹೇಳಿ ಆ ತುಪ್ಪವನ್ನು ಮೊದಲು ದೇವರ ತಲೆಗೂ, ಬಳಿಕ ಬಲಭಾಗದ ಅಂಗಗಳಿಗೂ, ಆಮೇಲೆ ಎಡಭಾಗದ ಅಂಗಕ್ಕೂ, ಅನಂತರ ಹಿಂಭಾಗಕ್ಕೂ, ಆಮೇಲೆ ನಡುವಿಗೂ ಲೇಪಿಸಬೇಕು.

೨೩–೨೪. ಬಳಿಕ ದೇವರ ಸಮೀಪದ ನೆಲವನ್ನು ಹಸುವಿನ ಸಗಣಿಯಿಂದ ಸಾರಿಸಬೇಕು. ಭದ್ರೇ, ಹಾಗೆ ಸಾರಿಸುವುದರಿಂದ ನಿಜವಾಗಿಯೂ ಯಾವ ಪುಣ್ಯವನ್ನು ಪಡೆಯುವನೆಂಬುದನ್ನು ಹೇಳುತ್ತೇನೆ. ಕೇಳು.

ಆಜ್ಯವಶಾನಮಪಿ ತಥಾ ಯಾವಂತಸ್ತೈಲಬಿಂದವಃ ।
ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥
ತತಃ ಪುಣ್ಯಕೃತಾಂಲ್ಲೋಕಾನ್ಪುರುಷೋ ಯೋನುಲಿಪ್ಯತೇ ॥ ೨೫ ॥

ಏಕೈಕಕೇಣಸಂಖ್ಯಾತಃ ಸ್ವರ್ಗಲೋಕೇ ಮಹೀಯತೇ ।
ಏವಂ ಯೋಭ್ಯಂಜಯೇದ್ಗಾತ್ರಂ ತೈಲೇನ ತು ಘೃತೇನ ವಾ ॥ ೨೬ ॥

ತಾವದ್ವರ್ಷಸಹಸ್ರಾಣಿ ಮಮ ಲೋಕೇ ಪ್ರತಿಷ್ಠತೇ ॥ ೨೭ ॥

ಅಥ ಚೋದ್ವರ್ತನಂ ಭದ್ರೇ ಪ್ರವಕ್ಷ್ಯಾಮಿ ಪ್ರಿಯಂ ಮಮ ।
ಯೇನ ಶುದ್ಧ್ಯಂತಿ ಚಾಂಗಾನಿ ಮಮ ಪ್ರೀತಿಶ್ಚ ಜಾಯತೇ ॥ ೨೮ ॥

ಭೋಗಿನಾ ಯದಿ ವಾ ರೋಧ್ರಂ ಯದಿ ಪಿಪ್ಪಲಿಕಾಮಧು ।
ಮಧೂಕಮಶ್ವಪರ್ಣಂ ವಾ ರೋಹಿಣಂ ಚೈವ ಕರ್ಕಟಂ ॥ ೨೯ ॥

ಏತೇಷಾಂ ಪ್ರಾಪ್ಯ ಲಭತೇ ಶಾಸ್ತ್ರಜ್ಞಃ ಕರ್ಮಕಾರಕಃ ।
ಕರೇಣ ಯಸ್ಯ ಚೂರ್ಣೇನ ಪಿಷ್ಟಚೂರ್ಣೇನ ವಾ ಪುನಃ ॥
ಏತದುದ್ವರ್ತನಂ ಕುರ್ಯಾನ್ಮಮ ಗಾತ್ರಸುಖಾವಹಂ ॥ ೩೦ ॥

೨೫–೨೭. ದೇವರ ಅಭ್ಯಂಜನಕ್ಕಾಗಿ ಉಪಯೋಗಿಸುವ ತುಪ್ಪ ಅಥವಾ ಎಣ್ಣೆಯಲ್ಲಿ ಎಷ್ಟು ಬಿಂದುಗಳಿರುವುವೋ ಅಷ್ಟು ಸಹಸ್ರವರ್ಷಕಾಲ, ಅಭ್ಯಂಜನ ಮಾಡಿಸಿದವನು ಸ್ವರ್ಗಲೋಕದಲ್ಲಿ ವಾಸಿಸುವನು. ಬಳಿಕ ಪುಣ್ಯಲೋಕಗಳನ್ನು ಅನುಭವಿಸಿ, ನನ್ನ ಲೋಕದಲ್ಲಿ ನೆಲಸುವನು.

೨೮. ಭದ್ರೇ, ಇನ್ನು ಯಾವುದರಿಂದ ಅಂಗಗಳು ಶುದ್ಧವಾಗುವುವೋ, ನನಗೆ ಸಂತೋಷವುಂಟಾಗುವುದೋ ಅಂತಹ ಮೈಗೆ ಉಜ್ಜುವ ಪುಡಿಯನ್ನು ಹೇಳುತ್ತೇನೆ.

೨೯-೩೦. ಶಾಸ್ತ್ರಜ್ಞನಾದ ಪೂಜಕನು ರೋಧ್ರ(ಅರಗಿನಗಿಡ), ಹಿಪ್ಪಲಿ ಮಧು, ಮಧೂಕ(ಅತಿಮಧುರ), ಅಶ್ವ(ಪರ್ಣ)ಕರ್ಣ(ಮತ್ತಿ), ರೋಹಿಣ (ಹಾಲುವಾಣ), ಕರ್ಕಟ,(ಕಿರಿಮುಲ್ಲಂಗಿ) ಇವುಗಳ ಪುಡಿಯನ್ನು ಸಂಪಾದಿಸಿ, ಅದರಿಂದಾಗಲಿ, ಕರೇಣಯಚೂರ್ಣದಿಂದಾಗಲಿ ಹೆಸರಹಿಟ್ಟೇಮೊದಲಾದುವು ಗಳಿಂದಾಗಲಿ ನನ್ನ ದೇಹಕ್ಕೆ ಹಿತವಾಗುವಂತೆ ಉಜ್ಜಬೇಕು.

ಯದೀಚ್ಛೇತ್ಪರಮಾಂ ಸಿದ್ಧಿಂ ಮಮ ಕರ್ಮಾನುಸಾರಕಃ ॥ ೩೧ ॥

ಏವಮುದ್ವರ್ತನಂ ಕೃತ್ವಾ ಸ್ನಾನಕರ್ಮ ತು ಕಾರಯೇತ್ ।
ತತ ಆಮಲಕಂ ಚೈವ ವಸುಗಂಧಾರ್ಣಮುತ್ತಮಂ ॥ ೩೨ ॥

ತೇನ ಮೇ ಸರ್ವಗಾತ್ರಾಣಿ ಮರ್ದಯಿತ್ವಾ ದೃಢವ್ರತಃ ।
ಜಲಕುಂಭಂ ತತೋ ಗೃಹ್ಯ ಇಮಂ ಮಂತ್ರಮುದಾಹರೇತ್ ॥ ೩೩ ॥

ದೇವಾನಾಂ ದೇವ ದೇವೋಽಸಿ ದೇವೋಽನಾದಿರಭೂಃ ಪರಃ ।
ತವ ವ್ಯಕ್ತಸ್ವರೂಪೇಣ ಸ್ನಾನಂ ಗೃಹ್ಣೀಷ್ವ ಮೇನಘ ॥ ೩೪ ॥

ಏವಂ ತು ಸ್ನಪನಂ ಕುರ್ಯಾತ್ ಮಮ ಮಾರ್ಗಾನುಸಾರಕಃ ।
ಅಥ ಸೌವರ್ಣಕುಂಭೇನ ರಜತಸ್ಯ ಘಟೇನ ವಾ ॥ ೩೫ ॥

ಏತೇಷಾಮಪ್ಯಲಾಭೇ ತು ಕಮಜ್ಞಃ ಕರ್ಮ ಕಾರಯೇತ್ ।
ತಾಮ್ರಕುಂಭಮಯೇನೈವ ಕುರ್ಯಾತ್ಸ್ನಪನಮುತ್ತಮಂ ॥ ೩೬ ॥

---

೩೧. ಪರಮಸಿದ್ಧಿಯನ್ನು ಬಯಸುವುದಾದರೆ, ಕರ್ಮಾಸಕ್ತನಾದ ನನ್ನ ಪೂಜಕನು ಹಾಗೆ ಚೂರ್ಣಗಳಿಂದ ನನ್ನ ಅವಯವಗಳನ್ನು ಉಜ್ಜಬೇಕು.

೩೨-೩೪. ಹಾಗೆ ಚೂರ್ಣಗಳನ್ನು ಉಜ್ಜಿ ಸ್ನಾನಮಾಡಿಸಬೇಕು. ಬಳಿಕ ಆಮಲಕ (ನೆಲ್ಲಿಕಾಯಿ) ಮತ್ತು ವಸುಗಂಧಾರ್ಣ(?)ದ ಉತ್ತಮಚೂರ್ಣದಿಂದ ನನ್ನ ಸರ್ವಾವಯವವನ್ನೂ ಮರ್ದಿಸಿ, ಬಳಿಕ ನೀರಿನ ಕಲಶವನ್ನು ತೆಗೆದುಕೊಂಡು, "ದೇವ, ನೀನು ದೇವತೆಗಳಿಗೂ ದೇವನಾಗಿದ್ದೀಯೆ. ಅನಾದಿಯೂ, ಪರನೂ ಆಗಿದ್ದೀಯೆ. ಪಾಪರಹಿತನೇ, ನಿನ್ನ ವ್ಯಕ್ತರೂಪದಿಂದ ನಾನು ಮಾಡಿಸುವ ಸ್ನಾನವನ್ನು ಪರಿಗ್ರಹಿಸು." ಎಂಬರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಬೇಕು.

೩೫-೩೬. ನನ್ನ ಮಾರ್ಗವನ್ನನುಸರಿಸುವವನು ಮಂತ್ರವನ್ನು ಹೇಳಿ, ಚಿನ್ನದ, ಬೆಳ್ಳಿಯ ಇಲ್ಲವಾದರೆ ತಾಮ್ರದ ಕೊಡದ ಶುದ್ಧವಾದ ನೀರಿನಿಂದ ಚೆನ್ನಾಗಿ ಅಭಿಷೇಕಮಾಡಿಸಬೇಕು.

ಏವಂ ತು ಸ್ನಪನಂ ಕೃತ್ವಾ ವಿಧಿದೃಷ್ಟೇನ ಕರ್ಮಣಾ |
ಪಶ್ಚಾದ್ಗಂಧಃ ಪ್ರದಾತವ್ಯಃ ಪ್ರಕೃಷ್ಟೋ ಮಂತ್ರಸಂಯುತಃ ॥ ೩೭ ॥

ಸರ್ವಗಂಧಾಃ ಸೌಮನಸ್ಯಾಃ ಸರ್ವವರ್ಣಾಶ್ಚ ತೇ ಮತಾಃ |
ಉತ್ಪನ್ನಾಃ ಸರ್ವಲೋಕೇಷು ತ್ವಯಾ ಸತ್ಯೇಷು ಯೋಜಿತಾಃ ||
ಮಯಾ ಚ ತೇ ತವಾಂಗೇಷು ತಾನಾವಹ ಶುಚೀನ್ಪ್ರಭೋ || ೩೮ ||

ಮಮ ಭಕ್ತ್ಯಾ ಸುಸಂತುಷ್ಟಃ ಪ್ರತಿಗೃಹ್ಣೀಷ್ವ ಮಾಧವ |
ಏವಂ ಗಂಧಾಂಸ್ತತೋ ದತ್ವಾ ಉತ್ಕೃಷ್ಟಂ ಕರ್ಮ ಕಾರಯೇತ್ || ೩೯ ||

ಕರ್ಮಣ್ಯಾನ್ಯಪಿ ಮಾಲ್ಯಾನಿ ತತೋ ಮಹ್ಯಂ ಪ್ರದಾಪಯೇತ್ |
ತದೇವ ಚಾರ್ಚನಂ ಕೃತ್ವಾ ಕರ್ಮಣ್ಯಃ ಕರ್ಮಸಮ್ಮಿತಃ ॥ ೪೦ ॥

---

೩೭. ಹೀಗೆ ಅಭಿಷೇಕಮಾಡಿ, ಶಾಸ್ತ್ರೋಕ್ತವಾದ ರೀತಿಯಿಂದ ಮಂತ್ರಪೂರ್ವಕವಾಗಿ ಉತ್ತಮವಾದ ಗಂಧವನ್ನು ಅಧಿಕವಾಗಿ ಲೇಪಿಸಬೇಕು.

೩೮–೩೯. "ಸರ್ವಗಂಧಾಃ ಸೌಮನಸ್ಯಾಃ ಸರ್ವವರ್ಣಾಶ್ಚ ತೇ ಮತಾಃ | ಉತ್ಪನ್ನಾಸ್ಸರ್ವಲೋಕೇಷು ತ್ವಯಾ ಸತ್ಯೇಷು ಯೋಜಿತಾಃ | ಮಯಾ ಚ ತೇ ತವಾಂಗೇಷು ತಾನಾವಹ ಶುಚೀನ್ಪ್ರಭೋ | ಮಮ ಭಕ್ತ್ಯಾ ಸುಸಂತುಷ್ಟಃ ಪ್ರತಿಗೃಹ್ಣೀಷ್ವ ಮಾಧವ |" ಎಂಬ ಮಂತ್ರವನ್ನು ಹೇಳಿ, ಗಂಧಗಳನ್ನು ಅರ್ಪಿಸಿ, ಕಾರ್ಯಗಳನ್ನು ಚೆನ್ನಾಗಿ ಮಾಡಬೇಕು.

೪೦. ಬಳಿಕ ಕರ್ಮಾರ್ಹವಾದ ಹೂವಿನ ಮಾಲೆಗಳನ್ನೂ ನನಗೆ ಅರ್ಪಿಸಬೇಕು. ಪೂಜೆಮಾಡಲರ್ಹನಾದವನು ಅಂತಹ ಹೂಗಳಿಂದಲೇ ಅರ್ಚನೆಯನ್ನೂ ಮಾಡಬೇಕು.

ತತಃ ಪುಷ್ಪಾಂಜಲಿಂ ದತ್ವಾ ಇಮಂ ಮಂತ್ರಮುದೀರಯೇತ್ |
ಜಲಜಂ ಸ್ಥಲಜಂ ಚೈವ ಪುಷ್ಪಂ ಕಾಲೋದ್ಭವಂ ಶುಚಿ ||
ಮಮ ಸಂಸಾರಮೋಕ್ಷಾಯ ಗೃಹ್ಣ ಗೃಹ್ಣ ಮಮಾಚ್ಯುತ || ೪೧ ||

ಏವಂ ವಿಧೋಪಚಾರೇಣ ಅರ್ಚಯಿತ್ವಾ ಮಮ ಪ್ರಿಯಂ |
ಪಶ್ಚಾದ್ಧೂಪಂ ಚ ಮೇ ದದ್ಯಾತ್ಸುಗಂಧದ್ರವ್ಯಸಮ್ಮಿತಂ || ೪೨ ||

ಧೂಪಂ ಗೃಹ್ಯ ವಿಧಾನೇನ ಮಮೋಕ್ತಂ ಸುಖವಲ್ಲಭಂ |
ಉಭಯೋಃ ಕುಲೇಷ್ವಾತ್ಮಾ ಧೂಪಮಂತ್ರಮುದೀರಯೇತ್ || ೪೩ ||

ವನಸ್ಪತಿರಸಂ ದಿವ್ಯಂ ಬಹುದ್ರವ್ಯಸಮನ್ವಿತಂ |
ಮಮ ಸಂಸಾರಮೋಕ್ಷಾಯ ಧೂಪೋಽಯಂ ಪ್ರತಿಗೃಹ್ಯತಾಂ || ೪೪ ||

---

೪೧. ಬಳಿಕ ಬೊಗಸೆಯಿಂದ (ಎರಡು ಕೈತುಂಬ) ಹೂಗಳನ್ನು ಅರ್ಪಿಸಿ, "ಅಚ್ಯುತನೇ, ನೀರಲ್ಲೂ, ನೆಲದಲ್ಲೂ, ಕಾಲಾನುಸಾರವಾಗಿ ದೊರೆತ ಶುಚಿಯಾದ ಹೂವನ್ನು ನನ್ನ ಸಂಸಾರಮೋಕ್ಷಕ್ಕಾಗಿ ಸ್ವೀಕರಿಸು, ಸ್ವೀಕರಿಸು." ಎಂಬ ಅರ್ಥವುಳ್ಳ ಮೇಲಿನ ಮಂತ್ರವನ್ನು ಹೇಳಬೇಕು.

೪೨. ಈ ವಿಧವಾದ ಉಪಚಾರದಿಂದ ಅರ್ಚಿಸಿ, ಬಳಿಕ ನನಗೆ ಪ್ರಿಯವೂ ಸುಗಂಧದ್ರವ್ಯಗಳಿಂದಕೂಡಿದುದೂ ಆದ ಧೂಪವನ್ನು ಹಾಕಬೇಕು.

೪೩. ನನಗೆ ಇಷ್ಟವೂ, ಸುಖಕರವೂ ಶಾಸ್ತ್ರೋಕ್ತವೂ ಆದ ಧೂಪವನ್ನು ಹಿಡಿದುಕೊಂಡು, ಮುಂದಿನಂತೆ ಹೇಳಬೇಕು.

೪೪. "ವನಸ್ಪತಿರಸದ, ದಿವ್ಯವೂ, ಬಹುದ್ರವ್ಯಸಂಯುಕ್ತವೂ ಆದ ಈ ಧೂಪವನ್ನು ನನ್ನ ಸಂಸಾರವಿಮೋಚನೆಗಾಗಿ ಪರಿಗ್ರಹಿಸು."

॥ ಮಂತ್ರಃ ॥

ಶಾಂತಿರ್ವೈ ಸರ್ವದೇವಾನಾಂ ಶಾಂತಿರ್ಮಮ ಪರಾಯಣಂ ।
ಸಾಂಖ್ಯಾನಾಂ ಶಾಂತಿಯೋಗೇನ ಧೂಪಂ ಗೃಹ್ಣ ನಮೋಽಸ್ತುತೇ ॥ ೪೫ ॥

ತ್ರಾತಾ ನಾನ್ಯೋಽಸ್ತಿ ಮೇ ಕಶ್ಚಿತ್ತ್ವಾಂ ವಿಹಾಯ ಜಗದ್ಗುರೋ ॥ ೪೬ ॥

ಏವಮಭ್ಯರ್ಚನಂ ಕೃತ್ವಾ ಮಾಲ್ಯಗಂಧಾನುಲೇಪನೈಃ ।
ಪಶ್ಚಾದ್ವಸ್ತ್ರಂ ಚ ವೈ ದದ್ಯಾತ್ .ಕ್ಷೌಮಶುಕ್ಲಂ ಸಪೀತಕಂ ॥ ೪೭ ॥

ಏವಂ ಚೈವ ಸಮಾದಾಯ ಕೃತ್ವಾ ಶಿರಸಿ ಚಾಂಜಲಿಂ ।
ದಿವ್ಯಯೋಗಂ ಸಮಾದಾಯ ಇಮಂ ಮಂತ್ರಮುದೀರಯೇತ್ ॥ ೪೮ ॥

೪೫-೪೬. "ಶಾಂತಿರ್ವೈ ಸರ್ವದೇವಾನಾಂ ಶಾಂತಿರ್ಮಮ ಪರಾಯಣಂ। ಸಾಂಖ್ಯಾನಾಂ ಶಾಂತಿಯೋಗೇನ ಧೂಪಂ ಗೃಹ್ಣ ನಮೋಽಸ್ತುತೇ । ತ್ರಾತಾ ನಾನ್ಯೋಽಸ್ತಿ ಮೇ ಕಶ್ಚಿತ್ತ್ವಾಂ ವಿಹಾಯ ಜಗದ್ಗುರೋ" ಎಂಬುದೇ ಧೂಪಮಂತ್ರ.

೪೭. ಹೀಗೆ ಮಾಲೆಗಂಧಲೇಪನಗಳಿಂದ ಅರ್ಚನೆಯನ್ನು ಮಾಡಿ, ಬಳಿಕ ಬೆಳ್ಳಗೂ ಹಳದಿಯಾಗಿಯೂ ಇರುವ ಪಟ್ಟೆಯ ವಸ್ತ್ರವನ್ನು ಅರ್ಪಿಸಬೇಕು.

೪೮-೪೯. ವಸ್ತ್ರವನ್ನು ತೆಗೆದುಕೊಂಡು ನೆತ್ತಿಯಮೇಲೆ ಕೈಮುಗಿದು ಕೊಂಡು ದಿವ್ಯಯೋಗವನ್ನು ವಹಿಸಿ,— " ಪ್ರೀಯತಾಂ ಭಗವಾನ್ಪುರುಷೋ

ಪ್ರೀಯತಾಂ ಭಗವಾನ್ಪುರುಷೋತ್ತಮಃ
ಶ್ರೀನಿವಾಸಃ ಶ್ರೀಮಾನಾನಂದರೂಪಃ ।
ಗೋಪ್ತಾ ಕರ್ತಾದಿಕರ್ತಾ *ಮಾನ್ಯನಾಥ
ಭೂತನಾಥ ಆದಿರವ್ಯಕ್ತರೂಪಃ ॥
ಕ್ಷೌಮಂ ವಸ್ತ್ರಂ ಪೀತರೂಪಂ ಮನೋಜ್ಞಂ
ದೇವಾಂಗೇ ಸ್ವೇ ಗಾತ್ರಪ್ರಚ್ಛಾದನಾಯ ॥ ೪೯

ವಸ್ತ್ರೈರ್ವಿಭೂಷಣಂ ಕೃತ್ವಾ ಮಮ ಗಾತ್ರಾನುಸಾರಿ ಯತ್ ।
ಪಶ್ಚಾತ್ಪುಷ್ಪಂ ಗೃಹೀತ್ವಾ ತು ಆಸನಂ ಚೋಪಕಲ್ಪಯೇತ್ ॥
ಗೃಹೀತ್ವಾ ಪ್ರಣವಾದ್ಯೇನ ಧರ್ಮಪುಣ್ಯೇನ ಸಂವೃತಃ ॥ ೫೦ ॥

ಇದಂ ಪರಾಯಣಂ ಪರಸ್ಪರಪ್ರೀತಿಕರಂ ಪ್ರಾಣರಕ್ಷಣಂ ।
ಪ್ರಾಣಿನಾಂ ಸ್ವಿಷ್ಟಂ ತದನುಕಲ್ಪಂ ಸತ್ಯಮುಪಯುಕ್ತಮಾತ್ಮನೇ
ತದ್ದೇವ ಗೃಹಾಣ ॥ ೫೧ ॥

ತ್ತಮಃ ॥ ಶ್ರೀನಿವಾಸಃ ಶ್ರೀಮಾನಾನಂದರೂಪಃ । ಗೋಪ್ತಾ ಕರ್ತಾಧಿಕರ್ತಾ ಮಾನ್ಯನಾಥೋ । ಭೂತನಾಥ ಆದಿರವ್ಯಕ್ತರೂಪಃ । ಕ್ಷೌಮಂ ವಸ್ತ್ರಂ ಪೀತ ರೂಪಂ ಮನೋಜ್ಞಂ । ದೇವಾಂಗೇ ಸ್ವೇ ಗಾತ್ರಪ್ರಚ್ಛಾದನಾಯ । ” ಎಂಬ ಮಂತ್ರವನ್ನು ಹೇಳಬೇಕು.

೫೦-೫೧. ಹೀಗೆ ನನ್ನ ದೇಹಕ್ಕೆ ತಕ್ಕ ವಸ್ತ್ರಗಳನ್ನಲಂಕರಿಸಿ ಬಳಿಕ ಹೂವನ್ನು ತೆಗೆದುಕೊಂಡು ಧರ್ಮಪುಣ್ಯದಿಂದ ಕೂಡಿದವನಾಗಿ ಪೀಠವನ್ನು ಪರಿಕಲ್ಪಿಸಿ ಪ್ರಣವಾದಿಮಂತ್ರದಿಂದ ಹಿಡಿದುಕೊಂಡು “ ಇದಂ ಪರಾಯಣಂ ಪರಸ್ಪರಪ್ರೀತಿಕರಂ ಪ್ರಾಣರಕ್ಷಣಂ ಪ್ರಾಣಿನಾಂ ಸ್ವಿಷ್ಟಂ ತದನುಕಲ್ಪಂ ಸತ್ಯಮುಪಯುಕ್ತಮಾತ್ಮನೇ ತದ್ದೇವ ಗೃಹಾಣ ” ಎಂಬ ಮಂತ್ರವನ್ನು ಹೇಳಬೇಕು.

---

* ನಾನ್ಯ [ಕ.]

ಏವಂ ತು ಪ್ರಾಪಣಂ ಕೃತ್ವಾ ಮಮ ಮಾರ್ಗಾನುಸಾರಕಃ ।
ಮುಖಪ್ರಕ್ಷಾಲನಂ ದತ್ವಾ ಶೀಘ್ರಮೇವ ಪ್ರಕಲ್ಪಿತಂ ॥ ೫೨ ॥

ಶುಚಿಃ ಸ್ತುವತಿ ದೇವಾನಾಮೇತದೇವ ಪರಾಯಣಂ ।
ಶೌಚಾರ್ಥಂ ತು ಜಲಂ ಗೃಹ್ಣನ್ಕೃತ್ವಾ ಪ್ರಾಪಣಮುತ್ತಮಂ ॥ ೫೩ ॥

ಏವಂ ತು ಭೋಜನಂ ದತ್ವಾ ವ್ಯಪನೀಯ ತು ಪ್ರಾಪಣಂ ।
ತಾಂಬೂಲಂ ತು ತತೋ ಗೃಹ್ಯ ಚೇಮಂ ಮಂತ್ರಮುದೀರಯೇತ್ ॥ ೫೪ ॥

ಮಂತ್ರಃ—ಅಲಂಕಾರಂ ಸರ್ವತೋ ದೇವಾನಾಂ ದ್ರವ್ಯೋಽನುಕ್ತಃ
ಸರ್ವಸೌಗಂಧಿಕಾದಿಭಿಃ ಗೃಹ್ಯ ತಾಂಬೂಲಂ ಲೋಕನಾಥ ವಿಶಿಷ್ಟಮಸ್ಮಾಕಂ
ಚ ಭವನಂ ತವ ಪ್ರತಿಮಾ ಚ ಹ ॥ ॥ ೫೫–೫೬ ॥

ಅಲಂಕಾರಂ ಮುಖೇ ಶ್ರೇಷ್ಠಂ ತವ ಪ್ರೀತ್ಯಾ ಮಯಾ ಕೃತಂ ।
ಮುಖಪ್ರಸಾಧನಂ ಶ್ರೇಷ್ಠಂ ದೇವ ಗೃಹ್ಣ ಮಯಾ ಕೃತಂ ॥ ೫೭ ॥

೫೨-೫೩. ನನ್ನ ಮಾರ್ಗವನ್ನನುಸರಿರುವ ಪೂಜಕನು ಹೀಗೆಯೇ ನೈವೇದ್ಯವನ್ನು ಸಮರ್ಪಿಸಿ ಒಡನೆಯೇ ಸಿದ್ಧಪಡಿಸಿದ ಶುದ್ಧೋದಕವನ್ನು ಬಾಯನ್ನು ತೊಳೆದುಕೊಳ್ಳುವುದಕ್ಕಾಗಿ ಅರ್ಪಿಸಿ, ಶುಚಿಯಾಗಿ ದೇವತೆಗಳಿಗೂ ಉತ್ತಮಾಶ್ರಯನಾದ ನನ್ನನ್ನೇ ಸ್ತೋತ್ರಮಾಡಬೇಕು. ಹೀಗೆ ಉತ್ತಮವಾದ ನೈವೇದ್ಯ ಪದಾರ್ಥವನ್ನು ಸಿದ್ಧಪಡಿಸಿ ಭೋಜನವನ್ನರ್ಪಿಸಿ, ಬಾಯಿಕೈಕಾಲುಗಳ ಶುದ್ಧಿಗಾಗಿ ನೀರನ್ನೂ ಕೊಡಬೇಕು.

೫೪-೫೭. ಹೀಗೆ ಭೋಜನವನ್ನು ಮಾಡಿಸಿ ನೈವೇದ್ಯಶೇಷವನ್ನು ನನ್ನ ಸಮೀಪದಿಂದ ತೆಗೆದು ಬಳಿಕ ತಾಂಬೂಲವನ್ನು (ತಟ್ಟೆಯಲ್ಲಿ) ಹಿಡಿದುಕೊಂಡು "ಅಲಂಕಾರಂ ಸರ್ವತೋ ದೇವಾನಾಂ ದ್ರವ್ಯೋಽನುಕ್ತಃ ಸರ್ವಸೌಗಂಧಿಕಾದಿಭಿಃ ಗೃಹ್ಯ ತಾಂಬೂಲಂ ಲೋಕನಾಥ ವಿಶಿಷ್ಟಮಸ್ಮಾಕಂ ಚ ಭವನಂ ತವ ಪ್ರತಿಮಾ ಚ ಹ । ಅಲಂಕಾರಂ ಮುಖೇ ಶ್ರೇಷ್ಠಂ ತವ ಪ್ರೀತ್ಯಾ ಮಯಾ ಕೃತಂ । ಮುಖಪ್ರಸಾಧನಂ ಶ್ರೇಷ್ಠಂ ದೇವ ಗೃಹ್ಣ ಮಯಾ ಕೃತಂ ।" ಎಂಬ ಈ ಮಂತ್ರವನ್ನು ಹೇಳಿ, ತಾಂಬೂಲವನ್ನು ಅರ್ಪಿಸಬೇಕು.

ಏತೇನ್ನೈವೋಪಚಾರೇಣ ಮದ್ಭಕ್ತಃ ಕರ್ಮ ಕಾರಯೇತ್ ।
ಅನುಮುಕ್ತೋ ಮಹಾಲೋಕಾನ್ಪಶ್ಯತೇ ಮಮ ನಿತ್ಯಶಃ ॥ ೫೮ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ದೇವೋಪಚಾರವಿಧಿರ್ನಾಮ ಅಷ್ಟಾದಶಾಧಿಕಶತತಮೋಽಧ್ಯಾಯಃ

---

೫೮. ನನ್ನ ಭಕ್ತನು ಈ ಉಪಚಾರಗಳಿಂದಲೇ ನನ್ನ ಪೂಜಾಕರ್ಮವನ್ನು ಮಾಡಬೇಕು. ಮಾಡುವವನು ಈ ಮಾನವ ದೇಹವನ್ನು ಬಿಟ್ಟಬಳಿಕ ಮುಕ್ತನಾಗಿ ನನ್ನ ಮಹಾಲೋಕಗಳನ್ನು ಯಾವಾಗಲೂ ನೋಡುವನು.

ಅಧ್ಯಾಯದ ಸಾರಾಂಶ :—

ಶ್ರೀ ವರಾಹನು ಭೂದೇವಿಗೆ ದೇವರನ್ನು ಪೂಜಿಸುವವನು ಹೇಗೆ ಯಾವ ಮಂತ್ರಗಳಿಂದ ಷೋಡಶೋಪಚಾರಗಳಲ್ಲಿ ಮುಖ್ಯವಾದುವನ್ನು ಅರ್ಪಿಸಬೇಕೆಂಬುದನ್ನು ಹೇಳುವಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರಹದಿನೆಂಟನೆಯ ಅಧ್ಯಾಯ.

॥ ಶ್ರೀಃ ॥

–x–

ಊನವಿಂಶತ್ಯಧಿಕಶತತಮೋಧ್ಯಾಯಃ

ಅಥ ಭೋಜ್ಯನಿಯಮ ವಿಧಿಃ

ಏವಂ ಕರ್ಮವಿಧಿಂ ಶ್ರುತ್ವಾ ಸರ್ವಸಂಸಾರಮೋಕ್ಷಣಂ ।
ಪ್ರಸನ್ನವದನಂ ದೇವಂ ಪುನರ್ವಾಕ್ಯಮುವಾಚ ಹ ॥ ೧ ॥

॥ ಧರಣ್ಯುವಾಚ ॥

ಏವಂ ಮಹೌಜಸಂ ಕರ್ಮ ತವ ಮಾರ್ಗಾನುಸಾರತಃ ।
ತ್ವತ್ತಸ್ತು ಪ್ರಾಪಣವಿಧಿಸ್ತವ ಪ್ರೀತ್ಯಾ ಮಯಾ ಶ್ರುತಃ ॥
ಕೇನ ದ್ರವ್ಯೇಣ ಸಂಯುಕ್ತಂ ತನ್ಮಮಾಚಕ್ಷ್ವ ಮಾಧವ ॥ ೨ ॥

ನೂರಹತ್ತೊಂಬತ್ತನೆಯ ಅಧ್ಯಾಯ

ಭೋಜ್ಯನಿಯಮವಿಧಿ

೧. ಭೂದೇವಿಯು ಹೀಗೆ ಸರ್ವಸಂಸಾರವಿಮೋಚಕವಾದ ದೇವಪೂಜಾ ವಿಧಾನವನ್ನು ಶ್ರೀವರಾಹನಿಂದ ಕೇಳಿ ಮೋಕ್ಷದಾಯಕನೂ, ಪ್ರಸನ್ನಮುಖನೂ ಆದ ಆ ದೇವನೊಡನೆ ಮತ್ತೂ ಮಾತನಾಡಿದಳು.

೨. ಧರಣೀದೇವಿ— ಮಾಧವಾ, ನಿನ್ನ ಕೃಪೆಯಿಂದ ನಿನ್ನ ದಾರಿಯನ್ನನುಸರಿಸಿ ಅತ್ಯುಜ್ಜ್ವಲವೂ, ಬಲಯುತವೂ ಆದ ನಿನ್ನ ಪೂಜಾಕರ್ಮವನ್ನು ಹೇಗೆ ಮಾಡಬೇಕೆಂಬುದನ್ನೂ, ಅದರಲ್ಲೂ ನಿನಗೆ ನೈವೇದ್ಯವನ್ನು ಅರ್ಪಿಸುವ ಕ್ರಮವನ್ನೂ ನಿನ್ನಿಂದಲೇ ಕೇಳಿದೆನು. ನಿನಗೆ ಅರ್ಪಿಸುವ ನೈವೇದ್ಯವು ಯಾವಯಾವ ಪದಾರ್ಥಗಳಿಂದ ಸಿದ್ಧಗೊಳಿಸಿದುದಾಗಿರಬೇಕೆಂಬುದನ್ನು ನನಗೆ ಹೇಳು.

ವಸುಧಾಯಾ ವಚಃ ಶ್ರುತ್ವಾ ವರಾಹಃ ಪ್ರೀತಮಾನಸಃ ।
ಉವಾಚ ಧರ್ಮಸಂಯುಕ್ತಂ ಧರ್ಮಜ್ಞೋ ವಾಕ್ಯಕೋವಿದಃ ॥ ೩ ॥

॥ ಶ್ರೀ ವರಾಹ ಉವಾಚ ॥

ಯೇನ ಮಂತ್ರೇಣ ಸಂಯುಕ್ತೋ ಮಮ ಪ್ರಾಪಣಕಂ ನಯೇತ್ ।
ಸಪ್ತವ್ರೀಹಿಂಸ್ತತೋ ಗೃಹ್ಯ ಪಯಸಾ ಸಹ ಸಂಯುತಂ ॥ ೪ ॥

ಪರಮಂ ತಸ್ಯ ಶಾಕಾನಿ ಮಧುಕೋದುಂಬರಂ ತಥಾ ।
ಏತೇ ಚಾನ್ಯೇ ಚ ಬಹವಶ್ಯತಶೋಥ ಸಹಸ್ರಶಃ ।
ಕರ್ಮಣ್ಯಾಶ್ಚ ತ ಏತೇಷಾಂ ಯೇ ಮಯಾ ಪರಿಕೀರ್ತಿತಾಃ ॥ ೫ ॥

ವ್ರೀಹೀಣಾಂ ಚ ಪ್ರವಕ್ಷ್ಯಾಮಿ ಉಪಯೋಗ್ಯಾನಿ ಮಾಧವಿ ।
ಏಕಾಗ್ರಂ ಮಾನಸಂ ಕೃತ್ವಾ ಪ್ರಾಪಣಂ ಶೃಣು ಸುಂದರಿ ॥ ೬ ॥

---

೩. ಭೂದೇವಿಯ ಮಾತನ್ನು ಕೇಳಿ, ಸಂತೋಷಗೊಂಡಮನವುಳ್ಳವನೂ, ಧರ್ಮಜ್ಞನೂ, ಮಾತಿನಲ್ಲಿ ನಿಪುಣನೂ ಆದ ಶ್ರೀವರಾಹನು ಧರ್ಮಯುಕ್ತವಾದ ಮುಂದಿನ ಮಾತನ್ನು ಹೇಳಿದನು.

೪-೫. ಶ್ರೀವರಾಹ— ಮಾಧವೀ, ಮಂತ್ರಗಳನ್ನರಿತವನು ಯಾವ ಪದಾರ್ಥದಿಂದ ನನ್ನ ನೈವೇದ್ಯವನ್ನು ಸಿದ್ಧಪಡಿಸಬೇಕೆಂಬುದನ್ನು ಗಮನವಿಟ್ಟು ಕೇಳು. ಏಳುಬಗೆಯ ಬತ್ತಗಳನ್ನೂ, ಹಾಲನ್ನೂ, ಮಧೂಕ (ಅತಿಮಧುರ) ಉದುಂಬರಗಳನ್ನೂ, ಉತ್ತಮವಾದ ಸಾವಿರಾರು ಕಾಯಿಪಲ್ಯಗಳಲ್ಲೂ ಬೇರೆಯ ಪದಾರ್ಥಗಳಲ್ಲೂ ಕರ್ಮಾರ್ಹವೆಂದು ನಾನು ಹೇಳಿರುವವುಗಳನ್ನೂ ನನ್ನ ನೈವೇದ್ಯಕ್ಕಾಗಿ ಉಪಯೋಗಿಸಬಹುದು.

೬. ಬತ್ತಗಳಲ್ಲಿಯೂ ನನಗೆ ನೈವೇದ್ಯಕ್ಕೆ ಉಪಯೋಗಿಸಬಹುದಾದುವನ್ನು ಹೇಳುತ್ತೇನೆ. ಸುಂದರಿ, ಮಾಧವೀ, ಮನಸ್ಸಿಟ್ಟು ಕೇಳು.

ಧರ್ಮಚಿಲ್ಲಿಕಶಾಕಂ ಚ ಸುಗಂಧಂ ರಕ್ತಸಾಲಿಕೌ ।
ದೀರ್ಘಶಾಲಿಮಹಾಶಾಲೀ ವರಕುಂಕುಮಮಾಕ್ಷಿಕೌ ॥ ೭ ॥

ಆಮೋದಾಶಿವಸುಂದರ್ಯೌ ಶಿರೀಕಾಕುಲಶಾಲಿಕಾಃ ।
ವಿವಿಧಂ ಯಾವಕಾನ್ನಂ ಚ ಜ್ಞೇಯಾನ್ಯೇತಾನಿ ಕರ್ಮಣಿ ॥ ೮ ॥

ಕರ್ಮಣ್ಯಾ ಮುದ್ಗಮಾಷಾ ವೈ ತಿಲಕಂಗುಕುಲಿತ್ಥಕಾಃ ।
ಗವೇಧುಕಂ ಮಹಾಮೋಹಂ ಮಕುಷ್ಟಮಥವಾ ಹಿ ಜಾಂ ॥
ಶ್ಯಾಮಾಕಮಿತಿ ಚೋಕ್ತಾನಿ ಕರ್ಮಣ್ಯಾನಿ ವಸುಂಧರೇ ॥ ೯ ॥

ಕರ್ಮಣ್ಯಾನಿ ಚ ಶಾಕಾನಿ ವಿಜಾನೀಹಿ ವಸುಂಧರೇ ।
ಏತಾನಿ ಪ್ರತಿಗೃಹ್ಣಾಮಿ ಯಚ್ಚ ಭಾಗವತಂ ಪ್ರಿಯಂ ॥ ೧೦ ॥

೭-೮. ಧರ್ಮಚಿಲ್ಲಿಕ, ಶಾಕ, ಪುಣಗುರಾಜ, ರಕ್ತಸಾಲೆ, ದೀರ್ಘಶಾಲಿ, (ಕಡ್ಡಿ), ಮಹಾಶಾಲಿ (ದಪ್ಪ), ಕುಂಕುಮ (ಕೆಂಬೂತಿ), ಮಕ್ಷಿಕ, ಆಮೋದ, ಶಿವ ಸುಂದರಿ, ಶಿರೀಕ, ಕುಲಶಾಲಿ, ಎಂಬಿವೇ ಮೊದಲಾದ ಬತ್ತಗಳ ಅಕ್ಕಿಯು ಅನ್ನವೂ ಬಗೆಬಗೆಯ ಯವೆಯ ಅನ್ನವೂ ಕರ್ಮಾರ್ಹವಾಗಿ ನನ್ನ ನೈವೇದ್ಯಕ್ಕೆ ತಕ್ಕುದಾಗಿರುವುದು.

೯, ಹೆಸರು, ಉದ್ದು, ಎಳ್ಳು, ಕಂಗು (ನವಣೆ), ಕುಳುತ್ಥ (ಹುರಳಿ), ಗೋಧುವೆ, ಮಹಾಮೋಹ, (?) ಕಾಡುಹೆಸರು, ಸಾವೆ, ಈ ಧಾನ್ಯಗಳೂ ಕರ್ಮಾರ್ಹವಾದುವು.

೧೦. ವಸುಂಧರೆ, ಕರ್ಮಾರ್ಹವಾಗಿ ಭಗವತ್ಪ್ರಿಯವಾಗಿರುವ ಶಾಕ (ಕಾಯಿಪಲ್ಯ) ಗಳನ್ನೂ ನಾನು ಪರಿಗ್ರಹಿಸುತ್ತೇನೆ. ತಿಳಿದುಕೊ.

ಮಾರ್ಗಮಾಂಸಂ ವರಂ ಭಾಗಂ ಶಾಶಂ ಸಮನುಯುಜ್ಯತೇ । ॥ ೧೧ ॥

ಏತಾ ಹಿ ಪ್ರಾಪಣೇ ದದ್ಯಾನ್ನಮ ಚೈತತ್ಪ್ರಿಯಾವಹಂ ॥ ೧೨ ॥

ಯುಂಜಾನೋ ವಿತತೇ ಯಜ್ಞೇ ಬ್ರಾಹ್ಮಣೇ ವೇದಪಾರಗೇ ।
ಭಾಗೋ ಮಮಾಸ್ತಿ ತತ್ರಾಪಿ ಪಶೂನಾಂ ಭಾಗಲಸ್ಯ ಚ ॥ ೧೩ ॥

ಮಾಹಿಷಂ ವರ್ಜಯೇನ್ಮಹ್ಯಂ ಕ್ಷೀರಂ ದಧಿ ಘೃತಂ ತತಃ ॥ ೧೪ ॥

ವರ್ಜಯೇತ್ತತ್ರ ಮಾಂಸಾನಿ ಯಜುಷಾ ವೈ ಷ್ಣವೋಽಶ್ನುತೇ ।
ಪರಂ ಪಾಯಸಮಪಿ ವರ್ಜ್ಯಾನಿ ತನ್ಮಾಂಸಂ ಚೇತಕಃ ಖುರೇ ॥ ೧೫ ॥

ಪಕ್ಷಿಣಾಂ ಚ ಪ್ರವಕ್ಷ್ಯಾಮಿ ಯೇ ಪ್ರಯೋಜ್ಯಾ ವಸುಂಧರೇ ।
ಯೇ ಚೈವ ಮಮ ಕ್ಷೇತ್ರೇಷು ಉಪಯುಜ್ಯಾನಿ ನಿತ್ಯಶಃ ॥ ೧೬ ॥

೧೧-೧೫. ಜಿಂಕೆಯ ಮಾಂಸವು ಉತ್ತಮವಾದುದು. ಗಂಡಾಡಿನ ಮತ್ತು ಮೊಲದ ಮಾಂಸವು ಉಪಯುಕ್ತವಾದುದು. ಇವುಗಳನ್ನು ನನಗೆ ನೈವೇದ್ಯಕ್ಕೆ ಉಪಯೋಗಿಸಬಹುದು ಇವು ನನಗೆ ಇಷ್ಟವಾದುವು. ವೇದ ಪಾರಂಗತನಾದ ಬ್ರಾಹ್ಮಣನು, ವಿಸ್ತಾರವಾದ ಯಜ್ಞದಲ್ಲಿ ಉಪಯೋಗಿಸುವ ಪಶುಗಳಲ್ಲಿ ಅವುಗಳಲ್ಲಿಯೂ ಗಂಡಾಡಿನಲ್ಲಿ ನನಗೆ ಭಾಗವುಂಟು. ಎಮ್ಮೆಯ ಹಾಲು, ಮೊಸರು, ತುಪ್ಪಗಳನ್ನು ನನಗೆ ಅರ್ಪಿಸಬಾರದು.

೧೬-೧೭. ವಸುಂಧರೇ, ಪಕ್ಷಿಗಳಲ್ಲಿ ಯಾವುವನ್ನು ಉಪಯೋಗಿಸಬಹು ದೆಂಬುದನ್ನು ಹೇಳುತ್ತೇನೆ. ಯಾವುವು ನನ್ನ ಕ್ಷೇತ್ರಗಳಲ್ಲಿ ನಿತ್ಯವೂ ಉಪ

ಲಾವಕಂ ವಾರ್ತಿಕಂ ಚೈವ ಪ್ರಶಸ್ತಂ ಚ ಕಪಿಂಜಲಂ ।
ಏತೇ ಚಾನ್ಯೇ ಚ ಬಹವಶ್ಯತಶೋಽಥ ಸಹಸ್ರಶಃ ।
ಮಮ ಕರ್ಮಣಿ ಯೋಗ್ಯಾ ಯೇ ತೇ ಮಯಾ ಪರಿಕೀರ್ತಿತಾಃ ॥ ೧೭ ॥

ಯಸ್ತ್ವೇತತ್ತು ವಿಜಾನೀಯಾತ್ಕರ್ಮಕರ್ತಾ ತಥೈವ ಚ ।
ನಾಪರಾಧ್ನೋತಿ ಸ ನರೋ ಮಮ ಚೋಕ್ತಂ ವಚಃ ಪ್ರಿಯೇ ॥ ೧೮ ॥

ಯೇ ಚ ಭೋಜ್ಯಾಶ್ಚ ಮಂಗಲ್ಯಾ ಮಮ ಭಕ್ತಸುಖಾವಹಾಃ ।
ತತೋ *ಯಷ್ಟವ್ಯಮೇವಂ ಹಿ ಯ ಇಚ್ಛೇತ್ಸಿದ್ಧಿಮುತ್ತಮಾಂ ॥ ೧೯ ॥

ಯುಕ್ತಗಳಾಗಿರುವುವೋ ಆ ಲಾವಕವಾರ್ತಿಕಕಪಿಂಜಲಗಳೂ, ಬೇರೆ ಸಾವಿರಾರು ಬಗೆಯ, ನಾನು ಹೇಳಿರುವ ಹಕ್ಕಿಗಳೂ ನನ್ನ ಪೂಜೆಯಲ್ಲಿ ಅರ್ಪಿಸುವುದಕ್ಕೆ ತಕ್ಕವು.

೧೮. ಪ್ರಿಯೇ, ಕರ್ಮವನ್ನು ಆಚರಿಸುವ ಯಾರು ಇದನ್ನೂ, ನಾನು ಹೇಳಿರುವ ಬೇರೆಯ ಮಾತುಗಳನ್ನೂ ಸರಿಯಾಗಿ ಅರಿತು ನಡೆಯುವನೋ ಅವನು ಅಪರಾಧವನ್ನು ಪಡೆಯುವುದಿಲ್ಲ.

೧೯. ಉತ್ತಮಸಿದ್ಧಿಯನ್ನು ಬಯಸುವವನು, ಯಾವುವು ನನಗೆ ಭೋಜ್ಯವಾದುವೋ, ಮಂಗಳಕರವಾದುವೋ, ನನ್ನ ಭಕ್ತರಿಗೆ ಸುಖವನ್ನುಂಟುಮಾಡುವುವೋ, ಅವುಗಳಿಂದ ನನ್ನನ್ನು ಪೂಜಿಸಬೇಕು.

---

* ಲಷ್ಟವ್ಯ [ಬೊಂ.] ಪಷ್ಟವ್ಯ [ಕ.]

ಯ ಏತೇನ ವಿಧಾನೇನ ಯಜಿಷ್ಯತಿ ವಸುಂಧರೇ ।
ಪ್ರಾಪ್ನುವಂತಿ ಪರಾಂ ಸಿದ್ಧಿಂ ಮನ್ಮೈವ ಕೃತಕರ್ಮಿಣಃ ॥ ೨೦ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಪ್ರಾಪಣದ್ರವ್ಯಕರ್ಮಣ್ಯ ಭೋಜ್ಯನಿಯಮವಿಧಿರ್ನಾಮ ಊನವಿಂಶತ್ಯಧಿಕಶತತಮೋಧ್ಯಾಯಃ

---

೨೦. ವಸುಂಧರೇ, ಕರ್ಮಗಳನ್ನು ಆಚರಿಸುವ ಯಾರು ಈ ವಿಧಾನದಿಂದ ನನ್ನನ್ನೇ ಪೂಜಿಸುವರೋ ಅವರು ಪರಮಸಿದ್ಧಿಯನ್ನು ಪಡೆಯುವರು.

ಅಧ್ಯಾಯದ ಸಾರಾಂಶ:—

ಶ್ರೀ ವರಾಹದೇವನು ತನ್ನನ್ನು ಪ್ರಶ್ನಿಸಿದ ಭೂದೇವಿಗೆ ಕರ್ಮಾರ್ಹವಾದ ಮತ್ತು ದೇವರ ನೈವೇದ್ಯಕ್ಕೆ ಅರ್ಹಾನರ್ಹಗಳಾದ ಪ್ರಾಣಿಜ ಮತ್ತು ಸಸ್ಯಜ ಪದಾರ್ಥಗಳನ್ನು ತಿಳಿಸುವಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರಹತ್ತೊಂಬತ್ತನೆಯ ಅಧ್ಯಾಯ.